ಶಕಪುರುಷ ಸಿದ್ಧಲಿಂಗ ಸ್ವಾಮಿಗಳು

ಎಲ್. ಶಿವಲಿಂಗಪ್ಪ



ಶಕಪುರುಷ

ಸಿದ್ಧಲಿಂಗ ಸ್ವಾಮಿಗಳು

ಪ್ರಧಾನ ಸಂಪಾದಕರು

ಡಾ|| ಜಿ. ಜ್ಞಾನಾನಂದ

ಲೇಖಕರು

ಎಲ್. ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೧

Shakapurusha Siddhalingaswamigalu
A Critical appraisal of achievements of Silpasiddhanti Siddalinga Swamiji in traditional Shilpa and Temple Architecture along with 190 Photos and Illustrations

By : **Sri L. Shivalingappa**

Chief Editor : **Dr. G. Gnanananda**

Published by : **Registrar,**
Karnataka Shilpakala Academy,
Kannada Bhavan,
J.C. Road, Bangalore - 002

Pages : xii + 216 (28 Colour Plates)

Price : Rs. 250/-

First Edition : 2013

ಶಕಪುರುಷ ಸಿದ್ಧಲಿಂಗಸ್ವಾಮಿಗಳು
ಮೈಸೂರಿನ ಶಿಲ್ಪಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳ ಸಾಂಪ್ರದಾಯಿಕ ಶಿಲ್ಪ ಮತ್ತು ದೇವಾಲಯ ನಿರ್ಮಾಣದ ಸಾಧನೆಯ ಬಗ್ಗೆ 190 ಛಾಯಾ ಮತ್ತು ರೇಖಾ ಚಿತ್ರಗಳೊಂದಿಗೆ ವಿಶ್ಲೇಷಣಾತ್ಮಕ ಅಧ್ಯಯನ

ಲೇಖಕರು : **ಶ್ರೀ ಎಲ್. ಶಿವಲಿಂಗಪ್ಪ**

ಪ್ರಧಾನ ಸಂಪಾದಕರು : **ಡಾ॥ ಜಿ. ಜ್ಞಾನಾನಂದ**

ಪ್ರಕಾಶಕರು : **ರಿಜಿಸ್ಟ್ರಾರ್**
ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು – 560 002

ಪುಟಗಳು : xii + 216 (28 ವರ್ಣ ಪುಟಗಳು)

ಬೆಲೆ ರೂ. : ೨೫೦/–

ಮುದ್ರಣ :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
29/1, 3ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 26604835



ಅಧ್ಯಕ್ಷರ ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ೨೧೧೦–೧೧ನೆಯ ಸಾಲಿನಲ್ಲಿ ಎಲ್ಲಾ ಅಕಾಡೆಮಿಗಳಿಗೂ ಆಯಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಯನ್ನು ಪ್ರೋತ್ಸಾಹಿಸಲು ಒಂದು ಲಕ್ಷ ಮೊತ್ತದ ಐದು ಫೆಲೋಷಿಪ್‌ಗಳನ್ನು ಕೊಟ್ಟು ಹೆಚ್ಚಿನ ಸಂಶೋಧನೆಯ ಅವಕಾಶವನ್ನು ಕಲ್ಪಿಸಿತು. ಅದಕ್ಕಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಲ್ಲಿ ತಜ್ಞರ ವಿಶೇಷ ಸಮಿತಿಯನ್ನು ರಚಿತವಾಯಿತು :

ಅಧ್ಯಕ್ಷರು :

ಡಾ॥ ಜಿ. ಜ್ಞಾನಾನಂದ, ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಸಂಚಾಲಕರು :

ಶ್ರೀ ಕಾ.ತ. ಚಿಕ್ಕಣ್ಣ, ಜಂಟಿ ನಿರ್ದೇಶಕರು (ಆಡಳಿತ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು :

ಶ್ರೀ ಬಿ.ಟಿ. ಮುನಿರಾಜಯ್ಯ, ಜಂಟಿ ನಿರ್ದೇಶಕರು (ಸಾಮಾನ್ಯ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಅರ್ಥ ಸದಸ್ಯರು

ಪ್ರೊ॥ ಮಲ್ಲೆಪುರಂ ಜಿ. ವೆಂಕಟೇಶ್, ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ತ್ಯಾಗರಾಜ್, ರಿಜಿಸ್ಟ್ರಾರ್ ಶಿಲ್ಪಕಲಾ ಅಕಾಡೆಮಿ

ಫೆಲೋಷಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಿ ಬಂದ ಅರ್ಜಿಗಳನ್ನು ಪರಿಶೀಲಿಸಲಾಯಿತು. ಆಯ್ಕೆಯಾದವರನ್ನು ಸಂದರ್ಶನಕ್ಕೆ ಆಹ್ವಾನಿಸಿ ಅವರು ಹೆಚ್ಚಿನ ಅಧ್ಯಯನಕ್ಕೆ ಆರಿಸಿಕೊಂಡಿದ್ದ ವಿಷಯಗಳ ಬಗ್ಗೆ ಅರ್ಜಿದಾರರೊಂದಿಗೆ ಚರ್ಚಿಸಿ ಫೆಲೋಷಿಪ್ ಬಗ್ಗೆ ತೀರ್ಮಾನಿಸಲಾಯಿತು. ಹಾಗೆ ಆಯ್ಕೆಯಾದವರು ಒಂದು ವರ್ಷದೊಳಗಾಗಿ ತಮ್ಮ ಪ್ರಬಂಧವನ್ನು ಸಲ್ಲಿಸಬೇಕೆಂಬುದಾಗಿ ತಿಳಿಸಲಾಯಿತು. ಆದರೆ ಪ್ರಬಂಧಗಳನ್ನು ಸಿದ್ಧಪಡಿಸಲು ಹೆಚ್ಚು ಕಾಲವನ್ನು ಪಡೆದುಕೊಂಡರೂ ಅಂತಿಮವಾಗಿ ಕೇವಲ ನಾಲ್ಕು ಪ್ರಬಂಧಗಳು ಮಾತ್ರವೇ ಸಲ್ಲಿಕೆಯಾಗಿವೆ.

೧. **ಬಾದಾಮಿ ಚಲುಕ್ಯ ದೇವಾಲಯಗಳಲ್ಲಿ ಅಲಂಕಾರ ಶಿಲ್ಪಗಳು**
   – ಡಾ॥ ಶೀಲಾಕಾಂತ ಪತ್ತಾರ, ಬಾದಾಮಿ
೨. **ಶಿಲ್ಪಸಿದ್ಧಾಂತಿ, ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳ ಶಿಲ್ಪಕಲಾ ಸಾಧನೆ**
   – ಶ್ರೀ ಎಲ್. ಶಿವಲಿಂಗಪ್ಪ, ಮೈಸೂರು
೩. **ಚಾಮುಂಡೇಶ್ವರಿ** – ಡಾ॥ ಚೂಡಾಮಣಿ ನಂದಗೋಪಾಲ್, ಬೆಂಗಳೂರು
೪. **ಅರ್ಧನಾರೀಶ್ವರ : ಒಂದು ಅಧ್ಯಯನ** –ವಿದ್ವಾನ್ ತಾಡಿಚರ್ಲ ವೀರರಾಘವ ಶರ್ಮ, ಬಳ್ಳಾರಿ

ಈ ಪ್ರಬಂಧಗಳಿಗೆ ಫೆಲೋಷಿಪ್ ಹಣವನ್ನು ಸಲ್ಲಿಸಿ, ಮೊದಲ ಎರಡು ಗ್ರಂಥಗಳನ್ನು ಮಾತ್ರ ಮೊದಲಿಗೆ ಪ್ರಕಟಿಸಲಾಗುತ್ತಿದೆ. ಐದನೆಯ ಫೆಲೋಷಿಪ್ ಸಂಪ್ರಬಂಧ ಸಲ್ಲಿಕೆಯಾಗದೆ ಇರುವುದರಿಂದ ಹಿಂದಕ್ಕೆ ಪಡೆದು ವಜಾಕರಿಸಲಾಗಿದೆ.

ವಿಶೇಷವಾದ ಅನುದಾನವನ್ನು ನೀಡಿ ಈ ರೀತಿ ಸಾಂಪ್ರದಾಯಿಕ ಶಿಲ್ಪದಲ್ಲಿ ಸಂಶೋಧನೆಗೆ ಇಂಬುಕೊಟ್ಟಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಿಗೆ ನನ್ನ ವಿಶೇಷ ಕೃತಜ್ಞತೆಗಳು.

ಶಿಲ್ಪ ಸಿದ್ಧಾಂತಿ, ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು (೧೮೮೫-೧೯೫೨) ಕಳೆದ ಶತಮಾನದಲ್ಲಿ ಸಾಂಪ್ರದಾಯಿಕ ಶಿಲ್ಪಕ್ಷೇತ್ರದಲ್ಲಿ ಮೈಸೂರಿನಲ್ಲಿದ್ದ ಬಹು ಅಪರೂಪದ ಪ್ರತಿಭೆ. ಶಾಸ್ತ್ರದ ಮಾನದಂಡದ ಅನ್ವಯವೇ ಪರಿಪೂರ್ಣ ಸ್ಥಪತಿಯಾಗಿದ್ದವರು. ವರ್ಣಚಿತ್ರ, ಲೋಹದ ಎರಕದ ಶಿಲ್ಪ, ತಗಡಿನಲ್ಲಿ ಉಬ್ಬುಶಿಲ್ಪ, ಮರದ ಶಿಲ್ಪ, ಶಿಲಾ ಶಿಲ್ಪ, ಸಾಂಪ್ರಾದಾಯಿಕ ದೇವಾಲಯ ನಿರ್ಮಾಣ, ಪ್ರತಿಷ್ಠಾತಂತ್ರ, ಸ್ವರ್ಣಶಿಲ್ಪ, ರತ್ನಪರೀಕ್ಷಣ ಹೀಗೆ ಶಿಲ್ಪಶಾಸ್ತ್ರದ ಸಕಲಭಾಗಗಳನ್ನು ಸಂಪೂರ್ಣವಾಗಿ ಬಲ್ಲ ವಿದ್ವಾಂಸರು. ಶಾಸ್ತ್ರ ಮತ್ತು ಪ್ರಯೋಗ ಎರಡೂ ಕ್ಷೇತ್ರಗಳಲ್ಲಿ ಸಮಗ್ರತೆಯನ್ನು ಸಾಧಿಸಿದ ಶಿಲ್ಪ ಸಿದ್ಧಾಂತಿ. ತಮ್ಮಲ್ಲಿದ್ದ ಶಿಲ್ಪದ ತಂತ್ರವನ್ನು, ಶಾಸ್ತ್ರದ ಜ್ಞಾನವನ್ನು ಸಮರ್ಥವಾಗಿ ಬೋಧಿಸಿ ಯಶಸ್ವೀ ಶಿಷ್ಯರನ್ನು ಸಿದ್ಧ ಮಾಡಬಲ್ಲ ಅಧ್ಯಾಪನಾ ಸಾಮರ್ಥ್ಯ ಇದ್ದವರು. ಹಾಗೆಯೇ ಶಿಷ್ಯರನ್ನು ಸಿದ್ಧಪಡಿಸಿದ್ದಾರೆ ಕೂಡ. ಇದರೊಂದಿಗೆ ಗುರುಪೀಠಾಧ್ಯಕ್ಷರು ಶಿವಯೋಗಿಗಳಾಗಿದ್ದರು. ಇವರು ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡಯರಿಗೆ ಗುರುಗಳಾಗಿದ್ದರು. ನಿಜಕ್ಕೂ ಇದು ವಿಶೇಷವಾದ ವಿವರವೇನೂ ಅಲ್ಲ. ಸಿದ್ಧಲಿಂಗಸ್ವಾಮಿಗಳ ಗುರುಗಳಾಗಿದ್ದ ನಂಜುಂಡ ಶಿವಯೋಗಿಗಳು ನಾಲ್ವಡಿ ಕೃಷ್ಣರಾಜ ಒಡೆಯರ ಮಾತೃಶ್ರೀಗಳಾಗಿದ್ದ ರಾಜಮಾತೆ ವಾಣೀವಿಲಾಸ ಸನ್ನಿಧಿಯವರ ಗುರುಗಳಾಗಿದ್ದರು. ರಾಜಮಾತೆಯವರ ಗುರುಭಕ್ತಿ ಎಷ್ಟಿತ್ತೆಂದರೆ ತಮ್ಮ ಸಮಾಧಿಯನ್ನು ತಮ್ಮ ಗುರುಗಳ ಸಮಾಧಿಯ ಪಕ್ಕದಲ್ಲಿಯೇ ನಿರ್ಮಿಸಬೇಕೆಂದು ಬಯಸಿ ಅದೇ ರೀತಿಯಾಗಿ ಸಮಾಧಿಯನ್ನು ನಿರ್ಮಿಸಿಕೊಂಡಿದ್ದಾರೆ.

ಆದರೂ ಇದು ಹಲವರಿಗೆ ವಿಶೇಷವೆನಿಸಿದ್ದು ಮಾತ್ರವೇ ಅಲ್ಲ, ಸ್ವಾಮಿಗಳ ಬಗ್ಗೆ ವಿರೋಧ ಮತ್ತು ಅಸೂಯೆಗೂ ಕಾರಣವಾಯಿತು. ಇದರ ಫಲವಾಗಿ ಸ್ವಾಮಿಗಳಿಗೆ ಪ್ರಚ್ಛನ್ನ ಶತ್ರುಗಳು ಬಹುಳವಾಗಿ ಮೈಸೂರಿನಲ್ಲಿ ಮತ್ತು ಅರಮನೆಯಲ್ಲಿ ಮುಖವಾಡಗಳನ್ನು ತೊಟ್ಟುಕೊಂಡಿದ್ದರು. ಸ್ವಾಮಿಗಳು ಜೀವಂತವಾಗಿರುವ ತನಕ ಇವರೆಲ್ಲ ಪ್ರಯತ್ನಗಳೂ ಸೋತರೂ ನಂತರ ಕಾಲದಲ್ಲಿ ಬಹು ಪ್ರಭಾವ ಬೀರಿದವು. ಮೈಸೂರಿನ ಇತಿಹಾಸದಲ್ಲಿ ಸ್ವಾಮಿಗಳ ಪ್ರಸ್ತಾಪವೇ ಆಗದಷ್ಟು ಭದ್ರವಾದ ಬಲೆಯನ್ನು ಹೆಣೆದು ಸ್ವಾಮಿಗಳನ್ನು ಸಂಪೂರ್ಣವಾಗಿ ವಿಸ್ಮೃತಿಯ ಪಟಲಕ್ಕೆ ಸೇರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಸ್ವಾರ್ಥಕಾಮರಾದ ಸ್ವಾಮಿಗಳ ಶಿಷ್ಯರು, ದಾಯಾದಿ ಮತ್ಸರದಿಂದ ಕಾದಾಡುತ್ತಿರುವ ಸ್ವಾಮಿಗಳ ವಂಶಜರು ಇದಕ್ಕೆ ದೋಹದವಾದರು. ಹೀಗಾಗಿ ಕನ್ನಡ ನಾಡಿನಲ್ಲಿಯೇ ಸ್ವಾಮಿಗಳು ಯಾರ ತಿಳಿವೂ ಬರದಂತೆ ಇಂದು ಅಜ್ಞಾತರಾಗಿದ್ದಾರೆ.

ಪ್ರಸ್ತುತ ಗ್ರಂಥ ಮೈಸೂರಿನ ಸಾಂಪ್ರದಾಯಿಕ ಶಿಲ್ಪಲೋಕದಲ್ಲಿ ಇಪ್ಪತ್ತನೆಯ ಶತಮಾನದ ಮೊದಲ ಆರು ದಶಕಗಳ ಕಾಲ ಶ್ರೀಸ್ವಾಮಿಗಳು ಸಲ್ಲಿಸಿರುವ ಕಲಾಸೇವೆಯ ಕಿರುಪರಿಚಯವನ್ನು ಮಾತ್ರವೇ ಮಾಡಿ ಕೊಡುತ್ತದೆ. ಸ್ವಾಮಿಗಳು ರತ್ನಪರೀಕ್ಷಣ, ಶಿಲ್ಪಾಗಮದ ಪಾಂಡಿತ್ಯ, ಮಂತ್ರಶಾಸ್ತ್ರ, ಶ್ರೌತಕರ್ಮ, ವೇದಾಂತ ಮತ್ತು ಶೈವಸಿದ್ಧಾಂತಗಳಲ್ಲಿ ಅಪೂರ್ವ ಪಾಂಡಿತ್ಯಗಳಿಸಿದ್ದರು. ಆ ವಿಷಯಗಳನ್ನು ಪ್ರಸ್ತುತ ಸಂಪ್ರಬಂಧದ ವ್ಯಾಪ್ತಿಯಿಂದ ಕೈಬಿಟ್ಟಿದೆ.

ಈ ಹಸ್ತಪ್ರತಿಯನ್ನು ಪರಿಪೂರ್ಣಗೊಳಿಸಲು ಪೂರ್ಣಪ್ರಮಾಣದಲ್ಲಿ ಸಂಪಾದನೆಗೆ ಅಂಗೀಕರಿಸಿ ಸಹಕರಿಸಿರುವ ಶ್ರೀ ಎಲ್. ಶಿವಲಿಂಗಪ್ಪ ಅವರಿಗೆ ನನ್ನ ವಂದನೆಗಳು. ಫೆಲೋಷಿಪ್ ಯೋಜನೆಯಲ್ಲಿ ಈ ರೀತಿಯ ಕೃತಿಯೊಂದು ಪ್ರಕಟವಾಗುತ್ತಿರುವುದು ಅಕಾಡೆಮಿಯ ಸಾಧನೆಗಳಲ್ಲಿ ಒಂದು ಎಂದು ನಾನು ಭಾವಿಸಿದ್ದೇನೆ. ಮೊದಲ ಬಾರಿಗೆ ಶ್ರೀ ಸ್ವಾಮಿಗಳ ಬಗ್ಗೆ ವಿಸ್ತೃತ ಗ್ರಂಥವು ಕನ್ನಡದಲ್ಲಿ ಪ್ರಕಟವಾಗುತ್ತಿರುವದು ಸಂತೋಷದ ವಿಷಯವಾಗಿದೆ. ಈ ಸಂಬಂಧದಲ್ಲಿ ಸಹಕರಿಸಿರುವ ಫೆಲೋಷಿಪ್ ಆಯ್ಕೆಯ ಸಮಿತಿಯವರಿಗೆ, ಗ್ರಂಥ ಪ್ರಕಟಣೆಯಲ್ಲಿ ನೆರವಾಗಿರುವ ರಿಜಿಸ್ಟ್ರಾರ್ ಅವರಿಗೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಕಾರ್ಯಸಮಿತಿಯ ಸದಸ್ಯರಿಗೆ, ಸಂಪಾದಕ ಮಂಡಲಿಯ ಸದಸ್ಯರಿಗೆ ಅವರ ಸಹಕಾರಕ್ಕಾಗಿ ವಂದನೆಗಳು.

ಈ ಗ್ರಂಥವನ್ನು ಸುಂದರವಾಗಿ ಸಜ್ಜುಗೊಳಿಸಿ ಮುದ್ರಿಸಿಕೊಟ್ಟಿರುವ ವಿಶ್ವಾಸ್ ಪ್ರಿಂಟ್ಸ್‌ನ ಶ್ರೀ ಟಿ. ಎಲ್. ವೆಂಕಟೇಶ್ ಅವರಿಗೆ ವಂದನೆಗಳು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು - ೦೦೨
೧೫ ಮೇ ೨೦೧೩

ಡಾ॥ ಜಿ. ಜ್ಞಾನಾನಂದ
ಅಧ್ಯಕ್ಷರು

ಲೇಖಕರ ಮಾತು

ಸಾಂಪ್ರಾದಾಯಿಕ ಶಿಲ್ಪದಲ್ಲಿ ನವ ಚೈತನ್ಯವನ್ನು ಮೂಡಿಸಿದ ಇಪ್ಪತ್ತನೆಯ ಶತಮಾನ ಕಂಡ ಪರಿಪೂರ್ಣ ಸ್ಥಪತಿ, ಶಿಲ್ಪ ಸಿದ್ಧಾಂತಿ, ಶಿವಯೋಗಿ, ಕರಸ್ಥಲ ನಾಗಲಿಂಗಸ್ವಾಮಿಗಳ ಪೀಠಾಧ್ಯಕ್ಷರು, ರಾಜಗುರುಗಳು ಆಗಿದ್ದ ಶ್ರೀ ಸಿದ್ಧಲಿಂಗಸ್ವಾಮಿಗಳ ಬಗ್ಗೆ ಸಮಗ್ರವಾದ ಕೃತಿಯೊಂದು ಇದುವರೆವಿಗೂ ಪ್ರಕಟವಾಗಿಲ್ಲ ಎಂಬಕೊರಗು ನನ್ನನ್ನು ಕಾಡುತ್ತಿತ್ತು. ಈ ದಿಶೆಯಲ್ಲಿ ನಡೆದಿರುವ ಎಲ್ಲಾ ಪ್ರಯತ್ನಗಳು ಹರಕು ಮುರುಕಾಗಿ ಇದ್ದದ್ದು ನನ್ನ ಅತೃಪ್ತಿಯನ್ನು ಹೆಚ್ಚಿಸಿತ್ತು. ಈ ಸಂಬಂಧದಲ್ಲಿ ಸಮಗ್ರ ಕೃತಿ ರಚನೆಗೆ ಫೆಲೋಷಿಪ್ ನೆರವನ್ನು ಕೋರಿ ಅರ್ಜಿಸಲ್ಲಿಸಿದೆ.

ಆಯ್ಕೆಯ ಸಮಿತಿಯವರು ನನ್ನ ಕೋರಿಕೆಯನ್ನು ಪರಿಶೀಲಿಸಿ ಅನೇಕ ವಿವರಗಳನ್ನು ಪಡೆದುಕೊಂಡು ಫೆಲೋಷಿಪ್ ಕೊಡಲು ಒಪ್ಪಿದ್ದಕ್ಕಾಗಿ ನಾನು ಸಮಿತಿಯವರಿಗೆ ಋಣಿಯಾಗಿದ್ದೇನೆ.

ನನ್ನ ಪ್ರಬಂಧವನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಲೇಖನದ ಅಂಶಗಳಿಗೆ ಸಮಗ್ರತೆ ತಂದು ಕೊಡಲು ನೆರವಾಗಿ ಮಾರ್ಗದರ್ಶಕರಾಗಿ ಪುಸ್ತಕವು ಸರ್ವಾಂಗ ಸುಂದರವಾಗಿ ರೂಪುಗೊಳ್ಳುವಂತೆ ಸಹಾಯ ಮಾಡಿರುವವರು, ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ|| ಜಿ. ಜ್ಞಾನಾನಂದ ಅವರು. ಈ ಗ್ರಂಥದಲ್ಲಿ ಹೇಳಿರುವ ಅನೇಕ ಶಿಲ್ಪಶಾಸ್ತ್ರ ಸಂಬಂಧಿ ವಿವರಗಳನ್ನು ಅವರು. ಒದಗಿಸಿದ್ದಾರೆ. ಈ ಗ್ರಂಥದ ಬರವಣಿಗೆಗೆ ನೆರವಾಗುವ ಹಲವು ಗ್ರಂಥಗಳನ್ನು ಅವರೇ ಕೊಟ್ಟು ಉಪಕರಿಸಿದ್ದಾರೆ. ಡಾ|| ಜಿ. ಜ್ಞಾನಾನಂದ ಅವರ ಈ ನೆರವನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ.

ಈ ಗ್ರಂಥವು ಪುಸ್ತಕ ರೂಪದಲ್ಲಿ ಪ್ರಕಟವಾಗಲು ಕಾರಣವಾಗಿರುವ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಅವರಿಗೂ, ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ನನ್ನ ವಂದನೆಗಳು.

ಗ್ರಂಥವನ್ನು ಬಹುಸುಂದರವಾಗಿ ಅಚ್ಚುಮಾಡಿರುವ ವಿಶ್ವಾಸ್ ಪ್ರಿಂಟ್ಸ್‌ನ ಮಾಲೀಕರಾದ ಶ್ರೀ ಟಿ. ಎಲ್ ವೆಂಕಟೇಶ ಅವರಿಗೆ ವಂದನೆಗಳು

ಎಲ್. ಶಿವಲಿಂಗಪ್ಪ

ಮೈಸೂರು ಆರ್ಟ್‌ಗ್ಯಾಲರಿ
೧೨ನೇ ಕ್ರಾಸು, ರಾಮಾನುಜಾ ರಸ್ತೆ, ಮೈಸೂರು
೨೪ ಮೇ ೨೦೧೩

ವಿಷಯ ಸೂಚಿ

	ಅಧ್ಯಕ್ಷರ ಮಾತು	iii
	ಲೇಖಕರ ಮಾತು	v
	ವಿಷಯ ಸೂಚಿ	vi
	ಚಿತ್ರಸೂಚಿ	vii
೧.	ಸ್ವಾಮಿಗಳು ರಚಿಸಿರುವ ಶಾಸ್ತ್ರೀಯ ವರ್ಣಚಿತ್ರಗಳು (ಪುಟ ೨೧ ರಿಂದ ೪೮ರ ತನಕ ವರ್ಣ ಚಿತ್ರ ಸಂಪುಟವಿದೆ)	೧–೪೮
೨.	'ಮಾನಸಾರ'ಕ್ಕೆ ಶಾಸ್ತ್ರೀಯ ಚಿತ್ರಗಳು	೪೯–೬೭
೩.	ಬೇಲೂರು ದೇವಾಲಯದ ಜೀರ್ಣೋದ್ಧಾರ	೬೮–೮೧
೪.	ಗುರುವೇ ಸಕಲ ಕಾರ್ಯ ಕಾರಣ	೮೨–೯೧
೫.	ಕಾಮಕಾಮೇಶ್ವರೀ ದೇವಾಲಯ	೯೨–೧೨೩
೬.	ಸ್ವಾಮಿಗಳ ಇತರ ಶಿಲ್ಪಗಳು	೧೨೪–೧೩೦
೭.	ಸ್ವಾಮಿಗಳು ಮಾಡಿರುವ ಕೆಲವು ಸ್ಕೆಚ್‌ಗಳು	೧೩೧–೧೩೯
೮.	ಶಿಲ್ಪ ಗುರುಕುಲದ ಸ್ಥಾಪನೆ	೧೪೦–೧೫೬
೯.	ಸಿದ್ಧಲಿಂಗ ಸ್ವಾಮಿಗಳ ಸಾಹಿತ್ಯ ಸೇವೆ	೧೫೭–೧೬೯
೧೦.	ತೌಲನಿಕವಾಗಿ ಸ್ವಾಮಿಗಳು ಮತ್ತು ಸಮಕಾಲೀನ ಪ್ರಖ್ಯಾತರು (ರಾಜಾ ರವಿವರ್ಮ ಮತ್ತು ಕೆ. ವೆಂಕಟಪ್ಪ)	೧೭೦–೧೮೩
೧೧.	ಸ್ಮರಣೆಯೊಂದೇ ಕೈಹಿಡಿದು ಮುನ್ನಡೆಸುವ ಶಕ್ತಿ	೧೮೪–೧೯೦
	ಅನುಬಂಧಗಳು	
೧.	ಶಿಲ್ಪಸಾರ (ಷಟ್ಪದಿ ಖಂಡಕಾವ್ಯ)	೧೯೧–೨೦೭
೨.	ಶಿಲ್ಪಶಾಸ್ತ್ರಗಳಲ್ಲಿ ಸ್ಥಪತಿ ಲಕ್ಷಣ	೨೦೮–೨೧೫
೩.	ಕನ್ನಡದಲ್ಲಿ ಸ್ವಾಮಿಗಳ ಮತ್ತು ಅವರ ಶಿಷ್ಯರ ಬಗ್ಗೆ ಪ್ರಕಟವಾಗಿರುವ ಪುಸ್ತಕಗಳು	೨೧೫–೨೧೬

ಚಿತ್ರ ಸೂಚಿ

೧. ಸ್ವಾಮಿಗಳು ರಚಿಸಿರುವ ಶಾಸ್ತ್ರೀಯ ವರ್ಣಚಿತ್ರಗಳು

ಚಿತ್ರ ೧. ೧ : ರಾಜರಾಜೇಶ್ವರಿ ೨೧
ಚಿತ್ರ ೧. ೨ : ಅಷ್ಟಭುಜ ಕಾಳಿಕಾದೇವಿ ೨೨
ಚಿತ್ರ ೧. ೩ : ನವದುರ್ಗಾ ದೇವಿ ೨೩
ಚಿತ್ರ ೧. ೪ : ಮಹಿಷ ಮರ್ದಿನಿ ೨೪
ಚಿತ್ರ ೧. ೫ : ಸರಸ್ವತೀ ೨೫
ಚಿತ್ರ ೧. ೬ : ಮಹಾಲಕ್ಷ್ಮೀ ೨೫
ಚಿತ್ರ ೧. ೭ : ಭುವನೇಶ್ವರಿ ದೇವಿ ೨೬
ಚಿತ್ರ ೧. ೮ : ಗಾಯತ್ರೀದೇವಿ (ತ್ರಿಶಕ್ತಿ ದೇವಿಯರೊಂದಿಗೆ) ೨೭
ಚಿತ್ರ ೧. ೯ : ವರ್ಣಚಿತ್ರಗಳಲ್ಲಿರುವ ಕಿರೀಟ, ಹಾರ ಮತ್ತು ಕಟಿಬಂಧಗಳ ವೈವಿಧ್ಯಗಳು ೨೮
ಚಿತ್ರ ೧. ೧೦ : ಮೇಲ್ಭಾವಣಿಯ ಚಿತ್ರ–೧ ೨೯
ಚಿತ್ರ ೧. ೧೧ : ಮೇಲ್ಭಾವಣಿಯ ಚಿತ್ರ–೨ ೩೦
ಚಿತ್ರ ೧. ೧೨ : ಮೇಲ್ಭಾವಣಿಯ ಚಿತ್ರ–೩ ೩೧
ಚಿತ್ರ ೧. ೧೩ : ಮೇಲ್ಭಾವಣಿಯ ಚಿತ್ರ–೪ ೩೧
ಚಿತ್ರ ೧. ೧೪ : ಏಕಮುಖ ಈಶ್ವರ (ತೈಲವರ್ಣ) ೩೨
ಚಿತ್ರ ೧. ೧೫ : ತ್ರಿಮುಖ ಈಶ್ವರ (ತೈಲವರ್ಣ) ೩೨
ಚಿತ್ರ ೧. ೧೬ : ಸರಸ್ವತೀ (೨) ೩೩
ಚಿತ್ರ ೧. ೧೭ : ಭಿಕ್ಷಾಟನಾ ಮೂರ್ತಿ ೩೪
ಚಿತ್ರ ೧. ೧೮ : ಪಾರ್ವತೀ ಪರಮೇಶ್ವರರು ೩೫
ಚಿತ್ರ ೧. ೧೯ : ಅಶೋಕ ವನದಲ್ಲಿ ಹನುಮಂತ ೩೬
ಚಿತ್ರ ೧. ೨೦ : ನಾಗಲಿಂಗ ದೇವರು ಶಿಲ್ಪಶಾಸ್ತ್ರದ ಅನುಸಾರ ತಯಾರಿಸಿರುವ ರತ್ನಪದಕವನ್ನು ದಾನೀಶ ಮಹಾರಾಜನಿಗೆ ಅರ್ಪಿಸುತ್ತಿರುವುದು. ರಾಣಿ ಶಿಲ್ಪಿಯನ್ನು ಗಮನಿಸುತ್ತಿದ್ದಾಳೆ. ೩೭
ಚಿತ್ರ ೧. ೨೧ : ಕಾಮಾಂಧ ರಾಣಿ ನಾಗಲಿಂಗ ದೇವನನ್ನು ಕ್ರೀಡಾ ಪ್ರಪಂಚಕ್ಕೆ ಸೆಳೆಯುತ್ತಿರುವುದು ೩೭
ಚಿತ್ರ ೧. ೨೨ : ಪತಿಯಾಗಮನವನ್ನು ಅರಿತ ರಾಣಿಯು ನಾಗಲಿಂಗ ದೇವರಲ್ಲಿ ಪೂಜ್ಯ ಜಂಗಮ ಭಾವವನ್ನು ತೋರಿ ಬೀಳ್ಕೊಡುವುದು ೩೮
ಚಿತ್ರ ೧. ೨೩ : ಶಿವದೀಕ್ಷಾ ಕಾಲದಲ್ಲಿ ಗುರು ಶಾಂತಯ್ಯ ಮುಂತಾದವರು ನಾಗಲಿಂಗ ದೇವರ ಕರಸ್ಥಲದಲ್ಲಿ ಶಿವಲಿಂಗ ಕಂಡು ಅಚ್ಚಪಡುವುದು ೩೮
ಚಿತ್ರ ೧. ೨೪ : ನಾಗಲಿಂಗ ದೇವರಿಗೆ ಪಾರ್ವತಿ ಪರಮೇಶ್ವರರ ಸಾಕ್ಷಾತ್ಕಾರ ೩೮
ಚಿತ್ರ ೧. ೨೫ : ಮೃತ್ಯುಂಜಯ ರಾಜನು ನಾಗಲಿಂಗ ಸ್ವಾಮಿಗಳ ಕತ್ತರಿಸಲು ಪ್ರಯತ್ನಿಸಿದಾಗ ವ್ಯರ್ಥವಾದದ್ದು ೩೯
ಚಿತ್ರ ೧. ೨೬ : ಮಹಾನದಿಯ ಪಾತ್ರದಲ್ಲಿ ಅಂಬಿಗ ಮತ್ತು ಶಿಷ್ಯರನೊಂದಿಗೆ ನಾಗಲಿಂಗ ಸ್ವಾಮಿಗಳು ೪೦
ಚಿತ್ರ ೧. ೨೭ : ನಾಗಲಿಂಗದೇವರಿಂದ ಕುಷ್ಠರೋಗವನ್ನು ಪರಿಹರಿಸಿಕೊಂಡ ಗೃಹಸ್ಥನು ಪತ್ನಿಯೊಂದಿಗೆ ಸ್ವಾಮಿಗಳಿಗೆ ನಮಸ್ಕರಿಸುತ್ತಿರುವುದು ೪೦
ಚಿತ್ರ ೧. ೨೮ : ಶ್ವಪಚನೊಬ್ಬ ಅರ್ಪಿಸಿದ ಶ್ಯಾವಿಗೆಯನ್ನು ಘಟಸರ್ಪವನ್ನಾಗಿ ಮಾಡಿ ಎಡಗೈಯಲ್ಲಿ ಧರಿಸಿರುವುದು. ೪೧
ಚಿತ್ರ ೧. ೨೯ : ಸ್ವಾಮಿಗಳ ಕರಸ್ಥಲ ಲಿಂಗವನ್ನು ಕಾಲುಬೆರಳಿಗೆ ಕಟ್ಟಿದಾಗ ಗುರುಶಾಂತ ಅಚ್ಚರಿಪಡುವುದು ೪೧
ಚಿತ್ರ ೧. ೩೦ : ಶ್ರೀ ಜಗದ್ಗುರು ಕಸ್ಥಲ ನಾಗಲಿಂಗಸ್ವಾಮಿಗಳು ೪೨
ಚಿತ್ರ ೧. ೩೧ : ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ೪೩
ಚಿತ್ರ ೧. ೩೨ : ಕೈಲಾಸ ಶಂಕರ (೧೯೨೮) ೪೪
ಚಿತ್ರ ೧. ೩೩ : ಪಂಚವಕ್ತ್ರೇಶ್ವರ ೪೫
ಚಿತ್ರ ೧. ೩೪ : ರೇಣುಕಾಚಾರ್ಯರು ೪೬
ಚಿತ್ರ ೧. ೩೫ : ಬಸವೇಶ್ವರರು ೪೭
ಚಿತ್ರ ೧. ೩೬ : ಅಧ್ಯಯನ ನಿರತ ಶಿಲ್ಪ ಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು (ಛಾಯಾಚಿತ್ರ) ೪೮

೨. 'ಮಾನಸಾರ'ಕ್ಕೆ ಶಾಸ್ತ್ರೀಯ ಚಿತ್ರಗಳು

ಚಿತ್ರ ೨. ೧ : ಪದ್ಮಾಪೀಠ ವಿನ್ಯಾಸದಲ್ಲಿಯ ಭಾಗಗಳು ೫೩
ಚಿತ್ರ ೨. ೨ : ಪದ್ಮಪೀಠ (ಸಿದ್ಧಲಿಂಗ ಸ್ವಾಮಿಗಳ ರೇಖಾಚಿತ್ರ) ೫೪
ಚಿತ್ರ ೨. ೩ : ಕಿರೀಟ ಮಕುಟ–೧ (ಹೊಯ್ಸಳ ಶೈಲಿ. ಸಿದ್ಧಲಿಂಗಸ್ವಾಮಿಗಳ ರೇಖಾಚಿತ್ರ) ೫೮
ಚಿತ್ರ ೨. ೪ : ಕಿರೀಟ ಮಕುಟ–೨ (ಚೋಳ ಶೈಲಿ) ೫೮
ಚಿತ್ರ ೨. ೫ : ಉತ್ತಮ ದಶತಾಲ ಪುರುಷಮಾನದಲ್ಲಿ ಎತ್ತರದ ಅಳತೆಗಳು–ಅಂಗರೇಖೆಗಳು ೫೯
ಚಿತ್ರ ೨. ೬ : ದೇವಮೂರ್ತಿಯಲ್ಲಿ ಅಂಗಸೂತ್ರಗಳು ಮತ್ತು ಲಂಬಸೂತ್ರಗಳು ೬೩
ಚಿತ್ರ ೨. ೭ : ಪ್ರಲಂಬ ಫಲಕದ ಮಾದರಿ ೬೫
ಚಿತ್ರ ೨. ೮ : ಪ್ರಲಂಬ ಫಲಕದಲ್ಲಿ ದೇವ ಪ್ರತಿಮೆ (ಸ್ವಾಮಿಗಳು ಕೊಟ್ಟಿರುವ ಚಿತ್ರ) ೬೫
ಚಿತ್ರ ೨.೯ : ಸುವರ್ಣ ಕಂಚುಕ (ಸ್ವಾಮಿಗಳು ಕೊಟ್ಟಿರುವ ಚಿತ್ರ) ೬೭
ಚಿತ್ರ ೨.೧೦ : ಸುವರ್ಣ ಹಾರ (ಸ್ವಾಮಿಗಳು ಕೊಟ್ಟಿರುವ ಚಿತ್ರ) ೬೭

೩. ಬೇಲೂರು ದೇವಾಲಯದ ಜೀರ್ಣೋದ್ಧಾರ

ಚಿತ್ರ ೩.೧ : ಬೇಲೂರು ದೇವಾಲಯ ಸಂಕೀರ್ಣ (ಈಗಿರುವಂತೆ) ೭೧
ಚಿತ್ರ ೩. ೨ : ಮೈಸೂರಿನ ಅರಮನೆಯ ಆವರಣದಲ್ಲಿರುವ ಶ್ವೇತವರಾಹಸ್ವಾಮಿಯ ದೇವಾಲಯದ ಮಹಾದ್ವಾರದ ಮೇಲಿರುವ ಗೋಪುರ ೭೩
ಚಿತ್ರ : ೩.೩ ಭಿತ್ತಿಪೀಠ ಮತ್ತು ಆರು ಸೂತ್ರಗಳು ೭೫
ಚಿತ್ರ ೩.೪ : ಸ್ತಂಭದ ಭಾಗಗಳು–೧ (ಹೊಯ್ಸಳ ಶೈಲಿ) ೭೬

ಚಿತ್ರ ೩.೫ : ಸ್ತಂಭದ ಭಾಗಗಳು–೨ ೭೬
ಚಿತ್ರ ೩.೬ : ಬೇಲೂರು ದೇವಾಲಯದ ದ್ವಾರ ಗೋಪುರ ೭೭
ಚಿತ್ರ ೩.೭ : ಬೇಲೂರಿನ ಚನ್ನಕೇಶವ ದೇವಾಲಯದ ಉತ್ತರ ದಿಕ್ಕಿನ ಭಾಗ ೭೯
ಚಿತ್ರ ೩.೮ : ಬೇಲೂರಿನ ಚನ್ನಕೇಶವ ದೇವಾಲಯದ ದಕ್ಷಿಣ ದಿಕ್ಕಿನ ಭಾಗ ೭೯
ಚಿತ್ರ ೩.೯ : ನೂತನ ಗರುಡ ಮೂರ್ತಿ ೮೦
ಚಿತ್ರ ೩.೧೦ : ಚಾಮರಾಜ ಒಡೆಯರ ಲೋಹದ ರೂಪಶಿಲ್ಪ ೮೧
ಚಿತ್ರ ೩.೧೧ : ಶಿಥಿಲಾವಸ್ಥೆಯಲ್ಲಿರುವ ಹೊಯ್ಸಳ ದೇವಾಲಯ ೮೧

೪. ಗುರುವೇ ಸಕಲ ಕಾರ್ಯ ಕಾರಣ

ಚಿತ್ರ ೪.೧ : ನಂಜುಂಡ ಶಿವಯೋಗಿಗಳು (ವರ್ಣಚಿತ್ರ) ೮೭
ಚಿತ್ರ ೪.೨ ದಕ್ಷಿಣಾಮೂರ್ತಿ (ಸ್ವಾಮಿಗಳ ಪ್ರಥಮ ಶಿಲ್ಪ) ೮೭
ಚಿತ್ರ ೪.೩ ನಂದೀಶ್ವರ (ಸ್ವಾಮಿಗಳ ಪ್ರಥಮ ಶಿಲ್ಪ) ೮೮
ಚಿತ್ರ ೪.೪ : ಸಿದ್ಧಲಿಂಗ ಸ್ವಾಮಿಗಳು ಶ್ರೀಮಠದಲ್ಲಿ ವಿಶೇಷ ಪೂಜೆಯಲ್ಲಿ ನಿರತರಾಗಿದ್ದ ಸಂದರ್ಭದ ಚಿತ್ರ ೯೦
ಚಿತ್ರ ೪.೫ : ಸಿದ್ಧಲಿಂಗ ಸ್ವಾಮಿಗಳು ಕರಸ್ಥಲ ನಾಗಲಿಂಗಸ್ವಾಮಿಗಳ ಗುರುಪೀಠಾಧ್ಯಕ್ಷರಾಗಿ ೯೦
ಚಿತ್ರ ೪.೬ : ನಂಜುಂಡ ಶಿವಯೋಗಿಗಳ ಸಮಾಧಿಯ ಮೇಲೆ ಇರುವ ಹಾಲುಗಲ್ಲಿನ ರೂಪ ಶಿಲ್ಪ (ಸಿದ್ಧಲಿಂಗಸ್ವಾಮಿಗಳ ಕೃತಿ) ೯೧
ಚಿತ್ರ ೪.೭ : ಮಹಾದೇವ ಸ್ವಾಮಿಗಳ ಪೀಠಾಧ್ಯಕ್ಷರಾದ ತರುವಾಯ ಶಿಲ್ಪ ನಿರ್ಮಾಣದಲ್ಲಿ ನಿರತರಾಗಿರುವುದು ೯೧

೫. ಕಾಮಕಾಮೇಶ್ವರೀ ದೇವಾಲಯ

ಚಿತ್ರ ೫.೧ : ಭುವನೇಶ್ವರೀ ದೇವಿಯ ಮೂಲಮೂರ್ತಿ ೯೨
ಚಿತ್ರ ೫.೨ : ರಾಜರಾಜೇಶ್ವರಿ ದೇವಿ ೯೩
ಚಿತ್ರ ೫.೩ : ಚಾಮುಂಡೇಶ್ವರಿ ದೇವಿ ೯೩
ಚಿತ್ರ ೫.೪ : ಸೂರ್ಯನಾರಾಯಣಸ್ವಾಮಿ (ಭುವನೇಶ್ವರಿ ದೇವಾಲಯ) ೯೪
ಚಿತ್ರ ೫.೫ : ಶ್ವೇತವರಾಹ ಸ್ವಾಮಿ ದೇವಾಲಯದ ಪ್ರಸ್ತರ ಭಾಗ ಮತ್ತು ವಿಮಾನ ಗೋಪುರ ಗಾರೆಯಲ್ಲಿ ನಿರ್ಮಾಣವಾಗಿರುವುದನ್ನು ಗಮನಿಸಿ ೯೪
ಚಿತ್ರ ೫.೬ : ಕಾಮಕಾಮೇಶ್ವರೀ ದೇವಸ್ಥಾನದ ಮುಂಭಾಗ ೯೭
ಚಿತ್ರ ೫.೭ : ಪ್ರವೇಶದ್ವಾರದಿಂದ ದೇವಾಲಯದ ನೋಟ ೯೮
ಚಿತ್ರ ೫.೮ : ಪ್ರವೇಶದ್ವಾರದಿಂದ ದೇವಾಲಯದ ಬಲ ಪಾರ್ಶ್ವ ೯೮
ಚಿತ್ರ ೫.೯ : ಪ್ರವೇಶದ್ವಾರದಿಂದ ದೇವಾಲಯದ ಎಡ ಪಾರ್ಶ್ವ ೯೮
ಚಿತ್ರ ೫.೧೦ : ದೇವಸ್ಥಾನದ ಮೇಲಿನ ತುದಿ ಭಾಗ (ಪ್ರಸ್ತರ) ೯೮
ಚಿತ್ರ ೫.೧೧ : ದೇವಸ್ಥಾನದ ತಲ ವಿನ್ಯಾಸ (ರೇಖಾಚಿತ್ರ) ೯೯
ಚಿತ್ರ ೫.೧೨ : ವೃಷಭಾಂಕಣದ ಒಂದು ಸ್ತಂಭ ೧೦೦
ಚಿತ್ರ ೫.೧೩ : ದೇವಸ್ಥಾನದ ಅಧಿಷ್ಠಾನ ಮತ್ತು ಪಟ್ಟಿಕೆ ೧೦೧
ಚಿತ್ರ ೫.೧೪ : ದೇವಸ್ಥಾನದ ಪಟ್ಟಿಕೆ ಅಲಂಕಾರ ೧೦೧
ಚಿತ್ರ ೫.೧೫ : ದೇವಾಲಯದ ತಳ ವಿನ್ಯಾಸಗಳು ೧೦೩
ಚಿತ್ರ ೫.೧೬ : ವೃಷಭ ಮೂರ್ತಿಯನ್ನು ಶಿಲ್ಪಿಸುತ್ತಿರುವ ನಾಗೇಂದ್ರ ಸ್ಥಪತಿಗಳು ಮತ್ತು ಶಿಷ್ಯರು ೧೦೪
ಚಿತ್ರ ೫.೧೭ : ವೃಷಭ ವಾಹನ (ಒಂದು ಪಾರ್ಶ್ವ) ೧೦೪
ಚಿತ್ರ ೫.೧೮ : ವೃಷಭ ವಾಹನದ (ಇನ್ನೊಂದು ಪಾರ್ಶ್ವ) ೧೦೫
ಚಿತ್ರ ೫.೧೯ : ದ್ವಾರಪಾಲಕ ೧೦೬
ಚಿತ್ರ ೫.೨೦ : ವೃಷಭ ವಾಹನ ಮೂರ್ತಿ ೧೦೬
ಚಿತ್ರ ೫.೨೧ : ಆಲಿಂಗನ ಚಂದ್ರಶೇಖರ ಮೂರ್ತಿ ೧೦೭
ಚಿತ್ರ ೫.೨೨ : ಉಮಾ ಮಹೇಶ್ವರ ಮೂರ್ತಿ ೧೦೭
ಚಿತ್ರ ೫.೨೩ : ಮಾರ್ಕಂಡೇಯ ವರಪ್ರಸಾದ ಮೂರ್ತಿ ೧೦೮
ಚಿತ್ರ ೫.೨೪ : ವಿಘ್ನೇಶ್ವರ ವರಪ್ರಸಾದ ಮೂರ್ತಿ ೧೦೯
ಚಿತ್ರ ೫.೨೫ : ಕಾಮ ಸಂಹಾರ ಮೂರ್ತಿ ಮೂರ್ತಿ ೧೦೯
ಚಿತ್ರ ೫.೨೬ : ಅರ್ಧನಾರೀಶ್ವರ ಮೂರ್ತಿ ೧೧೦
ಚಿತ್ರ ೫.೨೭ : ಭಿಕ್ಷಾಟನಾ ಮೂರ್ತಿ ೧೧೦
ಚಿತ್ರ ೫.೨೮ : ಏಕಪಾದ ಮೂರ್ತಿ ೧೧೦
ಚಿತ್ರ ೫.೨೯ : ಮಹಾಲಿಂಗೋದ್ಭವ ಮೂರ್ತಿ ೧೧೧
ಚಿತ್ರ ೫.೩೦ : ಚಂಡೀಕೇಶ್ವರ ವರಪ್ರಸಾದ ಮೂರ್ತಿ ೧೧೨
ಚಿತ್ರ ೫.೩೧ : ಹರಿಹರೇಶ್ವರ ಮೂರ್ತಿ ೧೧೨
ಚಿತ್ರ ೫.೩೨ : ಚಕ್ರದಾನ ಮೂರ್ತಿ ೧೧೨
ಚಿತ್ರ ೫.೩೩ : ಸೋಮಾಸ್ಕಂದ ಮೂರ್ತಿ ೧೧೪
ಚಿತ್ರ ೫.೩೪ : ಗಜಾಸುರ ಮರ್ದನನ ಮೂರ್ತಿ ೧೧೪
ಚಿತ್ರ ೫.೩೫ : ವಿಷಪಾನ ಮೂರ್ತಿ ೧೧೪
ಚಿತ್ರ ೫.೩೬ : ಕಲ್ಯಾಣಸುಂದರ ಮೂರ್ತಿ ೧೧೫
ಚಿತ್ರ ೫.೩೭ : ತಾಂಡವ ಮೂರ್ತಿ ೧೧೫
ಚಿತ್ರ ೫.೩೮ : ನವರಂಗದ ಎರಡು ಸ್ತಂಭಗಳು (ಉತ್ತರ ದಿಕ್ಕಿನ ಪಾರ್ಶ್ವದಲ್ಲಿ) ೧೧೬
ಚಿತ್ರ ೫.೩೯ : ನಂದೀಶ್ವರ (ಚಿತ್ರಖಂಡ) ೧೧೬
ಚಿತ್ರ ೫.೪೦ : ಸರಸ್ವತೀ (ಚಿತ್ರಖಂಡ) ೧೧೬
ಚಿತ್ರ ೫.೪೧ : ಮುನೀಶ್ವರ (ಚಿತ್ರಖಂಡ) ೧೧೬
ಚಿತ್ರ ೫.೪೨ : ನವರಂಗದ ಭುವನೇಶ್ವರಿಯ ಕೆತ್ತನೆಯ ವಿವರ ೧೧೭
ಚಿತ್ರ ೫.೪೩ : ನವರಂಗದ ಒಂದು ಸ್ತಂಭದ ಮೇಲ್ಭಾಗದ ಕೆತ್ತನೆಯ ವಿವರ ೧೧೮
ಚಿತ್ರ ೫.೪೪ : ದೇವಾಲಯದ ಒಳಗಡೆ ಪ್ರತಿಮಾ ಕೋಷ್ಟಕದಲ್ಲಿರುವ ದಕ್ಷಿಣಾಮೂರ್ತಿ ೧೧೯
ಚಿತ್ರ ೫.೪೫ : ಗರ್ಭಗುಡಿಯಲ್ಲಿರುವ ಕಾಮಕಾಮೇಶ್ವರಿಯ ಪೂಜಾಮೂರ್ತಿ ೧೧೯
ಚಿತ್ರ ೫.೪೬ : ಮಕರ ಜಲನಾಳ ೨೦
ಚಿತ್ರ ೫.೪೭ : ನಾಳದ ಬಳಿ ಇರುವ ಚಂಡೇಶ್ವರಾಲಯ ೨೦
ಚಿತ್ರ ೫.೪೮ : ಕಾಮಕಾಮೇಶ್ವರಿ ದೇವಸ್ಥಾನದ ವಿಮಾನ ಗೋಪುರ ೨೦
ಚಿತ್ರ ೫.೪೯ : ವಿಮಾನ ಗೋಪುರ ೧೨೧
ಚಿತ್ರ ೫.೫೦ : ವಿಮಾನ ಗೋಪುರದ ಸಹಿತವಾಗಿ ಕಾಮಕಾಮೇಶ್ವರಿ ದೇವಸ್ಥಾನ (ರಸ್ತೆಯಿಂದ) ೧೨೧
ಚಿತ್ರ ೫.೫೧. ಮಹಾಲಕ್ಷ್ಮೀ ೧೨೨
ಚಿತ್ರ ೫.೫೨. ಸರಸ್ವತೀ ೧೨೨
ಚಿತ್ರ ೫.೫೩. ಸಪ್ತರ್ಷಿ ೧೨೨
ಚಿತ್ರ ೫.೫೪ : ದೇವೇಂದ್ರ ೧೨೩
ಚಿತ್ರ ೫.೫೫ : ಈಶಾನ ಮೂರ್ತಿ ೧೨೩
ಚಿತ್ರ ೫.೫೬ : ಚಾಮರಧಾರಿಣಿ (ಚಿತ್ರಖಂಡ) ೧೨೩

೬. ಸ್ವಾಮಿಗಳ ಇತರ ಶಿಲ್ಪಗಳು

ಚಿತ್ರ ೬.೧ : ಶ್ರೀ ಸಿದ್ಧಲಿಂಗಸ್ವಾಮಿಗಳು ೧೨೪
ಚಿತ್ರ ೬.೨ : ಕಾಮಾಕ್ಷಿದೇವಿ (ಚೀರಾಲ ದೇವಾಲಯ) ೧೨೫
ಚಿತ್ರ ೬.೩ : ಪಂಚಮುಖ ವಿಶ್ವಕರ್ಮ (ಪಂಚಶಿಲ್ಪರ್ಷಿಗಳೊಂದಿಗೆ) ೧೨೬
ಚಿತ್ರ ೬.೪ : ಕಾವೇರಿ ೧೨೬
ಚಿತ್ರ ೬.೫ : ರಾಧಾಕೃಷ್ಣ (ಅಮೃತಶಿಲೆ) ೧೨೭
ಚಿತ್ರ ೬.೬ : ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳು ೧೨೭
ಚಿತ್ರ ೬.೭ : ಮೈಸೂರು ರಾಜ್ಯದ ಮಹಾಥಾಜರ ಚಿನ್ನದ ಸಿಂಹಾಸನ ೧೨೯
ಚಿತ್ರ ೬.೮ : ನವದುರ್ಗಾದೇವಿ ೧೩೦

೭. ಸ್ವಾಮಿಗಳು ಮಾಡಿರುವ ಕೆಲವು ಸ್ಕೆಚ್‌ಗಳು

ಚಿತ್ರ ೭.೧ : ಸೋಮಸ್ಕಂದ ಮೂರ್ತಿ ೧೩೧
ಚಿತ್ರ ೭.೨ : ಸೀತಾರಾಮ ಕಲ್ಯಾಣ ೧೩೨
ಚಿತ್ರ ೭.೩ : ಗಿರಿಜಾ ಕಲ್ಯಾಣ ೧೩೩
ಚಿತ್ರ ೭.೪ : ಶಿವನ ಲೀಲಾವತಾರಗಳು ೧೩೪
ಚಿತ್ರ ೭.೫ : ಶಿವನ ಪಂಚವಿಂಶತಿ (೨೫)ಲೀಲಾ ಮೂರ್ತಿಗಳು ೧೩೫
ಚಿತ್ರ ೭.೬ : ವಿದ್ಯಾರ್ಥಿನಿಯ ಅಭ್ಯಾಸ (ಪಾಠ –೨) ೧೩೭
ಚಿತ್ರ ೭.೭ : ಗುರು ನಿಗದಿ ಪಡಿಸಿರುವ ಪಾಠ (ಪಾಠ–೩) ೧೩೭
ಚಿತ್ರ ೭.೮ : ವಿದ್ಯಾರ್ಥಿನಿಯ ಅಭ್ಯಾಸ ೧೩೭
ಚಿತ್ರ ೭.೯ : ಗುರು ನಿಗದಿ ಪಡಿಸಿರುವ ಪಾಠ – ೪ ೧೩೮
ಚಿತ್ರ ೭.೧೦ : ಗುರು ನಿಗದಿಪಡಿಸಿರುವ ಪಾಠ – ೮ ೧೩೮
ಚಿತ್ರ ೭.೧೧ : ಗುರು ನಿಗದಿ ಪಡಿಸಿರುವ ಪಾಠ–೯ ೧೩೯

೮.ಶಿಲ್ಪ ಗುರುಕುಲದ ಸ್ಥಾಪನೆ

ಚಿತ್ರ ೮.೧ : ಗುರುಕುಲದಲ್ಲಿ ಪಾಠ ಮಾಡುತ್ತಿರುವ ಶ್ರೀ ಸಿದ್ಧಲಿಂಗ ಸ್ವಾಮಿಗಳು ೧೪೦
ಚಿತ್ರ ೮.೨ : ಅಜ್ಜಿಹಳ್ಳಿ ನಾಗೇಂದ್ರಾಚಾರ್ಯರು ೧೪೧
ಚಿತ್ರ ೮.೩ : ಶಿಲ್ಪಿ ಬಿ. ಬಸವಣ್ಣ ೧೪೧
ಚಿತ್ರ ೮.೪ : ನಾಗೇಂದ್ರ ಸ್ಥಪತಿ ೧೪೨
ಚಿತ್ರ ೮.೫ : ಮಹಾದೇವಸ್ವಾಮಿಗಳು ೧೪೩
ಚಿತ್ರ ೮.೬ : ಸಿ. ಪರಮೇಶ್ವರಾಚಾರ್ಯ ೧೪೩
ಚಿತ್ರ ೮.೭ : ಕೆ.ಸಿ. ಪುಟ್ಟಣ್ಣಯ್ಯ ಆಚಾರ್ಯರು ೧೪೩
ಚಿತ್ರ ೮.೮ : ಎಂ.ಆರ್. ಜಿ. ಶಂಕರ್ ೧೪೪
ಚಿತ್ರ ೮.೯ : ಸಿ. ಕುಪ್ಪಾಚಾರ್ಯರು ೧೪೪
ಚಿತ್ರ ೮.೧೦ : ಸಿಂಗಣ್ಣಾಚಾರ್ಯರು ೧೪೪
ಚಿತ್ರ ೮.೧೧ : ಎನ್.ಪಿ. ಶ್ರೀನಿವಾಸಾಚಾರ್ಯರು ೧೪೫
ಚಿತ್ರ ೮.೧೨ : ಎಸ್. ನರಸಿಂಹಚಾರ್ಯರು ೧೪೬
ಚಿತ್ರ ೮.೧೩ : ಗುರುಕುಲದ ವಿಶೇಷಸಮಾರಂಭದಲ್ಲಿ ಸ್ವಾಮಿಗಳು ಮತ್ತು ಶಿಷ್ಯರು ೧೪೬
ಚಿತ್ರ ೮.೧೪ : ಸುಭಾಷಿಣಿ ದೇವಿ ೧೪೭
ಚಿತ್ರ ೮.೧೫ : ಎಲ್. ಶಿವಲಿಂಗಪ್ಪ ೧೪೭
ಚಿತ್ರ ೮.೧೬ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲಂ ೧೪೮
ಚಿತ್ರ ೮.೧೭ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲದ ಲಾಂಛನವಾಗಿರುವ ಶಿಲ್ಪಾದರ್ಶಮೂರ್ತಿ ೧೪೮
ಚಿತ್ರ ೮.೧೮ : ಶಿಲ್ಪ ಗುರುಕುಲದ ಉದ್ಘಾಟನಾ ಸಮಾರಂಭ ೧೪೯
ಚಿತ್ರ ೮.೧೯ : ಮಹಾರಾಜರೊಂದಿಗೆ ಸ್ವಾಮಿಗಳು ೧೪೯
ಚಿತ್ರ ೮.೨೦ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲದಲ್ಲಿರುವ ೧೦೮ ಶಿವಲಿಂಗಗಳು ೧೫೦
ಚಿತ್ರ ೮.೨೧ : ಸದ್ಯೋಜಾತಾದಿ ಮೂರ್ತಿಗಳು ೧೫೦
ಚಿತ್ರ ೮.೨೨ : ಗುರುಕುಲದ ಪೌಳಿಯಲ್ಲಿರುವ ಶಿಲಾಸ್ತಂಭಗಳು ೧೫೨
ಚಿತ್ರ ೮.೨೩ : ಪೌಳಿಯಲ್ಲಿರುವ ಶಿಲಾಸ್ತಂಭಗಳ ಕೆತ್ತನೆಯ ವಿವರ ೧೫೨
ಚಿತ್ರ ೮.೨೪ : ಶಿಲ್ಪ ಗುರುಕುಲದಲ್ಲಿರುವ ಸ್ವಾಮಿಗಳ ಸಮಾಧಿ ೧೫೪
ಚಿತ್ರ ೮.೨೫ : ಸ್ವಾಮಿಗಳ ಸಮಾಧಿಯ ಅಲಂಕರಣ (ಯೋಜಿತ ರೇಖಾಚಿತ್ರ) ೧೫೫
ಚಿತ್ರ ೮.೨೬ : ಪ್ರೊ॥ ಒಟ್ಟೋ ಅವರಿಗೆ ಕೊಟ್ಟಿರುವ ಆಚಾರ್ಯ ಶಂಕರರ ಪ್ರತಿಮೆ ೧೫೬

೯. ಸಿದ್ಧಲಿಂಗ ಸ್ವಾಮಿಗಳ ಸಾಹಿತ್ಯ ಸೇವೆ

ಚಿತ್ರ ೯.೧ : ಶಿಲ್ಪವಿದ್ಯಾರಹಸ್ಯೋಪನಿಷತ್ (ಸಂಸ್ಕೃತ) ೧೫೭
ಚಿತ್ರ ೯.೨ : ಶಿಲ್ಪಾದರ್ಶಃ ೧೫೮
ಚಿತ್ರ ೯.೩ : ಶಿಲ್ಪಸಾರ(ಷಟ್ಪದೀ ಕನ್ನಡ ಖಂಡಕಾವ್ಯ) ೧೬೦
ಚಿತ್ರ ೯.೪ : ಕರಸ್ಥಲ ನಾಗಲಿಂಗದೇವರ ಚರಿತೆ ೧೬೪
ಚಿತ್ರ ೯.೫ : ಋಗ್ವೇದ ಸಂಹಿತೆಯ ಗ್ರಂಥದ ಒಳ ಮುಖಪುಟ ೧೬೬
ಚಿತ್ರ ೯.೬ : ಸ್ವಾಮಿಗಳು ವೇದ ವಿದ್ವನ್ಮಂಡಲಿಯ ಅಧ್ಯಕ್ಷರಾಗಿ ೧೬೭
ಚಿತ್ರ ೯.೭ : ಕಾಮಕಾಮೇಶ್ವರಿ ದೇವಸ್ಥಾನದ ಗರ್ಭಗುಡಿಯ ಹಿಂಭಾಗದಿಂದ ಮುನ್ನೋಟ ೧೬೯

೧೦. ತೌಲನಿಕ ಸ್ವಾಮಿಗಳು ಮತ್ತು ಸಮಕಾಲೀನ ಪ್ರಖ್ಯಾತರು

ಚಿತ್ರ ೧೦.೧ : ರಾಜಾ ರವಿವರ್ಮ ೧೭೦
ಚಿತ್ರ ೧೦.೨ : ಕರಸ್ಥಲ ನಾಗಲಿಂಗ ಸ್ವಾಮಿಗಳ ಗುರುಪೀಠಾಧ್ಯಕ್ಷರಾದ ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು ೧೭೧
ಚಿತ್ರ ೧೦.೩ : ವರ್ಣಶಿಲ್ಪಿ ಕೆ. ವೆಂಕಟಪ್ಪ ೧೭೪
ಚಿತ್ರ ೧೦.೪ : ಶ್ರೀ ಸಿದ್ಧಲಿಂಗಸ್ವಾಮಿಗಳು ೧೭೫
ಚಿತ್ರ ೧೦.೫ : ವೆಂಕಟಪ್ಪನವರ ನಟರಾಜ ೧೭೯
ಚಿತ್ರ ೧೦.೬ : ಶ್ರೀ ಸಿದ್ಧಲಿಂಗಸ್ವಾಮಿಗಳು ೧೮೧
ಚಿತ್ರ ೧೦.೭ : ಹಂಸ ೧೮೩

೧೧. ಸ್ಮರಣೆಯೊಂದೇ ಕೈಹಿಡಿದು ಮುನ್ನಡೆಸುವ ಶಕ್ತಿ

ಚಿತ್ರ ೧೧.೧ : ಶ್ರೀ ಸ್ವಾಮಿಗಳ ರೇಖಾಚಿತ್ರ ೧೮೭
ಚಿತ್ರ ೧೧.೨ : ಚೌಕಗೊಂಡ ಪದ್ಮಗಳ ವಿನ್ಯಾಸ ೧೯೦

ಅನುಬಂಧ –೧

ಚಿತ್ರ ಅನು. ೧.೧ : ಪಾರ್ವತಿ ೧೯೪
ಚಿತ್ರ ಅನು. ೧.೨ : ಶಿಲ್ಪಾದರ್ಶ ಮೂರ್ತಿ ೨೦೭

ಕರ್ನಾಟ ಶಿಲ್ಪಕಲಾ ಅಕಾಡೆಮಿ

ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ (೩೦ ಜೂನ್ ೨೦೦೯ ರಿಂದ ೧೯ ಜೂನ್ ೨೦೧೩)

ಅಧ್ಯಕ್ಷರು :

ಡಾ॥ ಜಿ. ಜ್ಞಾನಾನಂದ
ನಂ. ೧೧೨೨, ೫ನೇ ಮುಖ್ಯರಸ್ತೆ,
ಬ್ರಿ॥ ಗೋಖಲೆ ರಸ್ತೆ, ಬಿಇಎಂಎಲ್ ೩ನೇ ಹಂತ,
ರಾಜರಾಜೇಶ್ವರಿನಗರ, ಬೆಂಗಳೂರು ೫೬೦೦೯೮
ಮೊ. : ೯೮೮೯೧೦೭೮, ೦೮೦-೨೮೬೦೪೧೦೭

ಸದಸ್ಯರು :

೧. **ಶ್ರೀ ಕೆ. ವೆಂಕಟೇಶ್**
ನಂ. ೭೮೪, ೧೦ನೇ ಮುಖ್ಯರಸ್ತೆ, ೨ನೇ ಬ್ಲಾಕ್
ಬಿ. ಎಸ್. ಕೆ. ೧ನೇ ಹಂತ, ಬೆಂಗಳೂರು – ೫೬೦ ೦೫೦
ಮೊಬೈಲ್ : ೯೪೪೯೯೪೯೩೦

೨. **ಶ್ರೀ ಸುಧಾಕರ ಡೋಂಗ್ರೆ**
ಕಲ್ಯಾಣ ಮನೆ, ಪೋಸ್ಟ್ – ಮಾಳ
ಕಾರ್ಕಳ ತಾ॥ ಉಡುಪಿ ಜಿಲ್ಲೆ
ಮೊ. : ೯೪೪೮೮೨೪೩೫೩

೩. **ಶ್ರೀ ಗೌತಮ. ವಿ. ಅಂದಾನಿ**
ನಂ. ೧೦-೫/೪, ನೀಲಾಂಗಳ, ಎನ್. ವಿ. ಲೇಔಟ್
ಗುಲಬರ್ಗಾ, ಮೊ. : ೯೪೪೮೭೩೨೨೦೫

೪. **ಶ್ರೀ ವಿಠ್ಠಲರೆಡ್ಡಿ ಫ. ಚುಳಕಿ**
ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್
ಸಿ.ಎ. – ೧೫, ವಿಜಯನಗರ, ೨ನೇ ಹಂತ
ದಿವ್ಯರೂಪ ಕಲ್ಯಾಣ ಮಂಟಪ ಹತ್ತಿರ
ಮೊಬೈಲ್ : ೯೮೪೪೨೭೧೨೪೩

೫. **ಡಾ. ವಿರೂಪಾಕ್ಷಿ ಪೂಜಾರಳ್ಳಿ**
ಪ್ರವಾಚಕರು ಹಾಗೂ ಮುಖ್ಯಸ್ಥರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೮, ಬಳ್ಳಾರಿ ಜಿಲ್ಲೆ
ಮೊಬೈಲ್ : ೯೪೪೮೨೨೭೧೫೬

೬. **ಪ್ರೊ. ಅ.ಸಿ. ಹಿರೇಮಠ**
ಚೆನ್ನಚೇತನ, ಮೃತ್ಯುಂಜಯ ನಗರ
ರಾಣೀಬೆನ್ನೂರು – ೫೮೧ ೧೧೫
ಮೊಬೈಲ್ : ೯೪೪೯೮೫೬೮೬೨

೭. **ಪ್ರೊ. ಎಸ್. ಬಿ. ರಂಗನಾಥ್**
ನಿವೃತ್ತ ಪ್ರಾಂಶುಪಾಲರು
ನಂ. ೧೧೫೭/೨೮, 'ಸರಸ್ವತಿ', ೪ನೇ ಮುಖ್ಯರಸ್ತೆ
ತರಳಬಾಳು ಬಡಾವಣೆ, ದಾವಣಗೆರೆ – ೫೭೭ ೦೦೫
ಮೊಬೈಲ್ : ೯೮೮೦೦ ೯೩೮೫೮

೮. **ಶ್ರೀಮಹಾಂತೇಶ ಫಲದಿನ್ನಿ**
ವಿವೇಕನಗರ (ಪಶ್ಚಿಮ), ವಿಜಾಪುರ – ೫೮೬೧೦೧
ಮೊಬೈಲ್ : ೯೪೫೪೪೩೨೪೮

೯. **ಶಿಲ್ಪಿ ಶ್ರೀ ಎಸ್. ಎನ್. ತ್ಯಾಗರಾಜ ಆಚಾರ್ಯ**
ಶಿವಾರಪಟ್ಟಣ, ಮಾಲೂರು ತಾಲ್ಲೂಕು
ಕೋಲಾರ ಜಿಲ್ಲೆ, ಮೊಬೈಲ್ : ೯೪೪೮೪೪೬೨೯

೧೦. **ಶಿಲ್ಪಿ ಶ್ರೀ ಪ್ರಭಾಕರ ಆಚಾರ್ಯ**
ಶ್ರೀ ಕಾಳಿಕಾಂಬ ಶಿಲ್ಪಕಲಾ, ಗೋಪಾಡಿ
ಕೋಟೇಶ್ವರ ಅಂಚೆ, ಕುಂದಾಪುರ ತಾ॥ ಉಡುಪಿ ಜಿಲ್ಲೆ
ಮೊಬೈಲ್ : ೯೪೪೮೫೭೬೪೬೭

೧೧. **ಶಿಲ್ಪಿ ಶ್ರೀ ಎ. ಪಿ. ಶ್ರೀಕಂಠಾಚಾರ್ಯ**
ಶ್ರೀ ವಿಶ್ವಕರ್ಮ ಶಿಲ್ಪಕಲಾನಿಕೇತನ
ಗೊಪ್ಪೇನಹಳ್ಳಿ, ಚನ್ನಗಿರಿ ತಾಲ್ಲೂಕು
ದಾವಣಗೆರೆ ಜಿಲ್ಲೆ – ೫೭೭೨೧೫
ಮೊಬೈಲ್ : ೯೭೩೧೩೪೮೦೨೨

೧೨. **ಶ್ರೀಮತಿ ದುರ್ಗಾ ಸಿ. ಆವರ್ತಿ**
ಜಂಟಿ ನಿರ್ದೇಶಕರು (ಕಾರ್ಯಕ್ರಮ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦-೨೨೨೧೩೫೩೦

ಅರ್ಥ ಸದಸ್ಯರು :

೧೩. **ಶ್ರೀ ಮಹದೇವಯ್ಯ**
ಅರ್ಥ ಸದಸ್ಯರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಹಾಗೂ ಗೆಜೆಟೆಡ್ ಮ್ಯಾನೇಜರ್
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
೧ನೇ ಮಹಡಿ, ಕನ್ನಡ ಭವನ, ಚಾಲುಕ್ಯ ವಿಭಾಗ
ಜೆ. ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೨೨೧೨೭೧

ರಿಜಿಸ್ಟ್ರಾರ್ (ಪ್ರ) :

೧೪. **ಶ್ರೀ ತ್ಯಾಗರಾಜು**
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡ ಭವನ, ಜೆ. ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦-೨೨೨೭೮೭೨೫

ಗಣಕಯಂತ್ರ ನಿರ್ವಾಹಕರು :

ಶ್ರೀ ಎಚ್. ಮಹೇಂದ್ರ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ. ಸಿ.ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦-೨೨೨೭೮೭೨೫

ದಲಾಯಿತ

ಶ್ರೀ ಎಸ್. ಲಕ್ಷ್ಮಣ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ. ಸಿ.ರಸ್ತೆ. ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦-೨೨೨೭೮೭೨೫

ಶತಪುರುಷ

ಸಿದ್ಧಲಿಂಗ ಸ್ವಾಮಿಗಳು

೧

ಸ್ವಾಮಿಗಳು ರಚಿಸಿರುವ ಶಾಸ್ತ್ರೀಯ ವರ್ಣಚಿತ್ರಗಳು

ಹದಿನೆಂಟು-ಹತ್ತೊಂಬತ್ತನೆ ಶತಮಾನ ಭಾರತ ಸ್ವಾತಂತ್ರ್ಯ ಚಳುವಳಿಯ ಪರ್ವಕಾಲ. ದೇಶಾದ್ಯಂತ ಪರದಾಸ್ಯದ ಬಿಡುಗಡೆಗಾಗಿ ಅವಿರತ ಹೋರಾಟ ನಡೆಯುತ್ತಿತ್ತು. ಮೈಸೂರು ರಾಜ್ಯವು ಅದರಿಂದ ಹೊರತಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯ ಹಿಡಿತವಿದ್ದರೂ ಮೈಸೂರು ಒಡೆಯರ ಮನೆತನಕ್ಕೆ ಜನರು ರಾಜಗೌರವ ಸಲ್ಲಿಸುತ್ತಿದ್ದರು. ಅದರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು (೧೮೯೫-೧೯೪೦) ಮಹಾದೈವಭಕ್ತರು, ಪ್ರಜಾ ಕ್ಷೇಮ ಚಿಂತಕರು, ಧರ್ಮದಿಂದ ರಾಜ್ಯ ಪ್ರಜಾಪರಿಪಾಲನೆ ಮಾಡುವುದೇ ಅವರ ಜೀವನದ ಮುಖ್ಯ ಗುರಿಯಾಗಿತ್ತು. ಅದು ಧಾರ್ಮಿಕ ಯುಗವೂ ಆಗಿತ್ತು. ತದನಂತರದ ಶ್ರೀ ಜಯಚಾಮರಾಜ ಒಡೆಯರ ಆಳ್ವಿಕೆ ಕಾಲವು (೧೯೪೦-೧೯೭೪) ಅಷ್ಟೇ ಪ್ರಖ್ಯಾತವಾಗಿತ್ತು. ಈ ಉಭಯ ಮಹಾರಾಜರುಗಳ ಆಳ್ವಿಕೆಯ ೭೯ ವರ್ಷಗಳಲ್ಲಿ ಕೊನೆಯ ನಾಲ್ಕು ವರ್ಷಗಳು ರಾಜಕೀಯ ಸ್ಥಿತ್ಯಂತರದಿಂದ ಕೂಡಿರುವುದನ್ನು ಬಿಟ್ಟರೇ ಉಳಿದ ೭೫ ವರ್ಷಗಳು ಮೈಸೂರು ಜಗದ್ವಿಖ್ಯಾತಿಯಾಗಲು ಕಾರಣೀಭೂತವಾದ ವಾಸ್ತು, ಚಿತ್ರ, ಶಿಲ್ಪಗಳ ನಿರ್ಮಾಣ, ದೇವಾಲಯ ಸ್ಥಾಪನೆ ಅಡೆತಡೆಯಿಲ್ಲದೇ ನಡೆದವು. ಈ ಚಟುವಟಿಕೆಗಳು ನಡೆಯಲು ವಿಶೇಷವಾದ ಪ್ರತ್ಯೇಕ ಕಾರಣವೂ ಇತ್ತು.

ರಾಜವಂಶಸ್ಥರ ಮದುವೆಯ ಸಂದರ್ಭದಲ್ಲಿ (೧೮೯೧) ಮರದಿಂದ ನಿರ್ಮಿತವಾಗಿದ್ದ ಅರಮನೆಯು ಅಕಸ್ಮಾತ್ತಾಗಿ ಅಗ್ನಿಗೆ ಆಹುತಿಯಾಯಿತು. ಆ ಸ್ಥಳದಲ್ಲಿಯೇ ನೂತನವಾಗಿ ನಿರ್ಮಿತವಾಗಿರುವುದೇ ಈಗ ನಾವು ಕಾಣುವ ಮೈಸೂರಿನ ಅರಮನೆ. ಹದಿನೈದು ವರ್ಷಕಾಲ (೧೮೯೭-೧೯೧೨) ಈ ವಾಸ್ತುನಿರ್ಮಾಣ ನಡೆಯಿತು. ೭೪.೫೦ ಮೀ ಉದ್ದ, ೪೭.೫೦ ಮೀ ಅಗಲ. ೪೪.೧೦ ಮೀ ಎತ್ತರದ ವಿಸ್ತೀರ್ಣವುಳ್ಳದ್ದು. ಈ ಕಟ್ಟಡ ಇಂಡೋ ಇಸ್ಲಾಮಿಕ್ ಕಲಾ ಶೈಲಿಯಲ್ಲಿ ನಿರ್ಮಿತವಾಗಿದೆ. ಹೆನ್ರಿ ಇರ್ವಿನ್ ಎಂಬ ಪಾಶ್ಚಾತ್ಯ ವಾಸ್ತುಶಿಲ್ಪಿಯ ನೇತೃತ್ವದಲ್ಲಿ ಸಾವಿರಾರು ಸ್ಥಳೀಯ ತಂತ್ರಜ್ಞರು, ವಾಸ್ತುಕಾರರು, ಶಿಲ್ಪಿಗಳು ತಮ್ಮ ಶ್ರಮವನ್ನು ಧಾರೆಯೆರೆದು ನಿರ್ಮಿಸಿದ್ದಾರೆ.

ಕಟ್ಟಡ ನಿರ್ಮಾಣದ ನಂತರದಲ್ಲಿ ಚಿತ್ರ-ಶಿಲ್ಪಗಳ ರಚನೆಗಳಾದವು. ಅನೇಕ ಚಿತ್ರಗಾರರು, ಶಿಲ್ಪಿಗಳು ಹಗಲಿರುಳು ಶ್ರಮಿಸಿದರು. ಅವರಲ್ಲಿ ಹೆಸರಿಸಬಹುದಾದ ಪ್ರಮುಖರು ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳವರು, ಕೆ. ವೆಂಕಟಪ್ಪ, ಕೇಶವಯ್ಯ, ವೈ. ನಾಗರಾಜು, ವೈ. ಸುಬ್ರಮಣ್ಯರಾಜು, ಶಂಕರರಾಜು, ಎಸ್.ಎನ್. ಸ್ವಾಮಿ, ಎಸ್.ಆರ್. ಅಯ್ಯಂಗಾರ್, ರಾಮನರಸಯ್ಯ. ಅಲ್ಲದೇ ಕೇರಳ ಮೂಲದವರಾದ ರಾಜಾ ರವಿವರ್ಮ ಅವರು ಕೂಡಾ ತಮ್ಮ ಜೀವಿತಾವಧಿಯ ಅಂತ್ಯ ಭಾಗದಲ್ಲಿ ಮೈಸೂರಿನಲ್ಲಿ ಅರಮನೆಗಾಗಿ ವರ್ಣ ಚಿತ್ರಗಳನ್ನು ರಚಿಸಿದರು (೧೯೦೬).

ಬಹುತೇಕ ಎಲ್ಲಾ ಕಲಾವಿದರ ಕಲಾನಿರ್ಮಾಣ, ಅರಮನೆಗೆ ಸಂಬಂಧಿಸಿದ, ರಾಜಕುಟುಂಬಕ್ಕೆ ಪೂರಕವಾದವುಗಳೇ ಆಗಿವೆ. ಹಲವು ಬಗೆಯ ರಾಜಪೋಷಾಕು ಧರಿಸಿದ, ಛತ್ರಿ, ಚಾಮರ, ಕುದುರೆ, ದಂಡುಗಳ ಸಾಲು ಸಾಲು, ಕರಿಕೋಟು, ಬಿಳಿಪೇಟ ಧರಿಸಿದವರು, ಬಾಜಾ ಭಜಂತ್ರಿಗಳ, ಮೇಳದವರ, ವಿಲಾಸ ಸಂಭ್ರಮಗಳನ್ನು ಚಿತ್ರಿಸಿರುವುದೇ ಆಗಿವೆ.

ಇದರಲ್ಲಿ ಬೆಳ್ಳಿಗಾಡಿ, ಆನೆಸಾರೋಟು, ಪಟ್ಟದ ಆನೆ, ಕುದುರೆಗಳು ಹೀಗೆ ಒಂದೇ ಎರಡೇ ದಸರಾ ಮೆರವಣಿಗೆಯ ಚಿತ್ರಾವಳಿಗಳನ್ನು ಬರೆದವರೇ ಹೆಚ್ಚು. ಅಂದಿನ ದಸರಾ ಈಗ ಇಲ್ಲವಾದರೂ ಗತವೈಭವವನ್ನು ದೃಶ್ಯದ ಮೂಲಕ ನೋಡಲು ಸಹಾಯಕವಾಗಿವೆ.

ಇವೆಲ್ಲವುಗಳಿಗಿಂತ ಭಿನ್ನವಾದ ರೀತಿಯ ಚಿತ್ರಶಿಲ್ಪಗಳನ್ನು ರಚಿಸಿದವರು ಶಿಲ್ಪಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳವರು ಮಾತ್ರ. ಇವರ ಚಿತ್ರಗಳು ದೇವ–ದೇವತೆಗಳಿಗೆ ಸಂಬಂಧಿಸಿದವು. ಸಕಲ ಚರಾಚರಗಳ ಉತ್ಪತ್ತಿಕಾರಣವಾದ ಅಗೋಚರ, ಅಗಮ್ಯ ಸ್ವರೂಪದ ದೈವಲೀಲೆ ಮುಖ್ಯವಾಗಿದೆ.

ಭಾರತದ ಭವ್ಯ ಪರಿಕಲ್ಪನೆಯನ್ನು ಮನಸ್ಸಲ್ಲಿ ಮೂಡಿಸುವಂತಹ ಪೌರಾಣಿಕ ಕಲಾಪ್ರಸಂಗಗಳು ಶಬ್ದರೂಪದಲ್ಲಿವೆ. ಕೆಲವು ಗ್ರಂಥಸ್ಥವಾಗಿವೆ. ಈ ಎಲ್ಲಾ ಸೃಷ್ಟಿಗಳ ಮೂಲ ಸ್ವರೂಪನಾದ ಶ್ರೀವಿಶ್ವಕರ್ಮ ಪರಮಾತ್ಮನ ಬಗ್ಗೆ ಶ್ರೀ ಸಿದ್ಧಲಿಂಗ ಸ್ವಾಮಿಗಳ ಅಧ್ಯಯನ, ಅಧ್ಯಾಪನ, ಅನುಷ್ಠಾನಗಳು ಅನವರತ ಸಾಗಿಸಿ, ದೈವಸಾಕ್ಷಾತ್ಕಾರಗೊಳಿಸಿಕೊಡುವಲ್ಲಿ ಸಫಲಗೊಂಡಿವೆ; ಸಾಕಾರಗೊಂಡಿವೆ. ಸಿದ್ಧಿಯನ್ನು ಪಡೆದ ಶ್ರೀಸ್ವಾಮಿಗಳು ರಾಜಗುರುಗಳಾಗಿದ್ದರು. ಮಹಾರಾಜರಿಗೆ ದೀಕ್ಷೆಯನ್ನನುಗ್ರಹಿಸಿದರು ನೂರಾರುಮಂದಿ ಶಿಷ್ಯರಿಗೆ ಮಾರ್ಗದರ್ಶಕರಾಗಿದ್ದರು. ಎಂಬುದು ಈಗ ಇತಿಹಾಸ.

ಶಿಲ್ಪಶಾಸ್ತ್ರವನ್ನು ಅಳವಡಿಸಿಕೊಂಡೇ ಸ್ವಾಮಿಗಳು ಶಿಲ್ಪ ಮತ್ತು ಚಿತ್ರ ರಚನೆ ಮಾಡಿದ್ದಾರೆ. ಸ್ವಾಮಿಗಳ ಚಿತ್ರಗಳನ್ನಾಗಲೀ, ಶಿಲ್ಪವನ್ನಾಗಲೀ, ಶಿಲ್ಪಶಾಸ್ತ್ರದಿಂದ ಹೊರಗಿಟ್ಟು ನೋಡುವುದು ಸಾಧ್ಯವಾಗುವುದಿಲ್ಲ.

ಸ್ವಾಮಿಗಳ ವರ್ಣಚಿತ್ರಗಳು ನೋಡಲು ಪ್ರಮುಖವಾಗಿ ಲಭ್ಯವಾಗುವುದು ಮೈಸೂರು ಅರಮನೆಯ ದರ್ಬಾರ್ ಹಾಲಿನಲ್ಲಿ. ಇಡೀ ಅರಮನೆಯನ್ನು ಸುತ್ತಾಡಿ ಬಂದಾಗ ಆಗುವ ಅನುಭವಕ್ಕಿಂತ ಭಿನ್ನವಾದ ರೀತಿಯ ಅನುಭವವನ್ನು ನೀಡುತ್ತದೆ. ದೇವಾಲಯದ ಗರ್ಭಗುಡಿಯನ್ನು ಪ್ರವೇಶಿಸಿ, ಸಾಕ್ಷಾತ್ ದೇವಿಯರನ್ನೇ ದರ್ಶಿಸುತ್ತಿರುವಂತೆ ಅನ್ನಿಸುತ್ತದೆ. ವೀಕ್ಷಕ ದಿಙ್ಮೂಢನಾಗುತ್ತಾನೆ. ಅವನಿಗರಿವಿಲ್ಲದಂತೆಯೇ ಭಕ್ತಿಯಿಂದ ನಮಸ್ಕರಿಸುವಂತೆ ಮನಸ್ಸು ಪ್ರೇರಿತಗೊಳ್ಳುತ್ತದೆ.

ಅರಮನೆಯಲ್ಲಿ ವರ್ಣಚಿತ್ರಗಳ ಅಲಂಕರಣ

ಶಕ್ತಿ ಸಂಚಯವಾಗುವುದರಿಂದ ರಾಜ್ಯಾಡಳಿತ ಸುಗಮ ಸಾಧ್ಯ ಎನಿಸುವಂತೆ ಶಕ್ತಿದೇವತೆಗಳ ಚಿತ್ರಗಳು ಸ್ವಾಮೀಜಿಯವರ ಹಸ್ತದಿಂದ ಮೂಡಿಬಂದಿವೆ. ನವದೇವತೆಗಳನ್ನು ಚಿತ್ರಿಸುವ ಉದ್ದೇಶವಿದ್ದರೂ, ಸಾಧ್ಯವಾದದ್ದು ಅಷ್ಟದೇವತೆಗಳು ಮಾತ್ರವೇ. ಮಹಾರಾಜರು ನಡೆಸುವ ಸಭೆ(ದರ್ಬಾರ್)ಯು ಸ್ವಾಮಿಗಳವರ ದೃಷ್ಟಿಯಲ್ಲಿ ಇಂದ್ರ ಸಭೆ. **ರಾಜಾ ಪ್ರತ್ಯಕ್ಷ ದೇವತಾ** ಎನ್ನುವಂತೆ ಅಲ್ಲಿಯ ಸಕಲವೂ ಸಜ್ಜುಗೊಳ್ಳಬೇಕು. ಆ ಶಕ್ತಿಯು ಮೈತಳೆದು ಅರಮನೆಗೆ ದೈವಸ್ವರೂಪದ ತೇಜಸ್ಸನ್ನು ತರಲು ಸ್ವಾಮಿಗಳು ಹಗಲಿರಳು ಶ್ರಮಿಸಿದರು. ಮಹಾರಾಜರು ಕೂಡಾ ಅವರಲ್ಲಿರುವ ವಿದ್ವತ್ತಿಗೆ, ಕಲಾ ನೈಪುಣ್ಯತೆಗೆ, ವೇದಾಂತ ಸಿದ್ಧಿಗೆ ತಲೆಬಾಗಿ ತಲೆ ತಲಾಂತರಕ್ಕೂ ಶಾಶ್ವತವಾಗಿ ನೆಲೆಗೊಳ್ಳಬಹುದಾದ ಚಿತ್ರ, ಶಿಲ್ಪರಚನೆಗೆ ಮುಕ್ತ ಅವಕಾಶ ನೀಡಿದರು. ತತ್ಫಲವೇ ಸುಂದರ ಸಭಾಂಗಣದಲ್ಲಿ ಕಾಳಿಕಾದೇವಿ, ನವದುರ್ಗಾದೇವಿ, ಮಹಿಷಾಸುರ ಮರ್ದಿನಿ, ಸರಸ್ವತೀ, ಮಹಾಲಕ್ಷ್ಮೀ, ಭುವನೇಶ್ವರಿ, ಗಾಯತ್ರಿ, ರಾಜರಾಜೇಶ್ವರಿ ದೇವಿಯರ ಚಿತ್ರಗಳು ಮೂರ್ತಗೊಂಡಿವೆ. ಒಂಬತ್ತನೆಯ ಮನೋನ್ಮಯಿ ದೇವೀ ಚಿತ್ರವು ಸ್ವಾಮಿಗಳ ಅನಾರೋಗ್ಯದ ಕಾರಣದಿಂದ ಪೂರ್ಣಗೊಳ್ಳಲಿಲ್ಲ. ಈ ತೈಲ ಚಿತ್ರಗಳು ಒಂದೊಂದೂ ವೈಶಿಷ್ಟ್ಯಪೂರ್ಣವಾಗಿ, ಕಲಾತ್ಮಕವಾಗಿವೆ. ಧ್ಯಾನಶ್ಲೋಕಗಳ ಆಧಾರದಿಂದ ಶಾಸ್ತ್ರೀಯ ಲಕ್ಷಣಗಳೊಂದಿಗೆ ರೂಪುಗೊಂಡಿವೆ. ಆದ್ದರಿಂದ ವೀಕ್ಷಕನು ಅವುಗಳನ್ನು ದರ್ಶಿಸುತ್ತಿದ್ದಂತೆ ಭಕ್ತಿಪರವಶನಾಗುತ್ತಾನೆ. ಶಾಸ್ತ್ರದ ದೃಷ್ಟಿಯಿಂದ ಸಕಲ ದೈವೀ ಲಕ್ಷಣಗಳೂ ಈ ಕೃತಿಗಳಲ್ಲಿ ಮೂಡಿವೆ.

ಈ ವರ್ಣಚಿತ್ರಗಳ ವಿಶೇಷವೇನು? ಎಂಬುದನ್ನು ನಾವು ಆ ಕಾಲದ ಪರಿಸ್ಥಿತಿಯನ್ನು ತಿಳಿಯದೆಯೇ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

ಮೊದಲಿಗೆ ಮೈಸೂರಿನ ಚಿತ್ರಗಳು ಎಂದರೆ ಗಾಜಿನ ಹಿಂದೆ ಬಣ್ಣ, ಬಂಗಾರದ ಹಾಳೆ, ಅಲಂಕಾರಿಕ ವಸ್ತುಗಳನ್ನು ಬಳಸಿ ರೂಪಿತವಾಗುತ್ತಿದ್ದ ಚಿತ್ರಗಳು. ಇವುಗಳಲ್ಲಿ ವಿಷಯಕ್ಕೆ ಅನುಗುಣವಾಗಿ ಪ್ರಧಾನ–ಗೌಣ ಪಾತ್ರಗಳಿರುತ್ತಿದ್ದವು. ಕೃಷ್ಣನ ಬಾಲಲೀಲೆಗಳಾಗಿದ್ದರೆ ಚಿತ್ರದಲ್ಲಿ ಬಾಲಕ ಕೃಷ್ಣನೇ ತುಂಬಿರುತ್ತಿದ್ದ. ತಾಯಿ ಕುಬ್ಜಳಾಗಿ ಒಂದು ಮೂಲೆಯಲ್ಲಿ ಇತರ ಮಹಿಳೆಯರು ಅದೇ ಆಕಾರದಲ್ಲಿದ್ದು ಒಂದು ಪ್ರಸಂಗದ ಚಿತ್ರಣವಾಗಿರುತ್ತಿತ್ತು. ಇವನ್ನು ಜಿನಗಾರರು ಮಾಡುತ್ತಿದ್ದುದರಿಂದ ಇವನ್ನು ಜಿನಗಾರರ ಚಿತ್ರಗಳು ಎಂದು ಕರೆಯುತ್ತಿದ್ದರು. ಒಂದು ರೀತಿಯಲ್ಲಿ ಇವು ಮೈಸೂರಿನ ಜನಪದ ಕಲಾ ಚಿತ್ರಗಳು ಎಂದು ಈಗ ಗುರ್ತಿಸುತ್ತಾರೆ.

ರಾಜಾ ರವಿವರ್ಮ ಅವರು ಅರಮನೆಯನ್ನು ಅಲಂಕರಿಸಲು ತಮ್ಮ ಶೈಲಿಯ ಚಿತ್ರಗಳನ್ನು ಅರಮನೆಯ ಅಲಂಕರಣಕ್ಕಾಗಿ ಬರೆದುಕೊಡಲು ಪ್ರಾರಂಭಿಸಿದರು. ಅವರ ಚಿತ್ರಗಳಿಗೆ ಮೊದಲು ರೂಪದರ್ಶಿಯನ್ನು ಸಿದ್ಧಗೊಳಿಸುತ್ತಿದ್ದರು. ದೇವ–ದೇವಿಯರ ಚಿತ್ರಗಳೂ ಕೂಡ 'ಯಾರದೋ' ಮುಖಚಹರೆ ಅಂಗಸೌಷ್ಟವ ಪಡೆದುಕೊಂಡಿರುತ್ತಿತ್ತು. ಮೈಸೂರಿನ ವರ್ಣಚಿತ್ರ ಕಲಾವಿದರಿಗೆ ರಾಜಾರವಿವರ್ಮರೇ ಆದರ್ಶರಾಗಿದ್ದರು. ಹೀಗಾಗಿ ದೇವರ ವರ್ಣಚಿತ್ರದಲ್ಲೂ ಮನುಷ್ಯರೂಪಗಳೇ ಬಹುವಾಗಿರುತ್ತಿದ್ದವು. ರಾಜಾ ರವಿವರ್ಮ ಅವರ ವರ್ಣಚಿತ್ರಗಳು ಕಾಗದದ ಮೇಲೆ ಬಹುವರ್ಣಗಳಲ್ಲಿ ಮುದ್ರಿತವಾಗಿ ಬಹು ಕಡಿಮೆಯ ಬೆಲೆಗೆ ಸಾವಿರಾರು ಪ್ರತಿಗಳು ಲಭಿಸುತ್ತಿದ್ದುದರಿಂದ ಮೈಸೂರಿನ ಜಾನಪದ ಚಿತ್ರೋದ್ಯಮಕ್ಕೆ ಬಲವಾದ ಪೆಟ್ಟು ನೀಡಿತು.

ಸಾಂಪ್ರದಾಯಿಕ ಶಿಲ್ಪದಲ್ಲಿ ಮೂರು ಬಗೆಯ ಶಿಲ್ಪಗಳ ತಯಾರಿಕೆ ರೂಢಿಯಲ್ಲುಂಟು.

ಷಣ್ಮಾನ ಸಹಿತಂ ಚಿತ್ರಂ ನಾಹಾರ್ಥಂ ಹ್ಯರ್ಧ ಚಿತ್ರಕಮ್ ॥
ನಾಹೋನ್ನತ ವಿಹೀನಂ ತತ್ ಆಭಾಸಂ ಪರಿಕೀರ್ತಿತಮ್ ।

– ಬ್ರಾಹ್ಮಿಯ ಚಿತ್ರಕರ್ಮ ಶಾಸ್ತ್ರಂ ೧೭ : ೩೦–೩೧

ಮಾನ (ಉದ್ದ ಅಥವಾ ಎತ್ತರ), ಪ್ರಮಾಣ (ಅಗಲ), ಉನ್ಮಾನ (ದಪ್ಪ, ಪರಿಮಾಣ (ಸುತ್ತಳತೆ) ಉಪಮಾನ (ಅಂಗ–ಉಪಾಂಗಗಳ ಮಧ್ಯೆ ಇರುವ ಅಂತರ), ಲಂಬಮಾನ (ಉದ್ದದಲ್ಲಿ ತೂಗಿಬಿಟ್ಟಿರುವ ಸೂತ್ರಗಳಿಂದ ಅಂಗಾಂಗಳನ್ನು ದೂರದ ಅಳತೆ) ಇವನ್ನು ಪಡೆದುಕೊಂಡಿರುವುದೇ ಚಿತ್ರ ಅಥವಾ ಪೂರ್ಣಚಿತ್ರ ಅಥವಾ ಪೂರ್ಣ ಶಿಲ್ಪ. ಸುತ್ತಳತೆಯಲ್ಲಿ ಅರ್ಧ ಮಾತ್ರ ಪಡೆದುಕೊಂಡಿರುವುದು ಅರ್ಧಚಿತ್ರ, ಸುತ್ತಳತೆ, ದಪ್ಪ ಎರಡೂ ಇಲ್ಲದೆ ಇರುವ ಕೇವಲ ಉದ್ದ–ಅಗಲಗಳು ಮಾತ್ರವೇ ಇದ್ದು, ಉಳಿದೆಲ್ಲವೂ ಕಲ್ಪಿತವಾಗಿ ತೋರಿಕೆಯಲ್ಲಿ ಚಿತ್ರಿತವಾಗುವುದು ಚಿತ್ರಾಭಾಸ. ಎಂದರೆ ನಾವು ರೂಢಿಯಲ್ಲಿ ಬಳಸುವ ವರ್ಣಚಿತ್ರವು ಶಿಲ್ಪದಲ್ಲಿ ಒಂದು ಬಗೆಯಾದ ಚಿತ್ರಾಭಾಸ ಎಂಬುದಾಗಿ ಶಿಲ್ಪಶಾಸ್ತ್ರವು ಪರಿಗಣಿಸುತ್ತದೆ.

ಶಿಲ್ಪದಲ್ಲಿ ಚಿತ್ರಿತವಾಗುವ ದೇವ ಮೂರ್ತಿಗಳನ್ನು ತಾಲಮಾನ ಎಂದು ಶಾಸ್ತ್ರ ಗುರ್ತಿಸುವ ಅಳತೆಯ ಅನುಸಾರವೇ ಲೇಖಿಸಬೇಕು. ಈ ಅಳತೆಗಳಲ್ಲಿ ದೇಹದ ಎಲ್ಲಾ ಅಂಗ–ಉಪಾಂಗ–ಪ್ರತ್ಯಂಗಗಳಿಗೂ ಅಳತೆಗಳನ್ನು ಹೇಳಿರುತ್ತದೆ. ಈ ಅಳತೆಗಳನ್ನು ಬಳಸಿಕೊಳ್ಳದೆ ತಯರಾಗುವ ಶಿಲ್ಪಗಳು ಪೂಜಾರ್ಹವಲ್ಲ. ಅವನ್ನು ಪೂಜಿಸಿದರೂ ಭಕ್ತರಿಗೆ ಫಲ ಸಿಗುವುದಿಲ್ಲ ಎಂಬುದಾಗಿ ಶಿಲ್ಪಶಾಸ್ತ್ರ ಮತ್ತು ಆಗಮ ಶಾಸ್ತ್ರಗಳು ಸಾರುತ್ತವೆ. ಈ ನಿಯಮ ಸಾಂಪ್ರದಾಯಿಕ ಶಿಲ್ಪ–ಚಿತ್ರ ಎರಡಕ್ಕೂ ಸಮಾನವಾಗಿ ಅನ್ವಯಿಸುತ್ತದೆ.

ಮಾ ಎಂದರೆ ಭೂಲೋಕದ ಅಳತೆ, **ಪ್ರಮಾ** ಎಂದರೆ ಆಕಾಶಲೋಕದ ಅಳತೆ. ಆದ್ದರಿಂದಲೇ **ಪ್ರತಿಮಾ** ಎಂದರೆ ಸ್ವರ್ಗಲೋಕದ ಅಳತೆಯನ್ನು ಬಳಸಿ ಸಿದ್ಧಪಡಿಸಿರುವ

ಶಿಲ್ಪ. ತಾಲಮಾನದ ಅಳತೆಗಳೇ ಪ್ರಧಾನ. ಅವೇ ಪೂಜಾರ್ಹ ಎಂಬ ನಿರ್ಣಯ ಇಲ್ಲಿದೆ. ದೇವಾಲಯಗಳಲ್ಲಿ ಈ ರೀತಿಯ ವರ್ಣಚಿತ್ರಗಳಿಗೂ ವಿಶೇಷವಾದ ಸ್ಥಾನ ಉಂಟು.

ಆದರೆ ಮೈಸೂರು ಸಂಸ್ಥಾನದಲ್ಲಿ ಪ್ರಚಲಿತದಲ್ಲಿದ್ದ ಜಿನಗಾರರ ಚಿತ್ರಗಳಾಗಲಿ, ನಂತರದಲ್ಲಿ ರೂಢಿಗೆ ಬಂದ ರೂಪದರ್ಶಿಗಳನ್ನು ಪಡೆದುಕೊಂಡು ಜನಪ್ರಿಯವಾಗುತ್ತಿದ್ದ ರಾಜಾ ರವಿವರ್ಮ ಅವರ ದೇವರ ವರ್ಣಚಿತ್ರಗಳಾಗಲಿ, ಪೂಜಾರ್ಹ ಚಿತ್ರಗಳಾಗಿರಲಿಲ್ಲ. ಹೀಗಾಗಿ ಸಾಂಪ್ರದಾಯಿಕ ವರ್ಣಚಿತ್ರಲೋಕ ಕನ್ನಡದ ಮಟ್ಟಿಗೆ ಬಹು ತೀವ್ರ ಇಳಿತವನ್ನು ಅನುಭವಿಸಿತು.

ಇಂತಹ ಕಾಲದಲ್ಲಿ ಸಿದ್ಧಲಿಂಗಸ್ವಾಮಿಗಳು ಶಿಲ್ಪಶಾಸ್ತ್ರದ ಅಳತೆಗಳ ಪ್ರಕಾರ, ಮಾನವ *ರೂಪದರ್ಶಿಗಳನ್ನು ಬಳಸಿಕೊಳ್ಳದೆ,* **ವರ್ಣಚಿತ್ರ ರಚನೆಯ ಹಳೆಯ ಮಾರ್ಗವನ್ನು ಹೊಸದಾಗಿ ತೆರೆದರು.** ರವಿವರ್ಮ ಅವರು ಬಳಸುತ್ತಿದ್ದ ಇಂಗ್ಲೆಂಡಿನ ವರ್ಣಗಳನ್ನು ಬಳಸುವುದರೊಂದಿಗೆ ಚಿತ್ರಗಳು ಆಕರ್ಷಗೊಳ್ಳುವಂತೆಯೂ ಮಾಡಿದರು.

ತೈಲ ವರ್ಣಚಿತ್ರಗಳು

ತಮ್ಮ ವಿದ್ವತ್ ಪ್ರೌಢಿಮೆಯಿಂದ ಸಿದ್ಧಲಿಂಗ ಸ್ವಾಮಿಗಳು ಭಾರತೀಯ ತತ್ತ್ವಶಾಸ್ತ್ರವನ್ನು, ಪುರಾಣ ವಿಶೇಷಗಳನ್ನು, ಬಳಸಿಕೊಂಡು ಈ ವರ್ಣಚಿತ್ರಗಳಿಗೆ ಜೀವವನ್ನು ತುಂಬಿದ್ದಾರೆ. ಈ ಅಂಶವನ್ನು ಪರಿಶೀಲಿಸಲು ಶ್ರೀ ರಾಜರಾಜೇಶ್ವರಿದೇವಿಯ ಚಿತ್ರವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ದೇವಿಯ ಪ್ರತಿಮಾ ಧ್ಯಾನಶ್ಲೋಕವನ್ನು ವರ್ಣಚಿತ್ರದ ಕೆಳಗೇ ಬರೆದಿದ್ದಾರೆ. ಸಾಧಾರಣವಾಗಿ ಪೂಜಾಸಂದರ್ಭದಲ್ಲಿ ಈ ಶ್ಲೋಕಗಳನ್ನು ಹೇಳುತ್ತಾ ಪೂಜೆ ಮಾಡಿದರೆ ಆ ದೇವಿ ಅಥವಾ ದೇವನ ಪೂಜೆಯು ಶಾಸ್ತ್ರಬದ್ಧವಾಗಿ ಆದಂತೆಯೇ. ದೇವಿಯ ಪ್ರತಿಮಾ ಧ್ಯಾನವು ಇಂತಿದೆ–

ಬಾಲಾರ್ಕ ಕೋಟಿಭಾಂ ತ್ರ್ಯಕ್ಷಾಂ ಬಾಲೇಂದು ಮುಕುಟೋಜ್ವಲಾಂ ।
ಪಾಶಾಂಕುಶೇಷು ಕೋದಂಡ ಪಂಚಬಾಣ ಲಸತ್ಕಾರಾಂ ॥

ಮಣಿ ಮಂಗಲ ಸೂತ್ರೇಣ ವಿಲಸತ್ಕಂಬು ಕಂಧರಾಂ ।
ಸರ್ವಶೃಂಗಾರ ವೇಷಾಢ್ಯಾಂ ಸರ್ವಾಭರಣ ಭೂಷಿತಾಂ ॥

ಪಂಚ ಬ್ರಹ್ಮಾಸನಾಸೀನಾಂ ಪಂಚ ಪ್ರಣವ ರೂಪಿಣೀಂ ।
ಸಚಾಮರ ರಮಾವಾಣೀ ಸೇವಿತಾ ಮಜಪಾತ್ಮಿಕಾಂ ॥

ನಮಾಮಿ ಸತತಂ ದೇವೀಂ ಸರ್ವಸೌಭಾಗ್ಯದಾಯನೀಂ ॥

ಬಾಲಸೂರ್ಯನ ಕಾಂತಿಗೆ ಸಮಾನ ದೇಹಕಾಂತಿಯುಳ್ಳ ದೇವಿಯ ತ್ರಿನೇತ್ರಯುಕ್ತ ಮುಖಕಾಂತಿಯು ಬಾಲಚಂದ್ರನಂತಿದೆ. ಬಹು ಉಜ್ವಲವಾಗಿ ಬೆಳಗುತ್ತಿರುವ ಮಕುಟವನ್ನು ಧರಿಸಿದ್ದಾಳೆ. ದೇವಿಯು ಬಲಪಾರ್ಶ್ವದ ಮೇಲಿನ ಹಸ್ತದಲ್ಲಿ ಅಂಕುಶವನ್ನು, ಮುಂದಿನ ಹಸ್ತದಲ್ಲಿ ಪಂಚಪುಷ್ಪ ಬಾಣಗಳನ್ನು ಹಾಗೆಯೇ ಎಡಪಾರ್ಶ್ವದ ಮೇಲಿನ ಹಸ್ತದಲ್ಲಿ ಪಾಶವನ್ನು ಮುಂದಿನ ಹಸ್ತದಲ್ಲಿ ಕಬ್ಬಿನ ಕೋದಂಡವನ್ನು ಹಿಡಿದಿದ್ದಾಳೆ. ಮಣಿಸರಗಳನ್ನೂ, ಮಾಂಗಲ್ಯವನ್ನು, ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾಳೆ. ಸಕಲ ಶೃಂಗಾರಗಳಿಂದ, ಆಭರಣಗಳಿಂದ ಅಲಂಕೃತಾಗಿದ್ದಾಳೆ. ಪಂಚಬ್ರಹ್ಮರು ಸೇರಿಕೊಂಡು ಸಿದ್ಧವಾಗಿರುವ ಮಂಚದ ಮೇಲೆ ದೇವಿ ಮಂಡಿಸಿದ್ದಾಳೆ. ಆಕೆಯು ಪ್ರಣವ ಸ್ವರೂಪಿ. ಅಜಪಮಂತ್ರ ಪಠಣಕ್ರಮದಿಂದ ಸುಲಭವಾಗಿ ಭಕ್ತರನ್ನು ಒಲಿಯುವ ಆ ದೇವಿಯನ್ನು ವಾಣಿ ಮತ್ತು ಲಕ್ಷ್ಮೀದೇವಿಯರು ಚಾಮರವನ್ನು ಹಾಕುತ್ತ ಸೇವಿಸುತ್ತಿರುತ್ತಾರೆ. ಸಕಲ ಸೌಭಾಗ್ಯದಾಯಿನಿಯಾದ ಈ ರಾಜರಾಜೇಶ್ವರಿ ದೇವಿಗೆ ಸದಾಕಾಲವು ನಾನು ನಮಸ್ಕರಿಸುತ್ತೇನೆ.

ರಾಜರಾಜೇಶ್ವರಿ ದೇವಿಯ ಚಿತ್ರಣದ ಬಗ್ಗೆ ರೂಪಲಕ್ಷಣದ ವಿವರ ಇರುವುದು ಇಷ್ಟೇ. ಇದರ ಆಧಾರದಿಂದ ಸಿದ್ಧಲಿಂಗಸ್ವಾಮಿಗಳು ರೂಪಿಸಿರುವ ಚಿತ್ರ ಬಹು ವಿಶಿಷ್ಟವಾದುದು.

ಶಿಲ್ಪಶಾಸ್ತ್ರದಲ್ಲಿ ಸೂತ್ರಗಳು ಇರುವುದೇ ಹೀಗೆ. ಇವನ್ನು ಗುರುಪದತಲದಲ್ಲಿ ಕುಳಿತು ಕಲಿಯಬೇಕು, ತಿಳಿಯಬೇಕು. ಇಲ್ಲಿ ಅನುಕ್ತವಾಗಿರುವ ವಿವರಗಳೆಲ್ಲಾ ಪಾರಂಪರಿಕವಾಗಿ ಗುರುವು ಉಪದೇಶಿಸುವ ವಿವರಗಳು. ಇವು ಅಲಿಖಿತ. ಆದ್ದರಿಂದಲೇ ಶಿಲ್ಪಶಾಸ್ತ್ರ ಮತ್ತು ಶಿಲ್ಪವನ್ನು ಗುರುಮುಖೇನ ಮಾತ್ರವೇ ಅಭ್ಯಸಿಸಬೇಕೆಂದು ನಿಯಮವಿರುವುದು. ಸಾಧಾರಣವಾಗಿ ಇವನ್ನು ಇತರರು ಶಾಸ್ತ್ರ ರಹಸ್ಯಗಳು ಎನ್ನುತ್ತಾರೆ. ಪಾರಂಪರಿಕ ಶಿಲ್ಪಿಯು ಈ ರಹಸ್ಯಗಳನ್ನು ತನ್ನ ಗುರುವಿನಿಂದ ಉಪದೇಶರೂಪದಲ್ಲಿ ಪಡೆದುಕೊಂಡಿರುತ್ತಾನೆ. ಈ ತಿಳಿವಿಲ್ಲದವರು ದೇವಿಯ ಚಿತ್ರವನ್ನು ಬರೆಯಲಾರರು. ಬರೆದಾಗ ಅನೇಕ ತಪ್ಪುಗಳುಂಟಾಗುತ್ತವೆ.

ಪಂಚ ಬ್ರಹ್ಮಾಸನಾಸೀನಾಂ ಎಂಬ ಪದಪುಂಜದ ಅರ್ಥವು ಶಬ್ದಕೋಶದಲ್ಲಿ ಲಭಿಸುವುದಿಲ್ಲ. ದೇವಿಯ ಶಕ್ತಿಯು ಇದೇ. ಸೃಷ್ಟಿ–ಸ್ಥಿತಿ–ಲಯ–ತಿರೋಧಾನ–ಅನುಗ್ರಹಗಳೆಂಬ ಐದು ಸ್ಥಿತಿಗಳ ನಿಯಂತ್ರಣ ಶಕ್ತಿ ಆಕೆಯೇ. ಈ ಪಂಚಕ್ರಿಯೆಗಳು ಪಂಚದೇವತೆಗಳಿಂದ ನಡೆಯುತ್ತದೆ. ಅವರನ್ನು ಪಂಚಬ್ರಹ್ಮರು ಎಂದು ಕರೆಯುತ್ತಾರೆ. ಇವರಲ್ಲಿ ನಾಲ್ವರು ಮಂಚದ ನಾಲ್ಕು ಕಾಲುಗಳು ಆಗಿದ್ದರೆ ಶಿವನೇ ಅದರ ಮುಚ್ಚಳವಾಗಿರುತ್ತಾನೆ. ಶಕ್ತಿಯ ನೆರವಿಲ್ಲದೆ ಶಿವನೂ ಶವವೇ ! ಆದ್ದರಿಂದ ಶಿವನು ಮಲಗಿರುತ್ತಾನೆ. ದೇವಿಯು ಪರಿಪೂರ್ಣ ರೂಪದ ದೇವಿಯಾಗಿ ಶಿವನನ್ನೇ ಹಾಸಾಗಿ ಮಾಡಿಕೊಂಡು ಸುಖಾಸನದಲ್ಲಿ ಬಲಗಾಲನ್ನು ಕೆಳಕ್ಕೆ ಇಳಿಬಿಟ್ಟು ಕುಳಿತಿರುತ್ತಾಳೆ. ದೇವಿಯರು ದೇವನೊಂದಿಗೆ ಇರುವಾಗ ಎಡಗಾಲನ್ನು ಇಳಿಬಿಡುವುದು ವಾಡಿಕೆ. ಪ್ರಸ್ತುತದಲ್ಲಿ ಇದು ಅನ್ವಯವಾಗುವುದಿಲ್ಲ. ಈ ದೇವಿಯು ಓಂಕಾರ ಸ್ವರೂಪಿಣಿ. ಕೇವಲ ಜ್ಯೋತಿರೂಪದಿಂದ ಶಬ್ದ ಬ್ರಹ್ಮನಾದವಳು ಈಕೆಯೇ. ಈ ರೀತಿ ಸೃಷ್ಟಿನಿಯಂತಾರ ಶಕ್ತಿಯು, ಈ ದೇವಿಯೇ. ಆದ್ದರಿಂದಲೇ ಓಂಕಾರ ಸ್ವರೂಪಿಣೀ. ದೇವಿಯೇ ಅಜಪಗಾಯತ್ರೀ ಮಂತ್ರದ ಸ್ತುತಿಯ ಗುರಿಯಾಗಿದ್ದಾಳೆ. ಆದ್ದರಿಂದ ಈ ದೇವಿಯ ಜಪವನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಒಂದು ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಜಪಿಸುವುದು ಸಾಧ್ಯವಿದೆ.

ಈ ದೇವಿಯು ಶ್ರೀಚಕ್ರಾಧಿದೇವತೆ. ಶ್ರೀ ಚಕ್ರವೇ ಈ ದೇವಿಯ ಚಕ್ರರೂಪ. ದೇವಿಯ ಪ್ರತಿಮಾ ಧ್ಯಾನರೂಪದ ಅತ್ಯಂತ ಸುಂದರರೂಪವೇ ವರ್ಣಚಿತ್ರವಾಗಿ ನಮ್ಮ ಮುಂದೆ ಇದೆ. ಈ ವರ್ಣಚಿತ್ರವು ಅತ್ಯಂತ ಶಾಸ್ತ್ರೀಯವಾದುದು. ಇದರಲ್ಲಿ ದೇವಿಯನ್ನು ಮಧ್ಯಮದಶತಾಲ ಸ್ತ್ರೀಮಾನಗಳನ್ನು ಅನುಸರಿಸಿ ಚಿತ್ರಿಸಿದೆ. ಶಾಸ್ತ್ರದ ರೂಪಲಕ್ಷಣಗಳನ್ನು ಮೈಗೂಡಿಸಿ ಕೊಂಡಿರುವುದರಿಂದ ಈ ಚಿತ್ರವು ಪೂಜಾರ್ಹವಾದದ್ದು. ಇದನ್ನು 'ಚಿತ್ರಾಭಾಸ' ವರ್ಗದ ಶಿಲ್ಪವೆಂದು ಪರಿಗಣಿಸುತ್ತಾರೆ. ಈ ರೀತಿಯ ವರ್ಣಚಿತ್ರಗಳನ್ನು ದೇವಾಲಯಗಳಲ್ಲಿ ಅಲಂಕರಿಸಬೇಕೆಂಬುದು ಶಾಸ್ತ್ರದ ನಿಯಮ. ಅರಸನ 'ದರ್ಬಾರ್ ಹಾಲ್' ದೇವಸಭೆಗೆ ಸಮನಾದುದು. ರಾಜನಾದವನು ಪ್ರಜಾಹಿತಕಾಮನಾಗಿ ಆಡಳಿತ ನಡೆಸುವ ಸಭೆ. ಸ್ವರ್ಗಲೋಕದ ಇಂದ್ರಸಭೆಗೆ ಸಮನಾದುದು. ಈ ರೀತಿಯ ಪೂಜಾರ್ಹ ಶಾಸ್ತ್ರೀಯ ಚಿತ್ರಗಳೇ ಸಭೆಯನ್ನು ಅಲಂಕರಿಸಲು ಸೂಕ್ತವಾದುದು. ಮೊದಲು ಇರಬೇಕಾದದ್ದು ದೈವೀಪಾವಿತ್ರ್ಯ. ನಂತರ ಸೇರಬಹುದಾದ್ದು ಕಲಾಮೌಲ್ಯ. ಕೇವಲ ಕಲಾಮೌಲ್ಯದ ಹೆಸರಿನಲ್ಲಿ ಪೂಜೆಗೆ ಅನರ್ಹವಾದ ವರ್ಣಚಿತ್ರಗಳಿಗೆ ಯಾವ ಮೌಲ್ಯ ತಾನೇ ಈ ಸಂದರ್ಭದಲ್ಲಿ ಇರಲು ಸಾಧ್ಯವಿದೆ? ಮಹಾರಾಜರಿಗೆ ಈ ವಿವರ ಮನವರಿಕೆಯಾಗುತ್ತಲೇ ಪೂಜಾರ್ಹತೆ ಇಲ್ಲದ ವರ್ಣಚಿತ್ರಗಳನ್ನು ದರ್ಬಾರ್‌ಹಾಲ್‌ನಿಂದ ತೆಗೆದು ಪೂಜಾರ್ಹ ಶಾಸ್ತ್ರೀಯ ಚಿತ್ರಗಳಿಗೆ ಅವಕಾಶವನ್ನು ಕಲ್ಪಿಸಿದರು. ದರ್ಬಾರ್ ಹಾಲ್‌ನಲ್ಲಿರುವ ಎಂಟನೆಯ ಚಿತ್ರವೇ ರಾಜರಾಜೇಶ್ವರಿಯದು.

ಸುಖಾಸೀನಳಾಗಿರುವ ದೇವಿಯು ನಾಲ್ಕು ತೋಳುಗಳನ್ನು ಪಡೆದಿರುತ್ತಾಳೆ. ಮೇಲಿನ ಎರಡು ಹಸ್ತಗಳಲ್ಲಿ ಪಾಶ–ಅಂಕುಶಗಳು ಇವೆ. ಮುಂದಿನ ಎಡ ಪಾರ್ಶ್ವದ ಕೈಯಲ್ಲಿ ಇಕ್ಷು ಧನಸ್ಸು (ಕಬ್ಬಿನ ಜಲ್ಲೆಯ ಬಿಲ್ಲನ್ನು) ಮತ್ತು ಪುಷ್ಪ ಬಾಣಗಳನ್ನು ಹಿಡಿದಿರುತ್ತಾಳೆ. ರಕ್ತವರ್ಣದ

ಚಿತ್ರ ೧.೧ : ರಾಜರಾಜೇಶ್ವರಿ
(ಪುಟ ೨೧)

ಸೀರೆ ಸಸ್ಯಶಾಮಲ ವರ್ಣ ಕುಪ್ಪುಸ ಬಹು ಆಕರ್ಷಕವಾಗಿದೆ, ತಲೆಯಲ್ಲಿ ಕಿರೀಟದ ಎಡಭಾಗದಲ್ಲಿ ಬಾಲಚಂದ್ರನಿರುತ್ತಾನೆ. ದೇವಿಯು ಧರಿಸಿರುವ ಆಭರಣಗಳನ್ನು ನಾವು ನೋಡಬೇಕು. ನಿಜಕ್ಕೂ ಈ ಆಭರಣಗಳ ಅತ್ಯಂತ ಸೂಕ್ಷ್ಮವಾಗಿ ಚಿತ್ರಿತಗೊಂಡಿವೆ. ಆಭರಣಗಳಿಗೆ ಹುದುಗಿಸಿರುವ ನವರತ್ನದ ಎಲ್ಲಾ ಬಗೆಗಳ ಅಲಂಕರಣ ಸ್ಪಷ್ಟವಾಗಿ ಕಾಣಿಸುತ್ತವೆ. ಪವಡಿಸಿರುವ ಪರಮೇಶ್ವರನ ಒಂದು ಕೈಯಲ್ಲಿ ಹರಿಣ (ಜಿಂಕೆ) ಮತ್ತೊಂದು ಕೈಯನ್ನು ತಲೆಗೆ ಆಧಾರ ಮಾಡಿಕೊಂಡಿದ್ದಾನೆ. ಮುಂದಿನ ಒಂದು ಕೈಯಲ್ಲಿ ಪರಶುವಿದೆ. ಇನ್ನೊಂದು ಕೈ ಕಾಣಿಸುವುದಿಲ್ಲ.

ಶಾಂತಮುಖ ಮುದ್ರೆ, ತೀರಾ ನಿಶ್ಚಲವಾದ ಭಾವ. ನಂಜನ್ನು ಉಂಡ ನಂಜುಂಡ, ವಿಷವನ್ನು ಕುಡಿದ ವಿಷಕಂಠ ಇತ್ಯಾದಿ ವರ್ಣಿತ ಗುಣವುಳ್ಳ ಶಿವನ ಚಿತ್ರಕ್ಕೆ ನೀಲ ಮತ್ತು ನೇರಳೆ ವರ್ಣವನ್ನು ಬಳಸಿರುವುದು ವಿಶಿಷ್ಟ ಬಗೆಯದಾಗಿದೆ.

ಶಿವನು ನಿರ್ಲಿಪ್ತನಾಗಿ ಅರೆಮುಚ್ಚಿದ ಕಣ್ಣುಗಳಿಂದ ರಾಜರಾಜೇಶ್ವರಿಯ ಪಾದದ ಕಡೆಗೆ ನೋಡುತ್ತಿರುವನೋ ಅಥವಾ ಬಂದ ಭಕ್ತರ ಕಡೆಗೆ ನೋಡುತ್ತಿರುವನೋ ಎಂಬ ನೋಟವಿದೆ. ಈ ದೃಷ್ಟಿಯ ನೇತ್ರೋನ್ಮೀಲನ ವಿಧಾನವನ್ನು ನೋಡಿದರೇ ಪಾಶ್ಚಾತ್ಯ ಕಲಾವಿದ ಲಿಯೋನಾರ್ಡೊ ಡ ವಿಂಚಿಯ ಮೊನಲೀಸಾ ಕೃತಿಯ ಕಣ್ಣಿಳ ಚೆಲುವು ನೆನಪಿಗೆ ಬರುತ್ತದೆ. ಇಂತಹ ರಾಜರಾಜೇಶ್ವರಿಯ ಚಿತ್ರವು ಬೇರೆ ಎಲ್ಲಿಯೂ ಕಂಡುಬರುವುದಿಲ್ಲ.

ರಾಜರಾಜೇಶ್ವರಿ ಹಿಂದೆ ಅರೆವೃತ್ತಾಕಾರದ ಪ್ರಭಾವಳಿಯು ಇದ್ದು ಅದರ ಮೇಲೆ ಕೀರ್ತಿಮುಖವಿದೆ. ಸೌಮ್ಯಸ್ವರೂಪದ ಮುಖ, ತ್ರಿನೇತ್ರ ಹೊಂದಿದೆ. ಪೀಠದ ಆಸನ, ಸೀರೆಯ ಜರಿ ಅಂಚು, ಆಭರಣ, ಕಿರೀಟ ಎಲ್ಲವೂ ಕುಸರಿ ಕೆಲಸದಿಂದ ಕೂಡಿದೆ. ತೂಗುಯ್ಯಾಲೆಯ ಸರಪಳಿಯಂತೂ ನೈಜವಾಗಿದೆ. ಮುಂಚಾಚಿದ ತೂಗುಯ್ಯಾಲೆಯ ಪಾದಗಳಾಗಿ ಬ್ರಹ್ಮ, ವಿಷ್ಣು, ಮಹೇಶ್ವರನ್ನಳವಡಿಸಿದ್ದಾರೆ. ನೆಲದ ಹಾಸಿನ ಮೇಲೆ ಸರಸ್ವತಿ, ಲಕ್ಷ್ಮಿಯರೇ ನಿಂತು ಚಾಮರ ಬೀಸುತ್ತಿದ್ದಾರೆ. ಈ ಹಿಂದೆ ಪ್ರತ್ಯೇಕವಾಗಿರುವ ಸರಸ್ವತಿ, ಲಕ್ಷ್ಮಿಯರ ಚಿತ್ರ ಮುಖ ಹೋಲಿಕೆ, ತೊಟ್ಟಿರುವ ವಸ್ತ್ರವಿನ್ಯಾಸಗಳು ಯಥಾವತ್ತಾಗಿರುವುದನ್ನು ಕಾಣಬಹುದು. ಹಿನ್ನೆಲೆಯಲ್ಲಿ ಹೊಯ್ಸಳ ಮಾದರಿಯ ತೋರಣವು ರೂಪಿತವಾಗಿದೆ. ಮುನ್ನೆಲೆಯ ಚಿತ್ರಕ್ಕೆ ಬಾಧಕವಾಗದಂತೆ ಅರೆಛಾಯೆಯ ವರ್ಣಸಂಯೋಜನೆ ಮಾಡಿದೆ. ತೋರಣದ ಬಹುಪಾಲಿನ ವಿವರಗಳು ವರ್ಣಚಿತ್ರದ ಮಬ್ಬಿನಲ್ಲೂ ಕಾಣಿಸುತ್ತದೆ. ಪೂರ್ಣ ಪ್ರಮಾಣದ ಚಿತ್ರ ಸಾಲಿನಲ್ಲಿ ಕೊನೆಯದಾದ ಚಿತ್ರ ಇದು.

ಒಂದೊಂದು ದೇವತೆಯದು ಒಂದೊಂದು ತೆರನಾದ ಹಿನ್ನಲೆಯುಳ್ಳ ಕಥಾರೂಪಕವಿದೆ. ಅವುಗಳ ಹಿನ್ನಲೆಯಲ್ಲಿಯೇ ರಚಿಸಿರುವ ಕಾಳಿಕಾಮಾತೆ (೧೪೬) ಮೇಘವರ್ಣದ ದೇಹವನ್ನು ಹೊಂದಿದ್ದು, ಅಷ್ಟ ಬಾಹುಗಳಿಂದ ವಿವಿಧ ರೀತಿಯ ಆಯುಧಗಳನ್ನು ಹಿಡಿದಿರುವ ಹಸ್ತಗಳನ್ನು ಹೊಂದಿವೆ. ರಕ್ತವರ್ಣದ ಸೀರೆ, ಶಕ್ತಿಯ ಸಂಕೇತವೆನಿಸಿದರೂ ನೀಲ ವರ್ಣದ ಮುಖವು ಮಾತ್ರ ಸೌಮ್ಯವಾಗಿದೆ. ಎಡಪಾದವನ್ನು ಬಲತೊಡೆಯ ಮೇಲಿಟ್ಟುಕೊಂಡಿರುವ ಸುಖಾಸೀನಮುದ್ರೆಯಲ್ಲಿ ಕುಳಿತಿರುವ ದೇವಿಯು ಪದ್ಮಪೀಠದ ತಳಭಾಗವನ್ನು ಸಿಂಗಳೀಕಗಳು ತಲೆ ಮೇಲೆ ಹೊತ್ತು ಕುಳಿತಂತೆ ಪೀಠದ ವಿನ್ಯಾಸವಿದೆ. ಕುಳಿತ ಪೀಠದ ಬೆನ್ನಿಗೆ ಅಂಟಿಕೊಂಡಂತೆ ಇರುವ ವಿಶಾಲವಾದ ಪ್ರಭಾವಳಿ, ಕಿರೀಟದಿಂದ ಸ್ವಲ್ಪ ಎತ್ತರಕ್ಕಿರುವ ಸಿಂಹಲಲಾಟ, ಅದರಿಂದ ಮೇಲಕ್ಕೆ ಛತ್ರಿಯೊಂದು ಹರಡಿಕೊಂಡಿದ್ದು, ಈಕೆ ಚಕ್ರವರ್ತಿನಿ ಎಂದು ತಿಳಿಯುತ್ತದೆ. ಹಿನ್ನೆಲೆಯಲ್ಲಿ ಬೋದಿಗೆಗಳಲ್ಲಿ ಮಕರಗಳನ್ನು ಹೊಂದಿರುವ, ಎರಡು ಸ್ತಂಭಗಳು ಚಿತ್ರಕ್ಕೆ ಹೆಚ್ಚಿನ ಶೋಭೆಯನ್ನು ತಂದಿವೆ. ಈ ಮೂರ್ತಿಯ ಧ್ಯಾನಶ್ಲೋಕವು ಇಂತಿದೆ :

ಚಿತ್ರ ೧.೨ : ಅಷ್ಟಭುಜ ಕಾಳಿಕಾದೇವಿ
(ಪುಟ ೨೨)

ಅಷ್ಟಬಾಹುರ್ಮಹಾಕಾಯಾ ಕಾಲಮೇಘ ಸಮಪ್ರಭಾ ।
ಶಂಖ ಚಕ್ರ ಗದಾ ಕುಂಭ ಮುಸಲಾಂಕುಶ ಪಾಶಯುಕ್ ।
ವಜ್ರಂ ಕರತಲೇ ಬಿಭ್ರ ನ್ಮಹಾಕಾಳೀ ಮುದೇಽಸ್ತು ನಃ ॥

[ಮೇಘವರ್ಣದ ದೇಹವುಳ್ಳ ದೇವಿಗೆ ಎಂಟು ತೋಳುಗಳಿರುತ್ತವೆ. ಬಲಪಾರ್ಶ್ವದಲ್ಲಿ ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ಮುಸಲ (ಒನಕೆ), ವಜ್ರಾಯುಧ, ಅಂಕುಶ ಮತ್ತು ಚಕ್ರವನ್ನು ಧರಿಸಿರುತ್ತಾಳೆ. ಅದೇ ರೀತಿಯಾಗಿ ಎಡಪಾರ್ಶ್ವದಲ್ಲಿ ಕೆಳಗಿನಿಂದ ಮೇಲಕ್ಕೆ ಗದೆ, ಕುಂಭ, ಪಾಶ, ಶಂಖಗಳನ್ನು ಧರಿಸಿರುತ್ತಾಳೆ. ಇಂತಹ ಕಾಳಿಕಾದೇವಿಯನ್ನು ನಾನು ಸಂತೋಷದಿಂದ ಸ್ತುತಿಸುತ್ತೇನೆ.]

ಕಾಳಿಕಾದೇವಿಯನ್ನು ದರ್ಶಿಸಿ ಪಕ್ಕಕ್ಕೆ ನಡೆದರೆ ನವದುರ್ಗಾದೇವಿ. ಈ ದೇವತೆಯು ಅಷ್ಟಾದಶ ಭುಜಗಳನ್ನು (೧೮) ಹೊಂದಿದ್ದು ವಿವಿಧ ರೀತಿಯ ಆಯುಧಗಳನ್ನು ಧರಿಸಿ, ಸಸ್ಯಶ್ಯಾಮಲ ವರ್ಣದ ಪೀತಾಂಬರವನ್ನು ತೊಟ್ಟು ಕುಳಿತಿರುವ ಸುಂದರ ಚಿತ್ರ. ಬಲಹಸ್ತವೊಂದರಲ್ಲಿ ಎರಡು ರುಂಡಗಳನ್ನು ಸಿಕ್ಕಿಸಿಕೊಂಡ ಪಾಶವೊಂದನ್ನೇ ಹಿಡಿದಂತಿದೆ. ಹಾಗೆಯೇ ಎಡಹಸ್ತವೊಂದರಲ್ಲಿ ದುಷ್ಟನೋರ್ವನ ಶಿರವನ್ನು ಕಡಿದು ಹಿಡಿದಂತೆ ಭಾಸವಾಗುತ್ತದೆ. ಕುಳಿತಿರುವ ಕಮಲ ಪೀಠವನ್ನು ನಾಲ್ಕು ದಿಕ್ಕುಗಳಲ್ಲಿಯೂ ಆನೆಗಳು ಹೊತ್ತಿವೆ. ಹಾಗೆಯೇ ದುರ್ಗೆಯು ಕುಳಿತ ಆಸನದ ಅಕ್ಕಪಕ್ಕಗಳಲ್ಲಿ ರೆಕ್ಕೆಗಳನ್ನು ಹೊಂದಿರುವ ಇಬ್ಬರು ಗಂಧರ್ವರು ಕೈಮುಗಿದು ಅಂಜಲೀ ಬದ್ಧರಾಗಿರುವ ಯಾನಕ ಕಿರುಚಿತ್ರಗಳು ಮೂಲೆಗಳಿಗೆ ಹೊಂದಿಕೊಂಡಿವೆ. ನವದುರ್ಗೆಯ ರೂಪಧ್ಯಾನವನ್ನು ಹೀಗೆ ಹೇಳಿದ್ದಾರೆ–

ತತ್ರ ಪದ್ಮಾನ್ವಿತಸ್ಥಾನೇ । ಪೂಜ್ಯಾ ದುರ್ಗಾಸ್ತು ಮೂರ್ತಿತಃ ।
ಅಷ್ಟಾದಶಭುಜಾ ಚೈಕಾ । ಪೀನವಕ್ಷ ಭುಜೋರುಕಾ ।
ಸರ್ವಾಲಂಕಾರ ಸಂಯುಕ್ತಾ । ಸರ್ವಸಿದ್ಧ ಪ್ರದಾಯಿನಿ ।
ಮುಸಲಂ ಖೇಟಕಂ ಘಂಟಾ । ಮಾದರ್ಶಂ ತರ್ಜನೀಂ ಧನುಃ ॥
ಧ್ವಜಂ ಡಮರುಕಂ ಪಾಶಂ । ಭಿಭ್ರತೀ ವಾಮಪಾಣಿಭಿಃ ।
ಶಕ್ತಿ ಮುದ್ಗರ ಶೂಲಾನಿ । ವಜ್ರಂ ಶಂಖ ಮಥಾಂಬುಜಂ ।
ಶಲಾಕಾಂ ಮಾರ್ಗಣಂ ಚಕ್ರಂ । ದಧಾನಾ ದಕ್ಷಿಣೈಃ ಕರೈಃ ।
ಶೇಷಾ ಷ್ಪೋಡಶ ಹಸ್ತಾಸು । ಶ್ಯರಂ ಡಮರುಕಂ ವಿನಾ ।
ಜಯಮಿಚ್ಛದ್ಭಿ ರೇತಾಸ್ತು । ಪೂಜನೀಯಾ ಮನೀಷಿಭಿಃ ॥

ಹದಿನೆಂಟು ಹಸ್ತಗಳ ಈ ದೇವಿಯು ಪದ್ಮಾಸನದಲ್ಲಿ ಪದ್ಮಪೀಠದ ಮೇಲೆ ಗಂಭೀರವಾಗಿ ಮಂಡಿಸಿದ್ದಾಳೆ. ಇಬ್ಬರು ಚಾರರು ನವಿಲುಗರಿಗಳ ಚಾಮರಗಳನ್ನು ದೇವಿಗೆ ಬೀಸುತ್ತಿದ್ದಾರೆ. ದೇವಿಯು ಪೀಠದ ಮೇಲ್ಭಾಗವನ್ನು ತೋರಣವೊಂದು ಅಲಂಕರಿಸಿದೆ. ಇದರಿಂದ ದೇವಿಯು ಪ್ರತ್ಯೇಕ ಮಂಟಪದಲ್ಲಿರುವಂತೆ ತೋರುತ್ತದೆ. ಧ್ಯಾನಶ್ಲೋಕದಲ್ಲಿ ವಿವರಿಸುವಂತೆ ಎಲ್ಲಾ ಆಯುಧಗಳನ್ನು ಹಸ್ತಗಳಲ್ಲಿ ಕಾಣಬಹುದು. ಪೀಠದ ಹಿಂಭಾಗದಲ್ಲಿ ಕೀರ್ತಿ ಮುಖದಿಂದ ಅಲಂಕೃತಗೊಂಡಿರುವ ಪ್ರಭಾವಳಿಯೂ ಇದೆ.

ದೇವಿಯ ಹಿಂಭಾಗದಲ್ಲಿರುವ ತೋರಣದ ಆವರಣವು ಚಿತ್ರಕ್ಕೆ ಸೊಬಗನ್ನು ತಂದುಕೊಟ್ಟಿದೆ. ಮಕರ ತೋರಣವು ಬಹು ಆಕರ್ಷಕವಾಗಿದ್ದು ಎರಡೂ ಅಂಚುಗಳಲ್ಲೂ ಮಾಲೆಗಳನ್ನು ಹಿಡಿದು ಗಂಧರ್ವರು ಹಾರಿಬರುತ್ತಿದ್ದಾರೆ. ತೋರಣದ ತಿರುವುಗಳಲ್ಲಿ ಕಿರಿಯ ಪ್ರತಿಮಾ ಕೋಷ್ಠಗಳನ್ನು ಕಲ್ಪಿಸಿ ನಾಲ್ಕು ಮೂರ್ತಿಗಳನ್ನೂ ಚಿತ್ರಿಸಿದ್ದಾರೆ. ಈ ಮಕರತೋರಣದ ಕೆಳಗೆ ನಿಂತಿರುವ ಚಾಮರ ಧಾರಿಣಿಯರು ದೇವಿಯ 'ದರ್ಬಾರ್'ನಲ್ಲಿ ನಿಂತಿರುವವರಂತೆ ಕಾಣುತ್ತಾರೆ. ಇದು ಚಿತ್ರಕ್ಕೆಲ್ಲಾ ಬಹು ಗಾಂಭೀರ್ಯ ಪರಿವೇಶವನ್ನು ಕಲ್ಪಿಸುವುದರಲ್ಲಿ ಯಶಸ್ವಿಯಾಗಿದೆ.

ಚಿತ್ರ ೧.೩ : ನವದುರ್ಗಾದೇವಿ
(ಪುಟ ೨೩)

ನವದುರ್ಗಾದೇವಿಯು ಕುಳಿತ ಪೀಠದ ಹಿನ್ನಲೆಯಲ್ಲಿ ರಚಿತವಾಗಿರುವ ತೋರಣ ಮಂಟಪ, ಅದಕ್ಕೆ ಹೊಂದಿಕೊಂಡಿರುವ ಸ್ತಂಭಗಳು, ಕಮಾನುಗಳು, ಬೇರೆಯಾಗಿ ಕಾಣುತ್ತವೆ. ಕಂಭದ ಮೇಲ್ಭಾಗದಲ್ಲಿ ಮಕರ ವ್ಯಾಳಿಗೆ ಹೊಂದಿಕೊಂಡಂತೆ ಕಮಾನುಗಳಿಂದ ಕೂಡಿದ್ದು, ಅವುಗಳ ಮಧ್ಯದಲ್ಲಿ ಒಂದೊಂದು ಕಿರು ಮಂಟಪವಿದೆ. ಅದರೊಳಗೊಂದು ದೇವತಾಮೂರ್ತಿ. ಈ ತೆರನಾದ ಮಂಟಪಗಳ ರಚನಾ ವಿಧಾನವನ್ನು ಔತ್ತರೇಯ ದೇವಾಲಯಗಳಲ್ಲಿ ವಿಪುಲವಾಗಿ ಕಾಣಬಹುದು. ಶ್ವೇತವರ್ಣದ ಬಳಕೆ ಹೆಚ್ಚಿನ ಪ್ರಮಾಣದಲ್ಲಿದ್ದು ಅಮೃತ ಶಿಲೆಯ ಮಂಟಪವೆಂಬಂತೆ ಭಾಸವಾಗುತ್ತದೆ. ಅಲ್ಲಿರುವ ಎಲ್ಲಾ ದೇವತೆಗಳಿಗಿಂತ ಹೆಚ್ಚಿನ ರೀತಿಯ ಬಾಹುಗಳಿಂದ ಕೂಡಿದ ನವದುರ್ಗೆಗೆ ನಮಿಸಿ ಮುಂದೆ ನಾಲ್ಕು ಹೆಜ್ಜೆ ಇಟ್ಟರೆ ಕಾಣುವುದೇ ಮಹಿಷಾಸುರಮರ್ದಿನಿ. ಇಂತಹವುದೇ ನವದುರ್ಗಾ ದೇವಿಯ ವಿಗ್ರಹವನ್ನು ಜಯಚಾಮರಾಜೇಂದ್ರ ಒಡೆಯರ್ ಅವರ ಅಪೇಕ್ಷೆ ಮೇರೆಗೆ ಸ್ವಾಮೀಜಿಯವರು ಚಿನ್ನದಲ್ಲಿ ಮಾಡಿಕೊಟ್ಟು ಅವರ ನಿತ್ಯಪೂಜೆಗೆ ಅನುವು ಮಾಡಿಕೊಟ್ಟರು.

ಮಹಿಷ ಮರ್ಧಿನಿ ದೇವಿಯ ಧ್ಯಾನ ಶ್ಲೋಕವು ಇಂತಿದೆ–

ಅರಿ ಶಂಖ ಕೃಪಾಣ ಖೇಟ ಬಾಣಾನ್ ಸಧನುಃ
ಶೂಲಕ ತರ್ಜನೀಂ ದಧಾನಾಂ ।
ಹರಿಣಾ ಮಹಿಷೋತ್ತಮಾಂಗ ಸಂಸ್ಥಾಂ
ನವದೂರ್ವಾ ಸದೃಶೀಂ ನಮಾಮಿ ದುರ್ಗಾಂ ॥

ದೇವಿಯು ಎಂಟು ತೋಳುಗಳನ್ನು ಪಡೆದಿದ್ದಾಳೆ. ಆಕೆಯ ದೇಹಕಾಂತಿಯು ಚಿಗುರುತ್ತಿರುವ ದುರ್ವಾ(ಗರಿಕೆ, ಹುಲ್ಲು)ನ ಕಾಂತಿಯಂತೆ ಶೋಭಾಯಮಾನವಾಗಿದೆ, ಬಲಪಾರ್ಶ್ವದ ಹಸ್ತಗಳಲ್ಲಿ ಕೆಳಗಿನಿಂದ ಕ್ರಮವಾಗಿ ತರ್ಜನೀಮುದ್ರೆ (ಎಚ್ಚರಿಕೆ), ಕತ್ತಿ, ಚಕ್ರ ಮತ್ತು ತ್ರಿಶೂಲಗಳನ್ನು ಧರಿಸಿದ್ದಾಳೆ. ಎಡಪಾರ್ಶ್ವದ ಹಸ್ತಗಳಲ್ಲಿ ಅದೇ ಕ್ರಮದಲ್ಲಿ ಬಾಣ, ಗುರಾಣಿ, ಶಂಖ, ಈಟಿಗಳನ್ನು ಧರಿಸಿರುತ್ತಾಳೆ. ಈ ದೇವಿಯು ಸರ್ವಾಭರಣಗಳಿಂದ ಅಲಂಕೃತಳಾಗಿರುತ್ತಾಳೆ. ಮಹಿಷಾಸುರನನ್ನು ಮೆಟ್ಟಿನಿಂತಿರುವ ಮತ್ತು ಮಹಿಷಮರ್ದಿನಿ ಎಂದು ಖ್ಯಾತಳಾಗಿರುವ ದುರ್ಗಾದೇವಿಗೆ ನಮಸ್ಕರಿಸುತ್ತೇನೆ.

ಮೈಸೂರು ಅರಸರ ಕುಲದೇವತೆ ಚಾಮುಂಡೇಶ್ವರಿ ದೇವಿ ಎಂದು ಜನಪ್ರಿಯವಾಗಿರುವ ಮಹಿಷಮರ್ದಿನಿ (೧೯೩೫). ಚಿತ್ರದ ವಿಶೇಷವೆಂದರೆ ದೇವಿಯು ಮಹಿಷನ ವಧೆಯಲ್ಲಿ ತೊಡಗಿರುವುದು (Action Figure). ತನ್ನ ವಾಹನವಾದ ಸಿಂಹದ ಮುಂದೆ ದೇವಿಯು ನಿಂತಿದ್ದಾಳೆ. ಮನುಷ್ಯದೇಹ ಎಮ್ಮೆಯ ತಲೆ. ಕೈಯಲ್ಲಿ ಮಚ್ಚನ್ನು ಹಿಡಿದಿರುವ ರಾಕ್ಷಸ ನೆಲದ ಮೇಲೆ ಬಿದ್ದಿದ್ದಾನೆ, ಮಹಿಷಮರ್ಧಿನಿಯ ಬಲಗಾಲು ರಾಕ್ಷಸನ ದೇಹವನ್ನು ತುಳಿದಿದೆ. ಎಡಗಾಲು ತಲೆಯನ್ನು ಮೆಟ್ಟಿ ನಿಂತಿದೆ. ಅಷ್ಟಭುಜಗಳನ್ನು ಹೊಂದಿರುವ ದೇವಿಯ ಬಲದಲ್ಲಿರುವ ನಾಲ್ಕು ಕೈಗಳಲ್ಲಿ ಕತ್ತಿ, ಚಕ್ರ ತ್ರಿಶೂಲವನ್ನು ಹಿಡಿದಿದ್ದರೇ, ಒಂದು ಹಸ್ತ ಮಾತ್ರ ಸೂಚೀ ಮುದ್ರೆಯಲ್ಲಿದೆ. ದುಷ್ಟರೇ ಎಚ್ಚರವಾಗಿ ಎಂದು ಹೇಳುವ ಹಸ್ತ. ಎಡಭಾಗದಲ್ಲಿ ಬಿಲ್ಲು, ಗುರಾಣಿ, ಶಂಖ, ಈಟಿ ಹಿಡಿದಿದೆ. ದುಷ್ಟ ಸಂಹಾರ ಶಿಷ್ಟ ಪರಿಪಾಲನೆ ಮೂಲಕ ನಾಡಿನ ಜನತೆಗೆ ನೆಮ್ಮದಿ ತರುವಂತೆ ತೋರುತ್ತದೆ. ಅತ್ಯಂತ ಸಹಜವಾಗಿ ತೋರುವ ಪ್ರಶಾಂತ ಮುದ್ರೆಯ ಕೋಲ್ಮುಖದೊಂದಿಗೆ ದೇವಿಯು ಶೋಭಾಯಮಾನಳಾಗಿದ್ದಾಳೆ. ಈ ದೇವಿ ಮಹಿಷಮರ್ಧಿನಿಯ ವಾಹನವಾದ ಸಿಂಹದ ಕಲಾರಚನೆಯನ್ನೆ ಸ್ವಾಮಿಗಳು ಅತ್ಯಂತ ಸಹಜವಾಗಿ ನಿಜವಾದ ಸಿಂಹವೇನೋ ಎಂಬ ಭ್ರಮೆ ಹುಟ್ಟಿಸಿರುವಂತಹ ವರ್ಣಗಳಿಂದ ವಿನ್ಯಾಸಗೊಳಿಸಿದ್ದಾರೆ. ದೇವಿಯು ತೊಟ್ಟ ಸೀರೆ ರಕ್ತವರ್ಣದ್ದಾಗಿದ್ದು ನೀಲಿ ಬಣ್ಣದ ಕುಪ್ಪಸ ಯುಕ್ತವಾಗಿದೆ. ಶರೀರವು ಸಹಜವರ್ಣವುಳ್ಳದ್ದಾಗಿದೆ. ಚಿತ್ರದ ಹಿನ್ನೆಲೆ ಒಂದೆಡೆ ಜಲಪಾತ, ಕಾನನದ ಕಗ್ಗತ್ತಲೆಯಲ್ಲಿ ಕಾಣುವ ಹಸಿರುಮರಗಳ ರಮ್ಯನೋಟ. ಮಹಿಷಾಸುರ ಬಿದ್ದ ತಳಭಾಗ ಮಂದವರ್ಣಗಳಿಂದ ಕೂಡಿದ್ದು ಸಂಜೆಯ ಇಳಿಹೊತ್ತನ್ನು ಸೂಚಿಸುವಂತಹ ಅಪೂರ್ವ ಚಿತ್ರವಿದು.

ಚಿತ್ರ ೧.೪ : ಮಹಿಷ ಮರ್ದಿನಿ
(ಪುಟ ೨೪)

ಮಹಿಷಿಮರ್ಧಿನಿಯನ್ನು ಮುದದಿಂದ ನೋಡಿ ಮುನ್ನಡೆದರೆ ಕಾಣುವುದೇ ಸರಸ್ವತಿ ಮತ್ತು ಲಕ್ಷ್ಮಿಯರ ಚಿತ್ರ. (೧೯೪೨) ರಾಜ್ಯವಾಗಲೀ, ರಾಜನಾಗಲೀ, ವ್ಯಕ್ತಿಯಾಗಲೀ, ವೃದ್ಧಿಗೊಳ್ಳಬೇಕಾಗಿದ್ದರೆ ಬುದ್ಧಿಯಬಲ ಮತ್ತು ಆರ್ಥಿಕಬಲ ಅತ್ಯಗತ್ಯ. ಇವೆರಡರ ಅಧಿದೇವತೆಗಳಾದ ಸರಸ್ವತಿ ಮತ್ತು ಲಕ್ಷ್ಮಿಯರನ್ನು ಸ್ವಾಮಿಗಳು ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ನೋಡಿದರೆ ಮತ್ತೊಮ್ಮೆ, ಮಗದೊಮ್ಮೆ ನೋಡಬೇಕೆನಿಸುವ ಈ ಚಿತ್ರಗಳು ಇದುವರೆಗೆ ಪ್ರಕಟವಾಗಿರುವ ಯಾವ ಚಿತ್ರಪಟದಲ್ಲಿಯೂ ಇಂತಹ ದೇವಿಯರನ್ನು ಕಾಣಲಾರಿರಿ. ಇದೊಂದು ಅಪರೂಪದ ಶಾಸ್ತ್ರೀಯ ವರ್ಣಚಿತ್ರವಾಗಿದೆ.

ಈ ಎರಡು ಚಿತ್ರಗಳು ಅಗಲದಲ್ಲಿ ಕಡಿಮೆ ಇದ್ದು ಎತ್ತರದಲ್ಲಿ ಎಲ್ಲಾ ಚಿತ್ರಗಳಿಗೆ ಸರಿಸಮಾನಾಗಿದೆ. ಸಭಾಂಗಣದಲ್ಲಿ ನಿರ್ಮಿಸಿರುವ ಕಮಾನುಳ್ಳ ಕಿರುಗೂಡಿಗೆ ಹೊಂದಾಣಿಕೆ ಆಗುವಂತೆ ಚಿತ್ರಿಸಿದ್ದಾರೆ. ನಿಂತಿರುವ ಸರಸ್ವತಿ ಲಕ್ಷ್ಮಿಯರು ಕ್ರಮವಾಗಿ ಶ್ವೇತ ಮತ್ತು ಹಳದಿ ವಸ್ತ್ರಧಾರಿಣಿಯರಾಗಿ ಕಂಗೊಳಿಸುತ್ತಾರೆ. ಆ ತುಂಬು ವಸ್ತ್ರವಾದ ಸೀರೆಯುಡಿಗೆಗಳು ನೆರಿಗೆ, ವಸ್ತ್ರವಿನ್ಯಾಸದ ವೈಖರಿ, ನಿಂತ ನಿಲವು, ಮಂದಸ್ಮಿತ ಮುಖಕಮಲ ಅತ್ಯಾಕರ್ಷಕವಾಗಿವೆ.

ಶುದ್ಧಸ್ಫಟಿಕ ಸಂಕಾಶಾಂ ಮುಕ್ತಾಭರಣ ಭೂಷಿತಾಂ ।
ಚತುರ್ಬಾಹುಂ ದ್ವಿನೇತ್ರಾಂ ಚ ಕರಂಡ ಮುಕುಟೋಜ್ವಲಾಂ ॥
ಆದರ್ಶಂ ದಕ್ಷಿಣೇ ಹಸ್ತೇ ಪುಸ್ತಕಂ ವಾಮಹಸ್ತಕೇ ।
ದಕ್ಷಿಣೇಽ ಪರಹಸ್ತೇತು ಚಾಕ್ಷಮಾಲಾಂಚ ಧಾರಿಣೀಂ ॥
ಕುಂಡಿಕಾಂ ವಾಮಹಸ್ತೇ ಚ ಧಾರಯಂತೀಂ ಸರಸ್ವತೀಂ ॥
ಸ್ಮರಾಮಿ ಮನಸಾ ದೇವಿಂ ಸರ್ವವಿದ್ಯಾಪ್ರದಾಯಿನೀಂ ॥

[ಶುದ್ಧ ಸ್ಫಟಿಕದ ಮೈಕಾಂತಿಯಿಂದ ಶೋಭಾಯಮಾನಳಾಗಿರುವ ಸರಸ್ವತೀದೇವಿಯು ಮುತ್ತಿನ ಹಾರ, ಮತ್ತು ಆಭರಣಗಳಿಂದ ಅಲಂಕೃತಳಾಗಿದ್ದು ನಾಲ್ಕು ಬಾಹುಗಳನ್ನು, ಒಂದು ತಲೆಯನ್ನು ಎರಡು ಕಣ್ಣುಗಳನ್ನು ಹೊಂದಿದ್ದು ಕರಂಡ ಮಕುಟಧಾರಿಯಾಗಿ ಜಾಜ್ವಲ್ಯಮಾನಳಾಗಿದ್ದಾಳೆ. ಬಲಪಾರ್ಶ್ವದ ಮುಂದಿನ ಹಸ್ತದಲ್ಲಿ ಅಕ್ಷಮಾಲೆಯನ್ನು, ಮೇಲಿನ ಹಸ್ತದಲ್ಲಿ ಕನ್ನಡಿಯನ್ನು ಎಡಪಾರ್ಶ್ವದ, ಮುಂದಿನ ಹಸ್ತದಲ್ಲಿ ಕಮಂಡಲವನ್ನು ಮೇಲಿನ ಹಸ್ತದಲ್ಲಿ ಗ್ರಂಥವನ್ನು ಹಿಡಿದಿರುತ್ತಾಳೆ. ಸರ್ವವಿದ್ಯಾಪ್ರದಾಯಿನಿಯಾದ ಸರಸ್ವತೀದೇವಿಯನ್ನು ನಾನು ಮನಸಾರೆ ಸ್ಮರಿಸುತ್ತಾ ನಮಿಸುತ್ತೇನೆ.]

ಚಿತ್ರ ೧.೫ : ಸರಸ್ವತಿ
(ಪುಟ ೨೫)

ಸರಸ್ವತೀ ಚಿತ್ರದ ಹಿನ್ನೆಲೆಯಲ್ಲಿ ವಿವಿಧ ಕೋನಗಳಿಂದ ಕೂಡಿದ ಉತ್ತಮ ವಾಸ್ತುವಿನ್ಯಾಸವನ್ನು ಹೊಂದಿದೆ. ಶೀತಲ ವರ್ಣಗಳ ಬಳಕೆ ಮೂಲಕ ಹಿನ್ನೆಲೆ ಮಬ್ಬುಗತ್ತಲೆ ಯಂತಿದ್ದರೂ ಆ ವರ್ಣವಿನ್ಯಾಸದ ವರ್ಣಗಳಲ್ಲಿಯೇ ಮೂಡಿಸಿರುವ ದುಂಡುತನ ಉಬ್ಬು ತಗ್ಗು, ಬೆಳಕು ನೆರಳುಗಳ ಅತ್ಯಂತ ತೆಳುಛಾಯೆ ವರ್ಣಗಳ ಬಳಕೆಯಲ್ಲಿ ಸ್ವಾಮಿಗಳವರ ಪ್ರೌಢಿಮೆಗೆ ಸಾಕ್ಷಿಯಾಗಿದೆ. ನಾಲ್ಕು ಬಾಹುಗಳಿಂದ ಕೂಡಿದ ಸರಸ್ವತಿ ದೇವಿಯು ಎಡಗೈಲಿ ಕಮಂಡಲ, ಶಾಸ್ತ್ರಗ್ರಂಥ ಬಲಗೈಯಲ್ಲಿ ದರ್ಪಣ ಮತ್ತು ಜಪಸರವನ್ನು ಹಿಡಿದಿದೆ.

ಮುದ್ದಾದ ಮುಖಲಕ್ಷಣ, ನೀಳವಾದ ಮೂಗು, ಕೆಂದುಟಿ ಪ್ರಶಾಂತ ಮುಖಮುದ್ರೆ ವಿದ್ಯಾದಾಹಿಗಳಿಗೆ ಜ್ಞಾನಚಕ್ಷುವಿನ ಅನುಗ್ರಹ ತೋರುವಂತಹ ನೇತ್ರಗಳು, ಕಿವಿಯಲ್ಲಿ ತ್ರಿದಲ ಪುಷ್ಪದಂತೆ ನೇತಾಡುವ ಕಿವಿಯಾಭರಣ, ಎರಡು ಕಿವಿಯ ಮೇಲೂ ಒಂದೊಂದು ಕಮಲದ ಹೂ ಮುಡಿದಂತಿದ್ದು ಅಲ್ಲಿಂದ ಇಳಿಬಿಟ್ಟಿರುವ ಪುಷ್ಪಮಾಲೆ ಮುಖಕ್ಕೆ ಹೆಚ್ಚಿನ ಅಂದ ನೀಡುತ್ತವೆ. ಕರಂಡಮಕುಟವಂತೂ ಮುತ್ತು ರತ್ನಗಳಿಂದ ಅಲಂಕಾರದೊಂದಿಗೆ ಅಗ್ರಭಾಗದಲ್ಲಿ ಕಳಸವಿದೆ. ನವರತ್ನ ಖಚಿತವಾದ ಗ್ರೈವೇಯವು ಕಂಠವನ್ನು ಬಳಸಿದ್ದರೆ ಮತ್ತೊಂದು ಹಾರವು ಎದೆಯ ಮೇಲ್ಭಾಗದಲ್ಲಿ ಕಾಣಿಸುತ್ತಾ ಎದೆಯಾವರಣಕ್ಕೆ ಶೋಭೆಯನ್ನು ತಂದಿದೆ. ನಡುವಿನ ಮೇಲಿನ ಮೇಖಲವು ಬಿಳಿ ಸೀರೆಯ ಮೇಲೆ ಅತ್ಯಂತ ಸೊಗಸಾಗಿ ಕಾಣುತ್ತದೆ.

ಮಹಾಲಕ್ಷ್ಮೀದೇವಿಯ ಪ್ರತಿಮಾ ಧ್ಯಾನವು ಇಂತಿದೆ –

ಚತುರ್ಭುಜಾಂ ತ್ರಿನೇತ್ರಾಂ ಚ ದೇವೀಂ ಪದ್ಮಾಸನ ಸ್ಥಿತಾಂ ।
ಪೀತಾಂಬರ ಧರಾಂ ದೇವೀಂ ಶುದ್ಧ ಕಾಂಚನ ಸನ್ನಿಭಾಂ ॥
ದಕ್ಷಿಣೇತ್ವಭಯಂ ಪೂರ್ವೇ ಡಿಂಡಿಮಂ ವಾಮಹಸ್ತಕೇ ।
ಅಪರೇ ದಕ್ಷಿಣೇ ಪದ್ಮಂ ವಾಮೇ ನೀಲೋತ್ಪಲಂ ತಥಾ ॥
ಬಿಭ್ರತೀಂ ಚ ಮಹಾಲಕ್ಷ್ಮೀಂ ಸರ್ವ ಸಂಪತ್ಪ್ರದಾಯನೀಂ ।
ನಿತ್ಯಂ ಧ್ಯಾಯಾಮಿ ಮನಸಾ ಸರ್ವಲೋಕೈಕ ಪೂಜಿತಾಂ ॥

[ನಾಲ್ಕು ಭುಜಗಳು, ಮೂರು ಕಣ್ಣುಗಳು ಒಂದು ತಲೆ ಇರುವ ಮಹಾಲಕ್ಷ್ಮೀದೇವಿಯು ಪದ್ಮಾಸನದ ಮೇಲೆ ಮಂಡಿಸಿರುತ್ತಾಳೆ. ಪೀತಾಂಬರ ಧಾರಿಯಾಗಿರುವ ಈ ದೇವಿಯು ಶುದ್ಧ ಬಂಗಾರದ ದೇಹ ಕಾಂತಿಯನ್ನು ಪಡೆದಿರುತ್ತಾಳೆ. ಬಲಪಾರ್ಶ್ವದ ಮುಂದಿನ ಹಸ್ತದಲ್ಲಿ ಅಭಯಮುದ್ರೆ ಎಡ ಪಾರ್ಶ್ವದ ಮುಂದಿನ ಹಸ್ತದಲ್ಲಿ ಡಿಂಡಿಮವನ್ನು ಹಿಡಿದಿರುತ್ತಾಳೆ. ಬಲದ ಮೇಲಿನ ಹಸ್ತದಲ್ಲಿ ಪದ್ಮವನ್ನು, ಎಡದ ಮೇಲಿನ ಹಸ್ತದಲ್ಲಿ ನೀಲೋತ್ಪಲವನ್ನು ಹಿಡಿದಿರುತ್ತಾಳೆ. ಸಕಲಸಂಪತ್ತುಗಳನ್ನು ಕೊಡಬಲ್ಲ ಈ ದೇವಿಯನ್ನು ಮನಃಪೂರ್ವಕವಾಗಿ ನಿತ್ಯವೂ ಧ್ಯಾನಿಸುತ್ತೇನೆ. ಈ ದೇವಿಯು ಸಕಲ ಲೋಕಗಳಿಂದ ಪೂಜೆಯನ್ನು ಕೈಗೊಳ್ಳುವಂತಹ ಮಹಾಲಕ್ಷ್ಮೀದೇವಿಯಾಗಿರುತ್ತಾಳೆ.]

ಚಿತ್ರ ೧.೬ : ಮಹಾಲಕ್ಷ್ಮೀ
(ಪುಟ ೨೫)

ಲಕ್ಷ್ಮೀಯ ಚಿತ್ರದ ಹಿನ್ನಲೆ ಸರಸ್ವತಿ ಚಿತ್ರದ ಹಿನ್ನಲೆಗಿಂತ ಭಿನ್ನವಾದದ್ದು. ಜಲಾವೃತವಾದ ತಾವರೆಯ ಕಮಲದ ಎಲೆ ಮೇಲೆ ನಿಂತಂತೆ ಚಿತ್ರಿಸಿದ್ದು ದಟ್ಟವಾದ ಹಸಿರು ಕಾನನದ ನಡುವೆ ಕಂಗೊಳಿಸುವ ಕಟ್ಟಡವೊಂದಿದೆ. ಅತ್ಯಂತ ಮಂದವರ್ಣ ಬಳಸಿದ್ದಾರೆ. ನಾಲ್ಕು ಬಾಹುಗಳುಳ್ಳ ಲಕ್ಷ್ಮೀ ಮೇಲಿನ ಎಡ ಮತ್ತು ಬಲ ಕೈಗಳಲ್ಲಿ ಕಮಲವನ್ನು ಹಿಡಿದಿದ್ದು ಉಳಿದೆರಡು ಹಸ್ತಗಳಲ್ಲಿ ಅಭಯಮುದ್ರೆ ಮತ್ತು ಡಮರುಗವನ್ನು ಹಿಡಿದಿದೆ. ನೀಳಮುಖವನ್ನು ಹೊಂದಿರುವ ಲಕ್ಷ್ಮಿಯು ತ್ರಿನೇತ್ರಧಾರಿಣಿಯಾಗಿ ಸರ್ವಾಭರಣ ಭೂಷಿತೆಯಾಳಾಗಿದ್ದಾಳೆ. ವೀಕ್ಷಕನು 'ತಾಯೇ ನಿನಗೆ ನಮನ. ನೀಲ್ಲದೆ ಹೋದರೆ ನಾವೆಲ್ಲಿ?' ಎಂದು ಸರಸ್ವತಿ ಲಕ್ಷ್ಮಿಯರನ್ನ ನೆನೆದು ಒಂದೆರಡು ಹೆಜ್ಜೆ ಇಟ್ಟರೆ ಕಾಣುವುದೇ ಭುವನೇಶ್ವರೀ.

ಉದ್ಯದ್ಭಾಸ್ವತ್ಸಮಾಭಾಂ ವಿಜಿತ ನವಜಪಾ ಮಿಂದು ಖಂಡಾವನದ್ಧಾಂ ।
ಜ್ಯೋತಿರ್ಮಾಲಾಂ ತ್ರಿಣೇತ್ರಾಂ ವಿವಿಧ ಮಣಿಲಸ ತ್ಕುಂಡಲಾಂ ಪದ್ಮಸಂಸ್ಥಾಂ ॥
ಹಾರ ಗ್ರೈವೇಯ ಕಾಂಚೀ ಮಣಿಗಣವಲಯೇ ಸಂಯುತಾ ಮಂಬರಾಢ್ಯಾ ।
ಮಾದ್ಯಾಂ ಪಾಶಾಂಕುಶಾಭ್ಯಾಮಭಯ ವರಕರಾಂ ಭಾವಯೇ ಭೌವನೇಶೀಂ ॥

ಪದ್ಮಾಸನದಲ್ಲಿ ಕುಳಿತಿರುವ ಭುವನೇಶ್ವರಿಯು (೯೪೫) ನಾಲ್ಕು ಬಾಹುಗಳನ್ನು ಹೊಂದಿದ್ದು ಮೇಲಿರುವ ಎರಡು ಕೈಗಳಲ್ಲಿ ಅಂಕುಶ ಮತ್ತು ಪಾಶಗಳನ್ನು, ಮುಂದಿನ ಎರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಗಳು ಇರುತ್ತವೆ. ಶ್ವೇತ ಪೀತಾಂಬರಧಾರಿಯಾದ ಭುವನೇಶ್ವರಿ ದೇವಿಯ ಮುಖವರ್ಣವು ಸಹ ಶ್ವೇತವೇ. ತ್ರಿನೇತ್ರಧಾರಿಣಿ. ದೇವಿಯು ಕಮಲದ ಪೀಠದ ಮೇಲೆ ಕುಳಿತಿದ್ದು ಆ ಪೀಠವನ್ನು ಗಜಗಳೆರಡು ಹೊತ್ತು ನಿಂತಿವೆ. ಮುಖ್ಯವಾಗಿ ಭುವನೇಶ್ವರಿ ಕಿರೀಟವು ಎಲ್ಲಾ ಕಿರೀಟಗಳಿಗಿಂತ ವಿಶೇಷವಾದದ್ದು. ಪಂಚಕಳಸಗಳಿಂದ ಕೂಡಿದೆ. ಹಾಗೆಯೇ ಪ್ರಭಾವಳಿ ಸಹ ಎಲ್ಲವುಗಳಿಗಿಂತ ಭಿನ್ನವಾಗಿದ್ದು ಏಕಾದಶ (೧೧) ದೇವತೆಯರು ಬಳ್ಳಿಯೊಂದಿಗೆ ಬೆಸೆದಂತೆ ಚಿತ್ರ ರಚಿಸಿದ್ದಾರೆ.

ಚಿತ್ರ ೧.೭ : ಭುವನೇಶ್ವರಿ ದೇವಿ
(ಪುಟ ೨೬)

ಪೀಠದ ಹಿನ್ನೆಲೆಯಲ್ಲಿ ಸುಂದರ ಸಭಾಮಂಟಪವಿದ್ದು ಹೊಯ್ಸಳ ಶೈಲಿಯ ಸ್ತಂಭಗಳೆರಡು ಅಪರೂಪದ ಕಲಾ ವಿನ್ಯಾಸವನ್ನೊಳಗೊಂಡಿವೆ. ಈ ಚಿತ್ರದಲ್ಲಿ ದೇವಿಯ ಯಂತ್ರ ರೂಪವನ್ನು ತಳಭಾಗದಲ್ಲಿ ಚಿತ್ರಿಸಿ ಪ್ರತಿಮಾ ಪೂಜೆಯನ್ನು ಯಂತ್ರರೂಪದಲ್ಲೂ ನಡೆಸಿ ಸಿದ್ಧಿಗಳನ್ನು ಪಡೆಯಬಹುದೆಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಯಂತ್ರಪೂಜೆಯು ತಂತ್ರಾಗಮದ ಭಾಗವಾಗಿದ್ದು ಶಿಲ್ಪಶಾಸ್ತ್ರದಲ್ಲಿ ಪ್ರತ್ಯೇಕ ಭಾಗವಾಗಿರುತ್ತದೆ. ಭುವನೇಶ್ವರಿಯನ್ನು ದರ್ಶಿಸಿ ಪಕ್ಕಕ್ಕೆ ಹೊರಳಿದರೇ ಸಾಕು ಗಾಯತ್ರೀದೇವಿಯ ದರ್ಶನವಾಗುತ್ತದೆ..

ಮುಕ್ತಾ ವಿದ್ರುಮ ಹೇಮ ನೀಲ ಧವಳಚ್ಛಾಯೈ ರ್ಮುಖೈಸ್ತ್ರೀಕ್ಷಣೈಃ ।
ಯುಕ್ತಾ ಮಿಂದು ನಿಬದ್ಧ ರತ್ನಮಕುಟಾಂ ತತ್ತ್ವಾರ್ಥ ವರ್ಣಾತ್ಮಿಕಾಂ ।
ಗಾಯತ್ರೀಂ ವರದಾ ಭಯಾಂಕುಶಕಶಾ ಶ್ಶುಭ್ರಂ ಕಪಾಲಂ ಗದಾಂ
ಶಂಖಂ ಚಕ್ರ ಮಥಾರವಿಂದ ಯುಗಳಂ ಹಸ್ತೈರ್ವಹಂತೀಂ ಭಜೇ ॥

[ಗಾಯತ್ರೀದೇವಿಗೆ ಐದು ಮುಖಗಳು ಐದು ಪ್ರತ್ಯೇಕ ಬಣ್ಣಗಳಲ್ಲಿರುತ್ತವೆ. ಮುತ್ತಿನ ಬಣ್ಣ, ಹವಳದ ಕೆಂಪು, ಬಂಗಾರದ ಹಳದಿ, ನೀಲದ ಹರಳಿನ ನೀಲಿ, ಶುದ್ಧ ಶ್ವೇತವರ್ಣದ ಛಾಯೆಯನ್ನು ಪಡೆದಿರುತ್ತವೆ. ಈ ಮುಖಗಳು ದೇವಿಯ ಆದಿಶಕ್ತಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಾಯಾಶಕ್ತಿ ಮತ್ತು ಜ್ಞಾನಶಕ್ತಿಯ ಸಂಕೇತಗಳಾಗಿವೆ. ಪ್ರತಿಮುಖದಲ್ಲೂ ಮೂರು ಕಣ್ಣುಗಳು ಇರುತ್ತವೆ. ಕಿರೀಟದಲ್ಲಿ ಬಾಲಚಂದ್ರನನ್ನು ಪಡೆದಿರುತ್ತಾಳೆ. ನವರತ್ನ ಖಚಿತ ಕಿರೀಟ, ಆರಭರಣಗಳಿಂದ ಅಲಂಕೃತಳಾಗಿರುತ್ತಾಳೆ. ಪಂಚಶಕ್ತಿಗಳ ಸಂಯುಕ್ತರೂಪಳಾದ ಈ ದೇವಿಯು ವಿದ್ಯುತ್ ಕಾಂತಿಯಿಂದ ಅಪೂರ್ವವಾಗಿ ಬೆಳಗುತ್ತಿರುತ್ತಾಳೆ. ಸಕಲ ತತ್ತ್ವಗಳೂ ಈಕೆಯ ವರ್ಣನೆಯೇ ಆಗಿರುತ್ತದೆ. ಈಕೆಯ ವಾಹನ ಹಂಸ. ಈ ದೇವಿಗೆ ಹತ್ತು ತೋಳಗಳು. ಈ ದೇವಿಯ ಬಲಪಾರ್ಶ್ವದ ಹಸ್ತಗಳಲ್ಲಿ ಕೆಳಗಿನಿಂದ ಮೇಲಕ್ಕೆ ಅಭಯ. ಅಂಕುಶ, ಹಗ್ಗ, ಚಕ್ರ, ತಾವರೆ ಧರಿಸಿರುತ್ತಾಳೆ. ಅದೇ ರೀತಿಯಾಗಿ ಎಡಪಾರ್ಶ್ವದ ಹಸ್ತಗಳಲ್ಲಿ ಕೆಳಗಿನಿಂದ ಮೇಲಿನ ಕ್ರಮದಲ್ಲಿ ವರದ, ಚಾಟಿ, ಕಪಾಲ, ಶಂಖ, ತಾವರೆ ಧರಿಸಿರುತ್ತಾಳೆ. ದೇವಿಯು ಪೀತಾಂಬರದಿಂದ, ಸಕಲ ಆಭರಣಗಳಿಂದ ಅಲಂಕೃತಳಾಗಿರುತ್ತಾಳೆ. ಇಂತಹ ದೇವಿಯನ್ನು ನಾನು ಭಜಿಸುತ್ತೇನೆ.]

ಈ ಧ್ಯಾನಶ್ಲೋಕದ ಅನುಸಾರವಾಗಿ ಗಾಯತ್ರೀದೇವಿಯ ವರ್ಣಚಿತ್ರವನ್ನು ಸ್ವಾಮಿಗಳು ರಚಿಸಿದ್ದಾರೆ. (೧೯೪೨)

ಸ್ವಾಮಿಗಳು ರಚಿಸಿರುವ ಸ್ತ್ರೀ ದೇವತಾ ಚಿತ್ರಗಳಲ್ಲೇ ವಿಶೇಷವಾಗಿದ್ದು. ಪಂಚಮುಖ ಮತ್ತು ದಶಭುಜಗಳನ್ನು ಹೊಂದಿರುವ ದೇವಿ. ಗಾಯತ್ರಿಯ ಪಂಚಮುಖಗಳಿಗೂ ವಿವಿಧ ವರ್ಣಗಳನ್ನು ಬಳಸಿದೆ. ನೀಲ ವರ್ಣದ ಸೀರೆಯನ್ನು ಧರಿಸಿದ್ದು ಸುಖಾಸೀನ ಮುದ್ರೆಯಲ್ಲಿ ದೇವಿಯು ತಾವರೆಯ ಹೂವಿನ ಮೇಲೆ ಕುಳಿತಿದ್ದಾಳೆ. ಅತ್ಯಂತ ನೈಜ ಬಣ್ಣಗಳಿಂದ ಕೂಡಿದ ತಾವರೆಯು ಸರೋವರದ ಕೇಂದ್ರ ಸ್ಥಾನದಲ್ಲಿದ್ದು ಅಲ್ಲಲ್ಲಿ ಬೆಳೆದಿರುವ ತರುಲತೆ, ಬಳ್ಳಿಗಳು ಕಿರುತಾವರೆಯ ಮೊಗ್ಗುಗಳು ಸ್ವಚ್ಛಂದವಾಗಿ ಜಲದಲ್ಲಿ ಮಿಂದು ಮುನ್ನಡೆಯುವಂತೆ ತೇಲುತ್ತಿರುವ ಹಂಸ ಪಕ್ಷಿ ದ್ವಯಗಳು ಇರುವುದನ್ನು ಕಾಣುತ್ತೇವೆ. ಸರೋವರವೇ ನಭಕ್ಕೆ ಅಂಟಿಕೊಂಡಿದೆಯೋ ಏನೋ ಎಂಬಂತೆ ಚಿತ್ರಿತವಾಗಿರುವ ಮೋಡ ತುಂಬಿದ ಆಕಾಶ ಸರೋವರದ ವಿಸ್ತಾರದ ಕಲ್ಪನೆಯು ವರ್ಣಸಂಯೋಜನೆಯಲ್ಲಿ ಅತಿ ಸೊಗಸಾಗಿದೆ.

ಧ್ಯಾನಶ್ಲೋಕದ ಪ್ರಕಾರ ಗಾಯತ್ರೀದೇವಿಯು ರೂಪ ಲಕ್ಷಣ ಸ್ಪಷ್ಟವಾಗಿದ್ದರೂ ಈಕೆಗೆ ತ್ರಿಕಾಲಗಳಲ್ಲೂ ಪ್ರತ್ಯೇಕವಾದ ರೂಪಗಳಿವೆ. ಈ ಮೂರೂ ರೂಪಗಳಲ್ಲೂ ಈಕೆಯನ್ನು ಗೃಹಸ್ಥರು ಮತ್ತು ಇತರರು ತಪ್ಪದೆ ಆರಾಧಿಸುತ್ತಾರೆ. ನಿತ್ಯಾಗ್ನಿ ಹೋತೃಗಳಾದವರು ಈ ಮೂರೂ ದೇವಿಯರಿಗೆ ಪ್ರತ್ಯೇಕವಾಗಿ ಕಾಲಾನುಸಾರವಾಗಿ ತ್ರೇತಾಗ್ನಿಗಳಲ್ಲಿ ಹವಿಸ್ಸು ಅರ್ಪಿಸಿ ಆರಾಧಿಸುತ್ತಾರೆ. ಈ ದೇವಿಯು ಪಂಚಮೂರ್ತಿಗಳನ್ನು ಪ್ರತಿನಿಧಿಸುವ ಶಕ್ತಿದೇವಿ.

ಚಿತ್ರ ೧.೮ : ಗಾಯತ್ರಿದೇವಿ
(ತ್ರಿಶಕ್ತಿದೇವಿಯರೊಂದಿಗೆ)
(ಪುಟ ೨೭)

ಪ್ರಾತಃಕಾಲದಲ್ಲಿ ಗಾಯತ್ರೀದೇವಿ ಎಂದು ಹಂಸವಾಹನೆಯಾಗಿರುತ್ತಾಳೆ. ಈಕೆ ಬ್ರಹ್ಮನ ಶಕ್ತಿಯನ್ನು ಪಡೆದಿರುತ್ತಾಳೆ. ಈಕೆಯೇ ಮಧ್ಯಾಹ್ನದ ವೇಳೆಗೆ ಗರುಡವಾಹನೆಯಾಗಿ ಸರಸ್ವತೀ ಎಂದು ಕರೆಯಲ್ಪಡುತ್ತಾಳೆ. ಸಂಜೆಗೆ ಸಾವಿತ್ರೀ ಎಂದು ಕರೆಯಲ್ಪಡುವ ಈ ದೇವಿಯು ವೃಷಭವಾಹನವನ್ನು ಪಡೆದಿರುತ್ತಾಳೆ.

ಹೀಗೆ ಈಕೆಯಲ್ಲಿ ಸೃಷ್ಟಿ-ಸ್ಥಿತಿ-ಸಂಹಾರ ಕ್ರಿಯೆಗಳು ಅಡಕವಾಗಿರುತ್ತದೆ. ಈ ಮೂರೂ ರೂಪಗಳನ್ನು ಆಕಾಶದಲ್ಲಿ ಪ್ರತ್ಯೇಕವಾಗಿ ಚಿತ್ರಿಸಿ ದೇವಿಯ ವ್ಯಾಪ್ತಿಯನ್ನು ಪ್ರಾಮುಖ್ಯತೆಯನ್ನು ನೋಡುಗರಿಗೆ ಸಾಕ್ಷಾತ್ಕರಿಸಿ ಕೊಟ್ಟಿದ್ದಾರೆ.

ಎಂದರೆ ಈ ಒಂದು ರೂಪಧ್ಯಾನದ ಚಿತ್ರಣಕ್ಕೆ ಪ್ರತ್ಯೇಕವಾಗಿರುವ ದೇವೀ ಮೂರ್ತಿಯೊಂದಿಗೆ ಉಳಿದ ಮೂರನ್ನೂ ಬಳಸಿಕೊಂಡು ಗಾಯತ್ರೀ ದೇವಿಯ ಮಹಿಮೆಯನ್ನು ಮನವರಿಕೆಯಾಗುವಂತೆ ಚಿತ್ರ ರಚನೆಯನ್ನು ಸ್ವಾಮಿಗಳು ಮಾಡಿದ್ದಾರೆ.

ಗುಂಗುರು ಗುಂಗುರಾಕಾರವಾಗಿ ತೇಲಿಬರುವ ಮೋಡಗಳಲ್ಲಿ ಒಂದೆಡೆ ಸರಸ್ವತಿ ಕಮಂಡಲುಧಾರಿಯಾಗಿ ಹಂಸದ ಮೇಲೆ ಕುಳಿತು ಬರುತ್ತಿದ್ದರೇ (ಬಲಕ್ಕೆ) ಮತ್ತೊಂದು ಭಾಗದಲ್ಲಿ (ಎಡಕ್ಕೆ) ಶಕ್ತಿಸ್ವರೂಪಿಣಿ ಸಾವಿತ್ರಿದೇವಿಯು ಚತುರ್ಭುಜಗಳೊಂದಿಗೆ ವೃಷಭವಾಹನಾ ರೂಢಳಾಗಿ ಬರುತ್ತಿದ್ದಾಳೆ. ಹಾಗೆಯೇ ಮಧ್ಯಭಾಗದಲ್ಲಿ ಗರುಡವಾಹನೆಯಾಗಿ ಚತುರ್ಭುಜ ಲಕ್ಷ್ಮೀಯ ಆಗಮನವಾಗುತ್ತಿದೆ. ಒಟ್ಟಾರೆ ಗಾಯತ್ರಿಯ ಸ್ವರೂಪವನ್ನು ವೀಕ್ಷಿಸಿದಾಗ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣರಾದ ತ್ರಿಮೂರ್ತಿಗಳ ಶುಭ ಹಾರೈಸಿ ತಮ್ಮಲ್ಲಿರುವ ದಿವ್ಯಶಕ್ತಿಯನ್ನು ಅನುಗ್ರಹಿಸಿದಂತಿದೆ. ಹಿನ್ನಲೆಯ ನಿಸರ್ಗದ ರಮ್ಯ ಪ್ರಕೃತಿ ತೋರುತ್ತದೆ.

ಅರಮನೆಯ ದರ್ಬಾರ್ ಹಾಲ್‌ನಲ್ಲಿರುವ ಅಷ್ಟದೇವತೆಯರ ಚಿತ್ರಗಳಲ್ಲಿ ಎದ್ದು ಕಾಣುವ ಪ್ರಮುಖ ಅಂಶವೆಂದರೆ ಎಲ್ಲಾ ದೇವತೆಗಳಿಗೆ ಧರಿಸಿರುವ ಕಿರೀಟದಲ್ಲಿಯ ವಿವಿಧ ಬಗೆಗಳು ಮತ್ತು ಆಭರಣಗಳ ವೈವಿಧ್ಯವಿನ್ಯಾಸಗಳು. ಇವನ್ನು ಎಷ್ಟು ವರ್ಣಿಸಿದರೂ ಸಾಲದು; ಎಷ್ಟು ವೀಕ್ಷಿಸಿದರೂ ತೀರದು. ಒಂದರಂತೆ ಮತ್ತೊಂದು ಇಲ್ಲ. ಕಿರೀಟದಲ್ಲಿರುವ ವರ್ಣ ಸಂಯೋಜನೆಯು ಎಂತಹ ಭ್ರಮೆ ಹುಟ್ಟಿಸುತ್ತದೆಯೆಂದರೆ ಹರಳುಗಳನ್ನೇ ಮೆತ್ತಿರಬಹುದು. ಎಂಬ ಭ್ರಮೆ ಮೂಡುತ್ತದೆ. ಆ ಕಲ್ಪನೆ ಬರುವಂತೆ ಅದು ಕೆಂಪೇ ಇರಲಿ, ನೀಲವೇ ಆಗಿರಲಿ, ಅಥವಾ ಗೋಮೇದಿಕ, ಪುಷ್ಯರಾಗ ಹರಳುಗಳಾಗಿರಲೀ ಅದರ ನೈಜವರ್ಣ ದುಂಡುತನ ಕಾಣಲು ಬಳಸಿರುವ ವರ್ಣಸಂಯೋಜನೆ ವಿಧಾನ ವೀಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಜರೀ ಅಂಚಿನ ಸೀರೆ, ಸೊಂಟಕ್ಕೆ ಧರಿಸಿರುವ ಒಡ್ಯಾಣ, ಕೈ, ಕಾಲು, ಪಾದಗಳಲ್ಲಿ ಧರಿಸಿರುವ ವಿವಿಧ ಬಗೆಯ ಆಭರಣಗಳು, ಅಷ್ಟೇ ಏಕೆ ಅವರು ಹಿಡಿದಿರುವ ವಿವಿಧ ಬಗೆಯ ಆಯುಧಗಳು ಸಹ ಅಲಂಕಾರಯುಕ್ತವಾಗಿವೆ. ಕುಸರಿಕೆಲಸದಿಂದ ಕೂಡಿದ್ದು, ಚಿಕಣಿ ಚಿತ್ರದಂತೆ ತೋರುತ್ತದೆ. ಹಾಗೆಯೇ ಪ್ರತಿದೇವತೆಗಳ ಶಿರೋ ಭಾಗದಲ್ಲಿ ತೋರ್ಪಡಿಸುವ ಪ್ರಭಾವಲಯ ಕೂಡಾ ಹಿತಮಿತವಾದ ವರ್ಣಸಂಯೋಜನೆಯನ್ನು ಪಡೆದಿದೆ.

ಚಿತ್ರ ೧.೯ : ವರ್ಣಚಿತ್ರಗಳಲ್ಲಿರುವ ಕಿರೀಟ, ಹಾರ ಮತ್ತು ಕಟಿಬಂಧಗಳ ವೈವಿಧ್ಯಗಳು (ಪುಟ ೨೮)

ಕಲಾತ್ಮಕ ಮತ್ತು ಸುಂದರ ಚೌಕಟ್ಟುಗಳಲ್ಲಿ ಹುದುಗಿಸಿರುವ ವರ್ಣಚಿತ್ರಗಳ ರಚನೆಗೆ ಮೂಲವಾಗಿರುವ ದೇವತೆಗಳ ಸಂಬಂಧಿಯಾಗಿರುವ ಪ್ರತಿಮಾ ಧ್ಯಾನ ಲಕ್ಷಣಗಳನ್ನು ಪ್ರತ್ಯೇಕವಾಗಿ ಬರೆದು ಸಾರ್ವಜನಿಕರ ಅವಗಾಹನೆಗೆ ಪ್ರದರ್ಶಿಸಿದೆ. ಇದರಿಂದ ಇವೆಲ್ಲಾ ಸಾಂಪ್ರದಾಯಿಕ ಶಿಲ್ಪಶಾಸ್ತ್ರಗಳಿಗೆ ಸೇರುವ ವರ್ಣಕೃತಿ ರಚನೆಗಳು ಎಂಬುದೂ ನೋಡುಗರಿಗೆ ಮನವರಿಕೆಯಾಗುತ್ತದೆ.

ಈ ದೇವತೆಯರ ಚಿತ್ರಗಳನ್ನು ನೋಡುತ್ತಾ ಮುಂದೆ ಸಾಗಿ ತಲೆ ಎತ್ತಿ ನೋಡಿದರೆ ಅರಮನೆಯ ಸಭಾಭವನಕ್ಕೆ ಶೋಭೆ ತರುವ ಮೇಲ್ಛಾವಣಿಯ ಚಿತ್ರಗಳು ಕಾಣುತ್ತವೆ. ಇವುಗಳ ರಚನೆಗೆ ಕಾರಣವಾದ ಪ್ರತ್ಯೇಕವಾದ ವಿವರವೇ ಇದೆ.

ಮೇಲ್ಛಾವಣಿಯಲ್ಲಿ ವರ್ಣ ಚಿತ್ರಗಳು

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜಸಭಾಭವನಕ್ಕೆ ಸೂಕ್ತವಾದ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಗಳನ್ನು ಮೇಲ್ಛಾವಣಿಯಲ್ಲಿ ಬರೆಸಬೇಕೆಂದು ಚಿಂತಿಸಿ ಕಲಾವಿದರಿಗೆ, ಶಿಲ್ಪಿಗಳಿಗೆ ಆಹ್ವಾನ ನೀಡಿದರು. ಸೂಕ್ತ ಸಲಹೆ ಮತ್ತು ಮಾದರಿ ಚಿತ್ರದೊಡನೆ ಕಳಿಸಿಕೊಡಬೇಕೆಂದು ರಾಜಾಜ್ಞೆಯಾಯಿತು. ದೇಶ ವಿದೇಶಗಳಿಂದ ನೂರಾರು ಚಿತ್ರಗಳು, ಸಲಹೆಗಳು ಬಂದವು. ಅಂತಿಮವಾಗಿ ಸ್ವಾಮಿಗಳವರ ಸಲಹೆ ಮಾದರಿ ಚಿತ್ರಗಳೇ ಅಂಗೀಕಾರವಾದವು. ಆ ಸ್ಪರ್ಧೆಯ ಪ್ರಥಮ ಬಹುಮಾನ ಐದುಸಾವಿರ ರೂಪಾಯಿ ಮತ್ತು ಪಾರಿತೋಷಕವನ್ನೊಳಗೊಂಡಿತ್ತು.

ರಾಜರ ಆಸ್ಥಾನಕ್ಕನುಗುಣವಾಗಿ ಸಾಕ್ಷಾತ್ ಇಂದ್ರಸಭೆಯಂತೆ ಅರಮನೆಯ ದರ್ಬಾರ್‌ಹಾಲನ್ನು ಕಲಾತ್ಮಕಗೊಳಿಸಬೇಕೆಂಬುದೇ ಪರಮ ಧ್ಯೇಯವಿದ್ದ ಸ್ವಾಮಿಗಳ ಮಾದರಿ

ಚಿತ್ರ ಅಂಗೀಕಾರಗೊಂಡಿತು. ಸಭಾಭವನದ ಮೇಲ್ಛಾವಣಿ ಏಳು ಅರೇವೃತ್ತಾಕಾರದ ಕಮಾನಿನಂತಿವೆ. ಅವುಗಳಿಗನುಗುಣವಾಗಿ ಸಪ್ತಲೋಕದ ಕಲ್ಪನೆ ಮೂಡಿಸಿ ಪುರಾಣ ಕತೆಗಳ ಹಂದರವನ್ನೇ ಹೆಣೆದು ಸುತ್ತಲೂ ಅತ್ಯಂತ ಮನೋಜ್ಞ ಚಿತ್ರಾವಳಿ ವಿನ್ಯಾಸವನ್ನು ಸ್ವಾಮಿಗಳು ರಚಿಸಿದ್ದರು. ಅದರಲ್ಲಿ ಮುಖ್ಯವಾಗಿ ಮಹಾರಾಜರು ಸಿಂಹಾಸನಾರೂಢರಾಗುತ್ತಿದ್ದ ಕೇಂದ್ರಭಾಗದಲ್ಲಿರುವ ಕಮಾನಿನಲ್ಲಿ ಮೇಲ್ಛಾವಣಿಯಲ್ಲಿ ಶಕ್ತಿಸಹಿತರಾದ ಬ್ರಹ್ಮ, ವಿಷ್ಣು, ಮಹೇಶ್ವರರ ಮತ್ತು ಅರಸರ ಕುಲದೇವತೆ ಚಾಮುಂಡೇಶ್ವರಿನ್ನೊಳಗೊಂಡ ಚಿತ್ರಣವಿದೆ. ಅವುಗಳ ಸುತ್ತಲೂ ಅಲಂಕಾರಿಕ ನಕಾಶೆಯಿದ್ದು ಅವುಗಳನ್ನು ಸಹ ಪುಷ್ಪಗುಚ್ಛ ಅರ್ಪಿಸುವ, ಘೋಷವಾದ್ಯ ನುಡಿಸುವ ದೇವ ದೇವತೆಯರ ಚಿತ್ರಣ ಕಾಣಬಹುದಾಗಿದೆ. ಅಂತೆಯೇ ಅದರ ಪಕ್ಕದಲ್ಲಿರುವ ಮೇಲ್ಛಾವಣಿಯಲ್ಲಿ ಶಿವನ ಒಡ್ಡೋಲಗದ ಚಿತ್ರವಿದೆ.

ಚಿತ್ರ ೧.೧೦ : ಮೇಲ್ಛಾವಣಿಯ ಚಿತ್ರ–೧ (ಪುಟ ೨೯)

ಚಿತ್ರ ೧.೧೧ : ಮೇಲ್ಛಾವಣಿಯ ಚಿತ್ರ–೨ (ಪುಟ ೩೦)

ಈ ಚಿತ್ರಗಳನ್ನು ಗಮನಿಸಿದಾಗ ಇದು ಸಿದ್ಧಲಿಂಗ ಸ್ವಾಮಿಗಳವರ ಕಲಾರಚನೆಯಂತೆ ಕಂಡುಬರುವುದಿಲ್ಲ. ಅಷ್ಟದೇವತೆಯರ ಕಲಾಚಾತುರ್ಯಕ್ಕೂ ಇವುಗಳಿಗೂ ಅಗಾಧ ವ್ಯತ್ಯಾಸವಿದೆ. ಇಲ್ಲಿ ಚಿತ್ರರಚನೆ ಮಾಡಿರುವುದು ಇಂಗ್ಲೆಂಡಿನಿಂದ ತರಿಸುತ್ತಿದ್ದ ಕ್ಯಾನ್‌ವಾಸಿನ ಮೇಲಲ್ಲ. ಬಹುಶಃ ಮರದ ಹಲಿಗೆ ಅಥವಾ ಪ್ಲೇವುಡ್ ಇರಬಹುದು. ಅದನ್ನು ಚಾವಣಿಗೆ ಹೊಂದಿಸಿದ್ದಾರೆ. ಆದ್ದರಿಂದ ಚಿತ್ರಗಳಲ್ಲಿ ನಾವು ಇದುವರೆವಿಗೂ ಕಂಡ ನಾಜೂಕುತನ ಕಾಣಿಸದು. ಆದರೂ ವರ್ಣಗಳ ಬಳಕೆ ಮತ್ತು ವಿನ್ಯಾಸಗಳು, ರೇಖೆಗಳು ಹೋಲುತ್ತವೆ. ಇವುಗಳನ್ನು ಶ್ರೀಸ್ವಾಮಿಗಳವರ ಸಲಹೆಯಂತೆ ಇತರ ಕಲಾವಿದರು ರಚಿಸಿರಬಹುದು. ಹೊಳಪು ಬಣ್ಣಗಳನ್ನೇ (Enamel) ಬಳಸಿದಂತೆ ತೋರುತ್ತದೆ. ಸ್ವಾಮಿಗಳವರು ಆ ದೇವತಾ ಮೂರ್ತಿಗಳ ಚಿತ್ರರಚನೆಯಲ್ಲಿಯೇ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡ ಕಾರಣ ಇದನ್ನು ಅವರ ಶಿಷ್ಯರು, ಸಹೋದರರು ಕೂಡಿ ಮಾಡಿದಂತಿದ್ದು ಅವರಲ್ಲಿ ಶ್ರೀ ಅಪ್ಪಾಜಿಸ್ವಾಮಿಗಳು ಮತ್ತು ಶ್ರೀ ನಾಗೇಂದ್ರಸ್ತಪತಿಗಳವರು ಮುಖ್ಯರು. ಆ ಮೇಲ್ಛಾವಣಿಗೆ ಚೌಕಾಕಾರ ಹಲಗೆಗಳನ್ನು ಹೊಂದಿಸಿದಂತೆ ಇದ್ದು ಅವುಗಳ ಮೇಲೆ ಕಲಾರಚನೆ ನಡೆದಿದೆ. ಮೊದಲು ಕೆಳಗೆ ಸಿದ್ಧಪಡಿಸಿಕೊಂಡು, ಅನಂತರ ಅವುಗಳನ್ನು ಮೇಲೆ ಜೋಡಿಸಿರಬಹುದು. ಮೇಲ್ಛಾವಣಿಯು ಪೂರ್ಣವಾಗಿ ವರ್ಣ ಚಿತ್ರ, ಅಲಂಕಾರಗಳಿಂದ ತುಂಬಿದೆ, ಆ ರೀತಿಯ ಅಲಂಕೃತ ಭಾಗಗಳ ಕೆಲವು ಬಿಡಿ ಚಿತ್ರಗಳನ್ನು ವಾಚಕರ ಅವಗಾಹನೆಗಾಗಿ ವರ್ಣಚಿತ್ರ ಸಂಪುಟದಲ್ಲಿ ಸಂಗ್ರಹಿಸಿ ಕೊಟ್ಟಿದೆ.

ಚಿತ್ರ ೧.೧೨ : ಮೇಲ್ಛಾವಣಿಯ ಅಲಂಕಾರ ಚಿತ್ರ – ೩ (ಪುಟ ೩೧)

ಚಿತ್ರ ೧.೧೩ : ಮೇಲ್ಛಾವಣಿಯ ಅಲಂಕಾರ ಚಿತ್ರ – ೪ (ಪುಟ ೩೧)

ಸ್ವಾಮಿಗಳವರ ಚಿತ್ರವೇ ಆಗಲಿ ಅಥವಾ ಶಿಲ್ಪವೇ ಆಗಲೀ, ನಿಶ್ಚಿತಗುರಿ ಇಟ್ಟುಕೊಂಡೇ ರಚಿತವಾಗಿವೆ. ಬರೀ ಕ್ಯಾನ್ವಾಸ್ ತುಂಬಿಸುವಂತಹುವಲ್ಲ. ಇಡೀ ಕ್ಯಾನ್ವಾಸ್ ಪರಿಪೂರ್ಣವಾಗಿ ಮುಖ್ಯಕೃತಿಗೆ ಪೂರಕವಾಗಿ ರಚಿಸಿದಂತಹುಗಳೇ ಇದಕ್ಕೆ ಅವರ ದೇವಿ ಸಂಬಂಧಿತ ವರ್ಣಚಿತ್ರಗಳೇ ಸಾಕ್ಷಿಯಾಗಿವೆ. ಸ್ವಾಮಿಗಳವರ ಚಿತ್ರದಲ್ಲಿ ಪ್ರೇಕ್ಷಕನು ಮತ್ತು ಕಲಾವಿದನು ಹತ್ತಿರ ಹತ್ತಿರವಾಗುತ್ತಾ ಹೋಗುತ್ತಾನೆ. ಈ ಕಲಾತ್ಮಕ ದೈವೀ ಚಿತ್ರಗಳನ್ನು ಪ್ರೇಕ್ಷಕನು ದರ್ಶಿಸುತ್ತಾ ತಾನಾಗಿಯೇ ಬರೆದವರನ್ನು ಗುರುತಿಸುತ್ತಾ ಹೋಗುತ್ತಾನೆ. ಲೌಕಿಕದಿಂದ ಅಲೌಕಿಕ್ಕೆಳೆಯುವ, ಮುದುಡಿದ ಮನಸ್ಸಿಗೆ, ಬಳಲಿದ ಕಣ್ಣಳಿಗೆ, ಬದುಕಿನ ನೆಮ್ಮದಿಯನ್ನು, ಸನ್ಮಾರ್ಗದ ಹಾದಿಯನ್ನು ಗುರ್ತಿಸಲು ಸಹಕಾರಿಯಾಗುತ್ತವೆ.

ಹೊರಗಿನವರಿಗಾಗಿ ರಚಿಸಿರುವ ವರ್ಣಚಿತ್ರಗಳು

ಇಂತಹುದೇ ಚಿತ್ರಗಳ ಸಮುಚ್ಚಯವನ್ನು ಸ್ವಾಮಿಗಳ ಪೌತ್ರರಾದ (ಮೊಮ್ಮಗ) ಶಿಲ್ಪಿ ಎನ್. ಶಿವಾನಂದ ಅವರ ಖಾಸಗೀ ಸಂಗ್ರಹದಲ್ಲಿ ಕಾಣಬಹುದು. ಆದರೆ ಇವುಗಳು ಗಾತ್ರದಲ್ಲಿ ಕಿರಿದಾದವು. ಸ್ವಾಮಿಗಳವರ ಕಲಾಸಾಧನೆಯನ್ನು ದರ್ಶಿಸುವ ದೃಷ್ಟಿಯಿಂದ ಅಮೂಲ್ಯ ವೆನಿಸುತ್ತವೆ. ಏಕಮುಖ ಮತ್ತು ತ್ರಿಮುಖ ಈಶ್ವರನ ಎದೆಮಟ್ಟದ ಚಿತ್ರಗಳು ಸರಸ್ವತಿ, ಭಿಕ್ಷಾಟನ ಮೂರ್ತಿ, ಶಿವಪಾರ್ವತಿ, ಅಶೋಕವನದಲ್ಲಿ ಸೀತಾ ಆಂಜನೇಯ, ಇವು ತೈಲವರ್ಣ ಚಿತ್ರಗಳು.

ಚಿತ್ರ ೧.೧೪ : ಏಕಮುಖ ಈಶ್ವರ
೧.೧೫ ತ್ರಿಮುಖ ಈಶ್ವರ (ಪುಟ ೩೨)

ಏಕಮುಖ ಮತ್ತು ತ್ರಿಮುಖ ಪರಮೇಶ್ವರನ (೧೯೪೯) ಚಿತ್ರದಲ್ಲಿ ಮುಖಹೋಲಿಕೆ, ಕಟ್ಟಿರುವ ಜಟೆ, ಕಿವಿಗೆ ಧರಿಸಿದ ಮಕರ ಕುಂಡಲ, ತಲೆಯಲ್ಲಿ ಧರಿಸಿದ ಕಿರುಪ್ರಮಾಣದ ಕಿರೀಟ ಒಂದೇ ತೆರನಾಗಿದ್ದರೂ ಏಕಮುಖ ಶಿವನಲ್ಲಿ ನೇತ್ರಗಳು ಧ್ಯಾನಮಗ್ನನಾಗಿರುವಂತೆ ತೋರುತ್ತವೆ. ಜಟೆಯು ಬೆನ್ನ ಮೇಲೆಲ್ಲಾ ಗುಂಗುರು ಗುಂಗುರಾಕಾರವಾಗಿ ಹರಡಿದೆ. ಕೊರಳನ್ನು ಬಳಸಿರುವ ಹಾವು ಬಾಯ್ತೆರೆದು ಬಲಕ್ಕೆ ತಿರುಗಿ ಏನನ್ನೋ ನಿರೀಕ್ಷಿಸುವಂತಿದೆ. ಶಿರದಲ್ಲಿ ಧರಿಸಿರುವ ಕಿರುಪ್ರಮಾಣದ ಕಿರೀಟದ ಭ್ರೂಮಧ್ಯಕ್ಕೆ ಸರಿಯಾಗಿ ನಾಗಲಿಂಗವಿದೆ. ಎಡಕ್ಕೆ ಚಂದ್ರನಿದ್ದಾನೆ. ನೀಲಚ್ಛಾಯೆಯುಳ್ಳ ಮುಖ ಹಾಗೂ ಶರೀರ ಕೊರಳಲ್ಲಿ ರುದ್ರಾಕ್ಷಿ ಮಾಲೆ ಆಭರಣಯುಕ್ತವಾದ ಕೊರಳಹಾರ, ಧರಿಸಿರುವ ಭಸ್ಮ ಅತ್ಯಂತ ನೈಜವಾಗಿದೆ. ಪರಮೇಶ್ವರನು ಯಜ್ಞೋಪವೀತಧಾರಿಯಾಗಿದ್ದಾನೆ.

ತ್ರಿಮುಖ ಪರಮೇಶ್ವರನ ದೇಹಕಾಂತಿ ಸಹಜವಾದ ಮೈಬಣ್ಣಗಳಿಂದ ಕೂಡಿದ್ದು ನಮ್ಮನ್ನೇ ನೋಡುತ್ತಿರುವಂತಿವೆ. ಮುನ್ನೋಟ ಮತ್ತು ಮಂದಸ್ಮಿತ ಕಿರುನಗೆಯಿಂದ ಕೂಡಿದ್ದು ಮುಖಕ್ಕೆ ಕಾಂತಿಯನ್ನು ಹೆಚ್ಚಿಸಿವೆ. ಈ ಚಿತ್ರದಲ್ಲಿ ಶಿವನಿಗೆ ಹಾವನ್ನೇ ಯಜ್ಞೋಪವೀತದ ರೀತಿಯಲ್ಲಿ ದೇಹದ ಮೇಲೆ ಸುತ್ತುವರೆದಿದೆ. ಶಿವನ ಕಂಠಾಭರಣಗಳು ಕಣ್ಮನಗಳನ್ನು ತಣಿಸುತ್ತವೆ.

ಈ ಎರಡು ಶಿವನ ಚಿತ್ರಗಳಲ್ಲಿಯೂ ಎದೆಮಟ್ಟದವರೆಗೆ ಮಾತ್ರ ಚಿತ್ರಿಸಿದ್ದು ಸುತ್ತಲೂ ಕತ್ತಲವರ್ಣಗಳಿಂದ (Dark colours) ಆವೃತ್ತವಾಗಿ, ದೇಹಕಾಂತಿಗೆ ಪೋಷಕವಾಗಿ ವರ್ಣಾಕರ್ಷಣೆಯ ವಿನ್ಯಾಸದಲ್ಲಿ ಸ್ವಾಮಿಗಳವರ ದಟ್ಟವಾದ ಅನುಭವ ವ್ಯಕ್ತಪಡಿಸಿರುವ ಜಾಣ್ಮೆಗಳಿಂದ ನೋಡುಗ ನಿಬ್ಬೆರಗಾಗುತ್ತಾನೆ.

ಚಿತ್ರ ೧. ೧೬ : ಸರಸ್ವತೀ (೨)
(ಪುಟ ೩೩)

ಸ್ವಾಮಿಗಳ ಮತ್ತೊಂದು ತೈಲವರ್ಣಚಿತ್ರ ಸರಸ್ವತಿ (೧೯೪೯) (ಅರಮನೆಯಲ್ಲಿರುವ ಚಿತ್ರಕ್ಕಿಂತ ಭಿನ್ನವಾಗಿದ್ದು, ವೀಣೆಯನ್ನು ದೇವಿಯು ನುಡಿಸುತ್ತಿರುವಂತಿದೆ). ಕುಳಿತಿರುವ ಪೀಠವಾದರೂ ಅತ್ಯಂತ ಸಾಧಾರಣವಾದದ್ದು. ದೇವಿ ನಾಲ್ಕು ಬಾಹುಗಳನ್ನು ಹೊಂದಿದ್ದು ವೀಣೆ ನುಡಿಸುವ ಎರಡು ಕೈಗಳಾದರೆ ಉಳಿದೆರಡು ಜಪಸರ (ಬಲಗೈ) ಮತ್ತು ಶಾಸ್ತ್ರದ ಕಟ್ಟು (ಎಡಗೈ)ಗಳನ್ನು ಹಿಡಿದಿದೆ. ದೇವಿಯು ಸಂಗೀತದಲ್ಲಿ ರಾಗದಲ್ಲಿ ತಲ್ಲೀನಗೊಂಡಂತೆ ಕಾಣಿಸುತ್ತಾಳೆ. ಶ್ವೇತವಸ್ತ್ರ ಪೀತಾಂಬರಧಾರಿಣಿಯಾದ ಸರಸ್ವತಿ ದೇವಿಯ ಬಲಪಾದದ ಬಳಿ ಹಂಸಪಕ್ಷಿಯೊಂದು ರಾಗದಲಿ ತನ್ಮಯವಾಗಿ ತದೇಕಚಿತ್ತದಿಂದ ಆಲಿಸುತ್ತಿದೆಯೇನೋ ಎಂಬಂತೆ ಭಾಸವಾಗುತ್ತದೆ. ವೈಭವೋಪೇತ ಕಿರೀಟ ಮತ್ತಿತರ ಆಭರಣಗಳನ್ನು ಹೊಂದಿಲ್ಲದ ಜ್ಞಾನದಾಯಿನಿ ಸರಸ್ವತಿ ದೇವಿಯ ಚಿತ್ರವು ಸಾಧಾರಣವಾಗಿದ್ದರೂ ಆಕರ್ಷಕವಾಗಿದೆ.

ಚಿತ್ರ ೧. ೧೭ : ಭಿಕ್ಷಾಟನಾ ಮೂರ್ತಿ
(ಪುಟ ೩೪)

ಕಾನನದಲ್ಲಿ ನಡೆದು ಬರುತ್ತಿರುವ ಭಿಕ್ಷಾಟನಾ ಮೂರ್ತಿ (೧೯೩೫) ಚಿತ್ರದಲ್ಲಿ ಪಾದಗಳಿಗೆ ಮರದ ಪಾದುಕೆಗಳಿವೆ. ವಿವಸ್ತ್ರನಾಗಿರುವ ಭಿಕ್ಷಾಟನಾ ಮೂರ್ತಿಯ ನಗ್ನತೆಯನ್ನು ಆಭರಣಗಳಿಂದ ಮುಚ್ಚಿದೆ. ನಾಲ್ಕು ತೋಳಗಳು, ಬಲದ ಮೇಲಿನ ಹಸ್ತದಲ್ಲಿ ಡಮರುಗ ಹಿಡಿದದ್ದು ಕೆಳಹಸ್ತದಲ್ಲಿ ಜಿಂಕೆಗೆ ಹುಲ್ಲು ಕೊಡುತ್ತಿದ್ದಾನೆ. ಹಾಗೆಯೇ ಕಪಾಲ ಭಿಕ್ಷಾಪಾತ್ರೆಯನ್ನು ಮುಂಚಾಚಿದ ಎಡಗೈಯನ್ನು ತ್ರಿಶೂಲ, ನವಿಲುಗರಿಗಳನ್ನು ಹಿಂಚಾಚಿದ ಎಡಗೈಯಲ್ಲಿ ಇರುವುದನ್ನು ಕಾಣಬಹುದು. ತ್ರಿನೇತ್ರಧಾರಿಯಾದ ಶಿವನ ಕಣ್ಣಗಳು ಅರೆತೆರೆದಿದ್ದು ನಿರ್ಲಿಪ್ತ ಭಾವನೆಯ ಮೂರ್ತಿಯಾಗಿ ಚಿತ್ರಿತವಾಗಿದ್ದಾನೆ. ತನ್ನ ಮುಂಗಾಲನ್ನು ಮೇಲಕ್ಕೆತ್ತಿ ದೈನ್ಯತೆಯಿಂದ ಬೇಡುತ್ತಿರುವ ಹರಿಣದತ್ತ ಕೃಪಾದೃಷ್ಟಿ ಬೀರಿದಂತೆ ತುಸು ವಾಲಿರುವುದನ್ನು ಕಾಣಬಹುದು.

ಮುಡಿಯನ್ನು ಜಟೆಯಂತೆ ಮೇಲಕ್ಕೆತ್ತಿ ಕಟ್ಟಿದ್ದು, ಧರಿಸಿರುವ ಚಂದ್ರನು ಕಾನನದ ಕತ್ತಲೆಯ ಮೇಲೆ ಬೆಳಕು ಚೆಲ್ಲಿದಂತಿದೆ. ಅಲ್ಲಲ್ಲಿ ಕೆದರಿರುವ ಕೂದಲನ್ನು ಹಿಡಿದಿರುವ ಹಣೆಪಟ್ಟಿಕೆಯಂತಿರುವ ಕಿರೀಟದ ಅಡಿಭಾಗವು ಶಿರೋಭಾಗವನ್ನು ಸುತ್ತುವರೆದಿದೆ. ಸೊಂಟವನ್ನು ಬಳಸಿರುವ ಹಾವು ತನ್ನ ತಲೆ ಎತ್ತಿ ಚತುಷ್ಪಾದಿ ಹರಿಣದೊಡನೆ ಸಂಭಾಷಿಸುತ್ತಿದೆಯೇನೋ

ಎಂಬಂತೆ ತನ್ನ ನಾಲಿಗೆಯನ್ನು ಹೊರಹೊಮ್ಮಿಸಿದೆ. ಅಂಗಾಂಗಗಳಿಗೆ ಬಳಸಿರುವ ವರ್ಣ ಸಮತಟ್ಟಾದ ವರ್ಣಗಳಂತಿದ್ದರೂ (Flat colours) ಅವಶ್ಯವಿದ್ದ ಕಡೆಯಲ್ಲಿ ಕಡು ವರ್ಣಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸಿ ಚಿತ್ರಕ್ಕೆ ಶೋಭೆ ತಂದಿದ್ದಾರೆ. ಈ ಚಿತ್ರವು ಶಿವನ ಲೀಲಾವತಾರದಲ್ಲಿ ಒಂದಾದ ಭಿಕ್ಷಾಟನಾಮೂರ್ತಿಯಾಗಿದ್ದು ಶಿಲ್ಪಶಾಸ್ತ್ರದ ಧ್ಯಾನಶ್ಲೋಕದ ಅನ್ವಯವೇ ತಾಲಮಾನಕ್ರಮವನ್ನು ಅನುಸರಿಸಿ ಚಿತ್ರಿತವಾಗಿದೆ.

ಚಿತ್ರ ೧.೧೮ :
ಪಾರ್ವತೀ ಪರಮೇಶ್ವರರು
(ಪುಟ ೩೫)

ಪ್ರಕೃತಿ, ಪುರುಷ ಸಂಕೇತವಾಗಿರುವ ಪಾರ್ವತಿ ಪರಮೇಶರ್ವರರ ತೈಲವರ್ಣಚಿತ್ರ (೧೯೩೫). ಪರಮೇಶ್ವರನಿಗೆ ನಾಲ್ಕು ಬಾಹುಗಳನ್ನು ಪಾರ್ವತಿಗೆ ಎರಡು ಬಾಹುಗಳಿವೆ. ಬಲಹಸ್ತಗಳು ತ್ರಿಶೂಲ ಹಾಗೂ ಅಭಯ ಮುದ್ರೆಗಳನ್ನೊಳಗೊಂಡಿದೆ. ಎಡಹಸ್ತದಲ್ಲಿರುವ ಡಮರುಗವನ್ನು ಹಾವೊಂದು ಸುತ್ತಿಕೊಂಡು ಶಿವನತ್ತ ಮುಖಮಾಡಿದೆ. ಮತ್ತೊಂದು ಎಡಬಾಹು ಪಾರ್ವತಿಯನ್ನು ಬಳಸಿ ಎಡತೋಳ ಮೇಲೆ ಇದೆ.

ಶ್ವೇತವರ್ಣದ ಕಚ್ಚೆಪಂಚೆ ನಡುವಿನ ಮೇಲೆ ಹುಲಿಯ ಚರ್ಮ ಅದರ ಮೇಲೊಂದು ಕೆಂಪು ವಸ್ತ್ರವೊಂದು ನಡುಪಟ್ಟಿಯಂತೆ ಕಟ್ಟಿರುವುದನ್ನು ಕಣುತ್ತೇವೆ. ಜಟಾಜೂಟಧಾರಿಯಾದ ಪರಮೇಶ್ವರನು ಕಟ್ಟಿರುವ ಜಟೆಯು ಮೇಲಕ್ಕೆತ್ತಿ ಸುತ್ತಿಕಟ್ಟಿದೆ. ಅದರ ಎಡಕ್ಕೆ ಚಂದ್ರನಿದ್ದಾನೆ ಜಟೆಯನ್ನು ಬಳಸಿರುವ ಕಿರುಪ್ರಮಾಣದ ಕಿರೀಟವಿದೆ. ತ್ರಿನೇತ್ರಧಾರಿಯಾದ ಪರಮೇಶ್ವರನ ಕಂಗಳು ಸೌಮ್ಯಭಾವವನ್ನು ತುಂಬಿಸಿಕೊಂಡಿದೆ. ಕರ್ಣಗಳಲ್ಲಿ ಧರಿಸಿರುವ ಕುಂಡಲಗಳು ಹೆಚ್ಚು ಆಕರ್ಷಣೀಯಾಗಿವೆ. ಕೊರಳಲ್ಲಿ ಸಣ್ಣಪ್ರಮಾಣದ ರುದ್ರಾಕ್ಷಿ ಸರವು ಎರಡು ಎಳೆಗಳಿಂದ ಕೂಡಿದ್ದು ಅದರ ತುದಿಗೆ ದೊಡ್ಡ ಗಾತ್ರದ ರುದ್ರಾಕ್ಷಿಯೊಂದಿದ್ದು ಅದರ ಮೇಲೆಲ್ಲಾ ಚಿನ್ನದ ಕೆತ್ತನೆಯನ್ನು ರಚಿಸಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಶಿವನ ಮುಖ್ಯ ಆಭರಣವಾದ ಹಾವು ಕೊರಳ ಬಳಸಿದ್ದು ಶಿರಬಾಗಿ ನಮಿಸುವಂತಿದೆ.

ಹಾಗೆಯೇ ಪ್ರಕೃತಿಯ ಪ್ರತಿರೂಪದ ಶಿವನ ಅರ್ಧಾಂಗಿ ಶಕ್ತಿಸ್ವರೂಪಿಣಿಯಾದ ಪರ್ವತಿಯು, ಶಿವನನ್ನು ತನ್ನ ಬಲಬಾಹುಗಳಿಂದ ಬಳಸಿ ಶಿವನೊಲುಮೆಗೆ ಪಾತ್ರಳಾಗಿ ನಿಂತಿರುವ ಮೋಹಕ ದೃಶ್ಯ. ಶಿವನು ಅರ್ಧಾಂಗಿಯತ್ತ ನೋಡುತ್ತಿರುವ ಓರೆನೋಟ, ಪಾರ್ವತಿಯು ನಾಚಿ ತುಸು ತಲೆತಗ್ಗಿಸಿ ನಿಂತಂತೆ ಚಿತ್ರಿಸಿರುವ ಸ್ವಾಮಿಗಳವರ ಕಲಾವೈಖರಿ ಬಳಸಿದ ಬಣ್ಣ ಅತ್ಯಂತ ನೈಜವಾಗಿದ್ದು. ಭಾವ ಭಾವನೆಗಳ ಸಂಗಮದಂತೆ ವರ್ಣ ಸಂಯೋಜಿಸಿದ್ದಾರೆ. ಅತಿಯಾದ ಯಾವುದೇ ಆಭರಣವಿಲ್ಲದೆ ನಿಂತಿರುವ ಪಾರ್ವತಿಯು ಸಾಂಪ್ರದಾಯಿಕ ಕಚ್ಚೆಯುಡಿಗೆಯಲ್ಲಿದ್ದಾಳೆ. ಕಿರೀಟ, ಕಾಲ್ಗೆಜ್ಜೆ, ಕೊರಳಸರ ಕೈಬಳೆಗಳಲ್ಲಿ ಮಾಡಿರುವ ಕುಸರಿಕೆಲಸವು ಇಡೀ ಚಿತ್ರಕ್ಕೆ ಶೋಭೆ ತಂದಿವೆ. ಅರೆಕತ್ತಲೆಯ ಹಿನ್ನೆಲೆಯಲ್ಲಿ ಹೊಯ್ಸಳ ಮಾದರಿಯ ಸ್ತಂಭವೊಂದಿದ್ದು ಉತ್ತಮ ವಾಸ್ತು ವಿನ್ಯಾಸದ ಗರ್ಭಗೃಹದಲ್ಲಿ ನಿಂತಿದೆ.

ಚಿತ್ರ ೧.೧೯ :
ಅಶೋಕವನದಲ್ಲಿ ಹನುಮಂತ
(ಪುಟ ೩೬)

ಅಶೋಕವನದಲ್ಲಿ ಸೀತಾ ಆಂಜನೇಯ ಚಿತ್ರವು ಸುಮಾರು ಒಂದರಿಂದ ಒಂದೂವರೆ ಅಡಿ ವ್ಯಾಪ್ತಿಯೊಳಗೆ ಬರುವ ತೈಲವರ್ಣಚಿತ್ರ. ರಚನಾ ವಿಧಾನದಲ್ಲಿ ಉಳಿದೆಲ್ಲವುಗಳಿಗಿಂತ ಭಿನ್ನವಾಗಿದೆ. ಈ ಚಿತ್ರದಲ್ಲಿ ಬಣ್ಣಗಳನ್ನು ಮುದ್ದೆ ಮುದ್ದೆಯಾಗಿ ಬಳಸಿದ್ದಾರೆ. ಕುಂಚದ ಹೊಡೆತ (Brush Strokes) ನಿಚ್ಚಳವಾಗಿ ಕಂಡುಬರುತ್ತದೆ. ರಾಕ್ಷಸರು ಸೀತೆಯನ್ನು ಕಾಯುತ್ತಿರುವಾಗಲೇ ನಿದ್ರಾಪರವಶರಾಗಿದ್ದಾರೆ. ಹನುಮಂತನು ಭಕ್ತಿಯಿಂದ ಸೀತೆಯೊಡನೆ ಸಂಭಾಷಿಸುತ್ತಿದ್ದಾನೆ. ಸೀತೆಯ ಮನೋವೇದನೆಯು ಸೀತೆಯ ಮುಖದಲ್ಲಿ ಚೆನ್ನಾಗಿ ನಿರೂಪಿತವಾಗಿದೆ. ಆದರೆ ಇಲ್ಲಿರುವ ಕಲಾಕೃತಿಗಳು ಸರಿಯಾದ ಸಂರಕ್ಷಣೆ ಇಲ್ಲದೇ ಕಳಾಹೀನವಾಗುತ್ತಿವೆ.

ಪ್ರತಿನಿತ್ಯ ಸಾವಿರಾರು ಜನ ನೋಡುವ ***ವಿಖ್ಯಾತ ಜಗನಮೋಹನ ಕಲಾಗ್ಯಾಲರಿಯಲ್ಲಿ ಸ್ವಾಮಿಗಳ ಒಂದು ಕಲಾಕೃತಿಯೂ ಇಲ್ಲದಿರುವುದು ಕರ್ನಾಟಕದ ದುರ್ದೈವ.***

ರೂಪ ಮತ್ತು ಕಥನ ಚಿತ್ರಗಳು

ಸ್ವಾಮಿಗಳವರು ತೈಲಚಿತ್ರರಚನೆಯಲ್ಲಿ ಕಲಾತ್ಮಕ ಕುಸರಿ ಕೆಲಸವನ್ನು ಮಾಡಿರುವಂತೆಯೇ ಜಲವರ್ಣ ಚಿತ್ರದಲ್ಲಿ ಸಹ ಮಾಡಿದ್ದಾರೆ. ಈ ಜಲವರ್ಣ ಚಿತ್ರಗಳು ಕಿರುಪ್ರಮಾಣದ್ದಾಗಿದ್ದು ಸ್ವಾಮಿಗಳ ಮೂಲ ಗುರುಗಳಾದ ಕರಸ್ಥಲದ ಶ್ರೀ ನಾಗಲಿಂಗ ಸ್ವಾಮಿಗಳವರ ಜೀವನ ಚಿತ್ರಗಳ (Story illustration) ಸನ್ನಿವೇಶಗಳನ್ನೊಳಗೊಂಡಿವೆ. ಇದನ್ನು **ಶ್ರೀ ಕರಸ್ಥಲ ನಾಗಲಿಂಗ ದೇವ ಚರಿತಂ** ಕನ್ನಡ ಸಾಂಗತ್ಯ ಕಾವ್ಯ ಗ್ರಂಥವನ್ನು ಸಂಪಾದನೆ ಮಾಡಿ ೧೯೫೧ರಲ್ಲಿ ಸ್ವಾಮಿಗಳೇ ಪ್ರಕಟಿಸಿರುತ್ತಾರೆ. ಅದರಲ್ಲಿ ಕಾವ್ಯದ ಕಥೆಗೆ ಸೂಕ್ತವಾದ ವರ್ಣಚಿತ್ರಗಳನ್ನು ಬರೆದಿರುತ್ತಾರೆ. ಇದನ್ನು ಈಗ ಕಥನ ಚಿತ್ರಗಳೆಂದು ಪರಿಗಣಿಸುತ್ತಾರೆ. ಈ ಚಿತ್ರಗಳು ಶಾಸ್ತ್ರೀಯ ಚಿತ್ರಗಳಿಗಿಂತ ಭಿನ್ನರೂಪವಾದುವು. ಇದರಲ್ಲಿಯ ಪಾತ್ರಗಳ ಮುಖ ಹೋಲಿಕೆ ಒಂದೇ ತೆರನಾಗಿ ನೋಡುಗ ಗುರ್ತಿಸಲು ಸಾಧ್ಯವಾಗಿರಬೇಕು. ಇದನ್ನು ಆಧುನಿಕ ಕಲೆಗೆ ಸೇರಿರುವ ಚಿತ್ರಗಳೆಂದು ಪರಿಗಣಿಸುತ್ತಾರೆ. ಕಥನ ಕ್ರಮದಲ್ಲಿ ಸೂಕ್ತ ಭಾವ ಮತ್ತು ಘಟನೆಗಳ ವಿವರಣೆ ಚಿತ್ರವೇ ಹೇಳುವಂತೆ ಇರಬೇಕಾದದ್ದು ಮುಖ್ಯ. ಆ ರೀತಿಯಾಗಿ ಗ್ರಂಥದಲ್ಲಿ ಈ ಚಿತ್ರಗಳು ಇವೆ. ಇವು ಜಲವರ್ಣದ ಚಿತ್ರಗಳು ಎಂಬುದನ್ನು ನಾವು ನೆನಪಿನಲ್ಲಿರಿಸಿಕೊಂಡಿರಬೇಕು.

ಚಿತ್ರ ೧. ೨೦ : (ಪುಟ ೩೭) ೧. ಶ್ರೀ ನಾಗಲಿಂಗ ದೇವರು ಶಿಲ್ಪಶಾಸ್ತ್ರೀಯವಾಗಿ ನಿರ್ಮಿಸಿರುವ ರತ್ನಪದಕವನ್ನು ದಾನೀಶ ಮಹಾರಾಜನಿಗೆ ಅರ್ಪಿಸುತ್ತಿರುವುದು. ರಾಣಿ ಶಿಲ್ಪಿಯನ್ನು ಗಮನಿಸುತ್ತಿದ್ದಾಳೆ.

ಚಿತ್ರ ೧. ೨೧ : (ಪುಟ ೩೭) ೨. ಕಾಮಾಂಧಳಾದ ರಾಣಿ ನಾಗಲಿಂಗ ದೇವನನ್ನು ಕ್ರೀಡಾ ಪ್ರಪಂಚಕ್ಕೆ ಸೆಳೆಯುತ್ತಿರುವುದು.

ಚಿತ್ರ ೧. ೨೨ : (ಪುಟ ೩೮) ೩. ಪತಿಯಾಗಮನವನ್ನು ಅರಿತ ರಾಣಿಯು ನಾಗಲಿಂಗ ದೇವರಲ್ಲಿ ಪೂಜ್ಯ ಜಂಗಮ ಭಾವನೆಯನ್ನು ತೋರ್ಪಡಿಸಿ ಬೀಳ್ಕೊಡುವುದು.

ಚಿತ್ರ ೧. ೨೩ : (ಪುಟ ೩೮) ೪. ಶಿವದೀಕ್ಷಾ ಕಾಲದಲ್ಲಿ ಗುರು ಶಾಂತಯ್ಯ ಮೊದಲಾದವರು ನಾಗಲಿಂಗ ದೇವನ ಕರಸ್ಥಲದಲ್ಲಿ ಶಿವಲಿಂಗವನ್ನು ಕಂಡು ಅಚ್ಚರಿಪಡುತ್ತಿರುವುದು.

ಚಿತ್ರ ೧. ೨೪ : (ಪುಟ ೩೯) ೫. ನಾಗಲಿಂಗ ದೇವರಿಗೆ ಪಾರ್ವತೀ ಪರಮೇಶ್ವರರ ಸಾಕ್ಷಾತ್ಕಾರ

ಚಿತ್ರ ೧. ೨೫ : (ಪುಟ ೩೯) ೬. ಮೃತ್ಯುಂಜಯ ರಾಜನು ನಾಗಲಿಂಗ ಸ್ವಾಮಿಯನ್ನು ಕತ್ತರಿಸಲು ಪ್ರಯತ್ನಿಸಿದಾಗ ಅದು ವ್ಯರ್ಥವಾದುದನ್ನು.

ಚಿತ್ರ ೧. ೨೬ : (ಪುಟ ೪೦) ೭. ಮಹಾನದಿಯ ಪಾತ್ರದಲ್ಲಿ ಅಂಬಿಗ ಮತ್ತು ಶಿಷ್ಯನೊಂದಿಗೆ ನಾಗಲಿಂಗ ಸ್ವಾಮಿಗಳು

ಚಿತ್ರ ೧. ೨೭ : (ಪುಟ ೪೦) ೮. ನಾಗಲಿಂಗ ದೇವರರಿಂದ ಕುಷ್ಟರೋಗವನ್ನು ಪರಿಹರಿಸಿಕೊಂಡ ಗೃಹಸ್ಥನೊಬ್ಬನು ಪತ್ನಿಯೊಡನೆ ಸ್ವಾಮಿಗಳಿಗೆ ನಮಸ್ಕರಿಸುತ್ತಿರುವುದು.

ಚಿತ್ರ ೧. ೨೮ : (ಪುಟ ೪೧) ೯. ಶ್ವಪಚನೊಬ್ಬನು ಅರ್ಪಿಸಿದ ಶ್ಯಾವಿಗೆಯನ್ನು ಜಂಗಮರೆದುರಿನಲ್ಲಿಘಟಸರ್ಪವನ್ನಾಗಿ ಮಾಡಿ ಎಡಗೈಯ್ಯಲ್ಲಿ ಧರಿಸಿರುವುದು.

ಚಿತ್ರ ೧.೨೯ : (ಪುಟ ೪೧) ೧೦. ಸ್ವಾಮಿಗಳು ಕರಸ್ಥಲ ಲಿಂಗವನ್ನು ಕಾಲು ಬೆರಳಿಗೆ ಕಟ್ಟಿದಾಗ ಗುರುಶಾಂತಯ್ಯ ಅಚ್ಚರಿಪಡುವುದು.

೧೨. ಕರಸ್ಥಲ ನಾಗಲಿಂಗ ಸ್ವಾಮಿಗಳು

ಚಿತ್ರ ೧. ೩೦ : (ಪುಟ ೪೨)

ಈ ಚಿತ್ರಗಳು ಆಧುನಿಕ ಕಲೆಯ ಪರಿಣಿತರ ಚಿತ್ರಗಳಿಗಿಂತಲೂ ಹೆಚ್ಚು ನಾಜೂಕಾಗಿ ಕಥನದ ಅಭಿವ್ಯಕ್ತಿ, ಪಾತ್ರಗಳ ಒಪ್ಪ–ಓರಣ, ಮುಖಗಳಲ್ಲಿ ಅಗತ್ಯ ಹೋಲಿಕೆ ಇವೆಲ್ಲಾ ಪರಿಪೂರ್ಣವಾಗಿರುವುದನ್ನು ನೋಡುಗರು ಗಮನಿಸಬಹುದು. ಎಲ್ಲಾ ಚಿತ್ರಗಳಲ್ಲೂ ಮೈಸೂರಿನ ಜೀವನ ಶೈಲಿ ಪ್ರತಿಫಲಿಸುತ್ತಿರುವುದನ್ನು ಗುರ್ತಿಸಬಹುದು. ಹಿನ್ನೆಲೆಯ ಚಿತ್ರಣದಲ್ಲಿರುವ ಸ್ಪಷ್ಟತೆ ಮತ್ತು ಪಾತ್ರಗಳ ಭಾವಾಭಿವ್ಯಕ್ತಿಯು ಗಮನಿಸಬೇಕಾಗಿರುವ ವಿಶೇಷ ಅಂಶಗಳು.

ಕಥನ ಚಿತ್ರಗಳಂತೆಯೇ ರೂಪ ಚಿತ್ರಗಳು (Portrait Painting) ಕೂಡ ಆಧುನಿಕ ಕಲೆಯ ಭಾಗವಾಗಿ ಪರಿಗಣಿತವಾಗುತ್ತವೆ. ಇದನ್ನು ಪ್ರತ್ಯೇಕವಾಗಿ ಮತ್ತು ವಿಶೇಷವಾಗಿ ಅಧ್ಯಯನ ಮಾಡುವುದೂ ಉಂಟು. ಇವೆರಡನ್ನೂ ಸಾಂಪ್ರದಾಯ ಶಾಸ್ತ್ರೀಯಶಿಲ್ಪದಲ್ಲಿ ಪರಿಗಣಿಸುವುದಿಲ್ಲ.

ರೂಪಚಿತ್ರಗಳ ಲೇಖನ ಸುಲಭವೆಂದು ಆಧುನಿಕರೂ ಅಂಗೀಕರಿಸುವುದಿಲ್ಲ. ಅವರು ಜಯಚಾಮರಾಜೇಂದ್ರ ಒಡೆಯರ್ ಅವರ ರೂಪಚಿತ್ರವನ್ನು ತೈಲವರ್ಣದಲ್ಲಿ ಲೇಖಿಸಿದ್ದಾರೆ. ಅದನ್ನು ಕಂಡವರು ಯಾರಾದರೂ ಅದು ವರ್ಣ ಛಾಯಾಚಿತ್ರ ಎಂದು ಹೇಳುವುದು ಸಾಧ್ಯವಿದೆ. ಮಹಾರಾಜರ ಮುಖದ ಹೋಲಿಕೆ ಅಷ್ಟುನಿಖರವಾಗಿದೆ.

ಚಿತ್ರ ೧. ೩೧ :
ಜಯಚಾಮರಾಜ ಒಡೆಯರ್ ಅವರು (ಪುಟ ೪೨)

ಸ್ವಾಮಿಗಳು ವರ್ಣಚಿತ್ರರಚನೆಯಲ್ಲಿ ಶಿಲ್ಪಶಾಸ್ತ್ರೀಯ ಚಿತ್ರಗಳೊಂದಿಗೆ ಆಧುನಿಕ ಕಥನ ಚಿತ್ರಗಳು ಮತ್ತು ರೂಪಚಿತ್ರಗಳ ರಚನೆಯಲ್ಲೂ ಪರಿಣಿತಿಯನ್ನು ಸಾಧಿಸಿದ್ದರು. ಹೀಗೆ ಎರಡು ವಿಭಾಗದಲ್ಲಿ ಪರಿಣಿತರಾಗಿರುವವರು ಇಂದಿಗೂ ಅಪರೂಪದ ಸಂಗತಿಯೇ.

ಇವರು ರಚಿಸಿದ ಕಲಾಕೃತಿಗಳು ಶಾಸ್ತ್ರವನ್ನು ಗರ್ಭೀಕರಿಸಿಕೊಂಡ ದೈವೀಶಕ್ತಿಯುಳ್ಳವು. ಹಾಗೆಯೇ ಸ್ವಾಮಿಗಳು ಸಹ ಸಿದ್ಧಪುರುಷರು ವಿಶ್ವಕರ್ಮಾಂಶ ಸಂಭೂತರು. ಅವರಲ್ಲಿ ಕಾಣಿಸುವ ಅಗಾಧ ಪ್ರತಿಭೆ ಅವರ ಸಮಕಾಲೀನ ಇತರರಲ್ಲಿ ಇರಲಿಲ್ಲ. ಶಾಸ್ತ್ರವನ್ನು, ಕಲೆಯನ್ನು, ಕನ್ನಡ ಶೈಲಿಯನ್ನು ಕಲಾವಂತಿಕೆಯ ಮೂಸೆಯಲ್ಲಿ ಕರಗಿಸಿ ಸೌಂದರ್ಯವನ್ನು ನಿರ್ಮಿಸುತ್ತಿದ್ದರು. ಅವರ ಶಿಲ್ಪರಚನೆಗೆ ಯಾವ ಶಿಲ್ಪಮಾಧ್ಯಮದ ಚೌಕಟ್ಟು ಅವರಿಗೆ ತಡೆಯಾಗಿರಲಿಲ್ಲ. ವರ್ಣಚಿತ್ರ, ಶಿಲಾಶಿಲ್ಪ, ಮರದ ಶಿಲ್ಪ, ಎರಕದ ಶಿಲ್ಪ, ತಗಡಿನಲ್ಲಿ ಉಬ್ಬುಕೆತ್ತನೆ, ದೇವಾಲಯದ ವಿನ್ಯಾಸ, ನಿರ್ಮಾಣ, ಶಾಸ್ತ್ರಪ್ರಾವೀಣ್ಯ ಶಿಲ್ಪದ ಬೋಧನೆ, ಶಾಸ್ತ್ರದ ಅಧ್ಯಾಪನ ಎಲ್ಲ ಕೆಲಸವನ್ನೂ ಅತ್ಯಂತ ಸಹಜವಾಗಿ, ಲೀಲಾಜಾಲವಾಗಿ ಅವರು ನಿರ್ವಹಿಸಿದ್ದಾರೆ. ಈ ಕಾರಣಕ್ಕಾಗಿಯೇ ಸ್ವಾಮಿಗಳನ್ನು ಸಿದ್ಧಪುರುಷರು. ಅವತಾರ ಪುರುಷರು ಎಂದು ಸಾಮಾನ್ಯರಿಗೆ ಭಾಸವಾಗುವುದು. ಶಾಸ್ತ್ರವನ್ನು ಬಿಟ್ಟು ಸ್ವಾಮಿಗಳು ಶಿಲ್ಪವನ್ನಾಗಲಿ, ಚಿತ್ರವನ್ನಾಗಲಿ ರಚಿಸಿಯೇ ಇಲ್ಲ. ಸಿದ್ಧಲಿಂಗಸ್ವಾಮಿಗಳವರ ಬಗ್ಗೆ ಹೇಳುವಾಗ ಶಾಸ್ತ್ರ ಮತ್ತು ಪರಂಪರೆಗಳು ಒಂದು ಬಿಟ್ಟು ಇನ್ನೊಂದು ಹೇಳುವ ಹಾಗಿಲ್ಲ. ಈ ಸಂದರ್ಭದಲ್ಲಿ ಮಹಾಕವಿ ಕಾಳಿದಾಸ ತನ್ನ ರಘುವಂಶ ಮಹಾಕಾವ್ಯದಲ್ಲಿ ಆದಿಯಲ್ಲಿ –

ವಾಗಾರ್ಥವಿವ ಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತಿ ಪರಮೇಶ್ವರೌ ॥

– ಎಂದು ಪ್ರಾರ್ಥಿಸಿದ್ದಾನೆ. ವಾಕ್ ಮತ್ತು ಅರ್ಥಗಳನ್ನು ಹೇಗೆ ಬೇರ್ಪಡಿಸಲು ಸಾಧ್ಯವಿಲ್ಲವೋ ಹಾಗೆ ಸ್ವಾಮಿಗಳವರ ಚಿತ್ರ ಮತ್ತು ಶಿಲ್ಪಗಳಲ್ಲಿ ಶಾಸ್ತ್ರ ಮತ್ತು ಪರಂಪರೆ ಜೊತೆಯಾಗಿ ಕೂಡಿವೆ. ಅವನ್ನು ಬೇರ್ಪಡಿಸಿ ಹೇಳುವುದು ಸಾಧ್ಯವಿಲ್ಲ. ಅವರು ರಚಿಸಿದ ಶಿಲ್ಪ ಕೃತಿಗಳ ವೈವಿಧ್ಯತೆ, ಅವುಗಳ ನಿರ್ಮಾಣ ಕ್ರಮ, ಮಂತ್ರಾನುಷ್ಠಾನ ಇತ್ಯಾದಿ ವಿವರಗಳು ಪ್ರತ್ಯೇಕವಾಗಿ ಲಭಿಸುತ್ತಿಲ್ಲ. ಆದರೆ ಸ್ವಾಮಿಗಳವರ ಮೂಲ ನೆಲೆಯನ್ನು ಸಿದ್ಧಿಯನ್ನು ಪಡೆಯಲು ಅವಶ್ಯ ವಾತಾವರಣವನ್ನು ಅವರ ಚಿತ್ರ ಶಿಲ್ಪಗಳು ಒದಗಿಸುವುದು ಮುಖ್ಯವಾಗಿ ನಾವು ಗಮನಿಸಬೇಕು.

ಮೈಸೂರ ಅರಮನೆಯಲ್ಲಿ ಚಿತ್ರಕಾರರಿಗೆ, ಶಿಲ್ಪಿಗಳಿಗೆ ಅಪಾರ ಬೇಡಿಕೆ ಇತ್ತು. ಅದನ್ನು ಗಮನಿಸಿ ಅವರ ಗುರುಗಳಾದ ಶ್ರೀ ನಂಜುಂಡ ಶಿವಯೋಗಿಗಳು ಅಪ್ಪಣೆ ಕೊಡಿಸಿದ ಪ್ರಕಾರ ೧೯೦೮ರಲ್ಲಿ ಮೈಸೂರಿಗೆ ಬಂದು ಅರಮನೆಯಲ್ಲಿ ಶಿಲ್ಪಿಗಳಾಗಿ ಕೆಲಸಕ್ಕೆ ಸೇರಿದರು. ಪ್ರಾರಂಭದಲ್ಲಿ ಅರಮನೆಯ ನಾಟಕ ಮಂಡಲಿಗೆ ದೇವ ದೇವತೆಯರ ಹಾಗೂ ನಾಟಕ ಸನ್ನಿವೇಶಕ್ಕನುಗುಣವಾದ ಚಿತ್ರಗಳು ಅವಶ್ಯಕವಾಗಿದ್ದವು. ಅವರ ನಾಟಕ ಮಂಡಲಿ ವ್ಯವಸ್ಥಾಪಕರಾದ ದರ್ಬಾರ್ ಭಕ್ಷಿಯವರು ಸ್ವಾಮಿಗಳಲ್ಲಿ ಮನವಿ ಮಾಡಿಕೊಂಡದರ ಫಲವಾಗಿ ಸ್ವಾಮಿಗಳು ರಚಿಸಿದ ಚಿತ್ರಪಟಗಳು ಮಹಾರಾಜರ ಮನ್ನಣೆಗೆ ಪಾತ್ರವಾದವು. ಈತನ ಸಾಮರ್ಥ್ಯ ಇನ್ನೂ ಹೆಚ್ಚು ಎಂಬುದನ್ನು ಗುರುತಿಸಿ ಇತರ ಭಾಗಗಳಲ್ಲಿ ಸ್ವಾಮಿಗಳಿಗೆ ಅವಕಾಶ ಲಭಿಸಿತು.

ಕ್ಯಾಲೆಂಡರ್ ವರ್ಣಚಿತ್ರಗಳು

ಆಗ ಮೈಸೂರು ರಾಜ್ಯದಲ್ಲಿ ಪುರಾಣದೇವತಾ ಚಿತ್ರಗಳಿಗೆ ಚಿತ್ರದ ನೂತನ ರೀತಿಯಲ್ಲಿ ಚೌಕಟ್ಟು ನಿರ್ಮಾಣವಾಗುತ್ತಿದ್ದ ಕಾಲ. ರಾಜಾ ರವಿವರ್ಮ ಅವರು ಭಾರತೀಯ ದೇವದೇವತೆಯರ ಚಿತ್ರಗಳನ್ನು ಕ್ಯಾಲೆಂಡರ್‌ಗಾಗಿ ಚಿತ್ರಿಸುತ್ತಿದ್ದರು. ಆ ರೀತಿಯ ಚಿತ್ರಗಳಿಗೆ ಅಪಾರ ಬೇಡಿಕೆ ಇತ್ತು. ಅಂದಿನ ಕಾಲಕ್ಕೆ ಬೆಂಗಳೂರಿನ ಮಹಾರಾಜ ಫ್ರೇಂವರ್ಕ್ಸ್ ಪ್ರಕಟಿಸುತ್ತಿದ್ದ ಕ್ಯಾಲೆಂಡರ್ ಚಿತ್ರಗಳಿಗೆ ಬಲವಾದ ಬೇಡಿಕೆ ಇತ್ತು.

ಪುರಾಣ ದೇವತೆಗಳನ್ನು ರಾಜಾ ರವಿವರ್ಮ ಇಂಗ್ಲೆಂಡಿನಿಂದ ತಾವು ಕಲಿತು ಬಂದ ಚಿತ್ರರಚನಾ ಕ್ರಮದ ಪ್ರಕಾರ ರೂಪದರ್ಶಿಗಳನ್ನು ಬಳಸಿಕೊಂಡು ವರ್ಣಚಿತ್ರ ರಚನೆಗೆ ಮಾಡುತ್ತಿದ್ದರು. ಜನರ ಹತ್ತಿರಕ್ಕೆ ಸೆಳೆಯುವ ಆಕರ್ಷಣೀಯವಾದ ಬಣ್ಣ ರಾಜ ಮನೆತನಗಳ ಉಡುಪು ಆಭರಣಗಳು ಇದರ ಗುಣವಾಗಿತ್ತು. ರೂಪದರ್ಶಿಗಳನ್ನು ಬಳಸಿಕೊಂಡಿದ್ದರಿಂದ ಅವರ ಮುಖ ಛಾಯೆಗಳೂ ಚಿತ್ರಗಳಲ್ಲಿರುತ್ತಿದ್ದವು. ಮನುಷ್ಯರ ಚಿತ್ರಗಳಾದ್ದರಿಂದ ಬಹುಪಾಲು ಅದೇ ಲಕ್ಷಣಗಳೇ ವ್ಯಾಪಕವಾಗಿತ್ತು. ಎಂದರೆ ಚಿತ್ರದಲ್ಲಿರಬೇಕಾದ ದೈವೀ ಭಾವ ಇರುತ್ತಿರಲಿಲ್ಲ.

ಸಾಂಪ್ರದಾಯಿಕ ವರ್ಣಚಿತ್ರ ಮತ್ತು ಶಿಲ್ಪಶಾಸ್ತ್ರದಲ್ಲಿ ಈ ಮಾನವ ಲಕ್ಷಣವನ್ನು ತಪ್ಪಿಸಲು ಪ್ರತಿದೇವತೆಗೂ ವಿಶೇಷವಾದ ಅಳತೆಯನ್ನು ನಿಗದಿಪಡಿಸಿರುತ್ತದೆ. ಇದನ್ನು ಸಾಧಾರಣವಾಗಿ ತಾಲಮಾನ ಲಕ್ಷಣ ಎನ್ನುತ್ತಾರೆ, ಇದರಿಂದ ಮನುಷ್ಯದೇಹದ ಅಳತೆಗಳು ತಪ್ಪುತ್ತವೆ. ಪ್ರತಿಮಾಲಕ್ಷಣಗಳಲ್ಲಿ ಆ ದೇವಿ ದೇವರ ಅಲಂಕರಣ, ಭಂಗಿ, ಭಾವ, ಮೈಬಣ್ಣ ಇತ್ಯಾದಿ ವಿವರಗಳು ಲಭಿಸುತ್ತವೆ. ಆ **ಅಳತೆ ಮತ್ತು ಲಕ್ಷಣಗಳನ್ನು ಪಡೆದು ಕೊಂಡಿರುವ ಚಿತ್ರ ಅಥವಾ ಶಿಲ್ಪವನ್ನು ಮಾತ್ರವೇ *ಪ್ರತಿಮೆ—ಎಂದರೆ ಸ್ವರ್ಗದ ಅಳತೆಗಳನ್ನು, ದೇವತೆಗಳ ಲಕ್ಷಣಗಳನ್ನು ಪಡೆದುಕೊಂಡಿರುವ ಮತ್ತು ಶಿಲ್ಪಿಯಾದವನು ತನ್ನ ತಪಸ್ಸಿನಿಂದ ಸೃಷ್ಟಿಸಿರುವ ಶಿಲ್ಪಕೃತಿ—ಎನ್ನುತ್ತಾರೆ.*** ಇದರ ಪೂಜೆಯಿಂದ ಫಲಸಿದ್ಧಿಯಾಗುತ್ತದೆ. ಶಿಲ್ಪಶಾಸ್ತ್ರಗಳ ನಿಯಮಗಳನ್ನು, ತಾಳಮಾನದ ಅಳತೆಗಳನ್ನು ಅನುಸರಿಸಿ ನಿರ್ಮಿಸಿದ ಶಿಲ್ಪಗಳನ್ನು ಪೂಜಿಸಿದರೆ ಮಾತ್ರವೇ ಫಲಸಿದ್ಧಿಯು ಸಾಧ್ಯ. ಇತರ ಮಾರ್ಗಗಳಿಂದ ನಿರ್ಮಿಸಿರುವ ವಿಗ್ರಹಗಳನ್ನು ಪೂಜಿಸಿದರೆ ಫಲಸಿದ್ಧಿಯಾಗುವುದಿಲ್ಲ.

ಸ್ಪಷ್ಟವಾಗಿ ರಾಜಾ ರವಿವರ್ಮ ಅವರ ವರ್ಣ ಚಿತ್ರಗಳು ಈ ಶಾಸ್ತ್ರೀಯ ಆವರಣದಿಂದ ಹೊರಗಿದ್ದವು. ಆದ್ದರಿಂದ ಅವು ಶಾಸ್ತ್ರೀಯ ದೃಷ್ಟಿಯಿಂದ ದೈವ ಪ್ರತಿಮೆ(ಚಿತ್ರ)ಗಳಲ್ಲ.

ಸ್ವಾಮಿಗಳು ರಾಜಾರವಿವರ್ಮರ ಚಿತ್ರಗಳ ಜನಪ್ರಿಯತೆಯನ್ನು ಕುಗ್ಗಿಸಿ ತಮ್ಮ ಶಾಸ್ತ್ರೀಯ ವರ್ಣಚಿತ್ರಗಳು ಮಾರುಕಟ್ಟೆಯಲ್ಲಿ ಯಶಸ್ವಿಯಾಗುವಂತೆ ಮಾಡಿ ಪಾರಂಪರಿಕ ಕಲೆಯನ್ನು ಉಳಿಯುವಂತೆ ಮಾಡಿದರು. ಇದರೊಂದಿಗೆ ಕನ್ನಡ ನಾಡಿನ ವರ್ಣಚಿತ್ರ ರಚನಾ ಶೈಲಿಗೆ ಜನಪ್ರಿಯತೆಯನ್ನು ತಂದುಕೊಟ್ಟರು. ಇದೇನು ಅಲ್ಪವಾದ ಸಾಧನೆಯಲ್ಲ. ಆದರೆ ಸ್ವಾಮಿಗಳ ಈ ಸಾಧನೆಯನ್ನು ನಮ್ಮ ಕಲಾ ಇತಿಹಾಸಜ್ಞರು, ವಿಮರ್ಶಕರು ಪರಿಗಣಿಸಿಯೇ ಇಲ್ಲ ಎಂಬುದು ಕನ್ನಡನಾಡಿನ ದುರಂತ.

ಸ್ವಾಮಿಗಳವರ ಶಾಸ್ತ್ರೋಕ್ತವಾದ ಕಲಾ ಸಂಪ್ರದಾಯ ಮತ್ತು ರಚನೆಗಳನ್ನು ತಿಳಿದಿದ್ದ ಮಹಾರಾಜ ಫ್ರೇಂವರ್ಕ್ಸ್‌ನವರು ಸ್ವಾಮಿಗಳಿಗೆ ಬೇಡಿಕೆ ಸಲ್ಲಿಸಿದರು. ಸ್ವಾಮಿಗಳು ಅದಕ್ಕೊಮ್ಮೆ ನಾವು ಬರೆದುಕೊಟ್ಟ ಚಿತ್ರವನ್ನು ಪೂರ್ಣ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದೊಂದಿಗೆ ಮುದ್ರಿಸಬೇಕೆಂಬ ಆಶಯವನ್ನು ಮುಂದಿಟ್ಟರು. ಸ್ವಾಮಿಗಳು ಕ್ಯಾಲೆಂಡರ್ ಚಿತ್ರಗಳಿಗಾಗಿ ಒಪ್ಪಿದ್ದೆ ನಮ್ಮ ಪುಣ್ಯವೆಂದು ತಿಳಿದಿದ್ದ ಮಾಲೀಕರು ಈ ಬಗ್ಗೆ ಪೂರ್ಣ ಗಮನ ನೀಡಿದರು.

ಕೈಲಾಶ ಶಂಕರ ಎಂಬ ಶಿರೋನಾಮೆಯ ಚಿತ್ರ ೧೯೨೮ರಲ್ಲಿ ಮೊದಲು ಪ್ರಕಟವಾಯಿತು. ಚಿತ್ರ ಬಹು ಜನಪ್ರಿಯವಾಯಿತು. ಅದನ್ನು ಕಂಡು ಪುಲಕಿತಗೊಂಡ ಮಾಲೀಕರು ಅದೇ ಚಿತ್ರವನ್ನು ಸ್ವಲ್ಪ ಮಾರ್ಪಡಿಸಿ ಬರೆದುಕೊಡಲು ಕೇಳಿಕೊಂಡಿದ್ದ ಪರಿಣಾಮವಾಗಿ ಮೊದಲಿನ ಚಿತ್ರದಲ್ಲಿ ಪರಮೇಶ್ವರನ ಪಾದವನ್ನು ನಂದಿಯು (ಮಾನವದೇಹ, ವೃಷಭನ ತಲೆ) ಹಿಡಿದಿದ್ದರೆ ತಮ್ಮ ಎರಡನೇ ಕೈಲಾಸ ಶಂಕರನಲ್ಲಿ (೧೯೩೨) ಪರಮೇಶ್ವರನ ಪಾದವನ್ನು ನಂದಿ ಮತ್ತು ತ್ರಿಪಾದವುಳ್ಳ ಭೃಂಗೀಶ್ವರ ಹಿಡಿದಿದ್ದಾರೆ. ಉಳಿದಂತೆ ಪಾರ್ವತಿ ಪರಮೇಶ್ವರ, ಗಣಪತಿ, ಷಣ್ಮುಖ ಮತ್ತಿರ ಋಷಿಪುಂಗವರು, ದೇವತೆಗಳು, ಗಣಗಳು ಇದ್ದಾರೆ. ಸ್ವಾಮಿಗಳವರ ಈ ಚಿತ್ರಗಳಲ್ಲಿ ಷಣ್ಮುಖನ ಆರು ತಲೆಗಳನ್ನು ಹೊಂದಿಸಿರುವ ರೀತಿ, ಇದುವರೆಗಿನ ಕ್ಯಾಲೆಂಡರ್ ಚಿತ್ರಗಳಿಗಿಂತ ಉತ್ತಮವಾದವು. ಒಂದೇ ಭುಜದಿಂದ ೬ ಕತ್ತುಗಳ ಮೂಲಕ ತಲೆ ಹೊರಹೊಮ್ಮಿವೆ. ಸಾಲಾಗಿ ತಲೆಗಳನ್ನು ಅಂಟಿಸಿದಂತೆ ನಾವು ಇತ್ತೀಚಿನ ಚಿತ್ರಗಳಲ್ಲಿ ಕಾಣುತ್ತೇವೆ. ಸ್ವಾಮಿಗಳವರ ವಾಸ್ತವ ಪ್ರಜ್ಞೆಗೆ ಈ ಚಿತ್ರವು ಮೆರುಗನ್ನು ಕೊಟ್ಟಿರುತ್ತದೆ. ಇಲ್ಲಿಯ ಮೂರ್ತಿಗಳು ತಾಳಮಾನವನ್ನು ಒಳಗೊಂಡು ಶಾಸ್ತ್ರ ಪರಂಪರೆಯನ್ನು ಬಿಂಬಿಸುತ್ತದೆ.

ಚಿತ್ರ ೧.೩೨ : ಕೈಲಾಸ ಶಂಕರ (೧೯೨೮) (ಪುಟ ೪೪)

ಸ್ವಾಮಿಗಳವರು ರಚಿಸಿದ ಪಂಚವಕ್ತ್ರೇಶ್ವರ (೧೯೩೧) ಅಪಾರ ಬೇಡಿಕೆಯುಳ್ಳ ಚಿತ್ರ ಪಂಚಮುಖ, ದಶಭುಜಗಳು, ಕೆಂದಾವರೆಯ ಮೇಲೆ ಕುಳಿತಿರುವ ದೇವ ನೆಲ, ಜಲಗಳ ಸಂಪರ್ಕವಿಲ್ಲದೇ ಆಕಾಶದಲ್ಲಿರುವಂತೆ ಭಾಸವಾಗುವ ಈ ಮೂರ್ತಿಯ ಸುತ್ತಲೂ ಐದು ಮಂದಿ ಶಿಲ್ಪರ್ಷಿಗಳು ಕರಜೋಡಿಸಿ ನಮಿಸುತ್ತಿದ್ದಾರೆ. ಹಾಗೆಯೇ ನಭೋಮಂಡಲದಿಂದ ಹಾರಿಬಂದ ಗಂಧರ್ವರು ಪುಷ್ಪವೃಷ್ಟಿ ಮಾಡುತ್ತಿದ್ದಾರೆ. ಸ್ವಾಮಿಯ ಸರ್ವಾಭರಣಯುಕ್ತನಾಗಿದ್ದು ಸರ್ಪ ಯಜ್ಞೋಪವೀತವನ್ನು ಧರಿಸಿರುತ್ತಾನೆ

ಚಿತ್ರ ೧.೩೩ : ಪಂಚವಕ್ತ್ರೇಶ್ವರ (ಪುಟ ೪೫)

ಸ್ವಾಮಿಗಳು ಪುರಾಣ ಸಾಹಿತ್ಯಕ್ಕೆ ಜೀವಕಳೆ ತುಂಬಿ ದೃಗ್ಗೋಚರವಾಗುವಂತೆ ಮಾಡುವಲ್ಲಿ ಸಿದ್ಧಹಸ್ತರು ಎಂಬುದಕ್ಕೆ ಕ್ಯಾಲೆಂಡರ್ ಮತ್ತು ವಿಗ್ರಹರೂಪದಲ್ಲಿ ರಚಿತವಾದ ಮತ್ತೊಂದು ಲಿಂಗೋದ್ಭವ ಮೂರ್ತಿಯಾಗಿರುವ ರೇಣುಕಾಚಾರರು. ಇದರ ರಚನಾಕಾಲ ೧೯೪೧. ಶಾಬ್ದಿಕ ರೂಪದಲ್ಲಿದ್ದ ಪಂಚಾಚಾರ್ಯರ ಆವಿರ್ಭಾವದ ಪರಿಕಲ್ಪನೆಗೆ ಆಕಾರವನ್ನು ನೀಡಿ ಚಿತ್ರರಚಿಸಿ ಕೊಟ್ಟರಲ್ಲದೇ, ಪಂಚಪೀಠಗಳಿಗೂ ಶಿಲಾ ಪೂಜಾಮೂರ್ತಿಗಳನ್ನು ಮಾಡಿಕೊಟ್ಟಿದ್ದಾರೆ. ಹಾಗೆಯೇ ವಿಗ್ರಹ ಪ್ರತಿಷ್ಠಾಪನೆಯನ್ನು ಸಹ ಮಾಡಿದ್ದಾರೆ. ನಾಡಿನಾದ್ಯಂತ ಇರುವ ಪಂಚಾಚಾರ್ಯ ಮೂರ್ತಿಗಳಲ್ಲಿ ಸ್ವಾಮಿಗಳವರ ಹಾಗೂ ಅವರ ಪುತ್ರ ನಾಗೇಂದ್ರ ಸ್ಥಪತಿಗಳವರ ಕಾಲದಲ್ಲಿ ಕೆತ್ತನೆಯಾದವುಗಳೇ ಅಧಿಕ. ಈ ಚಿತ್ರವೂ ಸಹ ಅಪಾರ ಜನಮನ್ನಣೆಯನ್ನು ಗಳಿಸಿತು. ಈ ರೇಣುಕಾಚಾರ್ಯರ ಮೂರ್ತಿಯ ಬಲಗೈಯಲ್ಲಿ ಕಮಂಡಲ, ಎಡಗೈಯಲ್ಲಿ ದಂಡವಿದೆ. ಜಟಾಧಾರಿ, ಕರ್ಣಗಳಲ್ಲಿ ಮಕರಕುಂಡಲು, ತ್ರಿನೇತ್ರವುಳ್ಳವರಾಗಿದ್ದು ಕೊರಳಲ್ಲಿ ರುದ್ರಾಕ್ಷಿ ಸರ, ಶಿರಸ್ಸು, ಕೊರಳು, ಕೈ ಭುಜಗಳಲ್ಲಿ ಆಭರಣದಾರಣೆ ಇರುವುದನ್ನು ಕಾಣಬಹುದು. ನಾಲ್ಕು ಕಂಬಗಳ ಮಧ್ಯದಲ್ಲಿ ನಿಂತ ರೇಣುಕಾಚಾರ್ಯರ ತೇಜೋಮಯವಾಗಿದ್ದು ಭಕ್ತ ಜನ ಸಮೂಹವನ್ನು ಆಕರ್ಷಿಸುತ್ತಾರೆ.

ಚಿತ್ರ ೧.೩೪ : ರೇಣುಕಾಚಾರ್ಯರು (ಪುಟ ೪೫)

ಸ್ವಾಮಿಗಳವರ ಮತ್ತೊಂದು ಚಿತ್ರ ರಾಜರಾಜೇಶ್ವರಿ (೧೯೩೫) ಕ್ಯಾಲೆಂಡರ್ ಆಯಿತು. ಅರಮನೆಯಲ್ಲಿರುವ ಚಿತ್ರಕ್ಕೆ ಇದಕ್ಕೂ ಅಗಾಧ ವ್ಯತ್ಯಾಸವಿದೆ. ಈ ಕ್ಯಾಲೆಂಡರ್ ಚಿತ್ರದಲ್ಲಿ ರಾಜರಾಜೇಶ್ವರಿಯ ಹಿಂದೆ ಶಯನದಲ್ಲಿರುವ ಪರಮೇಶ್ವರನಿಲ್ಲ. ತೂಗು ಉಯ್ಯಾಲೆ ಇಲ್ಲ.

ಆದರೆ ಚಾಮರಧಾರಿಣಿಯರು ಮಾತ್ರ ಇದ್ದಾರೆ. ಆ ಸ್ವಾಮಿಗಳು ರಚಿಸಿರುವ ಎಲ್ಲಾ ಲಕ್ಷ್ಮಿ, ಸರಸ್ವತಿಯರಲ್ಲಿ ಒಂದೇ ತೆರನಾದ ಮುಖ, ಉಡುಪುಗಳು, ಅವುಗಳಿಗೆ ಬಳಸಿರುವ ವರ್ಣವಿನ್ಯಾಸವು ಸಹ ಇವರ ಚಿತ್ರಗಳಲ್ಲಿ ಕಾಣಬಹುದು. ಆದರೆ ಜಗನ್ಮೋಹನ ಬಂಗಲೆಯಲ್ಲಿರುವ ರಾಜ ರವಿವರ್ಮರ ಚಿತ್ರಗಳಾದ ದ್ರೌಪದಿ, ಕೀಚಕ (೧೯೦೬) ಪ್ರಸಂಗದಲ್ಲಿ ಸೈರಂಧ್ರಿಗೆ ಕೀಚಕನ ಬಳಿ ಹೋಗಲು ತಿಳಿಸುವ ಪ್ರಸಂಗ, ಹಾಗೆಯೇ ಸೈರಂಧ್ರಿಯು ಒಲ್ಲದ ಮನಸ್ಸಿಲ್ಲದ ಮನಸ್ಸಿನಿಂದ ಹಾಲಿನ ಬಟ್ಟಲನ್ನು ಹಿಡಿದು ಹೋಗುವ ದೃಶ್ಯ. ಎರಡರಲ್ಲಿ ಸೈರಂಧ್ರಿಯ ಮುಖ ಹೋಲಿಕೆ ಇಲ್ಲದಿರುವುದು ಸ್ಪಷ್ಟವಾಗಿ ಕಾಣುತ್ತೇವೆ. ಸ್ವಾಮಿಗಳು ಯಾವುದೇ ದೇವತೆ ಚಿತ್ರ ಬರೆಯುವಾಗಲೂ ಅವುಗಳನ್ನು ಧ್ಯಾನಶ್ಲೋಕದ ಆಧಾರದ ಮೇಲೆ ತಾಲಮಾನದ ಅಳತೆಗಳನ್ನು ಅನುಸರಿಸಿ ರಚಿಸುತ್ತಿದ್ದ ಕಾರಣ, ಅವುಗಳ ಮುಖ, ಅಂಗಾಂಗ ವಿನ್ಯಾಸ, ಬಣ್ಣ, ಉಡುಪು ಸಂದರ್ಭಕ್ಕೆ ಅನುಸಾರವಾಗಿ ರೂಪುಗೊಂಡಿರುತ್ತಿದ್ದವು.

ಚಿತ್ರ ೧.೩೫ : ಬಸವೇಶ್ವರರು
(ಪುಟ ೪೭)

ಖಾಸಗೀ ಸಂಗ್ರಹದಲ್ಲಿರುವ ಬಸವೇಶ್ವರ ತೈಲ ಚಿತ್ರದಲ್ಲಿ ಬಸವಣ್ಣ ಮಂತ್ರಿಯಾಗಿದ್ದ ಕಾರಣ ಕಿರೀಟ, ಬೆಲೆಬಾಳುವ ವಸ್ತ್ರ–ಆಭರಣಗಳುಳ್ಳ ಶ್ರೀಮಂತರ ಚಿತ್ರದಂತಿದೆ. ಈ ಚಿತ್ರವು ಕಲಾದೃಷ್ಟಿ ಯಿಂದಲೂ ಉತ್ತಮ ವಿನ್ಯಾಸವಾಗಿದೆ.

ಕ್ಯಾಲೆಂಡರ್ ಚಿತ್ರಗಳಿಗೇನೋ ಬೇಡಿಕೆ ಹೆಚ್ಚಾಗಿತ್ತು. ಆದರೆ ಸ್ವಾಮಿಗಳವರಿಗೆ ಅರಮನೆಯ ಕೆಲಸದ ಮಧ್ಯೆ ಆ ಬೇಡಿಕೆಯನ್ನು ಪೂರೈಸಲು ಸಮಯಾವಕಾಶ ಇರಲಿಲ್ಲ. ದರ್ಬಾರ್ ಹಾಲಿನಲ್ಲಿ ದೇವತಾ ಮೂರ್ತಿಗಳ ಕಲಾರಚನೆ ಅತ್ಯಗತ್ಯವಾಗಿತ್ತು. ಹಾಗೆಯೇ ಅರಮನೆಯ ಸರ್ವಾಂಗೀಣ ಕಲಾರಚನೆಯ ಶಿಲ್ಪಗಳ ಒತ್ತಡ ಹೆಚ್ಚಿದ್ದರಿಂದ ೧೯೪೧ರ ಲಿಂಗೋದ್ಭವ ಮೂರ್ತಿಯೇ ಅಂತಿಮ ಕ್ಯಾಲೆಂಡರ್ ಚಿತ್ರವಾಯಿತು.

ಕಲಾರಚನೆಯಲ್ಲಿ ತೊಡಗಿದ್ದ ಸ್ವಾಮಿಗಳವರನ್ನು ದರ್ಶಿಸಲು ಸ್ವತಃ ಮಹಾರಾಜರೇ ಶ್ರೀಮಠಕ್ಕೆ ಬರುತ್ತಿದ್ದರು. ಆಗ ಗುರುಕುಲದಲ್ಲಿ ನಡೆಯುತ್ತಿದ್ದ ದೇವಾಲಯ ನಿರ್ಮಾಣದಲ್ಲಿ ಶಿಲಾಕೆತ್ತನೆಯ ಪ್ರಗತಿಯನ್ನು ವೀಕ್ಷಿಸುತ್ತಿದ್ದರು. ಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಸ್ವಾಮಿಗಳೊಡನೆ ಸಮಾಲೋಚಿಸುತ್ತಿದ್ದರು. ಸ್ವಾಮಿಗಳು ಅರಮನೆಗೆ ಬಂದು ಹೋಗುವುದಕ್ಕೆ ಕಾರಿನ ವ್ಯವಸ್ಥೆ ಸಹ ಮಾಡಿದ್ದರು.

ಸ್ವಾಮಿಗಳು ಯಾವುದೇ ಕಲಾರಚನೆ ಮಾಡಬೇಕಾದರೆ ಅಥವಾ ಮಹಾರಾಜರಿಗೆ ಸಲಹೆ ನೀಡಬೇಕಾದರೆ, ಅವುಗಳ ಪೂರ್ವಾಪರ ಆಳವಾಗಿ ಅಧ್ಯಯನ ಮಾಡಿ ಚಿತ್ರದ ರಚನೆ ಅದರ ಅವಶ್ಯಕತೆ, ರಾಜಾಸ್ಥಾನಕ್ಕೆ ಹೇಗೆ ಪೂರಕವಾಗುತ್ತದೆ ಎಂಬುದನ್ನು ಶಾಸ್ತ್ರಾಧಾರ ಸಹಿತವಾಗಿ ವಿವರ ಸಲ್ಲಿಸುತ್ತಿದ್ದರು. ಆ ಒಂದೊಂದು ಮೂರ್ತಿಯ ಹಲವಾರು ವಿವಿಧ ಭಂಗಿಗಳನ್ನು ರೇಖಿಸಿ (sketch) ಅಂತಿಮವಾಗಿ ಒಂದನ್ನು ಆರಿಸಿ ಅವುಗಳಿಗೆ ಪ್ರಾರಂಭಿಕ ವರ್ಣ ಲೇಪನ ಮಾಡಿ, ಅವುಗಳು ಶಾಸ್ತ್ರಕ್ಕೆ ಅನುಗುಣವಾಗಿ ಪರಾಮರ್ಶಿಸಿದ ನಂತರ ದೊಡ್ಡ ಪ್ರಮಾಣದಲ್ಲಿ ಚಿತ್ರಿಸುತ್ತಿದ್ದರು. ಶಾಸ್ತ್ರಾಧ್ಯಯನಕ್ಕೆ ಪೂರಕವಾದ ಗ್ರಂಥಗಳ ರಾಶಿಯೇ ಅವರಲ್ಲಿತ್ತು. ಅವುಗಳ ಸತತ ಅಧ್ಯಯನ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಕಲ್ಗೆಲಸ, ಬೆಳ್ಳಿ ಮತ್ತು ಚಿನ್ನದಲ್ಲಿ ವಿಗ್ರಹ ಮತ್ತು ನಕಾಸೆ ಕೆಲಸ, ಎರಕ ಮತ್ತು ನಕಾಸೆ ಕೆಲಸ, ವರ್ಣಚಿತ್ರರಚನೆ ಜೊತೆಗೆ ಗುರುಪೀಠದ ಹೊಣೆಗಾರಿಕೆ ನಿರ್ವಹಣೆ ಇವು ಅವರ ದಿನನಿತ್ಯದ ಚಟುವಟಿಕೆಯಾಗಿತ್ತು.

ಚಿತ್ರ ೧.೩೬ : ಜಗದ್ಗುರು ನಾಗಲಿಂಗ ಸ್ವಾಮಿಗಳ ಪೀಠಾಧ್ಯಕ್ಷರಾದ ಶಿಲ್ಪಸಿದ್ಧಾಂತಿ, ಶಿವಯೋಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳು (ಪುಟ ೪೮, ಛಾಯಾಚಿತ್ರ)





ಚಿತ್ರ ೧. ೧ : ರಾಜರಾಜೇಶ್ವರಿ



ಚಿತ್ರ ೧. ೨ : ಅಷ್ಟಭುಜ ಕಾಳಿಕಾದೇವಿ



ಚಿತ್ರ ೧. ೩ : ನವದುರ್ಗಾ ದೇವಿ



ಚಿತ್ರ ೧. ೪ : ಮಹಿಷ ಮರ್ದಿನಿ



ಚಿತ್ರ ೧. ೫ : ಸರಸ್ವತೀ



ಚಿತ್ರ ೧. ೬ : ಮಹಾಲಕ್ಷ್ಮೀ




ಚಿತ್ರ ೧. ೭ : ಭುವನೇಶ್ವರಿ ದೇವಿ



ಚಿತ್ರ ೧. ೮ : ಗಾಯತ್ರೀದೇವಿ (ತ್ರಿಶಕ್ತಿ ದೇವಿಯರೊಂದಿಗೆ)



ಚಿತ್ರ ೧. ೯ : ವರ್ಣಚಿತ್ರಗಳಲ್ಲಿರುವ ಕಿರೀಟ, ಹಾರ ಮತ್ತು ಕಟಿಬಂಧಗಳ ವೈವಿಧ್ಯಗಳು




ಚಿತ್ರ ೧. ೧೦ : ಮೇಲ್ಛಾವಣಿಯ ಚಿತ್ರ–೧



ಚಿತ್ರ ೧. ೧೧ : ಮೇಲ್ಚಾವಣಿಯ ಚಿತ್ರ–೨



ಚಿತ್ರ ೧. ೧೨ : ಮೇಲ್ಛಾವಣಿಯ ಚಿತ್ರ-೩



ಚಿತ್ರ ೧. ೧೩ : ಮೇಲ್ಛಾವಣಿಯ ಚಿತ್ರ-೪



ಚಿತ್ರ ೧. ೧೪ : ಏಕಮುಖ ಈಶ್ವರ (ತೈಲವರ್ಣ)



ಚಿತ್ರ ೧. ೧೫ : ತ್ರಿಮುಖ ಈಶ್ವರ (ತೈಲವರ್ಣ)



ಚಿತ್ರ ೧. ೧೬ : ಸರಸ್ವತೀ (೨)



ಚಿತ್ರ ೧. ೧೭ : ಭಿಕ್ಷಾಟನಾ ಮೂರ್ತಿ



ಚಿತ್ರ ೧. ೧೮ : ಪಾರ್ವತೀ ಪರಮೇಶ್ವರರು



ಚಿತ್ರ ೧. ೧೯ : ಅಶೋಕ ವನದಲ್ಲಿ ಹನುಮಂತ



ಚಿತ್ರ ೧. ೨೦ : ನಾಗಲಿಂಗ ದೇವರು ಶಿಲ್ಪಶಾಸ್ತ್ರದ ಅನುಸಾರ
ತಯಾರಿಸಿರುವ ರತ್ನಪದಕವನ್ನು ದಾನೀಶ ಮಹಾರಾಜನಿಗೆ ಅರ್ಪಿಸುತ್ತಿರುವುದು. ರಾಣಿ ಶಿಲ್ಪಿಯನ್ನು ಗಮನಿಸುತ್ತಿದ್ದಾಳೆ.



ಚಿತ್ರ ೧. ೨೧ : ಕಾಮಾಂಧ ರಾಣಿ ನಾಗಲಿಂಗ ದೇವನನ್ನು ಕ್ರೀಡಾ ಪ್ರಪಂಚಕ್ಕೆ ಸೆಳೆಯುತ್ತಿರುವುದು



ಚಿತ್ರ ೧. ೨೨ : ಪತಿಯಾಗಮನವನ್ನು ಅರಿತ ರಾಣಿಯು ನಾಗಲಿಂಗ ದೇವರಲ್ಲಿ ಪೂಜ್ಯ ಜಂಗಮ ಭಾವವನ್ನು ತೋರಿ ಬೀಳ್ಕೊಡುವುದು



ಚಿತ್ರ ೧. ೨೩ : ಶಿವದೀಕ್ಷಾ ಕಾಲದಲ್ಲಿ ಗುರು ಶಾಂತಯ್ಯ ಮುಂತಾದವರು ನಾಗಲಿಂಗ ದೇವರ
ಕರಸ್ಥಲದಲ್ಲಿ ಶಿವಲಿಂಗ ಕಂಡು ಅಚ್ಚಪಡುವುದು



ಚಿತ್ರ ೧. ೨೪ : ನಾಗಲಿಂಗ ದೇವರಿಗೆ ಪಾರ್ವತಿ ಪರಮೇಶ್ವರರ ಸಾಕ್ಷಾತ್ಕಾರ



ಚಿತ್ರ ೧. ೨೫ : ಮೃತ್ಯುಂಜಯ ರಾಜನು ನಾಗಲಿಂಗ ಸ್ವಾಮಿಗಳ ಕತ್ತರಿಸಲು ಪ್ರಯತ್ನಿಸಿದಾಗ ವ್ಯರ್ಥವಾದದ್ದು



ಚಿತ್ರ ೧. ೨೬ : ಮಹಾನದಿಯ ಪಾತ್ರದಲ್ಲಿ ಅಂಬಿಗ ಮತ್ತು ಶಿಷ್ಯರನೊಂದಿಗೆ ನಾಗಲಿಂಗ ಸ್ವಾಮಿಗಳು



ಚಿತ್ರ ೧. ೨೭ : ನಾಗಲಿಂಗದೇವರಿಂದ ಕುಷ್ಟರೋಗವನ್ನು ಪರಿಹರಿಸಿಕೊಂಡ ಗೃಹಸ್ಥನು
ಪತ್ನಿಯೊಂದಿಗೆ ಸ್ವಾಮಿಗಳಿಗೆ ನಮಸ್ಕರಿಸುತ್ತಿರುವುದು



ಚಿತ್ರ ೧. ೨೮ : ಶ್ವಪಚನೊಬ್ಬ ಅರ್ಪಿಸಿದ ಶ್ಯಾವಿಗೆಯನ್ನು ಘಟಸರ್ಪವನ್ನಾಗಿ ಮಾಡಿ ಎಡಗೈಯಲ್ಲಿ ಧರಿಸಿರುವುದು.



ಚಿತ್ರ ೧. ೨೯ : ಸ್ವಾಮಿಗಳ ಕರಸ್ಥಲ ಲಿಂಗವನ್ನು ಕಾಲುಬೆರಳಿಗೆ ಕಟ್ಟಿದಾಗ ಗುರುಶಾಂತಯ್ಯ ಅಚ್ಚರಿಪಡುವುದು



ಚಿತ್ರ ೧. ೩೦ : ಶ್ರೀ ಜಗದ್ಗುರು ಕಸ್ಥಲ ನಾಗಲಿಂಗಸ್ವಾಮಿಗಳು



ಚಿತ್ರ ೧. ೩೧ : ಜಯಚಾಮರಾಜೇಂದ್ರ ಒಡೆಯರ್ ಅವರು



ಚಿತ್ರ ೧. ೩೨ : ಕೈಲಾಸ ಶಂಕರ (೧೯೨೮)



ಚಿತ್ರ ೧. ೩೩ : ಪಂಚವಕ್ತ್ರೇಶ್ವರ



ಚಿತ್ರ ೧. ೩೪ : ರೇಣುಕಾಚಾರ್ಯರು



ಚಿತ್ರ ೧. ೩೫ : ಬಸವೇಶ್ವರರು



ಚಿತ್ರ ೧. ೩೬ : ಅಧ್ಯಯನ ನಿರತ ಶಿಲ್ಪ ಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು

೨

‘ಮಾನಸಾರ’ಕ್ಕೆ ಶಾಸ್ತ್ರೀಯ ಚಿತ್ರಗಳು

ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಪುರಾತತ್ತ್ವಶಾಸ್ತ್ರ ಮತ್ತು ಸಂಸ್ಕೃತ ವಿಭಾಗಗಳ ಮುಖ್ಯಸ್ಥರಾಗಿದ್ದ ಪ್ರೊ॥ ಪ್ರಸನ್ನಕುಮಾರ ಆಚಾರ್ಯ ಅವರು ಇಂಗ್ಲೆಂಡಿನ ಆಕ್ಸ್‌ಫರ್ಡ ಯೂನಿವರ್ಸಿಟಿಯಲ್ಲಿ ತಮ್ಮ ಪಿ.ಎಚ್‌ಡಿ., ಪದವಿಯ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು ‘ಮನಸಾರ’ ಎಂಬ ಶಿಲ್ಪಶಾಸ್ತ್ರ ಗ್ರಂಥ. ಈ ಗ್ರಂಥವನ್ನು ನಂತರದಲ್ಲಿ ತಮ್ಮ ಡಿ.ಲಿಟ್., ಪದವಿಗೂ ಪ್ರೊ. ಆಚಾರ್ಯರು ಅಧ್ಯಯನ ಮಾಡಿದರು. ಪ್ರೊ॥ ಆಚಾರ್ಯರು ತಮ್ಮ ಜೀವನ ಪರ್ಯಂತ ಮನಸಾರದ ಬಗ್ಗೆ ಅನ್ವೇಷಣೆಯನ್ನು ನಡೆಸಿದ್ದಾರೆ. ಪ್ರಸ್ತುತ ಏಳು ಸಂಪುಟಗಳಲ್ಲಿ ಈ ಶಿಲ್ಪಶಾಸ್ತ್ರಗ್ರಂಥವು ಇಂಗ್ಲಿಷಿನಲ್ಲಿ ಪ್ರಕಟವಾಗಿದೆ. ಈ ಶಾಸ್ತ್ರಗ್ರಂಥಕ್ಕೆ ಈಗ ಪ್ರಪಂಚ ಪ್ರಖ್ಯಾತಿ ಇದೆ. ಈ ರೀತಿ ಸಮಗ್ರ ಅಧ್ಯಯನಕ್ಕೆ ಒಳಪಟ್ಟಿರುವ ಭಾರತದ ಇನ್ನೊಂದು ಶಿಲ್ಪಶಾಸ್ತ್ರ ಗ್ರಂಥ ಇಂದಿಗೂ ಇಲ್ಲವೇ ಇಲ್ಲ ! ಇದು ಮೊದಲು ಪ್ರಕಟವಾದದ್ದು ಇಂಗ್ಲೆಂಡಿನ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ–೧೯೩೩ರಲ್ಲಿ. ಪ್ರೊ. ಆಚಾರ್ಯರ ಬಯಕೆಯಂತೆ ಭಾರತವನ್ನು ಆಳುತ್ತಿದ್ದ ಆಗಿನ ಇಂಗ್ಲಿಷ್ ಸರ್ಕಾರವು ಈ ಶಾಸ್ತ್ರದಲ್ಲಿ ವಿವರಿಸಿರುವ ಸ್ವಸ್ತಿಕ ನಿಲಯ ಎಂಬ ಜಾತಿಯ ಅತಿಥಿಗೃಹದ ನಿರ್ಮಾಣಕ್ಕೂ ಆರ್ಥಿಕ ಸಹಾಯ ನೀಡಿ ಅಲಹಾಬಾದಿನಲ್ಲಿ ಈ ಕಟ್ಟಡವನ್ನು ನಿರ್ಮಾಣ ಮಾಡಿಸಿತು. ಗ್ರೀಸ್ ವಾಸ್ತು ಶಿಲ್ಪಿ ವಿಟ್ರೂವಿಯಸ್‌ನ ವಾಸ್ತುಶಿಲ್ಪ ಸೂತ್ರಗಳೊಂದಿಗೆ ಮಾನಸಾರದ ಕಟ್ಟಡ ನಿರ್ಮಾಣ ಸೂತ್ರಗಳನ್ನು ಪ್ರೊ॥ ಆಚಾರ್ಯರು ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ. ಮನಸಾರದ ಶ್ರೇಷ್ಠತೆಯನ್ನು ನಿರ್ಮಾಣ ಪದ್ಧತಿ, ಇತಿಹಾಸ ಮತ್ತು ಕಲಾದೃಷ್ಟಿಯ ತ್ರಿಪುಟಿಯಿಂದ ಸಾಧಿಸಿ ಈ ವಿಷಯದ ಬಗ್ಗೆ ತಮ್ಮ ಅಧ್ಯಯನದ ಸಾರವನ್ನು ವಿಶ್ವದ ವಿದ್ವದ್ ಲೋಕದ ಮುಂದೆ ಮಂಡಿಸಿದ್ದಾರೆ.

ಈ ಗ್ರಂಥದ ಮುನ್ನುಡಿಯಲ್ಲಿ ಒಂದು ಸಂಗತಿಯನ್ನು ಪ್ರೊ॥ ಆಚಾರ್ಯರು ಹೇಳಿದ್ದಾರೆ.

ಕಟ್ಟಡಗಳ ಸಂಬಂಧದಲ್ಲಿ ಚಿತ್ರಗಳನ್ನು ಒದಗಿಸುವುದರಲ್ಲಿ ಹೆಚ್ಚು ತೊಂದರೆಯನ್ನು ನಾನು ಅನುಭವಿಸಲಿಲ್ಲ. ಆದರೆ ಮೂರ್ತಿಶಿಲ್ಪದ ಭಾಗದ ಬಗ್ಗೆ ತುಂಬಾ ಹಿಂಸೆಯನ್ನು ಅನುಭವಿಸಿದ್ದೇನೆ. ಕಟ್ಟಡ ಚಿತ್ರಗಳ ಸಿದ್ಧತೆಗೆ ನಾನು–ರೇಖಾಚಿತ್ರಕಾರರೊಂದಿಗೆ ಚರ್ಚಿಸುವುದು ಸಾಧ್ಯವಿತ್ತು. ಆದರೆ ಪ್ರತಿಮಾ ಶಿಲ್ಪದ ಸಂಬಂಧದಲ್ಲಿ ಇದು ಅಸಾಧ್ಯವಾಗಿತ್ತು. ಭಾರತದ ಆದ್ಯಂತ ಹೊಸ ಶಿಲ್ಪಿಗಳು, ಚಿತ್ರಗಾರರು ಬೆಳಕಿಗೆ ಬರುತ್ತಿದ್ದಾರೆ. ಮುಂಬೈ, ಬರೋಡ, ದೆಹಲಿ, ಲಾಹೋರ್, ಲಕ್ನೋ, ಅಲಹಾಬಾದ್, ಅಜ್ಮೀರ್, ಜೈಪುರ್, ಜೋಧ್‌ಪುರ್, ಕಲ್ಕತ್ತಾ, ಷಿಲ್ಲಾಂಗ್, ಕಟಕ್, ಪುರಿ, ಮದರಾಸು, ಬೆಂಗಳೂರುಗಳಲ್ಲಿ ಇವರು ಬಹುಳವಾಗಿದ್ದಾರೆ. ಆದರೂ ಅವರೊಂದಿಗೆ ಮಾತು, ಚರ್ಚೆಗೆ ಅವರು ಅಂಗೀಕರಿಸುತ್ತಿರಲಿಲ್ಲ. ಅವರೇ ಸ್ವತಂತ್ರರಾಗಿ ಈ ಚಿತ್ರಗಳನ್ನು ಬರೆದುಕೊಡಲು ನಿರಾಕರಿಸುತ್ತಿದ್ದರು. ಬರೆಯುತ್ತೇವೆ ಎಂದು ಅಂಗೀಕರಿಸಿದ ಒಂದು ಕೈ ಬೆರಳೆಣಿಕೆ ಮಂದಿ ಚಿತ್ರಕಾರರು ಒಂದೆರಡು ತಿಂಗಳುಗಳಲ್ಲಿ ಸಾಧ್ಯವಿಲ್ಲ ಎಂದು ಶಾಸ್ತ್ರದ ಕರಡನ್ನು ಹಿಂತಿರುಗಿಸುತ್ತಿದ್ದರು. ಅಂತಿಮವಾಗಿ ಮೈಸೂರಿನ ಆರ್ಕಿಯಾಲಜಿ

(ಪುರಾತತ್ತ್ವಶಾಸ್ತ್ರ)ಯ ಪ್ರೊ॥ ಎಂ.ಎಚ್. ಕೃಷ್ಣ ಅವರು ನನಗಾಗಿ ಸ್ಥಳೀಯ ಕೆಲವು ಶಿಲ್ಪಿಗಳನ್ನು ಸಂಪರ್ಕಿಸಿದರು. ಕೊನೆಗೂ ಕರಸ್ಥಲ ನಾಗಲಿಂಗ ಸ್ವಾಮಿಗಳ ಗುರುಪೀಠದ ಅಧ್ಯಕ್ಷರಾಗಿದ್ದ ಶಿಲ್ಪಸಿದ್ಧಾಂತಿ ಶಿವಯೋಗಿ ಸಿದ್ಧಲಿಂಗಸ್ವಾಮಿ ಅವರನ್ನು ಪರಿಚಯವನ್ನು ಮಾಡಿಸಿದರು. ಪಾರಂಪರಿಕ ಶಿಲ್ಪಿಗಳಾಗಿದ್ದ ಶ್ರೀ ಸ್ವಾಮಿಗಳು ಶಿಲಾಶಿಲ್ಪ, ವರ್ಣಚಿತ್ರ ರಚನೆ, ಶಾಸ್ತ್ರಾಭ್ಯಾಸಗಳನ್ನು ತಮ್ಮ ಗುರುಗಳ ಪದತಲದಲ್ಲಿ ಅಧ್ಯಯನ ಮಾಡಿದ್ದು ಮಾತ್ರವಲ್ಲ, ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಅನೇಕ ತರುಣರಿಗೆ ಸಾಂಪ್ರದಾಯಿಕ ಪದ್ಧತಿಯಲ್ಲಿ ಶಿಲಾಶಿಲ್ಪ, ಲೋಹ ಶಿಲ್ಪರಚನೆ, ವರ್ಣಚಿತ್ರ ರಚನೆಗಳನ್ನು ಬೋಧಿಸಿ ಶಿಲ್ಪಿಗಳನ್ನಾಗಿ ಸಿದ್ಧಪಡಿಸಿದ್ದರು. ಅವರು ಆರು ತಿಂಗಳ ಅವಧಿಯಲ್ಲಿ ಇಪ್ಪತ್ತೊಂದು ಚಿತ್ರಗಳನ್ನು ಮಾತ್ರವೇ ರಚಿಸಿಕೊಟ್ಟಿದ್ದಾರೆ. ನಾನು ಭೇಟಿಯಾದ ಶಿಲ್ಪಿಗಳೆಲ್ಲೆಲ್ಲಾ ಇವರು ಬಹು ಶಾಂತಚಿತ್ತರಾಗಿ ತಾಳ್ಮೆಯಿಂದ ಸ್ಥೈರ್ಯ-ಧೈರ್ಯಗಳೊಂದಿಗೆ ಶಾಸ್ತ್ರವನ್ನು ವಿಶ್ಲೇಷಿಸಿದ ಫಲವಾಗಿ ಪ್ರತಿಮಾಶಿಲ್ಪದ ಈ ಭಾಗವನ್ನು ಅಲಂಕರಿಸಲು ಕೆಲವಾದರೂ ಚಿತ್ರಗಳು ಲಭಿಸಿವೆ. ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಈ ಮಾತುಗಳಿಂದಲೇ ಶ್ರೀ ಸಿದ್ಧಲಿಂಗಸ್ವಾಮಿಗಳ ಚಿತ್ರಗಳ ವೈಶಿಷ್ಟ್ಯವನ್ನು ಪೂರ್ಣವಾಗಿ ಗ್ರಹಿಸುವುದು ಅಸಾಧ್ಯ. 'ಚಿತ್ರ ಬರೆಯುವುದರಲ್ಲಿ ವಿಶೇಷವೇನು? ಸಂಪಾದಕರು ಹೇಳಿದಂತೆ ಬರೆಯುವುದಕ್ಕೆ ಯಾವ ವಿಶೇಷತೆಯ ಅವಶ್ಯವಿದೆ? ಹೆಚ್ಚೆಂದರೆ ಸ್ವಲ್ಪ ಸಮಯ ಬೇಕಾಗಬಹುದು ಅಷ್ಟೆ !' ಎಂದು ಯಾರಾದರೂ ಭಾವಿಸಿ ಪ್ರಶ್ನಿಸುವುದು ಸಾಧ್ಯವಿದೆ.

ವಿಷಯ ನಿಜಕ್ಕೂ ಇಷ್ಟು ಸುಲಭವಲ್ಲ. ಶಾಸ್ತ್ರದಲ್ಲಿ ಪ್ರತಿಮಾಲಕ್ಷಣದ ವಿವರಣೆ ಪೂರ್ಣವಾಗಿರುತ್ತದೆ. ಪ್ರತಿಮೆಯ ಭಂಗಿ (ನಿಂತಿರುವುದು, ಇತರ ಬಗೆಯ ಆಸನದಲ್ಲಿರುವುದು ಇತ್ಯಾದಿ.) ಆಯುಧಗಳು, ಹಸ್ತಮುದ್ರೆಗಳು, ಅಲಂಕರಣ, ಜೊತೆಯಲ್ಲಿರಬಹುದಾದವರು ಇತ್ಯಾದಿ ವಿವರ ಸಂಸ್ಕೃತ ಶ್ಲೋಕ ರೂಪದಲ್ಲಿ ತೀರಾ ಹ್ರಸ್ವವಾಗಿರುವುದರಿಂದ ಎಲ್ಲವನ್ನೂ ಗ್ರಹಿಸುವುದು ಅನುಭವಜ್ಞ ಶಿಲ್ಪಿಯಿಂದ, ಶಾಸ್ತ್ರದ ತಿಳಿವಿನಿಂದ ಮಾತ್ರ ಸಾಧ್ಯ. ***ಸರ್ವಾಭರಣ ಭೂಷಿತಾಂ*** ಎಂದು ಹೇಳಿದರೆ ಪ್ರತಿಮೆಗೆ ಸೂಕ್ತವಾದ ಎಲ್ಲಾ ಆಭರಣಗಳಿಂದಲೂ ಅಲಂಕರಿಸುವ ಶಾಸ್ತ್ರೀಯ ತಿಳಿವು ಶಿಲ್ಪಿಗೆ ಇರಬೇಕು. ನಿಂತಿರುವಾಗ ಆಭಂಗ, ಸಮಭಂಗ, ಅತಿಭಂಗ ಇತ್ಯಾದಿಗಳು, ಕುಳಿತಿರುವಾಗ ಅರ್ಧಪದ್ಮಾಸನ, ಲಲಿತಾಸನ, ಉತ್ಕುಟಿಕಾಸನ, ಯೋಗಾಸನ, ಸ್ವಸ್ತಿಕಾಸನಗಳ ಅಂತರಗಳು, ಕುಂತಲ, ಮೌಳಿ, ಜಟಾಮಕುಟ, ಜಟಾಭಾರ, ಜಟಾಮಂಡಲ, ಕಿರೀಟ ಮಕುಟ, ಕರಂಡ ಮಕುಟಗಳೆಂಬ ಶಿರೋಲಂಕಾರಗಳಲ್ಲಿರುವ ವೈಶಿಷ್ಟ್ಯಗಳೂ, ಛನ್ನವೀರ, ಯಜ್ಞೋಪವೀತಗಳ ಮಧ್ಯೆ ಇರುವ ವಿನ್ಯಾಸದ ಅಂತರಗಳು ಹೀಗೆ ಸಾವಿರಾರು ತಾಂತ್ರಿಕ ವಿನ್ಯಾಸಗಳ ತಿಳಿವು ನಿಚ್ಚಳವಾಗಿರಬೇಕು. ಇವೆಲ್ಲಕ್ಕಿಂತಲೂ ಮಿಗಿಲಾಗಿ ತಾಲಮಾನಕ್ರಮದ ಅಳತೆಗಳ ಪೂರ್ಣತಿಳಿವು, ಅದನ್ನು ಬಳಸಿಕೊಂಡು ಪ್ರತಿಮೆಯ ರೇಖಾಚಿತ್ರವನ್ನು ಸಿದ್ಧಪಡಿಸಲು ಬೇಕಾಗಿರುವ ಸೂತ್ರವಿನ್ಯಾಸದ ಜ್ಞಾನ ಇರಬೇಕು. ಎಂದರೆ ಶಿಲ್ಪಿಯು ಶಾಸ್ತ್ರೀಯವಾಗಿ ಶಿಲ್ಪಶಾಸ್ತ್ರವನ್ನು ಅಧ್ಯಯನ ಮಾಡಿರಬೇಕಾದುದು ಅನಿವಾರ್ಯ. ಈ ವಿವರಗಳನ್ನು ಗ್ರಂಥದ ಸಂಪಾದಕರು ಕ್ವಚಿತ್ತಾಗಿ ಹೇಳಬಹುದಷ್ಟೆ !

ಭಾರತದಲ್ಲಿ ಮೆಕಾಲೇ ಶಿಕ್ಷಣ ಪದ್ಧತಿಯು ರೂಢಿಗೆ ಬಂದ ತರುವಾಯ ಪಾರಂಪರಿಕವಾಗಿ ನಡೆದು ಬರುತ್ತಿದ್ದ ಶಿಲ್ಪಗುರುಕುಲಗಳು ನಾಶವಾಗಿ, ಆ ತಿಳಿವು ಸಾಗಿಬರಲು ಪರ್ಯಾಯ ಮಾರ್ಗವೂ ರೂಪಿತವಾಗದೆ ಈ ಶಾಸ್ತ್ರಾಧ್ಯಯನ ತಲೆಮಾರಿನಿಂದ ತಲೆಮಾರಿಗೆ ಕ್ಷೀಣಿಸುತ್ತಾ ಈಗ ಇಲ್ಲದಂತಾಗಿರುವುದೇ ಪ್ರೊ॥ ಪ್ರಸನ್ನಕುಮಾರ ಆಚಾರ್ಯವನ್ನು ಭೂತವನ್ನಾಗಿ ಕಾಡುತ್ತಿದ್ದದ್ದು. ಶಿಲ್ಪಿಗಳು, ಚಿತ್ರಕಾರರು ಇದ್ದರೂ ಅವರಿಗೆ ಪರಂಪರೆಯ ಜ್ಞಾನ ಇರಲಿಲ್ಲ. ಅದನ್ನು ತಿಳಿದುಕೊಳ್ಳುವ ಮಾರ್ಗವೂ ಅವರಿಗೆ ಮುಚ್ಚಿಹೋಗಿತ್ತು. ಆದರೂ ಪರಂಪರೆಯ ತಿಳಿವಿದೆ ಎಂದು ಅವರು ಹೇಳುತ್ತಾ ಸುಳ್ಳಿನ ಮುಖವಾಡ ಧರಿಸಿ ಚಲಾವಣೆಯಲ್ಲಿದ್ದರು.

ಚರ್ಚೆಯಿಂದ ಚಿತ್ರಗಳನ್ನು ಬರೆದುಕೊಡುವುದರಿಂದ ತಮ್ಮ ಪೊಳ್ಳುತನ ಬಹಿರಂಗವಾಗುತ್ತದೆ ಎಂಬ ಭಯ ಅವರನ್ನು ತಡೆದು ನಿಲ್ಲಿಸಿತ್ತು.

ಒಂದು ಸಾಮಾನ್ಯ ಗ್ರಂಥಕ್ಕೆ ಚಿತ್ರಗಳನ್ನು ಬರೆದುಕೊಡುವುದಕ್ಕೂ ಶಿಲ್ಪಶಾಸ್ತ್ರಗ್ರಂಥಕ್ಕೆ ಚಿತ್ರ ಬರೆಯುವುದಕ್ಕೂ ತುಂಬಾ ವ್ಯತ್ಯಾಸವಿದೆ. ಅನೇಕ ಶಿಲ್ಪಿಗಳು ಚಿತ್ರಕಾರರಾಗಿರುವುದಿಲ್ಲ. ಆದ್ದರಿಂದ ಚಿತ್ರ ಬರೆಯಲು ಅವರಿಗೆ ಬರುವುದೇ ಇಲ್ಲ. ಈ ಚಿತ್ರಕಾರನು ಶಿಲ್ಪಶಾಸ್ತ್ರದ ವಿದ್ವಾಂಸನಾಗಿರಬೇಕು. ಅನ್ಯಥಾ ಚಿತ್ರ ಬರೆಯಲು ಸಾಧ್ಯವಾಗುವುದಿಲ್ಲ. ಈ ಚಿತ್ರಗಳಲ್ಲಿ ತೀರಾ ಸಾಧಾರಣವಾದ ಮತ್ತು ಶಿಲ್ಪವನ್ನು ಕಲಿಯುವವರು ಪ್ರಾರಂಭದಲ್ಲಿಯೇ ಅಭ್ಯಾಸ ಮಾಡುವ ***ಪದ್ಮಾಸನ*** ಎಂಬುದರ ಬಗ್ಗೆಯೇ ಸ್ವಲ್ಪ ವಿವರಗಳನ್ನು ತಿಳಿಯೋಣ ಈ ಶಬ್ದದ ಅರ್ಥ ಇಂತಿದೆ :

೧. ಪ್ರತಿಮೆಯ ಕುಳಿತಿರುವ ಭಂಗಿಯಲ್ಲಿ ('ಆಸನ' ಎಂಬ ವಿಧದಲ್ಲಿ) ಪದ್ಮಾಸನವೂ ಒಂದು ಬಗೆ.

೨. ಕಟ್ಟಡ ನಿರ್ಮಾಣದಲ್ಲಿ ಸ್ತಂಭಗಳ ಪ್ರಾರಂಭಕ್ಕೆ ಅಡಿಯಲ್ಲಿ ನಿರ್ಮಿಸುವ ಒಂದು ವಿಧವಾದ ಆಧಾರ.

೩. ಪ್ರತಿಮೆಗೆ ಆಧಾರವಾಗಿ ನಿರ್ಮಿಸುವ ಪೀಠದ ಒಂದು ಬಗೆಯ ವಿನ್ಯಾಸ.

೪. ದೇವ ಮತ್ತು ರಾಜರು ಕುಳಿತುಕೊಳ್ಳಲು ನಿರ್ಮಿಸಬಹುದಾದ ಒಂದು ಬಗೆಯ ಸಿಂಹಾಸನ.

ಉಪರೋಕ್ತ ಪ್ರತಿ ಸಂದರ್ಭದಲ್ಲೂ ಈ ಶಬ್ದಕ್ಕೆ ಪ್ರತ್ಯೇಕ **'ಆಕಾರ'**ವಿರುತ್ತದೆ ! ಸಿಂಹಾಸನದ ಸಂದರ್ಭದಲ್ಲಿ ಮನಸಾರ ಶಿಲ್ಪಶಾಸ್ತ್ರಗ್ರಂಥ ಅಧ್ಯಾಯ ೪೫ರಲ್ಲಿ ಈ ವಿವರಣೆ ಲಭಿಸುತ್ತದೆ –

ಸರ್ವೇಷಾಂ ಮಾನಮಿತ್ಯುಕ್ತಂ ಗಣ್ಯಮಾನಮಿಹೋಚ್ಯತೇ ।
ಸೋಪಾನ ಪೀಠಮಧಿಷ್ಠಾನಂ ಕೇವಲಂ ವಾ ಮಸೂರಕಮ್ ॥ ೪೩ ॥

ಕೇವಲಂ ಚೋಪಪೀಠಂ ವಾ ಕುರ್ಯಾತ್ ಸಿಂಹಾಸನಂ ಬುಧಃ ॥ ೪೪ ॥

ದ್ವಾಂಶಂ ಜನ್ಮ ಶಶಿಸಾರ್ಧೇ ಪದ್ಮ(ಪಾದ)ಕಮ್
ಕಂಪ ಕರ್ಣೇ ಶರಮರ್ಧೇ ಕಂಪಕಮ್ ।
ಅಂಶಮಬ್ಜಂ ಶಶಿ ವಾಜನೋ (ನಮು) ಪರಿ
ಕ್ಷೇಪಣಮರ್ಧೇ ರವಿಭಾಗ ತುಂಗಕೇ ॥ ೪೫ ॥

ವೇದಿಭದ್ರ(ದ್ರಂ) ವಿವಿಧಾ(ಧ) ಕಪೋತಧೃಕ್
ಚೋರ್ಧ್ವಯೋಗಭುವ (ರ್ಗಲಂ ವಿ) ನಾ ಕಪೋತಕೌ ।
ದೇವ ಭೂಪತಿ ಯತ್ಯೋರ್ಯಥಾ ತಥಾಸನೇ
ಯೋಗ್ಯಮೇವ ಕೃತಯ(ಮ)ಸ್ತು ಮೂಲಕೇ ॥ ೪೬ ॥

ಪ್ರಾಸನಸ್ಯೋದಯಾರ್ಧೇ ವಾ ತ್ರಿಭಾಗೈಕೋನಮೇವ ವಾ ।
ಉಪಪೀಠೋದಯಂ ಹ್ಯೇವ ಚೋಕ್ತತುಂಗೇಽಧಿಕಂ ತು ವಾ ॥ ೪೭ ॥

ಶೇಷಂ ಮಸೂರಕಂ ವಾಪಿ ಸಮಾಧಿಷ್ಠಾನ ತುಂಗಕಮ್ ।
ಉತ್ಸೇಧರವಿಭಾಗೇ ತು ಜನ್ಮತುಂಗಂ ಶಿವಾಂಶಕಮ್ ॥ ೪೮ ॥

ತದೂರ್ಧ್ವೇ ಚಾರ್ಧಕಂಪಂ ಸ್ಯಾತ್ಪಾದ(ದಂ) ಭಾಗೇನ ಯೋಜಯೇತ್ ।
ತ್ರಿಪಾದಾಧಿಕಮಂಶೇನ ಮಹಾಪದ್ಮಂ ಪ್ರಯೋಜಯೇತ್ ॥ ೪೯ ॥

ತದೂರ್ಧ್ವೇ ಸಾರ್ಧಭಾಗೇನ ಕರ್ಣ ವೃತ್ತಂ ಚ ಪದ್ಮಕಮ್ ।

ಕಂಧರಂ ಚಾರ್ಧ ಭಾಗೇನ ತತ್ಸಮಂ ಚೋಪರಿಸ್ತ(ತ)ಥಾ ॥ ೫೦ ॥

ಕಂಪವೃತ್ತದಲಂ ಕುರ್ಯಾತ್ತೂರ್ಧ್ವೇಽರ್ಧೇನ ಪದ್ಮಕಮ್ ।
ಏಕಾಂಶ ಕುಂಭವೃತ್ತಂ ಸ್ಯಾತ್ತರ್ಧ್ವೇಽರ್ಧೇನ ಪದ್ಮಕಮ್ ॥ ೫೧ ॥

ತತ್ಸಮೇ[ನ] ನಿಮ್ನವೃತ್ತಂ ಚ ಕಂಪಂ ಕುರ್ಯಾತ್ತದೂರ್ಧ್ವಕೇ ।
ದ್ವಂಶೇನ ಗಲಕಂ ಚೋರ್ಧ್ವೇ ಚಾಂಶೇನ ಕಂಪವೃತ್ತಕಮ್ ॥ ೫೨ ॥

ನಿಮ್ನಂ ಚ ಕಂಪಮರ್ಧೇನ ಚೈಕಾಂಶೇನ ಕಂಪವೃತ್ತಕಮ್ ।
ತದೂರ್ಧ್ವೇ ಚೈಕಭಾಗೇ ತು ಚತುಶ್ಭಾಗ(ಗಂ) ವಿಭಾಜಿತೇ ॥ ೫೩ ॥

ಆಲಿಂಗಾತರಿತಂ ಚೋರ್ಧ್ವೇ ಪ್ರತಿವಾದ(ಜ)ನಮುಚ್ಯತೇ ।
ಯುಕ್ತ್ಯಾ ಚ ವೃತ್ತಕಂಪಂ ಸ್ಯಾತ್ಸರ್ವಾಲಂಕಾರ ಸಂಯುತಮ್ ॥ ೫೪ ॥

ವ್ಯಾಲಾದಿ ಪತ್ರಪುಷ್ಪೈಶ್ಚ ಕರ್ಣೈಶ್ಚ ಮಕರ ಧ್ವಜಮ್ ।
ಕಪೋತೇ ನಾಸಿಕೋಪೇತಂ ಕಿಂಬರೀವಕ್ತ್ರ ಸಂಯುತಮ್ ॥ ೫೫ ॥

ಚತುಷ್ಕರ್ಣೇ ಚ ಯುಕ್ತ್ಯಾ ಚ ಕುರ್ಯಾದ್ ವ(ತ್ ಪ)ಲ್ಲವ ಪತ್ರಕಮ್ ।
ಮಧ್ಯೇ ತತ್ಪತ್ರಮಲಂಕೃತ್ಯ ಸರ್ವಾಲಂಕಾರ ಸಂಯುತಮ್ ॥ ೫೬ ॥

ಗಲೇ ಚ ನಾಟಕೈರ್ಯುಕ್ತಂ ಯಕ್ಷವಿದ್ಯಾಧರಾದಿಭಿಃ ।
ವೃತ್ತಕುಂಭಂ ಚ ಪಟ್ಟಂ ವಾ ಕ (ನಾ)ಟಕಾದಿ(ದಿಭಿ)ರಲಂಕೃತೈಃ(ತಮ್) ॥ ೫೭ ॥

ಪದ್ಮಾಕಾರಂ ತು ಸರ್ವೇಷಾಂ ಕೇಸರಾದಿದಲಾನ್ವಿತಮ್ ।
ಯಥೇಷ್ಟಮಂಶಂ ಗಲತುಂಗಂ ಸ್ಯಾನ್ನಾನಾಪಟ್ಟೈರಲಂಕೃತಮ್ ॥ ೫೮ ॥

ಏತತ್ಪದ್ಮಾಸನಂ ಪ್ರೋಕ್ತಂ ಶಿವ ವಿಷ್ಣುವಾಸನಂ ಭವೇತ್ ।

ಎಲ್ಲ ಬಗೆಯ ಸಿಂಹಾಸನಗಳ ಎತ್ತರ ಮತ್ತು ಅಗಲಗಳನ್ನು ಆಯಾದಿ ಗಣಿತದ ಅನ್ವಯ ತೀರ್ಮಾನ ಮಾಡಿದ ತರುವಾಯ ಅದರ ಭಾಗಗಳ ಎತ್ತರಗಳನ್ನು ಅನುಪಾತದ ಅಳತೆಗಳಾಗಿ ಈ ರೀತಿಯಾಗಿ ನಿಗದಿಪಡಿಸಲಾಗುತ್ತದೆ. ಪೀಠಕ್ಕೆ ಸಿಂಹದ ಕಾಲುಗಳನ್ನು ಅಡಿಯಲ್ಲಿ ರೂಪಿಸಿ ಮೇಲೆ ಅಧಿಷ್ಠಾನವನ್ನು ಸೋಪಾನದೊಂದಿಗೆ ರೂಪಿಸಬೇಕು. ಅಧಿಷ್ಠಾನಕ್ಕೆ ಉಪಪೀಠವನ್ನು ಸೇರಿಸಿ ಅಥವಾ ಇಲ್ಲದೆಯೂ ಸಿಂಹಾಸನವನ್ನು ರೂಪಿಸಬಹುದು.

ಅಧಿಷ್ಠಾನದ ವಿವಿಧ ಭಾಗಗಳ ಎತ್ತರಗಳು ಇಂತಿರುತ್ತವೆ–

೧. ಜನ್ಮ	೧	೧೧. ಪದ್ಮಕ	೧/೪
೨. ಕಂಪ	೧/೪	೧೨. ನಿಮ್ನವೃತ್ತಕ	೧/೪
೩. ಮಹಾಪದ್ಮ	೧ ೩/೪	೧೩. ಕಂಪ	೧/೪
೪. ಕರ್ಣವೃತ್ತ	೧/೪	೧೪. ಗಳ	೨
೫. ಪದ್ಮಕ	೧/೪	೧೫. ಕಂಪವೃತ್ತ	೧
೬. ಕಂಧರ	೧/೨	೧೬. ನಿಮ್ನಕಂಠ	೧/೨
೭. ಕಂಪ	೧/೪	೧೭. ಕಂಪವೃತ್ತ	೧
೮. ವೃತ್ತದಳ	೧/೪	೧೮. ಆಲಿಂಗ	೧/೪
೯ ಪದ್ಮಕ	೧/೪	೧೯. ಅಂತರಿತ	೧/೪
೧೦. ಕುಂಭವೃತ್ತ	೧	೨೦. ಪ್ರತಿವಾಜನ	೧/೪
		೨೧. ಕಂಪವೃತ್ತ	೧/೪

ಒಟ್ಟು ಎತ್ತರ ೧೨ ಭಾಗಗಳು

ಇದನ್ನು ಮಾಲೆ, ಪತ್ರ, ಪುಷ್ಪ, ಮತ್ತು ಕರ್ಣದಲ್ಲಿ ಎರಡು ಮಕರಗಳಿಂದ ಅಲಂಕರಿಸಬೇಕು. ಕಪೋತ ಭಾಗದಲ್ಲಿ ನಾಸಿಕಾಲಂಕಾರವಿರಬೇಕು (ಇಲ್ಲಿ ಕಪೋತ ಎಂಬುದನ್ನು ಸಂಪಾದಕರು pigeon ಎಂದೇ ಅನುವಾದಿಸಿ ಹೇಳಿದ್ದಾರೆ.) ನಾಲ್ಕು ಕರ್ಣ ಭಾಗಗಳಲ್ಲಿ ಪತ್ರ ವಲ್ಲೀ ಪುಷ್ಪಗಳಿಂದ ಅಲಂಕರಿಸಬೇಕು ಗಳ(ಕಂಠ)ಭಾಗದಲ್ಲಿ ಯಕ್ಷ–ವಿದ್ಯಾಧರ ಮುಂತಾದವರ ನಾಟ್ಯದೃಶ್ಯಗಳನ್ನು ಚಿತ್ರಿಸಬೇಕು. ಅದೇ ರೀತಿಯಾಗಿ ವೃತ್ತಕುಂಭದ ಮತ್ತು ಪಟ್ಟದ ಭಾಗದಲ್ಲೂ ಅಲಂಕಾರವನ್ನು ಮಾಡಬೇಕು. ಪದ್ಮಾಕಾರದ ಭಾಗದಲ್ಲಿ ಪದ್ಮದಗಳಗಳ ಅಲಂಕಾರ ಇರಬೇಕು.


ಈ ಪೀಠವು ಶಿವ, ವಿಷ್ಣು ಇತ್ಯಾದಿ ದೇವತೆಗಳಿಗೆ ಶ್ರೇಷ್ಠವಾಗಿರುವ ಪದ್ಮಾಸನವಾಗಿದೆ. ಈ ವಿವರಣೆಯ ಅರ್ಥವಾಗಬೇಕಾಗಿದ್ದರೆ ಶಿಲ್ಪಶಾಸ್ತ್ರದ ತಿಳಿವು ಅತ್ಯಾವಶ್ಯಕ. ಇಲ್ಲಿಯ ಪದ್ಮ, ಕರ್ಣ, ಕಂಧರ, ಕಂಠ, ಕಂಪ, ಗಳ, ಕಪೋತ, ನಾಸಿಕ, ಆಲಿಂಗ, ಅಂತರಿಕ, ಪ್ರತಿವಾಜನ ಈ ಶಬ್ದಗಳಿಗೆ ಸಂಸ್ಕೃತ ನಿಘಂಟಿನ ಅರ್ಥವು ಸಲ್ಲಿಕೆಯಾಗದು. ಶಿಲ್ಪಶಾಸ್ತ್ರ ತಾಂತ್ರಿಕ ಶಬ್ದಗಳಾಗಿ ಇವುಗಳ ವಿನ್ಯಾಸಪರವಾದ ಅರ್ಥವು ಅನ್ವಯವಾಗುತ್ತದೆ. ಈ ಸಂದರ್ಭದಲ್ಲಿ ಚಿತ್ರಶಿಲ್ಪಿಗೆ ಸಂಪಾದಕರು ತೀರ ಕಡಿಮೆ ಪ್ರಮಾಣದಲ್ಲಿ ಸಹಾಯಮಾಡಬಲ್ಲರಷ್ಟೆ.

ಇಂಗ್ಲೀಷಿಗೆ ಸಂಪಾದಕರು ಅನುವಾದಿಸಿ ಕೊಟ್ಟಿರುವ ಕೆಲವು ಶಬ್ದಗಳ ಉದಾಹರಣೆಗಳು ಇಂತಿವೆ: ಕಂಪ – fillet, ಮಹಾಪದ್ಮ – cyma, ಕರ್ಣವೃತ್ತ – ear, ಪದ್ಮಕ – small cyma, ಕಂಧರ – neck, ಕಂಪವೃತ್ತ – round fillet, ಕುಂಭ ವೃತ್ತ – round pitcher, ಅಂತರಿತ – interval, ಆಲಿಂಗ – flat fillet, ಕಪೋತ – pigeon like mouldings, ನಾಸಿಕ – nose like ornament.

ಇವೆಲ್ಲಾ ವಿನ್ಯಾಸ ಸಂಬಂಧಿಯಾದ ತಾಂತ್ರಿಕ ಶಬ್ದಗಳು ಎಂಬುದು ಗೊತ್ತಾಗುತ್ತದೆ. ಇದರೊಂದಿಗೆ ಆಯಾ ವಿನ್ಯಾಸಗಳ ದಪ್ಪ ಮತ್ತು ಮುಂಚಾಚುಗಳು ಎಷ್ಟಿರಬೇಕು ಎಂಬುದರ ತಿಳಿವೂ ಶಿಲ್ಪಿಗೆ ಇರಬೇಕು. ದಪ್ಪ / ಎತ್ತರದ ಅಳತೆಗಳು ಇಲ್ಲಿ ಕೊಟ್ಟಿದ್ದರೂ ಮುಂಚಾಚು ಕೊಟ್ಟಿಲ್ಲ. ಸಾಧಾರಣವಾಗಿ ಅದು ಎತ್ತರದಷ್ಟು ಇರಲೇಬೇಕು ಎಂಬುದು ವಿನ್ಯಾಸದಲ್ಲಿ ಅನುಕ್ತವಾದ ನಿಯಮ. ಈ ವಿವರಗಳನ್ನು ಶಾಸ್ತ್ರೀಯ ಕ್ರಮದಲ್ಲಿ ಗುರುವಿನ ಪದತಲದಲ್ಲಿ ತಿಳಿದಿರುವ ಶಿಲ್ಪಿಯು ಮಾತ್ರವೇ ತತ್ಸಂಬಧಿಯಾದ ಚಿತ್ರವನ್ನು ಸ್ಪಷ್ಟವಾಗಿ ಬರೆಯಬಲ್ಲ ಮತ್ತು ಈ ಶಿಲ್ಪವನ್ನು ಮಾಡಿಕೊಡಬಲ್ಲ.


ಶಾಸ್ತ್ರದಲ್ಲಿ ಹೇಳಿರುವ ಪೂರ್ವೋಕ್ತ ತಾಂತ್ರಿಕ (Technical) ಶಬ್ದಗಳ ವಿನ್ಯಾಸವನ್ನು, ಅಳತೆಗಳನ್ನು, ಅನುಸರಿಸಿದಾಗ ಈ ವಿನ್ಯಾಸದ ಪಾರ್ಶ್ವನೋಟವು ಚಿತ್ರ ೨.೧ರಲ್ಲಿ ಕೊಟ್ಟಿದೆ.

ಪ್ರೊ॥ ಪ್ರಸನ್ನಕುಮಾರ ಆಚಾರ್ಯರು ಸಂಪರ್ಕಿಸಿದ ಶಿಲ್ಪಿಗಳು ಈ ರೀತಿಯ ಶಾಸ್ತ್ರಾಭ್ಯಾಸ ಮತ್ತು ಖಚಿತವಾದ ತಿಳಿವಳಿಕೆ ಇಲ್ಲದೆ ಇದ್ದುದರ ಕಾರಣದಿಂದ ಅವರು ಕೆಲಸವನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಅಲ್ಪಸ್ವಲ್ಪ ತಿಳಿದಿದ್ದವರಿಗೆ ತಮ್ಮ ತಿಳಿವು ಅಸಂಪೂರ್ಣ ಎಂಬುದು ಅರಿವಾಗುತ್ತಲೇ ಹಸ್ತಪ್ರತಿಯನ್ನು ಹಿಂದಿರುಗಿಸಿದರು.



ಚಿತ್ರ ೨.೧ : ಪದ್ಮಾಪೀಠ ವಿನ್ಯಾಸದಲ್ಲಿಯ ಭಾಗಗಳು

ಈ ವಿವರಣೆಗೆ ಸಿದ್ಧಲಿಂಗ ಸ್ವಾಮಿಗಳು ಲೇಖಿಸಿಕೊಟ್ಟಿರುವ ಚಿತ್ರವು ಈ ರೀತಿಯಾಗಿದೆ.



ಚಿತ್ರ ೨.೨ : ಪದ್ಮಪೀಠ

ನಿಜಕ್ಕೂ ವಿನ್ಯಾಸಗಳ ತಿಳಿವಿದ್ದು ನಿಗದಿತ ಅಳತೆಗೆ ಅವನ್ನು ಹೊಂದಿಸಿದರೆ ಚಿತ್ರ ಸಿದ್ಧವಾಗುತ್ತದೆ. ಆದ್ದರಿಂದ ಇದು ಸುಲಭದ ಕೆಲಸವೇ. ಆದರೆ ಈ ವಿನ್ಯಾಸಗಳ ಪರಿಚಯ ಮತ್ತು ಶಾಸ್ತ್ರದ ಈ ವಿವರಗಳನ್ನು ಅರ್ಥಮಾಡಿಕೊಳ್ಳಬಲ್ಲ ಸಾಮರ್ಥ್ಯ ಮತ್ತು ನಿಖರ ತಿಳಿವಿದ್ದು ರೇಖಾಚಿತ್ರ ಬರೆಯಬಲ್ಲ ಸಾಮರ್ಥ್ಯ ಇರುವ ಶಿಲ್ಪಿಗಳು ಪ್ರೊ॥ ಪ್ರಸನ್ನಕುಮಾರ ಆಚಾರ್ಯರಿಗೆ ಸಿಕ್ಕಿರಲಿಲ್ಲ.

ಇನ್ನೊಂದು ಉದಾಹರಣೆಯನ್ನು ಪರಿಶೀಲಿಸೋಣ.

ಮೌಳಿ ಎಂದರೆ ಕಿರೀಟ. ಇದರಲ್ಲಿ ವೈವಿಧ್ಯತೆಗಳೂ ವಿನ್ಯಾಸಗಳೂ ವಿಪರೀತ. ರಾಜರುಗಳಲ್ಲಿ ಬಗೆಬಗೆಯ ಹಂತಗಳವರು ಇರುವಂತೆಲ್ಲಾ ಇದರಲ್ಲೂ ಬಗೆಬಗೆಯ ವಿನ್ಯಾಸಗಳು. ಅವುಗಳಿಗೆ ಪ್ರತ್ಯೇಕವಾದ ಹೆಸರುಗಳೂ ಇವೆ. ಕಿರೀಟವನ್ನು ತಯಾರಿಸಬೇಕಾಗಿದ್ದರೆ, ಶಿಲ್ಪಿಯು ಈ ಎಲ್ಲಾ ಬಗೆಗಳನ್ನೂ ತಿಳಿದಿರಬೇಕು. ಮನಸಾರ ಶಿಲ್ಪಶಾಸ್ತ್ರವು ಕಿರೀಟದ ಬಗ್ಗೆ ಹೇಳಿರುವ (ಮೌಳೀ ಲಕ್ಷಣಂ ೪೯) ವಿವರಗಳನ್ನು ಇಲ್ಲಿ ಉದ್ಧರಿಸಿದೆ –

ಸರ್ವೇಷಾಂ ಮಕುಟಾನಾಂ ತು ಚಾ ಮೂಲಾಗ್ರಕ್ಷಯಂ ಕ್ರಮಾತ್ ।
ಭೌಮಾನಾಂ ಚ ಶಿರೋ ಬಾಹುತುಲ್ಯಂ ತನ್ಮಕುಟೋದಯಂ ॥ ೧೯ ॥

ತತ್ತುಂಗೇ ಷೋಡಶಾಂಶಂ ಸ್ಯಾನ್ಮಹಾರಾಜಸ್ಯ ಹೀನಕಂ ।
ತತ್ತುಂಗೇ ದ್ವ್ಯಂಶಹೀನೋಚ್ಚಂ ನರೇಂದ್ರಾಖ್ಯಸ್ಯ ಭೂಪತೇಃ ॥ ೨೦ ॥

ಅರ್ಧೇ ಪಾರ್ಷ್ಣಿಕ ಭೂಪಸ್ಯ ಶಿರಸ್ತ್ರೋದಯ ಮೀರಿತಮ್ ।

ಎಲ್ಲಾ ಕಿರೀಟಗಳೂ ತಳದಿಂದ ತುದಿಯ ಕಡೆಗೆ ಅಗಲದಲ್ಲಿ ಕ್ರಮವಾಗಿ ಕಡಿಮೆಯಾಗುತ್ತಾ ಹೋಗಬೇಕು. ಸಾರ್ವಭೌಮ ವರ್ಗದ ರಾಜರ ಕಿರೀಟದ ಎತ್ತರವು ಅವರ ತಲೆಯ ಎರಡು ಕಿವಿಗಳ ಮಧ್ಯೆ ಇರುವ ದೂರಕ್ಕೆ ಸಮನಾಗಿರಬೇಕು. ಮಹಾರಾಜ ವರ್ಗದ ರಾಜರ ಕಿರೀಟಗಳು ಎತ್ತರದಲ್ಲಿ ಅವರ ಎರಡು ಕಿವಿಗಳ ಮಧ್ಯೆ ಇರುವ ದೂರವನ್ನು ೧೬ ಸಮಭಾಗಗಳನ್ನಾಗಿ ಮಾಡಿ ಅದರಲ್ಲಿ ಒಂದು ಭಾಗವನ್ನು ಕಡಿಮೆಮಾಡಿ ಅದನ್ನು ಎತ್ತರವನ್ನಾಗಿ ಸ್ವೀಕರಿಸಬೇಕು. ನರೇಂದ್ರ ವರ್ಗದ ರಾಜರ ಕಿರೀಟಗಳು ಎತ್ತರವನ್ನು ಅವರ ಎರಡು ಕಿವಿಗಳ ಮಧ್ಯೆ ಇರುವ ದೂರವನ್ನು ೧೬ ಸಮಭಾಗಗಳನ್ನಾಗಿ ಮಾಡಿ ಅದರಲ್ಲಿ ಎರಡು ಭಾಗದಷ್ಟು ಕಡಿಮೆ ಮಾಡಿ ಅದನ್ನು ಎತ್ತರವನ್ನಾಗಿ ಸ್ವೀಕರಿಸಬೇಕು. ಪಾರ್ಷ್ಣಿಕ ವರ್ಗದ ರಾಜರ ಕಿರೀಟಗಳು ಎತ್ತರದಲ್ಲಿ ಅವರ ಎರಡು ಕಿವಿಗಳ ಮಧ್ಯೆ ಇರುವ ದೂರವನ್ನು ೧೬ ಸಮಭಾಗಗಳನ್ನಾಗಿ ಮಾಡಿ ಅದರಲ್ಲಿ ೮ ಭಾಗಗಳಷ್ಟು ಎತ್ತರವನ್ನಾಗಿ ಸ್ವೀಕರಿಸಬೇಕು.

ಶಿರೋ ನಾಹ ಸಮಂ ದೈರ್ಘ್ಯೇ ತತ್ತ್ರಿಭಾಗಂ ದ್ವಿಭಾಗಿಕಂ ॥೨೧॥

ಚಕ್ರವರ್ತ್ಯಧಿರಾಜಯೋರ್ ಮಹಿಷೀ ಮಕುಟೋದಯಂ ।
ಅನ್ಯ ಸರ್ವ ಮಹಿಷೀಣಾಂ ಮುಖಾಯಮ ಸಮಂ ಬುಧೈಃ ॥೨೨॥

ಪಾದೋನಂ ಚ ತದರ್ಧೇವಾ ಧಮ್ಮಿಲಕಾದಿದ್ಯೋದಯಂ ।
ಶೇಷಂ ಪ್ರಾಗುಕ್ತವನ್ಮಾನಂ ಕುರ್ಯಾತ್ತತ್ರ ವಿಚಕ್ಷಣಾಃ ॥೨೩॥

ಚಕ್ರವರ್ತಿ ಅಧಿರಾಜ ಮುಂತಾದ ವರ್ಗಗಳಿಗೆ ಸೇರಿದವರ ರಾಣಿಯರ ಮಕುಟ ಕಿರೀಟಗಳ ಎತ್ತರವು ಅವರ ತಲೆಯ ಸುತ್ತಳತೆಗೆ ಸಮನಾಗಿರಬೇಕು ಅಥವಾ ಅದರ ಮುಕ್ಕಾಲು, ಅರ್ಧದಷ್ಟು ಮಾತ್ರವೇ ಇರಬಹುದು. ಉಳಿದ ಎಲ್ಲಾ ವರ್ಗಗಳ ರಾಣಿಯರ ಮಕುಟಗಳೂ ಅವರ ಎರಡು ಕಡೆ ಕಿವಿಗಳ ಮಧ್ಯೆ ಇರುವ ದೂರಕ್ಕೆ– ಎಂದರೆ ಮುಖದ ಅಗಲಕ್ಕೆ– ಸಮಾನವಾಗಿರಬೇಕು. ಧಮ್ಮಿಲ ಮತ್ತು ಅಲಕಚೂಡಕ ಕಿರೀಟಗಳು ಅವರ ಎರಡು ಕಿವಿಗಳ ಮಧ್ಯೆ ಇರುವ ದೂರದ ಅರ್ಧ ಅಥವಾ ಮುಕ್ಕಾಲು ಭಾಗ ಮಾತ್ರವೇ ಇರಬೇಕು. ಇತರ ಕಿರೀಟಗಳ ಅಳತೆಗಳನ್ನು ಶಿಲ್ಪಿಯು ಸೂಕ್ತವಾಗಿ ತೀರ್ಮಾನಿಸಿ ನಿರ್ಮಿಸಬೇಕು.

ಶಿರೋನಾಹಂ ತ್ರಿಭಾಗೈಕಂ ಪಟ್ಟಸ್ಯೋದಯ ಮೇವ ಚ ।
ಏವಂ ಪಟ್ಟಧರಸ್ಯ ಪ್ರೋಕ್ತಂ ಪಟ್ಟಮೇವ ಶಿರೋವೃತಂ ॥೨೪॥

ಚತುರ್ಭಾಗೈಕ ಪಟ್ಟಂ ಸ್ಯಾತ್ತುಂಗಾನಾಂ ಮಂಡಲೇಶ್ವರಸ್ಯ ।
ಪಟ್ಟಮೇವಂ ಶಿರೋನಾಹೇ ಷಡ್ಭಾಗೇ ಚೈಕ ಭಾಗಿಕಮ್ ॥೨೫॥

ಪಟ್ಟಭಾಗಾಖ್ಯ ಭೂಪಸ್ಯ ಪಟ್ಟತುಂಗಮಥೈವ ಚ ॥

ಪಟ್ಟ ಅಥವಾ ತಲೆಗೆ ಸುತ್ತುವ ಪೇಟದಂತಹ ಅಲಂಕರದ ಎತ್ತರವು ತಲೆಯ ಸುತ್ತಳತೆಯ ಮೂರನೆಯ ಒಂದು ಭಾಗವಿರಬೇಕು. ಮಂಡಲೇಶ್ವರ ಧರಿಸುವ ಪಟ್ಟದ ಅಗಲವು ಆತನ ತಲೆಯ ಸುತ್ತಳತೆಯ ಕಾಲುಭಾಗದ ಅಗಲವಿರಬೇಕು. ಪಟ್ಟಭಾಜ ವರ್ಗದ ರಾಜರು ಧರಿಸುವ ಪಟ್ಟವು ತಲೆಯ ಸುತ್ತಳತೆಯ ಆರನೆಯ ಒಂದುಭಾಗ ಎತ್ತರವನ್ನು ಪಡೆದಿರುತ್ತದೆ.

ಭೂಪಾನಾಂ ಮಕುಟಾಗ್ರಾಂತಂ ಕೇಶಾಂತಂ ಮಕುಟೋದಯಂ ॥೨೬॥

ತದೂರ್ಧ್ವೇ ಚಾಧಿಕಂ ಕುರ್ಯಾತ್ತಚ್ಛಿಕಾಮಣಿ ತುಂಗಕಮ್ ।

ಮಕುಟ ಕಿರೀಟದ ಎತ್ತರವು ಕೇಶಾಂತದಿಂದ ಪ್ರಾರಂಭವಾಗಿ ಕಿರೀಟದ ಅಗ್ರದಲ್ಲಿರುವ ಮಣಿಯ ತನಕ ಇರುತ್ತದೆ. ಈ ಎತ್ತರವು ಈ ಮೊದಲು ಹೇಳಿರುವ ಎತ್ತರಕ್ಕಿಂತಲೂ ಹೆಚ್ಚಾಗಿರಬೇಕು.

ಜಟಾಮಕುಟಂ ಕೇಶಬಂಧಂ ಚ ಕುಂತಲಂ ತ್ರಿಪುಟಾಕೃತಿ ॥೨೭॥

ಕಿರೀಟಂ ಮೌಳಿ ಕರ್ಣಾಭಂ ಕರಂಡಂ ತುಂ ಶಿಖಿತುಂಡವತ್ ।
ಶಿರಸ್ತ್ರಂ ಬದ್ಭುದಾಕಾರಂ ಧಮ್ಮಿಲ್ಲಂ ವಲ್ಲಿಕಾಕೃತಿ ॥೨೮॥

ಕೇಶಾಂತಾದಲಕಾಚೂಡಂ ಕುರ್ಯಾತ್ತು ಮಕುಟಾನಿವೈ ।

ಜಟಮಕುಟ, ಕೇಶಬಂಧ ಮತ್ತು ಕುಂತಲ ಈ ಮೂರೂ ತ್ರಿಕೋಣಾಕೃತಿಯಲ್ಲಿ ಇರಬೇಕು. ಕಿರೀಟ, ಮೌಳಿಗಳು ಕಿವಿಯ ಆಕಾರವನ್ನು ಹೋಲುವಂತೆ ಇರಬೇಕು. ಕರಂಡವು ನವಿಲಿನ ಕೊಕ್ಕಿನಂತ ಕಾಣಬೇಕು. ಶಿರಸ್ತ್ರವೂ ನೀರ್ಗುಳ್ಳೆಯಂತೆ ಇರಬೇಕು. ಧಮ್ಮಿಲವು ಲತೆಯಂತೆ ರೂಪಿತವಾಗಬೇಕು. ಅಲಕಚೂಡಕವು ಅಲಂಕಾರವಾಗಿದ್ದು ಕೇಶಾಂತದಿಂದ ಪ್ರಾರಂಭವಾಗಬೇಕು.

ಕಿರೀಟ ಮಕುಟ ಲಕ್ಷಣಂ

ಮಕುಟಾತ್ಪಟ್ಟಿಕಾಂತಂ ಸ್ತ್ಯದೂರ್ಧ್ವೇ ತು ಶಿಖಾಮಣೀ ॥೨೯॥

ವೇತ್ರಾದಿ ಕುಡ್ಮಲಾಂತಂ ಸ್ಯಾಚ್ಛಿಕಾಮಣ್ಯುದಯ ಮೀರಿತಂ ।

ಕಿರೀಟದ ಎತ್ತರವೆಂದರೆ ಕಿರೀಟದ ತಳಭಾಗದಿಂದ ಪಟ್ಟಿಕೆಯ ತನಕ ಇರುವ ಎತ್ತರ. ಪಟ್ಟಿಕೆ ಮೇಲೆ ಶಿಖಾಮಣಿಯನ್ನು ರೂಪಿಸಬೇಕು. ಶಿಖಮಣಿಯ ಎತ್ತರವನ್ನು ವೇತ್ರದಿಂದ ಮೊಗ್ಗಿನ (ಕುಡ್ಮಲದ) ಕೊನೆಯ ತನಕ ಲೆಕ್ಕಿಸಬೇಕು.

ಅಧೋ ವೇತ್ರೋದಯದೇಶೇ ರತ್ನದಾಮಾವೃತಾಂಶಕಮ್ ॥೩೦॥

ವೃತ್ತಾಕಾರಂ ತು ಸರ್ವಾಂಗಂ ಯುಕ್ತ್ಯಾ ತತ್ರೈವ ಯೋಜಯೇತ್ ।
ಅನ್ಯತ್ರ ಸರ್ವದೇಶೇತು ತರಂಗಾಕೃತಿಯೋಜಯೇತ್ ॥೩೧॥

ತರಂಗಾಕಾರ ಮಧ್ಯೇತು ಪುಷ್ಪರತ್ನೈಶ್ಚ ವಿಭೂಷಿತಂ ।
ಪೂರಿತಂ ಚ ದ್ವಿಭಾಗಂ ಚ ಮಕರೈಶ್ಚ ವಿಭೂಷಿತಂ ॥೩೨॥

ತನ್ಮಧ್ಯೇ ರತ್ನಬಂಧಂ ಸ್ಯಾತ್ರಸ್ಯಾವೃತ ಸಪತ್ರಯುಕ್ ।
ಅಗ್ರೇಚ ರತ್ನಬಂಧ ಸ್ಯಾದ್ಬಾಹ್ಯೇ ತು ವಲ್ಲಿಕಾವೃತಮ್ ॥೩೩॥

ಕಿರೀಟದ ಕೆಳಭಾಗದ ಪಟ್ಟಿಯ (ವೇತ್ರದ) ಅರ್ಧಭಾಗವು ರತ್ನಾದಿ ಮಣಿಗಳಿಂದ ಅಲಂಕೃತವಾಗಬೇಕು. ವೃತ್ತಾಕಾರವಾಗಿರುವ ಎಲ್ಲಾ ಅಲಂಕರಣಗಳನ್ನು ಆ ಭಾಗದಲ್ಲಿ ಸೂಕ್ತವಾಗಿ ಯೋಜಿಸಿ ಅಲಂಕರಿಸಬೇಕು. ಉಳಿದ ಇತರ ಎಲ್ಲಾ ಭಾಗಗಳಲ್ಲೂ ತರಂಗ ವಿನ್ಯಾಸವನ್ನು ರೂಪಿಸಬೇಕು. ತರಂಗದ ಒಳಭಾಗವನ್ನು ಪುಷ್ಪಗಳಿಂದ ಆಭರಣಗಳಿಂದ ಅಲಂಕರಿಸಬೇಕು. ಎರಡು ಭಾಗಗಳಿರುವ ಕರ್ಣಪೂರಿಮವನ್ನು ಮಕರಗಳಿಂದ ಅಲಂಕರಿಸಬೇಕು. ಅದರ ಒಳಭಾಗವನ್ನು ರತ್ನಬಂಧದಿಂದ ಅಲಂಕರಿಸಬೇಕು. ಅದರ ಸುತ್ತಲೂ ಪತ್ರಗಳನ್ನು ರೂಪಿಸಬೇಕು. ರತ್ನ ಬಂಧವು ಮುಂದೆ ಇದ್ದು ಉಳಿದ ಹೊರಭಾಗದಲ್ಲಿ ಲತೆಯನ್ನು ಬಿಡಿಸಬೇಕು.

ಮಕರಸ್ಯಾಸ್ಯದೇಶೇತು ವಲ್ಲಿದಾಮ ಚ ನಿರ್ಗಮಮ್ ।
ಪುರತಃ ಪೃಷ್ಠ ತಶ್ಚೈವ ಮಕರಾನ್ಮಕರಾಂತಕಂ ॥೩೪॥

ಮೌಳೀ ಬಂಧೇನ ಬಲ್ಲೈವ ಮುಕ್ತಾದಾಮಾಭಿರಲಂಕೃತಮ್ ।
ಲಲಾಟ ಪಟ್ಟ ತುಂಗಂ ಚತುರ್ಭಾಗೇ ವಿಭಾಜಿತೇ ॥೩೫॥

ಏಕಾಂಶಂ ಪಟ್ಟಬಂಧಂ ಸ್ಯಾತ್ಸರ್ವ ರತ್ನೈರಲಂಕೃತಂ ।

ಮಕರಗಳ ಮುಖಭಾಗದಲ್ಲಿ ಲತಾಮಾಲೆಯನ್ನು ಅವುಗಳ ಮುಂದಕ್ಕೆ ಚಾಚಿಕೊಂಡಿರುವಂತೆ ರೂಪಿಸಬೇಕು. ಮುಂಭಾಗ ಮತ್ತು ಹಿಂಭಾಗಗಳಲ್ಲಿ ಮಕರಗಳ ಸಾಲೊಂದು ಪೂರ್ಣವಾಗಿರಬೇಕು. ಮೌಳಿಯ ಬಂಧವಿರುವ ಭಾಗದಲ್ಲಿ ಮುತ್ತಿನಮಾಲೆ ಯಂತಹ ಲತೆಯಿಂದ ಅಲಂಕರಿಸಬೇಕು. ನೊಸಲಿನ ಬಳಿ ಇರುವ ಪಟ್ಟಿಯನ್ನು ಎತ್ತರದಲ್ಲಿ ನಾಲ್ಕು ಸಮಭಾಗಗಳಾಗಿ ವಿಭಜಿಸಿ ಅದರಲ್ಲಿ ಒಂದು ಭಾಗವನ್ನು ಪಟ್ಟಬಂಧವಾಗಿ ಮಾಡಬೇಕು. ಅದನ್ನು ಬಗೆಬಗೆಯ ಆಭರಣಗಳಿಂದ ಅಲಂಕರಿಸಬೇಕು.

ತಸ್ಯಾಧೋ ರತ್ನದಾಮಭಿರ್ಲಲಾಟೋऽರ್ಧ ಚಂದ್ರವತ್ ॥ ೩೬ ॥
ಕರ್ಣಪತ್ರ ಸಮಾಯುಕ್ತಂ ಶ್ರೋತ್ರೋರ್ಧ್ವೇ ಕರ್ಣಪುಷ್ಪಯುಕ್ ।
ತಸ್ಮಾತ್ತು ಲಂಬನಂ ದಾಮ ಸರ್ವ ರತ್ನೈರಲಂಕೃತಮ್ ॥ ೩೭ ॥

ಅದರ ಕೆಲಗೆ ಹಣೆಯ ಮೇಲ್ಭಾಗದಲ್ಲಿ ಅರ್ಧಚಂದ್ರಾಕಾರದ ಕೆಳಗೆ ಆಭರಣಗಳ ಸರಮಾಲೆಗಳಿಂದ ಅಲಂಕರಿಸಬೇಕು. ಕಿವಿಗಳ ಮೇಲ್ಭಾಗವು ಕರ್ಣಪತ್ರ ಮತ್ತು ಪುಷ್ಪಗಳಿಂದ ಅಲಂಕರಿಸಬೇಕು. ಅಲ್ಲಿಂದ ತೂಗುಬಿಟ್ಟಿರುವ ಮುತ್ತಿನಮಾಲೆಗಳು ಮತ್ತು ಆಭರಣಗಳಿಂದ ಅಲಂಕೃತವಾಗಿರಬೇಕು.

ಪೂರಿಮದ್ಯಾದಧೋ ದೇಶೇ ಚೂಡರತ್ನಾನಿ ವಿನ್ಯಸೇತ್ ।
ಚತುಷ್ಪೂರೀ ಚ ಸಂಯುಕ್ತಂ ಕರ್ಣೋರ್ಧ್ವೇ ಪಾರ್ಶ್ವಪೂರಿತಮ್ ॥೩೮॥

ಶಿರಃ ಪೃಷ್ಠೋರ್ಧ್ವ ದೇಶೇತು ಪೃಷ್ಠಪೂರಿಂ ಚ ಸಂಯುತಮ್ ।
ಏತತ್ಕಿರೀಟ ಮಕುಟಂ ಸರ್ವಾಲಂಕಾರ ಸಂಯುತಮ್ ॥೩೯॥


ಕಿವಿಯ ಮಧ್ಯಭಾಗಕ್ಕೆ ಸಮಾನವಾಗಿರುವ ಭಾಗದಲ್ಲಿ ಚೂಡಾರತ್ನವನ್ನು ರಚಿಸಬೇಕು. ಎರಡು ಕಿವಿಗಳ ಎರಡೂ ಕಡೆಗಳಲ್ಲೂ ನಾಲ್ಕು ಚತುಷ್ಪೂರಿಮಗಳನ್ನು (ವಿನ್ಯಾಸಗಳನ್ನು) ರಚಿಸಬೇಕು. ಕಿವಿಯ ಹಿಂಭಾಗಕ್ಕೆ ಸಮನಾಗಿ ತಲೆಯ ಹಿಂಭಾಗದಲ್ಲಿ ಪೂರಿಮಗಳನ್ನು ರಚಿಸಬೇಕು. ಕಿರೀಟ ಮಕುಟವೆಂದು ಹೆಸರಾಗಿರುವ ಇದನ್ನು ಸಕಲಾಭರಣಗಳಿಂದಲೂ ಅಲಂಕರಿಸಬೇಕು.

ವಿವರಣೆಯು ಸಮಗ್ರವಾಗಿಯೇ ಇದೆ. ಕಿರೀಟದ ಎತ್ತರ, ಅಗಲ ಮತ್ತು ವಿನ್ಯಾಸಗಳ ವಿವರಗಳಿವೆ. ಅವುಗಳಲ್ಲಿ ಯಾವ ಭಾಗಗಳು ಬದಲಾಗುವುದರಿಂದ ಅವು ಬೇರೆಯ ವರ್ಗದವರಿಗೆ ಸೇರುತ್ತವೆ ಎಂಬ ವಿವರಗಳೂ ಇವೆ. ಶಿಲ್ಪಿಯಾದವನಿಗೆ ಈ ಎಲ್ಲಾ ತಾಂತ್ರಿಕ ವಿವರಗಳೂ ಗೊತ್ತಿರಬೇಕು.


ಇದರಲ್ಲಿ ಗೊತ್ತಾಗದೆ ಇರುವ ಅಂಶವೆಂದರೆ ಈಗ ನಾವು ಗುರ್ತಿಸುವ ಕರ್ನಾಟಕ (ವೇಸರ), ದ್ರಾವಿಡ ಮತ್ತು ನಾಗರ (ಔತ್ತರೇಯ) ಎಂಬ ಶೈಲಿಗಳು. ನಿಜಕ್ಕೂ ಶಿಲ್ಪಶಾಸ್ತ್ರಗಳು ಈ ಶೈಲಿಗಳ ವಿವರಗಳನ್ನು ಹೇಳುವುದಿಲ್ಲ. ಆದ್ದರಿಂದ ಶೈಲಿಗಳು ಸ್ಥಳೀಯವಾದವು. ಶಾಸ್ತ್ರದ ವಿವರಗಳು ಮಾತ್ರ ಒಂದೇ. ಆದ್ದರಿಂದ ಒಂದೇ ಶಾಸ್ತ್ರವನ್ನು ಬಳಸಿಕೊಂಡೂ ಭಿನ್ನ ಶೈಲಿಗಳ ಶಿಲ್ಪಗಳನ್ನು ಮಾಡುವುದು ಸಾಧ್ಯವಿದೆ. ಎಂದರೆ ಪೂರ್ವೋಕ್ತ ವಿವರಗಳಿಂದಲೇ ಬೇರೆ ಬೇರೆ ಶೈಲಿಗಳ ಕಿರೀಟ ಮಕುಟದ ವಿನ್ಯಾಸವನ್ನು ಮಾಡಬಹುದು. **ಆದ್ದರಿಂದ ಪ್ರಾದೇಶಿಕ ಶಿಲ್ಪಶೈಲಿಗಳನ್ನು ಉಳಿಸಿಕೊಳ್ಳುವುದು ಶಿಲ್ಪಿಶಾಸ್ತ್ರವನ್ನು ಉಳಿಸಿಕೊಳ್ಳುವಷ್ಟೇ ಮುಖ್ಯವಾದ ವಿವರವಾಗಿರುತ್ತದೆ.** ಸಾಧಾರಣವಾಗಿ ಸಂಪಾದಕರು ಎಷ್ಟೇ ವಿದ್ವಾಂಸರಾಗಿದ್ದರೂ ಎಲ್ಲಾ ವಿವರಗಳನ್ನು ಅವರು ತಿಳಿದಿರಲು ಸಾಧ್ಯವಾಗದು. ಆದ್ದರಿಂದ ಅವರು ಸಂಪೂರ್ಣವಾಗಿ ಶಿಲ್ಪಿಗಳ ಮೊರೆಹೋಗಲೇ ಬೇಕಾಗಿರುತ್ತದೆ.

ಈ ವಿವರಣೆಗಳನ್ನು ಬಳಸಿಕೊಂಡು ಸಿದ್ಧಲಿಂಗಸ್ವಾಮಿಗಳು ಬರೆದಿರುವ ಕಿರೀಟಮಕುಟದ ರೇಖಾಚಿತ್ರವನ್ನು ಕೊಟ್ಟಿದೆ. ಇದು ಹೊಯ್ಸಳ ಶೈಲಿಯದು. ಚೋಳಶೈಲಿಯ ಕಿರೀಟ ಮಕುಟವನ್ನು ವಾಚಕರ ಪ್ರಯೋಜನಾರ್ಥ ಬೇರೆಯಾಗಿ ಜೊತೆಯಲ್ಲಿಯೇ ಕೊಟ್ಟಿದೆ. ಹೊಯ್ಸಳ ಶೈಲಿಯಲ್ಲಿಯೇ ಕಿರೀಟಗಳೇ ಅನೇಕ ಬಗೆಯವು ಇವೆ. ಅವುಗಳಲ್ಲಿ ಒಂದು ಬಗೆ ಮಾತ್ರವೇ ಇದು. ಶಾಸ್ತ್ರೋಕ್ತ ಕ್ರಮದಲ್ಲಿ ವಿನ್ಯಾಸವಾಗಿದೆ.

ಎಂದರೆ **ಸಿದ್ಧಲಿಂಗ ಸ್ವಾಮಿಗಳ ಶಾಸ್ತ್ರೀಯ ಚಿತ್ರಗಳಲ್ಲಿ ಶಾಸ್ತ್ರದೊಂದಿಗೆ ಕರ್ನಾಟಕದ ಶೈಲಿಯೂ ಹುದುಗಿದೆ** ಎಂಬ ಅಂಶವು ಈಗ್ಗೇ ಮನದಟ್ಟಾಗಿರಬಹುದು. ಶಾಸ್ತ್ರದ ವಿವರ ಮಾತ್ರ ಸಮಾನವೇ. ಈ ಅಂಶವನ್ನು ಈ ಚಿತ್ರಗಳಲ್ಲಿ ಇದುವರೆವಿಗೂ ಯಾರೂ ಗುರ್ತಿಸಿ ಹೇಳಿಲ್ಲ. ಪ್ರತಿಮೆಗಳ ಸಂಬಂಧದಲ್ಲಿ ಕರ್ನಾಟಕ ಶೈಲಿಯನ್ನು ಗುರ್ತಿಸಿರುವ ಮತ್ತು ಆ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿರುವ ಗ್ರಂಥರಚನೆ ಮಾಡಿರುವ ಕಲಾವಿಮರ್ಶಕರೇ ಇಲ್ಲ ಎಂಬುದನ್ನು ವಿಷಾದದಿಂದಲೇ ಹೇಳಬೇಕಾಗಿದೆ.



ಚಿತ್ರ ೨. ೩ : ಕಿರೀಟ ಮಕುಟ–೧
(ಹೊಯ್ಸಳ ಶೈಲಿ. ಸಿದ್ಧಲಿಂಗಸ್ವಾಮಿಗಳ ರೇಖಾಚಿತ್ರ)



ಚಿತ್ರ ೨. ೪ : ಕಿರೀಟ ಮಕುಟ–೨(ಚೋಳಶೈಲಿ)


ಪ್ರಸ್ತುತದ ಎರಡೂ ಉದಾಹರಣೆಗಳೂ ಶಿಲ್ಪಶಾಸ್ತ್ರದ ದೃಷ್ಟಿಯಿಂದ ತೀರಾ ಕಿರಿಯ ಅಂಶಗಳು. ಮೊದಲಿನದು ಸಿಂಹಾಸನದ ಅಧಿಷ್ಠಾನ ಭಾಗ. ಎರಡನೆಯದು ಪ್ರತಿಮೆಯ ಶಿರೋಲಂಕಾರ ಭಾಗ. ಯಾರೇ ಆಗಲಿ ಮುಖ್ಯವೆಂದು ಗಮನಿಸುವುದು ಪ್ರತಿಮೆಯನ್ನೇ. ಪ್ರತಿಮೆಗೆ ಅನ್ವಯವಾಗುವ ತಾಲಮಾನ ಕ್ರಮದ ಅಳತೆಗಳಿವೆ. ಇದು ಬಹು ಮುಖ್ಯವಾದ ಅಂಶ. ವಿವರವಾಗಿ ಈ ಅಳತೆಗಳನ್ನು ನಿಖರವಾಗಿ ಗ್ರಹಿಸುವ ತನಕ ಪ್ರತಿಮೆಯ ರೂಪದ ಬಗ್ಗೆ ಯಾವ ಹಿಡಿತವೂ ಇರುವುದಿಲ್ಲ. ಸಿದ್ಧಲಿಂಗಸ್ವಾಮಿಗಳು ಉತ್ತಮದಶತಾಲ (೧೨೪ ಅಂಗುಳ)ದಲ್ಲಿ ನಿಂತಿರುವ ಪುರುಷ ಮೂರ್ತಿಯನ್ನು ಹೀಗೆ ಚಿತ್ರಿಸಿದ್ದಾರೆ. (ಚಿತ್ರ ೨.೫) ಈ ಸಂಬಂಧದಲ್ಲಿ ಬಹು ವಿವರವಾದ

ಅಳತೆಗಳಿವೆ. ಅವರು ಬರೆದಿರುವ ಚಿತ್ರಗಳನ್ನು ಆಯಾ ದೇವಮೂರ್ತಿಗೆ ಅನ್ವಯವಾಗುವ ಅಳತೆಗಳಿಗೆ ಸರಿಯಾಗಿ ಲೇಖಿಸಿದ್ದಾರೆ. ಪ್ರಸ್ತುತದಲ್ಲಿ ಈ ರೀತಿ ತಾಲಮಾನದ ಅಳತೆಗಳನ್ನು ಅನುಸರಿಸಿ ಚಿತ್ರಿಸುವ ಶಿಲ್ಪಿ ಅಥವಾ ಚಿತ್ರಕಾರ ಕರ್ನಾಟಕದಲ್ಲಿ ಇಲ್ಲ ಎಂಬುದು ಉತ್ಪ್ರೇಕ್ಷೆಯಲ್ಲ.

ಉಪರೋಕ್ತ ವಿವರಣೆಯಿಂದ ಮಾನಸಾರ ಶಿಲ್ಪಶಾಸ್ತ್ರಕ್ಕೆ ಸಿದ್ಧಲಿಂಗ ಸ್ವಾಮಿಗಳು ಬರೆದುಕೊಟ್ಟಿರುವ ಚಿತ್ರಗಳ ವೈಶಿಷ್ಟ್ಯ ಮತ್ತು ಮಹತ್ತ್ವ ಓದುಗರಿಗೆ ಸ್ವಲ್ಪಮಟ್ಟಿಗಾದರೂ ಮನದಟ್ಟಾಗಿರಬಹುದು.

ಇಷ್ಟೆಲ್ಲಾ ವಿವರಗಳನ್ನು ಹೇಳಿದ ತರುವಾಯ ಕೂಡ ಸಿದ್ಧಲಿಂಗ ಸ್ವಾಮಿಗಳು ಶಿಲ್ಪಶಾಸ್ತ್ರದಲ್ಲಿ ಸಾಧಿಸಿದ್ದ ಶಾಸ್ತ್ರದ ಪಾಂಡಿತ್ಯ ತಿಳಿವಿನ ಪರಿಚಯ ಪೂರ್ಣಪ್ರಮಾಣದಲ್ಲಿ ಮಾಡಿಕೊಡಲಾಗಿದೆ ಎಂಬುದಾಗಿ ಹೇಳುವುದು ಅಸಾಧ್ಯವೇ. ಸಂಸ್ಕೃತದಲ್ಲಿ **ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಮ್** (ವಿದ್ವಾಂಸರಾದವರಿಗೆ ಮಾತ್ರವೇ ಇನ್ನೊಬ್ಬ ವಿದ್ವಾಂಸನ ಪರಿಶ್ರಮವು ಅರ್ಥವಾಗಬಲ್ಲುದು) ಎಂಬ ಹೇಳಿಕೆ ಇದೆ. ಇದನ್ನು ರೂಢಿಗೆ ಅನ್ವಯಿಸಿ ಕನ್ನಡದ ಆಡು ಭಾಷೆಯಲ್ಲಿ ಹೇಳುವುದಾದರೆ *ಬಂಜೆ ಏನು ತಾನೇ ಬಲ್ಲಳು ಮಗುವನ್ನು ಹೆರುವ ನೋವು* ಎಂದೂ ಹೇಳಬಹುದು.

ಈ ಸಂಬಂಧದಲ್ಲಿ ಮಾನಸಾರದಲ್ಲಿ ಪ್ರಲಂಬ ಫಲಕ ನಿರ್ಮಾಣ ಕ್ರಮವನ್ನು ವಿವರಿಸುವ ಅಧ್ಯಾಯ ಇದೆ. ದೇವ ಪ್ರತಿಮೆಗಳ ನಿರ್ಮಾಣವನ್ನು ಮಣ್ಣು, ಮೇಣಗಳಲ್ಲಿ ನಿರ್ಮಿಸುವಾಗ ಪ್ರಲಂಬ ಫಲಕವನ್ನು ನಿರ್ಮಿಸಿ ಷಣ್ಮಾನಗಳನ್ನೂ ಅನುಸರಿಸುವುದು ಸಾಧ್ಯವಿದೆ. ಶಿಲ್ಪಿಯಾದವನು ತಾನು ನಿರ್ಮಿಸುವ ಪ್ರತಿಮೆಯು ಸರ್ವವಿಧಗಳಲ್ಲೂ ಶಾಸ್ತ್ರೋಕ್ತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಥವಾ ತಾನು ರೂಢಿಸಿಕೊಳ್ಳಲು ಪ್ರಲಂಬ ಫಲಕವನ್ನು ನಿರ್ಮಿಸಿ ಬಳಸುತ್ತಾನೆ. ಶಿಲೆ ಮತ್ತು ಮರಗಳಲ್ಲಿ ಪ್ರತಿಮಾ ನಿರ್ಮಾಣವನ್ನು ಮಾಡುವಾಗ ತಾನು ಮಾಡಿರುವ ಪ್ರತಿಮೆಯು ಶಾಸ್ತ್ರೋಕ್ತವಾಗಿದೆ ಎಂಬುದನ್ನು ಸಾಬೀತುಪಡಿಸಲು ಪ್ರಲಂಬ ಫಲಕವು ಅನಿವಾರ್ಯವಾಗಿರುತ್ತದೆ. ಇದರಲ್ಲಿ ಷಣ್ಮಾನಗಳನ್ನೂ ಅಳೆಯಬಹುದು. ಆ ಆರು ಅಳತೆಗಳು ಮಾನ (ಉದ್ದ ಅಥವಾ ಎತ್ತರ), ಪ್ರಮಾಣ (ಅಗಲ), ಉನ್ಮಾನ (ದಪ್ಪ), ಪರಿಮಾಣ (ಸುತ್ತಳತೆ), ಉಪಮಾನ (ಅಂಗ–ಪ್ರತ್ಯಂಗಗಳ ಮಧ್ಯೆ ಇರುವ ಅಂತರ), ಲಂಬಮಾನ (ಉದ್ದದಲ್ಲಿ ತೂಗಿ ಬಿಟ್ಟಿರುವ ಸೂತ್ರಗಳಿಂದ ಅಂಗ–ಉಪಾಂಗಗಳ ದೂರದ ಅಳತೆ), ಇವನ್ನು ಪಡೆದಿರುವುದನ್ನು ಪೂರ್ಣ ಪ್ರತಿಮೆ ಎನ್ನುತ್ತಾರೆ.



ಚಿತ್ರ ೨.೫ : ಉತ್ತಮ ದಶತಾಲ ಪುರುಷಮಾನದಲ್ಲಿ ಎತ್ತರದ ಅಳತೆಗಳು–ಅಂಗರೇಖೆಗಳು (ಸ್ವಾಮಿಗಳ ಕೊಟ್ಟಿರುವ ಚಿತ್ರ)

ಮೂರ್ತಿ ನಿರ್ಮಾಣದಲ್ಲಿ ಸೂತ್ರಗಳು ಬಹು ಮುಖ್ಯವಾದುವು. ಈ ಸೂತ್ರಗಳ ಬಳಕೆ ಕಗ್ಗಲ್ಲಿನ ಮೇಲಿಂದಲೇ ಪ್ರಾರಂಭವಾಗುತ್ತದೆ. ಆದ್ದರಿಂದ ನಾವು ಪ್ರತಿಮಾ ಮಾನ ಲಕ್ಷಣದಲ್ಲಿ ಬಳಕೆಯಾಗುವ ಸೂತ್ರಗಳನ್ನು ಮೊದಲಿಗೆ ತಿಳಿದುಕೊಳ್ಳೋಣ.

ಮೂರ್ತಿ ನಿರ್ಮಾಣವನ್ನು ವಿವರಿಸುವಾಗ ಎತ್ತರ, ಅಗಲ, ದಪ್ಪ, ಸುತ್ತಳತೆ ಇತ್ಯಾದಿಗಳನ್ನು ವಿವರಿಸಲು ಶಿಲ್ಪಶಾಸ್ತ್ರದಲ್ಲಿ ಕೆಲವು ನಿಗದಿಯಾದ ಸ್ಥಾನಗಳನ್ನು ಗುರ್ತಿಸಿ ಅಲ್ಲಿಯ ಅಳತೆಗಳನ್ನು ವಿವರಿಸಲಾಗುತ್ತದೆ. ಇದಕ್ಕಾಗಿ ನಿರ್ದಿಷ್ಟವಾದ ಕೆಲವು ಅಂಗ–ಉಪಾಂಗಗಳ ಮೂಲಕ ಹಾದುಹೋಗುವ ರೇಖೆಗಳನ್ನು ನಿಗದಿ ಪಡಿಸಲಾಗಿದೆ. ಅಳತೆಗಳು ಆ ಕಾಲ್ಪನಿಕ ರೇಖೆಗಳಿಗೆ ಅನ್ವಯಿಸಿ ಹೇಳಿ ಮೂರ್ತಿಯ ಅಳತೆಗಳನ್ನು ಸ್ಪಷ್ಟಪಡಿಸಲಾಗುತ್ತದೆ. ಆದ್ದರಿಂದ ನಾವು ಈ ರೇಖೆಗಳನ್ನು – ಇವನ್ನು ಸೂತ್ರಗಳೆಂದು ಕರೆಯಲಾಗುತ್ತದೆ – ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಮೊದಲಿಗೆ ಅಡ್ಡಲಾಗಿರುವ (ಅಂಗ) ರೇಖೆಗಳ ಬಗ್ಗೆ ತಿಳಿಯೋಣ. ಇವನ್ನು ಮೂರ್ತಿಯ ಎತ್ತರಗಳನ್ನು ಸೂಚಿಸಲು ಬಳಸಲಾಗುತ್ತವೆ.

ಉಷ್ಣೀಷ : ಮೂರ್ತಿಯ ನಡು ನೆತ್ತಿ. ದೇವತಾ ಮೂರ್ತಿಗಳಲ್ಲಿ ಇದು ಮುಕುಟದಿಂದ ಆವೃತ್ತವಾಗಿರುತ್ತದೆ. ಮೂರ್ತಿಯ ಎತ್ತರವನ್ನು ಉಷ್ಣೀಷದ ಮೇಲಿನ ತುದಿಯಿಂದಲೇ ಲೆಕ್ಕಿಸಬೇಕಾಗಿರುತ್ತದೆ. ಮುಕುಟಗಳ ಎತ್ತರವನ್ನು ಮೂರ್ತಿಯ ಎತ್ತರದ ಲೆಕ್ಕಕ್ಕೆ ಸೇರಿಸುವುದಿಲ್ಲ. ಮುಕುಟಗಳಿಗಗಿಯೇ ಪ್ರತ್ಯೇಕ ಮಾನಲಕ್ಷಣಗಳು ಇವೆ. ಜಟಾ ಮುಕುಟವಾಗಿದ್ದರೂ ಅದನ್ನು ಮುಕುಟವೆಂದು ಪ್ರತ್ಯೇಕವಾಗಿಯೇ ಪರಿಗಣಿಸಬೇಕು.

ಕೇಶಾಂತ : ಉಷ್ಣೀಷದಿಂದ ಕೆಳಕ್ಕೆ ಹರಡಿಕೊಂಡಿರುವ ತಲೆಗೂದಲ ಅಂಚು. ಇದನ್ನು ಮುಂಗುರುಳು ಎನ್ನಬಹುದು.

ಉಷ್ಣೀಷ ಮತ್ತು ಕೇಶಾಂತ ಎರಡೂ ಮುಖದ ಎತ್ತರಕ್ಕೆ ಸೇರಿರುವುದಿಲ್ಲ. ಇವನ್ನು ಪ್ರತ್ಯೇಕವಾಗಿಯೇ ಲೆಕ್ಕಸಲಾಗುತ್ತದೆ. ಕೆಲವೊಮ್ಮೆ ಕೇಶಾಂತವನ್ನು ಸೇರಿಸಿಕೊಂಡು ಮುಖದ ಅಳತೆಯನ್ನು ಹೇಳುವುದುಂಟು. ಆದರೆ ಉಷ್ಣೀಷ ಮಾತ್ರ ಸದಾ ಪ್ರತ್ಯೇಕವಾಗಿಯೇ ಇರುತ್ತದೆ.

ಭ್ರೂ ಸೂತ್ರ : ಎರಡು ಹುಬ್ಬುಗಳ ಮೇಲ್ಭಾಗದಿಂದ ಹಾದುಹೋಗುವ ರೇಖೆ. ಈ ರೇಖೆಯು ಕಿವಿಯ ಮೇಲ್ಭಾಗವನ್ನು ಸ್ಪರ್ಶಿಸುತ್ತದೆ.

ಅಕ್ಷಿ ಸೂತ್ರ : ಇದು ಕಣ್ಣಿನ ಕೆಳಭಾಗದಿಂದ ಹಾದು ಹೊಗುವ ರೇಖೆ. ಇದನ್ನು ನೇತ್ರಾಂತ ಸೂತ್ರ ಎಂದೂ ಕರೆಯುತ್ತಾರೆ.

ನಾಸಾ ಮೂಲ ಸೂತ್ರ ಅಥವ ನೇತ್ರ ಮಧ್ಯಸೂತ್ರ : ಇದು ಕಣ್ಣಿನ ಮಧ್ಯಭಾಗದಿಂದ ಹಾದುಹೋಗುವ ರೇಖೆ. ಇದು ಮೂಗಿನ ಪ್ರಾರಂಭದ ಕ್ಷೇತ್ರ ಕೆಲವು ಶಾರ್ಶತ್ರಗಳಲ್ಲಿ ಇದನ್ನೇ ಅಕ್ಷಿ ಸೂತ್ರ ಎಂದು ಕರೆಯಲಾಗಿದೆ. ರೂಢಿಯಲ್ಲಿ ಅಕ್ಷಿಸೂತ್ರ ಎಂದರೆ ಕಣ್ಣಿಗೆ ಕೆಳಭಾಗದಲ್ಲಿ ಹಾದುಹೋಗುವ ಸೂತ್ರವೆಂದು ಅರ್ಥ ಮಾಡಲಾಗುತ್ತದೆ. ಇದನ್ನು ಅಕ್ಷ್ಯಂತಸೂತ್ರ ಎಂದೂ ಕರೆಯುತ್ತಾರೆ.

ನಾಸಾ ಪುಟಾಂತ ಸೂತ್ರ : ಇದನ್ನು ನಾಸಾಂತ ಸೂತ್ರ, ಪುಟ ಸೂತ್ರ, ಪುಟಾಂತ ಸೂತ್ರ ಎಂದು ಕರೆಯಲಾಗುತ್ತದೆ. ಈ ರೇಖೆಯ ಮೂಗಿನ ಕೊನೆಯನ್ನು ಸ್ಪರ್ಶಿಸಿ ಅದರ ಇಕ್ಕೆಲಗಳಲ್ಲೂ ಇರುವ ಪುಟಗಳನ್ನು (ಹೊಳ್ಳೆಗಳನ್ನು) ಸ್ಪರ್ಶಿಸುತ್ತದೆ.

ಹನ್ವಂತ ಸೂತ್ರ : ಹನು ಎಂದರೆ ಗದ್ದ. ಗದ್ದದ ಕೊನೆಯನ್ನು ಸ್ಪರ್ಶಿಸುತ್ತಾ ಹಾದುಹೋಗುವ ರೇಖೆ. ಚಿಬುಕದ ಕೆಳಗೆ ಹನು ಇರುತ್ತದೆ.

ಗಳ : ಗದ್ದದ ಕೆಳಭಾಗದಲ್ಲಿರುವ ಮಾಂಸದಿಂದ ತುಂಬಿರುವ ಭಾಗ. ಗಳದ ಕೊನೆಯಲ್ಲಿ ಕೊರಳು ಪ್ರಾರಂಭವಾಗುತ್ತದೆ. ಕೆಲವುಬಾರಿ ಗಳದ ಎತ್ತರವನ್ನು ಸೂಚಿಸಿದರೆ ಅನೇಕ ಬಾರಿ ಇದನ್ನು ಕಂಠದ ಭಾಗವೆಂದು ಲೆಕ್ಕಿಸಲಾಗುತ್ತದೆ. ಇದಕ್ಕೆ ಪ್ರತ್ಯೇಕ ಸೂತ್ರವಿಲ್ಲ. ಆದರೆ ತಾಲಮಾನ ಕ್ರಮಗಳಲ್ಲಿ ಕೆಲವು ಬಾರಿ ಇದನ್ನು ಪ್ರತ್ಯೇಕವಾಗಿ ಸೂಚಿಸಿ ಲೆಕ್ಕಿಸುವ ಕ್ರಮ ಉಂಟು.

ಹಿಕ್ಕಾ ಸೂತ್ರ : ಇಕ್ಕೆಲಗಳ ಭುಜಗಳನ್ನು ಸ್ಪರ್ಶಿಸುತ್ತಾ ಕೊರಳಿನ ಮುಂಭಾಗದ ತಳಭಾಗದ ಕೊನೆಯಲ್ಲಿರುವ ಸಣ್ಣ ತಗ್ಗನ್ನು ಛೇದಿಸುವ ಸೂತ್ರ. ಈ ತಗ್ಗನ್ನು ಹಿಕ್ಕಾ ಎನ್ನುತ್ತಾರೆ.

ಸ್ತನ ಸೂತ್ರ : ಇದನ್ನು ಹೃದಯ ಸೂತ್ರ ಎಂದೂ ಕರೆಯುತ್ತಾರೆ. ಸ್ತನಗಳ ಮಣಿಗಳನ್ನು ಸೇರಿಸುವ ರೇಖೆ ಇದು. ಇದನ್ನೇ ಹೃದಯಾಂತ ಸೂತ್ರ ಎಂದು ಕರೆಯುವುದುಂಟು. ಕೆಲವು ಶಿಲ್ಪ ಶಾಸ್ತ್ರಗಳ ಪ್ರಕಾರ ಸ್ತನಾಂತವನ್ನು ಹೃದಯಾಂತ ಎನ್ನುತ್ತಾರೆ. ಹಾಗೆ ವಿವರಿಸಿದಾಗ ಅದು ಹೊಟ್ಟೆಯ ಪ್ರಾರಂಭ ಸ್ಥಾನವಾಗಿರುತ್ತದೆ. ಸ್ತನಗಳ ತಳಭಾಗವನ್ನು ಈ ರೇಖೆ ಸ್ಪರ್ಶಿಸುತ್ತದೆ. ಸ್ತನ ಎಂಬ ಪದವನ್ನು ಶಿಲ್ಪಶಾಸ್ತ್ರದಲ್ಲಿ ಉಭಯ ಲಿಂಗ ಪದವನ್ನಾಗಿ ಬಳಸಲಾಗುತ್ತದೆ.

ನಾಭಿ ಸೂತ್ರ ಅಥವ ನಾಭ್ಯಂತ ಸೂತ್ರ : ಹೊಕ್ಕುಳಿನ ಮಧ್ಯಭಾಗದಲ್ಲಿ ಹಾದುಹೋಗುವ ರೇಖೆ. ಇದನ್ನು ಶ್ರೋಣಿ ಎಂದು ಹೇಳುತ್ತಾರೆ. ಇದರ ಕೆಳಭಾಗವನ್ನು ಶ್ರೋಣಿ ದೇಶ (ಕಿಬ್ಬೊಟ್ಟೆ) ಎನ್ನುತ್ತಾರೆ. ಈ ಸೂತ್ರವು ಹೊಕ್ಕುಳಿನ ಮಧ್ಯಭಾಗದಲ್ಲಿ ಹಾದುಹೋಗುತ್ತದೆ.

ಮೇಢ್ರ ಅಥವ ಯೋನಿ ಸೂತ್ರ : ಇದು ಲಿಂಗ ಪ್ರದೇಶದಲ್ಲಿ ಹಾದುಹೋಗುವ ಸೂತ್ರ. ಇದನ್ನು ಮೇಢ್ರ ಮೂಲ ಅಥವ ಯೋನಿಮೂಲ ಸೂತ್ರ ಎಂದು ಕೆಲವು ಅಳತೆಗಳಲ್ಲಿ ಹೇಳಿದರೆ ಇನ್ನು ಕೆಲವು ಬಾರಿ ಮೇಢ್ರಾಂತ ಅಥವ ಯೋನ್ಯಾಂತ ಸೂತ್ರ ಎನ್ನುತ್ತಾರೆ. ಹಾಗೆಂದಾಗಲೂ ಲಿಂಗದ ಮೂಲವೆಂದೇ ಅರ್ಥ. ಈ ರೇಖೆಯ ನಂತರವೇ ಜನನೇಂದ್ರಿಯ ಹರಡಿರುತ್ತದೆ. ಈ ಭಾಗದ ಮೇಲಿನ ಸ್ಥಳವನ್ನು ಯೋನಿ / ಲಿಂಗ ಪೀಠ ಎಂದು ಕರೆಯುತ್ತಾರೆ. ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳ ಅಂತರ ಗಣಿಸದೆ ಯೋನಿ ಮತ್ತು ಲಿಂಗ ಎಂಬ ಪದಗಳನ್ನು ಶಿಲ್ಪಶಾಸ್ತ್ರದಲ್ಲಿ ಬಳಸಲಾಗುತ್ತದೆ.

ಊರ್ವಂತ ಸೂತ್ರ ಅಥವ ಜಾನುಮೂರ್ಧಸೂತ್ರ : ತೊಡೆಯ ಭಾಗದ ಕೊನೆಗೊಂಡು ಮೊಣಕಾಲು ಪ್ರಾರಂಭವಾಗುವ ಸ್ಥಳದಲ್ಲಿ ಹಾದುಹೋಗುವ ರೇಖೆ.

ಜಾನುವಧ ಅಥವ ಜಾನುಸೂತ್ರ : ಮೊಣಕಾಲಿನ ಅಡಿಭಾಗದಲ್ಲಿ ಹಾದುಹೋಗುವ ರೇಖೆ. ಇದನ್ನು ಜಾನ್ವಂತ ಸೂತ್ರ ಎಂದೂ ಕರೆಯುತ್ತಾರೆ.

ಜಂಘಾ ಸೂತ್ರ ಅಥವ ನಳಕಾ ಸೂತ್ರ ಅಥವ ಅಕ್ಷಿಗುಲ್ಫ ಸೂತ್ರ : ಮುಂಗಾಲು ಪಾದದ ಕೀಲಿನೊಂದಿಗೆ ಸೇರುವ ಸ್ಥಳದಲ್ಲಿರುವ ಮುಂಗಾಲಿನ ಮೂಳೆಯನ್ನು ನಳಕಾ ಎನ್ನುತ್ತಾರೆ. ಅದರ ಕೆಳಭಾಗದಲ್ಲಿ ಅಥವ ಪಾದದ ಕೀಲುಗಳ ಇಕ್ಕೆಲಗಳಲ್ಲಿರುವ ಮೂಳೆಯ ಮಣಿಗಳ (ಇದನ್ನು ಅಕ್ಷಿ ಗುಲ್ಫ ಎನ್ನುತ್ತಾರೆ) ಮೂಲಕ ಹಾದುಹೋಗುವ ರೇಖೆ. ಈ ರೇಖೆಯ ಅಡಿಯಲ್ಲಿ ಪಾದ ಇರುತ್ತದೆ.

ಭೂಮಿ ಸೂತ್ರ : ಇದು ಪ್ರತಿಮೆಯ ಪಾದದ ಅಡಿಭಾಗದಲ್ಲಿ ಹಾದುಹೋಗುತ್ತದೆ. ಪ್ರತಿಮೆಯ ಎತ್ತರವನ್ನು ಲೆಕ್ಕಿಸುವುದು ಈ ಸೂತ್ರದಿಂದ ಪ್ರಾರಂಭಿಸಿ ಉಷ್ಣೀಷದ ಮೇಲ್ಭಾಗದ ತನಕ. ಪಾದದ ಎತ್ತರವನ್ನು ಹೇಳುವಾಗ ಈ ಸೂತ್ರದಿಂದ ಅಕ್ಷಿಗುಲ್ಫ ಸೂತ್ರದವರೆವಿಗೆ ಇರುವ ಎತ್ತರವನ್ನು ಲೆಕ್ಕಿಸಲಾಗುತ್ತದೆ.

ಇದುವರೆವಿಗೂ ಎತ್ತರವನ್ನು ತಿಳಿಸಲು ಮೂರ್ತಿಗೆ ಅಡ್ಡಲಾಗಿ ಹಾದು ಹೋಗುವ ಹದಿನಾರು ಸೂತ್ರಗಳನ್ನು ವಿವರಿಸಿದ್ದೇವೆ. ಪ್ರತಿಮೆಯ ಅಗಲದ ಅಳತೆಗಳನ್ನು ತಿಳಿಸಲು, ಅವುಗಳ ಅಂಗಾಂಗಗಳ ಭಂಗಿಗಳನ್ನು ತಿಳಿಸಲು ಹಲವು ಸೂತ್ರಗಳನ್ನು ಮೇಲಿಂದ ಪ್ರಲಂಬ

ಫಲಕದ ಮೂಲಕ ತೂಗಿ ಬಿಡಲಾಗುತ್ತದೆ. ಅವುಗಳಿಂದ ಅಂಗಗಳ ದೂರವನ್ನು ಹೇಳುವುದರಿಂದ ಭಂಗಿ ಸ್ಪಷ್ಟವಾಗುತ್ತದೆ. ಇದರೊಂದಿಗೆ ತಲೆ ಮತ್ತು ಇತರ ಅಂಗಾಂಗಳ ಅಗಲಗಳನ್ನು, ದಪ್ಪವನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ವಿಶಿಷ್ಟವಾದ ಪ್ರಲಂಬ (ಲಂಬ) ಫಲಕವನ್ನು ಬಳಸುತ್ತಾರೆ.

ಪ್ರಲಂಬ ಫಲಕವೆಂಬುದು ಎರಡು ಅಂಗುಳ ದಪ್ಪವಾಗಿರುತ್ತದೆ. ಉದ್ದದಲ್ಲಿ ೬೮ ಅಂಗುಳಗಳ ಅಗಲದಲ್ಲಿ ೨೪ ಅಂಗುಳಗಳು ಸಾಧಾರಣವಾದ ಅಳತೆ ಎಂದು ಅಂಗೀಕರಿಸಿ ಲೆಕ್ಕಸಲಾಗಿದೆ. ಫಲಕದ ಸುತ್ತಲೂ ೩ ಅಂಗುಳ ಖಾಲಿ ಸ್ಥಳ ಬಿಡಬೇಕು. ಉದ್ದಲ್ಲಿ ಖಾಲಿಯಾಗಿ ಬಿಡಲು ಸೂಚಿಸಿರುವ ರೇಖೆಯ ಮಧ್ಯಭಾಗದಲ್ಲಿ ಒಂದು ಯವ ವ್ಯಾಸವಿರುವ ರಂಧ್ರವನ್ನು ಕೊರೆಯಬೇಕು. ಈ ಮಧ್ಯಭಾಗದಲ್ಲಿ ಒಂದು ರೇಖೆಯನ್ನು ಲಂಬವಾಗಿ ಎಳೆಯಬೇಕು. ಇದನ್ನು ಮಧ್ಯಸೂತ್ರ ಎನ್ನುತ್ತಾರೆ. ಈ ಸೂತ್ರದ ಎರಡೂ ಕಡೆ ಸಮಾನ ದೂರದಲ್ಲಿ ಇತರ ಸೂತ್ರಗಳು ಹರಡಿಕೊಂಡಿರುತ್ತವೆ. ಈ ಸೂತ್ರಗಳು ಲಂಬವಾಗಿರುತ್ತವೆ. ಮೂರ್ತಿಯು ಕುಳಿತಿದ್ದರೆ ಪೀಠದ ಬಳಿ ಈಸೂತ್ರಗಳು ಮುಗಿಯುತ್ತವೆ. ಇಲ್ಲದೆ ನಿಂತಿದ್ದರೆ ಭೂ ಸೂತ್ರದ ತನಕ ಹರಡಿರುತ್ತವೆ. ಮೇಲಿನಿಂದ ಕೆಳಕ್ಕೆ ಇಳಿಬಿದ್ದಿರುವ ಸೂತ್ರಗಳನ್ನು ಲಂಬಸೂತ್ರ ಎನ್ನುತ್ತಾರೆ. ಇವು ಅಗಲವನ್ನು ಅಳೆಯಲು ನೆರವಾಗುತ್ತವೆ. ಅವುಗಳ ವಿವರವು ಇಂತಿರುತ್ತವೆ.


ಪೂರ್ವ ಸೂತ್ರ : ಇದನ್ನು ಪುರು ಸೂತ್ರ ಎಂದೂ ಕರೆಯುತ್ತಾರೆ. ಕಿರೀಟದ ಮಧ್ಯಭಾಗದಿಂದ ಎಳೆದಿರುವ ಕಾಲ್ಪನಿಕ ರೇಖೆ. ಈ ರೇಖೆಯ ಎರಡೂ ಕಡೆಗಳಲ್ಲಿ ಇತರ ಸೂತ್ರಗಳು ಸಮಾನಾಂತರವಾಗಿ ಪರಸ್ಪರ ಅನುರೂಪತೆಯನ್ನು ಹೊಂದಿರುತ್ತವೆ. ಕಿರೀಟದಲ್ಲಿಯ ಶಿಖಾಮಣಿಯಿಂದ ಪ್ರಾರಂಭವಾಗುವ ಈ ಸೂತ್ರವು ಮೂರ್ತಿಯ ಹಣೆಯ ಮಧ್ಯಭಾಗದಿಂದ ಹುಬ್ಬುಗಳ ಮಧ್ಯೆ, ಮೂಗಿನ ತುದಿಯ ಮೂಲಕ, ಕೊರಳಿನ ಮಧ್ಯೆ, ವಕ್ಷಸ್ಥಳದ ಮಧ್ಯಭಾಗ, ಹೊಟ್ಟೆಯ ಮೂಲಕ ಹೊಕ್ಕುಳನ್ನು ಹಾದು ಮೇಢ್ರ ಮಧ್ಯದಿಂದ ತೊಡೆಗಳ ಮಧ್ಯೆ ಹಾದು ಭೂ ಸೂತ್ರವನ್ನು ತಲುಪುತ್ತದೆ. ಇದೇ ರೀತಿಯಾಗಿ ಪ್ರಲಂಬ ಫಲಕದ ಇನ್ನೊಂದು ಬದಿಗೆ ಮೂರ್ತಿಯ ಹಿಂಭಾಗದಲ್ಲಿ ಬರುವಂತೆಯು ಇನ್ನೊಂದು ಸೂತ್ರವನ್ನು ಲಂಬದಲ್ಲಿ ತೂಗಿ ಬಿಡಬೇಕು.

ಮಧ್ಯ ಸೂತ್ರ ಅಥವ ಕಾಯ ಮಧ್ಯ ಸೂತ್ರ : ಇದು ಪೂರ್ವಸೂತ್ರದ ಹಿಂದೆ ಮತ್ತು ಪುರಸೂತ್ರದ ಮುಂದೆ ಮೂರ್ತಿಯ ದೇಹದ ಮಧ್ಯಭಾಗದಲ್ಲಿ ಹಾದುಹೋಗುತ್ತದೆ. ಇದನ್ನು ಬ್ರಹ್ಮಸೂತ್ರ, ಶಿವಸೂತ್ರ ಎಂದೂ ಕರೆಯುತ್ತಾರೆ. ಇದು ಮೂರ್ತಿಯ ಮೇಢ್ರ ಮಧ್ಯದಲ್ಲಿ ಅಂತ್ಯಗೊಳ್ಳುತ್ತದೆ. ಮುಂದೆ ಮುಂದುವರಿಯುವುದಿಲ್ಲ. ಎತ್ತರದಲ್ಲಿ ದೇಹದ ಮಧ್ಯ ಭಾಗದಲ್ಲಿ ಕೊನೆಗೊಳ್ಳುವುದರಿಂದ ಇದನ್ನು ಕಾಯ ಮಧ್ಯ ಸೂತ್ರ ಎನ್ನುತ್ತಾರೆ.

ಪುಟಪರ್ಯಂತ ಸೂತ್ರ : ಮಧ್ಯಸೂತ್ರದ ಎರಡೂ ಕಡೆಗಳಲ್ಲೂ (ಎಡ ಮತ್ತು ಬಲ) ಸಮಾನದ ದೂರದಲ್ಲಿ ಲಂಬವಾಗಿರುವ ಈ ಸೂತ್ರವು ಮೂಗಿನ ಹೊಳ್ಳೆಗಳ ಪಾರ್ಶ್ವವನ್ನು ಸ್ಪರ್ಶಿಸುತ್ತದೆ. ಈ ಸೂತ್ರವು ಕಣ್ಣಿನ ಒಳಭಾಗದಲ್ಲಿ ಲಂಬವಾಗಿ ಹಾದು ಹೋಗುವುದರಿಂದ ಇದನ್ನು ದೃಗಂತರಿ ಸೂತ್ರ ಎಂದೂ ಕರೆಯುತ್ತಾರೆ.

ವಕ್ತ್ರಬಾಹ್ಯ ಸೂತ್ರ : ಬಾಯಿಯ ಅಂಚನ್ನು ಸ್ಪರ್ಶಿಸುತ್ತಾ ಲಂಬವಾಗಿ ಹರಿಯುವ ಸೂತ್ರ. ಮಧ್ಯಸೂತ್ರದ ಎಡ ಮತ್ತು ಬಲ ಎರಡೂ ಕಡೆಗಳಲ್ಲಿ ಹರಿಯುತ್ತದೆ.

ನೇತ್ರ ಪರ್ಯಂತ ಸೂತ್ರ : ಇದೂ ಕೂಡ ಮಧ್ಯಸೂತ್ರದ ಎರಡೂ ಕಡೆ (ಎಂದರೆ ಬಲ ಮತ್ತು ಎಡ ಭಾಗಗಳಲ್ಲಿ) ಲಂಬವಾಗಿ ಹರಿಯುತ್ತದೆ. ಈ ಸೂತ್ರಗಳು ಎರಡು ಕಣ್ಣುಗಳ ಹೊರ ಅಂಚನ್ನು ಲಂಬ ಮಾನದಲ್ಲಿ ಸ್ಪರ್ಶಿಸುತ್ತವೆ.



ಚಿತ್ರ ೨.೬ : ದೇವಮೂರ್ತಿಯಲ್ಲಿ ಅಂಗಸೂತ್ರಗಳು ಮತ್ತು ಲಂಬಸೂತ್ರಗಳು

ಮುಖಪರ್ಯಂತ ಸೂತ್ರ : ಮುಖದ ಎರಡೂ ಪಕ್ಕಗಳಲ್ಲಿ ಕಿವಿಗಳ ಮೂಲಗಳನ್ನೂ, ಕೆನ್ನೆಗಳನ್ನು ಸ್ಪರ್ಶಿಸುತ್ತಾ ಲಂಬಮಾನದಲ್ಲಿ ಹಾದುಹೋಗುವ ರೇಖೆಗಳು.

ಕರ್ಣಸೂತ್ರ : ಈ ಸೂತ್ರವು ಮಧ್ಯಸೂತ್ರದ ಎರಡ ಮತ್ತು ಬಲಗಳಲ್ಲಿ ಸಮಾನಾಂತರ ದೂರದಲ್ಲಿ ಕಿವಿಗಳ ಹೊರಭಾಗವನ್ನು ಸ್ಪರ್ಶಿಸುತ್ತಾ ಲಂಬಮಾನದಲ್ಲಿ ಹಾದುಹೋಗುತ್ತವೆ.

ಮೇಲೆ ವಿವರಿಸಿರುವ ಪುಟ ಪರ್ಯಂತ ಸೂತ್ರದಿಂದ ಕರ್ಣಸೂತ್ರದವರೆವಿಗಿನ ಐದು ಸೂತ್ರಗಳು ಮೂರ್ತಿಯ ಶಿರೋಭಾಗಕ್ಕೆ ಮಾತ್ರ ಸಂಬಂಧಿಸಿರುವುದರಿಂದ ಇವು ಕಂಠದ ತನಕ ಮಾತ್ರ ಇರುತ್ತವೆ. ನಂತರ ಮುಂದುವರಿಯ ಬೇಕಾಗಿಲ್ಲ.

ಕಕ್ಷಪರ್ಯಂತ ಸೂತ್ರ : ಮಧ್ಯಸೂತ್ರದಿಂದ ಸಮಾನ ದೂರದಲ್ಲಿ ಎರಡೂ ಕಡೆಗಳಲ್ಲಿ ಕಂಕುಳ ಮೂಲಕ ಹಾದುಹೋಗುವ ಸೂತ್ರ, ಈ ಸೂತ್ರವು ಭುಜದ ಒಳಭಾಗವನ್ನು ಸ್ಪರ್ಶಿಸುತ್ತಾ ಲಂಬವಾಗಿ ಹಾದು ಹೋಗುತ್ತದೆ. ಮೇಲಿನ ತೊಳಿನ ಒಳಸೀಮೆಯನ್ನು ಇದು ನಿರ್ದೇಶಿಸಿರುವುದರಿಂದ ಇದನ್ನು ಅಂತರ್‌ಭುಜಾವಧಿ ಸೂತ್ರ ಎಂದೂ ಕರೆಯುತ್ತಾರೆ.


ಬಾಹು ಪರ್ಯಂತ ಸೂತ್ರ ಅಥವಾ ಮಕ್ಷಾಭ್ಯಂತರ ಸೂತ್ರ : ಭುಜಗಳ ಹೊರಭಾಗಗಳನ್ನು ಮಧ್ಯಸೂತ್ರದಿಂದ ಎಡ ಮತ್ತು ಬಲ ಭಾಗಗಳಲ್ಲಿ ಸಮಾನಾಂತರ ದೂರದಲ್ಲಿ ಸ್ಪರ್ಶಿಸುವ ಸೂತ್ರಗಳು . ಇವು ಲಂಬದಲ್ಲಿರುತ್ತವೆ. ಇವು ಕಂಕುಳಗಳಿಂದ ಬಾಹುವಿನ ಹೊರಭಾಗವನ್ನು ನಿದೇಶಿಸಿರುವುದರಿಂದ ಇದನ್ನು ಕಕ್ಷ್ಯಾಭ್ಯಂತರ ಸೂತ್ರ ಎನ್ನುತ್ತಾರೆ. ಲಂಬದಲ್ಲಿ ಹರಿಯುವ ಈ ಸೂತ್ರವು ದೇಹದ ಪಾರ್ಶ್ವದ ಮಧ್ಯಭಾಗದಲ್ಲಿ ಹಾದು ಹೋಗುವುದರಿಂದ ಇದನ್ನು ಅಂಗ ಪಾರ್ಶ್ವಮಧ್ಯಸೂತ್ರ ಎಂದೂ ಕರೆಯುತ್ತಾರೆ.

ಪರಭುಜಾವಧಿ ಸೂತ್ರ : ಈ ಸೂತ್ರವು ಮೂರ್ತಿಯ ತೋಳಿನ ಹಿಂಭಾಗದ ಸೀಮೆಯನ್ನು ಸೂಚಿಸುತ್ತದೆ. ಇವು ಮಧ್ಯಸೂತ್ರದಿಂದ ಸಮಾನ ದೂರದಲ್ಲಿ ಅದರ ಎಡ ಮತ್ತು ಬಲಗಡೆಗಳಿಗೆ ಹರಡಿರುತ್ತವೆ.

ಶಿರಃ ಪೃಷ್ಠಾವಸಾನ ಸೂತ್ರ : ತಲೆಯ ಹಿಂಭಾಗದಲ್ಲಿ ಲಂಬವಾಗಿ ತೂಗಿ ಬಿಡುವ ಸೂತ್ರ, ಇದು ಹಿಂಭಾಗದ ಮಧ್ಯಸೂತ್ರಕ್ಕಿಂತಲೂ ಸ್ವಲ್ಪ ಹಿಂದೆ ಇದ್ದು ಮೂರ್ತಿಯ ತಲೆಯ ಹಿಂಭಾಗವನ್ನು ಸ್ಪರ್ಶಿಸುತ್ತದೆ. ಅಲ್ಲಿಂದ ನೇರವಾಗಿ ಪೃಷ್ಠ ಭಾಗದವರೆವಿಗೂ ಈ ಸೂತ್ರವು ತೂಗಾಡುತ್ತಿರುತ್ತದೆ ಮತ್ತು ಪೃಷ್ಠವನ್ನು ಸ್ಪರ್ಶಿಸುತ್ತದೆ. ಇದನ್ನು ಪರ ಸೂತ್ರ ಅಥವ ಪೃಷ್ಠಸೂತ್ರ ಎಂದೂ ಕರೆಯುತ್ತಾರೆ.

ಲಂಬಸೂತ್ರಗಳನ್ನು ತೂಗಿಬಿಡಲು ಪ್ರಲಂಬ ಫಲಕವನ್ನು ತಯಾರಿಸಿದರೆ ಮಾತ್ರವೇ ಸಾಧ್ಯ. ಈ ಎಲ್ಲಾ ಸೂತ್ರಗಳನ್ನೂ ಪ್ರಲಂಬ ಫಲಕದಲ್ಲಿ ಗುರ್ತಿಸಲಾಗಿದೆ. ಪ್ರಲಂಬ ಫಲಕದ ನಿರ್ಮಾಣವು ವಿಶಿಷ್ಟವಾಗಿದ್ದು ಇದನ್ನು ಮೂರ್ತಿಯ ನಿರ್ಮಾಣ ಕಾಲದಲ್ಲಿ ಬಳಸುತ್ತಾರೆ. ಮರದ ಹಲಿಗೆಯನ್ನು ಅಡ್ಡಲಾಗಿ ಕೋಲುಗಳ ಸಹಾಯದಿಂದ ಮೇಲೆ ನಿಲ್ಲಿಸಬೇಕು. ಇದಕ್ಕಾಗಿ ಒಂದು ಪ್ರತ್ಯೇಕವಾದ ಪೀಠವನ್ನಾದರೂ ನಿರ್ಮಿಸಬಹುದು. ಮೂರ್ತಿಯ ಲಂಬಮಾನದ ಅಳತೆಗಳನ್ನು ಪರಿಶೀಲಿಸಲು ಇದನ್ನು ಬಳಸುತ್ತಾರೆ. ಈ ಹಲಿಗೆಯಲ್ಲಿ ಮಾಡಿರುವ ರಂಧ್ರಗಳ ಮೂಲಕ ಸೂತ್ರಗಳನ್ನು ತೂಗಿಬಿಟ್ಟು ಆ ಸೂತ್ರಗಳಿಗೆ ಕೊನೆಯಲ್ಲಿ ಭಾರವಾಗಿರುವ ಗುಂಡುಗಳನ್ನು ತೂಗಿಬಿಡಬೇಕು. ಮುಖಕ್ಕೆ ಸಂಬಂಧಿಸಿರುವ ಸೂತ್ರಗಳನ್ನು ಪ್ರತಿಮೆಯ ಕೊರಳಿನ ತನಕ ತೂಗಿಬಿಡಬೇಕು. ಪೂರ್ಣ ದೇಹಕ್ಕೆ ಸಂಬಂಧಿಸಿರುವವು ಮಾತ್ರವೇ ಪೂರ್ಣವಾಗಿ ಕೆಳಗಿನ ತನಕ ತೂಗಿಬಿಡಬೇಕು. ಪ್ರಲಂಬ ಫಲಕದ ಅಗಲವು ಮೂರ್ತಿಯ ಮೇಲಿನ ಹೊರಕೈಗಳ ಗರಿಷ್ಠ ದೂರದ ತನಕ ಇರಬೇಕು. ಮೂರ್ತಿಗೆ ಎರಡಕ್ಕಿಂತಲೂ ಹೆಚ್ಚು ಬಾಹುಗಳಿದ್ದರೆ ಹೊರಕ್ಕೆ ಚಾಚಿರುವ ತೋಳುಗಳ ಗರಿಷ್ಠ ಮಿತಿಯನ್ನು ಪರಿಗಣನಗೆ ತೆಗೆದುಕೊಳ್ಳಬೇಕು.

ವಿಷಯದ ಸ್ಪಷ್ಟನೆಗಾಗಿ ಪ್ರಲಂಬ ಫಲಕದ ಒಂದು ಮಾದರಿಯನ್ನು ಉದಾಹರಣಾರ್ಥವಾಗಿ ಕೊಡಲಾಗಿದೆ (ನೋಡಿ–ಚಿತ್ರ ೨.೭) ಪ್ರತಿ ಮೂರ್ತಿಗೂ ಈ ರೀತಿಯ ಫಲಕಗಳನ್ನು ಪ್ರತ್ಯೇಕವಾಗಿ ತಯಾರಿಸಬೇಕಾಗಿರುತ್ತದೆ. ಈ ಸೂತ್ರಗಳಿಗೆ ಸಂಬಂಧಿಸಿರುವ ವಿವರಗಳನ್ನು ಶಾಸ್ತ್ರಗಳಲ್ಲಿ ಸಂದರ್ಭಾನುಸಾರ ವಿವರಿಸಲಾಗಿರುತ್ತದೆ.



☆ ಪಂಚ ಲಂಬ ಸೂತ್ರಗಳು (ಇವನ್ನು ಬ್ರಹ್ಮಸೂತ್ರಗಳು ಎನ್ನುತ್ತಾರೆ) ☆ + ◎ ಐದು+ನಾಲ್ಕು ನವ ಲಂಬಸೂತ್ರಗಳು

ಚಿತ್ರ ೨.೭ : ಪ್ರಲಂಬ ಫಲಕದ ಮಾದರಿ

ಈ ಸಂದರ್ಭದಲ್ಲಿ ಸಿದ್ಧಲಿಂಗಸ್ವಾಮಿಗಳು ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ *ಒಂದೇ ಒಂದು* ಚಿತ್ರವನ್ನು ಕೊಟ್ಟಿದ್ದಾರೆ. ಅದರಲ್ಲಿ ಪ್ರಲಂಬ ಫಲಕದ ತಳಭಾಗದಲ್ಲಿ ನಿರ್ಮಿತವಾಗಲಿರುವ ಶಿಲ್ಪ ಮತ್ತು ಹೊರಕ್ಕೆ ಕಾಣಿಸುವ ಲಂಬಸೂತ್ರಗಳನ್ನು ಮಾತ್ರವೇ ಮುಂಭಾಗದಿಂದ ಮತ್ತು ಪಾರ್ಶ್ವನೋಟದಿಂದ ಲೇಖಿಸಿದ್ದಾರೆ. ಈ ಚಿತ್ರಲೇಖನಕ್ಕೆ ಪ್ರಸ್ತುತದಲ್ಲಿ ವಿವರಿಸಿರುವ ಎಲ್ಲಾ ಅಂಗ ಮತ್ತು ಲಂಬ ಸೂತ್ರಗಳ ಮತ್ತು ಅವುಗಳ ಅಳತೆಗಳು, ಪ್ರಲಂಬ ಫಲಕದ ನಿರ್ಮಾಣಕ್ರಮ ಸಂಪೂರ್ಣವಾಗಿ ತಿಳಿದಿದ್ದರೆ ಮಾತ್ರವೇ ಪ್ರಸ್ತುತದಲ್ಲಿ ಸ್ವಾಮಿಗಳು ಕೊಟ್ಟಿರುವ ಚಿತ್ರರಚನೆ ಮಾಡಲು ಸಾಧ್ಯ. ಚಿತ್ರವನ್ನು ಅರ್ಥಮಾಡಿಕೊಳ್ಳಲು ಈ ತಿಳಿವಿನ ಅವಶ್ಯಕತೆ ಇರಬೇಕು. ಇದರಿಂದ ಪ್ರಲಂಬ ಫಲಕದ ಬಗ್ಗೆ ಇರುವ ಒಂದೇ ಚಿತ್ರದಿಂದಲೇ ಸಂಪೂರ್ಣ ತಿಳಿವನ್ನು ಗಳಿಸುವುದು ಸಾಧ್ಯವಿಲ್ಲ. ಆದರೆ ಆ ಚಿತ್ರಕ್ಕೆ ಸಂಬಂಧಿಸಿದಂತೆ ಚಿತ್ರವು ಪರಿಪೂರ್ಣವಾಗಿಯೇ ಇದೆ.

ಬಹುಶಃ ಸಂಪಾದಕರು ಈ ಅಂಶವನ್ನು ಗಮನಿಸಲಿಲ್ಲವೋ ಅಥವಾ ಅವರ ಅವಗಾಹನೆಯೇ ಅಪರಿಪೂರ್ಣವಾಗಿತ್ತೋ ಹೇಳಲು ಈಗ ಸಾಧ್ಯವಾಗುವುದಿಲ್ಲ. ಆದರೆ ಸಾಂದರ್ಭಿಕ ಚಿತ್ರ ಜ್ಞಾನ ತುಂಬಾ ಚೆನ್ನಾಗಿದ್ದ ಸಿದ್ಧಲಿಂಗಸ್ವಾಮಿಗಳು ಈ ರೀತಿ ಚಿತ್ರವನ್ನು ಉಳಿದ ಭಾಗದ ತಿಳಿವು ಗುರುಕುಲದ ಗುರುಗಳು ಹೇಳುತ್ತಾರೆ ಎಂದೇ ನಂಬಿದ್ದರು ಎನಿಸುತ್ತದೆ. ಸಂಪಾದಕರು ಈ ವಿಷಯವನ್ನು ಗಮನಿಸಿಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ. ಈ ಚಿತ್ರ ಸಂದರ್ಭಕ್ಕೆ ಈ ಮೊದಲು ವಿವರಿಸಿರುವ



ಚಿತ್ರ ೨.೮ : ಪ್ರಲಂಬ ಫಲಕದಲ್ಲಿ ದೇವ ಪ್ರತಿಮೆ
(ಸಿದ್ಧಲಿಂಗಸ್ವಾಮಿಗಳು ಕೊಟ್ಟಿರುವ ಚಿತ್ರ)

ಎಲ್ಲಾ ತಿಳಿವಿನ ಜ್ಞಾನದ ಅನಿವಾರ್ಯತೆ ಇದೆ. ಅದನ್ನು ಗ್ರಹಿಸದೆ ಹೋದವರಿಗೆ ಬಂಜೆಗೆ ನಿಲುಕದ ತಾಯ್ತನದ ಸಂಕಟದ ಅನುಭವ ಮತ್ತು ತಾಯ್ತನದ ನಂತರದ ಸಂತಸ ಎರಡೂ ಮಹಾದೂರ ಎಂಬ ಮಾತು ಸಂಪೂರ್ಣವಾಗಿ ಅನ್ವಯಿಸಬೇಕಾಗಿರುತ್ತದೆ.

ಇವು ರೇಖಾಚಿತ್ರಗಳ ವಿಶ್ಲೇಷಣ ಮಾತ್ರವೇ. ಪ್ರತಿಮಾ ಲಕ್ಷಣ ಸಂಬಂಧದಲ್ಲಿ ಸ್ವಾಮಿಗಳು ವರ್ಣಚಿತ್ರಗಳನ್ನು ರಚಿಸಿದ್ದಾರೆ. ಅವುಗಳಿಗೆ ಬಳಸಿರುವ ಅಳತೆಗಳ ವಿವರಗಳನ್ನು ಕೆಲವೆಡೆ ಸೂಚಿಸಿದ್ದಾರೆ. ಧ್ಯಾನಶ್ಲೋಕದ ವಿವರಗಳನ್ನು ಚಿತ್ರಿಸಿರುವ ಕ್ರಮವನ್ನೂ ಇದೇ ತೆರನಾಗಿ ನಾವು ವಿಶ್ಲೇಷಿಸಿ ಹೇಳಬಹುದು. ಅಷ್ಟತಾಲದಲ್ಲಿ ಕಶ್ಯಪರ್ಷಿ, ಉತ್ತಮದಶತಾಲದಲ್ಲಿ ಜಿನ, ಮಧ್ಯಮ ದಶತಾಲ ಸ್ತ್ರೀಮಾನ ಅನುಸಾರ ಸರಸ್ವತೀ ಮತ್ತು ಮಹಾಲಕ್ಷ್ಮೀ, ಭಕ್ತ ಮೂರ್ತಿಗಳಲ್ಲಿ ದಶತಾಲದಲ್ಲಿ ಸಾಯುಜ್ಯ ಮೂರ್ತಿ, ನವತಾಲದಲ್ಲಿ ವಿದ್ಯಾಧರ ಮತ್ತು ಗರುಡ ಹೀಗೆ ಹಲವು ಚಿತ್ರಗಳನ್ನು ವರ್ಣಗಳಲ್ಲಿ ಬರೆದಿದ್ದಾರೆ.

ಆ ಕಾಲದಲ್ಲಿ ಈ ರೀತಿಯಾಗಿ ತಾಲಮಾನ ಕ್ರಮವನ್ನು ಅನುಸರಿಸಿ ಚಿತ್ರರಚಿಸುವವರು ಭಾರತದ ಇತರ ಭಾಗಗಳಲ್ಲಿ ಇರಲಿಲ್ಲ ಕರ್ನಾಟಕದಲ್ಲಿ ಸಿದ್ಧಲಿಂಗ ಸ್ವಾಮಿಗಳು ಲಭಿಸಿದರು ಎಂದು ಪ್ರೊ॥ ಪಿ.ಕೆ. ಆಚಾರ್ಯ ಅವರು ಸಂತೋಷಿಸಿ ಸ್ವಾಮಿಗಳನ್ನು ಮೆಚ್ಚಿಕೊಂಡಿದ್ದಾರೆ. ಆದರೆ ***ಶಾಸ್ತ್ರೀಯ ಕ್ರಮದಲ್ಲಿ ತಾಲಮಾನವನ್ನು ಅನುಸರಿಸಿ ಚಿತ್ರ ಬರೆಯುವವರು, ಶಿಲ್ಪವನ್ನು ಮಾಡುವವರು ಈಗ ಕರ್ನಾಟಕದಲ್ಲೂ ಯಾರು ಇಲ್ಲ ಎಂಬುದನ್ನು ನಮ್ಮವರ್‍ಯಾರೂ ಇದುವರೆವಿಗೂ ಗುರ್ತಿಸಿಲ್ಲ ಎಂಬುದು ನಮ್ಮ ಸಾಂಸ್ಕೃತಿಕ ದುರಂತವಾಗಿದೆ.***

ಬಹುಶಃ ಈ ಚಿತ್ರಗಳ ಹಿಂದಿರುವ ಅಪಾರ ಶಿಲ್ಪಶಾಸ್ತ್ರ ಜ್ಞಾನದ ಕಿರುಪರಿಚಯವಾದರೂ ಈ ವಿವರಣೆಗಳು ಓದುಗರಿಗೆ ಉಂಟುಮಾಡುತ್ತದೆ ಎಂದು ನಂಬುತ್ತೇನೆ.


ಮೈಸೂರಿನ ಶ್ರೀ ಸಿದ್ಧಲಿಂಗಸ್ವಾಮಿಗಳಿಗೆ ಲಭ್ಯವಾದ ಈ ಗೌರವವನ್ನು ಕನ್ನಡ ನಾಡಿನವರು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿರುವ ವಿಷಯವೇ ಆಗಿದ್ದರೂ ಕನ್ನಡಿಗರಿಗೆ ಇದರ ಪ್ರಾಮುಖ್ಯ ತಿಳಿಯುವುದರಲ್ಲೂ ಕಂದರ ಉಂಟಾದ್ದರಿಂದ ಹೇಳಲಿಲ್ಲ. ಆದರೆ ಇದನ್ನು ಅರಿತ ಹಲವರು ಮಾತ್ರ ಬಾಯ್ಬಿಡಲಿಲ್ಲ. ಇಂತಾಗಿ ಕನ್ನಡ ನಾಡಿನ ಈ ಮಹಾಶಿಲ್ಪಿಯು ತೀರಾ ಸಾಧಾರಣನೆಂದೇ ಗುರ್ತಿಸಲ್ಪಟ್ಟು, ವ್ಯವಹರಿತನಾಗಿದ್ದಾನೆ. ಇಂದಿಗೂ ಇವರನ್ನು ಸ್ಮರಿಸುವವರು ಸಾಮಾನ್ಯರಲ್ಲಾಗಲಿ, ವಿದ್ವಾಂಸರಲ್ಲಾಗಲಿ, ಸರ್ಕಾರದಲ್ಲಾಗಲಿ ಯಾರೂ ಕಾಣಿಸುತ್ತಿಲ್ಲ. ಹೀಗೆ **ತಾವು ಹುಟ್ಟಿರುವ ಕನ್ನಡ ನಾಡಿನಲ್ಲೇ ಈ ಶಿಲ್ಪಿಯು ಅಜ್ಞಾತರಾಗಿದ್ದಾರೆ.**

ಪ್ರಸ್ತುತ, ಮಾನಸಾರದಲ್ಲಿ ಲಭಿಸುವ ಇಪ್ಪತ್ತೊಂದು ಚಿತ್ರಗಳಲ್ಲಿರುವ ಜಟಾ ಮಕುಟ, ಕಿರೀಟ ಮಕುಟ, ಕರಂಡ ಮಕುಟ ಮತ್ತು ಆಭರಣಗಳು ಕರ್ನಾಟಕ ಶೈಲಿಯವು ಎಂಬುದನ್ನೂ ನಮ್ಮ ಶಿಲ್ಪತಜ್ಞರೂ ಗುರ್ತಿಸಿಲ್ಲ. ಇವಕ್ಕೂ ತಮಿಳುನಾಡಿನ ಚೋಳಶೈಲಿಯ ಆಭರಣಗಳಿಗೂ ಇರುವ ಅಂತರವನ್ನು ತಜ್ಞರು ಹೇಳಿಯೂ ಇಲ್ಲ !


ಈ ಉಲ್ಲೇಖದಿಂದ ಶ್ರೀ ಸಿದ್ದಲಿಂಗಸ್ವಾಮಿಗಳಲ್ಲಿದ್ದ ಅತ್ಯಂತ ವಿಶೇಷ ಮತ್ತು ಅಪ್ರತಿಮವಾದ ಗುಣವೆಂದರೆ ಶಾಸ್ತ್ರದ ವರ್ಣನೆಯ ವಿವರಗಳನ್ನು ಕಣ್ಣಿಗೆ ಕಾಣಿಸುವಂತೆ ರೂಪಿಸಿರುವ ಶಕ್ತಿ. ಇದು ಅಖಿಲ ಭಾರತದ ಮಟ್ಟದಲ್ಲಿ ಸಿದ್ಧಲಿಂಗಸ್ವಾಮಿಗಳಲ್ಲಿ ವ್ಯಕ್ತವಾಗಿರುವ ಅಸಾಧಾರಣ ಮತ್ತು ಅತ್ಯಂತ ಅಪರೂಪದ ಗುಣ ಎಂಬ ವಿವರಣೆಯು ಪ್ರೊ॥ ಪ್ರಸನ್ನಕುಮಾರ ಆಚಾರ್ಯರ ಅನುಭವ ಪೂರ್ವಕ ನುಡಿಗಳನ್ನು ಖಚಿತವಾಗಿ ಸಿದ್ಧಪಡಿಸುತ್ತವೆ. ಇದೇ ಗುಣವೇ ಸ್ವಾಮಿಗಳ ಶಿಲ್ಪಗಳಲ್ಲಿ, ವರ್ಣಚಿತ್ರಗಳಲ್ಲಿ ಕಾಣಿಸುತ್ತದೆ. ಇಂತಹ ವಿದ್ವಾಂಸ ಶಿಲ್ಪಿಯಿಂದ ಮಾನಸಾರದ ಈ ಭಾಗಕ್ಕೆ ಮೂರುನೂರು ಚಿತ್ರಗಳು ಬೇಕೆಂದು ಬಯಸಿದ್ದರೂ ಅವನ್ನು ರಚಿಸದೆ ಹೋದ ಕಾರಣವನ್ನು ನಾವು ಅರಿಯಬೇಕಾಗಿದ್ದರೆ ಸಿದ್ದಲಿಂಗ ಸ್ವಾಮಿಗಳು ಆ ಕಾಲದಲ್ಲಿ ಏನು ಮಾಡುತ್ತಿದ್ದರು ಎಂಬುದನ್ನು ನಾವು ವಿವರವಾಗಿಯೇ ತಿಳಿಯಬೇಕು.

ಈ ಅಧ್ಯಾಯದ ಪ್ರಾರಂಭದಲ್ಲಿ ಮೈಸೂರಿನ ಶಿಲ್ಪಿ ಸಿದ್ಧಲಿಂಗ ಸ್ವಾಮಿಗಳ ಪರಿಚಯವನ್ನು ಪ್ರೊ॥ ಎಂ.ಎಚ್. ಕೃಷ್ಣ ಅವರು ಪ್ರೊ॥ ಪಿ.ಕೆ. ಆಚಾರ್ಯ ಅವರಿಗೆ ಮಾಡಿಸಿದರು ಎಂಬ ವಿಷಯವನ್ನು ಅವರೇ ಮಾನಸಾರದ ಮುನ್ನುಡಿಯಲ್ಲಿ ಹೇಳಿರುವುದನ್ನು ಉಲ್ಲೇಖಿಸಿದೆ. ಸಾಧಾರಣವಾಗಿ ವಿಶ್ವವಿದ್ಯಾನಿಲಯಗಳ ವಿದ್ವಾಂಸರ ಪರಿಚಯ ಸಾಂಪ್ರದಾಯಿಕ ಶಿಲ್ಪಿಗಳಿಗೆ ಇರುವುದಿಲ್ಲ. ವಿಶ್ವವಿದ್ಯಾನಿಲಯಗಳ ವಿದ್ವಾಂಸರಿಗೆ ಶಿಲ್ಪಿಗಳ ಬಗ್ಗೆ ಆಸಕ್ತಿಯೂ ಇರುವುದಿಲ್ಲ. ಅಂತಹುದರಲ್ಲಿ ಪ್ರೊ॥ ಕೃಷ್ಣ ಅವರಿಗೆ ಸಿದ್ಧಲಿಂಗ ಸ್ವಾಮಿಗಳ ಪರಿಚಯವಾದದ್ದು ಹೇಗೆ? ಅವರ ಶಾಸ್ತ್ರ ಸಾಮರ್ಥ್ಯದ ತಿಳಿವು ಗೊತ್ತಾದದ್ದು ಹೇಗೆ?

ಈ ವಿವರಗಳನ್ನು ತಿಳಿಯಬೇಕಾಗಿದ್ದರೆ ನಾವು ಚಾರಿತ್ರಿಕವಾಗಿ ಇನ್ನೂ ಹಿಂದಿನ ಕಾಲಕ್ಕೆ ಹೋಗಿ ಸಿದ್ಧಲಿಂಗಸ್ವಾಮಿಗಳ ಚಟುವಟಿಕೆಗಳ ಬಗ್ಗೆ ಹೆಚ್ಚು ವಿವರಗಳನ್ನು ತಿಳಿಯವುದು ಅನಿವಾರ್ಯವಾಗುತ್ತದೆ.



ಚಿತ್ರ : ೨. ೯ ಸುವರ್ಣ ಕಂಚುಕ



ಚಿತ್ರ : ೨. ೧೦ ಸುವರ್ಣ ಹಾರ

೩

ಬೇಲೂರು ದೇವಾಲಯದ ಜೀರ್ಣೋದ್ಧಾರ

ಕಲೆಯಿಂದ ಶಿಲೆಯಮೃತ । ಲಲಿತಕಲೆ ಹೃತ್ ಸುಕೃತ । ಬೇಲೂರು ನೋಡು ॥
ಅಳಿವ ಲೋಕದ ನಡುವೆ । ಉಳಿವ ರಸಘಟಿಕೆ । ಬಾಳ್ಜೀನ ಗೂಡು ॥

–ಎಂದು ಹಾಡಿರುವ ಡಾ॥ ಡಿ.ವಿ.ಜಿ. ಅವರು ನಮ್ಮ ಜನರ ಅಂತರಂಗ ಚರಿತ್ರೆಯು ಮೂರ್ತೀಭವಿಸಿ ನಿಂತಿರುವುದು ನಮ್ಮ ದೇವಾಲಯ ಶಿಲ್ಪದಲ್ಲಿ ಎಂದು ನಂಬಿದ್ದವರು. ಮನೆಗಿಂತ ಮುಖ್ಯವಾದದ್ದು ದೇವಸ್ಥಾನ. ಸುಖದಲ್ಲಿ ಸುಕೃತಕ್ಕೂ, ದುಃಖದಲ್ಲಿ ಧೈರ್ಯಕ್ಕೂ ಆಕರ ಭೂಮಿಯಾಗಿರುವುದು ದೇವಸ್ಥಾನವೇ ಎಂದು ನಂಬಿ ಬದುಕಿದ ಜನರು ನಮ್ಮವರು. ಆದ್ದರಿಂದ ಅವರ ಕಾವ್ಯ, ಸಂಗೀತ, ಶಿಲ್ಪ, ಚಿತ್ರಗಳಲ್ಲಿ ಅವರ ಸ್ವಭಾವ, ಅವರ ಮನಸ್ಸಿನ ಅಂತರಾಳದಲ್ಲಿ ಅಡಗಿಕೊಂಡಿರುವ ಗುಣ ಶಕ್ತಿಗಳು, ಅವರ ಬದುಕಿನ ಮೂಲಧ್ಯೇಯಗಳು, ಸಂಕಲ್ಪಗಳು ಎಂತಹವು ಎಂಬುದಕ್ಕೆ ಈ ಶಿಲ್ಪಗಳು ಸಾಕ್ಷೀಭೂತವಾಗಿವೆ ಎಂದು ಅಂಗೀಕರಿಸಿದ್ದವರು.

ಡಾ॥ ಡಿ.ವಿ.ಜಿ. ಅವರಿಗೆ ನಮ್ಮ ದೇವಾಲಯಗಳೆಂದರೆ ಅಪಾರ ಪ್ರೀತಿ. ಅವುಗಳನ್ನು ದರ್ಶಿಸುವುದು ಎಂದರೆ ಅಮಿತ ಉತ್ಸಾಹ. ೧೯೨೮ರಲ್ಲಿ ಜರ್ಮನಿಯ ಖ್ಯಾತ ತತ್ತ್ವಜ್ಞಾನಿಗಳಾದ ಪ್ರೊ॥ ರೊಡಾಲ್ಫ್ ಒಟ್ಟೊ ಎಂಬ ವಿದ್ವಾಂಸರು ಡಾ॥ ಡಿ.ವಿ.ಜಿ. ಅವರನ್ನು ಭೇಟಿಯಾದರು. ಮಾತಿನ ಸಂದರ್ಭದಲ್ಲಿ ಬೇಲೂರಿನ ಚನ್ನಕೇಶವ ದೇವಾಲಯದ ಪ್ರಸ್ತಾಪ ಬಂತು. ಅದರ ಬಗ್ಗೆ ಮಾತೂ ವಿವರಣೆಗಳೂ ನಡೆದವು. ಈ ದೇವಾಲಯವನ್ನು ನೋಡಬೇಕೆಂದು ಆ ವಿದ್ವಾಂಸರು ಬಯಸಿದರು. ಆಗ ಡಾ॥ ಡಿ.ವಿ.ಜಿ. ಅವರು ಬೆಂಗಳೂರಿನಲ್ಲಿ ಇದ್ದರು. ಆದ್ದರಿಂದ ಬೇಲೂರಿಗೆ ಹೋಗುವ ವ್ಯವಸ್ಥೆಯಾಯಿತು.

ಬೇಲೂರಿಗೆ ಹೋದ ಅವರಿಗೆ ಕಂಡುಬಂದದ್ದು ಮರ ಪೊದೆಗಳ ಮಧ್ಯೆ ಹಲವು ಭಾಗಗಳಲ್ಲಿ ಶಿಥಿಲವಾಗಿ ಕತ್ತಲೆ ಮುಸುಕಿಕೊಂಡಿದ್ದ. ನೋಡಲು ಅಸಾಧ್ಯವಾಗುವಂತೆ ಕಣ್ಣಿಗೂ ಕಾಲಿಗೂ ಅಡ್ಡವಾಗಿ ಬಿದ್ದಿದ್ದ ಕಲ್ಲುಕಂಬ, ಮುರುಕು ಚಪ್ಪಡಿಗಳು. ಇದನ್ನು ಎದುರಿಸಿ ಮೀರಿನಿಂತು ನೋಡಿದರೆ ಬಹು ಸೊಗಸಿನ ಅಮರಾವತಿ. ಆ ಜರ್ಮನ್ ವಿದ್ವಾಂಸರು ಬಹು ಪ್ರಯತ್ನ ಕುತೂಹಲಗಳಿಂದ ಅವ್ಯವಸ್ಥೆಯ ಕಾಡುಕತ್ತಲಲ್ಲಿ ಹುದುಗಿದ್ದ ಶಿಲ್ಪ ಸೌಂದರ್ಯವನ್ನು ವೀಕ್ಷಿಸಿದರು. ದೇವಾಲಯದ ಪ್ರಸ್ತುತ ದೈನ್ಯ ಸ್ಥಿತಿಗಾಗಿ ಮರುಗಿದರು.

ಆಗ್ಗೇ ಮೈಸೂರು ರಾಜ್ಯದಲ್ಲಿದ್ದ ಅನೇಕ ದೇವಾಲಯಗಳು ಶಿಥಿಲವಾಗಿದ್ದು ಪಾಶ್ಚಾತ್ಯರು ಸ್ಥಳೀಯರ ನೆರವನ್ನು ಪಡೆದುಕೊಂಡು ಶಿಥಿಲಗಳಲ್ಲಿದ್ದ ಪ್ರತಿಮೆಗಳನ್ನು, ಶಿಲ್ಪಗಳನ್ನು ಕದೊಯ್ದದ್ದು ಉಂಟು. ಹಾಗೆಯೇ ಬೇಲೂರಿನ ದೇವಾಲಯದ ಗರ್ಭಗುಡಿಯ ಮೇಲಿದ್ದ ವಿಮಾನ ಶಿಥಿಲಗೊಂಡಾಗ ಅದನ್ನು ಬಿಚ್ಚಿ ಡನ್ಮಾರ್ಕಿಗೆ ಕೊಂಡೊಯ್ದಿದ್ದಾರೆ ಎಂಬುದು ಸುದ್ದಿ. ಆದ್ದರಿಂದಲೇ ಈಗಿನ ದೇವಾಲಯಕ್ಕೆ ವಿಮಾನ ಗೋಪುರವಿಲ್ಲ. ಗೋಪುರವು ಡೆನ್ಮಾರ್ಕಿನ ವಸ್ತುಸಂಗ್ರಹಾಲಯದಲ್ಲಿದೆ ಎಂಬ ವದಂತಿ ಈಗಲೂ ಇದೆ. ಆದ್ದರಿಂದ ಅಲ್ಲಿಂದ ಹಿಂದಿರುಗುವಾಗ ಪ್ರೊ॥ ಒಟ್ಟೊ ಅವರು ಡಾ॥ ಡಿ.ವಿ.ಜಿ. ಅವರಲ್ಲಿ ಒಂದು ವಿನಂತಿಯನ್ನೂ ಮಾಡಿಕೊಂಡರು: ‘ಈ ದೇವಾಲಯ ನಿಮ್ಮ ಸರ್ಕಾರಕ್ಕೆ ಅನಾವಶ್ಯಕವಾದದ್ದು ಎನಿಸುತ್ತಿರುವಂತಿದೆ.

ಇದೇ ನಿಜವಾದರೆ ಇದನ್ನು ಮಾರುತ್ತಾರೆಯೇ? ವಿಚಾರಿಸಿ. ನಾನು ಕೊಂಡುಹೋಗಲು ಸಿದ್ಧನಾಗಿದ್ದೇನೆ.'

ಡಾ॥ ಡಿ.ವಿ.ಜಿ. ಅವರಿಗೆ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೂ, ದಿವಾನರೂ ಪರಿಚಿತರಾಗಿದ್ದರು. ಆದ್ದರಿಂದ ಈ ಮಾತನ್ನು ನೇರವಾಗಿ ಅವರಿಗೆ ತಲುಪಿಸುವ ಸ್ಥೈರ್ಯ ಡಾ॥ ಡಿ.ವಿ.ಜಿ. ಇದೆ ಎಂದೇ ಈ ಮಾತನ್ನು ಆ ವಿದ್ವಾಂಸರು ಹೇಳಿದ್ದರು.

ಜರ್ಮನಿಯ ವಿದ್ವಾಂಸರ ಮಾತು ಡಾ॥ ಡಿ.ವಿ.ಜಿ. ಅವರ ಮನಸ್ಸಿನ ಮೇಲೂ ಬಹು ಗಾಢವಾದ ಪರಿಣಾಮವನ್ನು ಬೀರಿತ್ತು. ಹೊರಗಿನವರಿಗೆ ಅಮೂಲ್ಯವಾಗಿರುವುದು ನಮ್ಮ ಪಾಲಿಗೆ ಕಸವಾಗಿದೆಯಲ್ಲಾ ಎಂದು. ಈ ಮಾತನ್ನು ದಿವಾನರ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಿವಿಗೂ ತಲುಪಿಸಿದರು. ಈ ಮಾತಿಗೆ ಒಡೆಯರು ಎಚ್ಚೆತ್ತರು. ಕೂಡಲೇ ಬೇಲೂರು ಚನ್ನಕೇಶವನ ದೇವಾಲಯದ ಜೀರ್ಣೋದ್ಧಾರ ಕಾರ್ಯ ಪ್ರಾರಂಭ ಮಾಡಲು ಮನಸ್ಸು ಮಾಡಿದರು.

ಮೈಸೂರಿನಲ್ಲಿ ಮರದ ಹಲಗೆಗಳಿಂದಲೇ ನಿರ್ಮಾಣವಾಗಿದ್ದ ಅರಮನೆಯು ೧೮೯೭ರಲ್ಲಿ ಬೆಂಕಿಯ ಆಕಸ್ಮಿಕಕ್ಕೇ ತುತ್ತಾಗಿ ಸಂಪೂರ್ಣವಾಗಿ ಸುಟ್ಟುಹೋಗಿತ್ತು. ಅದರ ಸ್ಥಾನದಲ್ಲಿ ಹೊಸ ಅರಮನೆಯ ನಿರ್ಮಾಣವನ್ನು ೧೮೯೭ರಲ್ಲಿ ಪ್ರಾರಂಭಿಸಿ ೧೯೧೨ರಲ್ಲಿ ಮುಗಿಸಿದ್ದರು. ಆದರೆ ಆ ಅರಮನೆಯು ಪೂರ್ಣವಾಗಿ ಭಾರತೀಯ ವಾಸ್ತುಶೈಲಿಯದಲ್ಲ. ಅದಕ್ಕೆ ಹತ್ತಿರವಾದದ್ದೂ ಅಲ್ಲ. ಆಗ್ಗೆ ಮೈಸೂರಿನಲ್ಲಿ ಇಂಗ್ಲೆಂಡಿನ ಕಟ್ಟಡಗಳನ್ನು ಹೋಲುವಂತಹ ಹಲವು ಕಟ್ಟಡಗಳ ವಿನ್ಯಾಸಗಳ ಮೇಲಾಟ ನಡೆದಿತ್ತು. ಹೆನ್ರಿ ಇರ್ವಿನ್ ಎಂಬ ಇಂಗ್ಲೆಂಡಿನ ವಾಸ್ತುಶಿಲ್ಪಿಯು ಕೊಟ್ಟ ಕಟ್ಟಡ ವಿನ್ಯಾಸವನ್ನು ಅಂಗೀಕರಿಸಿ ಅದರಂತೆ ಮೈಸೂರಿನ ಅರಮನೆಯ ನಿರ್ಮಾಣವಾಯಿತು.

ದೇವಾಲಯ ನಿರ್ಮಾಣದ ಪರಂಪರೆಗೆ ಐತಿಹಾಸಿಕವಾಗಿ ಕರ್ನಾಟಕಕ್ಕೆ ಸಾವಿರಾರು ವರ್ಷಗಳ ಹಿರಿಮೆ ಇದ್ದರೂ, ವಿಜಯನಗರದ ಕಾಲದಲ್ಲಿ ಸೊರಗಿ ನೆರೆ ರಾಜ್ಯದ ಚೋಳ ಶೈಲಿಯು ಮೇಲ್ಗೈಯನ್ನು ಸಾಧಿಸಿತ್ತು. ಕಪ್ಪು ಮೆದುಕಲ್ಲಿಗೆ ಬದಲಾಗಿ ಗಡುಸಾದ ಬಿಳಿಕಲ್ಲಿನದೇ ಸಾಮ್ರಾಜ್ಯ ಸ್ಥಾಪಿತವಾಗಿತ್ತು. ಅದೇ ಪರಿಸ್ಥಿತಿಯು ಮೈಸೂರರಸರ ಆಳ್ವಿಕೆಯಲ್ಲೂ ಮುಂದುವರಿದಿತ್ತು.

ಶಾಸ್ತ್ರೀಯ ಶಿಲ್ಪ ಎಂದರೆ ಎಲ್ಲವೂ ಒಂದೇ ಅಲ್ಲ. ನಾವು ಸಾಧಾರಣವಾಗಿ ದೇವತಾಮೂರ್ತಿಯನ್ನು ಮಾಡುವ ಶಿಲ್ಪಿಯನ್ನು ಶಿಲ್ಪಿ ಎಂದು ಗುರ್ತಿಸುತ್ತೇವೆ. ಆದರೆ ಅತನ ಶಿಲ್ಪ ಮೂರ್ತಿ ಕೆಲಸಕ್ಕೆ ಮಾತ್ರವೇ ಸೇರುತ್ತದೆ. ಆತನಿಗೆ ದೇವಾಲಯ ಶಿಲ್ಪದ ಪರಿಚಯ ಇರುವ ಅವಶ್ಯಕತೆ ಇರುವುದಿಲ್ಲ. ಎಂದರೆ ದೇವಾಲಯ ನಿರ್ಮಾಣಕಲೆಯು ಪ್ರತ್ಯೇಕವಾಗಿದ್ದು ಶಿಲ್ಪಶಾಸ್ತ್ರದಲ್ಲಿ ಒಂದು ವಿಶೇಷ ಭಾಗ. ಅದರಲ್ಲಿ ಅರಮನೆ ನಿರ್ಮಾಣ, ಕೋಟೆ ನಿರ್ಮಾಣ, ನಗರ ಮತ್ತು ಗ್ರಾಮ ಯೋಜನೆಯ ವಿನ್ಯಾಸ, ರಥ ನಿರ್ಮಾಣ, ಆಯುಧ ನಿರ್ಮಾಣ ಹೀಗೆ ಹಲವಾರು ವಿಭಾಗಗಳುಂಟು. ಆದರೆ ಶಿಲ್ಪಶಾಸ್ತ್ರದ ತಿಳಿವು ಆಗ್ಗೆ ನಶಿಸಿತ್ತು. ದೇವಾಲಯವನ್ನು ಕಟ್ಟುವವನು ಶಿಲ್ಪಿ ಎಂದು ಮಾತ್ರವೇ ಜನರು ತಿಳಿದಿದ್ದರು. ಪಾಶ್ಚಾತ್ಯ 'ಎಂಜಿನಿಯರಿಂಗ್' ತಿಳಿವು ಆಳವಾಗಿ ಪ್ರವೇಶಿಸಿ ಬಲವಾಗಿ ಸ್ಥಾಪಿತಗೊಂಡಿತ್ತು. ಆದ್ದರಿಂದ ಪಾರಂಪರಿಕ ಶಿಲ್ಪಶಾಸ್ತ್ರ ತೆರೆಯ ಮರೆಗೆ ಸೇರಿತ್ತು. ಪಾರಂಪರಿಕ ಶಿಲ್ಪಗುರುಕುಲಗಳು ಎಂದೋ ನಾಶವಾಗಿದ್ದವು.

ಅಂದಿನ ಮೈಸೂರು ರಾಜ್ಯವು ವಿಜಯನಗರ ಸಾಮ್ರಾಜ್ಯದಿಂದ ಸ್ವತಂತ್ರರಾಜ್ಯವಾಗಿ ರೂಪುಗೊಂಡು ಮೈಸೂರಿನ ಮಹಾರಾಜರಾದ ಒಡೆಯರ್ ವಂಶದವರ ಆಳ್ವಿಕೆಗೆ ಸೇರಿತ್ತು. ಹಿಂದಿನ ಹೊಯ್ಸಳ ರಾಜರಿಗೂ ಅಂದಿನ ಅರಸರಿಗೂ ಮಧ್ಯೆ ಆಗ್ಗೇ ಐದು ಶತಮಾನಗಳೇ ಕಳೆದಿತ್ತು. ಇದಕ್ಕಿಂತಲೂ ಮುಖ್ಯವಾಗಿ ಸಾಮಾಜಿಕವಾಗಿ ಅತ್ಯಂತ ಮಹತ್ತರ ಬದಲಾವಣೆಯೊಂದು ಅಗಿದ್ದರೂ ಅದನ್ನು ಗಮನಿಸಿದ್ದವರು ಇರಲಿಲ್ಲ. ನಮ್ಮಲ್ಲಿ ಶಿಲ್ಪಿಗಳು ಉತ್ತರದಿಂದ ಬಂದವರು ಎಂದು ಹೇಳುವುದು ತುಂಬಾ ಪ್ರಾಚೀನದಿಂದಲೂ ಸಾಗಿಬಂದಿದೆ. ಈ ಶಿಲ್ಪಿಗಳನ್ನು 'ವಡುಗರು' (ಉತ್ತರದಿಂದ ಬಂದವರು) ಎಂದೇ ಶಾಸನ, ಸಾಹಿತ್ಯಾದಿಗಳು ಗುರ್ತಿಸಿವೆ. ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾದದ್ದು ಪ್ರಧಾನವಾಗಿ ಹಿಂದೂ ರಾಜ್ಯವನ್ನು

ನಿರ್ಮಿಸಲೆಂದೇ. ಇವರಲ್ಲಿ ಕನ್ನಡ–ತೆಲುಗು–ತಮಿಳು–ಮಲೆಯಾಳಂ ಎಂಬ ಪ್ರತ್ಯೇಕತೆ ಇರಲೇ ಇಲ್ಲ. ವಿಜಯನಗರದ ಅರಸರು ಭಾಷೆಗೆ ಪ್ರಾಮುಖ್ಯತೆಯನ್ನು ಕೊಡಲೇ ಇಲ್ಲ. ಆಂಧ್ರ ವಿಜಯನಗರದ ಆಡಳಿತ ಭಾಷೆಯು, ತೆಲುಗು ಭಾಷೆಯಾಗಿದ್ದರೆ, ತಂಜಾವೂರು ಪ್ರಾಂತದ ಆಡಳಿತ ಭಾಷೆಯು ಅಲ್ಲಿಯ ಆಳುವರು ಮಹಾರಾಷ್ಟ್ರ ಮೂಲದವರಾಗಿದ್ದರೂ, ತಮಿಳೇ ಆಗಿತ್ತು. ಹಂಪಿ ವಿಜಯನಗರದ ರಾಜ್ಯಭಾಷೆ ಕನ್ನಡವೇ ಆಗಿದ್ದರೂ ಸ್ವಯಂ ಕೃಷ್ಣದೇವರಾಯರು **ಆಮುಕ್ತಮಾಲ್ಯದ** ಎಂಬ ತೆಲುಗು ಕಾವ್ಯವನ್ನು ರಚಿಸಿದ್ದರು. ಈ ಮೊದಲು ವಿಜಯನಗರದ ಆಸ್ಥಾನದಲ್ಲಿದ್ದ ಪ್ರಖ್ಯಾತ ಅಷ್ಟದಿಗ್ಗಜಕವಿಗಳೆಲ್ಲರೂ ತೆಲುಗರೇ! ಇದಿಷ್ಟೇ ಸಾಲದು ಎನ್ನಿಸುವಂತೆ ಆಂಧ್ರಪ್ರದೇಶದಿಂದ ಬಹಿಷ್ಕೃತನಾಗಿ ಕರ್ನಾಟಕ ಸಾಮ್ರಾಜ್ಯ ಲಕ್ಷ್ಮಿಯನ್ನು ಆಶ್ರಯಿಸಿ ಬಂದ ಶ್ರೀನಾಥಕವಿಗೆ ಪ್ರೌಢದೇವರಾಯರು ಕನಕಾಭಿಷೇಕವನ್ನು ಮಾಡಿ ಗೌರವಿಸಿದರು ಎಂಬ ಖ್ಯಾತಿ ಇಂದಿಗೂ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಬಹುಪ್ರಸಿದ್ಧವಾಗಿದೆ.

ಇದೇ ರೀತಿಯಾಗಿ ಕನ್ನಡ ಸಾಮ್ರಾಜ್ಯದ ಹೊಸಭಾಗಗಳಾಗಿ ಸೇರ್ಪಡೆಗೊಂಡ ತಮಿಳುನಾಡಿನ ಭಾಗಗಳಿಂದ ಸಾಂಪ್ರದಾಯಿಕ ಶಿಲ್ಪಿಗಳು ಹಂಪಿಯನ್ನು ತಮ್ಮ ನೆಲೆಯನ್ನಾಗಿ ಮಾರ್ಪಡಿಸಿಕೊಂಡರು. ಶಿಲೆಯಲ್ಲಿ ಗಟ್ಟಿ–ಮೆದು ಎಂಬ ಭಿನ್ನತೆಯನ್ನು ಹಿರಿದುಗೊಳಿಸಿ, ತಾವು ಬಳಸುವ ಗಟ್ಟಿಕಲ್ಲು ಚಿರಂತನವಾದದ್ದು, ಅದಕ್ಕೆ ಮುಪ್ಪಿಲ್ಲ, ಎಂದು ಜನ ಮನ ಗೆದ್ದರು. ಅದಕ್ಕೂ ಮಿಗಿಲಾಗಿ ದೇವಾಲಯ ನಿರ್ಮಾಣದ ಖರ್ಚು ಮೆದುಕಲ್ಲಿಗಿಂತಲೂ ತೀರಾ ಕಡಿಮೆ ಎಂಬ ನಂಬಿಕೆ ಮೂಡಿಸಿದರು. ವಿಪುಲವಾಗಿ ಸಿಗುವ ಕಗ್ಗಲ್ಲು ತೀರಾ ಅಗ್ಗ ಎಂಬ ಭಾವನೆ ಜನರಲ್ಲಿ ಬೆಳೆಯಿತು. ಈ ಮಾತು ನಿಜವೇ. ಕಗ್ಗಲು ಇಂದೂ ತೌಲನಿಕವಾಗಿ ಕಡಿಮೆ ಬೆಲೆಗೆ ಸಿಗುತ್ತದೆ. ಆದರೆ ಅದನ್ನು ನುಣುಪುಗೊಳಿಸಲು. ಅದರಲ್ಲಿ ಕೆಲಸಮಾಡಲು ಆಗುವ ವೆಚ್ಚವೇ ತುಂಬಾ ಹೆಚ್ಚು. ಅದುವರೆವಿಗಿನ ಹೊಯ್ಸಳ ಶೈಲಿಯ ದೇವಾಲಯ ನಿರ್ಮಾಣಕ್ಕೆ ಅಪಾರ ಸಂಪತ್ತಿನ ಅವಶ್ಯಕತೆ ಇದೆ ಎಂಬ ನಂಬಿಕೆಯು ಅರಸರಲ್ಲಿ, ಭಕ್ತರಲ್ಲಿ ಬಲಗೊಂಡಿತ್ತು. ಇದರಿಂದ ಬಹುಸಂಖ್ಯಾತ ದ್ರಾವಿಡನಾಡಿನ ಶಿಲ್ಪಿಗಳು ಸ್ಥಳೀಯ ಶಿಲ್ಪಿಗಳನ್ನು ಅವರ ನಾಡಿನಲ್ಲಿಯೇ ಅನಾಥರನ್ನಾಗಿ ಮಾಡಿದರು. ತಮ್ಮ ಚೋಳ ಶಿಲ್ಪವೇ ಶ್ರೇಷ್ಠ ಎಂದು ಸಾರತೊಡಗಿದರು. ಆಳುವ ರಾಜರೂ ಅವರನ್ನೇ ಬೆಂಬಲಿಸುವಂತೆ ವರ್ತಿಸಿದರು.

ಹೊಯ್ಸಳ ಶಿಲ್ಪಶೈಲಿಯು ದ್ರಾವಿಡ–ನಾಗರ ಶೈಲಿಗಳ ಕಸಿಯಾದ ವೇಸರ ಎಂಬುದಾಗಿ ಶಾಸ್ತ್ರ ಗುರ್ತಿಸಿದರೂ, ಹೊರನೋಟಕ್ಕೆ ನಾಗರಕ್ಕೆ ಅತಿ ಹತ್ತಿರವಾಗಿ ಕಾಣಿಸುತ್ತದೆ. ಈ ಶೈಲಿಯನ್ನು ರೂಢಿಸಿಕೊಂಡ ಶಿಲ್ಪಿಗಳಿಗೆ ನಾಗರಶೈಲಿಯ ದೇವಾಲಯ ನಿರ್ಮಾಣ ತೀರ ಸುಲಭವಾಗಿ ಸಿದ್ಧಿಯಾಗುತ್ತದೆ. ಈ ಕಾರಣದಿಂದಾಗಿ ಕರ್ನಾಟಕದ ಬಹುಪಾಲು ಶಿಲ್ಪಿಗಳು ಬಿಹಾರ–ಒರಿಸ್ಸಾ–ರಾಜಸ್ಥಾನ–ಗುಜರಾತ್‌ಗಳನ್ನು ಸೇರಿಕೊಂಡರು. ಈ ಮಾತಿಗೆ ಸಾಕ್ಷಿಯಾಗಿ ಕರ್ನಾಟಕ ಶಿಲ್ಪಿಗಳು ಬಿಹಾರ ಮತ್ತು ಒರಿಸ್ಸಾಗಳಲ್ಲಿ ದೇವಾಲಯ ನಿರ್ಮಾಣ ಮಾಡಿದ್ದಾರೆ ಎಂಬ ಐತಿಹಾಸಿಕ ಸತ್ಯದೊಂದಿಗೆ ಇನ್ನೊಂದು ವಿವರವನ್ನೂ ಇಲ್ಲಿ ದಾಖಲಿಸಬಹುದು.

ಬಾದಾಮಿ–ಐಹೊಳೆ–ಪಟ್ಟದಕಲ್ಲುಗಳು ಭಾರತೀಯ ದೇವಾಲಯಗಳ ತೊಟ್ಟಿಲು ಎಂಬುದಾಗಿ ಜಗತ್ತಿನ ಎಲ್ಲಾ ವಿದ್ವಾಂಸರು ಅಂಗೀಕರಿಸಿದ್ದಾರೆ. ಭಾರತೀಯ ದೇವಾಲಯಗಳ ಸ್ವರೂಪ–ವಿನ್ಯಾಸ ಆವಿರ್ಭಾವಗೊಂಡು ಖಚಿತಗೊಂಡಿರುವುದು ಇಲ್ಲಿಯೇ. ಆದ್ದರಿಂದಲೇ ಈ ಭಾಗದ ಶಿಲ್ಪಕ್ಕೆ ಈ ವಿಶೇಷ ಪ್ರಾಶಸ್ತ್ಯ ಇಂದಿಗೂ ಸಲ್ಲುತ್ತದೆ. **ದೇವಾಲಯ ಶಿಲ್ಪವು ನಿರಂತರವಾಗಿ ಒಂದೂವರೆ ಸಾವಿರ ವರ್ಷಗಳಷ್ಟು ಕಾಲ ಬೆಳೆದ ಇತಿಹಾಸ ಕರ್ನಾಟಕಕ್ಕೆ ಮಾತ್ರವೇ ಇದೆ ಎಂಬುದೂ ಐತಿಹಾಸಿಕ ಸತ್ಯವೇ.** ಇಂತಹ ಘನ ಇತಿಹಾಸವಿದ್ದರೂ ಕನ್ನಡನಾಡಿನಲ್ಲಿ ಮೂಲಶಿಲ್ಪಶಾಸ್ತ್ರಗಳೇ ಲಭಿಸಿಲ್ಲ. ಆದ್ದರಿಂದಲೇ ಆಧುನಿಕ ವಿದ್ವಾಂಸರೂ ಕೂಡ ಹೊಯ್ಸಳ ಶಿಲ್ಪಿಗಳು ಯಾವ ಶಿಲ್ಪಶಾಸ್ತ್ರವನ್ನು ಅನುಸರಿಸಿ ದೇವಾಲಯಗಳನ್ನು ನಿರ್ಮಿಸಿದ್ದಾರೆ ಎಂಬುದು ತಿಳಿಯದು ಎಂದು ದಾಖಲಿಸಿರುವುದು. ಆದರೆ ಹೊಯ್ಸಳ ಶಿಲ್ಪಿಗಳು ತಾವು ನಿರ್ಮಿಸಿರುವ ದೇವಾಲಯಗಳು ಶಾಸ್ತ್ರಸಮ್ಮತವಾದವು ಎಂಬುದನ್ನು ಖಚಿತವಾಗಿ ಜನರಿಗೆ ತಿಳಿಯಲು ಅನೇಕ ಸಂಕೇತಗಳನ್ನು ತಮ್ಮ ನಿರ್ಮಾಣಗಳಲ್ಲಿ ಕಲ್ಪಿಸಿದ್ದಾರೆ. ಅವುಗಳಲ್ಲಿ ತಾವು

ದೇವಾಲಯ ನಿರ್ಮಾಣದಲ್ಲಿ ಬಳಸಿರುವ ಅಳತೆ ಪಟ್ಟಿಗಳ ಪ್ರತಿಕೃತಿಗಳನ್ನು ದೇವಾಲಯಗಳ ಗರ್ಭಗುಡಿಗಳ ಅಧಿಷ್ಠಾನದ ಭಾಗಗಳಲ್ಲಿ ಸ್ಪಷ್ಟವಾಗಿ ದಾಖಲಿಸಿರುವ ವಿವರವೂ ಒಂದು. ದೇವಾಲಯದ ಜೀರ್ಣೋದ್ಧಾರವನ್ನು ಕೈಗೊಳ್ಳಬೇಕಾಗಿದ್ದರೆ ಈ 'ಕೋಲು' ಆ ಶಿಲ್ಪಿಗೆ ನೆರವಾಗಲಿ ಎಂಬುದು ಇದರ ಉದ್ದೇಶ.

೧೯೮೦ ರ ಸುಮಾರಿನಲ್ಲಿ ಪ್ರೊ॥ ಆಲಿಸ್ ಬೋನರ್ ಅವರು **ವಾಸ್ತುಸೂತ್ರೋಪನಿಷತ್** ಎಂಬ ಶಿಲ್ಪಸಂಬಂಧಿ ಉಪನಿಷತ್ತನ್ನು ಸೋಮದತ್ತ ಎಂಬ ಶಿಲ್ಪಾಚಾರ್ಯನ ಸಂಸ್ಕೃತ ಟೀಕೆಯೊಂದಿಗೆ ತಾವೇ ಇಂಗ್ಲೀಷ್ ತಾತ್ಪರ್ಯ ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಪ್ರತಿಮಾ ನಿರ್ಮಾಣಕ್ಕೆ ಸಂಬಂಧಿಸಿರುವ ಖಿಲಪಂಜರ ನಿರ್ಮಾಣ ಮತ್ತು ಇತರ ವಿವರಗಳು ಲಭಿಸುತ್ತವೆ. ಈ ಉಪನಿಷತ್ತಿನಲ್ಲಿ ವಿವರಿತವಾಗಿರುವ ಹಲವಾರು ಅಂಶಗಳು ಬಾದಾಮಿ ಇತ್ಯಾದಿ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಬಳಕೆಯಾಗಿವೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಉಪನಿಷತ್ತಿನ ಹಸ್ತಪ್ರತಿಯು ಲಭಿಸಿರುವುದು ಒರಿಸ್ಸಾ ರಾಜ್ಯದ ಸಂಪ್ರದಾಯಿಕ ಶಿಲ್ಪಿಗಳಲ್ಲಿ. ಇದರಿಂದ ಕರ್ನಾಟಕದ ಶಿಲ್ಪಿಗಳು ಕೋಣಾರ್ಕದ ಸೂರ್ಯದೇವಾಲಯದ ನಿರ್ಮಾಣದ ತರುವಾಯ ಕೂಡ ಒರಿಸ್ಸಾದ ಸಂಪರ್ಕದಲ್ಲಿದ್ದರು. ವಿಜಯನಗರ ಸಾಮ್ರಾಜ್ಯವು ತಮಿಳು ಶಿಲ್ಪಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದಂತೆಲ್ಲಾ ಉತ್ತರಕ್ಕೆ ತಮ್ಮ ವಾಸವನ್ನು ಬದಲಿಸಿದರು ಎಂಬ ಅನುಮಾನ ಖಚಿತಗೊಳ್ಳುತ್ತದೆ.

ಮೈಸೂರು ಅರಸರ ಕಾಲಕ್ಕೆ ಸಾಂಪ್ರದಾಯಿಕ ಶಿಲ್ಪದಲ್ಲಿ ತಮಿಳರ ಪಾರುಪತ್ಯವೇ ಹೆಚ್ಚಾಗಿತ್ತು. ಕನ್ನಡ ಶಿಲ್ಪಿಗಳಿಗೆ ಅವಕಾಶಗಳೂ ಕ್ವಚಿತ್ತಾಗಿತ್ತು. ಶಿಲ್ಪದಲ್ಲಿ ಕನ್ನಡತನವನ್ನು ಹುಡುಕುವ ಬಗ್ಗೆ ಯಾರಿಗೂ ಹೆಚ್ಚಿನ ಆಸಕ್ತಿ ಇದ್ದಂತೆ ತೋರಿಬರುವುದಿಲ್ಲ. ಇಂತಹ ಹಿನ್ನೆಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೇಲೂರು ದೇವಾಲಯದ ಜೀರ್ಣೋದ್ಧಾರವನ್ನು ತಮ್ಮ ಸರಕಾರದ ಮೂಲಕ ಮಾಡಿಸಲು ತೀರ್ಮಾನಿಸಿದರು.

ಅರಸರಿಗೆ ಸಮಸ್ಯೆಯಾಗಿ ಕಾಣಿಸಿದ್ದು 'ಈ ಕೆಲಸವನ್ನು ಮಾಡುವವರು ಯಾರು?' ಎಂಬುದೇ. ಪ್ರಾಚೀನ ದೇವಾಲಯಗಳು ಪುರಾತತ್ತ್ವ ಇಲಾಖೆಯ ಉಸ್ತುವಾರಿಗೆ ಸೇರಿದ್ದಾದರೂ ಆ ಇಲಾಖೆಯಲ್ಲಿ ದೇವಾಲಯಗಳ ನವ ನಿರ್ಮಾಣ ಅಥವಾ ಜೀರ್ಣೋದ್ಧಾರ ಮಾಡುವ ತಂತ್ರದ ತಿಳಿವು ಇದ್ದವರು ಇರಲಿಲ್ಲ. ಇಂದಿಗೂ ಆ ತಿಳಿವು ಇಲಾಖೆಯಲ್ಲಿ ಇಲ್ಲ. ಆದ್ದರಿಂದ ಪಾರಂಪರಿಕ ಶಿಲ್ಪಿಯನ್ನೇ ಅವರು ಹುಡುಕ ಬೇಕಾಗಿತ್ತು.

ಹೊಸ ಅರಮನೆಯನ್ನು ಅಲಂಕರಿಸುವುದಕ್ಕೆ ದುಡಿಯುತ್ತಿದ್ದ ಹಲವು ಶಿಲ್ಪಿಗಳಲ್ಲಿ ಕೊಳ್ಳೇಗಾಲದಿಂದ ಬಂದಿದ್ದ, ಶಿಲ್ಪಶಾಸ್ತ್ರ ಬಲ್ಲವರೆಂದು ಹೇಳಿಕೊಳ್ಳುತ್ತಿದ್ದ ಸಿದ್ಧಲಿಂಗಸ್ವಾಮಿ ಎನ್ನುವ ತರುಣನನ್ನು ಶಿಲ್ಪ ಮಾಡಿಸುತ್ತಿದ್ದ ಮೇಲ್ವಿಚಾರಕರು ಆರಿಸಿದರು. ಅವರ ನೆರವಿಗೆ



ಚಿತ್ರ ೩.೧ : ಬೇಲೂರು ದೇವಾಲಯ ಸಂಕೀರ್ಣ (ಈಗಿರುವಂತೆ)

ಇನ್ನೂ ಹಲವರು ತರುಣರನ್ನು ಕೂಡಿಸಿದರು. ಪುರಾತತ್ತ್ವ ಇಲಾಖೆಯ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಈ ಶಿಲ್ಪಿಗಳು ಕೆಲಸ ಮಾಡಬೇಕಾಗಿತ್ತು.

ಸಿದ್ಧಲಿಂಗಸ್ವಾಮಿಗಳು ಅರಮನೆಯ ಕೆಲಸಕ್ಕೆ ಸೇರಿದ್ದು ೧೯೦೮ರಲ್ಲಿ; ಮೊದಲಿಗೆ ವರ್ಣಚಿತ್ರರಚನೆಗೆ ಸೇರಿದ್ದರೂ, ಶಿಲಾಶಿಲ್ಪ, ತಗಡಿನ ಉಬ್ಬು ಕೆತ್ತನೆ, ಎರಕದ ಶಿಲ್ಪ, ಚಿನ್ನ ಮತ್ತು ಬೆಳ್ಳಿಯ ನಕಾಸೆ ಕೆಲಸ ಎಂಬುದಾಗಿ ಹಲವು ಬಗೆಯ ಶಿಲ್ಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಗುರ್ತಿಸಿಕೊಂಡಿದ್ದರು.

ಮೇಲಿನ ಈ ಚಿತ್ರದಲ್ಲಿ ಬೇಲೂರು ದೇವಾಲಯದ ಪ್ರಾಕಾರಗಳ ಮಧ್ಯೆ ಇರುವ ವಿಸ್ತಾರವಾದ ಅಂಗಳ ಕಾಣಿಸುತ್ತದೆ. ಅದಕ್ಕೆಲ್ಲಾ ಚಪಡಿಹಾಸಿ, ಹುಲ್ಲು-ಗಿಡಗಳು ಬೆಳೆಯದಂತೆ ಭದ್ರಗೊಳಿಸಿರುವುದು ಕಾಣುತ್ತದೆ. ಈ ಕೆಲಸ ನಡೆದದ್ದು ಆಗಲೇ. ಈ ವಿಸ್ತಾರ ಪ್ರದೇಶ ಗಿಡ-ಮರಗಳಿಂದ ಆವೃತ್ತವಾಗಿ ಕಾಡಾಗಿದ್ದಾಗ ಆ ಪ್ರದೇಶ ಹೇಗಿದ್ದಿರಬಹುದು ಎಂಬುದನ್ನು ಓದುಗರು ಕಲ್ಪಿಸಿಕೊಳ್ಳುವುದು ಸುಲಭ ಸಾಧ್ಯ. ಕೆಲಸಕ್ಕೆ ಸೂಕ್ತ ಪಾರಂಪರಿಕ ಶಿಲ್ಪಿಗಳಿಗಾಗಿ ಹುಡುಕಾಟದಲ್ಲಿ ಇತರರೊಂದಿಗೆ ಸಿದ್ಧಲಿಂಗಸ್ವಾಮಿಗಳೂ ಆಯ್ಕೆಯಾದರು. ಸಿದ್ಧಲಿಂಗ ಸ್ವಾಮಿಗಳ ಅಣ್ಣನವರಾದ ಅಪ್ಪಾಜಿ ಸ್ವಾಮಿಗಳೂ ಅರಮನೆಯಲ್ಲಿ ಶಿಲ್ಪಿಗಳಾಗಿದ್ದರು. ಇವರೆಲ್ಲರೂ ಬೇಲೂರಿನ ದೇವಾಲಯದ ಜೀರ್ಣೋದ್ಧಾರವನ್ನು ಪ್ರಾರಂಭಿಸಿದರು.

ಹೊಯ್ಸಳ ದೇವಾಲಯಗಳು ಕುಸಿದು ಬೇಗ ಪಾಳು ಬೀಳುವುದಕ್ಕೆ ಇರುವ ಕಾರಣವನ್ನು ಮೊದಲು ಗುರ್ತಿಸಿದರು. ದ್ರಾವಿಡ ಶೈಲಿಯ ದೇವಾಲಯದಲ್ಲಿ ಗೋಡೆ ಬಹುಮಂದವಾಗಿದ್ದು ಅದು ದೇವಾಲಯದ ಪ್ರಸ್ತರವನ್ನು (ಸೂರನ್ನು) ಹೊರಲು ಸ್ಥಿರವಾಗಿರುತ್ತದೆ. ಆದರೆ ಹೊಯ್ಸಳ ದೇವಾಲಯದಲ್ಲಿ ಸೂರಿನ ಭಾರವನ್ನು ಹೊರುವುದು ಸ್ಥಂಭಗಳು. ಮೊದಲಿಗೆ ಗೋಡೆಯ ಸ್ವಲ್ಪ ಭಾಗ ಕುಸಿದರೆ ಅದು ಹಿರಿದಾಗಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಇದು ಬಹುಬೇಗ ವೃದ್ಧಿಗೊಂಡು ಸುತ್ತಲಿನ ಗೋಡೆ ಬೀಳುತ್ತದೆ. ಸ್ಥಂಭಗಳು ನಿಂತೇ ಇರುತ್ತವೆ.

ದ್ರಾವಿಡ ಆಲಯಗಳಲ್ಲಿ ಗೋಡೆಗಳು ದೇವಾಲಯದ ಮುಚ್ಚಿಗೆ (ಸೂರಿನ) ಭಾರವನ್ನು ಹೊರಲು ಭದ್ರವಾಗಿ ದೃಢಗೊಳಿಸಿ ನಿರ್ಮಿಸಿರುತ್ತಾರೆ. ಆದರೆ ಹೊಯ್ಸಳ ದೇವಾಲಯಗಳಲ್ಲಿ ದೇವಾಲಯದ ಗೋಡೆಗಳನ್ನು ಅಲಂಕರಿಸಲು ನಿರ್ಮಿಸಿರುತ್ತಾರೆ. ಇವರಿಗೆ ಗೋಡೆ ತಮ್ಮ ಶಿಲ್ಪ ಸಾಮರ್ಥ್ಯದ ಸಾಕ್ಷಿ. ಆದ್ದರಿಂದ ಗೋಡೆಯ ಎರಡೂ ಮುಖಗಳ ಮಧ್ಯೆ ವಿಶಾಲ ಜಾಗಬಿಟ್ಟು ಅದನ್ನು ಮಣ್ಣಿನಿಂದ ತುಂಬಿರುತ್ತಾರೆ. ಗೋಡೆಯು ಮಂಟಪದ ಮೇಲುಭಾಗವಾಗಿದ್ದು ಮುಚ್ಚಿಗೆಯಿಂದ ಮಾತ್ರ ಮುಚ್ಚಿದ್ದು ಕಾಲಕ್ರಮದಲ್ಲಿ ಅದರ ಒಳಭಾಗಕ್ಕೆ ನೀರು ಸುಲಭವಾಗಿ ಪ್ರವೇಶಿಸುವುದು ಅಥವಾ ಸಸಿಗಳು ಮೊಳೆಯುವುದು ಪ್ರಾರಂಭವಾಗಿ ಗೋಡೆಯನ್ನು ಉರುಳಿಸುವ ಪ್ರಯತ್ನವನ್ನು ನಿರಂತರವಾಗಿ ಸಾಗಿಸುತ್ತವೆ. ಆದ್ದರಿಂದ ಹೊಯ್ಸಳ ದೇವಾಲಯವನ್ನು ರಕ್ಷಿಸುವುದು ಕಾಯುವುದು ಬಹು ಮುಖ್ಯ ಕೆಲಸವಾಗಿರುತ್ತದೆ. ಆದ್ದರಿಂದಲೇ ಜನರ ಓಡಾಟದಿಂದ ದೂರ ಇರುವ ದೇವಾಲಯಗಳ ಗೋಡೆಗಳು ಬಹುಬೇಗ ಕುಸಿಯಲು ಪ್ರಾರಂಭಿಸುವುದು.

ದ್ರಾವಿಡ ಶೈಲಿ ದೇವಾಲಯಗಳಲ್ಲಿ ಕುಸಿತ ಬಂದರೆ ಅದರ ಬಹುಭಾಗ ಕಲ್ಲುಗಳೇ ಇರುತ್ತವೆ. ಅದರಲ್ಲಿ ಅವುಗಳ ಜೋಡಣೆಯ ಕ್ರಮ ಮಾತ್ರವೇ ತೀರ್ಮಾನವಾಗಬೇಕಾಗಿರುತ್ತದೆ. ಹೊಯ್ಸಳ ದೇವಾಲಯಗಳಲ್ಲಿ ಕ್ರಮದೊಂದಿಗೆ ಶಿಲ್ಪವಿನ್ಯಾಸದೊಂದಿಗೂ ಅದು ಹೊಂದಾಣಿಕೆಯಾಗಬೇಕು. ಎಂದರೆ ಇದರ ಪುನರ್ನಿರ್ಮಾಣಕ್ಕೆ ಹೆಚ್ಚು ತಾಳ್ಮೆಯ ಅವಶ್ಯಕ. ಹೊಯ್ಸಳ ದೇವಾಲಯವು ಅಡಿಯಿಂದ ಮುಡಿಯ ತನಕ ಅಲಂಕೃತಗೊಂಡಿರುವುದರಿಂದ ಕುಸಿದಿರುವ ಗೋಡೆ ಯಾರನ್ನಾದರೂ ದಿಕ್ಕೆಡಿಸಬಲ್ಲದು. ಯಾವ ಕಲ್ಲು ಎಲ್ಲಿಯದು ಎಂಬುದನ್ನು ಗುರ್ತಿಸಲು ಚೆನ್ನಾಗಿ ತಿಳಿದವರಿಗೂ ಹಲವು ವಾರಗಳೇ ಬೇಕಾಗುತ್ತದೆ. ಅಂಥಾದ್ದರಲ್ಲಿ ಹೊಯ್ಸಳ ದೇವಾಲಯದ ನಿರ್ಮಾಣವನ್ನು ಅರಿಯದವರಿಂದ ಈ ಕೆಲಸ ಸಾಧ್ಯವಾಯಿತೆಂದರೆ ಅದೊಂದು ಪವಾಡವೇ.

ಮೈಸೂರಿನ ಅರಮನೆಯ ಆವರಣದಲ್ಲಿ ಹಳೆಯದಾದ ಶ್ವೇತವರಾಹಸ್ವಾಮಿ ದೇವಾಲಯವು ಹೊಯ್ಸಳ ಶೈಲಿಯಲ್ಲಿಯೇ ಇದ್ದರೂ ಅದಕ್ಕೆ ದ್ವಾರಗೋಪುರವು ಕರ್ನಾಟಕ ದ್ರಾವಿಡ ಶೈಲಿಯಲ್ಲಿ



ಚಿತ್ರ ೩.೨ : ಮೈಸೂರಿನ ಅರಮನೆಯ ಆವರಣದಲ್ಲಿರುವ ಶ್ವೇತವರಾಹಸ್ವಾಮಿಯ ದೇವಾಲಯದ ಮಹಾದ್ವಾರದ ಮೇಲಿರುವ ಗೋಪುರ (ಇದರಲ್ಲಿ ವಿಶೇಷವಾದ ಮೈಸೂರಿನ ಶೈಲಿಯನ್ನು ಗಮನಿಸಿ)

ನಿರ್ಮಾಣವಾಗಿದೆ. ಇದರಿಂದ ಮೈಸೂರು ಪ್ರಾಂತದಲ್ಲಿ ವಿರಳವಾಗಿಯಾದರೂ ಹೊಯ್ಸಳ ಶೈಲಿ ದೇವಾಲಯ ನಿರ್ಮಾಣ ಸಾಗಿಬಂದಿತ್ತು ಎಂಬ ಅನುಮಾನ ಮೂಡುತ್ತದೆ. ಇಲ್ಲಿಯ ಶಿಲ್ಪಿಗಳು ವಿಜಯನಗರದ ಕಾಲದಲ್ಲೂ ಹೊಯ್ಸಳ ಶೈಲಿಯೇ ತಮ್ಮದು ಎಂದು ಭಾವಿಸಿ ತಮ್ಮ ಶಿಲ್ಪವನ್ನು ಮುಂದುವರಿಸಿದ್ದರು ಎನಿಸುತ್ತದೆ. ದೇವಾಲಯದ ವಿನ್ಯಾಸ ಯಾವುದೇ ಬಗೆಯಲ್ಲಿದ್ದರೂ ಕರ್ನಾಟಕದ ಶಿಲ್ಪಿಗಳ ಮೂರ್ತಿ ಶಿಲ್ಪವು ಬಹುಪಾಲು ಹೊಯ್ಸಳ ಶೈಲಿಯಲ್ಲಿರುವುದು ಈ ನಂಬಿಕೆಯನ್ನು ದೃಢಗೊಳಿಸುತ್ತದೆ.

ಈ ಭಾವನೆಗೆ ಇನ್ನೂ ಒಂದು ಒತ್ತಾಸೆಯೂ ಶಿಲ್ಪಿಗಳಿಗೆ ಕಂಡಿರಬಹುದು. ಗಟ್ಟಿಯಾದ ಬಿಳಿಕಲ್ಲನ್ನು ಬಳಸುತ್ತಿದ್ದ ತಮಿಳುನಾಡಿನವರಿಂದ ನಾಜೂಕಾದ ಹೊಯ್ಸಳ ಶಿಲ್ಪ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಮಾತು ಇಂದಿಗೂ ಸತ್ಯವಾದದ್ದೇ. ತಮಿಳುನಾಡಿನ ಶಿಲ್ಪಿಗಳಿಂದ ಹೊಯ್ಸಳ ಮೂರ್ತಿಗಳ ಕೆತ್ತನೆಯು ಸಾಧ್ಯವಿಲ್ಲ. ಅದಕ್ಕಾಗಿ ಅವರು ಹೇಳುವ ಕಾರಣಗಳು ಬೇರೆ ಬೇರೆಯಾಗಿರುತ್ತವೆ– ಮೆದುಕಲ್ಲು. ನೀರಿನಲ್ಲಿ ಕರಗುತ್ತದೆ. ಶಿಲ್ಪ ಮಾಡಲು ಈ ಕಲ್ಲು ಒಳ್ಳೆಯದಲ್ಲ. ಹೊಯ್ಸಳ ಶಿಲ್ಪ ಶಾಸ್ತ್ರೀಯವಾದುದಲ್ಲ. ಆ ಶಿಲೆಗೆ ಜೀವವೇ ಇಲ್ಲ. . . .ಆದರೆ ನೋಡುಗರನ್ನು ತಕ್ಷಣ ಸೆರೆಹಿಡಿಯಬಲ್ಲ ಶಿಲ್ಪ ಇಂದಿಗೂ ಹೊಯ್ಸಳ ಶಿಲ್ಪವೇ. ಈ ಶೈಲಿಯನ್ನು ಅನುಸರಿಸಿದ ಶಿಲ್ಪಿಯು ನೋಡುಗರ ಮೆಚ್ಚುಗೆಯನ್ನು ಬಹು ಸುಲಭವಾಗಿ ಗಳಿಸಿಕೊಳ್ಳಬಲ್ಲ. ಆದ್ದರಿಂದ ಕನ್ನಡ ಶಿಲ್ಪಿಗಳು ಹೊಯ್ಸಳ ಶೈಲಿಯನ್ನು ದೂರಮಾಡಿಕೊಳ್ಳಲು ಇಂದಿಗೂ ಇಷ್ಟಪಡುವುದಿಲ್ಲ.


ಬೇಲೂರಿನ ದೇವಾಲಯದ ಜೀರ್ಣೋದ್ಧಾರವು ಪುರಾತತ್ತ್ವ ಇಲಾಖೆಯ ಪರ್ಯವೇಕ್ಷಣೆಯಲ್ಲಿ ಸಾಗಿತ್ತು. ಪ್ರೊ॥ ಎಂ.ಎಚ್. ಕೃಷ್ಣ ಅವರು ಆ ಇಲಾಖೆಯಲ್ಲಿದ್ದವರು. ಕರ್ನಾಟಕದ ಕಲೆಯ ಬಗ್ಗೆ ಬಹುವಾದ ಆಸ್ಥೆ ವಹಿಸಿದ್ದವರು. ಸಹಜವಾಗಿ ಅವರಿಗೆ

ಜೀರ್ಣೋದ್ಧಾರಕಾರ್ಯದಲ್ಲಿ ಹೆಚ್ಚು ಆಸಕ್ತಿ ಇತ್ತು. ಅಲ್ಲಿ ಕೆಲಸ ಮಾಡಲು ಬಂದ ಶಿಲ್ಪಿಗಳೊಂದಿಗೆ ಹೆಚ್ಚು ನಿಕಟವಾಗಿ ವರ್ತಿಸುತ್ತಿದ್ದರು. ನೆಲದ ಮೇಲೆ ರಾಶಿಯಾಗಿದ್ದ ದೇವಾಲಯದ ಭಾಗಗಳನ್ನು ಗುರ್ತಿಸಲು ಶಾಸ್ತ್ರೀಯ ಮಾರ್ಗಗಳನ್ನು ಶಿಲ್ಪಿಗಳಿಂದ ತಿಳಿದುಕೊಳ್ಳುವುದು. ಶಿಲ್ಪಿಗಳು ತಪ್ಪುಮಾಡಿದಾಗ ಅವರನ್ನು ತಿದ್ದುವ ಖಚಿತಮಾರ್ಗಗಳನ್ನು ಅರಿಯುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದರು. ಆಗ ಅವರ ಗಮನ ಸೆಳೆದವರು ಸಿದ್ಧಲಿಂಗಸ್ವಾಮಿಗಳು. ಲಭಿಸಿರುವ ಖಿಲಭಾಗ ಯಾವುದಕ್ಕೆ ಸೇರಿದ್ದು ಎಂಬುದನ್ನು ಯುವಶಿಲ್ಪಿ ತೀರ್ಮಾನಿಸುತ್ತಿದ್ದ ಕ್ರಮವೇ ತುಂಬಾ ವಿಶಿಷ್ಟವಾಗಿತ್ತು. ಭಾಗವನ್ನು ಗುರ್ತಿಸಿದ ನಂತರವೂ ಹಲವು ಪರೀಕ್ಷೆಗಳಿಂದ ಖಚಿತಪಡಿಸಿಕೊಂಡು ತೀರ್ಮಾನಿಸುತ್ತಿದ್ದರು. ಈ ರೀತಿ ಹತ್ತು ಬಾರಿಯಾದರೂ ಒಂದು ಭಾಗವನ್ನು ಗುರ್ತಿಸುವ ಪ್ರಯತ್ನ ನಡೆಸುತ್ತಿದ್ದರು. ಆ ಭಾಗವು ಒಡೆದಿದ್ದರೆ ಅದರ ಜೋಡಣೆಗಾಗಿ ಆ ಭಾಗವನ್ನು ಮತ್ತೆ ಕೆತ್ತನೆಮಾಡಿ ಹೊಂದಾಣಿಕೆ ಮಾಡುವ ಧೈರ್ಯ-ಸಾಹಸ ಪ್ರೊ॥ ಕೃಷ್ಣ ಅವರಿಗೆ ಬಹುವಾಗಿ ಮೆಚ್ಚಿಗೆಯಾಯಿತು.


ಇದುವರೆವಿಗೂ ಹೇಳಿರುವ ವಿವರಗಳನ್ನು ಓದುಗರು ಗ್ರಹಿಸಿ ದೇವಾಲಯದ ಜೀರ್ಣೋದ್ಧಾರ ಕೆಲಸದ ತೊಡಕನ್ನು ಅರ್ಥಮಾಡಿಕೊಂಡಿದ್ದಾರೆ ಎಂಬುದಾಗಿ ಭಾವಿಸುವುದು ತಿಳಿಯವುದು ಕಷ್ಟವೇ. ದೇವಾಲಯದ ವಿವಿಧ ಭಾಗಗಳ, ವಿನ್ಯಾಸಗಳ ಪರಿಚಯವು ಇಲ್ಲದೆ, ಅವನ್ನು ನಿರ್ಮಿಸುವುದರಲ್ಲಿ ಇರಬೇಕಾದ ತಾಂತ್ರಿಕತೆಯ ಕಲ್ಪನೆಯ ಅರಿವಿಲ್ಲದೆ, ಅದರ ಕಷ್ಟವನ್ನು ಗ್ರಹಿಸುವುದು ಸುಲಭವಲ್ಲ. ಆದ್ದರಿಂದ ನಾವು ಸ್ಥೂಲವಾಗಿ ದೇವಾಲಯ ನಿರ್ಮಾಣದ ಹಂತಗಳನ್ನು ತಿಳಿಯಬೇಕಾಗಿರುತ್ತದೆ.

ಸಾಂಪ್ರದಾಯಿಕ ದೇವಾಲಯಗಳಿಗೆ ಆಧುನಿಕ ಇಂಜಿನಿಯರ್‌ಗಳು ಫೌಂಡೇಷನ್ ಎಂಬ ಹಸರಿನಿಂದ ನಿರ್ಮಿಸುವ ವಿನ್ಯಾಸ ಸಾಂಪ್ರದಾಯಿಕ ದೇವಾಲಯದಲ್ಲಿ ಇರುವುದಿಲ್ಲ. ಬದಲಿಗೆ ಸ್ಥಳಶುದ್ಧಿ ಅಥವಾ ಭೂಶುದ್ಧಿ ಎಂಬ ಹೆಸರಿನಲ್ಲಿ ದೇವಾಲಯ ನಿರ್ಮಿಸಲು ಆಯ್ಕೆಯಾಗಿರುವ ಪೂರ್ಣ ಪ್ರದೇಶವನ್ನು ಪುರುಷಪ್ರಮಾಣದಷ್ಟು (ಎಂದರೆ ಒಂಬತ್ತು ಅಡಿ) ಅಗೆದು ಅಲ್ಲಿಯ ಮಣ್ಣು ತೆಗೆದು **ಗರ್ಭ**ವನ್ನು ಶುದ್ಧೀಕರಿಸಿ **ಹೊಸಗರ್ಭ**ವನ್ನು ರೂಪಿಸಲು ಪ್ರಥಮೇಷ್ಟಿಕೆಯನ್ನು ಪ್ರತಿಷ್ಠಿಸಿ ಪೂಜಿಸುತ್ತಾರೆ. ಈ ನೆಲವನ್ನು **ತಳನೆಲಗಟ್ಟು** ಎಂದು ಕರೆಯುತ್ತಾರೆ. ಇದನ್ನು **ಆಧಾರ ಮಾನ** ಎಂದೂ ಹೇಳುತ್ತಾರೆ. ಇದರ ಮೇಲಿನ ಭಾಗವನ್ನು **ಭಿತ್ತಿಪೀಠ** ಎಂದು ಕರೆಯುತ್ತಾರೆ. ಇಲ್ಲಿ ಮಾನ ಸೂತ್ರದಿಂದ **ಪ್ರಕೃತಿಸೂತ್ರ** ಅಥವಾ **ಅವಸಾನ ಸೂತ್ರದ** ವರೆವಿಗೂ ತಳಭಂದ ಎಂದು ಗುರ್ತಿಸುತ್ತಾರೆ. ಪ್ರಥಮೇಷ್ಟಿಕೆಯ ಮೇಲ್ಭಾಗವನ್ನೆಲ್ಲಾ ಪ್ರಕೃತಿ ಎನ್ನುತ್ತಾರೆ. ಇದರ ಮೇಲಿನ ಭಾಗವನ್ನು ಹೋಮ ಎನ್ನುತ್ತಾರೆ. **ಪ್ರಕೃತಿ ಮತ್ತು ಹೋಮ ಸೇರಿರುವ ಎತ್ತರವನ್ನು ಭಿತ್ತಿಪೀಠ** ಎನ್ನುತ್ತಾರೆ. ಇದರ ಮೇಲೆ **ಉಪಪೀಠ** ನಿರ್ಮಾಣ ಮಾಡುತ್ತಾರೆ. ಇದು ಸಾಧಾರಣವಾಗಿ ನೆಲದ ಮೇಲೆ ಕಾಣುವಂತೆಯೂ ಇರುತ್ತದೆ. ಕೆಲವು ಬಾರಿ ನೆಲದಲ್ಲಿ ಹೂತು ಸ್ವಲ್ಪ ಭಾಗ ಮಾತ್ರ ಕಾಣುವಂತೆ ಇರಬಹುದು. ಇದರ ಮೇಲೆ **ಅಧಿಷ್ಠಾನ** ನಿರ್ಮಾಣವಾಗುತ್ತದೆ. ಉಪಪೀಠ ಮತ್ತು ಅಧಿಷ್ಠಾನಗಳಲ್ಲಿ ಹಲವು ಬಗೆಗಳು, ಜಾತಿಗಳು ಇವೆ. ವಿನ್ಯಾಸಗಳ ಅನುಸಾರ ಇವುಗಳಿಗೆ ಪ್ರತ್ಯೇಕ ಹೆಸರುಗಳೂ ಇವೆ. ದೇವಾಲಯದ **ಸ್ಥಂಭ** ಅಥವಾ **ಗೋಡೆ**ಯಿಂದ ದೇವಾಲಯದ **ಸುತ್ತಲಿನ ಮುಂಚಾಚು** ಮತ್ತು ಅದರ ತಳಭಾಗದ ವಿವರಗಳನ್ನು ೭೫ನೇ ಪುಟದಲ್ಲಿರುವ ಚಿತ್ರದಲ್ಲಿ (೩.೩) ವಿವರಿಸಿದೆ.


ಸಾಧಾರಣವಾಗಿ ಚಿತ್ರದಲ್ಲಿ ತೋರಿಸಿರುವ ಭಾಗ- ಅಧಿಷ್ಠಾನದ ಮೇಲ್ಭಾಗದ ತನಕ- ಹೊಯ್ಸಳ ದೇವಾಲಯಗಳಲ್ಲಿ ಜಗತಿಯ ಭಾಗವಾಗಿರುತ್ತದೆ **ಜಗತಿಯಲ್ಲೂ ಅಧಿಷ್ಠಾನದ ವಿನ್ಯಾಸಗಳು ಇರುತ್ತವೆ**. ಎಂದರೆ ಈ ಭಾಗದಿಂದ ಮೇಲೆ ದೇವಾಲಯ ನಿರ್ಮಾಣ ಪ್ರಾರಂಭವಾಗುತ್ತದೆ. ಜಗತಿಯ ಮೇಲೆ **ಗಜ-ಅಶ್ವ-ಲತಾ ಇತ್ಯಾದಿ ಪಟ್ಟಿಕೆಗಳು ಪ್ರಾರಂಭವಾಗುತ್ತವೆ.** ಕೆಲವು ಬಾರಿ ಅಧಿಷ್ಠಾನದ ವಿನ್ಯಾಸಗಳನ್ನು ರೂಪಿಸಿರುವುದೂ ಉಂಟು. ನಂತರ **ಸ್ತಂಭ**ಗಳು ರೂಪಿತವಾಗುತ್ತವೆ. ಹೊಯ್ಸಳ ದೇವಾಲಯಗಳ ಸ್ತಂಭಗಳಲ್ಲಿ ಹಲವು ಭಾಗಗಳಿದ್ದು ಅವುಗಳ ಹೆಸರುಗಳನ್ನು ಚಿತ್ರದಲ್ಲಿ ಕೊಟ್ಟಿದೆ (ನೋಡಿ ಚಿತ್ರ ೩.೪. ಪುಟ ೭೬). ಇದರ ಮೇಲೆ ಉತ್ತರ



ಚಿತ್ರ ೩.೩: ಭಿತ್ತಿಪೀಠ ಮತ್ತು ಆರು ಸೂತ್ರಗಳು ಮುಂಚಾಚು (ನಿರ್ಗಮ) ಗಳೊಂದಿಗೆ
(ಮುಂಚಾಚು-೧=ಮುಂಚಾಚು-೨ = ಮುಂಚಾಚು - ೩ = ಮುಂಚಾಚು-೪



ಚಿತ್ರ ೩.೪ ಸ್ತಂಭದ ಭಾಗಗಳು–೧ (ಹೊಯ್ಸಳ ಶೈಲಿ)



ಚಿತ್ರ ೩.೫ ಸ್ತಂಭದ ಭಾಗಗಳು–೨



ಚಿತ್ರ ೩.೬ : ಬೇಲೂರು ದೇವಾಲಯದ ದ್ವಾರ ಗೋಪುರ

ಇರುತ್ತದೆ. ಅದರ ಮೇಲೆ ಪ್ರಸ್ತರ ನಿರ್ಮಾಣವಾಗುತ್ತದೆ.

ಸ್ತಂಭಗಳ ಪಕ್ಕದಲ್ಲಿ ಗೋಡೆಗಳು ಹೊಯ್ಸಳ ದೇವಾಲಯುಗಲ್ಲಿ ಜಾಲಕಗಳಾಗಿದ್ದು ಅವೂ ಕೂಡ ಸೂಕ್ಷ್ಮವಾದ ಕೆತ್ತನೆಗಳನ್ನು ಒಳಗೊಂಡಿರುತ್ತವೆ. ಜಾಲಕಗಳಲ್ಲಿ ಇರುವ ರಂಧ್ರಗಳ ಮುಖಾಂತರ ಬೆಳಕು ಒಳಕ್ಕೆ ಬರಬೇಕೆಂಬುದು ಉದ್ದೇಶ. ಸ್ತಂಭಗಳ ಮೇಲೆ ಮುಚ್ಚಿಗೆಗಳು (ಭುವನೇಶ್ವರಿಗಳು) ವಿಶಿಷ್ಟ ವಿನ್ಯಾಸಗಳನ್ನು ಪಡೆದು ಕೊಂಡು ಹಲವು ಶಿಲ್ಪ ವೈವಿಧ್ಯಗಳಿಗೆ ಆಕರವಾಗಿರುತ್ತವೆ.

ಈ ಎಲ್ಲಾ ವಿನ್ಯಾಸಗಳೂ ನಿರ್ದಿಷ್ಟವಾದ ಶಾಸ್ತ್ರೋಕ್ತ ಅಳತೆ ಗಳಿಗೆ ಸೀಮಿತವಾಗಿರುತ್ತವೆ. ಎಂದರೆ ***ಅಳತೆಯನ್ನು ತಪ್ಪಿಸಿರುವ ಒಂದು ಭಾಗವೂ ದೇವಾಲಯದ ವಿನ್ಯಾಸದಲ್ಲಿ ಬಳಸಿರುವುದಿಲ್ಲ*** ಎಂಬುದು ಈಗ್ಗೆ ಓದುಗರಿಗೆ ಸ್ಪಷ್ಟ ವಾಗಿರಬೇಕು. ಹೀಗೆ ಕೆತ್ತನೆಯನ್ನೇ ತುಂಬಿಕೊಂಡು, ನಿಖರ ಅಳತೆ, ವಿನ್ಯಾಸಗಳನ್ನು ಪಡೆದುಕೊಂಡು ಶಿಥಿಲ ವಾಗಿರುವವನ್ನು, ಕುಸಿದಿರುವವನ್ನು, ಧರಾಶಾಯಿ ಯಾಗಿರುವವನ್ನು ಹೊಂದಿಸಿ ಜೋಡಿಸಿ ಅವು ಹಿಂದೆ ನಿರ್ಮಾಣ ವಾದಾಗ ಇರುವಂತೆ ರೂಪಿಸುವುದು. ಸುಲಭದ ಕೆಲಸವಾಗಲಿ, ತ್ವರಿತವಾಗಿ ಮುಗಿಯುವ ಕೆಲಸವಾಗಲಿ ಅಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ.

ಈ ಕೆಲಸದಲ್ಲಿ ಸಿದ್ಧಲಿಂಗಸ್ವಾಮಿಗಳು ಗುಂಪಿನಲ್ಲಿ ಒಬ್ಬರಾಗಿದ್ದವರಾದರೂ ಅವರಿಗೆ ಬಹುವಾಗಿ ಗೊತ್ತಾದದ್ದು ಹೊಯ್ಸಳ ದೇವಾಲಯದ ನಿರ್ಮಾಣ ಮತ್ತು ವಿನ್ಯಾಸದ ಗುಟ್ಟು. ಶ್ರೀ ಸ್ವಾಮಿಗಳು ಕರ್ನಾಟಕದ ಶಿಲ್ಪ ಶೈಲಿಯು ಹೊಯ್ಸಳ ಎಂಬುದಾಗಿ ನಿಶ್ಚಯ ಮಾಡಿದರು. ಅದನ್ನು ತಮ್ಮ ಶಿಷ್ಯರಿಗೂ ಬೋಧಿಸಿ ಮನದಟ್ಟು ಮಾಡಿಸಿದರು.

ಬೇಲೂರಿನ ದೇವಾಲಯದ ಜೀರ್ಣೋದ್ಧಾರ, ಅಲ್ಲಿಯೇ ದೊರೆತಿರುವ ಶಿಥಿಲ ಶಿಲ್ಪಗಳನ್ನು ಬಳಸಿಕೊಂಡು ಪೂರ್ಣಗೊಂಡಿರುವ ವಿನ್ಯಾಸಗಳು ಇಂದಿನ ತಜ್ಞತರ ಮೆಚ್ಚಿಗೆಗೂ ಪಾತ್ರವಾಗಿದೆ. ದೇವಾಲಯಕ್ಕೆ ನಿರ್ಮಿತವಾಗಿರುವ ದ್ವಾರ ಗೋಪುರವು ದೇವಾಲಯದ ಶೈಲಿಗೆ ಹೊಂದುವಂತಿಲ್ಲ. ವಿಜಯನಗರದ ಚೋಳ ಶೈಲಿಯ ಶಿಲ್ಪದ ನೆನಪನ್ನುಂಟು ಮಾಡುತ್ತದೆ.

ಆದರೆ ಈ ಗೋಪುರವು ಮೈಸೂರು ಅರಸರು ಬೇಲೂರು ದೇವಾಲಯದ ಜೀರ್ಣೋದ್ಧಾರ ಸಂದರ್ಭದಲ್ಲಿ ನಿರ್ಮಿಸಿರುವುದಲ್ಲ. ಬೇಲೂರು ದೇವಾಲಯದ ನಿರ್ಮಾಣದ ಸಂದರ್ಭವನ್ನು ವಿವರಿಸಿರುವ ಶಾಸನವು **ಬಹುಭೂಮಿಕೋದ್ಭಾಸಿತ ಶ್ರೀಮುಖದ್ವಾರಮಂ** ಎಂಬುದಾಗಿ ದಾಖಲಿಸಿದ್ದು ನಿರ್ಮಾಣ ಕಾಲದಲ್ಲಿಯೇ ಹಲವು ತಲಗಳ ಗೋಪುರ ನಿರ್ಮಾಣವಾಗಿತ್ತು ಎಂಬುದನ್ನು ಖಚಿತಪಡಿಸುತ್ತದೆ. ವೀರಬಲ್ಲಾಳನ ಕಾಲದಲ್ಲಿಯೇ ದೇವಾಲಯದ ಆವರಣಕ್ಕೆ ಸುತ್ತಲೂ ಪೌಳಿ ಇದ್ದು ಆಗಲೇ ಮಹಾದ್ವಾರ ಮತ್ತು ಮರದ ಬಾಗಿಲೂ ಇತ್ತು ಎಂಬುದು ಖಚಿತವಾಗಿ ಗೊತ್ತಾಗುತ್ತದೆ. ಹೊಯ್ಸಳರ ಪತನದ ನಂತರ ದಾಳಿ ಮಾಡಿದ ಕಲಬುರ್ಗಿಯ ಗಂಗಸಾಲರನು ಆ ಬಾಗಿಲನ್ನು ಒಡೆದು ಬೆಂಕಿ ಇಟ್ಟ. ಈ ಬಗ್ಗೆ ಬೇಲೂರಿನ ೧೪೪ನೆಯ ಶಾಸನವು ***ಕಲಬುರುಗೆಯ ತುರುಕ ಗಂಗಶೆಲಾರನು ಬಂದು ಮುರಿದು ಸುಡಿಸಿದ ಬಾಗಿಲವಾಡ.*** . . .ಎಂದು ಉಲ್ಲೇಖಿಸಿದೆ. ನಂತರದ ಹರಿಹರನ

ಮಹಾಪ್ರಧಾನಿ ಗುಂಡಪ ದಂಡ ನಾಯಕನು ಹೊಸ ಮಹಾದ್ವಾರವನ್ನು ನಿರ್ಮಿಸಿ ಅದಕ್ಕೆ ಇಟ್ಟಿಗೆ ಗಾರೆಗಳಿಂದ ಭವ್ಯವಾದ ವಿಜಯನಗರ ಶೈಲಿಯ (ಚೋಳ?) ಗೋಪುರವನ್ನು ಕಟ್ಟಿಸಿ ಜುಲೈ ೨೭, ೧೩೯೭ರಲ್ಲಿ ದೇವಾಲಯಕ್ಕೆ ಅರ್ಪಿಸಿದನು. ಈ ಗೋಪುರದಲ್ಲಿ ಐದು ತಲಗಳು ಮಾತ್ರವೇ ಇದ್ದರೂ ಶಾಸನ ಮಾತ್ರ 'ಈ ಗೋಪುರವು ಮೇರುಪರ್ವತ, ದ್ವಾರಕಾನಗರದ ಗೋಪುರ, ಮಯ ನಿರ್ಮಿತ ಪಾಂಡವ ಸಭಾಗೃಹ, ಸಪ್ತಖಂಡಗಳುಳ್ಳ ಸಾಗರ, ಸಪ್ತ ಪರ್ವತಗಳುಳ್ಳ ಭೂಮಿ, ಸಪ್ತಲೋಕ, ಸಪ್ತರ್ಷಿ, ಸಪ್ತಾಶ್ವ ಇವುಗಳನ್ನು ಹೋಲುತ್ತದೆ ಎಂದು ಹೊಗಳಿದೆ.

ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ***ವಿಜಯನಗರದ ಶಿಲ್ಪಿಗಳು ಹೊಯ್ಸಳ ಶಿಲ್ಪವನ್ನು ಮರೆಮಾಡಿ ಚೋಳ ಶೈಲಿಯ ಶಿಲ್ಪವನ್ನು ಕರ್ನಾಟಕದಲ್ಲಿ ವ್ಯಾಪಕ ಗೊಳಿಸುವುದರಲ್ಲಿ ಮೇಲುಗೈ ಸಾಧಿಸಿದರು*** ಎಂಬುದು.

ಬೇಲೂರು ದೇವಾಲಯದ ಜೀರ್ಣೋದ್ಧಾರ ಕಾರ್ಯವು ೧೯೩೦ರಲ್ಲಿ ಯೋಜಿತವಾದರೂ ೧೯೩೪ರಲ್ಲಿ ಪ್ರಾರಂಭವಾಗಿ ೧೯೪೦ರ ತನಕ ನಿಧಾನವಾಗಿ ಹಂತಹಂತವಾಗಿ ನಡೆಯಿತು. ಮೊದಲಿನ ಅವ್ಯವಸ್ಥೆ, ಶೈಥಿಲ್ಯಗಳನ್ನು ಸರಿಪಡಿಸಿದ ನಂತರ ಸ್ವಾಮಿಗಳು 'ರಿಪೇರಿ' ಕೆಲಸದಲ್ಲಿ ಆಸಕ್ತಿ ತೋರಲಿಲ್ಲ. ಎನಿಸುತ್ತದೆ. ಆದರೆ ಪ್ರಾರಂಭಿಕ ಕೆಲಸವೇ ಮೂರು-ನಾಲ್ಕು ವರ್ಷಗಳಿಗೂ ಹೆಚ್ಚು ನಡೆಯಿತು. ಆದ್ದರಿಂದ ಪುರಾತತ್ತ್ವ ಇಲಾಖೆಯ ಎಲ್ಲಾ ವಿದ್ವಾಂಸರ ಪರಿಚಯವೂ ಸ್ವಾಮಿಗಳೊಂದಿಗೆ ಬೆಳೆಯಿತು. ಪ್ರೊ॥ ಎಂ.ಎಚ್. ಕೃಷ್ಣ ಅವರು ಸ್ವಾಮಿಗಳ ಸಂಪರ್ಕವನ್ನು ಹೆಚ್ಚು ನಿಕಟಗೊಳಿಸಿ ಕೊಂಡಿದ್ದರ ಫಲವಾಗಿ ಅವರು ಪ್ರೊ॥ ಪ್ರಸನ್ನಕುಮಾರ ಆಚಾರ್ಯ ಅವರನ್ನು ಮೈಸೂರಿಗೆ ಕರೆತಂದು ಸ್ವಾಮಿಗಳನ್ನು ಪರಿಚಯ ಮಾಡಿಕೊಟ್ಟು ಮಾನಸಾರ ಗ್ರಂಥಕ್ಕೆ ಇಪ್ಪತ್ತೊಂದು ಚಿತ್ರಗಳು ಲಭಿಸುವಂತೆ ನೆರವಾದರು.

ಇದೇ ಕಾಲದಲ್ಲಿ ಪ್ರೊ॥ ಸ್ಟೆಲ್ಲಾ ಕ್ರಾಮರಿಷ್ ಎಂಬ ವಿದೇಶೀ ವಿದುಷಿ ಭಾರತೀಯ ಸಾಂಪ್ರದಾಯಿಕ ಶಿಲ್ಪದ ಬಗ್ಗೆ ವಿಶೇಷ ಅಧ್ಯಯನದ ಉದ್ದೇಶದಿಂದ ಭಾರತದ ಸಾಂಪ್ರದಾಯಿಕ ಶಿಲ್ಪಿಗಳನ್ನು ಭೇಟಿಯಾಗಿ ಅವರಿಂದ ಶಿಲ್ಪಶಾಸ್ತ್ರದ ರಹಸ್ಯಗಳನ್ನು, ಸಂಕೇತಗಳನ್ನು ತಿಳಿದು ಶಾಸ್ತ್ರದ ಅಂತರಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು ಆಶಿಸಿದ್ದರು. ಆಕೆಯು ಸ್ವಾಮಿಗಳನ್ನು ಭೇಟಿಯಾಗಿ ಈ ಸಂಬಂಧದಲ್ಲಿ ವಿಷಯ ಗ್ರಹಿಸಲು ಪ್ರಯತ್ನಿಸಿದರು. ಈ ಸಂದರ್ಭವನ್ನು ಕಲ್ಪಿಸಿಕೊಟ್ಟವರು ಪ್ರೊ॥ ಎಂ. ಎಚ್. ಕೃಷ್ಣ ಅವರೇ. ತರುವಾಯ ಪ್ರೊ॥ ಸ್ಟೆಲ್ಲಾ ಅವರು ಹತ್ತಾರು ಬಾರಿ ಬಂದು ಸ್ವಾಮಿಗಳ ಪದತಲದಲ್ಲಿ ಕುಳಿತು ಶಾಸ್ತ್ರಾರ್ಥವನ್ನು ಚರ್ಚಿಸಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡರು. ಈ ಕಾರಣಕ್ಕಾಗಿ ಪ್ರೊ॥ ಕೃಷ್ಣ ಅವರಿಗೆ ಸಿದ್ಧಲಿಂಗಸ್ವಾಮಿಗಳ ಬಗ್ಗೆ ಬಹುವಿಶೇಷವಾದ ಗೌರವ ಉಂಟಾಗಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಮೈಸೂರಿನ ಪಾರಂಪರಿಕ ಶಿಲ್ಪ ಮತ್ತು ಕಲೆಗಳ ಕಲಿಕೆಯನ್ನು ಪ್ರೋತ್ಸಾಹಿಸಲು ಅವುಗಳ ಅಭಿವೃದ್ಧಿಗೆ ನೆರವಾಗಲೆಂದೇ ಚಾಮರಾಜೇಂದ್ರ ತಾಂತ್ರಿಕ ಶಾಲೆಯನ್ನು ಪ್ರಾರಂಭಿಸಿದರು. ಶಿಲೆ-ಮರ-ಲೋಹ-ವರ್ಣ ಹೀಗೆ ಎಲ್ಲಾ ಮಾಧ್ಯಮಗಳಲ್ಲೂ ಶಿಲ್ಪದ ಪಾಠವನ್ನು ಮಾಡುತ್ತಿದ್ದರು. ಆ ಕಾಲದಲ್ಲಿ ಈಗಿನ ಐಟಿಐ ಮಟ್ಟದ ಶಿಕ್ಷಣವಾಗಿತ್ತು. ಆದರೆ ಆಗಿನ ಮೈಸೂರಿನ ಎಲ್ಲಾ ಪ್ರಸಿದ್ಧ ಶಿಲ್ಪಿಗಳು, ಚಿತ್ರಗಾರರು ಇಲ್ಲಿ ವಿದ್ಯಾರ್ಥಿಗಳು ಅಥವಾ ಅಧ್ಯಾಪಕರಾಗಿದ್ದವರೇ.



ಚಿತ್ರ ೩.೭ : ಬೇಲೂರಿನ ಚನ್ನಕೇಶವ ದೇವಾಲಯದ ಉತ್ತರ ದಿಕ್ಕಿನ ಭಾಗ



ಚಿತ್ರ ೩.೮ : ಬೇಲೂರಿನ ಚನ್ನಕೇಶವ ದೇವಾಲಯದ ದಕ್ಷಿಣ ದಿಕ್ಕಿನ ಭಾಗ

ಇಲ್ಲಿ ಸಾಂಪ್ರದಾಯಿಕ ಶಿಲ್ಪವನ್ನೂ ಅಭ್ಯಾಸ ಮಾಡಿದ ಅನೇಕರು ಉನ್ನತ ಅಭ್ಯಾಸಕ್ಕಾಗಿ ಸಿದ್ದಲಿಂಗಸ್ವಾಮಿಗಳ ಗುರುಕುಲವನ್ನು ಆಶ್ರಯಿಸುವುದು ರೂಢಿಯಾಗಿತ್ತು. ಸಾಧಾರಣವಾಗಿ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಸಾಂಪ್ರದಾಯಿಕ ಶಿಲ್ಪವನ್ನು ಶಾಸ್ತ್ರವಿಲ್ಲದೆ ಕೇವಲ ಶಿಲೆ–ಕಾಷ್ಠ–ಲೋಹಗಳಲ್ಲಿ ಕೆಲಸ ಮಾಡುವುದನ್ನು ಮಾತ್ರವೇ ಹೇಳಿಕೊಡುತ್ತಿದ್ದರು. ಆದ್ದರಿಂದ ಇಲ್ಲಿ ಕಲಿತವರಿಗೆ ಸ್ವಾಮಿಗಳ ಗುರುಕುಲವು ಓದು ಹೊಸಲೋಕವನ್ನೇ ತೆರೆಯುತ್ತಿತ್ತು. ಗುರುಕುಲವು ಅವರ ಕಲಿಕೆಯಲ್ಲಿ ಜೀವವನ್ನು ತುಂಬುತ್ತಿತ್ತು.

ಬೇಲೂರಿನ ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಶಿಲಾಶಿಲ್ಪವನ್ನು ಬೋಧಿಸುತ್ತಿದ್ದವರು ಮೈಸೂರಿನ ಶಿಲ್ಪಿ ಜವರಾಯಾಚಾರ್ಯರು. ಚಾಮರಾಜೇಂದ್ರ ತಾಂತ್ರಿಕ



ಚಿತ್ರ ೫.೯ : ನೂತನ ಗರುಡ ಮೂರ್ತಿ
(ಶಿಲ್ಪಿ : ಜವರಾಯಾಚಾರ್ಯ, ಮೈಸೂರು)

ಶಾಲೆಯಲ್ಲಿ ಶಿಲ್ಪವನ್ನು ಐದು ವರ್ಷಗಳ ಕಾಲ ಬೋಧಿಸುತ್ತಿದ್ದರು. ಅದರಲ್ಲಿ ಮೊದಲ ನಾಲ್ಕು ವರ್ಷ ಕೇವಲ ಶಿಷ್ಯವೃತ್ತಿ ನಡೆಸುತ್ತಿದ್ದರು. ಐದನೆಯ ವರ್ಷದಲ್ಲಿ ವರ್ಕ್‌ಷಾಪ್ ಕೆಲಸ. ಆಗ ಸಾರ್ವಜನಿಕರಿಂದ ಆರ್ಡರ್ ಪಡೆದುಕೊಂಡು ವಿಗ್ರಹಗಳನ್ನು ಮಾಡಬಹುದಾದ ಅವಕಾಶವಿತ್ತು.

ಬೇಲೂರಿನ ದೇವಾಲಯದ ಜೀರ್ಣೋದ್ಧಾರದ ಸಂಬಂಧದಲ್ಲಿ ಧ್ವಜ ಸ್ತಂಭದ ಬಳಿ ೧೫೬೬ರಲ್ಲಿ ಮೊದಲನೆಯ ವೆಂಕಟಾದ್ರಿ ನಾಯಕನು ನಿರ್ಮಿಸಿದ್ದ ಎಂದು ಹೇಳುವ ಗರುಡಾಲಯವು ನಾಶವಾಗಿತ್ತು. ಅದನ್ನು ಅಲ್ಲಿ ಪುನರ್ನಿಸಿ ಗರುಡು ಮೂರ್ತಿಯನ್ನು ಸ್ಥಾಪಿಸುವುದು ಸೂಕ್ತ ಎಂಬುದಾಗಿ ಎಲ್ಲರೂ ಅಭಿಪ್ರಾಯಪಟ್ಟರು. ಈ ಬಗ್ಗೆ ತೀರ್ಮಾನಕ್ಕಾಗಿ ಸ್ವಾಮಿಗಳನ್ನು ಸಲಹೆ ಕೇಳಿದರು. ಗರುಡಾಲಯದ ಕಲ್ಪನೆಗೆ ನೆರವಾಗುವ ಯಾವ ಪುರಾವೆಯೂ ಇಲ್ಲದಿರುವಾಗ ಅದನ್ನು ನಿರ್ಮಿಸುವುದು 'ಹೊಸದೇ' ಆಗುತ್ತದೆ. ಅದರ ಬದಲಿಗೆ ಗರುಡ ಶಿಲ್ಪವನ್ನು ಮಾತ್ರವೇ ಸೇರ್ಪಡೆ ಮಾಡುವುದು ಸೂಕ್ತ. ಇದು ಸೇರ್ಪಡೆ ಎಂಬುದನ್ನು ಗುರ್ತಿಸುವಂತೆ ಮಾಡುವುದೂ ಸೂಕ್ತಕ್ರಮವಾಗಿರುತ್ತದೆ ಎಂದು ಸ್ವಾಮಿಗಳು ಹೇಳಿದರು. ಈ ಸಲಹೆಯು ಎಲ್ಲರಿಗೂ ಸೂಕ್ತವಾಗಿ ಕಂಡಿತು. ಸರ್ಕಾರದ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಈ ಮೂರ್ತಿಯನ್ನು ಮಾಡಿಸಬಹುದೆಂದು ತೀರ್ಮಾನಿಸಿದಾಗ ಆ ಶಿಲ್ಪವನ್ನು ತಯಾರಿಸುವ ಅವಕಾಶವು ಅಲ್ಲಿಯ ಮುಖ್ಯ ಶಿಲಾ ಶಿಲ್ಪಿಯಾಗಿದ್ದ ಜವರಾಯಾಚಾರ್ಯರಿಗೆ ಲಭಿಸಿತು.

ಶಿಲ್ಪಿ ಜವರಾಯಾಚಾರ್ಯರು ಕೂಡ ಮೊದಲಿಗೆ ಸಿದ್ಧಲಿಂಗಸ್ವಾಮಿಗಳಲ್ಲಿ ಶಿಷ್ಯರಾಗಿದ್ದವರೇ. ಇವರಿಗೆ ಮೊದಲು ಅಧ್ಯಾಪಕರಾಗಿದ್ದವರು ಶಿಲ್ಪಿ ಎಲ್. ಈಶ್ವರಾಚಾರ್ಯರು (ಶಿಲ್ಪಿ ಸಿ. ಪರಮೇಶ್ವರಾಚಾರ್ಯರು ಸೋದರ ಮಾವನವರು). ಅವರ ನಿವೃತ್ತಿಯ ತರುವಾಯ ಆ ಕೆಲಸಕ್ಕೆ ನೇಮಕವಾದವರು ಶಿಲ್ಪಿ ಜವರಾಯ ಆಚಾರ್ಯರು. ಇಬ್ಬರೂ ಅರಮನೆಯ ಶಿಲ್ಪದ ಕೆಲಸಗಳನ್ನು ಮಾಡುತ್ತಿದ್ದವರೇ. ಸ್ವಾಮಿಗಳ ಮಾರ್ಗದರ್ಶನದಲ್ಲಿ ಗರುಡಮೂರ್ತಿಯ ಶಿಲ್ಪವನ್ನು ನಿರ್ಮಿಸಿ ಸ್ಥಾಪಿಸಿದರು.

ಮೈಸೂರಿನ ಶಿಲ್ಪಗಳಲ್ಲಿ ಹೊಯ್ಸಳ ಶೈಲಿಯು ಎಷ್ಟು ಸಹಜವಾಗಿ ಬೆರೆತು ಹೋಗಿತ್ತು ಎಂಬುದನ್ನು ಈ ಶಿಲ್ಪವು ತೋರುತ್ತದೆ. ಬೇಲೂರು ದೇವಾಲಯದತ್ತ ಅಂದಿನ ಸರ್ಕಾರದ ಗಮನವನ್ನು ಸೆಳೆಯಲು ಕಾರಣಕರ್ತರಾಗಿದ್ದ ಜರ್ಮನಿಯ ಪ್ರೊ. ರೊಡಾಲ್ಫ ಒಟ್ಟೋ ಅವರು ಈ ಎಲ್ಲಾ ಬೆಳವಣಿಗೆಗಳನ್ನೂ ಗಮನಿಸುತ್ತಾ ಇದ್ದರು. ಮೈಸೂರು ಸರ್ಕಾರ ದೇವಾಲಯದ ಜೀರ್ಣೋದ್ಧಾರದ ಬಗ್ಗೆ ವಹಿಸಿದ ಮುತುವರ್ಜಿಗಾಗಿ ಮಹಾರಾಜರನ್ನು ಅಭಿನಂದಿಸಿದ್ದು ಮಾತ್ರವಲ್ಲ ಭಾರತಕ್ಕೆ ಬಂದಾಗಲೆಲ್ಲಾ ದೇವಾಲಯದ ಕೆಲಸದ ಪ್ರಗತಿಯನ್ನು ಸ್ವತಃ ಬಂದು ನೋಡುತ್ತಿದ್ದರು. ಆ ಸಂದರ್ಭದಲ್ಲಿ ಅವರಿಗೆ ಸಿದ್ಧಲಿಂಗಸ್ವಾಮಿಗಳ ಪರಿಚಯವಾಯಿತು. ಶಿಲ್ಪಿಯು ತತ್ತ್ವಜ್ಞಾನಿಯಾಗಿರುವುದು ಅವರಿಗೆ ಬಹು ಮೆಚ್ಚಿಗೆಯಾಯಿತು. ಶಿಲ್ಪ ಮತ್ತು ತತ್ತ್ವಜ್ಞಾನಗಳ ಮಧ್ಯೆ ಇರುವ ಮಧುರ ಸಂಬಂಧದಿಂದಾಗಿ ಸ್ವಾಮಿಗಳಲ್ಲಿ ವೇದಾಂತದ ಚರ್ಚೆಗೆ ಅವಕಾಶವಾದಾಗಲೆಲ್ಲ ಬರುತ್ತಿದ್ದರು. ಪ್ರೊ॥ ಒಟ್ಟೋ ಅವರಿಗೆ ಶಂಕರಾದ್ವೈತದ ಬಗ್ಗೆ ಬಹುವಾದ ಆಸ್ಥೆ ಪ್ರೇಮಗಳಿದ್ದವು. ಜೀರ್ಣೋದ್ಧಾರದ ಕೆಲಸದಲ್ಲಿ ಸ್ವಾಮಿಗಳು ವಹಿಸಿದ ಪಾತ್ರ ಅವರ ಶಾಸ್ತ್ರದ ತಿಳಿವು, ತಂತ್ರಜ್ಞತೆಗಳನ್ನು ಬಹುವಾಗಿ ಮೆಚ್ಚಿದರು. ಸ್ವಾಮಿಗಳಿಂದ ಶಂಕರಾಚಾರ್ಯರ ಶಿಲ್ಪವನ್ನು ಮಾಡಿಸಿ ಜರ್ಮನಿಗೆ ಕೊಂಡೊಯ್ದರು. ಈ ಶಿಲ್ಪವು ಸ್ವಾಮಿಗಳ ಪ್ರಖ್ಯಾತಿಯನ್ನು ಏರೋಪಿನಲ್ಲೂ ಹರಡಲು ಕಾರಣವಾಯಿತು.

ಮೈಸೂರು ಅರಸರ ಆಸಕ್ತಿಯಿಂದ ಕರ್ನಾಟಕದ ಬಹು ಸುಂದರ ದೇವಾಲಯವೊಂದು ಪೂರ್ಣಪ್ರಮಾಣದಲ್ಲಿ ಜೀರ್ಣೋದ್ಧಾರಗೊಂಡಿತು. ಇದು ಮುಗಿದದ್ದು ೧೯೪೦ರ ಸುಮಾರಿನಲ್ಲಿ ಜೀರ್ಣೋದ್ಧಾರದ ತರುವಾಯ ದೇವಾಲಯದ ಅಂಗಳ ಮತ್ತು ದೇವಾಲಯದ ಜೀರ್ಣ ಭಾಗಗಳು ಸ್ಥಿರಗೊಂಡವು. ಈಗ ದೇವಾಲಯದ ನೋಟವನ್ನು ಮೇಲೆ ಕೊಟ್ಟಿರುವ ಚಿತ್ರಗಳಲ್ಲಿ ಗಮನಿಸಬಹುದು. ಈ ಕೆಲಸವನ್ನು ದೇವರ ಸೇವೆ ಎಂದು ಪರಿಗಣಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಿಂದಿನ ಮಹಾರಾಜರೂ ತಮ್ಮ ತೀರ್ಥ ರೂಪರೂ ಆಗಿದ್ದ ಚಾಮರಾಜೇಂದ್ರ ಒಡೆಯರ್ ಅವರ ನೆನಪಿಗೆ ಅರ್ಪಿಸಿ ಅವರ ಲೋಹದ ಮೂರ್ತಿಯನ್ನು ದೇವಾಲಯದ ಕಚೇರಿಯಲ್ಲಿರಿಸಿದ್ದಾರೆ. ಇಂದೂ ಆ ಪ್ರತಿಮೆಯನ್ನು ನೋಡಬಹುದು. (ಚಿತ್ರ ೩.೭)



ಚಿತ್ರ ೩.೧೦ : ಚಾಮರಾಜ ಒಡೆಯರ ಲೋಹದ ರೂಪಶಿಲ್ಪ (ದೇವಾಲಯದ ಜೀರ್ಣೋದ್ಧಾರದ ನೆನಪಿನಲ್ಲಿ ಇರಿಸಿರುವ ಶಿಲ್ಪ)

ಆಧುನಿಕ ಭಾರತದಲ್ಲಿ ಜೀರ್ಣೋದ್ಧಾರವೇ ಪ್ರತ್ಯೇಕ ವಿದ್ಯೆಯಾಗಿ Conservation ಎಂಬ ಹೆಸರಿನಲ್ಲಿ ವಿಶೇಷವಾಗಿ ಅಧ್ಯಯನ ಮಾಡುತ್ತಾರೆ. ಈ ಕೆಲಸ ಮಾಡುವ ಶಿಲ್ಪಿಗಳ ಸಂಖ್ಯೆ ಇಂದಿಗೂ ಒಂದು ಕೈ ಬೆರಳೆಣಿಕೆಯಷ್ಟೂ ಇಲ್ಲ ಎಂದರೆ ಈ ಕೆಲಸದ ಮಹತ್ತ್ವವನ್ನು ವಾಚಕರು ಊಹಿಸಬಹುದು. ಇಂತಹ ಕ್ಲಿಷ್ಟವಾದ ಕೆಲಸವನ್ನು ಸಿದ್ಧಲಿಂಗಸ್ವಾಮಿಗಳು ತಮ್ಮ ತಾರುಣ್ಯದಲ್ಲಿಯೇ ಸುಮಾರು ಎಂಬತ್ತು ವರ್ಷಗಳಷ್ಟು ಹಿಂದೆಯೇ, ಕೈಗೊಂಡು ಅನುಭವವನ್ನು ಗಳಿಸಿಕೊಂಡು ಯಶಸ್ವಿಯಾಗಿದ್ದಾರೆ ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು.

ಕೊಳ್ಳೇಗಾಲದಲ್ಲಿ ಸಾಮಾನ್ಯ ಶಿಲ್ಪಿಯಾಗಿ ಸಣ್ಣಪುಟ್ಟ ಚಿತ್ರ-ಶಿಲ್ಪಗಳನ್ನು ಮಾಡುತ್ತಿದ್ದ ಸಿದ್ಧಲಿಂಗಸ್ವಾಮಿಗಳು ಅರಮನೆಯ ಕೆಲಸಕ್ಕೆ ಶಿಲ್ಪಿಗಳಾಗಿ ಸೇರಿದ್ದು ಹೇಗೆ ಎಂಬುದನ್ನು ಹೇಳಬೇಕು.



ಚಿತ್ರ ೩. ೧೧ : ಶಿಥಿಲಾವಸ್ಥೆಯಲ್ಲಿರುವ ಹೊಯ್ಸಳ ದೇವಾಲಯ (ಪಾಠಕರಿಗೆ ಹೊಯ್ಸಳ ಶಿಥಿಲಾಲಯದ ಕಲ್ಪನೆ ಮೂಡಲು ಈ ನಿಜಚಿತ್ರವನ್ನು ಕೊಟ್ಟಿದೆ. ಇದು ಬೇಲೂರಿಗೆ ಸಂಬಂಧಿಸಿದ್ದಲ್ಲ.)

೮

ಗುರುವೇ ಸಕಲ ಕಾರ್ಯಕಾರಣ

ಸಿದ್ಧಲಿಂಗಸ್ವಾಮಿಗಳು ೧೮೮೫ರಲ್ಲಿ ಕೊಳ್ಳೇಗಾಲದ ಶಿಲ್ಪಿ ಸಿದ್ದಪ್ಪಾಜಿಯವರ ಎರಡನೆಯ ಮಗನಾಗಿ ಹುಟ್ಟಿದರು. ಇವರ ಅಣ್ಣನವರು ಅಪ್ಪಾಜಿ ಸ್ವಾಮಿಗಳು. ಇವರ ತಾಯಿ ಚಾಮರಾಜ ನಗರದ ಬೆಂಡರವಾಡಿ ಗ್ರಾಮದ ಮಲ್ಲಾಜಮ್ಮನವರು. ಶಿಲ್ಪ ಎಂಬುದು – ಅದರಲ್ಲೂ ಶಿಲಾಶಿಲ್ಪ ಎಂಬುದು– ಏಕಾಂಗಿಗಳಾಗಿ ನಿರ್ವಹಿಸುವ ವೃತ್ತಿಯಲ್ಲ. ಹಾಗೆ ಒಂಟಿಯಾಗಿದ್ದಾಗ ಊರಿನಲ್ಲಿ ಲಭಿಸುವ ಶಿಲ್ಪ ಎನಿಸಿಕೊಳ್ಳುವ ಎಲ್ಲಾ ಕೆಲಸಗಳನ್ನು ಅನಿವಾರ್ಯವಾಗಿ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಆಜೀವಿಕೆಗೇ ತೊಂದರೆಯಾಗುತ್ತದೆ. ಕಿರಿಯ ಊರುಗಳಲ್ಲಿ ಜೀವನವನ್ನು ಕಂಡುಕೊಳ್ಳುವ ಎಲ್ಲಾ ಶಿಲ್ಪಿಗಳ ಪಾಡು ಇಂದಿಗೂ ಇದೇ. ಇಲ್ಲಿ ಶಿಲ್ಪಿಯ ಕ್ಷೇತ್ರ ಪರಿಣಿತಿಗಿಂತಲೂ ಪ್ರಧಾನವಾದದ್ದು ಸಮಯಕ್ಕೆ ಕೆಲಸವನ್ನು ಮಾಡಿಕೊಡಬಲ್ಲ ಸಾಮರ್ಥ್ಯ. ಶಿಲ್ಪಕ್ಷೇತ್ರದ ಪರಿಣಿತಿ ಇಲ್ಲಿ ಯಾರಿಗೂ ಬೇಡದ್ದು ! ಹೀಗೇ ಶಿಲ್ಪಿಗಳಾಗಿ ಸಿದ್ದಪ್ಪಾಜಿ ಸ್ವಾಮಿಗಳು ಎಲ್ಲರಿಗೂ ಬಹುಪರಿಚಿತರು. ಆಪತ್ತಿಗೆ ಒದಗುವ ಸಹೃದಯಿಗಳೂ ಆಗಿ ಊರಿನಲ್ಲಿ ಎಲ್ಲರಿಗೂ ಆತ್ಮೀಯರು. ದೇವಾಲಯದಲ್ಲಿ ಪೂಜೆಗೆ ಶಿಲಾವಿಗ್ರಹವಾಗಲಿ, ಉತ್ಸವಕ್ಕೆ ಬೇಕಾಗಿರುವ ಲೋಹದ ವಿಗ್ರಹವಾಗಲಿ, ಮರದ ರಥ, ಬಾಗಿಲುವಾಡ, ಪ್ರಭಾವಳಿ, ಕೊನೆಗೆ ಗಣೇಶೋತ್ಸವಕ್ಕೆ ಬೇಕಾಗುವ ಮಣ್ಣಿನ ಗಣೇಶ, ಮರದಲ್ಲಿ ಗ್ರಾಮದೇವತೆ, ವಿಗ್ರಹದ ಪ್ರತಿಷ್ಠಾಪನೆ, ಜ್ಯೋತಿಷ್ಯ, ಮಾಟವಾಗಿದೆ ಎಂದಾಗ ಅದನ್ನು ತೆಗೆಸಲು ಪ್ರತಿಮಂತ್ರ, ಪೌರೋಹಿತ್ಯ.... ಹೀಗೆ ಸಿದ್ದಪ್ಪಾಜಿ ಸ್ವಾಮಿಗಳು ಎಲ್ಲರಿಗೂ ಬೇಕಾದ ಸ್ವಾಮಿಗಳಾಗಿದ್ದರು. ಸಿದ್ಧಲಿಂಗ ಸ್ವಾಮಿಗಳು ಇದೇ ಮಾರ್ಗದಲ್ಲಿಯೇ ಬೆಳೆದರು. ಎಲ್ಲಾ ಬಲ್ಲ ತಂದೆ ಪ್ರಸಿದ್ಧ ಶಿಲ್ಪಿಯಾಗುವ ಅವಕಾಶವೇ ಇರಲಿಲ್ಲ. ಆದರೂ ಅವರ ಜೀವನ ಸಾಗಲು ಅವಶ್ಯಕ ಸಂಪಾದನೆ ಚೆನ್ನಾಗಿಯೇ ಇತ್ತು. ಆದರೆ ಶ್ರೀಮಂತರೆನಿಸಿಕೊಳ್ಳಲು ತೀರಾ ಕಿರಿದಾಗಿತ್ತು ! ಈ ವೈವಿಧ್ಯದಿಂದಲೇ ಸಿದ್ಧಪ್ಪಾಜಿ ಸ್ವಾಮಿಗಳು ಪ್ರಖ್ಯಾತರಾಗುವ ಅವಕಾಶ ಗಳಿಸಲು ಸಾಧ್ಯವಾಗದೆ ಜನಪ್ರಿಯರೂ, ಊರಿನಲ್ಲಿ ಹಿರಿಯರೂ ಆಗಿದ್ದರು.

ಇದೇ ಕಾರಣದಿಂದಲೇ ಪ್ರೊ॥ ಪ್ರಸನ್ನ ಕುಮಾರ ಆಚಾರ್ಯರು ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಬರೆಯುತ್ತಾ who *claims* to be a silpin by heridity ಎಂದು ಹೇಳಿರುವುದು. ಪ್ರೊಫೆಸರ್ ಅವರಿಗೆ ಸಿದ್ಧಪ್ಪಾಜಿ ಸ್ವಾಮಿಗಳು 'ಶಿಲ್ಪಿಗಳು' ಎಂಬುದರ ಬಗ್ಗೆಯೇ ನಂಬಿಕೆ ಇರಲಿಲ್ಲ. ಸಿದ್ಧಪ್ಪಾಜಿಯವರು ಮಾಡಿರುವ ಶಿಲ್ಪಗಳಾಗಲಿ, ಚಿತ್ರಗಳಾಗಲಿ ಕಾಪಾಡಿ ಸಂಗ್ರಹಿಸಿಯೂ ಇರಲಿಲ್ಲ. ಇನ್ನು ಸಕಲ ಶಿಲ್ಪಗಳನ್ನೂ, ಶಾಸ್ತ್ರಗಳನ್ನೂ ಸಿದ್ಧಲಿಂಗ ಸ್ವಾಮಿಗಳು ಅವರಿಂದಲೇ ಕಲಿತರು ಎಂಬುದನ್ನು ಒಪ್ಪುವುದು ಹೇಗೆ? ಕೊಳ್ಳೇಗಾಲದಲ್ಲಿ ೧೮೮೫ರಲ್ಲಿ ಹುಟ್ಟಿದ ತರುವಾಯ ಸಿದ್ಧಲಿಂಗಸ್ವಾಮಿಗಳು ೧೯೦೮ರಲ್ಲಿ (ಎಂದರೆ ಅವರ ೨೩ನೆಯ ವಯಸ್ಸಿನಲ್ಲಿ) ಅರಮನೆಯ ಅಲಂಕರಣದ ಕೆಲಸಕ್ಕೆ ಮೈಸೂರಿಗೆ ಬರುವತನಕ ಅವರಿಗೆ ಅವರ ತಂದೆಯವರಾದ ಸಿದ್ಧಪ್ಪಾಜಿ ಸ್ವಾಮಿಗಳು ಮತ್ತು ಗುರುಗಳಾದ ನಂಜುಂಡ ಶಿವಯೋಗಿಗಳು ಇವರಿಬ್ಬರೊಂದಿಗೆ ಮಾತ್ರವೇ ಸಂಪರ್ಕ ಇದ್ದದ್ದು. ಸಿದ್ಧಪ್ಪಾಜಿ ಸ್ವಾಮಿಗಳು ಕರಸ್ಥಲ ನಾಗಲಿಂಗ ಸ್ವಾಮಿಗಳ ಪೀಠದ ಶಿಷ್ಯರಾಗಿದ್ದವರು. ನಂಜುಂಡ ಶಿವಯೋಗಿಗಳ ಅನನ್ಯ ಭಕ್ತರಾಗಿದ್ದರು.

ನಂಜುಂಡ ಶಿವಯೋಗಿಗಳು ಕರಸ್ಥಲ ನಾಗಲಿಂಗ ಸ್ವಾಮಿಗಳ ಪೀಠಾಧ್ಯಕ್ಷರು. ಈ ಗುರುಪೀಠವು ಅಸ್ಥಿರಗೊಂಡಿದ್ದರಿಂದ ಸ್ವಾಮಿಗಳು ಪರಿವ್ರಾಜಕರಾಗಿದ್ದರು. ಆದ್ದರಿಂದ ಗುರುಪೀಠಸ್ಥರಾಗಿದ್ದರೂ ಸದಾ ಸಂಚಾರದಲ್ಲಿರುತ್ತಿದ್ದರು. ಸಾಧಾರಣವಾಗಿ ಎಲ್ಲಾ ಊರುಗಳಲ್ಲೂ ಅವರನ್ನು ಆದರಿಸಿ ಪೂಜಿಸುವ ಶಿಷ್ಯವರ್ಗದವರು ಇರುತ್ತಿದ್ದರು. ಅವರು ಬಹು ಮಹಿಮಾ ಪುರುಷರಾಗಿದ್ದರು ಎಂಬುದು ಜನವಾಕ್ಯ. ಅವರು ಪ್ರವೇಶಿಸಿದ ಮನೆಯಲ್ಲಿ ಸಕಲ ಅನಿಷ್ಟಗಳೂ ನಾಶವಾಗಿ ಸಂತೋಷ ನೆಲಸುತ್ತಿತ್ತು. ಗುರುಗಳು ಕಾಣಿಸಿದ ಕೂಡಲೇ ಬಲವಂತದಿಂದ ತಮ್ಮ ಮನೆಗೆ ಕರೆದೊಯ್ಯಲು ಸದಾ ಶಿಷ್ಯರು ತವಕದಿಂದ ಕಾಯುತ್ತಿದ್ದರು. ಆಚಾರ-ನಿಯಮಗಳ ಬೋಧನೆ ಮಾಡುವುದರೊಂದಿಗೆ ವೇದಾಂತ ತತ್ತ್ವಗಳನ್ನೂ ಹೇಳುತ್ತಿದದರು. ನೂರೊಂದು ವಿರಕ್ತರಲ್ಲಿ ಮೊದಲಿಗರಾದವರು ಕರಸ್ಥಲ ನಾಗಲಿಂಗ ಸ್ವಾಮಿಗಳು. ಶಿವಲಿಂಗವನ್ನು ಯಜ್ಞೋಪವೀತವನ್ನು ಧರಿಸಿದ್ದು ವೈದಿಕ ಶೈವವನ್ನು ಅನುಸರಿಸುತ್ತಿದ್ದರು. ಇದನ್ನು ಸ್ಮಾರ್ತ ಸಂಪ್ರದಾಯ ಎಂದು ಗುರುತಿಸುತ್ತಾರೆ. ವಿಶ್ವಕರ್ಮ ಬ್ರಾಹ್ಮಣರಲ್ಲಿ ಈ ಪೀಠಕ್ಕೆ ಸೇರಿರುವ ಶಿಷ್ಯರು ಕರ್ನಾಟಕದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ವ್ಯಾಪಕವಾಗಿದ್ದಾರೆ.

ಕರಸ್ಥಲದ ನಾಗಲಿಂಗ ಸ್ವಾಮಿಗಳು ಶ್ರೀರಂಗಪಟ್ಟಣದ ಬಳಿ ಇರುವ ಬೊಮ್ಮೂರಿನವರು. ಇವರ ಜೀವನ ಚರಿತ್ರೆಯನ್ನು **ಚೆನ್ನಬಸವೇಶ ವಿಜಯ** (ಸಂಪಾದಕರು : ಎಸ್. ಆರ್. ಕರಿಬಸವಶಾಸ್ತ್ರಿ)ದಲ್ಲಿ ಅಕ್ಕಸಾಲೆ ನಾಗಯ್ಯ ಎಂಬ ಹೆಸರಿನಿಂದ ಸ್ವಾಮಿಗಳ ಬಗ್ಗೆ ವಿವರಗಳಿವೆ. ಈ ಪುರಾಣದ ಕರ್ತೃವು ವಿರೂಪಾಕ್ಷ ಪಂಡಿತರು. ಈ ಕಾವ್ಯವನ್ನು ವಾರ್ಧಿಕ ಷಟ್ಪದಿಯಲ್ಲಿ ರಚಿಸಿರುತ್ತಾರೆ. ಈ ಗ್ರಂಥದ ರಚನಾಕಾಲ ಕ್ರಿ.ಶ. ೧೬೦೬. ಇದೇ ಕಾಲದಲ್ಲಿಯೇ ಅದ್ರೀಶಪ್ಪ ಎಂಬುವವರು ***ಪ್ರೌಢದೇವರಾಯ ಚರಿತ*** ಎಂಬ ಕಾವ್ಯವನ್ನು ಬರೆದಿರುತ್ತಾರೆ. ಇದು ೧೪೧೯ ರಿಂದ ೧೪೪೭ರವರೆಗೆ ಆಳಿದ ಪ್ರೌಢದೇವರಾಯನಿಗೆ ಸಂಬಂಧಿಸಿರುವ ಕಾವ್ಯ ಇದರಲ್ಲಿ ಮೊದಲ ಸಂಧಿಯ ೪೨ನೆಯ ಪದ್ಯವು ಇಂತಿದೆ.

ಹರರೂಪವಾದ ನೂರೊಂದು ಸುವಿರಕ್ತರುಂ ।
ಕರಸ್ಥಲದ ನಾಗಯ್ಯ **ಕಲ್ಮಠದ ಪ್ರಭುದೇವ ।**
ವರವೀರಣ್ಣೊಡಯ ಚಾಮರಸರಾರಾಧ್ಯರು ನೆರೆದಾ ಭಕ್ತರೆಲ್ಲರ್ ।
ಭರದಿಂದ ಭೋರ್ಗರವ ಭೇರಿ ನಿಸ್ಸಾಳಗಳು ।
ತರತರದಲೊದರುತಿಹ ಕಾಹಳಾದಿಗಳಿಂದ ।
ಧರೆಯೊಳಚ್ಚರಿಯೆನಿಸಿ ಮೆರೆಯಿಸಿದರಿರುಳು ಏಕೋತ್ತರ ಶತಸ್ಥಳವನೂ ॥

ವೀರಶೈವಾಮೃತ ಮಹಾಪುರಣದಲ್ಲಿ ಕರಸ್ಥಲದ ನಾಗಿದೇವರ ಪರಂಪರೆಯ ಹಲವು ಶರಣರನ್ನು ಸ್ತುತಿಸಿದ್ದಾರೆ. ಸಿದ್ಧನಂಜೇಶ ಕವಿಯು ರಚಿಸಿರುವ ***ಗುರುರಾಜ ಚರಿತ್ರೆ***ಯ ಮೂರನೆಯ ಸಂಧಿಯಲ್ಲಿ ಕರಸ್ಥಲದ ನಾಗಯ್ಯ ಜಗದ್ಗುರುಗಳ ಮತ್ತು ಅವರ ಸಮಕಾಲೀನ ಶರಣರ ವಿಚಾರವಾಗಿ ಅನೇಕ ವಿವರಗಳಿವೆ. ನೂರೊಂದು ವಿರಕ್ತರ ಲೀಲೆಗಳನ್ನು ಪ್ರಸ್ತಾಪಿಸುವಾಗಲೆಲ್ಲಾ ಮೊದಲಿಗೆ ಕರಸ್ಥಲದ ನಾಗಯ್ಯನವರನ್ನು ಉಲ್ಲೇಖಿಸುವುದರಿಂದ ಅವರೆಂತಹ ಮಹಾಮಹಿಮರೆಂಬುದು ಸ್ಪಷ್ಟವಾಗುತ್ತದೆ.

ಚನ್ನಬಸವಪುರಾಣವನ್ನು ಆಧಾರವಾಗಿಸಿಕೊಂಡು ಘನಲಿಂಗದೇವರು ನೂರೊಂದು ವಿರಕ್ತರ ಬಗ್ಗೆ ಬರೆದಿರುವ ವಚನದಲ್ಲಿ ಕರಸ್ಥಲ ನಾಗಲಿಂಗ ದೇವರ ಮಹಿಮಾತಿಶಯಗಳನ್ನು ಹೀಗೆ ವರ್ಣಿಸಿದ್ದಾರೆ–

ಕರಸ್ಥಲ ನಾಗಿದೇವ ಮೊದಲಾದ ವಿರಕ್ತರು ಆವಕ್ರಿಯೆಯನ್ನು ಆಚರಿಸಿ ಶಿವಲಿಂಗೈಕ್ಯರಾದ ರೆಂದು ಕೆಟ್ಟು ನಡೆವ ಭವಹೇತುಗಳು ನೀವು ಕೇಳರಿಯರೇ? ಅವರು ತುಂಬಿದ ತೊರೆಯ ಸಂಭ್ರಮದಿಂದ ಹಾಯ್ದು ಇರುವ ಶಕ್ತಿಯ ಮುಂದೆ ಹಾಲು, ಬೋನ, ಹಣ್ಣು, ಕಜ್ಜಾಯ ವಿಕ್ಕಿರಲು ಆ ಶಕ್ತಿಯ ಮಾತನಾಡಿಸಿ ಉಂಡರು. ವಿಷಪದಾರ್ಥವನ್ನಿಕ್ಕಲು ಉಂಡು ದಕ್ಕಿಸಿಕೊಂಡರು. ಭಿಕ್ಷೆಗೆ ಹೋದಲ್ಲಿ ಕಾಮುಕ ಸ್ತ್ರೀ ಬಂದು ಪಿಡಿದೊತ್ತೆ ಅವರಂಗಳದಲ್ಲಿ

ಅವಳ ಅನುಭವಿಸುವಾಗ ಮನೆಯೊಡೆಯ ಬಂದು ಕಡಿದೆ ಖಂಡಯದ ಮೊನೆಗೆ ಬಯಲಾಗಿ ತೋರಿದರು. ಪಚ್ಚೆಯ ಕಡಗಮಂ ತಿರುಗಣೆಯ ಮಡುವಿಗಿಟ್ಟು ತಿರುಗಿ ಕರೆದುಕೊಂಡರು. ಕೆಂದೆಂಗಿನ ಎಳೆನೀರ ಭಾವಾರ್ಪಣವ ಮಾಡಿದರು. ಪಟ್ಟದರಸಿನ ರಾಣಿಯು ಪಲ್ಲಕ್ಕಿಯ ಮೇಲೆ ಹೋಗುವಲ್ಲಿ ಅವಳ ಬಟ್ಟ ಮೊಲೆಯ ಹಿಡಿದು ಮುದ್ದಾಡಿ ಇರಿಸಿಕೊಂಡು ಬಯಲಾದರು, ದೇವೇಂದ್ರ ಭೋಗಮಂ ಬಿಟ್ಟರೂ ತನುವನಿಲಿಸಿ ಪ್ರಾಣವ ಕೊಂಡೊಯ್ದರು. ಉಂಗುಷ್ಟದಲ್ಲಿ ಧರಿಸಿರ್ದ ಲಿಂಗಮಂ ತೆಗೆಯಲು ಆ ಲಿಂಗದ ಕೂಡೆ ಪ್ರಾಣವ ಕಳುಹಿದರು.

ಇದರಿಂದ ಪುರಾತನ ಶರಣರಲ್ಲಿ ಕರಸ್ಥಲನಾಗಿ ದೇವರ ಸ್ಥಾನವು ತುಂಬಾ ಉನ್ನತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇವರು ಪ್ರೌಢದೇವರಾಯನ ಕಾಲದಲ್ಲಿದ್ದು ಕಲ್ಲುಮಠದ ಪ್ರಭುದೇವ, ಚಾಮರಸ ಮುಂತಾದವರ ಸಮಕಾಲೀನರಾಗಿದ್ದರು. ಇವರು ಪ್ರೌಢದೇವರಾಯರಿಗೆ ಗುರುಗಳಾಗಿದ್ದು ಜಗದ್ಗುರುಗಳೆಂದು ಖ್ಯಾತರಾಗಿದ್ದರು. 'ಬೊಮ್ಮೂರ ಸ್ಥಳದಲ್ಲಿ ಕರ್ಮಹರನು ರೂಪನಿರ್ಮಿತ ಕುಲದಲುದ್ಭವಿಸಿದರು' ಎಂದರೆ ಇವರು ಸ್ಪಷ್ಟವಾಗಿ ಶಿಲ್ಪಿವಂಶಜರು. ಶ್ರೀ ಕರಸ್ಥಲದ ನಾಗಲಿಂಗದೇವನ ತ್ರಿಪದಿ ಎಂಬ ಇವರ ಗ್ರಂಥವು ಪ್ರಸಿದ್ಧವಾದದ್ದು ಈ ತ್ರಿಪದಿಗಳಿಗೆ ಅನೇಕ ಪಂಡಿತರೂ ಸ್ವಾನುಭವಿಗಳೂ ಟೀಕೆಗಳನ್ನು ಬರೆದಿರುವ ಪ್ರತಿಗಳೂ ಉಂಟು. ಗುರುಶಾಂತ ಶತಕ, ವೀರಭದ್ರ ವಿಜಯ (ಮಾಚಿದೇವ ವಿಜಯ) ಎಂಬ ಎರಡು ಹಸ್ತಪ್ರತಿಗಳು – ಮೊದಲಿನದು ಕಾಗದದ ಪ್ರತಿ, ಎರಡನೆಯದು ತಾಳೆಗರಿ ಪ್ರತಿ – ಮೈಸೂರಿನಲ್ಲಿರುವ ಪ್ರಸ್ತುತ ಶ್ರೀಮಠದಲ್ಲಿವೆ. ನಾಗಲಿಂಗ ಸ್ವಾಮಿಗಳ ವಚನಗಳು ಹಲವಿದ್ದು ಅವು ಜಂಗಮರ ಬಳಕೆಯಲ್ಲಿವೆ. *ವಚನವೆಂದರೂ ಇವಕ್ಕೆ ರಾಗ, ತಾಳಗಳ ಸೂಚನೆ ಇರುವ ಕೀರ್ತನೆಗಳು.* ಆ ರೀತಿಯ ಸಂಗ್ರಹವೊಂದು ಶ್ರೀಮಠದಲ್ಲಿವೆ. ಇದುವರೆವಿಗೂ ಲಭಿಸಿರುವ ಕರಸ್ಥಲ ನಾಗಲಿಂಗ ಸ್ವಾಮಿಗಳು ಬರೆದಿರುವ ಸಾಹಿತ್ಯ ಇಷ್ಟು.

ಪವಾಡ ಪುರುಷರಾದ ಕರಸ್ಥಲ ನಾಗಲಿಂಗ ಸ್ವಾಮಿಗಳನ್ನು ತನ್ನ ಗುರುವನ್ನಾಗಿ ಸ್ವೀಕರಿಸಿದ ತರುವಾಯ ಮುಮ್ಮಡಿ ಪ್ರೌಢದೇವರಾಯನು ಕೊಟ್ಟಿರುವ ಕಾಣಿಕೆಯನ್ನು ಉಲ್ಲೇಖಿಸುವ ಕ್ರಿ.ಶ. ೧೪೪೦ರ ದಾನ ಶಾಸನವೊಂದು ಇಂತಿದೆ. (ಇದರ ಕಾಗದದ ಪ್ರತಿಯು ಪ್ರಸ್ತುತ ಮೈಸೂರಿನಲ್ಲಿರುವ ಶ್ರೀಮಠದಲ್ಲಿದೆ):

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ ॥

ಶುಭಮಸ್ತು. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೩೬೭ ನೆಯ ಜಯನಾಮ ಸಂವತ್ಸರದ ಮಾಘ ಬಹುಳ ಮಹಾಶಿವರಾತ್ರಿಯ ಕಾಲದಲ್ಲುಂ ಶ್ರೀ ವಿದ್ಯಾನಗರ ಪಂಪಾಕ್ಷೇತ್ರಂ ಹೇಮಕೂಟ ಸೊಗದ ಪಕ್ಕದೊಳೊಂದು ಗುಹೆಯುಂಟದರಲ್ಲಿ ದಿವ್ಯತಪವಂಗೆಯ್ಯುತಮರಗುರು ವಿರೂಪಾಕ್ಷಂ ತಾನಾಗಿ ಮಹಾಸಿದ್ಧಿಯಂ ಪಡೆದು, ಭಕ್ತಿ ಪ್ರಭವ ವಿಭವದಿಂ ಧಾತ್ರಿಯೋಳ್ಕೀರ್ತಿವೆತ್ತುಂ ವಿರಕ್ತ ವಿಶ್ವಗುರುವಾಗಿ ಮೆರೆಯುವ ಕರಸ್ಥಲನಾಗಿದೇವಂತೆ ನಿತ್ಯ ಶಿವಪೂಜೆಯಂಗಭೋಗಕ್ಕೆ ಧೂಪ ದೀಪ ನೀರಾಜನ ಮುಂತಾದ ವಿವಿಧೋಪಕರಣಂಗಳಂ ನೈವೇದ್ಯಕ್ಕೆ ತೆಂಗು ಮಾವು ಮಾದಳ ಬಾಳೆ ರಸ್ತಾಳೆ ದಾಳಿಂಬ ಮೊದಲಾದ ಫಲ ತರುಗಳಿಂ ಪಲವುಂ ಪೂಗಳಿಂ ಬೆಳಂಗುವ ತೋಟಮಂ ಕೆರೆಯ ಕೆಳಂಗೆ ಮಾರುಗೊಂಡ ಮಣುವಿನ ಖಂ॥ ನೂರುಕೊಳಗದ ಗದ್ದೆಯಂ ಧಾರಾಪೂರ್ವಕಂ ಕೊಟ್ಟು, ಮಂಗಳ ಮಕುಟಮಂ ಸುವರ್ಣಕುಂಡಲಂಗಳಂ ರಜತಪಾದುಕೆಗಳಂ ರತ್ನ ಕಂಕಣಂಗಳಂ ಸಮರ್ಪಿಸಿ, ಸಕಲಭುವನಂ ಪೊಗಳುವಂತೆ ಛತ್ರಿ ಚಾಮರಗಳಾದಿಯಾದ ಸಕಲಬಿರುದುಗಳಂ ಸಲ್ಲಿಸಿ ಗುರುದೈವಂ ಮೆಚ್ಚಿಸಿದ.

ಶ್ರೀಶ್ರೀ ಚರಣಸೇವಾ ನಿರತಂ ಮುಮ್ಮಡಿ ಪ್ರೌಢದೇವರಾಜಂ ಬರೆದ ಶಾಸನಂ. ಶ್ರೀ ಶ್ರೀ ಶ್ರೀ

ಹಂಪೆ (ವಿದ್ಯಾನಗರ)ಯ ತುಂಗಭದ್ರಾ ಚಕ್ರತೀರ್ಥದ ಸಮೀಪದ ಹೇಮಕೂಟ ಪರ್ವತದಲ್ಲಿ ಒಂದು ಭವ್ಯವಾದ ಗುಹೆ ಇದೆ. ಇದು ಈಗಲೂ ಕರಸ್ಥಲ ನಾಗಲಿಂಗದೇವರ ಗವಿಮಠ ಎಂದು ಪ್ರಸಿದ್ಧವಾಗಿದೆ. ಇಲ್ಲಿಗೆ ಭಕ್ತರು ಆಗಿಂದಾಗ್ಗೆ ಬಂದು ಆರಾಧನೆ, ಸಂತರ್ಪಣೆಗಳನ್ನು ಮಾಡುತ್ತಿರುತ್ತಾರೆ.

ಇದೇ ರೀತಿಯಲ್ಲಿ ಮೈಸೂರಿಗೆ ಸೇರಿದ ಗುಂಡ್ಲುಪೇಟೆಯ ಸಮೀಪದಲ್ಲಿ ಮಂಚಳ್ಳಿ ಬೆಟ್ಟದಲ್ಲಿ (ಪನ್ನಗಾದ್ರಿ) ಶ್ರೀಕರಸ್ಥಲ ನಾಗಲಿಂಗದೇವರ ಗುಹೆಯು ಇರುತ್ತದೆ. ಈ ಗವಿಮಠದಲ್ಲಿ ಕಾರ್ತೀಕ ಮಾಸ ಮತ್ತು ಶಿವರಾತ್ರಿಯಂದು ನಾಗಲಿಂಗ ದೇವರಿಗೆ ಪೂಜೆ, ಸಮಾರಾಧನೆಯನ್ನು ನಡೆಸುತ್ತಾರೆ. ಗುಹೆಯ ಪಕ್ಕದಲ್ಲಿ ಕೋಡುಗಲ್ಲು ಎಂಬ ಹೆಸರಿನ ಎತ್ತರವಾದ ಬಂಡೆ ಇದೆ. ಕರಸ್ಥಲ ನಾಗಲಿಂಗ ದೇವರು ಈ ಕೊಡುಗಲ್ಲಿನ ಮೇಲೆ ತಪಸ್ಸು ಮಾಡುತ್ತಿದ್ದರು. ಆಗ ನಿದ್ರಾದೇವಿಯನ್ನು ತೊರೆದು ಅಲ್ಲೊಂದು ಸ್ಥಾನವನ್ನು ಕಲ್ಪಿಸಿ 'ಇಲ್ಲಿಯೇ ಇರು' ಎಂದು ಆಕೆಗೆ ಆಜ್ಞಾಪಿಸಿದರು. ಈಗ ಅಲ್ಲಿರುವ ಮಂಗಳಮ್ಮನ ದೇವಸ್ಥಾನವೇ ಅದು. ಈ ದೇವಿಯ ಜಾತ್ರೆಯೂ ಅಲ್ಲಿ ನಡೆಯುತ್ತದೆ. ಭಕ್ತರು ಈಗಲೂ ಹರಕೆ, ಪ್ರಾರ್ಥನೆಗಳನ್ನು ಮಾಡಿ ಪೂಜಾಕೈಂಕರ್ಯಗಳನ್ನು ನಡಸುತ್ತಿರುತ್ತಾರೆ.

ಪ್ರೌಢದೇವರಾಯನು ತನ್ನ ಗುರುಗಳಿಗೆ ಅರಮನೆಯ ಸಮೀಪದಲ್ಲಿ ದಿವ್ಯವಾದ ಮಠವನ್ನು ಶಿಲೆಯಲ್ಲಿ ನಿರ್ಮಿಸಿಕೊಟ್ಟಿದ್ದ. ನಾಗಲಿಂಗದೇವರ ಕೈಲಾಸಗಮನದ ತರುವಾಯ ಗುರುಶಾಂತಯೋಗಿಗಳು ಅಲ್ಲೇ ವಾಸವಾಗಿದ್ದರು. ವಿಜಯನಗರವು ಮಹಮದೀಯರ ವಶವಾದ ತರುವಾಯ ಆ ಮಠವು ನಾಮಾವಶೇಷವಾಯಿತು. ಪ್ರೌಢದೇವರಾಯನು ಕಂಪ್ಲಿಯಲ್ಲಿ ಗುರುಶಾಂತಯೋಗಿಗಳಿಗೆ ಒಂದು ಮಠವನ್ನು ಕಟ್ಟಿಸಿದ್ದು ಅದು ಇಂದಿಗೂ ಇರುವುದು. ಗುರು ಶಾಂತಯೋಗಿಗಳ ಶಿಷ್ಯರಾದ ಮಲ್ಲಿಕಾರ್ಜುನ ಯತೀಂದ್ರರು ಅಧಿಕಾರದಲ್ಲಿದ್ದಾಗ ವಿಜಯನಗರದ ಕಾಲವು ಮುಗಿಯಿತು. ಅನಂತರ ಅವರ ಕರಕಮಲ ಸಂಜಾತರಾದ ನೂತನ ಕರಸ್ಥಲನಾಗಿದೇವರು ತಮ್ಮಪೀಠವನ್ನು ಗುಮ್ಮಳಾಪುರದಲ್ಲಿ ಸ್ಥಾಪಿಸಿ ನಡೆದುಕೊಂಡು ಬಂದರು. ಅದೂ ಖಿಲವಾಯಿತು. ಬಳಿಕ ಏಕಪ್ರಶಿಷ್ಯರಾದ ಶಿವಪುತ್ರ ಸ್ವಾಮಿಗಳು ಗುರುಗಳಾಗಿದ್ದರು. ***ಇವರು ಶಿವಾಣುಗ ಎಂಬ ಕಾವ್ಯನಾಮದಲ್ಲಿ ಶ್ರೀಕರಸ್ಥಲ ನಾಗಲಿಂಗ ದೇವರ ಚರಿತ್ರೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾರೆ.*** ಇವರ ಶಿಷ್ಯರು ಮೌನಯಮೀಂದ್ರರು. ಇವರ ಅಂತೇವಾಸಿಗಳೇ ಅಜಾತ ನಾಗಲಿಂಗಸ್ವಾಮಿಗಳು. ಈ ಪೂಜ್ಯಪಾದ ಕರಕಂಜೋದ್ಭವರೇ ನಂಜುಂಡ ಶಿವಯೋಗಿಗಳು.

ಇಲ್ಲಿ ನಾವು ಗಮನಿಸಬೇಕಾಗಿರುವ ವಿಶೇಷ ಅಂಶಗಳು ಇವು: ಕರಸ್ಥಲ ನಾಗಲಿಂಗ ಸ್ವಾಮಿಗಳು ಶಿಲ್ಪಿವಂಶೋದ್ಭವರಾಗಿದ್ದರು. ಶಿಲ್ಪವನ್ನು ಮಾಡುತ್ತಿದ್ದರು. ನಂತರದಲ್ಲಿ ಗುರುಪೀಠಕ್ಕೆ ಬಂದ ಗುರುಗಳೆಲ್ಲರೂ ಶಿಲ್ಪಿವಂಶಜರು ಮತ್ತು ಸ್ವಯಂ ಶಿಲ್ಪಿಗಳಾಗಿದ್ದರು ಎಂಬುದನ್ನು ಶಿವಪುತ್ರಸ್ವಾಮಿಗಳು ತಮ್ಮ ಕಾವ್ಯದಲ್ಲಿ ಖಚಿತಪಡಿಸಿರುತ್ತಾರೆ. ಆದ್ದರಿಂದ ನಂಜುಂಡ ಶಿವಯೋಗಿಗಳು ಶಿಲ್ಪಿಗಳಲ್ಲ ಎಂದು ಅನುಮಾನಿಸುವುದು ಅಸಾಧುವಾಗುತ್ತದೆ. ಸಿದ್ಧಲಿಂಗ ಸ್ವಾಮಿಗಳು ಸ್ವಯಂಶಿಲ್ಪಿಗಳಾಗಿದ್ದು ಗುರುಪಿಠಸ್ಥರಾಗಿದ್ದರು. ಅಷ್ಟುಮಾತ್ರವಲ್ಲ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರಿಗೆ ಗುರುಗಳೂ ಆಗಿದ್ದರು. ಸ್ವಾಮಿಗಳ ತರುವಾಯ ಆ ಪೀಠಕ್ಕೆ ಬಂದ ಮಹಾದೇವ ಸ್ವಾಮಿಗಳೂ ಕೂಡ ಶಿಲ್ಪಸಿದ್ಧಾಂತಿಗಳೇ ಆಗಿದ್ದರು. ಇದರಿಂದ ಕರಸ್ಥಲ ನಾಗಲಿಂಗ ಸ್ವಾಮಿಗಳ ಗುರುಪೀಠದಲ್ಲಿ ಗುರುಗಳಾಗಿದ್ದವರೆಲ್ಲಾ ಶಿಲ್ಪಿಗಳೇ. ಅವರಲ್ಲಿ ಪರಿವ್ರಾಜಕರಾಗಿದ್ದವರೂ ಇದ್ದಾರೆ. ನಂಜುಂಡ ಶಿವಯೋಗಿಗಳು ಶಿಲ್ಪಿಗಳಾಗಿದ್ದು ಗುರುಗಳಾಗಿ ಪರಿವ್ರಾಜಕರಾಗಿದ್ದವರು. ಸದಾ ಸಂಚಾರ ದಲ್ಲಿರುತ್ತಿದ್ದವರು.

ಕರಸ್ಥಲ ನಾಗಲಿಂಗಸ್ವಾಮಿಗಳ ಚರಿತ್ರೆಯ ದ್ವಿಪದ ಕಾವ್ಯವಾಗಿ ತೆಲುಗಿನಲ್ಲೂ ಇದ್ದು ಪ್ರಕಟವಾಗಿದೆ. ಇದರಿಂದ ಸ್ವಾಮಿಗಳ ಶಿಷ್ಯರು ಆಂಧ್ರ ಪ್ರದೇಶದಲ್ಲೂ ವ್ಯಾಪಕವಾಗಿ ಬಹುಪ್ರಾಚೀನ ಕಾಲದಿಂದಲೂ ಇದ್ದಾರೆ ಎಂಬುದು ಖಚಿತವಾಗಿ ತಿಳಿದುಬರುತ್ತದೆ.

ಸಿದ್ದಲಿಂಗ ಸ್ವಾಮಿಗಳಿಗೆ ನಂಜುಂಡ ಶಿವಯೋಗಿಗಳೇ ಸಕಲ ವಿದ್ಯೆಗಳನ್ನೂ ಬೋಧಿಸಿದರು ಎಂಬುದು ಜನವಾಕ್ಕು. ಗುರುಪೀಠಸ್ಥರು, ಅದರಲ್ಲೂ ಲೋಕಸೇವಾ ದೀಕ್ಷೆಯನ್ನು ತೊಟ್ಟ ಪರಿವ್ರಾಜಕ, ವಿರಾಗಿ ಈ ರೀತಿಯ ಶಾಸ್ತ್ರಪಾಠ ಮಾಡುವುದು ಸಾಧ್ಯವೇ ಎಂಬ ಅನುಮಾನ ಕೂಡಲೇ ಉಂಟಾಗುವುದು ಸಹಜವೇ.

ಇದು ಸಾಧ್ಯ ಎಂಬುದನ್ನು ಸಮಕಾಲೀನ ಚರಿತ್ರೆಯಿಂದಲೇ ಖಚಿಪಡಿಸಲು ಸಾಧ್ಯವಿದೆ. ಸಿದ್ಧಲಿಂಗ ಸ್ವಾಮಿಗಳಿಗಿಂತಲೂ ೧೦–೧೨ ವರ್ಷ ಹಿರಿಯರಾಗಿದ್ದ ಸ್ಥಪತಿ ಅಪ್ಪಣಾಚಾರ್ಯರು ಇದ್ದದ್ದು ಪ್ರಸ್ತುತ ಚಿಕ್ಕಪೇಟೆ(ಬೆಂಗಳೂರು)ಯಲ್ಲಿ. ಇವರು ವರ್ತೂರಿನವರು. ಎರಕದ ಶಿಲ್ಪಕ್ಕೆ ತಮ್ಮ ಕಾಲದಲ್ಲಿ ಬಹು ಪ್ರಖ್ಯಾತರಾಗಿದ್ದರು. ಇವರಿಗೆ ನಿರಂತರ ಕೆಲಸ ಕೊಡುತ್ತಿದ್ದವರು ಈಗಿನ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಬಾರ್ಟನ್ ಅಂಡ್ ಕಂಪನಿಯವರು. ಇವರ ಹತ್ತನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ತಾವೇ ಇತರ ಎರಕದ ಶಿಲ್ಪಗಳನ್ನು ನೋಡಿ ಎರಕದ ಕೆಲಸ ಕಲಿತಿದ್ದರು. ಶಾಸ್ತ್ರ ಮತ್ತು ಅಳತೆಗಳಿಗಿಂತಲೂ ಕುಸುರಿ ಕೆಲಸವೇ ಶಿಲ್ಪ ಎಂದು ನಂಬಿ ಜನರ ಮೆಚ್ಚುಗೆ ಪಡೆದಿದ್ದರು. ಉತ್ಸವ ಮೂರ್ತಿಯೊಂದನ್ನು ಮಾಡಿಕೊಟ್ಟ ಇವರಿಗೆ ದೇವಾಲಯದ ಕಮಿಟಿಯು 'ಶಿಲ್ಪಕಲಾನಿಧಿ' ಎಂಬ ಬಿರುದನ್ನು ಕೊಟ್ಟು ಬೆಳ್ಳಿಯ ಹಿಡಿ ಇರುವ ಸುತ್ತಿಗೆಯನ್ನು ಅರ್ಪಿಸಿ ಸನ್ಮಾನಿಸಿದ್ದರು. ಆಗ ಶಿಲ್ಪಿ ಅಪ್ಪಣಾಚಾರ್ಯರ ವಯಸ್ಸು ೨೭ ವರ್ಷಗಳು. ಇದರಿಂದ ಅಪ್ಪಣಾಚಾರ್ಯರಿಗೆ ಅಹಮಿಕೆಯೂ ಮೊಳೆದಿತ್ತು. ತಾನೇ ಹಿರಿಯ ಶಿಲ್ಪಿ ಎಂಬ ಧೋರಣೆಯ ಮಾತು ರೂಢಿಯಾಗಿತ್ತು.

ಸದ್ಯೋಜಾತ ಸ್ವಾಮಿ ಎಂಬ ಸನ್ಯಾಸಿಯು ಒಮ್ಮೆ ಬಂದು 'ಭಿಕ್ಷೆ' ಎಂದು ಕೇಳಿದರು. ಅಪ್ಪಣಾಚಾರ್ಯರು ಗಮನಿಸಲಿಲ್ಲ. ಎರಡನೆಯ ಬಾರಿ ಆ ಸನ್ಯಾಸಿ ಭಿಕ್ಷೆ ಕೇಳಲಿಲ್ಲ 'ಬೆಳ್ಳಿ ಹಿಡಿ ಇರುವ ಸುತ್ತಿಗೆ ಯಾವುದರ ಸಂಕೇತ?' ಎಂದು ಪ್ರಶ್ನಿಸಿದ. 'ಶಿಲ್ಪ ಕಲಾನಿಧಿ' ಬಿರುದಿನ ಸಂಕೇತ ಎಂದರು ಅಪ್ಪಣಾಚಾರ್ಯರು. ಸದ್ಯೋಜಾತ ಸ್ವಾಮಿಗಳು ನೇರವಾಗಿ ಅವರ ಶಿಲ್ಪಾಗಾರದೊಳಕ್ಕೆ ಬಂದು ಕುಳಿತು, 'ಅಯ್ಯಾ ಶಿಲ್ಪಿ, ನಿನ್ನ ನಿಧಿ ನನಗೆ ಬೇಡ. ನಿಧಿಯ ಬೆಲೆ ಎಷ್ಟು ಹೇಳುತ್ತೀಯಾ?' ಎಂದು ಕೇಳಿದರು.

ಈ ಪ್ರಶ್ನೆಯಿಂದ ಅಪ್ಪಣಾಚಾರ್ಯರ ಕಣ್ಣು ತೆರೆಯಿತು. ಹೌದು ತನ್ನಲ್ಲಿರುವ ಶಾಸ್ತ್ರನಿಧಿ ಏನು? ತನ್ನನ್ನು ಮೆಚ್ಚಿದವರು ಏನು ಬೇಕಾದರೂ ಹೇಳುತ್ತಾರೆ. ಅದೇ ಸತ್ಯವೆಂದುಕೊಂಡು ಅಜ್ಞಾನಿ ತಾನಲ್ಲವೆ? ಕನಿಷ್ಟ ಒಂದು ಶಿಲ್ಪಶಾಸ್ತ್ರವಾದರೂ ತನಗೆ ಗೊತ್ತು ಎಂದು ಹೇಳುವುದು ಸಾಧ್ಯವೇ? 'ನನ್ನ ಅಪರಾಧವನ್ನು ಮನ್ನಿಸಿ' ಎಂದು ಪ್ರಾರ್ಥಿಸಿ ಅವರ ಪಾದಗಳ ಮೇಲೆ ಬಿದ್ದರು.

ಅಂದಿನಿಂದ ಸುಮಾರು ಮೂರು ವರ್ಷಗಳ ಕಾಲ ಅಪ್ಪಣಾಚಾರ್ಯರಿಗೆ ಸನ್ಯಾಸಿಗಳಾದ ಸದ್ಯೋಜಾತ ಸ್ವಾಮಿಗಳು **ಕಾಶ್ಯಪ ಶಿಲ್ಪಶಾಸ್ತ್ರ**ವನ್ನು ಪಾಠ ಮಾಡಿದರು. ಹಗಲಲ್ಲಿ ಕೆಲಸ, ರಾತ್ರಿಯಲ್ಲಿ ಶಾಸ್ತ್ರಪಾಠ. ಹೀಗೆ ಶಿಲ್ಪಶಾಸ್ತ್ರದ ಅಧ್ಯಯನ ಮಾಡಿಸಿದರು.

ಇಲ್ಲಿ ಹೇಳಬಯಸುತ್ತಿರುವುದು ಇಷ್ಟೇ–ಕರಸ್ಥಲದ ನಾಗಲಿಂಗಸ್ವಾಮಿಗಳ ಪೀಠದ ಗುರುಗಳೆಲ್ಲರೂ ಇದುವರೆವಿಗೂ ಶಿಲ್ಪಬಲ್ಲವರೇ ಆಗಿದ್ದಾರೆ. ಆದ್ದರಿಂದ ಶ್ರೀ ನಂಜುಂಡ ಶಿವಯೋಗಿಗಳು ಗುರುಪೀಠಸ್ಥರೆಂದು, ಮಹಾಸಿದ್ಧರೆಂದು ಹೇಳಿದ್ದರಿಂದ ಅವರಿಗೆ ಶಿಲ್ಪ ಗೊತ್ತಿರಲಿಲ್ಲ ಎಂದು ಭಾವಿಸುವುದು ತಪ್ಪು. ಸಿದ್ದಲಿಂಗ ಸ್ವಾಮಿಗಳು ಅವರಿಂದ ಶಿಲ್ಪವನ್ನು, ಶಾಸ್ತ್ರವನ್ನು ಅಭ್ಯಾಸ ಮಾಡಿದರು ಎನ್ನುವ ಉದಂತವನ್ನು ಅನುಮಾನಿಸುವುದಕ್ಕೆ ಆಧಾರವಿರುವುದಿಲ್ಲ. ಅದು ಸತ್ಯವಾಗಿರುವ ಸಾಧ್ಯತೆಯೇ ಹೆಚ್ಚಾಗಿದೆ. ಅನೇಕ ಶಿಲ್ಪಿಗಳು ಹಿರಿಯ ವಯಸ್ಸಿನಲ್ಲಿ ಪರಿವ್ರಾಜಕರಾಗಿ ಲೋಕಸಂಗ್ರಹ ಕೈಗೊಂಡಿರುವುದು ಶಿಲ್ಪಿಗಳ ಪರಂಪರೆಯಲ್ಲಿ ನಡೆದು ಬಂದಿರುವ ಭಾಗ. ನಂಬಿಕೆ ಏನೇ ಆಗಿರಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶಿಲ್ಪದ ಮತ್ತು ಶಿಲ್ಪಶಾಸ್ತ್ರದ ಎಲ್ಲಾ ಮುಖಗಳನ್ನು ಸಮಗ್ರವಾಗಿ ಗ್ರಹಿಸಿದ್ದವರೆಂಬುದಕ್ಕೆ ಅವರ ಕೃತಿಗಳೇ ಇಂದೂ ಸಾಕ್ಷಿ ಹೇಳುತ್ತವೆ.

ಸಿದ್ಧಲಿಂಗಸ್ವಾಮಿಗಳು ಮಗುವಾಗಿರುವಾಗ ನಾಮಕರಣ ಮಾಡಿದವರು ನಂಜುಂಡ ಶಿವಯೋಗಿಗಳೇ. ಶಿಲ್ಪವು ಸ್ವಾಮಿಗಳಿಗೆ ಪಾರಂಪರಿಕವಾಗಿ ಸಂಕ್ರಮಿಸಿತು, ಗುರುಗಳ ಬಗ್ಗೆ ಅಚಲ ವಿಶ್ವಾಸ. ಭಕ್ತಿ, ಗೌರವಗಳನ್ನು ಸಿದ್ದಪ್ಪಾಜಿ ಸ್ವಾಮಿಗಳು ಇರಿಸಿಕೊಂಡಿದ್ದರು. ಪರಮ ವಿರಕ್ತರಾಗಿದ್ದ ಶಿವಯೋಗಿಗಳಿಗೆ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಹೆಚ್ಚು ಅಕ್ಕರೆ ವಿಶ್ವಾಸಗಳನ್ನು ತೋರುತ್ತಾ ಅವಕಾಶ ದೊರೆತಾಗಲೆಲ್ಲಾ ವಿದ್ಯಾಬೋಧನೆ ನಡೆಸುತ್ತಿದ್ದರು.



ಚಿತ್ರ ೪.೧ : ನಂಜುಂಡ ಶಿವಯೋಗಿಗಳು (ವರ್ಣ ಚಿತ್ರ, ಕ್ಯಾನ್‌ವಾಸ್ ಹಾಳಾಗಿದೆ. ಸ್ವಾಮಿಗಳು ಮಾಡಿರುವ ತದ್ರೂಪಚಿತ್ರ)

ನಂಜುಂಡ ಶಿವಯೋಗಿಗಳು ತೀರಾ ಸಾಮಾನ್ಯ ಜನರೊಂದಿಗೆ ಬೆರೆತು ಅವರ ಬದುಕಿನ ದಾರಿ ದೀಪವಾಗಿದ್ದಂತೆಯೇ ಸಿರಿವಂತರ ಮತ್ತು ಅರಸು ಮನೆತನಗಳಿಗೂ ಬೆಳಕಾಗಿದ್ದರು. ನಾಲ್ವಡಿ ಚಾಮರಾಜೇಂದ್ರ ಒಡೆಯರ್ ಅವರು ತಮ್ಮ ಮೂವ್ವತ್ತೊಂದನೆಯ ವಯಸ್ಸಿನಲ್ಲಿ ಅಕಾಲ ಮೃತ್ಯುವಿಗೆ ತುತ್ತಾದಾಗ ಕೆಂಪ ನಂಜಮ್ಮಣ್ಣಿ, ವಾಣಿ ವಿಲಾಸ ಸನ್ನಿಧಾನ ಎಂದು ಹೆಸರಾಗಿದ್ದ ಮಹಾರಾಣಿಯವರೇ ಹತ್ತುವರ್ಷದ ಬಾಲಕನಾಗಿದ್ದ ರಾಜಕುಮಾರ ನಾಲ್ವಡಿ ಕೃಷ್ಣರಾಜ ಒಡೆಯರವರಿಗೇ ಪಟ್ಟಕಟ್ಟಿ ರಾಜಮಾತೆಯಾಗಿ ತಾವೇ ಅಧಿಕಾರವನ್ನು ನಡೆಸುತ್ತಿದ್ದ ಕಾಲ (ಎಂದರೆ ೧೮೮೪ರ ನಂತರದ ಕಾಲ). ರಾಜಮಾತೆಯವರು ಶಿವಯೋಗಿಗಳ ಮಹತ್ತ್ವವನ್ನು ಕೇಳಿ ಅವರ ಶಿಷ್ಯರಾದರು. ನಂಜುಂಡ ಶಿವಯೋಗಿಗಳು ಮಹಾತ್ಮರು. ವಾಕ್ಸಿದ್ಧಿಯುಳ್ಳ ಸಿದ್ಧಪುರುಷರು. ಅರಮನೆಯವರು ನಾನಾ ಕಷ್ಟಗಳನ್ನು ಅನುಭವಿಸುತ್ತಿದ್ದಾಗ ದಾರಿ ತೋರಿ ಊರುಗೋಲಾಗಿದ್ದವರು. ರಾಜಮಾತೆಯವರು ನಂಜುಂಡ ಶಿವಯೋಗಿಗಳ ಶಿಷ್ಯರಾಗಿ ಅವರನ್ನೇ ಸಂಪೂರ್ಣವಾಗಿ ನಂಬಿದ್ದರು. ಹೀಗಿದ್ದರೂ ನಂಜುಂಡ ಶಿವಯೋಗಿಗಳು ಆಳನ್ನು ಅರಸನನ್ನು ಸಮಾನವಾಗಿ ಪ್ರೀತಿಸುತ್ತಾ ಇಬ್ಬರ ಒಳಿತು–ಕೆಡಕುಗಳಲ್ಲಿ ಆಸರೆಯಾಗಿರುತ್ತಿದ್ದವರು. ತಮ್ಮ ಪರಿವ್ರಾಜಕ ವ್ರತವನ್ನು ಕೈ ಬಿಟ್ಟವರಲ್ಲ. ಶ್ರೀಸಾಮಾನ್ಯರಿಂದ ದೂರ ಉಳಿದವರಲ್ಲ. ಅರಮನೆಯೆಂದು ಅವರನ್ನು ನೆತ್ತಿಗೇರಿಸಿಕೊಂಡವರೂ ಅಲ್ಲ.

ಮಂಚಹಳ್ಳಿಯ ಬಳಿಯ ಪನ್ನಗಾದ್ರಿಯಲ್ಲಿ ಗುಹೆಯೊಂದಿದೆ ಗುಹೆ ಒಳಹೊಕ್ಕರೆ ಹತ್ತು ಮಂದಿ ಕೂರಲು ಸಾಕಾಗುವಷ್ಟು ಸ್ಥಳವಿದೆ. ಕರಸ್ಥಲ ನಾಗಲಿಂಗಸ್ವಾಮಿಗಳು ತಪಸ್ಸು ಮಾಡಿ ಸಿದ್ಧಿಯನ್ನು ಪಡೆದುಕೊಂಡ ಸ್ಥಳ ಎಂಬ ಪ್ರಖ್ಯಾತಿಯೂ ಈ ಗುಹೆಗಿದೆ. ಈ ಗುಹೆಯ ಬಗ್ಗೆ ಸಿದ್ಧಲಿಂಗ ಸ್ವಾಮಿಗಳಿಗೆ ಅಮಿತವಾದ ಶ್ರದ್ಧೆ–ಭಕ್ತಿಗಳಿದ್ದವು. ಇಲ್ಲಿ ತಪಸ್ಸು ಮಾಡಿದರೆ ಸಿದ್ಧಿ ಪಡೆಯುವುದು ಸುಲಭ ಎಂಬ ವಿಶ್ವಾಸ. ತಮ್ಮ ಬಾಲ್ಯದಲ್ಲಿಯೇ ಈ ಗುಹೆಯನ್ನು ಸಿದ್ಧಲಿಂಗಸ್ವಾಮಿಗಳು ತಮ್ಮ ತಪೋಕ್ಷೇತ್ರವನ್ನಾಗಿಸಿ ಕೊಂಡಿದ್ದರು. ಬಹುಶಃ ಈ ಸಾಧನೆಗೆ ಪರಿವ್ರಾಜಕರಾದ ನಂಜುಂಡ ಶಿವಯೋಗಿಗಳ ಮಾರ್ಗದರ್ಶನವಿದ್ದಿರಬಹುದು. ಸಿದ್ಧಲಿಂಗ ಸ್ವಾಮಿಗಳು ತಮ್ಮ ಹದಿನೆಂಟನೆಯ ವಯಸ್ಸಿಗೇ ವೀಣಾಧರ ದಕ್ಷಿಣಾಮೂರ್ತಿ, ನಂದೀಶ್ವರ ಮೂರ್ತಿಗಳನ್ನು ಶಿಲೆಯಲ್ಲಿ ಕಡೆದು ಈ ಗುಹೆಯಲ್ಲಿ ಸ್ಥಾಪಿಸಿದ್ದಾರೆ. ಇದು ಜ್ಞಾನ ಮತ್ತು ಭಕ್ತಿಗಳ ಸಾಧನಾ ಕ್ಷೇತ್ರ ಎಂಬುದನ್ನು ಸೂಚಿಸುವುದು ಸ್ವಾಮಿಗಳ ಉದ್ದೇಶವಾಗಿದ್ದಿರಬೇಕು. ಎರಡೂ ಮೂರ್ತಿಗಳು ಶಿಲ್ಪಶಾಸ್ತ್ರದ ಧ್ಯಾನ ಶ್ಲೋಕಗಳ ಅನುಗುಣವಾಗಿಯೇ ಇವೆ. ಎಂದರೆ ಬಾಲ್ಯದಲ್ಲಿಯೇ ಶಾಸ್ತ್ರ ಶುದ್ಧ ಶಿಲ್ಪ ನಿರ್ಮಾಣಕ್ರಮ ಇವರಿಗೆ ಸಂಕ್ರಮವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇದರೊಂದಿಗೆ ಆನುಷಂಗಿಕವಾಗಿ ಸಿದ್ಧಲಿಂಗಸ್ವಾಮಿಗಳ ಭವಿಷ್ಯದ ಬದುಕಿನ ಅವಿಷ್ಕಾರವೂ ಇಲ್ಲಿ ಆಗಿದೆ. ನಂಜುಂಡ ಶಿವಯೋಗಿಗಳು ಪ್ರಭಾವವು ಬಾಲಶಿಲ್ಪಿಯ ಬದುಕನ್ನು ಆರಂಭದಿಂದಲೇ ಆಕ್ರಮಿಸಿತ್ತು ಎಂಬುದರ ಸೂಚನೆಯೂ ಸ್ಪಷ್ಟವಾಗಿಯೇ ಈ ಗುಹೆಯಲ್ಲಿ ಕಾಣಿಸುತ್ತದೆ.



ಚಿತ್ರ ೪.೨ ದಕ್ಷಿಣಾಮೂರ್ತಿ (ಸ್ವಾಮಿಗಳ ಪ್ರಥಮ ಶಿಲ್ಪ)

ಸ್ವಾಮಿಗಳು ತಮ್ಮ 18ನೇ ವಯಸ್ಸಿನಲ್ಲಿ ಅವರ ಹುಟ್ಟೂರು ಆದ ಕೊಳ್ಳೆಗಾಲದ ಸಮೀಪವಿರುವ ಶಂಭುಲಿಂಗನ ಬೆಟ್ಟದಲ್ಲಿರುವ ಗುಹೆಯಲ್ಲಿ ಪ್ರಥಮವಾಗಿ ಮಾಡಿದ ದಕ್ಷಿಣಾಮೂರ್ತಿ ಮತ್ತು ನಂದೀಕೇಶ್ವರ ಮೂರ್ತಿಯ ಶಿಲ್ಪಗಳಿವೆಯೇ ವಿನಃ ಮಂಚಳ್ಳಿ ಗವಿಯಲ್ಲಿ ಇಲ್ಲ. ಮಂಚಳ್ಳಿಯಲ್ಲಿರುವುದು ನಾಗಲಿಂಗಸ್ವಾಮಿಗಳ ಮೂರ್ತಿ ಮಾತ್ರ. ಕಣ್ತಾತಪ್ಪಿನಿಂದಾದ ಮುದ್ರಣಕ್ಕೆ ವಿಷಾದಿಸುತ್ತೇನೆ – ಲೇಖಕ ಎಲ್. ಶಿವಲಿಂಗಪ್ಪ



ಚಿತ್ರ ೪.೩ ನಂದೀಶ್ವರ (ಸ್ವಾಮಿಗಳ ಪ್ರಥಮ ಶಿಲ್ಪ)

೧೮೯೧ರಲ್ಲಿ ಬೆಂಕಿಗೆ ಆಹುತಿಯಾಗಿದ್ದ ಹಳೆಯ ಅರಮನೆ ಇದ್ದ ಸ್ಥಳದಲ್ಲಿಯೇ ಇಂಗ್ಲೆಂಡಿನ ಆರ್ಕಿಟೆಕ್ಟ್ ಕೊಟ್ಟ ನೀಲ ನಕ್ಷೆಯ ಅನುಸಾರ ಪ್ರಸ್ತುತ ಅರಮನೆಯನ್ನು ೧೮೯೭ರಿಂದ ಹದಿನೈದು ವರ್ಷಗಳ ಕಾಲ ನಿರ್ಮಿಸಿದರು. ಅರಮನೆಯ ಅಲಂಕರಣದಲ್ಲೂ ಇದೇ ರೀತಿ ಇಂಗ್ಲೆಂಡಿನ ತಜ್ಞರದೇ ಮೇಲುಗೈಯಾಗಿತ್ತು. ರಾಜಾ ರವಿವರ್ಮ ಅವರು ಇಂಗ್ಲೆಂಡಿನ ಚಿತ್ರಕಲೆಯನ್ನು ಮೈಗೂಡಿಸಿಕೊಂಡು ಬಂದು ಅಲ್ಲಿಯ ವರ್ಣ ಸಂಯೋಜನೆಯೊಂದಿಗೆ ಹೈಂದವ ದೇವಮೂರ್ತಿಗಳನ್ನು ಮಾನವ ರೂಪದರ್ಶಿಗಳನ್ನು ಬಳಸಿಕೊಂಡು ಚಿತ್ರಿಸುವುದನ್ನು ಪ್ರಚುರಗೊಳಿಸಿದರು. ಮೈಸೂರು ಅರಮನೆಯ ಅಲಂಕರಣಕ್ಕೆ ರಾಜಾರವಿವರ್ಮ ಅವರ ವರ್ಣಚಿತ್ರಗಳೇ ಬೇಕು ಎಂಬ ಭಾವನೆ ಅನೇಕರಲ್ಲಿತ್ತು. ಆಂಗ್ಲರಲ್ಲಿ ರೂಢಿ ಇರುವಂತೆ ಕಟ್ಟಡ ರಚನೆಯು ಒಬ್ಬನದಾದರೆ, ಅದರ ಅಲಂಕರಣ ಮಾಡುವ ಶಿಲ್ಪವು ಬೇರೊಬ್ಬನದು. ಅದಕ್ಕೆ ವರ್ಣಚಿತ್ರ, ಅಲಂಕಾರ ವಿನ್ಯಾಸಗಳು, ಮೂರ್ತಿಶಿಲ್ಪ, ಕಾಷ್ಠಶಿಲ್ಪ ಹೀಗೆ ಶಿಲ್ಪದ ಭಿನ್ನ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿದ್ದರು. ಮದರಾಸಿನಿಂದ ಬಂದಿದ್ದ ಕಲ್ಲಿನ ಕೆಲಸದವರು ಚೋಳಶೈಲಿಯಲ್ಲಿ ಕಗ್ಗಲ್ಲಲ್ಲಿ ಶಿಲ್ಪಗಳನ್ನು ಕೆತ್ತುತ್ತಿದ್ದರು. ಭಿತ್ತಿಚಿತ್ರಕ್ಕೆ ರಾಜಾ ರವಿವರ್ಮ ಅವರ ವರ್ಣಚಿತ್ರಗಳು. ಹೀಗಾಗಿ ಮೈಸೂರಿನ ಅರಮನೆ ಪರಿಪೂರ್ಣವಾಗಿ ಹೊರಗಿನದೇ ಆಗುವಂತೆ ಸನ್ನದ್ಧವಾಗಿತ್ತು. ತಂಜಾವೂರಿನ ಸಂಗೀತಗಾರರು, ನರ್ತಕಿಯರು ಇದ್ದದ್ದು ಈ ಪರಕೀಯತೆಯನ್ನು ಮತ್ತೂ ವ್ಯಾಪಕಗೊಳಿಸಲು ನೆರವಾಗಿತ್ತು.

ಹೊಯ್ಸಳರ ರಾಜ್ಯವು ೧೩೪೬ಕ್ಕೆ ಕೊನೆಗೊಂಡರೂ, ದಕ್ಷಿಣ ಕರ್ನಾಟಕದಲ್ಲಿ ಯದುವಂಶದವರ ಆಳ್ವಿಕೆಯೇ ಮುಂದುವರೆದಿದ್ದರೂ, ಶಿಲ್ಪ, ದೇವಾಲಯಗಳ ನಿರ್ಮಾಣ ಪ್ರಾರಂಭವಾದದ್ದು ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ನಂತರದ ಅರಸರ ಕಾಲದಲ್ಲಿಯೇ. ಆದ್ದರಿಂದ ಚಾಲುಕ್ಯರ ಕಾಲದ ಶಿಲ್ಪಕಲೆಯೇ ಹೊಯ್ಸಳರ ಶಿಲ್ಪಕಲೆಯಾಗಿ ಅರಳಿತು ಎಂದು ಹೇಳಿದರೂ, ಹೊಯ್ಸಳ ಶೈಲಿಯು ಮುಂದುವರೆಯಲಿಲ್ಲ. ಇದು ಕರ್ನಾಟಕದ ಶಿಲ್ಪಸಂಸ್ಕೃತಿಯ ತೀವ್ರ ಅವನತಿಗೆ ಕಾರಣವಾಯಿತು. ಮೈಸೂರು ಅರಮನೆಯ ನಿರ್ಮಾಣವು ಶಿಲ್ಪಕ್ಷೇತ್ರದಲ್ಲಿ ಬಹು ಮಹತ್ತ್ವದ ಹೆಜ್ಜೆಯಾಗಿದ್ದರೂ ಅದು ಕರ್ನಾಟಕ ಸಂಸ್ಕೃತಿಯನ್ನು ಕೈ ಹಿಡಿದಿರಲಿಲ್ಲ ಎಂಬುದು ಶೋಚನೀಯ ಸಂಗತಿಯಾಗಿತ್ತು. ಇದನ್ನು ಗುತಿಸಿದವರೂ ಇಲ್ಲ. ಅದಕ್ಕಾಗಿ ಚಿಂತಿಸಿದವರೂ ಇಲ್ಲ.

ಇಂತಹ ಕಾಲದಲ್ಲಿ (ಸುಮಾರು ೧೯೦೮ರಲ್ಲಿ) ನಂಜುಂಡ ಶಿವಯೋಗಿಗಳು ತಮ್ಮ ಶಿಷ್ಯ ಸಿದ್ದಲಿಂಗ ಸ್ವಾಮಿಗಳನ್ನು ಅರಮನೆಯ ಅಲಂಕರಣದ ಕೆಲಸಕ್ಕೆ ಕರೆತಂದರು. ಆಗ್ಗೆ ಸಿದ್ದಲಿಂಗ ಸ್ವಾಮಿಗಳಿಗೆ ವೀರಮ್ಮ ಎಂಬ ಕನ್ಯೆಯೊಂದಿಗೆ ಮದುವೆಯಾಗಿತ್ತು. ಆದ್ದರಿಂದ ಅವರ ಜೀವನ ಸ್ಥಿರಗೊಳ್ಳಲು, ನಿರಂತರ ಕೆಲಸದ ಆಸರೆಗೆ ಈ ಕೆಲಸ ಸೂಕ್ತವಾದದ್ದು ಎಂದು ಗುರುಗಳು ಭಾವಿಸಿದ್ದರು ಎನಿಸುತ್ತದೆ. ಅರಮನೆಯ ಶಿಲ್ಪಿಗಳಾಗಿ ಸೇವೆ ಸಲ್ಲಿಸಲು ಸಿದ್ದಲಿಂಗಸ್ವಾಮಿಗಳಿಗೆ ರಾಜಮಾತೆಯವರು ಅವಕಾಶವನ್ನು ಕೊಟ್ಟರು. ಅರಮನೆಯ ಅಲಂಕರಣದ ಕೆಲಸಗಳ ಉಸ್ತುವಾರಿ ಕಂಟ್ರಾಕ್ಟರ್ ಚೆಲುವಾಚಾರ್ (ಅಪ್ಪಾಜಪ್ಪ) ಮತ್ತು ಮೇಸ್ತ್ರಿ ಯಾಲಕ್ಕಪ್ಪಾಚಾರ್ಯರಿಗೆ ವಹಿಸಲಾಗಿತ್ತು. ಇವರು ನೇರವಾಗಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಿಗೆ ವರದಿ ಮಾಡಿಕೊಳ್ಳಬೇಕಾಗಿತ್ತು.

ಅರಮನೆಯ ಕಲ್ಯಾಣ ಮಂಟಪ ಮತ್ತು ಪ್ರಸ್ತುತ ಅಖಾಡಗಳಲ್ಲಿ ಕೆತ್ತನೆ ಕೆಲಸ ನಡೆಯುತ್ತಿದ್ದಾಗ ಸಿದ್ಧಲಿಂಗ ಸ್ವಾಮಿಗಳು ಅದನ್ನು ಕಂಡರು. ಆಗ ಅವರಿಗೆ ೨೩ ವರ್ಷ

ವಯಸ್ಸು. ರಾಜಾರವಿವರ್ಮರ ಮೇನಕೆ–ವಿಶ್ವಾಮಿತ್ರ ಚಿತ್ರದ ಪ್ರತಿಕೃತಿಯನ್ನು ಶಿಲೆಯಲ್ಲಿ ಉಬ್ಬುಕೆತ್ತನೆಯಾಗಿ ಕೆತ್ತಲು ಸಿದ್ಧಮಾಡುತ್ತಿದ್ದರು. ಅದೂ ಕಗ್ಗಲ್ಲಲ್ಲಿ. ಈ ಸಂಬಂಧದಲ್ಲಿ ಕಂಟ್ರಾಕ್ಟರ್ ಚೆಲುವಾಚಾರ್ಯರನ್ನು ಕಂಡು 'ಕಲ್ಯಾಣ ಮಂಟಪ ಲೋಕಕಲ್ಯಾಣ ಸಾಧಿತವಾಗಲು ಚಿಂತನ–ಮಂಥನ ನಡೆಯಬೇಕಾಗಿರುವ ಸ್ಥಳ. ತಂದೆಯಾದವನೇ (ವಿಶ್ವಾಮಿತ್ರನೇ) ತನ್ನ ಹೆಂಡತಿ (ಮೇನಕೆ) ಮತ್ತು ಮಗುವನ್ನು ನೋಡದೆ ಮುಖ ಮುಚ್ಚಿಕೊಂಡಿರುವ ಶಿಲ್ಪ ಇಲ್ಲಿಗೆ ಸೂಕ್ತವಾದುದಲ್ಲ. ಮೇನಕೆಯು ಅರೆನಗ್ನಳಾಗಿರುವುದೂ ಸಭಾ ಮರ್ಯಾದೆಗೆ ಕುಂದುಂಟು ಮಾಡುತ್ತದೆ' ಎಂದು ಸಿದ್ಧಲಿಂಗ ಸ್ವಾಮಿಗಳು ಅರಿಕೆ ಮಾಡಿಕೊಂಡರು. 'ಮಹಾರಾಜರು ಇಂಗ್ಲಿಷ್ ವಾಸ್ತುಶಿಲ್ಪಿಯ ಸಮ್ಮುಖದಲ್ಲಿ ಅಂಗೀಕರಿಸಿದ್ದಾರೆ. ನಂತರ ನಿಮ್ಮದೇನು ಪಾರುಪತ್ಯ?' ಎಂದು ಖಾರವಾಗಿಯೇ ಕಂಟ್ರಾಕ್ಟರ್ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

'ನಮ್ಮ ಕೆಲಸದಿಂದ ಯಜಮಾನನು ಶ್ರೇಯಸ್ಸನ್ನು ಗಳಿಸಬೇಕು. ಶಿಲ್ಪದಿಂದ ಉಚ್ಛ್ರಾಯವು ಸಾಧಿತವಾಗಬೇಕು. ಇದು ಲಕ್ಷ್ಯವಾಗಿಲ್ಲದ ಶಿಲ್ಪವು ಶಿಲ್ಪಿಯನ್ನೂ ನುಂಗುತ್ತದೆ ಎಂಬ ತಿಳಿವಳಿಕೆ ನಿಮಗಿರಲಿ' ಎಂದು ತೀವ್ರಸ್ವರದಲ್ಲಿಯೇ ಹೇಳಿದ ಸಿದ್ಧಲಿಂಗ ಸ್ವಾಮಿಗಳು ನಂಜುಂಡ ಶಿವಯೋಗಿಗಳ ಮೂಲಕ ರಾಜಮಾತೆಯ ದರ್ಶನವನ್ನು ಪಡೆದುಕೊಂಡು ಶಿಲ್ಪದಲ್ಲಿಯ ಕೊರತೆಗಳನ್ನು ಸಿದ್ಧಲಿಂಗ ಸ್ವಾಮಿಗಳು ನೇರವಾಗಿ ರಾಜಮಾತೆಯವರಿಗೇ ಅರಿಕೆ ಮಾಡಿಕೊಂಡರು.

ಮರುದಿನವೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದಿವಾನರಾದ ಮಿರ್ಜಾ ಇಸ್ಮಾಯಿಲ್, ಚೆಲುವಾಚಾರ್, ಯಾಲಕ್ಕಪ್ಪಾಚಾರ್ ಮತ್ತು ಸಿದ್ಧಲಿಂಗ ಸ್ವಾಮಿಗಳನ್ನು ಕರೆಸಿ ವಿಷಯದ ಬಗ್ಗೆ ಕೂಲಂಕಷ ಚರ್ಚೆ ನಡೆಸಿದರು. ತರುಣ ಶಿಲ್ಪಿಯ ವಿಚಾರ ಧಾರೆ, ವಿಶ್ಲೇಷಣೆ, ಶಿಲ್ಪಶಾಸ್ತ್ರದ ವಿದ್ವತ್ತು ಅರಸರಿಗೆ ಬಹುವಾಗಿ ಹಿಡಿಸಿತು. ಅರಮನೆಯ ಅದುವರೆವಿಗಿನ ಅಲಂಕರಣವನ್ನು ಪರಿಶೀಲಿಸಿ ಪುನರ್ ವಿಮರ್ಶಿಸುವುದರೊಂದಿಗೆ ಮುಂದಿನ ಎಲ್ಲಾ ಅಲಂಕರಣಗಳನ್ನು ಇದೇ ರೀತಿಯಾಗಿ ಚರ್ಚಿಸಲು ಹೇಳಿ ಸಿದ್ಧಲಿಂಗ ಸ್ವಾಮಿಗಳಿಗೆ ಅವಕಾಶ ಕಲ್ಪಿಸಿದರು. ಮಹಾರಾಜರ ಅಂಗೀಕಾರದೊಂದಿಗೆ ಬದಲಿಸಿದ ಶಿಲ್ಪವನ್ನು ತಯಾರಿಸಲು ಕನ್ನಡದ ಶಿಲ್ಪಿಗಳನ್ನು ಆಹ್ವಾನಿಸಿ ಹೊಯ್ಸಳ ಶೈಲಿಯಲ್ಲಿ ಮೆದುಕಲ್ಲುಬಳಸಿ ಸಿದ್ಧಪಡಿಸಲು ಅವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಈ ರೀತಿ ಅರಮನೆಯ ಅಲಂಕರಣದಲ್ಲಿ ಪರಂಪರೆಯನ್ನು ಬಹು ಸ್ಫುಟವಾಗಿ ಬೆರೆಸಿ ಚಿತ್ರ–ಶಿಲ್ಪ ಎರಡರ ಸಿರಿಯನ್ನು ಕಟ್ಟಡ ರಚನೆಯ ಸ್ತಂಭಗಳನ್ನೂ ಅತ್ಯಂತ ಸುಂದರಗೊಳಿಸಿರುವ ಅರಮನೆಯ ಭಾಗ ಇದಾಗಿದೆ.

ಬೇಲೂರಿನ ದೇವಾಲಯದ ಜೀರ್ಣೋದ್ಧಾರದ ಸಮಸ್ಯೆ ಅರಸರ ಮುಂದೆ ನಿಂತಾಗ ಅರಮನೆಯಿಂದ ನಿಯೋಜಿತರಾಗಿದ್ದ ಸಾಂಪ್ರದಾಯಿಕ ಶಿಲ್ಪಿಗಳಲ್ಲಿ ಸಿದ್ಧಲಿಂಗ ಸ್ವಾಮಿಗಳಿಗೆ ಸ್ಥಾನ ದೊರಕಿದ್ದು ಹೀಗೆ. ಆದರೆ ಸರ್ಕಾರದ ಟೆಂಡರ್, ಆರ್ಡರಗಳ ಪ್ರಕಾರ ಆ ಕಾಲದ ಕಂಟ್ರಾಕ್ಟರ್‌ಗಳ ಹೆಸರಿನಲ್ಲಿಯೇ ಇದು ನಡೆದಿದೆ ಎಂದು ಭಾವಿಸಲಾಗಿದೆ. ಮಿಗಿಲಾಗಿ ಇದರ ಉಸ್ತುವಾರಿಯು ಪುರಾತತ್ತ್ವ ಇಲಾಖೆಯದು. ಆದ್ದರಿಂದ ಇದೇ ಪ್ರತ್ಯೇಕವೆಂಬುದಾಗಿ ಪರಿಗಣಿತವಾಗುತ್ತದೆ.

ಸ್ವಾಮಿಗಳು ಮೈಸೂರಿನಲ್ಲಿ ನೆಲೆಯಾಗಿ ನಿಂತ ತರುವಾಯ ತಮ್ಮ ಗುರುಗಳ ಸಂಚಾರವನ್ನು ಕಡಿಮೆ ಮಾಡಲು ಕೋರಿದರು. ಇದಕ್ಕಾಗಿ ಮೈಸೂರಿನಲ್ಲಿ ಕರಸ್ಥಲ ನಾಗಲಿಂಗ ಸ್ವಾಮಿಗಳ ಪೀಠವನ್ನು ವ್ಯವಸ್ಥೆ ಮಾಡುವ ಯೋಚನೆ ಮುಂದಿಟ್ಟರು. ನಂಜುಂಡ ಶಿವಯೋಗಿಗಳನ್ನು ಮುಪ್ಪು ಹಿಡಿದಿರಿಸಿತ್ತು. ಅರಮನೆಯವರು ಹತ್ತಿರದಲ್ಲಿ ಗುರುಮಠಕ್ಕೆ ಸ್ಥಳವನ್ನು ಕೊಟ್ಟರು. ಮೊದಲಿಗೆ ಗುರುಪೀಠವನ್ನು ನಿರ್ಮಿಸಿ ಕ್ರಮಕ್ರಮವಾಗಿ ವಿಸ್ತರಿಸುವ ಪ್ರಯತ್ನವನ್ನು ಕೈಗೊಂಡರು ಹೀಗೆ ಈಗ ಗುರುಮಠ ಇರುವ ರಾಮಾನುಜಾ ರಸ್ತೆಯಲ್ಲಿ ಕರಸ್ಥಲ ನಾಗಲಿಂಗ ಸ್ವಾಮಿಗಳ ಮಠ ಪ್ರಾರಂಭವಾಯಿತು. ನಂಜುಂಡ ಶಿವಯೋಗಿಗಳಿಗೆ ಸ್ಥಿರ ನೆಲೆ ಕೂಡಿ ಬಂತು.



ಚಿತ್ರ ೪.೪ : ಸಿದ್ಧಲಿಂಗ ಸ್ವಾಮಿಗಳು ಶ್ರೀಮಠದಲ್ಲಿ ವಿಶೇಷ ಪೂಜೆಯಲ್ಲಿ ನಿರತರಾಗಿದ್ದ ಸಂದರ್ಭದ ಚಿತ್ರ




ಚಿತ್ರ ೪.೫ : ಸಿದ್ಧಲಿಂಗ ಸ್ವಾಮಿಗಳು ಕರಸ್ಥಲ ನಾಗಲಿಂಗಸ್ವಾಮಿಗಳ ಗುರುಪೀಠಾಧ್ಯಕ್ಷರಾಗಿ

ರಾಜಮಾತೆಯವರು ನಂಜುಂಡ ಶಿವಯೋಗಿಗಳನ್ನು ಅಮಿತವಾಗಿ ನಂಬಿದ್ದರು. ಸಿದ್ಧಲಿಂಗ ಸ್ವಾಮಿಗಳಿಗೆ ಗುರುಪೀಠವನ್ನು ವಹಿಸಿ ತಾವು ಮುಕ್ತರಾಗಬೇಕೆಂಬ ಆಶಯವನ್ನು ನಂಜುಂಡ ಶಿವಯೋಗಿಗಳು ವ್ಯಕ್ತಪಡಿಸಿದಾಗ ಸಿದ್ಧಲಿಂಗ ಸ್ವಾಮಿಗಳು ಏನು ಹೇಳಲು ಸಾಧ್ಯವಾಗಲಿಲ್ಲ. ಶಿಲ್ಪನಿರ್ಮಾಣ ಮತ್ತು ಬೋಧನೆಯಲ್ಲಿ ತೊಡಗಿಸಿಕೊಂಡಿದ್ದವರಿಗೆ ಗುರುಪೀಠವು ಬಂಧವಾಗುವಂತೆ ಕಾಣಲಿಲ್ಲ. ಆಗ್ಗೇ ಅವರನ್ನು ಎಲ್ಲರೂ ಗುರುಗಳೆಂದೇ ಗೌರವಿಸಿ ಆದರಿಸುತ್ತಿದ್ದರು. ಹೀಗಾಗಿ ತಮ್ಮ ಗುರುಗಳ ಆಣತಿಯನ್ನು ಅಂಗೀಕರಿಸಿದರು. ಸಿದ್ಧಲಿಂಗ ಸ್ವಾಮಿಗಳಿಗೆ ಕ್ರಮಸನ್ಯಾಸ ದಿಕ್ಷೆಯನ್ನು ನೀಡಿದ ತರುವಾಯ ಗುರುಗಳೇ ನಿಂತು ಗುರುಪೀಠದ ಪಟ್ಟಾಭಿಷೇಕವನ್ನು ವೈದಿಕವಿಧಿಯಲ್ಲಿ ನೆರವೇರಿಸಿದರು. ನಂಜುಂಡ ಶಿವಯೋಗಿಗಳು ಸಮಾಧಿಯಲ್ಲಿರುವ ಕಾಲವನ್ನು ಕ್ರಮಕ್ರಮವಾಗಿ ಹೆಚ್ಚಿಸಿಕೊಂಡರು. ಲೌಕಿಕ ಜಗತ್ತಿನಿಂದ ದೂರವಾಗಿ ಅಂತರ್ಮುಖರಾಗಿರುವ ಇರುವ ಸಮಯವೇ ಅಧಿಕವಾಯಿತು. ಅದಕ್ಕಾಗಿಯೇ ಗುರುಮಠದಲ್ಲಿ ನೆಲಮಾಳಿಗೆಯಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಸ್ವಾಮಿಗಳು ಮೊದಲೇ ಕಲ್ಪಿಸಿದ್ದರು. ಈ ಸುಳಿವು ತಿಳಿದ ರಾಜಮಾತೆಯವರು ನಂಜುಂಡ ಶಿವಯೋಗಿಗಳನ್ನು ತಮಗೆ ಗುರುಗಳ ಪಕ್ಕದಲ್ಲಿ ಸಮಾಧಿಯಾಗುವ ಅವಕಾಶ ಕಲ್ಪಿಸಬೇಕೆಂದು ಕೋರಿದರು. ಮೊದಲಿಗೆ ನಂಜುಂಡ ಶಿವಯೋಗಿಗಳು ಆಗದು ಎಂದರೂ ರಾಜಮಾತೆಯವರ ಪಟ್ಟು ಬಿಡಲಿಲ್ಲ. ಗುರುಗಳು ಶಿಷ್ಯೆಯ ಅಭೀಷ್ಟಕ್ಕೆ ಮಣಿಯಲೇ ಬೇಕಾಯಿತು.

ಸಿದ್ಧಲಿಂಗ ಸ್ವಾಮಿಗಳಿಗೆ ಗುರುಪಟ್ಟಾಭಿಷೇಕ ನಡೆದಿದ್ದು ೧೯೨೦ರಲ್ಲಿ ಆಗ ಸ್ವಾಮಿಗಳ ವಯಸ್ಸು ಮುವ್ವತ್ತೈದು ವರ್ಷಗಳು. ತಮ್ಮ ನಿತ್ಯ ಶಿಲ್ಪವ್ಯವಹಾರದೊಂದಿಗೆ ಗುರುಪೀಠದ ಕರ್ತವ್ಯಗಳನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದುದನ್ನು ಕಂಡು ಸಂತೃಪ್ತರಾದ ನಂಜುಂಡ ಶಿವಯೋಗಿಗಳು ತಮ್ಮ ಇಹವ್ಯಾಪಾರವನ್ನು ತ್ಯಜಿಸುವ ಬಯಕೆಯನ್ನು ತಿಳಿಸಿ

ಇಚ್ಛಾಮರಣವನ್ನು ಪ್ರಾಣಾಯಾಮದ ಮೂಲಕವೇ ಸಾಧಿಸಿಕೊಂಡರು. ಇದು ನಡೆದದ್ದು ೧೯೨೪ರಲ್ಲಿ [ಅಂದಿನ ತಿಥಿಯು ಶಾಲೀವಾಹನ ಶಕೆ ೧೮೪೬ರ ಪುಷ್ಯಬಹುಳ ಪಾಡ್ಯಮಿ].



ಚಿತ್ರ ೪.೬ : ನಂಜುಂಡ ಶಿವಯೋಗಿಗಳ ಸಮಾಧಿಯ ಮೇಲೆ ಇರುವ ಹಾಲುಗಲ್ಲಿನ ರೂಪ ಶಿಲ್ಪ (ಸಿದ್ಧಲಿಂಗಸ್ವಾಮಿಗಳ ಕೃತಿ)

ಸ್ವಾಮಿಗಳೇ ತಮ್ಮ ಗುರುಗಳ ಸಮಾಧಿಯ ನಿರ್ಮಾಣವನ್ನು ಯೋಜಿಸಿ ನಿರ್ಮಿಸಿದ್ದು ಮಾತ್ರವಲ್ಲ ತಮ್ಮ ಗುರುಗಳ ರೂಪಶಿಲ್ಪವನ್ನೂ ಅಮೃತಶಿಲೆಯಲ್ಲಿ ನಿರ್ಮಿಸಿ ಪ್ರತಿಷ್ಠಾಪಿಸಿದ್ದಾರೆ. ಇಂದಿಗೂ ಶ್ರೀಮಠದವರು ಗುರುಗಳ ಪೂಜೆ–ಆರಾಧನೆಗಳನ್ನು ನಿಯಮಿತ ಕ್ರಮದಲ್ಲಿ ಅಲ್ಲಿ ನಡೆಸುತ್ತಿರುತ್ತಾರೆ.

ರಾಜಮಾತೆಯವರ ಅಭೀಷ್ಟದಂತೆಯೇ ಅವರು ದೇಹತ್ಯಾಗ ಮಾಡಿದ ತರುವಾಯ ಗುರುಗಳ ಸಮಾಧಿಯ ಪಕ್ಕದಲ್ಲಿಯೇ ಅವರ ಸಮಾಧಿ ನಿರ್ಮಿತವಾಗಿದೆ. ಬದುಕಿನಲ್ಲಿ ನಂಬಿದ್ದು ಗುರುವಿನ ಆಶ್ರಯ ಮತ್ತು ಸಾಮೀಪ್ಯಗಳನ್ನು ಈ ರೀತಿಯಾಗಿ ರಾಜಮಾತೆಯವರು ತಮ್ಮ ದೇಹ ತ್ಯಾಗದ ತರುವಾಯವೂ ಗಳಿಸಿಕೊಂಡು ಆದರ್ಶ ಶಿಷ್ಯರಾಗಿದ್ದಾರೆ.

ನಂಜುಂಡ ಶಿವಯೋಗಿಗಳಲ್ಲಿ ಇದ್ದ ಬಯಕೆಗಳು ಎರಡೇ – ಕರಸ್ಥಲ ನಾಗಲಿಂಗ ಸ್ವಾಮಿಗಳ ಮಠಕ್ಕೆ ಸ್ಥಿರ ನೆಲೆ ಒದಗಿಸಿ ಪರಂಪರೆಯನ್ನು ಕ್ರಮಗೊಳಿಸುವುದು ಮೊದಲಿನದು. ಇನ್ನೊಂದು ತಮ್ಮ ಗುರುಗಳ ಚರಿತ್ರೆಯನ್ನು ಸಂಪಾದಿಸಿ ಪ್ರಕಟಿಸುವುದು. ಇವುಗಳಲ್ಲಿ ಮೊದಲಿನದನ್ನು ನಂಜುಂಡ ಶಿವಯೋಗಿಗಳೇ ನೆರವೇರಿಸಿ ತೃಪ್ತಗೊಂಡಿದ್ದರು. ಎರಡನೆಯದಾದ ಚರಿತೆಯ ಪ್ರಕಟಣೆಯು ಬಹುದೀರ್ಘಕಾಲ ತೆಗೆದುಕೊಂಡಿತು. ಇದಕ್ಕೆ ಮೂಲ ಕಾರಣ ಚರಿತ್ರೆಯ ಪ್ರತಿಗಳ ಸಂಗ್ರಹವೇ ಸಂಗ್ರಹದ ತರುವಾಯ ಸಂಪಾದನೆಗಾಗಿ ಒಂದು ವರ್ಷ ಬೇಕಾಯಿತು. ಆ ಚರಿತ್ರೆಯ ವರ್ಣಚಿತ್ರಗಳೊಂದಿಗೆ ಬಹುಸೊಗಸಾಗಿ ಪ್ರಕಟಿಸಿದರು. ಇದು ನಡೆದಿದ್ದು ೧೯೫೧ರಲ್ಲಿ.



ಚಿತ್ರ ೪.೭ : ಮಹಾದೇವ ಸ್ವಾಮಿಗಳ ಪೀಠಾಧ್ಯಕ್ಷರಾದ ತರುವಾಯ ಶಿಲ್ಪ ನಿರ್ಮಾಣದಲ್ಲಿ ನಿರತರಾಗಿರುವುದು

ತಮ್ಮ ಗುರುಗಳ ಎರಡೂ ಬಯಕೆಗಳನ್ನು ಬಹು ಸಮರ್ಥವಾಗಿ ನೆರವೇರಿಸಿದ ತೃಪ್ತಿ ಸಿದ್ಧಲಿಂಗ ಸ್ವಾಮಿಗಳಲ್ಲಿತ್ತು ಎಂಬುದರ ಸುಳಿವು ಅವರು 'ಕರಸ್ಥಲ ನಾಗಲಿಂಗ ದೇವ ಚರಿತಂ' ಕೃತಿಗೆ ಬರೆದಿರುವ ಪ್ರಸ್ತಾವನೆಯಿಂದ ನಾವು ಗ್ರಹಿಸಬಹುದು.

ಸಿದ್ಧಲಿಂಗ ಸ್ವಾಮಿಗಳು ತಮ್ಮ ಪಿಠಾಧಿಪತ್ಯದ ಅವಧಿಯಲ್ಲಿಯೇ ವಿಶೇಷ ಆಸ್ಥೆಯನ್ನು ವಹಿಸಿ ತಮ್ಮ ಅಣ್ಣನವರಾದ ಅಪ್ಪಾಜೀಸ್ವಾಮಿಗಳ ಎರಡನೆಯ ಮಕ್ಕಳಾದ ಮಹಾದೇವ ಸ್ವಾಮಿಗಳಿಗೆ ಬಾಲ್ಯದಿಂದಲೇ ವೇದಪಾಠ ಮಾಡಿಸಿದರು. ಅದರೊಂದಿಗೆ ಶಿಲ್ಪಾಭ್ಯಾಸವನ್ನೂ ಮಾಡಿಸಿ ಗುರುಪೀಠಾಧಿಕಾರಿಯಾಗಲು ಅವಶ್ಯಕ ತರಬೇತಿ ನೀಡಿದರು. ೧೯೫೦ರಲ್ಲಿ ಮಹಾದೇವ ಸ್ವಾಮಿಗಳಿಗೆ ಗುರು ಪಟ್ಟಾಭಿಷೇಕವನ್ನು ತಾವೇ ನಿಂತು ನೆರವೇರಿಸಿದರು. ಈ ರೀತಿಯಾಗಿ ತಮ್ಮ ಗುರುಗಳಿಂದ ಸ್ವೀಕರಿಸಿದ ಗುರುಪೀಠದ ಹೊಣೆಗಾರಿಕೆಯನ್ನು ಯುವಕರೂ, ವೇದ ವಿದ್ವಾಂಸರೂ, ಮಹಾಶಿಲ್ಪಿಗಳೂ ಆಗಿದ್ದ ಮಹಾದೇವ ಸ್ವಾಮಿಯವರಿಗೆ ವಹಿಸಿಕೊಟ್ಟರು. ಈ ರೀತಿಯಾಗಿ ಗುರುಗಳ ಅಣತಿಯನ್ನು ಬಹು ಸಮರ್ಥವಾಗಿ ಸಿದ್ಧಲಿಂಗಸ್ವಾಮಿಗಳು ತಮ್ಮ ಇತರ ಎಲ್ಲಾ ಕರ್ತವ್ಯ ಗಳೊಂದಿಗೆ ತಾವು ವಹಿಸಿಕೊಂಡಿದ್ದ ಗುರುಪೀಠದ ಹೊಣೆಗಾರಿಕೆಯನ್ನೂ ಪಾಲಿಸಿದ್ದಾರೆ ಮತ್ತು ನಂತರದಲ್ಲಿ ಅವು ಕ್ರಮವಾಗಿ ನಡೆಯಲು ವ್ಯವಸ್ಥೆಯನ್ನೂ ಕೈಗೊಂಡಿದ್ದಾರೆ. ಎಂಬ ಅಂಶವನ್ನು ನಾವು ಗಮನಿಸಬೇಕು.

ನಂಜುಂಡ ಶಿವಯೋಗಿಗಳು ಮತ್ತು ರಾಜಮಾತೆಯವರ ಸಮಾಧಿ ಇರುವುದು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಮಾತ್ರ. ರಾಮಾನುಜ ರಸ್ತೆಯಲ್ಲಿರುವುದು ನಾಗಲಿಂಗಸ್ವಾಮಿಗಳ ಮಠ ಮತ್ತು ಗುರುಕುಲದೊಳಗೆ ಸಿದ್ಧಲಿಂಗಸ್ವಾಮಿಗಳ ಸಮಾಧಿಯಿದೆ. **ಕಣ್ತಾತಪ್ಪಿನಿಂದಾದ ಮುದ್ರಣಕ್ಕೆ ವಿಷಾದಿಸುತ್ತೇನೆ – ಲೇಖಕ ಎಲ್. ಶಿವಲಿಂಗಪ್ಪ**

೫

ಕಾಮ ಕಾಮೇಶ್ವರೀ ದೇವಾಲಯದ ನಿರ್ಮಾಣ

ಅರಮನೆಯ ಕೋಟೆಯ ಒಳಭಗದಲ್ಲಿ ದಕ್ಷಿಣ ಭಾಗದಲ್ಲಿ ಶ್ವೇತವರಾಹಸ್ವಾಮಿಯ ದೇವಾಲಯ ಪ್ರಾಚೀನವಾದದ್ದು. ಕೋಟೆಯಲ್ಲಿಯೇ ಇದ್ದು ನಿತ್ಯಾರಾಧನೆಗೆ ಒಳಪಟ್ಟಿದ್ದುದರಿಂದ ಈ ದೇವಾಲಯ ಸುಸ್ಥಿತಿಯಲ್ಲಿಯೇ ಉಳಿದು ಬಂದಿದೆ. ಅರಮನೆಯ ಕೋಟೆಯಲ್ಲಿ ಉತ್ತರ ದಿಕ್ಕು ಬರಿದಾಗಿತ್ತು. ಅಲ್ಲಿ ಒಂದು ದೇವಾಲಯ ನಿರ್ಮಿಸಲು ಒಡೆಯರು ಸಂಕಲ್ಪಿಸಿದರು. ಅದರ ಫಲವಾಗಿ ನಿರ್ಮಾಣವಾಗಿರುವುದೇ ಭುವನೇಶ್ವರಿದೇವಿ ಆಲಯ.

ಭುವನೇಶ್ವರಿ ದೇವಾಲಯ

ಈ ದೇವಾಲಯ ತ್ರಿಕೂಟಾಚಲವಾಗಿದ್ದು ಭುವನೇಶ್ವರಿಯು ಪಶ್ಚಿಮಾಭಿಮುಖವಾಗಿದ್ದರೆ ದಕ್ಷಿಣಾಭಿಮುಖವಾಗಿ ರಾಜರಾಜೇಶ್ವರಿಯೂ, ಉತ್ತರಾಭಿಮುಖವಾಗಿ ಚಾಮುಂಡೇಶ್ವರಿಯೂ ಇದ್ದಾರೆ. ಈ ದೇವಾಲಯ ಶ್ವೇತವರಾಹಸ್ವಾಮಿಯ ದೇವಾಲಯದಂತೆ ಹೊಯ್ಸಳ ಶೈಲಿಯಲ್ಲಿ ಇಲ್ಲ. ದೇವಾಲಯದ ಮುಖಮಂಟಪ ಮತ್ತು ಗರ್ಭಗೃಹಗಳು ವಿಜಯನಗರದ ಸಾಧಾರಣ ದೇವಾಲಯಗಳನ್ನು ಹೋಲುವಂತಿದ್ದರೂ ಒಳಗಿರುವ ಪ್ರತಿಮೆಗಳೆಲ್ಲವೂ ಹೊಯ್ಸಳ ಶೈಲಿಯಲ್ಲಿಯೇ ಇವೆ. ಈ ದೇವಾಲಯದಲ್ಲಿ ಇರುವ ಪ್ರತಿಮೆಗಳೂ ಅನಿವಾರ್ಯವಾಗಿರುವವು ಮಾತ್ರವೇ. ಆದರೆ ಈ ಗರ್ಭಗುಡಿಗಳ ಮೇಲೆ ನಿರ್ಮಿತವಾಗಿರುವ ವಿಮಾನಗಳನ್ನು ಕರ್ನಾಟಕ ಶೈಲಿಯಲ್ಲಿ ನಿರ್ಮಿಸುವ ಪ್ರಯತ್ನ ಮಾತ್ರ ಸ್ಪಷ್ಟವಾಗಿ ನೋಟಕರಿಗೆ ಗೊತ್ತಾಗುತ್ತದೆ. ದ್ವಾರಗೋಪುರವು ದ್ರಾವಿಡಶೈಲಿಯದೇ ಆಗಿದ್ದರೂ ಅದರಲ್ಲೂ ವಿಶೇಷವಾದ ಮೈಸೂರಿನ ಛಾಪನ್ನು ಮೂಡಿಸಿ ಪ್ರತ್ಯೇಕಗೊಳಿಸಿರುವುದು ಸ್ಪಷ್ಟವಾಗಿದೆ.

ಭುವನೇಶ್ವರೀ ದೇವಿಯ ವಿಗ್ರಹವು ಅತ್ಯಂತ ದಿವ್ಯವಾಗಿದೆ. ದೇವಿಯ ವರ್ಣನೆಯು ಧ್ಯಾನಶ್ಲೋಕ ಅನ್ವಯವೇ ಇದೆ. ದೇವಿಯ ಪ್ರತಿಮೆಯನ್ನು ಮೊದಲು ಮಾಡಿ ಪ್ರತಿಷ್ಠಿಸಿದ ತರುವಾಯವೇ ಅರಮನೆಯಲ್ಲಿರುವ ವರ್ಣಚಿತ್ರ ರಚನೆಯಾಗಿದೆ. ಆದ್ದರಿಂದ ಎರಡೂ ಒಂದೇ ರೀತಿಯಾಗಿ ಕಾಣುತ್ತವೆ. ಪ್ರಭಾವಳಿಯಲ್ಲಿರುವ ಅಲಂಕಾರಿಕ ಸುರಳಿಗಳಲ್ಲಿ ಅಷ್ಟದೇವಿಯರು ಇದ್ದಾರೆ. ಇಷ್ಟುಮಾತ್ರವೇ ಅಲ್ಲ ರಾಜರಾಜೇಶ್ವರಿ ದೇವಿ ವಿಗ್ರಹವು ಅದೇ ರೀತಿಯಾಗಿ ವರ್ಣಚಿತ್ರದಲ್ಲಿರುವ ಹಾಗೆಯೇ ಇದೆ. ಮುಂದಿನ ಪುಟದಲ್ಲಿ ಆ ದೇವಿಯರ ಪ್ರತಿಮೆಗಳ ಚಿತ್ರಗಳನ್ನು ಕೊಟ್ಟಿದೆ.


ಚಿತ್ರ ೫.೧ : ಭುವನೇಶ್ವರೀ ದೇವಿಯ ಮೂಲಮೂರ್ತಿ

ಕಗ್ಗಲ್ಲಿನಲ್ಲಿ ದೇವಾಲಯದ ಕಟ್ಟಡವನ್ನು ನಿರ್ಮಿಸಲು ಕಾರಣವೇನು ಎಂಬುದನ್ನು ವಿವರಿಸುವವರು ಈಗ ಯಾರೂ ಇಲ್ಲ. ಬಹುಶಃ ಈ ರೀತಿಯ ನಿರ್ಮಾಣಗಳು ವ್ಯಾಪಕವಾಗಿ

ಕಾಣಿಸುತ್ತಿದ್ದುದರಿಂದ ಇದು ಭಿನ್ನ ಎನಿಸಲಾರದು. ಅಥವಾ ಕರ್ನಾಟಕ ದೇವಾಲಯಕ್ಕೆ ಭಿನ್ನ ವಿನ್ಯಾಸವಿದೆ ಎಂಬ ತಿಳಿವೇ ಜನಮಾನಸದಿಂದ ಮರೆಯಾಗಿದ್ದಿರಬೇಕು. ಹೊಯ್ಸಳ ಶೈಲಿಯ ಆಲಯದ ನಿರ್ಮಾಣವು ಬಹು 'ದುಬಾರಿ' ಎಂಬ ಭಾವನೆಯು ಇದಕ್ಕೆ ಕಾರಣವಾಗಿದ್ದಿರಬಹುದು. ಭುವನೇಶ್ವರಿ ದೇವಿ ದೇವಾಲಯದ ನಿರ್ಮಾಣದ ವೆಚ್ಚ ಆರುಲಕ್ಷಗಳು ಎಂಬುದಾಗಿ ಸ್ವಾಮಿಗಳ ಶಿಷ್ಯರು ಹೇಳುತ್ತಾರೆ. ದೇವಾಲಯದ ನಿರ್ಮಾಣ ವೆಚ್ಚವೇ ಪ್ರಧಾನ ಎಂಬುದಾಗಿ ಭಾವಿಸಿ ಈ ತೀರ್ಮಾನವನ್ನು ಕೈಗೊಂಡಿರ ಬಹುದು. ಆದ್ದರಿಂದ ಕಣ್ಮುಂದೆ ಶ್ವೇತವರಾಹಸ್ವಾಮಿಯ ಆಲಯವಿದ್ದೂ ಮಹಾರಾಜರು ಮತ್ತು ಇತರರು ಈ ಅಂಶವನ್ನು ವಿಸ್ಮರಿಸಿರಬಹುದು.

ಬೇಲೂರಿನ ದೇವಾಲಯದ ಜೀರ್ಣೋದ್ಧಾರವು ೧೯೩೦ ರಿಂದ ೧೯೪೦ರ ತನಕ ನಡೆದಿತ್ತು. ಅದರಲ್ಲಿ ಪಾಲ್ಗೊಂಡ ಸ್ವಾಮಿಗಳಿಗೆ ಹೊಯ್ಸಳ ದೇವಾಲಯದ ವಿನ್ಯಾಸ ಬಹುವಾಗಿ ಮನಸೆಳೆದಿತ್ತು. ದ್ರಾವಿಡ ದೇವಾಲಯ ವಿನ್ಯಾಸ ಪ್ರಧಾನವಾಗಿ ಚೌಕವನ್ನು ಪಡೆದಿರುತ್ತದೆ. ಅಲ್ಲಿಯ ನಿರ್ಮಾಣದಲ್ಲಿ 'ಬೃಹತ್' ವ್ಯಾಪಕವಾಗಿದ್ದು ನೋಡುಗರನ್ನು ಚಕಿತಗೊಳಿಸುವುದು ಅದರ ಮುಖ್ಯ ಲಕ್ಷಣವಾಗಿತ್ತು. ಹೊಯ್ಸಳ ದೇವಾಲಯದಲ್ಲಿ ಪ್ರಧಾನವಾಗಿದ್ದದ್ದು 'ಮಹತ್'. ಜಗತ್ತೆಲ್ಲವನ್ನೂ ಒಳಗೊಂಡಿದ್ದು ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಕಣ್ಮುಂದೆ ಹರಡಿರುವ, ನೋಡುಗರನ್ನು ವಿಸ್ಮಯಗೊಳಿಸಿ ಮಾಯಾ ಲೋಕಕ್ಕೆ ಒಯ್ಯುವ ಕಲಾ ವಿನ್ಯಾಸ. ಒಮ್ಮೆ ಕಂಡದ್ದನ್ನು ಬಾರಿ ಬಾರಿಗೆ ನೋಡಲು ಬಯಸುವಂತಹ ಚುಂಬಕ ಶಕ್ತಿಯುಳ್ಳ ಕಲೆಯ ಬಲೆ. ಇದೂ ಕೂಡ ಚೌಕಗಳಿಂದಲೇ ನಿರ್ಮಿತವಾಗಿರುವ ವಿನ್ಯಾಸ. ದ್ರಾವಿಡವೆಂಬುದು ದಕ್ಷಿಣಕ್ಕೆ ಸೇರಿ ಚೋಳ–ಪಾಂಡ್ಯ–ಚೇರ ರಾಜ್ಯಗಳಿಗೆ ಸೇರಿದ ವಿನ್ಯಾಸ ಎಂಬುದು ಪ್ರಸಿದ್ಧ. ಕನ್ನಡ–ಆಂಧ್ರಗಳಿಗೆ ಸೇರಿದ ವಿನ್ಯಾಸವನ್ನು ಶಿಲ್ಪಶಾಸ್ತ್ರವೇ 'ವೇಸರ' ಎಂದು ಹೆಸರಿಸಿದೆ. ಇದು ಔತ್ತರೇಯ ನಾಗರಕ್ಕಿಂತಲೂ ಭಿನ್ನವಾಗಿದ್ದು ದಕ್ಷಿಣದ ದ್ರಾವಿಡಕ್ಕೂ ವಿಭಿನ್ನವಾಗಿತ್ತು. ಎಂದರೆ **ಕರ್ನಾಟಕಕ್ಕೇ ಸೇರಿದ ಶಿಲ್ಪವಿನ್ಯಾಸವು ಪ್ರತ್ಯೇಕವಾಗಿದ್ದು ಅದು ಪ್ರಖ್ಯಾತವಾಗಿದೆ. ಆದ್ದರಿಂದ ಕರ್ನಾಟಕದಲ್ಲಿ ಈ ಶೈಲಿಯನ್ನು ಬೆಳೆಸುವುದೇ ಕರ್ನಾಟಕದ ಶಿಲ್ಪ ಸಂಸ್ಕೃತಿಯ ವಿಕಾಸಕ್ಕೆ ಮಾಡಬೇಕಾಗಿರುವ ಅನಿವಾರ್ಯ ಕರ್ತವ್ಯ. ಈ ಶೈಲಿಯನ್ನು ಕಳೆದು ಕೊಂಡರೆ ಕನ್ನಡದ ಶಿಲ್ಪಸಂಸ್ಕೃತಿಗೆ ಅಪಾರ ನಷ್ಟವಾಗುತ್ತದೆ** ಎಂಬುದನ್ನು ಸಿದ್ಧಲಿಂಗಸ್ವಾಮಿಗಳು ನಿಶ್ಚಯ ಪೂರ್ವಕವಾಗಿ ಸ್ಪಷ್ಟವಾಗಿ ಅರಿತುಕೊಂಡರು.

ಶ್ವೇತವರಾಹ ಸ್ವಾಮಿಯ ದೇವಾಲಯದ ಗರ್ಭಗುಡಿಯ ಮೇಲಿನ ವಿಮಾನವು ಇರಲಿಲ್ಲ. ಹಾಗೆಯೇ ದೇವಾಲಯದ ಮುಚ್ಚಿಗೆಯ ಮೇಲಿನ ಪ್ರಸ್ತರದ ಭಾಗದ ಅಲಂಕರಣವೂ ಇರಲಿಲ್ಲ. ಇದನ್ನು ಅರಮನೆಯ ನಿರ್ಮಾಣದ ಕಾಲದಲ್ಲಿ ಗಾರೆಯಲ್ಲಿ ಹೊಯ್ಸಳ ಶಿಲ್ಪದ ಶೈಲಿಯ ಅನುಸಾರವಾಗಿಯೇ ನಿರ್ಮಾಣಮಾಡಿಸಲಾಯಿತು. ಇದರಿಂದ ಸ್ವಾಮಿಗಳಿಗೆ ಖಚಿತವಾದ ಅಂಶವೆಂದರೆ ಹೊಯ್ಸಳ ಶೈಲಿಯ ಯೋಜನೆ ಮತ್ತು ನಿರ್ಮಾಣ ಸಾಮರ್ಥ್ಯ ತಮ್ಮಲ್ಲಿದೆ ಎಂಬುದು. ಆದರೆ ಭುವನೇಶ್ವರಿ ದೇವಾಲಯವನ್ನು ವರಾಹಸ್ವಾಮಿ ದೇವಾಲಯದ ಶೈಲಿಯಲ್ಲಿ ನಿರ್ಮಿಸಬಹುದೆಂಬ ತಮ್ಮ ಸಲಹೆಗೆ ಮಾನ್ಯತೆ ಇರಲಿಲ್ಲ. ಎಲ್ಲರ ಬಾಯಲ್ಲೂ 'ವಿಪರೀತ' ಖರ್ಚಿನ



ಚಿತ್ರ ೫. ೨ : ರಾಜರಾಜೇಶ್ವರಿ ದೇವಿ



ಚಿತ್ರ ೫. ೩ : ಚಾಮುಂಡೇಶ್ವರಿ ದೇವಿ



ಚಿತ್ರ ೫. ೪ : ಸೂರ್ಯನಾರಾಯಣಸ್ವಾಮಿ (ಭುವನೇಶ್ವರಿ ದೇವಾಲಯ)

ಅಂಶವೇ ಬಂದಿತ್ತು. ಯಾರೊಬ್ಬರೂ ಆ ಸಾಮರ್ಥ್ಯವಿರುವ ಶಿಲ್ಪಿಗಳ ಬಗ್ಗೆ ವಿಚಾರಿಸಲೇ ಇಲ್ಲ!

ತಾವು ಖರ್ಚು ವಿಪರೀತ ಅಲ್ಲ ಎಂಬುದನ್ನು ತೋರಿಸಿದರೆ ದೇವಾಲಯದ ಶೈಲಿಯು ಹೊಯ್ಸಳವಾದರೂ ಅಭ್ಯಂತರವಿಲ್ಲ ಎಂಬುದನ್ನು ಸ್ವಾಮಿಗಳು ಕಂಡುಕೊಂಡು ಈ ಬಗ್ಗೆ ತಮ್ಮಲ್ಲಿಯೇ ಚಿಂತನೆಯನ್ನು ಪ್ರಾರಂಭಿಸಿದರು.

ವಿಷಯ ಸ್ಪಷ್ಟವಾದ ಅವರಿಗೆ ತಮ್ಮ ಗುರಿ ನಿಶ್ಚಿತಗೊಂಡಿತು. ತಾವು ನಿರ್ಮಿಸಿದ ಭುವನೇಶ್ವರಿ ದೇವಾಲಯದ ಕಟ್ಟಡವು ಕನ್ನಡದ ಪರಂಪರೆಯನ್ನು ಬಿಂಬಿಸುವ ಕಟ್ಟಡವಾಗಿರಲಿಲ್ಲ. ಕನ್ನಡ ಶಿಲ್ಪದ ಲಕ್ಷಣವು ವ್ಯಾಪಕವಾದ ಮೂರ್ತಿಶಿಲ್ಪಕ್ಕೆ ಬೆಂಬಲವಾಗಿ ನಿಲ್ಲುವಂತಹುದು. ತನ್ಮೂಲಕ ಕನ್ನಡ ಪ್ರತಿಮಾಶಿಲ್ಪದ ಸಾಧನೆಯನ್ನು ನೋಡುಗರಿಗೆ ಉಣಬಡಿಸುವುದು. ಭುವನೇಶ್ವರಿ ದೇವಾಲಯದಲ್ಲಿ ಇರುವ ಪ್ರತಿಮೆಗಳು ಅತಿ ಅವಶ್ಯಕ ಎನ್ನಿಸುವಂತಹವು ಮಾತ್ರವೇ. ಮುಖಮಂಟಪದ ಗೋಡೆಗಳು ಬೋಳು. ಕಂಬಗಳೂ ಕನಿಷ್ಠ ಅಲಂಕಾರವನ್ನು ಹೊಂದಿರುವವು. ಆದ್ದರಿಂದ ನಾಲ್ಕು ಗೋಡೆಗಳ ಮಧ್ಯೆ ಒಂದು ಪ್ರತಿಮೆಯನ್ನು ಕುಳ್ಳರಿಸಿ ದೇವಾಲಯವನ್ನು ಅಣಿಗೊಳಿಸಿದೆ. ಈ ಅತೃಪ್ತಿ ಸಿದ್ದಲಿಂಗಸ್ವಾಮಿಗಳಲ್ಲಿ ಬಹುವಾಗಿ ಹುದುಗಿತ್ತು ಎನಿಸುತ್ತದೆ. ದ್ವಾರಗೋಪುರ ಮತ್ತು ವಿಮಾನ ಗೋಪುರಗಳಲ್ಲಿ ಮೈಸೂರಿನ ಅಲಂಕರಣ ಪದ್ಧತಿಯನ್ನು ಸ್ಪಷ್ಟವಾಗಿ ನಿರೂಪಿಸಿ ದ್ರಾವಿಡ ಶೈಲಿಯಲ್ಲಿ ಉತ್ತರ–ದಕ್ಷಿಣಗಳೆಂಬ ಭಿನ್ನತೆಗಳು ಇವೆ ಎಂಬುದನ್ನು ಮಾತ್ರವೇ ತೋರಿಸಿದ್ದಾರೆ. ನಿಜಕ್ಕೂ ಇಂದಿನ ಕಲಾ ಇತಿಹಾಸಕಾರರೂ ಕೂಡ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಭಾಗವನ್ನು Upper Dravida Desa (ಉತ್ತರ ದ್ರಾವಿಡ ದೇಶ) ಎಂದೇ ಪ್ರತ್ಯೇಕಿಸಿ ಈ ಭಾಗದ ವಾಸ್ತು ಶಿಲ್ಪವನ್ನು ಬೇರೆಯಾಗಿಯೇ ಗುರ್ತಿಸುತ್ತಾರೆ.



ಚಿತ್ರ ೫. ೫ : ಶ್ವೇತಾ ವರಾಹ ಸ್ವಾಮಿ ದೇವಾಲಯದ ಪ್ರಸ್ತರ ಭಾಗ ಮತ್ತು ವಿಮಾನ ಗೋಪುರ ಗಾರೆಯಲ್ಲಿ ನಿರ್ಮಾಣವಾಗಿರುವುದನ್ನು ಗಮನಿಸಿ

ಸಿದ್ಧಲಿಂಗ ಸ್ವಾಮಿಗಳು ಜ್ಯೋತಿಷ ಮತ್ತು ಮಂತ್ರ ಶಾಸ್ತ್ರವಿದರಾಗಿದ್ದರು. ತಮ್ಮ ಐಹಿಕ ತೊಂದರೆಗಳ ನಿವಾರಣೆಗಾಗಿ ಸ್ವಾಮಿಗಳನ್ನು ಆಶ್ರಯಿಸುತ್ತಿದ್ದ ಶ್ರೀಸಾಮಾನ್ಯರು ಸದಾ ಬಹುಸಂಖ್ಯೆಯಲ್ಲಿಯೇ ಇರುತ್ತಿದ್ದರು. ಅವರನ್ನು ಸ್ವಾಮಿಗಳು ಎಂದೂ ನಿರಾಸೆಗೊಳಿಸಿದ್ದೇ ಇಲ್ಲ.

ಜಯಚಾಮರಾಜೇಂದ್ರ ಒಡೆಯರ್ ಅವರು ಪುತ್ರ ಸಂತಾನಾರ್ಥಿಗಳಾಗಿ ಜ್ಯೋತಿಷಿಗಳ ಸಲಹೆಯ ಪ್ರಕಾರ ತಮ್ಮ ಗುರುಗಳಾದ ಸ್ವಾಮಿಗಳನ್ನು ಆಶ್ರಯಿಸಿದರು. ನೀಲಕಂಠಸ್ವಾಮಿಮಠ, ಶಂಕರಮಠ, ಉತ್ತರಾದಿಮಠ, ಚೌಕಿಮಠ ಮುಂತಾದ ಹನ್ನೆರಡು ಮಠಗಳಲ್ಲಿ ವಿಶೇಷ ಸಂಕಲ್ಪದೊಂದಿಗೆ ಪೂಜೆ ಮತ್ತು ಅನ್ನದಾನ, ಕಾಮಕಾಮೇಶ್ವರಿ ದೇವಿಯ ಪೂಜೆ, ವ್ರತ ಮತ್ತು ಅನ್ನದಾನ ಮೂರು ತಿಂಗಳಕಾಲ ಬಹು ವಿಶೇಷವಾಗಿ ನಡೆದವು. ವೈಯಕ್ತಿಕ ಸಂಕಲ್ಪಸಿದ್ಧಿಗೆ ಸಾರ್ವತ್ರಿಕ

ಆಶೀರ್ವಾದ ಬಲ ಒದಗಿ ಉದ್ದೇಶವು ಈಡೇರಿತು. ಮಹಾರಾಜರಿಗೆ ಪುತ್ರ ಸಂತಾನವಾಯಿತು. ಲಾರಿಗಳಲ್ಲಿ ಸಿಹಿತುಂಬಿ ತಂದು ಪ್ರಜೆಗಳಿಗೆ ಹಂಚಲಾಯಿತು.

ಈ ಸಂದರ್ಭದಲ್ಲಿ ಮಹಾರಾಜರಿಗೆ ಕಾಮಕಾಮೇಶ್ವರಿ ದೇವಾಲಯವನ್ನು ನಿರ್ಮಿಸಬೇಕೆಂಬ ಸಂಕಲ್ಪ ಉಂಟಾಯಿತು. ಇದು ಕಾಮಕಾಮೇಶ್ವರಿ ದೇವಾಲಯದ ನಿರ್ಮಾಣದ ಹಿನ್ನೆಲೆ.

ಪ್ರಸ್ತುತ ದೇವಾಲಯವಿರುವ ಸ್ಥಳ ರಾಮಾನುಜ ರಸ್ತೆ ಎಂದು ಮೈಸೂರು ನಗರ ಕಾರ್ಪೊರೇಷನ್ ಆದ ನಂತರ ನಾಮಕರಣವಾಗಿದೆ. ಆ ರಸ್ತೆಯು ಮೊದಲಿಗೆ ಅಗಸರ ಬೀದಿ, ಆನೆ ಕರೋಟಿ ಬೀದಿ ಎಂದು ಇಬ್ಭಾಗವಾಗಿ ಕರೆಯುವ ವಾಡಿಕೆ ಇತ್ತು. ಹಿಂದೆ ಅಲ್ಲಿ ಕಾಲುವೆ ಹರಿಯುತ್ತಿತ್ತು. ಹೆಚ್ಚಿನ ಸಂಖ್ಯೆ ಅಗಸರು ವಾಸವಿದ್ದು ಬಟ್ಟೆ ಒಗೆಯುವ, ಇಸ್ತ್ರಿ ಮಾಡುವ ಕಾಯಕ ನಿರತರಾಗಿದ್ದರು. ಅದೇ ಸಾಲಿನಲ್ಲಿ ಮಹಾರಾಜರನ್ನು ದಸರಾ ಸಂದರ್ಭದಲ್ಲಿ ಮರವಣಿಗೆಗೆ ಕರೆದೊಯ್ಯುವ ಆನೆಗಳನ್ನು ಸಾಕುತ್ತಿದ್ದರು. ವಿಶಾಲವಾದ ಜಾಗ. ಅದೇ ರಸ್ತೆಯಲ್ಲಿ ಅರಮನೆಗೆ ಸಾಗುವಲ್ಲಿ ಹಸು, ಕರುಗಳನ್ನು ಕಟ್ಟುತ್ತಿದ್ದ ಹಸುವಿನ ಕೊಟ್ಟಿಗೆಯೂ ಇತ್ತು. ಹೀಗೆ ಇದು ಆನೆಕರುಹಟ್ಟಿ ಬೀದಿ ಎಂದು ರೂಢಿಯಲ್ಲಿತ್ತು. ಈಗ ಹಸುವಿನ ಕೊಟ್ಟಿಗೆಯ ಸ್ಥಳದಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠವಿದೆ. ಇವೆಲ್ಲವು ಅರಮನೆಗೆ ಸಂಬಂಧಿಸಿದ ಜಾಗಗಳೇ ಆಗಿದ್ದವು. ನಾವು ಪ್ರಸ್ತಾಪಿಸುತ್ತಿರುವ ಕಾಮಕಾಮೇಶ್ವರಿ ದೇವಾಲಯದ ಸ್ಥಳ ಮತ್ತು ಮಹಾರಾಜರೇ ಗುರುಕಾಣ್ಕೆಯಾಗಿ ನೀಡಿದ ಕರಸ್ಥಳ ನಾಗಲಿಂಗಸ್ವಾಮಿಗಳ ಮಠವಾಗಿರುವ ಆವರಣ, ಹಾಗೆಯೇ ಸಿದ್ಧಲಿಂಗಸ್ವಾಮಿಗಳವರಿಗೆ ಉತ್ತಮ ಶಿಲ್ಪಗಳನ್ನು ತಯಾರಿಸಲು ನೀಡಿದ ಗುರುಕುಲದ ಸ್ಥಳ ಇವೆಲ್ಲವೂ ಅರಮನೆ ವ್ಯಾಪ್ತಿಗೆ ಬರುತ್ತಿದ್ದವು. ಪ್ರಸ್ತುತ ಗುರುಕುಲವೆನ್ನುವ ಸ್ಥಳದ ವಿಸ್ತಾರ ಸುಮಾರು ಎರಡು ಎಕರೆ. ಈ ಸ್ಥಳವೂ ಆನೆ ಕರೋಟಿ ಒಂದು ಭಾಗವೇ. ಗುರುಕುಲದ ಪೂರ್ವಕ್ಕೆ ವಿಳ್ಯೆದೆಲೆ, ತೆಂಗು, ಅಡಿಕೆ ಬೆಳೆಯುವ ತೋಟ. ಈ ಬೃಹತ್ ತೋಟ ನಗರ ಬೆಳವಣಿಗೆ ಆಗುತ್ತಿರುವಂತೆ ಹಂತ ಹಂತವಾಗಿ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿದೆ. ಅಂತೆಯೇ ಅರಸೊತ್ತಿಗೆಯು ಸಹ ಪ್ರಜಾಪ್ರಭುತ್ವದಲ್ಲಿ ಕಳೆದುಹೋದುದರಿಂದ ಆ ಆನೆ ಕರೋಟಿಯ ಸ್ಥಳವನ್ನು (ಜೆ.ಎಸ್.ಎಸ್.) ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಸಂಸ್ಥೆಗೆ ಸೇರಿದ್ದು ಜೆ.ಎಸ್.ಎಸ್. ಆಸ್ಪತ್ರೆ ಆಗಿದೆ. ಇವೆಲ್ಲವೂ ಆ ರಸ್ತೆಗೆ ಹಾಗೂ ರಾಜರ ಆಡಳಿತಕ್ಕೆ ಸಂಬಂಧಿಸಿದ ವಿಷಯವಾದರೂ ಸತ್ಕಾರ್ಯಕ್ಕೆ, ಗುರುಗಳಿಗೆ ಹೇಗೆ ಮಹಾರಾಜರು ಸ್ಪಂದಿಸುತ್ತಿದ್ದರು, ಅವರ ಬಯಕೆಗಳನ್ನು ಹೇಗೆ ಗೌರವಿಸುತ್ತಿದ್ದರು ಎಂಬ ವಿಚಾರ ಓದುಗರಿಗೆ ನೆನಪನ್ನು ತರಲು ಸಹಕಾರಿಯಾಗುತ್ತದೆ.

ಉಪರೋಕ್ತ ಜಾಗಗಳೆಲ್ಲವನ್ನೊಳಗೊಂಡಿದ್ದು ಅಗ್ರಹಾರ. ಅಗ್ರಹಾರ ಸಂಸ್ಕೃತಿ ನೆನ್ನೆ ಮೊನ್ನೆಯದಲ್ಲ ಕನ್ನಡನಾಡಿನ ಇತಿಹಾಸದಲ್ಲಿ ಬಹುಪ್ರಾಚೀನವಾದದ್ದು ಚೋಳ, ಚಾಲುಕ್ಯ, ಹೊಯ್ಸಳ, ವಿಜಯನಗರ ಮುಂತಾದವರ ಆಳ್ವಿಕೆ ಕಾಲದಿಂದಲೂ ಬೆಳೆದು ಬಂದಂತಹದ್ದು. ಮಹಾರಾಜರುಗಳಿಗೆ ಅವಶ್ಯವೆನಿಸಿದ ವೈದಿಕರು, ಸಂಬಂಧಿಸಿದ ಬ್ರಾಹ್ಮಣರಿಗೆ, ಶಿಲ್ಪಿಗಳು, ಸಂಗೀತ, ಸಾಹಿತ್ಯ, ನೃತ್ಯ, ನಾಟಕ ಇತ್ಯಾದಿ ಲಲಿತ ಕಲೆಗಳ ವಿದ್ವಾಂಸರಿಗೆ ಕಟ್ಟಿಸಿಕೊಟ್ಟ ಮನೆಗಳು ಈ ಅಗ್ರಹಾರಗಳಲ್ಲಿರುತ್ತಿದ್ದವು. ಅಂತೆಯೇ ಅರಮನೆಯ ದಕ್ಷಿಣ ದ್ವಾರಕ್ಕೆ ಒಂದೆರಡು ಕಿಲೋಮೀಟರು ದೂರದಲ್ಲಿ ಅಗ್ರಹಾರಗಳಿವೆ. ಈ ಅಗ್ರಹಾರದ ಮತ್ತೊಂದು ಬೀದಿ ದೀವಟಿಗೆ ಬೀದಿ. ಇದರಲ್ಲಿಯೂ ಒಂದು ವಿಶೇಷವಿದೆ. ದೀವಟಿಕೆ ಎಂದರೆ ದೀಪ ಇಡುವ ಅಥವಾ ದೀಪ ಹಿಡಿಯುವವರು ಇದ್ದ ಸ್ಥಳ. ಈಗಿನ ಹಾಗೆ ವಿದ್ಯುಚ್ಛಕ್ತಿ ಎಲ್ಲಡೆ ಇರುತ್ತಿರಲಿಲ್ಲ. ಅಗ್ರಹಾರಗಳಲ್ಲಿ ಜನ ತಿರುಗಾಡಲು ರಾತ್ರಿಯ ವೇಳೆಯಲ್ಲಿ ತೊಂದರೆಯಾಗದಂತೆ ರಸ್ತೆಗೆ ಅಲ್ಲಲ್ಲಿ ಲಾಂದ್ರ ಕಂಬ ನೆಟ್ಟು ದೀಪವನ್ನು ಹಚ್ಚಿಡುತ್ತಿದ್ದರು. ಇಲ್ಲವೇ ಪಂಜನ್ನು ಕಂಬಕ್ಕೆ ಕಟ್ಟಿ ಹತ್ತಿಸುವ ವಾಡಿಕೆ ಇತ್ತು. ಇಂತಹ ಕೆಲಸದವರಿಗೆ ಅರಮನೆಯಿಂದ ಸಂಬಳವಿರುತ್ತಿತ್ತು. ಅಷ್ಟೇ ಅಲ್ಲ ಅರಮನೆಯೊಳಗಿನ ದೇವಾಲಯಗಳ ವಿಶೇಷ ಪೂಜೆ, ಮೆರವಣಿಗೆ ಸಂದರ್ಭದಲ್ಲಿ ಮಹಾರಾಜರ ಖಾಸಗಿ ಓಡಾಟ ಸಂದರ್ಭದಲ್ಲಿ, ಹಬ್ಬಗಳಲ್ಲಿ, ಉತ್ಸವ, ದರ್ಬಾರ್

ಮುಂತಾದವುಗಳಲ್ಲಿ ದೀಪದ ಬೆಳಕು ಅಗತ್ಯವಾಗಿತ್ತು. ಪಂಜು ಹಿಡಿಯುವವರು, ದೀಪ ಬೆಳಗಿಸುವವರಿಗೆ ಅಗ್ರಹಾರದೊಳಗೆ ವಾಸಿಸಲು ಒಂದು ಭಾಗದಲ್ಲಿ ಅವಕಾಶ ಕಲ್ಪಿಸಿಕೊಡಲಾಗಿತ್ತು. ಅಂತಹದೇ ಒಂದು ಬೀದಿ ದೀವಟಿಗೆ ಬೀದಿ (ಇಂದು ಬಸವೇಶ್ವರ ರಸ್ತೆ) ಎಂದು ಕರೆಯುತ್ತಿದ್ದರು. ಇದು ಆನೆ ಕರೋಟಿ ಬೀದಿಗೆ ಸಮಾನಾಂತರ ಬೀದಿಯಾಗಿದ್ದು ಇಲ್ಲಿಯೂ ಸಹ ಮಹಾರಾಜರ ಅಂತಃಪುರದವರಿಗೆ ಹಾಗೂ ಖಾಸಗಿ ಜನರಿಗೆ, ಅಡಿಗೆ ಮಾಡುವ ಅಥವಾ ಮೀಣಾ ಎಂದರೆ ಸ್ನಾನ ಮಾಡಿಸುವ, ನಾಟಕ, ನೃತ್ಯಗಳನ್ನು ಮಾಡಿ ರಾಜರನ್ನು ಮೆಚ್ಚಿಸುವವರು, ಕುದುರೆಗಳನ್ನು ಸಾಕುವವರು ಈ ಎಲ್ಲರ ವಾಸಕ್ಕೆ ಅವಕಾಶ ಮಾಡಲಾಗಿತ್ತು. ಅವರವರ ಪ್ರಾಮುಖ್ಯತೆಯನ್ನು ಅನುಸರಿಸಿ ಸಂಬಳ ನೀಡಲಾಗುತ್ತಿತ್ತು. ಮೋತಿಖಾನೆ ಅಂದರೆ ಧಾನ್ಯ ಸಂಗ್ರಹಾಗಾರದಿಂದ ಕೆಲವರಿಗೆ ಪಡಿಪದಾರ್ಥಗಳನ್ನು ನೀಡಲಾಗುತ್ತಿತ್ತು. ಸ್ವಜಾತಿಯ ಅರಸರಿಗೆ ಜಾತಿ ಸಂಬಳ ಎಂದು ತಿಂಗಳಿಗೆ ಕೊಂಚ ಹಣವನ್ನು ಮಾಶಾಸನದ ಮಾದರಿಯಲ್ಲಿ ನೀಡುತ್ತಿದ್ದದ್ದು ಈಗ ಒಂದು ನೆನಪು ಮಾತ್ರ.

ಮಹಾರಾಜರೇ ಸಿದ್ಧಲಿಂಗಸ್ವಾಮಿಗಳ ಆದಿಗುರುಗಳಾಗಿದ್ದ ಕರಸ್ಥಲ ನಾಗಲಿಂಗಸ್ವಾಮಿಗಳ ಮಠ ನಿರ್ಮಾಣಕ್ಕಾಗಿ ಸ್ಥಳ ನೀಡಿದ್ದರು. ಆ ಮಠದ ಪಕ್ಕದಲ್ಲಿಯೇ ಕಾಮಕಾಮೇಶ್ವರಿ ದೈವವನ್ನು ಮೂರು ತಿಂಗಳ ಕಾಲ ನಿರಂತರವಾಗಿ ಜಪ–ಅನುಷ್ಠಾನಗಳನ್ನು ಜಯಚಾಮರಾಜ ಒಡೆಯರು ತಮ್ಮ ಗುರುಗಳಾಗಿದ್ದ ಸಿದ್ಧಲಿಂಗಸ್ವಾಮಿಯವರ ನೇತೃತ್ವದಲ್ಲಿ ನಿರ್ವಹಿಸಿದ್ದರು. ಅದೇ ಸ್ಥಳದಲ್ಲಿಯೇ ದೇವಾಲಯವನ್ನು ನಿರ್ಮಿಸುವುದು ಸೂಕ್ತ ಎಂದು ಸ್ವಾಮಿಗಳು ಸೂಚಿಸಿದರು. ಈ ಸೂಚನೆಯನ್ನು ಮಹಾರಾಜರು ಅಂಗೀಕರಿಸಿದರು.

ಕಾಮಕಾಮೇಶ್ವರಿ ದೇವಸ್ಥಾನ

ಸ್ವಾತಂತ್ರ್ಯ ಪೂರ್ವಕಾಲದಲ್ಲಿಯೇ ಮೈಸೂರು ಸಂಸ್ಥಾನದ ಮಹಾರಾಜರು ದೇವಾಲಯ ನಿರ್ಮಾಣವನ್ನು ಅಂಗೀಕರಿಸಿದ್ದರೂ ಆಗಲೇ 'ಸ್ವತಂತ್ರ ಭಾರತ' ದ ಉದಯದ ಕಿರಣಗಳು ಮೂಡಲಾರಂಭಿಸಿದ್ದವು. ಮೈಸೂರು ಅರಸರು ಸ್ವತಂತ್ರ ಭಾರತವನ್ನು ಸಮರ್ಥಿಸುತ್ತಿದ್ದವ ರಾದ್ದರಿಂದ ಅವರಿಗೆ ಅರಸೊತ್ತಿಗೆ ಕಳೆಯುತ್ತದೆ ಎಂಬುದರ ಕಲ್ಪನೆಯೂ ಇತ್ತು. ಈ ಕಾರಣದಿಂದಲೇ ಹೊಯ್ಸಳ ಮಾದರಿಯ ದೇವಾಲಯವನ್ನು 'ಕನಿಷ್ಠ' ಮೊತ್ತದಲ್ಲಿ ನಿರ್ಮಿಸಬೇಕೆಂಬ ಸೂಚನೆಯನ್ನು ನೀಡಿದ್ದರು. ಇದೆ ಕಾರಣದಿಂದಲೇ ದೇವಾಲಯವು ಪೂರ್ಣ ಶಿಲ್ಪಮಯವಾಗದೆ ಭಾಗಶಃ ಶಿಲ್ಪಾಂಕಾರದೊಂದಿಗೆ ಗಡಸುಗಲ್ಲುಗಳ ಗೋಡೆಗಳನ್ನು ಭದ್ರವಿನ್ಯಾಸದೊಂದಿಗೆ ಪ್ರತ್ಯೇಕವಾಗಿ ರೂಪಿಸಿ ಅತ್ಯಾವಶ್ಯಕವಿರುವಷ್ಟು ಮಾತ್ರವೇ ಮೂರ್ತಿಶಿಲ್ಪಗಳನ್ನು ಅಳವಡಿಸಿ ದೇವಾಲಯದ ವಿನ್ಯಾಸವನ್ನು ಸ್ವಾಮಿಗಳು ಮಹಾರಾಜರಿಗೆ ವಿವರಿಸಿ, ನಿರ್ಮಾಣದ ನೀಲ ನಕ್ಷೆಯನ್ನು ತೋರಿಸಿ ಒಪ್ಪಿದರು. ಮೊದಲು ಅಂಗೀಕರಿಸಿದ ವೆಚ್ಚವನ್ನು ಸ್ವತಂತ್ರಭಾರತದ ಮೈಸೂರು ಸರ್ಕಾರ ಅದನ್ನೂ ಇನ್ನೂ ಇಳಿಸಿದ್ದರ ಫಲವಾಗಿ ದೇವಾಲಯದ ಕೆಲಸವನ್ನು ಸ್ವಾಮಿಗಳು ಆಶಿಸಿದ ರೀತಿಯಲ್ಲಿ ಮಾಡಲು ಸಾಧ್ಯವಾಗಲಿಲ್ಲ. ಆದರೆ ಸ್ವಾಮಿಗಳು ದೇವಾಲಯ ನಿರ್ಮಾಣವನ್ನು ತಮ್ಮ ಬದುಕಿನ ಸಾಧನೆ ಎಂದು ಭಾವಿಸಿ ಶಿಲ್ಪಿಗಳ ಸಂಭಾವನೆಯನ್ನೂ ಬಹುವಾಗಿ ಕಡಿಮೆಗೊಳಿಸಿಕೊಂಡು ನಿರ್ಮಿಸಿದ್ದನ್ನು ಸ್ವಾಮಿಗಳ ಶಿಷ್ಯರಾಗಿ ಕೆಲಸ ಮಾಡಿದ ಶ್ರೀ ಸಿ. ಪರಮೇಶ್ವರ ಆಚಾರ್ಯ ಅವರು ಇಂದೂ ಸ್ಮರಿಸಿಕೊಳ್ಳುತ್ತಾರೆ. ದೇವಾಲಯದ ನಿರ್ಮಾಣದಲ್ಲಿ ಕೆಲಸ ಮಾಡಿದ ಶಿಲ್ಪಿಗಳು ಇದನ್ನು ಗುರುಗಳ ಸೇವೆ ಎಂಬುದಾಗಿ ಪರಿಗಣಿಸಿ ದುಡಿದಿದ್ದಾರೆ.

ದೇವಾಲಯದ ನಿರ್ಮಾಣ ಪ್ರಾರಂಭವಾದದ್ದು ಬ್ರಿಟಿಷ್ ಸರ್ಕಾರದ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನವಿದ್ದಾಗ. ಪೂರ್ಣಗೊಂಡಿದ್ದು ಸ್ವತಂತ್ರಭಾರತದ ಮೈಸೂರು ರಾಜ್ಯದಲ್ಲಿ ೧೯೫೪ರಲ್ಲಿ. ಸುಮಾರು ಹತ್ತು ವರ್ಷಗಳ ಕಾಲ ೩೦–೪೦ ಶಿಲ್ಪಿಗಳು ನಿರಂತರವಾಗಿ ದುಡಿದಿದ್ದಾರೆ. ಈ ಕಾಲದಲ್ಲಿ ರಾಜ್ಯದಲ್ಲಿ ಅಪಾರ ಬದಲಾವಣೆಗಾದವು. ಮಹಾರಾಜರ ಮೈಸೂರಿನಿಂದ ದೂರವಿರುವ ಪರಿಸ್ಥಿತಿಯೂ ಉಂಟಾಯಿತು. ಮಹಾರಾಜರು ಸ್ವತಂತ್ರ ಭರತದ ಮೈಸೂರು ರಾಜ್ಯದ ಪ್ರಮುಖರಾಗಿದ್ದು ನಂತರದಲ್ಲಿ ನೆರೆಯ ಮದರಾಸು ರಾಜ್ಯದ ಗವರ್ನರ್ ಆಗಿದ್ದರು.

ಬದಲಾದ ಪರಿಸ್ಥಿತಿಗಳು ಬಹು ತೀವ್ರವೇ ಆಗಿದ್ದರೂ, ಸ್ವಾಮಿಗಳು ಮೊದಲು ರೂಪಿಸಲು ಆಶಿಸಿದ್ದ ದೇವಾಲಯದ ಹೇಗಿತ್ತು ಎಂಬುದನ್ನು ವಿವರಿಸುವವರು ಈಗ ಯಾರು ಇಲ್ಲವಾಗಿದ್ದರೂ, ಇಷ್ಟೆಲ್ಲಾ ತೀವ್ರ ಏರಿಳಿತಗಳ ಮಧ್ಯೆ ನಿರ್ಮಾಣವಾದ ದೇವಾಲಯ ಇದು ಎಂದು ಹೇಳಲು ದೇವಾಲಯದಲ್ಲಿ 'ಕೊರತೆ'ಯಾಗಿ ಕಾಣುವ ಭಾಗ ಯಾವುದೂ ನಮಗೆ ಇಂದು ಕಾಣಿಸುವುದಿಲ್ಲ. ಹಾಗೆಂದರೆ ದೇವಾಲಯ ನಿರ್ಮಾಣವು ಸಮೃದ್ಧ ನೆರವಿನಲ್ಲಿ ನಿರ್ಮಾಣವಾಗಿದೆ ಎಂದು ಅರ್ಥವಲ್ಲ.

ಸಿದ್ಧಲಿಂಗಸ್ವಾಮಿಗಳು ೧೯೫೨ರಲ್ಲಿ ಸಮಾಧಿಯನ್ನು ಪ್ರವೇಶಿಸಿದರು. ಅದುವರೆವಿಗೂ ಸ್ವಾಮಿಗಳ ನಿರ್ದೇಶನದಲ್ಲಿ ದೇವಾಲಯದ ನಿರ್ಮಾಣವನ್ನು ಮುಂದುವರಿಸುತ್ತಿದ್ದವರು ಸ್ವಾಮಿಗಳ ಮಕ್ಕಳಾದ ನಾಗೇಂದ್ರ ಸ್ಥಪತಿ ಅವರು. ಅವರೇ ದೇವಾಲಯವನ್ನು ಪೂರ್ಣಗೊಳಿಸ ಬೇಕಾಗಿತ್ತು. ಮಹಾರಾಜರು ಮದರಾಸು ರಾಜ್ಯದ ಗವರ್ನರ್ ಆದ ತರುವಾಯ ಮದರಾಸು ವಿಶ್ವವಿದ್ಯಾಲಯದಲ್ಲಿ ಸಿದ್ಧಲಿಂಗ ಸ್ವಾಮಿಗಳ ನೆನಪಿನಲ್ಲಿ ಒಂದು ಲಕ್ಷ ಮೊತ್ತವನ್ನು ನೀಡಿ ಒಂದು ವಿಶೇಷ ದತ್ತಿಯನ್ನು ಸ್ಥಾಪಿಸಿದರು ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ ಸ್ಥಪತಿಗಳು ಆ ಮೊತ್ತವನ್ನು ದೇವಾಲಯಕ್ಕೆ ಕೊಟ್ಟಿದ್ದರೆ ದೇವಾಲಯದ ಪ್ರವೇಶದ್ವಾರವನ್ನು ಇನ್ನು ಹೆಚ್ಚು ಅಲಂಕಾರಿಕವಾಗಿ ಮಾಡಲು ಸಾಧ್ಯವಾಗುತ್ತಿತ್ತು ಎಂದು ಚಿಂತಿಸಿದ್ದನ್ನು ಶ್ರೀ ಸಿ. ಪರಮೇಶ್ವರ ಆಚಾರ್ಯರು ಇಂದೂ ಸ್ಮರಿಸಿಕೊಂಡು ಕೊರಗುತ್ತಾರೆ.

ಈ ಎಲ್ಲಾ ಕೊರತೆಗಳ ನಡುವೆಯೇ ೧೯೫೪ರಲ್ಲಿ ಶ್ರೀ ಕಾಮ ಕಾಮೇಶ್ವರಿ ದೇವಾಲಯವು ಪ್ರತಿಷ್ಠೆಗೊಂಡು ಪೂರ್ಣಗೊಂಡಿತು. ಇಂದಿಗೂ ದೇವಾಲಯದ ಮಹಾದ್ವಾರವನ್ನು ಪ್ರವೇಶಿಸಿ ದರ್ಶಿಸುತ್ತಲೇ ಭವ್ಯವಾದ ಶಿಲ್ಪಲೋಕವನ್ನು ಪ್ರವೇಶಿಸಿದಂತೆ ನೋಟಕರನ್ನು ಬೆರಗುಗೊಳಿಸುತ್ತದೆ.

ದೇವಾಲಯದ ಮಹಾದ್ವಾರವೇ ಸಾಧಾರಣವಾಗಿ ಕಾಣಿಸುವ ದೇವಾಲಯಗಳಿಗಿಂತಲೂ ಭಿನ್ನವಾಗಿ ಕಾಣಿಸುತ್ತದೆ. ದೇವಾಲಯದ ಕಟ್ಟಡವು ನಯಗೊಳಿಸಿದ ಕಂದು ಕಗ್ಗಲ್ಲು ಬಳಸಿ ನಿರ್ಮಿತವಾಗಿದೆ. ವಿಧಾನಸೌಧದ ನಿರ್ಮಾಣಕ್ಕೂ ಅದೇ ಗಣಿಯಿಂದ ಕಲ್ಲು ತರಿಸಿದ್ದಾರೆ.



ಚಿತ್ರ ೫.೬ : ಕಾಮಕಾಮೇಶ್ವರೀ ದೇವಸ್ಥಾನದ ಮುಂಭಾಗ (ದೇವಾಲಯದ ವಿಮಾನ ಕಲಶವು ರಸ್ತೆಯಿಂದಲೇ ಕಾಣಿಸುತ್ತದೆ)


ಚಿತ್ರ ೫. ೭ : ಪ್ರವೇಶದ್ವಾರದಿಂದ ದೇವಾಲಯದ ನೋಟ

ಶ್ರೀ ನಾಗೇಂದ್ರ ಸ್ಥಪತಿಗಳು ವಿಧಾನಸೌಧದ ನೀಲಿನಕ್ಷೆಯನ್ನು ಕೊಟ್ಟಿದ್ದು, ಅದರ ನಿರ್ಮಾಣದ ಪರ್ಯವೇಕ್ಷಕರಾಗಿ ಆಗಿನ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು ಸ್ಥಪತಿಗಳನ್ನು ಆ ಕೆಲಸಕ್ಕೆ ನಿಯೋಜಿಸಿದ್ದರು ಎಂಬುದನ್ನು ನಾವು ಸ್ಮರಿಸಿ ಕೊಳ್ಳಬಹುದು. ಕಂದು ಕಗ್ಗಲ್ಲಿನ ಗೋಡೆಗಳು ಬಹು ನಾಜೂಕಾಗಿವೆ. ಅವುಗಳ ಮಧ್ಯೆ ಪ್ರತಿಮಾ (ದೇವ) ಕೋಷ್ಠಗಳನ್ನು ಕಪ್ಪು ಮೆದುಕಲ್ಲಿನಲ್ಲಿ ನಿರ್ಮಿಸಿ ಅಲಂಕರಿಸಿದ್ದಾರೆ.

ದೇವಾಲಯದ ಮಹಾದ್ವಾರದ ಇಕ್ಕೆಲಗಳಲ್ಲೂ ದ್ವಾರಪಾಲಕರ ಶಿಲ್ಪಗಳು ಪ್ರತಿಮಾಕೋಷ್ಠಗಳಲ್ಲಿವೆ. ಬಹು ಎತ್ತರವಾಗಿರುವ ಗೋಡೆಗಳ ಅಂಚಿನಲ್ಲಿ ತಿಳಿಕಪ್ಪು ಬಣ್ಣದ ಕಲ್ಲುಗಳಿಂದ ಅಲಂಕೃತ ವಿನ್ಯಾಸ ಗೋಡೆಯ ತುದಿಯಾಗಿ ರೂಪಿತವಾಗಿ ಮಧ್ಯೆ ಮಧ್ಯೆ ಕೆಲವು ದೇವ ಮೂರ್ತಿಗಳ ಶಿಲ್ಪಗಳೂ ಇವೆ. ಇಲ್ಲಿ ದ್ವಾರ ಗೋಪುರವಿಲ್ಲ. ದೇವಾಲಯವೆಲ್ಲಾ



ಚಿತ್ರ ೫. ೮ : ಪ್ರವೇಶದ್ವಾರದಿಂದ ದೇವಾಲಯದ ಬಲ ಪಾರ್ಶ್ವ


ಚಿತ್ರ ೫. ೯ : ಪ್ರವೇಶದ್ವಾರದಿಂದ ದೇವಾಲಯದ ಎಡ ಪಾರ್ಶ್ವ


ಪೂರ್ಣವಾಗಿ ಶಿಲೆಯಲ್ಲಿಯೇ ನಿರ್ಮಾಣಗೊಂಡಿದ್ದು ಗಾರೆಯ ಶಿಲ್ಪಕ್ಕೆ ಅವಕಾಶವೇ ಕೊಟ್ಟಿಲ್ಲ ಎಂಬ ಅಂಶವು ಗಮನಿಸಬೇಕಾದ ವಿಷಯ. ಸಾಧಾರಣವಾಗಿ ಗೋಡೆಯ ತುದಿಗಳಿಗೆ ಗಾರೆಯ ಶಿಲ್ಪಗಳನ್ನು ಅಳವಡಿಸುವುದು ವಾಡಿಕೆ. ಇದು ಅಲಂಕಾರಿಕ ಎಂದು ಮಾತ್ರವಲ್ಲ ದೇವಾಲಯದ ನಿರ್ಮಾಣದ ಖರ್ಚೂ ಕಡಿಮೆಯಾಗುತ್ತದೆ ಎಂಬ ಅಂಶವೂ ಕಾರಣ. ಶಿಲೆಯಲ್ಲಿ ಈ ಕೆಲಸವನ್ನು ಮಾಡುವುದು ಎಂದರೆ 'ತುಂಬಾ' ದುಬಾರಿ ಎಂಬುದು ಎಲ್ಲರ ಅನುಭವ. ಆದ್ದರಿಂದ ನೋಡುಗರಿಗೆ ಈ ದೇವಾಲಯದ ನಿರ್ಮಾಣದಲ್ಲಿ ಹಣದ ಮುಗ್ಗಟ್ಟು ಇತ್ತು ಎಂದರೆ ನಂಬಿಕೆಗೆ ನಿಲುಕುವ ಮಾತಾಗುವುದೇ ಇಲ್ಲ.


ಚಿತ್ರ ೫. ೧೦ : ದೇವಸ್ಥಾನದ ಮೇಲಿನ ತುದಿ ಭಾಗ (ಪ್ರಸ್ತರ)

ದೇವಾಲಯದ ವಿವರಣೆ ತಿಳಿಯಲು ತಲವಿನ್ಯಾಸ (– ಅಧಃ ಛಂದ PLAN) ಮತ್ತು ಊರ್ಧ್ವ ಛಂದ (Elevation) ಎರಡೂ ಅವಶ್ಯಕ. ಇಲ್ಲದಿದ್ದರೆ ದೇವಾಲಯವನ್ನು ಪೂರ್ಣರೀತಿಯಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ದೇವಾಲಯದ ತಲ ವಿನ್ಯಾಸವನ್ನು (ಅಧಃ ಛಂದವನ್ನು) ಪುಟ ೯೯ರಲ್ಲಿ (ಚಿತ್ರ ೫. ೧೧) ಕೊಟ್ಟಿದೆ. ಮಹಾದ್ವಾರದ ಮೂಲಕ ಪ್ರವೇಶಿಸುತ್ತಲೇ ಬಲಿಪೀಠ,



ಚಿತ್ರ ೫. ೧೧ : ದೇವಸ್ಥಾನದ ತಲ ವಿನ್ಯಾಸ (ರೇಖಾಚಿತ್ರ)



ಚಿತ್ರ ೫.೧೨ : ವೃಷಭಾಂಕಣದ ಒಂದು ಸ್ತಂಭ

ಧ್ವಜಸ್ತಂಭಗಳ ಸಮೀಪವೇ ದೇವಾಲಯದ ವೃಷಭ ಮಂಟಪವಿದೆ. ಅದಕ್ಕೆ ಪೂರ್ವಭಾಗದಲ್ಲಿ ಕಬ್ಬಿಣದ ಸರಳಿನ ತೆರೆಯೊಂದು ಇದೆ. ದೇವಾಲಯ ಪೂರ್ವಾಭಿಮುಖ ವಾಗಿದ್ದರೂ ಪ್ರವೇಶದ ಪಾವಟಿಗೆಗಳು ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿವೆ.

ದೇವಾಲಯದ ವೃಷಭಾಂಕಣದ ನಾಲ್ಕು ಮೂಲೆಗಳಲ್ಲಿ ಬಹು ನೀಳವಾದ ನಾಲ್ಕು ಸ್ತಂಭಗಳನ್ನು ಪಡೆದುಕೊಂಡಿದೆ. ಪೂರ್ವದ ಕಡೆ ಕಬ್ಬಿಣದ ತೆರೆ ಇದೆ. ಉತ್ತರ ದಕ್ಷಿಣಗಳಿಗೆ ಪಾವಟಿಗೆಗಳಿದ್ದು ದೇವಾಲಯವನ್ನು ಪ್ರವೇಶಿಸಲು ನೆರವಾಗುತ್ತವೆ. ಈ ಪಾವಟಿಗೆಗಳ ಅಂಚುಗಳು ಸಿಂಹ ಶಿಲೆಯಿಂದ ರಕ್ಷಿತವಾಗಿವೆ. ಪೂರ್ವದ ಕಡೆಗೆ ದೇವಾಲಯದ ಪ್ರಧಾನ ಬಾಗಿಲಿದೆ. ಅದನ್ನು ಹೊಕ್ಕರೆ ಮುಖಮಂಟಪವನ್ನು ಪ್ರವೇಶಿಸುತ್ತೇವೆ. ನಾಲ್ಕು ಸ್ತಂಭಗಳ ಮೇಲೆ ಕಲ್ಲಿನ ತೊಲೆಗಳನ್ನು ಹಾಸಿ ಮಂಟಪವನ್ನು ರೂಪಿಸಿ ಮುಚ್ಚಿಗೆಯನ್ನು (ಭುವನೇಶ್ವರಿಯನ್ನು) ನಿರ್ಮಿಸಿದ್ದಾರೆ. ಇದು ತೀರಾ ಸಾಧಾರಣವಾದ ಕಂದುಕಲ್ಲಿನಲ್ಲಿ ವಿನ್ಯಾಸಗೊಂಡಿದೆ. ನಾಲ್ಕು ಕಂಬಗಳ ಮೇಲೆ ಸ್ತಂಭದ ಮೇಲಿನ ಮತ್ತು ಉತ್ತರದ (ಸೂರಿನ) ಕೆಳಭಾಗದ ಸ್ಥಳವನ್ನು ಬರಿದಾಗಿ ಬಿಡದೆ ಚಾಚರನ್ನು ನಿಲ್ಲಿಸಿದ್ದಾರೆ. ಬೇಲೂರಿನ ದೇವಾಲಯದಲ್ಲಿ ಇದೇ ಸ್ಥಳವನ್ನು ತುಂಬಲೆಂದೇ ನರ್ತಕಿಯರನ್ನು (ಅಪ್ಸರೆಯರನ್ನು) ರೂಪಿಸಿ ಶಿಲ್ಪಗಳನ್ನು ಅಲಂಕರಿಸಿದ್ದಾರೆ ಎಂಬ ವಿಷಯವನ್ನು ಇಲ್ಲಿ ನೆನಪಾಗುತ್ತದೆ. ಆ ವಿನ್ಯಾಸಕ್ರಮ ಮರೆಯದೆ ಸುಂದರ ಶಿಲ್ಪಗಳನ್ನು ಜೋಡಿಸಿದ್ದಾರೆ.

ಮೂರು ಕಡೆಯ ತೊಲೆಗಳ (ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗಗಳ) ಮೇಲ್ಭಾಗದಲ್ಲಿ (ಪ್ರಸ್ತರದಲ್ಲಿ) ಶಿಲೆಯಲ್ಲಿ ಅಲಂಕರಣದ ಸಾಲು ಇದೆ. ಪೂರ್ವಕ್ಕೆ ಮಧ್ಯಭಾಗದಲ್ಲಿ ದೇವಾಲಯದ ಪ್ರಧಾನ ಆರ್ಚಾಮೂರ್ತಿ ಕಾಮಕಾಮೇಶ್ವರಿ ಪ್ರತಿಮೆಯು ಇದೆ. ಅದೇ ರೀತಿಯಾಗಿ ದಕ್ಷಿಣಕ್ಕೆ ತ್ರಿಮೂರ್ತಿ ಮತ್ತು ಉತ್ತರ ಭಾಗಕ್ಕೆ ಭುವನೇಶ್ವರಿ ದೇವಿಯ ವಿಗ್ರಹಗಳು ಕಿರು ಆಕಾರದಲ್ಲಿದ್ದರೂ, ದೂರದಿಂದ ಮಾತ್ರವೇ ಕಂಡುಬಂದರೂ ಬಹು ಸುಂದರವಾಗಿವೆ.

ದೇವಾಲಯದ ಪ್ರವೇಶವನ್ನು ಕಂಡ ಕೂಡಲೇ ಇದು ದೇವಿಯ ದೇವಾಲಯ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ನೇರವಾದ ಪ್ರವೇಶವನ್ನು ತಪ್ಪಿಸಿದೆ. ಪ್ರವೇಶಾಂಕಣದಲ್ಲಿ ಅಂಕಣದ ಬಹುಭಾಗವನ್ನು ತುಂಬಿರುವ ವೃಷಭ ಮೂರ್ತಿ ಇದೆ. ಬೃಹತ್‌ನೊಂದಿಗೆ ಸೌಂದರ್ಯದ ಮಹತ್ತನ್ನು ಅತ್ಯಂತ ಸೂಕ್ಷ್ಮತೆಯನ್ನೂ ಮೈಗೂಡಿಸಿಕೊಂಡಿರುವ ವೃಷಭ ಮೂರ್ತಿ ಕೊರಳಲ್ಲಿರುವ ಸರಗಳು, ಅಲಂಕಾರಗಳು ನೋಡಿಯೇ ಆನಂದಿಸಬೇಕು. ಪರಿಶುದ್ಧವಾದ ಕರ್ನಾಟಕ ಶೈಲಿಯ ವೃಷಭಮೂರ್ತಿ. ಇಷ್ಟು ಸುಂದರವಾಗಿ ಅಲಂಕೃತ ವಾಗಿರುವ ವೃಷಭ ಮೂರ್ತಿ, ದಕ್ಷಿಣಭಾರತದಲ್ಲಿಯೇ ಬೇರೆಯ ಕಡೆ ಇಲ್ಲ. ಲೇಪಾಕ್ಷಿಯ ಬಸವಯ್ಯ ಪ್ರಖ್ಯಾತನಾಗಿರುವ ಕಾರಣ ಅಲ್ಲಿಯ ಬೃಹತ್ತಿಗೆ ಮಾತ್ರವೇ. ಇಲ್ಲಿಯ ಬಸವಯ್ಯನ ಮೂಪುರದಲ್ಲಿರುವ ಸುಕ್ಕುಗಳ ನರಗಳೂ ಕಾಣಿಸುತ್ತವೆ. ಗೊರಸುಗಳಲ್ಲಿರುವ ಉಬ್ಬು–ತಗ್ಗುಗಳು, ಕೊಂಕು ಕೂದಲೂ ಸ್ಪಷ್ಟವಾಗಿ ಕಾಣಿಸುತ್ತವೆ.

ಈ ವೃಷಭ ಮೂರ್ತಿಯ ನಾಲ್ಕು ಮೂಲೆಗಳಿಗೆ ಬಹು ನೀಳವಾದ ಸ್ತಂಭಗಳು ತಮ್ಮ ಪೂರ್ಣಾಂಗಗಳ ಪಡೆದುಕೊಂಡು ಅಲಂಕೃತವಾಗಿವೆ. ಮೊದಲಿಗೆ ಈ ಭಾಗವೇ ಭಕ್ತರನ್ನು ಇನ್ನೂ ಅಪೂರ್ವ ಶಿಲ್ಪಗಳನ್ನು ತೋರಲು ಸಜ್ಜುಗೊಳಿಸುವಷ್ಟು ಪ್ರಬಲವಾಗಿವೆ. ನಾಲ್ಕು ಮೂಲೆಗಳಲ್ಲಿರುವ ಕಪ್ಪುಕಲ್ಲಿನ ಸ್ತಂಭಗಳು. ಅಧಿಷ್ಠಾನದ ಮೇಲುಭಾಗವಾದ ಪ್ರತಿಯ ಮೇಲೆ ಗಡಸುಕಲ್ಲಿನ ಸಾಧಾರಣ ಪದ್ಮಪೀಠದ ಮೇಲೆ ಈ ಸ್ತಂಭಗಳು ನಿಂತಿವೆ. ತಳಭಾಗ ಚೌಕವಾಗಿದ್ದು ಅದರಲ್ಲಿ ಚಾಮರ ಧಾರಿಣಿಯರು ಮತ್ತು ಅಲಂಕಾರ ವಿನ್ಯಾಸಗಳಿವೆ. ಅದರ ಮೇಲು ಭಾಗ (ದಂಡ) ಕೇವಲ ವಿನ್ಯಾಸವನ್ನು ಪಡೆದಿದೆ. ನಂತರ ಬೋದಿಗೆಯ ತನಕ ಬೇಲೂರಿನ ಸ್ತಂಭ ವಿನ್ಯಾಸಗಳೇ ಇವೆ. ಈ ಇಲ್ಲಿಯ ಭುವನೇಶ್ವರಿ (ಮುಚ್ಚಿಗೆ) ತೀರಾ ಸಾಧಾರಣವಾಗಿ ಕಂದುಕಗ್ಗಲ್ಲಿನಲ್ಲಿ ಕೇವಲ ಜ್ಯಾಮಿತಿ ವಿನ್ಯಾಸ ಪ್ರಧಾನವಾಗಿ ರೂಪಿತವಾಗಿದೆ.

ಪಾವಟಿಗೆಗಳನ್ನು ಬಳಸಿಕೊಂಡು ದೇವಾಲಯವನ್ನು ಪ್ರವೇಶಿಸದೆ ನೇರವಾಗಿ ಪ್ರದಕ್ಷಿಣಾಕ್ರಮದಲ್ಲಿ ಸಾಗಿದರೆ ಮೊದಲು ಕಣ್ಸೆಳೆಯುವುದು ದೇವಾಲಯ ನಿರ್ಮಾಣದ ಪ್ರಾರಂಭಿಕ ವಿನ್ಯಾಸ ಭಾಗ. ಇದನ್ನು ಎರಡಾಗಿ ವಿಭಜಿಸುತ್ತಾರೆ. ಮೊದಲನೆಯದು ಉಪಪೀಠ. ಇದರ ಮೇಲಿರುವ ಭಾಗ ಅಧಿಷ್ಠಾನ. ಅಧಿಷ್ಠಾನಗಳಲ್ಲಿ ಪಾದುಕೆ, ಜಗತಿ, ಪದ್ಮ, ಕಂಪ, ಕಂಠ, ಊರ್ಧ್ವಪದ್ಮ, ವಾರ್ಜನ, ಆಲಿಂಗ, ಕುಮುದ ಇತ್ಯಾದಿ ವಿವಿಧ ವಿನ್ಯಾಸಗಳಿರುತ್ತವೆ. ಅಧಿಷ್ಠಾನದ ಎತ್ತರದಿಂದಲೇ ದೇವಾಲಯುದ ಎಲ್ಲಾ ಭಾಗಗಳ ಎತ್ತರವನ್ನೂ ನಿರ್ಣಯಿಸುತ್ತಾರೆ. ಅಧಿಷ್ಠಾನದ ತಳಭಾಗ ಪಾದುಕೆ ಆಗಿದ್ದರೆ ತುದಿ ಭಾಗವನ್ನು ಪ್ರತಿ ಎನ್ನುತ್ತಾರೆ. ಇದರ ಮೇಲೆ ಬರುವ ಪಟ್ಟಿಯನ್ನು ಸಾಧಾರಣವಾಗಿ ಭೂತಮಾಲ ಎನ್ನುತ್ತಾರೆ. ಈ ದೇವಾಲಯದಲ್ಲಿ ಭೂತಮಾಲೆಗೆ ಬದಲಾಗಿ ಬಳ್ಳಿ – ಪ್ರಾಣಿ – ಹೂಗಳ ವಿನ್ಯಾಸವಿರುವ ಪಟ್ಟಿಕೆಯೊಂದು ದೇವಾಲಯ ಸುತ್ತಲೂ ಹೊರಗೋಡೆಯಲ್ಲಿ ವಿನ್ಯಸಿತವಾಗಿದೆ. ಹೊಯ್ಸಳ ದೇವಾಲಯಗಳಲ್ಲಿ ಹಲವು ಪಟ್ಟಿಗಳಾಗಿ ವಿನ್ಯಾಸಗೊಂಡಿರುವ ಪಟ್ಟಿ ಇಲ್ಲಿ ಕೇವಲ ಒಂದಕ್ಕೇ




ಚಿತ್ರ ೫.೧೩ : ದೇವಸ್ಥಾನದ ಅಧಿಷ್ಠಾನ ಮತ್ತು ಪಟ್ಟಿಕೆ



ಚಿತ್ರ ೫.೧೪ : ದೇವಸ್ಥಾನದ ಪಟ್ಟಿಕೆ ಅಲಂಕಾರ

ಸೀಮಿತಗೊಂಡಿದೆ. ಇದನ್ನು ಕಪ್ಪು ಶಿಲೆಯಲ್ಲಿ ಪ್ರತ್ಯೇಕವಾಗಿ ಮಾಡಿ ನಿರ್ಮಾಣದಲ್ಲಿ ಜೋಡಿಸಿದ್ದಾರೆ. ಈ ಪಟ್ಟಿಯನ್ನು ನೋಡಿದ ಕೂಡಲೇ ಹೊಯ್ಸಳ ದೇವಾಲಯದ ನೆನಪು ಯಾರಿಗಾದರೂ ತಟ್ಟನೆ ಮೂಡುತ್ತದೆ. ಈ ಪಟ್ಟಿಯಲ್ಲಿ ಹೂ ಬಳ್ಳಿಗಳು ಹಕ್ಕಿಗಳು ಇದ್ದು ಪ್ರತಿ ಮೂಲೆಯಲ್ಲೂ ಕೀರ್ತಿ ಮುಖ ಇದೆ. ವ್ಯಾಳಿ, ಮಕರಗಳು, ಆರಂಭ ಮತ್ತು ಅಂತ್ಯಗಳಲ್ಲಿ ಆನೆಗಳು ಚಿತ್ರಿತವಾಗಿವೆ. ಈ ಪಟ್ಟಿಯು ದೇವಾಲಯದ ಸುತ್ತಲೂ ಮುಂದುವರಿದಿದ್ದು ಭದ್ರಗಳನ್ನು ತಪ್ಪಿಸದೆ ಅನುಸರಿಸಿದೆ. ಅಲಂಕಾರ ವಿನ್ಯಾಸ ಮುರಿಯದೆ ಮುಂದುವರಿದಿದೆ.

ಇಲ್ಲಿಂದಲೇ ದೇವಾಲಯದಲ್ಲಿ ಬಳಕೆಯಾಗಿರುವ ಭದ್ರವಿನ್ಯಾಸವು ತಟ್ಟನೆ ಕಣ್ಣಿಗೆ ರಾಚುತ್ತದೆ. ಭದ್ರ ಎಂದರೆ ಚಾಚು. ಸಾಧಾರಣವಾಗಿ ಗೋಡೆಯು ನೇರವಾಗಿರುತ್ತದೆ. ಆದರೆ ಭದ್ರವಿನ್ಯಾಸ ಎಂದಾಗ ಗೋಡೆಯ ಒಂದು ಭಾಗ ಮಾತ್ರ ಎರಡೂ ಕಡೆಗಳಿಂದ ಮುಂದಕ್ಕೆ ಚಾಚಿಕೊಂಡು ಬೆಳೆಯುತ್ತದೆ. ಇದು ಒಂದು ಗೋಡೆಯ ಒಂದು ಭಾಗಕ್ಕೆ ಅನ್ವಯವಾಗುವುದಲ್ಲ ಮೂಲವು ಒಂದು ಚೌಕ ಅಥವಾ ಸಮಚತುರ್ಭುಜವಾಗಿರುತ್ತದೆ. ಅದನ್ನು ಅದರ ಕೇಂದ್ರದ ಮೇಲೆ ಕ್ರಮದಲ್ಲಿ ತಿರುಗಿಸಿದಾಗ ಉಂಟಾಗುವ ಚಾಚುಗಳನ್ನು ಭದ್ರ ಎನ್ನುತ್ತಾರೆ. ದ್ರಾವಿಡ ದೇವಾಲಯಗಳಲ್ಲಿ ಸಾಧಾರಣವಾಗಿ ***ಭದ್ರಜಾ*** ಎನ್ನುವ ವಿನ್ಯಾಸವೇ ತೀರಾ ಸಾಧಾರಣವಾಗಿ ಬಳಸುತ್ತಾರೆ. ಎಂದರೆ ಈ ದೇವಾಲಯದಲ್ಲಿ ಹನ್ನೆರಡು ಮೂಲೆಗಳು ಇರುತ್ತವೆ. ***ವರ್ಧಮಾನ*** ಎಂದರೆ ಇದರಲ್ಲಿ ಇಪ್ಪತ್ತು ಮೂಲೆಗಳಿರುತ್ತವೆ.



೧. ರುಚಕಾ　೨. ಭದ್ರಜಾ　೩. ವರ್ಧಮಾನ　೪. ಸ್ವಸ್ತಿಕಾ　೫. ಷಡಸ್ರಕಾ

ಚಿತ್ರ ೫. ೧೫ : ದೇವಾಲಯದ ತಳ ವಿನ್ಯಾಸಗಳು

ಹೊಯ್ಸಳ ಶಿಲ್ಪಿಗಳು ದೇವಾಲಯವೇ ಸ್ವರ್ಗ ಎಂದು ನಂಬಿದ್ದವರು. ಆದ್ದರಿಂದ ಅಲ್ಲಿ ಎಲ್ಲಾ ದೇವತೆಗಳೂ ಇರಬೇಕೆಂಬುದಾಗಿ ಬಯಸಿದ್ದವರು. ಅವರಿಗೆ ತಮ್ಮ ದೇವರ ಒಂದೆರಡು ಅವತಾರ ಅಥವಾ ರೂಪ ಸಾಲದು ಎಂದು ತೀರ್ಮಾನಿಸಿದ್ದವರು. ತಮ್ಮ ದೈವದ ಸಮಗ್ರ ವಿವರ ಆ ಒಂದೇ ದೇವಾಲಯದಲ್ಲಿ ಲಭಿಸಬೇಕು ಎಂದು ನಿರ್ಣಯ ಕೈಗೊಂಡವರು. ಆದ್ದರಿಂದ ಆ ರೂಪಗಳಿಗೆಲ್ಲಾ ತಮ್ಮ ಒಂದು ದೇವಾಲದಲ್ಲಿಯೇ ಸ್ಥಳ ಲಭಿಸಬೇಕೆಂಬುದಾಗಿ ಬಯಸಿದವರು. ಅದಕ್ಕಾಗಿ ಇದ್ದ ಒಂದೇ ಮಾರ್ಗ ಎಂದರೆ ಗೋಡೆಯ ವಿಸ್ತೀರ್ಣವನ್ನು ಹೆಚ್ಚಿಸಿಕೊಳ್ಳುವುದು. ದೇವಾಲಯದ ಉದ್ದ-ಅಗಲ-ಎತ್ತರ ನಿಶ್ಚಿತವಾದ ನಂತರವೂ ಗೋಡೆಯ ವಿಸ್ತೀರ್ಣ ಹೆಚಿಸಲು ಇದ್ದ ಏಕೈಕ ಮಾರ್ಗವೆಂದರೆ ಈ ಭದ್ರ ವಿನ್ಯಾಸವೇ. ಇದನ್ನೇ ಆಯ್ಕೆ ಮಾಡಿಕೊಂಡಿದ್ದರು. ಆದ್ದರಿಂದ ಹೊಯ್ಸಳ ದೇವಾಲಯಗಳು ಮೂಲ ಚುತುರ್ಭುಜವನ್ನೇ ಹೊಂದಿದ್ದರೂ, ಅದನ್ನು ಕೇಂದ್ರದ ಮೇಲೆ ಸುತ್ತಿಸಿದ್ದರ ಫಲವಾಗಿ ಬಂದ ಭದ್ರಗಳನ್ನು ಬಳಸಿ ದೇವಾಲಯವನ್ನು ವಿನ್ಯಾಸ ಮಾಡಿದ್ದಾರೆ. ಇಂದು ಅದನ್ನು ನಾವು 'ನಕ್ಷತ್ರಾಕಾರ' ಎಂದು ಕರೆಯುವಂತೆ ಭ್ರಮೆ ಮೂಡಿಸಿದ್ದಾರೆ. ಇದರೊಂದಿಗೆ ಗೋಡೆಯ ಹೊರಮೈ – ಒಳಮೈ ಎರಡನ್ನೂ ಶಿಲ್ಪದಿಂದ ಅಲಂಕರಿಸುವುದನ್ನು ಪ್ರಾರಂಭಿಸಿದ್ದರಿಂದ ಪ್ರಾರಂಭಿಕ ತೆಳುಗೋಡೆಗಳು ಎರಡು ಗೋಡೆಗಳಾಗಿ (ಹೊರಗೋಡೆ – ಒಳಗೋಡೆ ಎಂದಾಗಿ) ಮಧ್ಯೆ ಖಾಲಿಜಾಗ ರೂಪಿತವಾಗಿ ಅದನ್ನು ಮಣ್ಣಿನಿಂದ ತುಂಬುವುದೂ ರೂಢಿಗೆ ಬಂತು. ಇದೇ ಕಾರಣದಿಂದ ದೇವಾಲಯದ ಸೂರಿನ ಭಾರವನ್ನು ಗೋಡೆಗಳ ಮೇಲೆ ಹೊರಿಸದೆ ಸ್ತಂಭಗಳ ಮೇಲೆಯೇ ಹೊರಿಸಿರುವುದು. ಹೀಗೆ ಶಿಲ್ಪಿಗಳು ಲಭಿಸಿದ ಕಿರು ವ್ಯಾಪ್ತಿಯ ಸ್ಥಳವನ್ನು

ವಿಶಾಲ ಗೊಳಿಸಿಕೊಂಡು ನಿಜಾರ್ಥದಲ್ಲಿ ದೇವಾಲಯವನ್ನು ದೇವರುಗಳ ಆವಾಸವಾದ ಸ್ವರ್ಗವನ್ನೇ ಮರುಸೃಷ್ಟಿ ಮಾಡುವ ಪ್ರಯತ್ನವನ್ನು ಹೊಯ್ಸಳ ಶಿಲ್ಪಿಗಳು ಮಾಡಿದರು.

ಪ್ರಸ್ತುತ ದೇವಾಲಯದಲ್ಲಿ ಇದೇ ತಂತ್ರದ ತೀರಾ ಸಾಧಾರಣ ಬಗೆಯನ್ನು ಬಳಸಿದ್ದಾರೆ. ದೇವಾಲಯ ಗರ್ಭಾಲಯ – ಸುಖನಾಸಿ – ಮುಖಮಂಟಪ–ವಾಹನ ಮಂಟಪ ಎಂಬ ನಾಲ್ಕು ಮಂಟಪ–ವಿಭಾಗಗಳು ಪಡೆದು ಕೊಂಡಿದೆ. ಇದೇ ರೀತಿಯಲ್ಲಿ ಮೂರು ಚತುರ್ಭುಜ ಗಳನ್ನು ಸೇರಿಸಿ ಪ್ರತಿಯೊಂದನ್ನು ಪ್ರತ್ಯೇಕವಾಗಿ ವಿನ್ಯಾಸ ಮಾಡಿ ಭದ್ರಗಳನ್ನು ಸೃಷ್ಟಿಸಿದ್ದಾರೆ. ಮುಖಮಂಟಪ ಮತ್ತು ಗರ್ಭಾಂಕಣಕ್ಕೆ ವರ್ಧಮಾನ ವಿನ್ಯಾಸವನ್ನು ಬಳಸಿದ್ದಾರೆ. ಆಲಯದ ಪೂರ್ಣವಿನ್ಯಾಸವನ್ನು ಗುರ್ತಿಸಲು ವಿಶೇಷ ಅಧ್ಯಯನದ ಅವಶ್ಯಕತೆ ಇದೆ. ಹೊಯ್ಸಳ ದೇಗುಲಗಳನ್ನು ಬಹುವಾಗಿ ಶಿಲ್ಪಗಳನ್ನು ನೋಡುವವರ ಮನಸ್ಸು ದೇವರ ಲೀಲೆಗಳಲ್ಲಿ ಸಂಲಗ್ನಗೊಂಡು ಜಗವನ್ನು ಮರೆತು ಜಗನ್ನಾಥನ ದರ್ಶನಕ್ಕೆ ಅಣಿಗೊಳಿಸುತ್ತಿತ್ತು. ಅದಕ್ಕಾಗಿ ನಾಲ್ಕಾರು ಗಂಟೆಗಳ ಸಮಯವನ್ನೂ ಪಡೆದುಕೊಳ್ಳುತ್ತಿತ್ತು. ಆದರೆ ಈ ದೇವಾಲಯದಲ್ಲಿ ಅಷ್ಟು ದೀರ್ಘಾವಧಿಯು ಲಭಿಸುವುದಿಲ್ಲ. ಆಧುನಿಕತೆಗೆ ಅನುಗುಣವಾಗಿ ಕಾಲವು ಹ್ರಸ್ವಗೊಂಡಿದೆ. ಆದರೂ ಆ ರೀತಿಯ ಸಿದ್ಧತೆಗೆ ಅವಕಾಶವನ್ನು ಸ್ವಲ್ಪ ಧಾರಾಳವಾಗಿಯೇ ಮಾಡಿಕೊಟ್ಟಿದೆ ಎಂದು ನಾವು ಅಂಗೀಕರಿಸಬೇಕಾಗುತ್ತದೆ.

ಈ ರೀತಿ ಮೂಲ ಹೊಯ್ಸಳ ವಿನ್ಯಾಸವನ್ನು ಬಳಸಿಕೊಂಡು ಕನ್ನಡನಾಡಿನ ಶಿಲ್ಪಿಯಿಂದ ಕನ್ನಡ (ರಾಜ್ಯದ) ಅರಸರು ನಿರ್ಮಿಸಿರುವ ಅಂತಿಮದೇವಾಲಯ ಇದು ಎಂಬುದೇ ಈ ದೇವಾಲಯದ ಹೆಗ್ಗಳಿಕೆ. ಶ್ರೀಮಂತ ಹೊಯ್ಸಳ ದೇವಾಲಯಗಳು ಪ್ರಾಚೀನತೆಯ ಹಣೆ ಪಟ್ಟಿಯನ್ನು ಕಟ್ಟಿಕೊಂಡು ಹಳೆಯವು ಎನಿಸಿ ಕೊಂಡಿರುವಾಗ, 'ಇಂಥಾ ದೇಗುಲಗಳ ನಿರ್ಮಾಣ ಮಾಡುವ ಶಿಲ್ಪಿಗಳು ಉಂಟೇ?' ಎಂದು ಕೇಳುವವರಿಗೆ ಸಮರ್ಥವಾದ ಉತ್ತರವನ್ನು ನೀಡಬಲ್ಲ ಮತ್ತು ಕರ್ನಾಟಕದಲ್ಲಿ ಶಿಲ್ಪಕೌಶಲದಲ್ಲಿ ಭೀಮಬಲರಾಗಿರುವ ಶಿಲ್ಪಿಗಳು ಇದ್ದಾರೆ ಎಂದು ಸದ್ದುಗದ್ದಲಗಳಿಲ್ಲದೆ ಮೊಳಗಿರುವ ಪಾಂಚಜನ್ಯವಿದು. ಆದರೆ ಇದನ್ನು ಕೇಳಿಸಿಕೊಂಡವರು, ಗಮನಿಸಿದವರು, ಇದರ ಪ್ರಾಮುಖ್ಯತೆಯನ್ನು ಗುರ್ತಿಸುವವರು ಭವಿಷ್ಯದ ಗರ್ಭದಿಂದ ಹೊರ ಬರಬೇಕಾಗಿದೆ!

ಅವರ ನಿರೀಕ್ಷೆಯಲ್ಲಿರುವ ನಮಗೆ ನಿರಾಸೆಯ ಈ ಉದ್ಗಾರ ಹೊಮ್ಮುವುದು ತೀರಾ ಸಾಧಾರಣವೇ –

ಮೂರು ಸಾಗರ ನೂರು ಮಂದಿರ ದೈವದಾಸಿರವಿದ್ದರೆ ।
ಕಾವೇರಿ ಇದ್ದರೆ ಬಲುಸಿರಿಯ ಸಹ್ಯಾದ್ರಿ ಸಾಲಿದ್ದರೆ ।
ಶಿಲ್ಪವಿದ್ದರೆ ಶಿಲ್ಪಿ ಇದ್ದರೆ ಘನ ಪರಂಪರೆ ಇದ್ದರೆ ।
ಏನು ಸಾರ್ಥಕ ಮನೆಯ ಜನರೇ ಮಲಗಿ ನಿದ್ರಿಸುತ್ತಿದ್ದರೆ ॥

ದೇವಾಲಯವನ್ನು ಪ್ರವೇಶಿಸುತ್ತಿರುವಂತೆಯೇ ಬಹುದೊಡ್ಡದಾಗಿರುವ ವೃಷಭ ಮೂರ್ತಿಯ ದರ್ಶನವಾಗುತ್ತದೆ. ಕೇವಲ ಆಕಾರದ ಬೃಹತ್ತು ಮಾತ್ರವಲ್ಲ ಅಲಂಕಾರದಲ್ಲೂ ಬಹು ಶ್ರೀಮಂತವಾಗಿದೆ. ಗೆಜ್ಜೆಗಳ ಸರ, ಕವಡೆಗಳ ಸರ, ಪತ್ರಗಳ ಸರ ಮಾಲೆಗಳು ಕೊರಳಲ್ಲಿವೆ. ಅವುಗಳ ಕೆತ್ತನೆ ಕಂಡವರು ತನ್ಮಯರಾಗುತ್ತಾರೆ. ವೃಷಭನ ಮೂಪುರದ ಸುಕ್ಕು, ನರಗಳು, ಮೈ ಚರ್ಮದ ಏರಿಳಿತಗಳನ್ನು ಕಂಡವರಿಗೆ ಈ ಮೂರ್ತಿ ನಿಜವಾಗಿ ಶಿಲೆಯದೇ ಎಂಬ ಅನುಮಾನ ಖಂಡಿತವಾಗಿಯೂ ಮೂಡುತ್ತದೆ. ಬಾಲದಲ್ಲಿಯ ಕೂದಲೂ ಜೀವಂತ ವಾಗಿರುವಂತೆ ಭಾಸವಾಗುತ್ತದೆ. ಕೊರಳ ಅಲಂಕಾರ ವಿನ್ಯಾಸ ಅದ್ಭುತ ಎನಿಸುತ್ತದೆ. ವೃಷಭನ ಮುಖ ನೋಡಿದಾಗ ಅದರ ಜೀವಂತಿಕೆಯ ಬಗ್ಗೆ ಅನುಮಾನವೇ ಉಂಟಾಗುವುದಿಲ್ಲ.

ಈ ಎಲ್ಲಾ ವಿವರಗಳಿಗಿಂತಲೂ ಮುಖ್ಯವಾಗಿರುವುದು ಈ ವೃಷಭವು ಕರ್ನಾಟಕ ಶೈಲಿಯದು ಎಂಬುದು. ಇದರ ಆಧಾರದಿಂದ ಎಷ್ಟು ದೇವಾಲಯಗಳಲ್ಲಿರುವ ವೃಷಭ



ಚಿತ್ರ ೫. ೧೬ : ವೃಷಭ ಮೂರ್ತಿಯನ್ನು ಶಿಲ್ಪಿಸುತ್ತಿರುವ ನಾಗೇಂದ್ರ ಸ್ಥಪತಿಗಳು ಮತ್ತು ಶಿಷ್ಯರು

ಮೂರ್ತಿಗಳು ನಿಜವಾದ ಕನ್ನಡ ಶೈಲಿಯ ಶಿಲ್ಪಿಗಳಾಗಿವೆ ಎಂಬುದನ್ನು ಗುರ್ತಿಸುವುದು ಸುಲಭವಾಗುತ್ತದೆ. ಇದರ ನೆನಪಿನಿಂದಾದರೂ ಕರ್ನಾಟಕದಲ್ಲಿ ಶಿಲ್ಪಪರಂಪರೆ ಉಳಿಯ ಬೇಕಾದದ್ದು ಮುಖ್ಯವಿಷಯ ಎಂಬುದು ನೋಡುಗರ ಅರಿವಿಗೆ ಸಿಲುಕಿದರೆ ಸಂತೋಷವೇ.

ಈ ಗಾತ್ರ ವೃಷಭ ಮೂರ್ತಿಯನ್ನು ಸ್ವಾಮಿಗಳು ದೇವಾಲಯದಲ್ಲಿ ನಿರ್ಮಿಸಿ ಪ್ರತಿಷ್ಠಿಸಬೇಕೆಂಬುದಾಗಿ ಮೊದಲೇ ಚಿಂತಿಸಿ ತೀರ್ಮಾನಿಸಿದ್ದರು. ವೃಷಭದ ಆಕಾರವು ಬೃಹತ್ತಾಗಿದ್ದುದರಿಂದ ಗಣಿಯಿಂದ ಆ ಗಾತ್ರದ ಕಲ್ಲು ಹೊರಕ್ಕೆ ತೆಗೆಸಿ ಮೈಸೂರಿಗೆ ಸಾಗಿಸುವುದೇ ತುಂಬಾ ಕಷ್ಟದ ಕೆಲಸವಾಗಿತ್ತು. ಆದ್ದರಿಂದ ದೇವಸ್ಥಾನದ ಪ್ರಾರಂಭದ ಕಾಲದಿಂದ



ಚಿತ್ರ ೫. ೧೭ : ವೃಷಭ ವಾಹನ (ಒಂದು ಪಾರ್ಶ್ವ)


ಪ್ರಯತ್ನಿಸಿದರೂ ಆ ಗಾತ್ರದ ಕಲ್ಲು ತರುವುದು ಸಾಧ್ಯವಾಗಲಿಲ್ಲ. ಸ್ವಾಮಿಗಳು ಮೊದಲು ಈ ಬಗ್ಗೆ ಚಿಂತಿತರಾಗಲಿಲ್ಲ. ಕ್ರಮಕ್ರಮವಾಗಿ ಅವರ ಆರೋಗ್ಯ ಕುಸಿಯಿತು. ಇದರಿಂದ ಆತಂಕಿತರಾದರು. 'ಮೊದಲು ಕಲ್ಲು ತಂದು ಬಿಡು' ಎಂದು ಸ್ಥಪತಿಗಳ ಮೇಲೆ ಒತ್ತಡ ಹೇರತೊಡಗಿದರು. ನಂತರ 'ಕಲ್ಲು ಸಿಗಲಿಲ್ಲ ಎಂದು ಸಣ್ಣ ಕಲ್ಲಿನಲ್ಲಿಯೇ ಬಸವಣ್ಣನನ್ನು ಮಾಡಿ ಮುಗಿಸಿ ಬಿಡುತ್ತೀಯೆ!' ಎಂದು ಸ್ಥಪತಿಗಳಿಗೇ ಹೇಳತೊಡಗಿದರು.

ನಿಜಕ್ಕೂ ಆ ಕಾಲದಲ್ಲಿ ಆಳವಾಗಿರುತ್ತಿದ್ದ ಕಲ್ಲಿನ ಗಣಿಯಿಂದ ಭಾರಿಯಾಗಿರುತ್ತಿದ್ದ ಕಲ್ಲನ್ನು ಹೊರಕ್ಕೆ ತರುವುದು ಸಾಮಾನ್ಯವಾಗಿರಲಿಲ್ಲ. ಕಲ್ಲನ್ನು ಹೊರಕ್ಕೆ ತರಲು ಆನೆಗಳ ಸಹಾಯ ಬೇಕಾಗುತ್ತಿತ್ತು. ಪ್ರಸ್ತುತದ ಕಲ್ಲನ್ನು ೨೫ ಅಡಿ ಆಳದ ಗಣಿಯಿಂದ ಮೇಲಕ್ಕೆ ಆನೆಗಳಿಂದ ಎಳೆಸಿ ಮೇಲಕ್ಕೆ ತಂದದ್ದು. ಇದಕ್ಕಾಗಿ ೧೯೫೦ರಲ್ಲಿ ಬಹು ಪ್ರಯಾಸ ಮತ್ತು ವೆಚ್ಚದ ತರುವಾಯ ಸೂಕ್ತವಾದ ಕಲ್ಲನ್ನು ತಂದು ದೇವಾಲಯದ ನಿರ್ಮಾಣಸ್ಥಳದಲ್ಲಿ ನಾಗಲಿಂಗ ಸ್ಥಪತಿಗಳು ಇರಿಸಿದರು. ಇದನ್ನು ಕಂಡ ನಂತರವೇ ಸ್ವಾಮಿಗಳಿಗೆ ತೃಪ್ತಿಯಾದದ್ದು. 'ಇನ್ನು ವೃಷಭವನ್ನು ಯಾವಾಗಲಾದರೂ ಮಾಡು. ಪರವಾಗಿಲ್ಲ ಎಂದು ಹೇಳಿದರಂತೆ.' ವೃಷಭ ವಾಹನದ ಕೆತ್ತನೆಯ ಕೆಲಸವೇನೂ ಸುಲಭ ಸಾಧ್ಯವಾದುದಾಗಿರಲಿಲ್ಲ. ಆ ಕೆಲಸವನ್ನು ನಾಗೇಂದ್ರ ಸ್ಥಪತಿಗಳೇ ನೇರವಾಗಿ ವೃಷಭ ಮೂರ್ತಿಯನ್ನು ಕೆತ್ತುವುದನ್ನು ವಹಿಸಿಕೊಂಡರು. ಈ ಕೆಲಸವೇ ಬಹುದೀರ್ಘವಾಗಿ ನಡೆಯಿತು. ಕೆತ್ತನೆಯ ನಡೆಯುತ್ತಿದ್ದ ಸಂದರ್ಭದ ಚಿತ್ರವೊಂದನ್ನು (ಚಿತ್ರ ೫.೧೬) ಕೊಟ್ಟಿದೆ.

ಸ್ವಾಮಿಗಳು ೧೯೫೨ರ ಮೇ ೨ ರಂದು ಸಮಾಧಿಸ್ಥರಾದರು. ಕಾಮಕಾಮೇಶ್ವರಿ ದೇವಾಲಯದ ಪ್ರತಿಷ್ಠೆ ನಡೆದಿದ್ದು ೧೯೫೭ರಲ್ಲಿ. ವೃಷಭ ಮೂರ್ತಿಯನ್ನು ಮುಗಿಸಿ ಅದರ



ಚಿತ್ರ ೫. ೧೮ : ವೃಷಭ ವಾಹನದ (ಇನ್ನೊಂದು ಪಾರ್ಶ್ವ)



ಚಿತ್ರ ೫. ೧೯ : ದ್ವಾರಪಾಲಕ



ಚಿತ್ರ ೫. ೨೦ : ವೃಷಭ ವಾಹನ ಮೂರ್ತಿ

ಮೇಲೆ ದೇವನಾಗರಿಯಲ್ಲಿ ನಂದಿಯ ಮುಂಭಾಗದಲ್ಲಿ ಸಿದ್ಧಲಿಂಗಸ್ವಾಮಿಗಳ ಪುತ್ರ ನಾಗೇಂದ್ರ ಸ್ಥಪತಿ ಈ ಮೂರ್ತಿಯನ್ನು ಶಾ.ಕ. ೧೮೭೫ರಲ್ಲಿ ನಿರ್ಮಿಸಿದ್ದಾರೆ ಎಂದು ಕೆತ್ತಿದ್ದಾರೆ. ಇದರ ವಿನಾ ದೇವಸ್ಥಾನದಲ್ಲಿ ಬೇರೆ ಎಲ್ಲೂ ಶಿಲ್ಪಿಗಳ ಉಲ್ಲೇಖವಿಲ್ಲ.

ಆದರೂ ಶಿಲ್ಪಿಗಳಾಗಿ ಕೆಲಸ ಮಾಡಿರುವವರಲ್ಲಿ ವಿಷಕಂಠಾಚಾರ್, ಶಂಕರಾಚಾರ್, ಕೃಷ್ಣಾಚಾರ್, ಚನ್ನವೀರಯ್ಯ, ಸಿ. ಪರಮೇಶ್ವರಾಚಾರ್, ಪುಟ್ಟಣ್ಣಯ್ಯಾಚಾರ್, ಬಿ. ಬಸವಣ್ಣ (೧೯೫೦ರ ತನಕ) ಮುಂತಾದವರ ಹೆಸರುಗಳು ಮಾತ್ರವೇ ತಿಳಿದಿವೆ. ದೇವಾಲಯದ ದ್ವಾರದ ಇಕ್ಕೆಲಗಳಲ್ಲೂ ದ್ವಾರಪಾಲಕರಿದ್ದಾರೆ. ದ್ವಾರಪಾಲಕ ಮೂರ್ತಿಗಳು ಬಹುಮುದ್ದಾಗಿವೆ. ಶಿವಾಲಯದ ಲಾಂಛನಗಳಾದ ತ್ರಿಶೂಲ, ಡಮರುಗಳನ್ನು ಮೇಲಿನ ಹಸ್ತಗಳಲ್ಲಿ ಧರಿಸಿದ್ದಾರೆ. ಮುಂದಿನ ಬಲಹಸ್ತದಲ್ಲಿ ಅಭಯ ಮತ್ತು ಎಡಹಸ್ತದಲ್ಲಿ ಗದೆಯನ್ನು ಧರಿಸಿದ್ದಾರೆ. ಅವರ ಪಕ್ಕದಲ್ಲಿಯೇ ವೃಷಭ ಮಂಟಪದ ಸ್ತಂಭಗಳು ಎರಡು ಬಹು ಎತ್ತರವಾಗಿವೆ. ಅಡಿಯಲ್ಲಿ ಚಾಮರಧಾರಿಣಿ ಮತ್ತು ಅಲಂಕಾರ ವಿನ್ಯಾಸಗಳಿದ್ದರೆ ತುದಿಯಲ್ಲಿ ಬೋದಿಗೆ ಇದೆ. ಅವುಗಳ ಮೇಲೆ ಹೊರಭಾಗಕ್ಕೆ ಅಲಂಕಾರಿಕ ಮೂರ್ತಿಗಳಿವೆ.

ದ್ವಾರದ ಮುಂಭಾಗದ ಆಗ್ನೇಯ ದಿಕ್ಕಿನ ಮೂಲಕ ಪೂರ್ವಕ್ಕೆ ಹೆಜ್ಜೆ ಇರಿಸಿದರೆ ದೇವಕೋಷ್ಠಗಳಲ್ಲಿ ಮೂರ್ತಿಗಳ ದರ್ಶನವಾಗುತ್ತದೆ.

ಪ್ರತಿಮಾ ಕೋಷ್ಠವನ್ನು ದೇವ ಕೋಷ್ಠ ಎಂದೂ ಕರೆಯುತ್ತಾರೆ. ಹಾಗೆಂದರೆ ದೇವರ ಪ್ರತಿಮೆ ಇಡಲು ರೂಪಿತವಾಗಿರುವ ಗೂಡು ಎಂದು ಅರ್ಥ. ಈ ಗೂಡಿನ ಎರಡು ಪಾರ್ಶ್ವಗಳಲ್ಲಿ ಎರಡು ಕುಡ್ಯಸ್ಥಂಭಗಳಿವೆ. ಅವುಗಳ ಅಡಿಯಲ್ಲಿ ಪ್ರತಿಮೆಗೆ ಆಧಾರವನ್ನು ಒದಗಿಸುವ ಪದ್ಮಪೀಠ ವಿನ್ಯಾಸ ಮತ್ತು ಮುಚ್ಚಿಗೆಯೊಂದು ಸುಂದರ ವಿನ್ಯಾಸವನ್ನು ಪಡೆದುಕೊಂಡಿರುತ್ತದೆ. ಅದರ ಮೇಲೆ ವ್ಯಾಳ ಅಥವಾ ಪ್ರತಿಮೆಗಳಿರುವ ಹಾಗೂ ತುದಿಯಲ್ಲಿ ಕಲಶವನ್ನು ಪಡೆದುಕೊಂಡಿರುವ ವಿನ್ಯಾಸವಿದೆ. ಈ ವಿನ್ಯಾಸಗಳಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಅದರೊಳಗೆ ಮೂರ್ತಿಗಳನ್ನು ಸ್ಥಾಪಿಸಿದ್ದಾರೆ. ತೀರಾ ಸಮತಟ್ಟಾಗಿರುವ ಗಡಸು ಕಲ್ಲಿನ ಗೋಡೆಯನ್ನು ಹಿನ್ನೆಲೆಯಾಗಿ ಪಡೆದಿರುವ ಈ ದೇವ ಕೋಷ್ಠಗಳು ತುಂಬಾ ಸುಂದರವಾಗಿ ಕಾಣಿಸುತ್ತವೆ

ಪೂರ್ವಾಗ್ನೇಯಕ್ಕೆ ಇರುವ ಮೊದಲ ಪ್ರತಿಮಾ ಕೋಷ್ಠದಲ್ಲಿ ವೃಷಭ ವಾಹನ ಮೂರ್ತಿ ದರ್ಶನವನ್ನು ನೀಡುತ್ತಾನೆ.

ಪೂರ್ವದಿಂದ ಆಗ್ನೇಯದ ಮೂಲಕ ದೇವಾಲಯದ ಪ್ರದಕ್ಷಿಣೆಯನ್ನು ನಡೆಸಿದರೆ ದೇವಾಲಯದ ಹೊರಗೋಡೆಗಳ ಮೇಲೆ ರೂಪಿತವಾಗಿರುವ ಪ್ರತಿಮಾಕೋಷ್ಠಗಳಲ್ಲಿ ಶಿವನ ಲೀಲಾವತಾರಗಳು ಕಾಣಿಸುತ್ತವೆ. ಪ್ರತಿ ಮೂರ್ತಿಯನ್ನೂ ಶಿಲ್ಪಶಾಸ್ತ್ರ ಹೇಳುವ ಪ್ರತಿಮಾ ಲಕ್ಷಣದ ಅನ್ವಯ ಮತ್ತು ಶಾಸ್ತ್ರ ವಿಧಿಸಿರುವ ತಾಲಮಾನವನ್ನು ಅನುಸರಿಸಿ ರೂಪಿತವಾಗಿವೆ ಎಂಬುದನ್ನು ನಾವು ಮೊದಲು ತಿಳಿದಿರಬೇಕು.

ವೃಷಭ ವಾಹನ ಮೂರ್ತಿ : ನಿಂತಿರುವ ಸೊಗಸಾದ ವೃಷಭದ ಮೇಲೆ ಶಿವನು ಪಾರ್ವತಿ ಮತ್ತು ಗಣೇಶರೊಂದಿಗೆ ಕುಳಿತಿದ್ದಾನೆ. ವೃಷಭವಾಹನದ ಅಲಂಕಾರದಲ್ಲಿ ಕಡಿಮೆಯಾಗಿದ್ದರು ಶಿಲ್ಪದ ಸೊಗಸು, ಮೂಪುರದಲ್ಲಿ ವಿವರಗಳಲ್ಲಿ ಕೊರತೆಯಿಲ್ಲ. ಪಾರ್ವತಿದೇವಿ ಮೊಗ್ಗು ಹಿಡಿದರುವ ಬಲಗೈ, ಗಣಪತಿಯ ಅಂಕುಶ ಮತ್ತು ಸ್ವದಂತ ಹಿಡಿದಿರುವ ಬಲಗೈಗಳು ಮಾತ್ರವೇ ಕಾಣಿಸುತ್ತವೆ. ಆದರೆ ಶಿವನ ನಾಲ್ಕು ಕೈಗಳೂ ಕಾಣಿಸುತ್ತವೆ – ಬಲಮುಂಗೈ ಗಣಪತಿಯನ್ನು ಸೊಂಟದ ಮೇಲೆ ಹಿಡಿದಿದೆ. ಎಡ ಮುಂಗೈ ಪಾರ್ವತಿಯ ಕಂಕುಳ ಮುಖಾಂತರ ಮುಂದೆ



ಚಿತ್ರ ೫. ೨೧ : ಆಲಿಂಗನ ಚಂದ್ರಶೇಖರ ಮೂರ್ತಿ



ಚಿತ್ರ ೫. ೨೨ : ಉಮಾಮಹೇಶ್ವರ ಮೂರ್ತಿ

ಬಂದಿದ್ದು ವರದ ಮುದ್ರೆಯನ್ನು ಧರಿಸಿದೆ. ಬಹು ಚೊಕ್ಕವಾಗಿರುವ ಈ ಮೂರ್ತಿಗಳು ಸಕಲಾಭರಣಗಳಿಂದ ಅಲಂಕೃತವಾಗಿವೆ. ಬೆಳಕು ನೇರವಾಗಿ ಬಿದ್ದು ಸರಿಯುವಾಗ ನೆರಳು-ಬೆಳಕುಗಳು ಈ ಮೂರ್ತಿಯನ್ನು ಚಿತ್ತಾಕರ್ಷಕವಾಗಿ ಮಾಡುತ್ತದೆ.

ಚಂದ್ರಶೇಖರ ಮೂರ್ತಿ : ದಕ್ಷಿಣ ಆಗ್ನೇಯ ದಿಕ್ಕಿನಲ್ಲಿರುವ ಪ್ರತಿಮಾ ಕೋಷ್ಠದಲ್ಲಿ ಚಂದ್ರಶೇಖರ ಮೂರ್ತಿಯು ನಿಂತಿದ್ದಾನೆ. ದೇವಿಯು ತನ್ನ ಬಲಗೈಯಿಂದ ಶಿವನನ್ನು ಸೊಂಟದ ಮೇಲೆ ಬಳಸಿ ಹಿಡಿದಿದ್ದರೆ ಶಿವನ ತನ್ನ ಎಡಗೈಯಿಂದ ದೇವಿಯ ಸೊಂಟವನ್ನು ಬಳಸಿ ಹಿಡಿದಿದ್ದಾನೆ. ತನ್ನ ಎರಡು ಊರ್ಧ್ವ ಹಸ್ತಗಳಲ್ಲಿ ಪರಶು ಮತ್ತು ಜಿಂಕೆಗಳನ್ನು ಶಿವನು ಧರಿಸಿದ್ದರೆ ಮುಂದಿನ ಬಲಗೈಯಲ್ಲಿ ಅಭಯ ಮುದ್ರೆಯನ್ನು ಧರಿಸಿದ್ದಾನೆ. ಇದನ್ನು ಶಿಲ್ಪಶಾಸ್ತ್ರವು ಆಲಿಂಗನ ಚಂದ್ರಶೇಖರ ಮೂರ್ತಿ ಎಂದು ವರ್ಣಿಸುತ್ತದೆ. ಈ ಮೂರ್ತಿಗಳು ಸಕಲಾಭರಣ ಮತ್ತು ಅಲಂಕಾರಗಳೊಂದಿಗೆ ಹೊಯ್ಸಳ ಶೈಲಿಯಲ್ಲಿಯೇ ಇವೆ. ಈ ಮೂರ್ತಿಗಳಿಗೆ ಗಡುಸುಲ್ಲೇ ಹಿನ್ನೆಲೆ. ಸಾಧಾರಣವಾಗಿ ಹೂಬಳ್ಳಿ ವಿನ್ಯಾಸ ಅಥವಾ ಪ್ರಭಾವಳಿಯ ಪರಿವೇಶ ಇಲ್ಲ. ಆದರೂ ಸುಂದರವಾಗಿವೆ.

ಉಮಾಮಹೇಶ್ವರ ಮೂರ್ತಿ : ದಕ್ಷಿಣಭಾಗದ ದ್ವಾರವನ್ನು, ದ್ವಾರಪಾಲಕರನ್ನೂ ದಾಟಿ ಮುಂದೆ ಸಾಗಿದ ತರುವಾಯ ಉಮಾಮಹೇಶ್ವರ ಮೂರ್ತಿಯನ್ನು ದರ್ಶಿಸಬಹುದು.



ಚಿತ್ರ ೫. ೨೩ : ಮಾರ್ಕಂಡೇಯ ವರಪ್ರಸಾದ ಮೂರ್ತಿ

ಸುಖಾಸನದಲ್ಲಿ ಕುಳಿತಿರುವ ಸ್ವಾಮಿಯ ಎಡಪಾರ್ಶ್ವದ ತೊಡೆಯ ಮೇಲೆ ದೇವಿ ಕುಳಿತಿದ್ದಾಳೆ. ಬಲಹಸ್ತದಲ್ಲಿ ತಾವರೆಯ ಮೊಗ್ಗು ಹಿಡಿದು ಎಡಹಸ್ತವನ್ನು ಮಹೇಶ್ವರ ಮೊಣಕಾಲ ಮೇಲೆ ಇರಿಸಿದ್ದಾಳೆ. ದೇವಿಯ ಸೊಂಟ ಮತ್ತು ಎಡಹಸ್ತದ ಮಧ್ಯದಲ್ಲಿ ದೇವನ ಎಡಗೈ ತೂರಿಬಂದು ವರದ ಮುದ್ರೆಯನ್ನು ಧರಿಸಿದೆ. ದೇವಿಯ ಎಡತೋಳಿನ ಭುಜದ ಹಿಂಭಾಗದಲ್ಲಿ ಜಿಂಕೆಯನ್ನು ಹಿಡಿದಿರುವ ಹಸ್ತ ಕಾಣಿಸುತ್ತದೆ. ಇವರು ಕುಳಿತಿರುವ ಪೀಠದಿಂದ ಪ್ರಭಾವಳಿಯು ಇದ್ದು ಸುಂದರ ಅಲಂಕಾರವನ್ನು ಪಡೆದುಕೊಂಡಿದೆ.

ಮಾರ್ಕಂಡೇಯ ವರಪ್ರಸಾದ ಮೂರ್ತಿ : ಈ ಮೂರ್ತಿಯನ್ನು ಕಾಲಸಂಹಾರ ಮೂರ್ತಿ ಎಂದೂ ಕರೆಯವುದುಂಟು. ಈ ಪ್ರತಿಮೆಯ ಲಕ್ಷಣಗಳು ಶಿಲ್ಪಶಾಸ್ತ್ರಗಳಲ್ಲಿ ಬಹುಬಗೆಯಾಗಿ ನಿರೂಪಿತವಾಗಿವೆ. ಸಾಧಾರಣವಾಗಿ ಯಮನನ್ನು ಶಿಕ್ಷಿಸುವುದೇ ಪ್ರಧಾನವಾಗಿ ಬಿಂಬಿಸುವ ಮೂರ್ತಿಗಳೂ ಇರುವುದುಂಟು. ಆದರೆ ಈ ಮೂರ್ತಿಯಲ್ಲಿ ಬಾಲಕ ಮಾರ್ಕಂಡೇಯನು ಮುಖ್ಯವಾಗಿ ಕಾಣಿಸುತ್ತಾನೆ. ಶಿವಲಿಂಗವನ್ನು ಅಪ್ಪಿದ್ದಾನೆ. ಶಿವನು ಶಿವಲಿಂಗದಿಂದಲೇ ಪಾರ್ವತಿ ಸಮೇತನಾಗಿ ಆವಿರ್ಭವಿಸಿರುವಂತೆ ರೂಪಿತವಾಗಿದೆ. ಯಮನು ತನ್ನ ವಾಹನದೊಂದಿಗೆ ಕೈಮುಗಿದಿದ್ದಾನೆ. ಶಿವನು ಬಲಪಾರ್ಶ್ವದ ಹಸ್ತಗಳಲ್ಲಿ ಅಂಕುಶ ಮತ್ತು ಶೂಲಗಳಿವೆ. ಎಡಪಾರ್ಶ್ವದ ಮೇಲಿನ ಹಸ್ತದಲ್ಲಿ ಪಾಶ ಮುಂದಿನ ಹಸ್ತದಲ್ಲಿ ಮುಷ್ಠಿ ಮುದ್ರೆಗಳಿವೆ. ಶೂಲವನ್ನು ಯಮನ ಮೇಲೆ ಪ್ರಯೋಗಿಸಲು ಸಿದ್ಧವಾಗಿದ್ದಾನೆ. ಈ ಎಲ್ಲಾ ಮೂರ್ತಿಗಳನ್ನೂ ಪ್ರಭಾವಳಿಯ ಮುನ್ನೆಲೆಯಲ್ಲಿ ರೂಪಿಸಲಾಗಿದೆ. ಈ ಲೀಲಾವತಾರದಲ್ಲಿ ಮಾರ್ಕಂಡೇಯನನ್ನು ಹರಸುವುದೇ ಮುಖ್ಯ ಉದ್ದೇಶವಾಗಿರುವುದರಿಂದಲೇ ಮಾರ್ಕಂಡೇಯ ವರಪ್ರಸಾದ ಮೂರ್ತಿ ಎಂದು ಹೆಸರಿಸಿದ್ದಾರೆ. ಯಮನು ಕೈಮುಗಿದು ನಿಂತಿದ್ದಾನೆ. ದೇವಿಯು ಶಿವನ ಹಿಂಭಾಗದಲ್ಲಿ ನಿಂತಿದ್ದಾಳೆ. ಆದ್ದರಿಂದ ದೇವನ ಕೋಪವು ನಿಯಂತ್ರಣ ದಲ್ಲಿದೆ.

ಈ ಪ್ರತಿಮಾಕೋಷ್ಠವು ಈ ಮೂರ್ತಿಯ ವಿನ್ಯಾಸಕ್ಕೆ ತೀರಾ ಚಿಕ್ಕದು. ಆದರೂ ಸಮಗ್ರವಾಗಿ ಪ್ರತಿಮಾಲಕ್ಷಣದ ವಿವರಗಳನ್ನೆಲ್ಲಾ ಇಲ್ಲಿ ಬಿಂಬಿಸಿರುವುದು ಶಿಲ್ಪಿಯ ತಿಳಿವು, ಸಮಯಪ್ರಜ್ಞೆ ಮತ್ತು ಜಾಣ್ಮೆಯ ದ್ಯೋತಕತವಾಗಿದೆ.

ಈ ಮೂರ್ತಿಯ ಕೋಷ್ಠ ಇರುವುದು ಮುಖ ಮಂಟಪದ ನೈಋತ್ಯ ಮೂಲೆಯಲ್ಲಿ, ಈ ಗೋಡೆಯ ತರುವಾಯ ಸುಖನಾಸಿ ಪ್ರಾರಂಭವಾಗುತ್ತದೆ. ಆದ್ದರಿಂದ ಗೋಡೆಯ ಹಿಂದಕ್ಕೆ ಸರಿದಿದೆ.

ಸುಖನಾಸಿಯ ಭಾಗದಲ್ಲಿ ಒಂದೇ ದೇವಕೋಷ್ಠವಿದೆ. ತರುವಾಯದ ಗೋಡೆ ಮುಂದಕ್ಕೆ ಚಾಚಿಕೊಂಡಿದೆ. ಇದು ಗರ್ಭಗುಡಿಯ ಭಾಗವಾಗಿದ್ದು ಈ ಭಾಗದಲ್ಲಿ ಒಟ್ಟು ಮುರು ದೇವಕೋಷ್ಠಗಳಿವೆ. ಎಂದರೆ ಮುಖಮಂಟಪದಲ್ಲಿ ದಕ್ಷಿಣ ಭಾಗದ ಗೋಡೆಯಲ್ಲಿ ನಾಲ್ಕು, ಸುಖನಾಸಿಯ ಗೋಡೆಯಲಿ ಒಂದು, ಗರ್ಭಗುಡಿಯ ಗೋಡೆಯಲ್ಲಿ ಮೂರು ಹೀಗೆ ದೇವಾಲಯ ದಕ್ಷಿಣ ಪಾರ್ಶ್ವದ ಗೋಡೆಯಲ್ಲಿ ಒಟ್ಟು ಎಂಟು ಮೂರ್ತಿಗಳಿವೆ. ಇದರೊಂದಿಗೆ ದಕ್ಷಿಣ ದಿಕ್ಕಿನ ಪ್ರವೇಶದ್ವಾರ ಮತ್ತು ದ್ವಾರ ಪಾಲಕರು ಇದ್ದಾರೆ. ಸುಖನಾಸಿಯ ಉತ್ತರ ಭಾಗದ ಮೇಲೆ ಮಾತ್ರ ಪ್ರಸ್ತರದ ಅಲಂಕಾರ ಶಿಲ್ಪಗಳು ಇವೆ. ಗರ್ಭಗುಡಿಯ ಮೇಲೆ ವಿಮಾನ ಇರುವುದರಿಂದ ಅಲಂಕಾರ ಅಲ್ಲಿಗೇ ನಿಂತಿದೆ.

ವಿಘ್ನೇಶ್ವರ ವರಪ್ರಸಾದ ಮೂರ್ತಿ : ವಿಘ್ನೇಶ್ವರ ಸ್ವಾಮಿ ರೂಪುಗೊಂಡ ತರುವಾಯ ಹೋರಾಡಿದ್ದು ಶಿವನ ವಿರುದ್ಧವಾಗಿಯೇ ! ಅದೂ ತನ್ನ ತಾಯಿಯ ಏಕಾಂತ ರಕ್ಷಣೆಗಾಗಿ. ಇದರಿಂದ ಬಾಲವಿಘ್ನೇಶ ತನ್ನ ತಲೆಯನ್ನು ಕಳೆದುಕೊಂಡು ಆನೆಯ ತಲೆಯನ್ನು ಪಡೆದುಕೊಳ್ಳಬೇಕಯಿತು. ಈ ರೀತಿ ವಿನಾಯಕನಿಗೆ ಶಿವನ ವರಪ್ರಸಾದ ಸಿಕ್ಕಿದ್ದನ್ನು ತಿಳಿಸುವ ಲೀಲಾವತಾರ ಇದು. ಸುಖಾಸನದಲ್ಲಿ ಮಂಡಿಸಿರುವ ಶಿವನ ಬಲಪಾದದ ಬಳಿ ವಿನಾಯಕ ಕೈಮುಗಿದು ಕುಳಿತಿದ್ದಾನೆ. ಶಿವನು ನಾಲ್ಕು ಹಸ್ತಗಳಲ್ಲಿ ಜಿಂಕೆ–ಅಂಕುಶ–ಅಭಯ–ವರದ ಮುದ್ರೆಗಳನ್ನು ಧರಿಸಿದ್ದಾನೆ.

ಕಾಮ ಸಂಹಾರ ಮೂರ್ತಿ : ಮಾರ್ಕಂಡೇಯ ವರಪ್ರಸಾದ ಮೂರ್ತಿಗೆ ಎದುರಾಗಿ ದಕ್ಷಿಣದ ಕಡೆಗೆ ಮುಖ ಮಾಡಿರುವ ಗೋಡೆಯಲ್ಲಿ ಈ ಮೂರ್ತಿ ಇದೆ. ಎಂದರೆ ಗರ್ಭಗುಡಿಯ ಆಗ್ನೇಯ ಅಂಚಿನ ಹೊರಗೋಡೆ ಇದು. ನಂತರದಲ್ಲಿ ಈ ಗೋಡೆ ತಿರುವು ಪಡೆದು ಗರ್ಭಗುಡಿಯ ದಕ್ಷಿಣ ದಿಕ್ಕಿನ ಗೋಡೆಯಾಗುತ್ತದೆ. ಸ್ಕಂದನ ಜನನಕ್ಕೆ ಹಿನ್ನೆಲೆಯಾಗಿರುವ ಈ ಪ್ರಸಂಗವು ಕವಿಗಳಿಗೆ ಪ್ರಿಯವಾಗಿರುವಂತೆಯೇ ಶಿಲ್ಪಿಗಳಿಗೂ ಪ್ರಿಯವಾಗಿರುವಂತಹುದು. ಶಿವನ ಲೀಲಾವತಾರಗಳಲ್ಲಿ ಒಂದಾಗಿ ಪರಿಗಣಿತವಾಗಿದೆ. ಶಿವನು ಸುಖಾಸನದಲ್ಲಿ ಮಂಡಿಸಿದ್ದಾನೆ. ಪ್ರಭಾವಳಿಯಿಂದ ಶೋಭಾಯಮಾನನಾಗಿದ್ದಾನೆ. ಮನ್ಮಥನನ್ನು ಪೀಠದ ಪಾದಭಾಗದಲ್ಲಿ ಗಿಣಿಯ ವಾಹನದೊಂದಿಗೆ ಚಿಕ್ಕದಾಗಿ ರೂಪಿತನಾಗಿರುವ ಕಾಮ ಭಸ್ಮವಾಗಿದ್ದಾನೆ ಎಂಬುದು ತಿಳಿಯಲು ಅತ್ಯಂತ ಕಿರಿಯದಾಗಿ ಕಾಣಿಸುತ್ತಿದ್ದಾನೆ.

ಅರ್ಧನಾರೀಶ್ವರ ಮೂರ್ತಿ : ಗರ್ಭಗುಡಿಯ ದಕ್ಷಿಣ ಗೋಡೆಯ ಹೊರಭಾಗದ ಕೋಷ್ಠಕದಲ್ಲಿರುವ ಈ ಮೂರ್ತಿ ಬಹು ಪ್ರಖ್ಯಾತವಾದದ್ದು. ಶಿವ – ಪಾರ್ವತಿಯರು ಇಬ್ಬರೂ



ಚಿತ್ರ ೫. ೨೪ : ವಿಘ್ನೇಶ್ವರ ವರಪ್ರಸಾದ ಮೂರ್ತಿ



ಚಿತ್ರ ೫. ೨೫ : ಕಾಮ ಸಂಹಾರ ಮೂರ್ತಿ ಮೂರ್ತಿ



ಚಿತ್ರ ೫. ೨೬ : ಅರ್ಧನಾರೀಶ್ವರ ಮೂರ್ತಿ



ಚಿತ್ರ ೫. ೨೭ : ಭಿಕ್ಷಾಟನಾ ಮೂರ್ತಿ



ಚಿತ್ರ ೫. ೨೮ : ಏಕಪಾದ ಮೂರ್ತಿ

ಸೇರಿ ಒಂದೇ ಆಗಿರುವವರು ಎಂಬುದನ್ನು ಬಿಂಬಿಸುತ್ತದೆ. ಶೈವಪುರಾಣಗಳಲ್ಲಿ ಶಿಲ್ಪಶಾಸ್ತ್ರಗಳಲ್ಲಿ ಈ ಬಗ್ಗೆ ಅನೇಕ ವಿವರಗಳು ಲಭಿಸುತ್ತವೆ. ಪ್ರತಿಮಾ ರೂಪದಲ್ಲಿ ಇದು ಕಾಶ್ಮೀರಿ ಶೈವ ಧರ್ಮಕ್ಕೆ ವ್ಯಾಖ್ಯಾನ ನೀಡುವಷ್ಟು ಗಹನವಾದ ಆಧ್ಯಾತ್ಮವನ್ನು ಗರ್ಭೀಕರಿಸಿಕೊಂಡಿರುವ ಮೂರ್ತಿ.

ವಾಮಭಾಗ ದೇವಿಭಾಗವಾಗಿದ್ದು ಆ ಕೈಗಳಲ್ಲಿ ಕಮಲದ ಮೊಗ್ಗು ಮತ್ತು ವರದ ಮುದ್ರೆ ಇದೆ. ದೇವಿಯ ಉಡುಗೆಯು ಒಪ್ಪವಾಗಿದೆ. ದಕ್ಷಿಣಭಾಗದಲ್ಲಿ ಶಿವನು ಚರ್ಮಾಂಬರಧಾರಿಯಾಗಿ ಕೊರಳಲ್ಲಿ ಸರ್ಪವನ್ನು ಧರಿಸಿದ್ದಾನೆ. ಕಟಿಬಂಧ ಮತ್ತು ಅಲಂಕಾರಗಳಿವೆ. ಈ ಮೂರ್ತಿಗೆ ಪ್ರಭಾವಳಿ ಮತ್ತು ವೃಷಭಗಳು ಇಲ್ಲದೆಯೇ ಬಹು ಸುಂದರವಾಗಿದೆ.

ಭಿಕ್ಷಾಟನಾ ಮೂರ್ತಿ : ಶೈವಪುರಾಣಗಳಲ್ಲಿ ಬಹು ಪ್ರಖ್ಯಾತವಾಗಿರುವ ಪ್ರಸಂಗ ಇದು. ಎಲ್ಲಾ ಶಿವಾಲಯಗಳಲ್ಲೂ ಇರುವಂತಹ ಲೀಲಾ ಮೂರ್ತಿ. ಸ್ವಾಮಿಗಳು ಈ ಮೂರ್ತಿಯ ವರ್ಣಚಿತ್ರವೂ ಬರೆದಿದ್ದಾರೆ. ಇಲ್ಲಿ ಭಿಕ್ಷಾಟನಾ ಮೂರ್ತಿ ಅದೇ ವರ್ಣನೆಯನ್ನು ಅನುಸರಿಸಿದ್ದಾರೆ. ಗಣವು ತಲೆಯ ಮೇಲೆ ಮಾಂಸದ ಪಾತ್ರೆ ಹೊತ್ತಿದೆ. ಜಿಂಕೆಯೊಂದು ಹಿಂಗಾಲ ಮೇಲೆ ನಿಂತಿದೆ. ಹೆಗಲ ಮೇಲೆ ನವಿಲುಗರಿಯ ಕಟ್ಟು ಮತ್ತು ತ್ರಿಶೂಲವಿದೆ ಮೂರ್ತಿ ಚಲನೆಯಲ್ಲಿರುವಂತಿದೆ.

ಏಕಪಾದ ಮೂರ್ತಿ : ಶಿವನೇ ಬ್ರಹ್ಮ-ವಿಷ್ಣುಗಳ ಉದ್ಭವಕ್ಕೆ ಆಧಾರ ಎಂಬುದನ್ನು ಬಿಂಬಿಸುವ ಲೀಲಾ ಮೂರ್ತಿ. ಏಕಪಾದ ಚತುರ್ಭುಜನಾಗಿರುವ ಶಿವ ಮೂರ್ತಿಯ ಪಾರ್ಶ್ವದಿಂದ ಬ್ರಹ್ಮ

ಮತ್ತು ವಿಷ್ಣುಗಳು ಆವಿರ್ಭಸಿ ಬಂದಿರುವುದನ್ನು ಈ ಮೂರ್ತಿಯು ಬಿಂಬಿಸುತ್ತದೆ. ಬ್ರಹ್ಮ ಮತ್ತು ವಿಷ್ಣು ಇಬ್ಬರು ಶಿವನ ಭುಜಗಳನ್ನು ಆಶ್ರಯಿಸಿ ಕುಳಿತಿದ್ದಾರೆ.

ಮಹಾಲಿಂಗೋದ್ಭವ ಮೂರ್ತಿ : ಶೈವಪುರಾಣಗಳಲ್ಲಿ ಹೇಳಿರುವ ಶಿವನ ಲೀಲಾವತಾರ ಇದು. ಅತ್ಯಂತ ಬಹುಜನಪ್ರಿಯವಾದದ್ದು. ವಿಷ್ಣು-ಬ್ರಹ್ಮರು ಪರಸ್ಪರ ತಾವೇ ಶ್ರೇಷ್ಠರೆಂದು ವಾಗ್ವಾದ ನಡೆಸುತ್ತಿರುವಾಗ ಇದ್ದಕ್ಕಿಂದ್ದಂತೆಯೇ ಮೂರು ಲೋಕಗಳನ್ನೂ ಆವರಿಸಿರುವ ಒಂದು ಅಗ್ನಿಸ್ತಂಭ ಕಾಣಿಸಿಕೊಂಡಿತು. ಅದರಲ್ಲಿ ಪಾದ – ತಲೆಯ ತುದಿ ಕಾಣಿಸದಂತಹ ಶಿವಮೂರ್ತಿ ಕಾಣಿಸಿಕೊಂಡ. ಈ ಮೂರ್ತಿಯ ಆದಿ – ಅಂತ್ಯ ಕಂಡರೆ ತಮ್ಮ ಹಿರಿಯತನ ಖಚಿತವಾಗುತ್ತದೆ. ಎಂದು ತೀರ್ಮಾನಿಸಿ ವಿಷ್ಣುವು ವರಾಹದ ರೂಪದಲ್ಲಿ ಭೂಮಿಯನ್ನು ಕೊರೆದು ಪಾತಳ ಪ್ರವೇಶಿಸಲು ಪ್ರಯತ್ನಿಸಿದ. ಬ್ರಹ್ಮನು ಹಂಸರೂಪದಲ್ಲಿ ಆಕಾಶದಲ್ಲಿ ಹಾರಿ ಸ್ತಂಭಮೂರ್ತಿಯ ತುದಿಯನ್ನು ಕಾಣಲು ಮೇಲೇರಿದ.

ಪ್ರಸ್ತುತ ಮೂರ್ತಿ ಇದನ್ನು ಚಿತ್ರಿಸುತ್ತದೆ. ಲಿಂಗಾಕಾರದ ಮಧ್ಯೆ ಮೂರ್ತಿ ಕಾಣಿಸುವ ಭಾಗದ ಸುತ್ತಲೂ ಅಗ್ನಿಶಿಖೆಗಳನ್ನು ರೂಪಿಸಿ ಇದು ಅಗ್ನಿಸ್ಕಂಭ ಎಂಬುದನ್ನು ಖಚಿತಪಡಿಸಿದ್ದಾರೆ.

ಗರ್ಭಗುಡಿಯ ಪೂರ್ವದ ಗೋಡೆಯ ಹೊರಭಾಗವಾಗಿರುವ ಈ ಗೋಡೆಯಲ್ಲಿ ಲಿಂಗೋದ್ಭವ ಮೂರ್ತಿಯನ್ನು ರೂಪಿಸಿರುವುದರೊಂದಿಗೆ, ಅರ್ಧನಾರೀಶ್ವರ, ಏಕಪಾದಮೂರ್ತಿ, ಹರಿಹರೇಶ್ವರ, ಚಕ್ರದಾನ ಮೂರ್ತಿಗಳನ್ನು ಗರ್ಭಾಲಯ ಹೊರ ಗೋಡೆಗಳಲ್ಲಿ ರೂಪಿಸಿ ಶಿವ ಪಾರಮ್ಯವನ್ನು ಶಿವ-ಶಕ್ತಿಯರ ಐಕ್ಯತೆಯನ್ನು ಬಿಂಬಿಸಿ ಈ ಪ್ರತಿಮಾ ಕಲ್ಪಕ್ಕೆ ಸಿರಿವಂತಿಕೆಯನ್ನು ಮೂಡಿಸಿದ್ದಾರೆ.



ಚಿತ್ರ ೫. ೨೯ : ಮಹಾಲಿಂಗೋದ್ಭವ ಮೂರ್ತಿ

ಚಂಡಿಕೇಶ್ವರ ವರಪ್ರಸಾದ ಮೂರ್ತಿ : ಶಿವಭಕ್ತರಲ್ಲಿ ಚಂಡಿಕೇಶ್ವರ ಅಥವಾ ಚಂಡೇಶ ಬಹು ಪ್ರಖ್ಯಾತನಾದವನು. ಈತನು ಚೋಳ ರಾಜ್ಯದ ಸೈನಾಲೂರ್ ಬಳಿಯ ಹಳ್ಳಿಯವನು. ಇವನ ಮೊದಲ ಹೆಸರು ವಿಚಾರ ಶರ್ಮ. ತಂದೆ ಯಜ್ಞೇಶ್ವರ ಶರ್ಮ. ಬಾಲ್ಯದಿಂದಲೂ ಶಿವಭಕ್ತನಾಗಿದ್ದವನು. ಹಳ್ಳಿಯವನೊಬ್ಬ ತನ್ನ ಹೊಲದಲ್ಲಿ ಮೇಯುತ್ತಿದ್ದ ಹಸುವನ್ನು ಬಡಿಯುತ್ತಿದ್ದುದನ್ನು ಕಂಡು ತಡೆದ. ಈ ರೀತಿ ತಪ್ಪಾಗದಂತೆ ತಾನೇ ಆ ಹಸುಗಳನ್ನು ಹಳ್ಳಿಯಿಂದ ಹೊರಕ್ಕೆ ಕರೆದೊಯ್ದು ಮೇಯಿಸಿ ಹಿಂದಕ್ಕೆ ಕರೆತರುತ್ತಿದ್ದ. ಇದರಿಂದ ಆ ಹಸುಗಳು ಇಮ್ಮಡಿಯಾಗಿ ಹಾಲು ಕರೆಯಲು ಪ್ರಾರಂಭಿಸಿದವು. ವಿಚಾರ ಶರ್ಮ ಹಸುಗಳು ಕರೆಯುತ್ತಿದ್ದ ವಿಶೇಷ ಹಾಲನ್ನು ಒಂದು ಮಡಿಕೆಯಲ್ಲಿ ಸಂಗ್ರಹಿಸಿ ಅದನ್ನು ನದಿಯ ತೀರದಲ್ಲಿದ್ದ ಮರಳಿನಲ್ಲಿ ಸುರಿದು ಶಿವಲಿಂಗವನ್ನು ಮಾಡಿ ಪೂಜಿಸಲು ಪ್ರಾರಂಭಿಸಿದ. ವಿಚಾರ ಶರ್ಮನಿಂದ ಗೋವುಗಳನ್ನು ಕಾಯುವ ಕೆಲಸವನ್ನು ಕಳೆದುಕೊಂಡಿದ್ದ ಬಾಲಕರು ವಿಚಾರ ಶರ್ಮನು ಹಸುಗಳಿಂದ ಹಾಲು ಕದ್ದು ತಾನು ತನ್ನ ಸ್ನೇಹಿತರು ಕುಡಿದು ಉಳಿದದ್ದನ್ನು ಮರಳಿನಲ್ಲಿ ಸುರಿಯುತ್ತಾನೆ ಎಂದು ಚಾಡಿ ಹೇಳಿದರು. ಹಳ್ಳಿಗರೂ ಇದನ್ನು ಕಂಡರು. ಕೊನೆಗೆ ವಿಚಾರ ಶರ್ಮನ ತಂದೆಗೆ ಈ ದೂರು ಮುಟ್ಟಿಸಿದರು. ತಂದೆಯೂ ಇದನ್ನು ನೋಡಿದ. ಮಗ ಮರಳಿನ ಗುಪ್ಪೆಗಳ ಮೇಲೆ ಹಾಲು ಸುರಿಯುತ್ತಿದ್ದಾನೆ. ತಂದೆಯೇ ಹೋಗಿ ಮಗನ ಮುಂದೆ ನಿಂತ. ಆದರೂ ಅವನ ಈ ಚೇಷ್ಟೆ ನಿಲ್ಲಲಿಲ್ಲ. ಮಗನು ಹೀಗೇಕೆ ಮಾಡುತ್ತಿದ್ದಾನೆ ಎಂಬುದನ್ನು ತಂದೆ ವಿಚಾರಿಸಲೂ ಇಲ್ಲ. ತೀವ್ರ ಕೋಪಗೊಂಡು ಆ ಗುಪ್ಪೆಗಳನ್ನು ಕಾಲಿನಿಂದ ಒದ್ದು ಧ್ವಂಸ ಮಾಡಿದ. ಭಕ್ತಿಯಲ್ಲಿ ಐಕ್ಯನಾಗಿದ್ದ ವಿಚಾರ ಶರ್ಮನಿಗೆ ಇದು ಮಹಾಪಾಪವಾಗಿ ಕಾಣಿಸಿತು. ಶಿವಲಿಂಗವನ್ನು ಒದೆಯುವುದುಂಟೇ? ಕೂಡಲೇ ಶಿವಲಿಂಗವನ್ನು ಒದ್ದ ಕಾಲನ್ನು ಕತ್ತರಿಸಿಯೇ ಬಿಟ್ಟ.

ಚಂಡೇಶನು ನಮಸ್ಕರಿಸುತ್ತಿದ್ದಾನೆ. ಶಿವನು ವರದ-ಅಭಯ ಮುದ್ರೆಗಳನ್ನು ಡಮರುಗ-ತ್ರಿಶೂಲಗಳನ್ನು ಧರಿಸಿದ್ದಾರೆ. ಇಲ್ಲೂ ಪ್ರಭಾವಳಿ ಇತ್ಯಾದಿಗಳಿಲ್ಲ.



ಚಿತ್ರ ೫. ೨೦ : ಚಂಡೀಕೇಶ್ವರ ವರಪ್ರಸಾದ ಮೂರ್ತಿ



ಚಿತ್ರ ೫. ೨೧ : ಹರಿಹರೇಶ್ವರ ಮೂರ್ತಿ



ಚಿತ್ರ ೫. ೨೨ : ಚಕ್ರದಾನ ಮೂರ್ತಿ

ವಿಚಾರಶರ್ಮನ ಈ ಭಕ್ತಿಯ ತೀವ್ರತೆಯನ್ನು ಮೆಚ್ಚಿದ ಶಿವನು ದೇವಿಯೊಂದಿಗೆ ಪ್ರತ್ಯಕ್ಷನಾಗಿ ಅವನ ತಲೆಗೆ ಹೂಮಾಲೆಯನ್ನು ಸುತ್ತಿದ. ತನ್ನ ಅಂತರಂಗದ ಭಕ್ತರಲ್ಲಿ ಒಬ್ಬನಾಗಿಸಿಕೊಂಡ. ಚಂಡೇಶನೆಂದು ನಾಮಕರಣ ಮಾಡಿ ಶಿವ ಗಣಗಳಿಗೆ ನಾಯಕನನ್ನಾಗಿ ನೇಮಕ ಮಾಡಿದ. ಶಿವಾಲಯದಲ್ಲಿ ಚಂಡೇಶನಿಗೆ (ಚಂಡಿಕೇಶ್ವರನಿಗೆ) ಕಡ್ಡಾಯವಾಗಿ ಸ್ಥಾನ ಕಲ್ಪಿಸಬೇಕೆಂಬುದಾಗಿ ನಿಯಮವನ್ನೂ ಹೇಳಿದ. ಕಾಮಕಾಮೇಶ್ವರಿ ದೇವಾಲಯದಲ್ಲಿ ನಾಳದ ತರುವಾಗಿ ಪುಟ್ಟಗುಡಿಯೊಂದು ಹೊರಗೆ ಚಂಡೇಶನಿಗಾಗಿ ನಿರ್ಮಿಸಿರುವುದನ್ನು ನಾವು ಗಮನಿಸಬಹುದು.

ಹರಿಹರೇಶ್ವರ ಮೂರ್ತಿ : ಹರಿ-ಹರರಲ್ಲಿ ಭೇದಗಳನ್ನು ಎಣಿಸಬಾರದೆಂದು ಈ ಮೂರ್ತಿಯು ರೂಪಿತವಾಗಿದೆ. ಶಿವನ ಈ ಅವತಾರವು ವಾಮನ ಪುರಾಣದಲ್ಲಿ ವಿವರಿತವಾಗಿದೆ. ವಿಷ್ಣುವು ಶಿವನ ಎಡಪಾರ್ಶ್ವದಲ್ಲಿರುತ್ತಾನೆ. ಶಿಲ್ಪಶಾಸ್ತ್ರದ ಮೂರ್ತಿ ಲಕ್ಷಣದಲ್ಲಿ ಅರ್ಧನಾರೀಶ್ವರ ಮೂರ್ತಿಯಲ್ಲಿರುವ ದೇವೀ ಭಾಗದಂತೆಯೇ ಹರಿ ಭಾಗವನ್ನು ವಿನ್ಯಾಸ ಮಾಡಬೇಕೆಂಬುದು ವಿಶೇಷವಾಗಿ ಗಮನಿಸಬೇಕಾಗಿರುವ ವಿವರ. ಎಡಪಾರ್ಶ್ವದಲ್ಲಿ ಶಂಖ-ಚಕ್ರಗಳನ್ನು ದೇವ ಧರಿಸಿರುತ್ತಾನೆ. ಎತ್ತರದಲ್ಲಿ ಅರ್ಧಭಾಗ ಶಿವನ ಅಲಂಕಾರ, ಉಳಿದರ್ಧ ವಿಷ್ಣುವಿನ ಅಲಂಕಾರವಿರುತ್ತದೆ. ಬಲಭಾಗದ ಹಸ್ತಗಳಲ್ಲಿ ತ್ರಿಶೂಲ – ಡಮರುಗ, ಎಡಭಾಗದ ಎರಡು ಹಸ್ತಗಳಲ್ಲಿ ಶಂಖ-ಚಕ್ರಗಳಿವೆ.

ಚಕ್ರದಾನ ಮೂರ್ತಿ : ವಿಷ್ಣುವಿಗೆ ಚಕ್ರವನ್ನು ಶಿವನು ಕೊಟ್ಟ ಎಂಬುದನ್ನು ಆಧಾರವನ್ನಾಗಿ ಮಾಡಿಕೊಂಡಿರುವ ಲೀಲಾಮೂರ್ತಿ ಇದು. ಅಸುರರೊಂದಿಗೆ ಹೋರಾಡುತ್ತಿದ್ದ ವಿಷ್ಣು ಅವರನ್ನು ಜಯಿಸಲಾರದೆ ಶಿವನನ್ನು ಕುರಿತು ತಪಸ್ಸು ಮಾಡಿದ. ನಿತ್ಯವೂ ಒಂದು ಸಾವಿರ ತಾವರೆಗಳನ್ನು

ಸಂಗ್ರಹಿಸಿ ತಂದು ಶಿವಾರ್ಚನೆಯನ್ನು ಮಾಡುತ್ತಿದ್ದ. ಒಮ್ಮೆ ವಿಷ್ಣುವಿನ ಭಕ್ತಿಯನ್ನು ಪರೀಕ್ಷಿಸಲೆಂದು ಶಿವನು ಆ ಸಾವಿರ ತಾವರೆಗಳಲ್ಲಿ ಒಂದನ್ನು ಇಲ್ಲದಂತೆ ಮಾಡಿದ. ವಿಷ್ಣು ಪೂಜೆಯನ್ನು ಪ್ರಾರಂಭಿಸಿದ. ಸಹಸ್ರನಾಮಾರ್ಚನೆಯಲ್ಲಿ ಕೊನೆಯಲ್ಲಿ ಒಂದು ಹೂ ಕಡಿಮೆಯಾಯಿತು. ಕಮಲ ಲೋಚನನೆಂದು ಹೆಸರಾದ ವಿಷ್ಣುವು ಕೂಡಲೇ ತನ್ನ ಕಣ್ಣನ್ನೇ ಕಿತ್ತು ಶಿವಲಿಂಗಕ್ಕೆ ಅರ್ಪಿಸಿದ. ಸುಪ್ರೀತನಾದ ಶಿವನು ಪ್ರತ್ಯಕ್ಷನಾದ. ವಿಷ್ಣುವಿನ ಕೋರಿಕೆಯಂತೆ ಚಕ್ರವನ್ನು ಕೊಟ್ಟು ಅಸುರರನ್ನು ಜಯಿಸುವಂತೆ ಮಾಡಿದ. ಶಿವನಿಂದ ವಿಷ್ಣು ಚಕ್ರವನ್ನು ಪಡೆಯುತ್ತಿರುವಂತೆ ಮೂರ್ತಿ ಇದೆ. ಇಲ್ಲೂ ಪ್ರಭಾವಳಿಯ ಅಲಂಕಾರವಿಲ್ಲ.

ಸೋಮಾಸ್ಕಂದ ಮೂರ್ತಿ : ಶಿವ ಪಾರ್ವತಿ ಇಬ್ಬರೂ ಸ್ಕಂದನೊಂದಿಗೆ ಇರುವುದೇ ಸೋಮಾಸ್ಕಂದ ಮೂರ್ತಿಯ ಪ್ರತಿಮೆ. ಸುಖಾಸನದಲ್ಲಿರುವ ಶಿವನ ಎಡ ತೊಡೆಯ ಮೇಲೆ ಪಾರ್ವತಿದೇವಿ ಕುಳಿತಿದ್ದಾಳೆ. ಅದೇ ರೀತಿಯಲ್ಲಿ ಬಲ ತೊಡೆಯ ಮೇಲೆ ಕುಮಾರಸ್ವಾಮಿ ಕುಳಿತಿದ್ದಾನೆ. ಈ ಮೂರ್ತಿಗೆ ಪ್ರಭಾವಳಿಯ ಅಲಂಕಾರವಿದೆ. ಶಿವಾಲಯಗಳಲ್ಲಿ ಈ ಮೂರ್ತಿ ಇದ್ದೇ ಇರುತ್ತದೆ. ಕಾಮಸಂಹಾರ ಮೂರ್ತಿಯಿಂದ ಪ್ರಾರಂಭವಾದ ಗರ್ಭಗುಡಿಯ ಗೋಡೆಗಳ ಹೊರಭಾಗದ ಮೂರ್ತಿಗಳು ಸೋಮಾಸ್ಕಂದ ಮೂರ್ತಿಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಮಧ್ಯಭಾಗದಲ್ಲಿ ಲಿಂಗೋದ್ಭವ ಮೂರ್ತಿ ಇದ್ದು ಎರಡೂ ಪಾರ್ಶ್ವಗಳಲ್ಲಿ ನಾಲ್ಕು-ನಾಲ್ಕು ಪ್ರತಿಮೆಗಳು ಇವೆ ಎಂದರೆ ಗರ್ಭಗುಡಿಯ ಹೊರಗೋಡೆಗಳ ಮೇಲೆ ಒಂಬತ್ತು ಪ್ರತಿಮೆಗಳಿವೆ.

ಗಜಾಸುರ ಮರ್ದನ ಮೂರ್ತಿ : ಆನೆಯ ರೂಪಧರಿಸಿ ಶಿವಭಕ್ತರನ್ನು ಹಿಂಸಿಸುತ್ತಿದ್ದವನನ್ನು ಶಿವನು ಲಿಂಗದಿಂದಲೇ ಹೊರಬಂದು ಕೊಂದ ಎಂದು ಹೇಳಿರುವುದು ಕೂರ್ಮಪುರಾಣದಲ್ಲಿದೆ. ಕಾಶಿಯಲ್ಲಿರುವ ಕೃತ್ತಿವಾಸೇಶ್ವರ ಲಿಂಗವೇ ಅದು ಎಂಬ ವಿವರಣೆಯೂ ಇದೆ. ಇದಲ್ಲದೆ ಬೇರೆಯ ತೆರನಾದ ವಿವರಣೆಗಳೂ ಈ ಲೀಲಾವತಾರಕ್ಕೆ ಉಂಟು. ಆನೆಯನ್ನು ಕೊಂದ ನಂತರ ಅದರ ಚರ್ಮವನ್ನು ಧರಿಸಿದ್ದರಿಂದ ಶಿವನು ಗಜಚರ್ಮಾಂಬರಧಾರಿ ಎಂಬುದಾಗಿ ಪ್ರಖ್ಯಾತನಾಗಿದ್ದಾನೆ. ಈ ಮೂರ್ತಿಯ ವಿನ್ಯಾಸ ಬೇಲೂರು ದೇವಾಲಯದಲ್ಲಿದೆ. ಅದು ಪ್ರಖ್ಯಾತವೂ ಹೌದು. ಆದರೆ ಇಲ್ಲಿಯ ವಿನ್ಯಾಸ ತೀರ ಬೇರೆಯದಾಗಿದೆ. ಶಿವನಿಗೆ ಕೇವಲ ನಾಲ್ಕು ತೋಳುಗಳು ಮಾತ್ರವೇ ಇವೆ. ಬಲಪಾರ್ಶ್ವದಲ್ಲಿಯ ಮೇಲಿನ ಕೈಯಲ್ಲಿ ದಂತ, ಮುಂದಿನ ಕೈಯಲ್ಲಿ ಗದೆ, ಎಡಪಾರ್ಶ್ವದ ಕೈಯಲ್ಲಿ ಆನೆಯ ಚರ್ಮದ ಭಾಗ, ಮುಂಗೈಯಲ್ಲಿ ಕಪಾಲವನ್ನು ಧರಿಸಿ ಆನೆಯ ತಲೆಯ ಮೇಲೆ ನಿಂತಿದ್ದಾನೆ. ಶಿವನ ಹಿಂಭಾಗದಲ್ಲಿ ಸತ್ತಿರುವ ಆನೆಯ ಚರ್ಮವೇ ಹರಡಿದೆ.


ಈ ಪ್ರತಿಮಾಕೋಷ್ಠವು ಸುಖನಾಸಿಯ ಹೊರಗೋಡೆಯ ಮೇಲಿದೆ. ಎಂದರೆ ಉತ್ತರ ದಿಕ್ಕಿನ ಹೊರಗೋಡೆಯಾಗಿದೆ. ವಿಘ್ನೇಶ್ವರ ವರಪ್ರಸಾದ ಮೂರ್ತಿಯ ದಕ್ಷಿಣಕ್ಕಿದ್ದರೆ ಅದೇ ಗೋಡೆಯ ಎದುರುಗೋಡೆಯ ಹೊರಭಾಗಕ್ಕೆ ಈ ಮೂರ್ತಿ ಇದೆ.

ಇನ್ನು ಮುಂದೆ ಸುಖನಾಸಿ ಮುಂದೆ ಹರಡಿರುವ ಮುಖಮಂಟಪದ ಹೊರಗೋಡೆಗಳು ಮಧ್ಯಭಾಗದಲ್ಲಿ ಉತ್ತರ ಪ್ರವೇಶ ದ್ವಾರವಿದೆ. ಅದರ ಇಕ್ಕೆಲಗಳಲ್ಲೂ ದ್ವಾರಪಾಲಕರಿದ್ದಾರೆ. ಹಾಗೆಯೇ ದ್ವಾರದಿಂದ ಪಶ್ಚಿಮ ಭಾಗಕ್ಕೆ ಎರಡು ಪ್ರತಿಮಾಕೋಷ್ಠಗಳೂ, ಪೂರ್ವಭಾಗಕ್ಕೆ ಎರಡು ಪ್ರತಿಮಾಕೋಷ್ಠಗಳೂ ಇವೆ.


ಶಿವ ಜಲಂಧರ ಮೂರ್ತಿ : ಇದು ಮುಖಮಂಟಪದ ವಾಯುವ್ಯ ದಿಕ್ಕಿನ ಹೊರಭಾಗದ ಗೋಡೆಯಾಗಿದ್ದು ಉತ್ತರ ದಿಕ್ಕಿನ ಪ್ರವೇಶ ದ್ವಾರದ ಪಶ್ಚಿಮ ಭಾಗಕ್ಕೆ ಇದೆ. ಎಂದರೆ ಮಾರ್ಕಂಡೇಯ ವರಪ್ರಸಾದ ಮೂರ್ತಿಯ ಸಾಲಿಗೆ ನೇರವಾಗಿ ಉತ್ತರ ಪಾರ್ಶ್ವದಲ್ಲಿದೆ. ಇದು ಪುರಾಣಕತೆಯನ್ನು ಆಧರಿಸಿ ರೂಪಿತವಾಗಿರುವ ಮೂರ್ತಿ. ಶಿವನ ಲೀಲಾವತಾರಗಳಲ್ಲಿ ಒಂದು.



ಚಿತ್ರ ೫. ೩೩ : ಸೋಮಾಸ್ಕಂದ ಮೂರ್ತಿ



ಚಿತ್ರ ೫. ೩೪ : ಗಜಾಸುರ ಮರ್ದನ ಮೂರ್ತಿ



ಚಿತ್ರ ೫. ೩೫ : ವಿಷಪಾನ ಮೂರ್ತಿ

ವಿಷಪಾನ ಮೂರ್ತಿ : ದೇವ–ದಾನವರು ಕೂಡಿ ಸುಧೆಯನ್ನು ಪಡೆಯಲು ಸಾಗರ ಮಂಥನವನ್ನು ನಡೆಸಿದರೂ ದೊರೆತಿದ್ದು ಮೊದಲಿಗೆ ಹಾಲಾಹಲವೇ. ಅದನ್ನು ನಿಗ್ರಹಿಸಲು ಹಾಲಾಹಲವನ್ನು ಕುಡಿದವನು ಶಿವನೇ. ಆದ್ದರಿಂದಲೇ ನೀಲಕಂಠ, ಗರಳ ಕಂಠ, ನಂಜುಂಡ ಎಂಬ ಹೆಸರುಗಳು ಶಿವನಿಗೆ ಬಂದವು. ಆ ಪ್ರಸಂಗವೇ ಪ್ರಸ್ತುತ ಶಿಲ್ಪ. ಇದನ್ನು ಶಿಲ್ಪಶಾಸ್ತ್ರದ ಪ್ರತಿಮಾಲಕ್ಷಣದ ಅನ್ವಯ ರೂಪಿಸಿದ್ದಾರೆ.

ಶಿವನ ಬಲಹಸ್ತದಲ್ಲಿ ವಿಷದ ಬಟ್ಟಲು ಭುಜಗಳ ಎತ್ತರದಲ್ಲಿದೆ. ಉಳಿದ ಮೇಲಿನ ಎರಡು ಹಸ್ತಗಳಲ್ಲಿ ಅಂಕುಶ ಮತ್ತು ಜಿಂಕೆಗಳಿವೆ. ಎಡಹಸ್ತವು ದೇವಿಯ ಸೊಂಟವನ್ನು ಹಿಡಿದಿದೆ. ದೇವಿಯು ಶಿವನ ಮುಂದೆ ನಿಂತು ಕಂಠವನ್ನು ತನ್ನ ಬಲಗೈಯಿಂದ ಹಿಡಿದಿದ್ದಾಳೆ. ಎಡಹಸ್ತವು ಗಜಹಸ್ತವಾಗಿ ತೂಗಿಬಿದ್ದಿದೆ. ದೇವಿಯ ಆತುರ, ಆತಂಕಗಳು ಸ್ಪಷ್ಟವಾಗಿದೆ. ಶಿವನ ಮುಖವು ಶಾಂತವಾಗಿದೆ. ಶಿವನ ಮುಂದಿನ ಎಡಹಸ್ತದೇವಿಯ ಸೊಂಟವನ್ನು ಹಿಡಿದಿದೆ. ಶಿವನ ಬಲಹಸ್ತದಲ್ಲಿ ಹಾಲಾಹಲವಿದೆ.

ಉತ್ತರ ದಿಕ್ಕಿನ ಆಲಯ ಪ್ರವೇಶ ದ್ವಾರವನ್ನು ದ್ವಾರಪಾಲಕರನ್ನು ದಾಟಿ ಪೂರ್ವದಿಕ್ಕಿಗೇ ಮುಂದೆ ಸಾಗಿದರೆ ಈಶಾನ್ಯ ಮೂಲೆಯಲ್ಲಿ ಎರಡು ಪ್ರತಿಮಾಕೋಷ್ಠಗಳು ಕಾಣಿಸುತ್ತವೆ. ಅವುಗಳಲ್ಲಿ ಉತ್ತರ ಈಶಾನ್ಯಕ್ಕೆ ಇರುವ ಪ್ರತಿಮಾ ಕೋಷ್ಠದಲ್ಲಿ ಕಲ್ಯಾಣ ಸುಂದರ ಮೂರ್ತಿಯ ಶಿಲ್ಪವಿದೆ.

ಕಲ್ಯಾಣ ಸುಂದರ ಮೂರ್ತಿ : ಪ್ರತಿಮಾ ಶಿಲ್ಪದಲ್ಲಿ ಇದು ಬಹು ಜನಪ್ರಿಯವಾದ ಮತ್ತು ಬಹು ಮೂರ್ತಿಗಳನ್ನು ಒಳಗೊಂಡ ಶಿಲ್ಪ. ಆದರೆ ಇಲ್ಲಿ ರೂಪಿಸಿರುವ ಮೂರ್ತಿಗಳು ಎರಡೇ – ಶಿವ ಮತ್ತು ಪಾರ್ವತಿ. ಶಿವನ ಬಲಗೈಯಲ್ಲಿ ತನ್ನ ಬಲಗೈಯನ್ನು ಪಾರ್ವತಿ ಇರಿಸಿದ್ದಾಳೆ. ಪಾರ್ವತಿಯ ಎಡಗೈಯಲ್ಲಿ ತಾವರೆಯ ಮೊಗ್ಗು ಇದೆ. ತೋಳು ಮಾತ್ರ ಗಜಹಸ್ತನಾಗಿ ಮೊಣಕಾಲಿನ ತನಕ ಇಳಿಬಿದ್ದಿದೆ. ಶಿವನ ಮೇಲಿನ ಹಸ್ತಗಳಲ್ಲಿ ಅಂಕುಶ ಮತ್ತು ಜಿಂಕೆಗಳಿವೆ. ಅಂಕುಶವು ಭಿನ್ನಗೊಂಡಿದೆ. ಶಿವನ ಮುಂದಿನ ಎಡಹಸ್ತದಲ್ಲಿ ವರದ ಮುದ್ರೆ ಇದೆ.

ವಿವಾಹ ಸಂದರ್ಭದಲ್ಲಿ ಇರಬೇಕಾಗಿದ್ದ ಯಾರಿಗೂ ಇಲ್ಲಿ ಅವಕಾಶವಿಲ್ಲ. ಆದ್ದರಿಂದ ಬಿಟ್ಟಿದ್ದಾರೆ. ಮೂರ್ತಿಗಳು ಮಾತ್ರ ಬಹು ಸುಂದರವಾಗಿದ್ದು ವಧು-ವರರ ಸಕಲ ಅಲಂಕಾರಗಳನ್ನು ಪಡೆದುಕೊಂಡಿವೆ.

ತಾಂಡವ ಮೂರ್ತಿ : ಮಹಾದ್ವಾರದ ಮೂಲಕ ಪ್ರವೇಶಿಸುತ್ತಲೇ ನಂದಿ ಮಂಟಪದ ಬಲಗಡೆಗೆ ಈಶಾನ್ಯದಲ್ಲಿ (ಪೂರ್ವ ಈಶಾನ್ಯದಲ್ಲಿ) ನಟರಾಜನಿದ್ದಾನೆ. ಮುಂದಿನ ಬಲಗೈ ಅಭಯ ಮುದ್ರೆಯನ್ನು ಮುಂದಿನ ಎಡಗೈ ಡೋಲಾಹಸ್ತವಾಗಿದೆ. ಮೇಲಿನ ಹಸ್ತಗಳಲ್ಲಿ ಡಮರುಗ ಮತ್ತು ಅಗ್ನಿ ಧರಿಸಿರುತ್ತಾನೆ. ನಟರಾಜನ ಸುತ್ತ ಅಗ್ನಿ ಪ್ರಭಾಮಂಡಲವನ್ನು ರೂಪಿಸಿದ್ದಾರೆ.



ಚಿತ್ರ ೫. ೩೬ : ಕಲ್ಯಾಣಸುಂದರ ಮೂರ್ತಿ




ಚಿತ್ರ ೫. ೩೭ : ತಾಂಡವ ಮೂರ್ತಿ




ಚಿತ್ರ ೫. ೩೮ : ನವರಂಗದ ಎರಡು ಸ್ತಂಭಗಳು (ಉತ್ತರ ದಿಕ್ಕಿನ ಪಾರ್ಶ್ವದಲ್ಲಿ)

ಸ್ವಾಮಿಯ ಬಲಪಾದದ ಅಡಿಯಲ್ಲಿ ಅಪಸ್ಮಾರನು ಬಿದ್ದಿದ್ದಾನೆ. ಅವನ ಒಂದು ಕೈಯ್ಯಲ್ಲಿ ಸರ್ಪವಿದೆ. ನಟರಾಜನ ವಿಕೀರ್ಣ ಕೇಶವಿದ್ದರೂ ಪ್ರಧಾನವಾಗಿ ಕಾಣಿಸುವುದಿಲ್ಲ. ಶಿವನ ಮೊಗದಲ್ಲಿ ನಗುವಿದ್ದು ಲೋಕರಕ್ಷಣೆಯ ಶಾಂತಭಾವ ಬಿಂಬಿತವಾಗಿದೆ.

ಆಲಯದ ಪ್ರದಕ್ಷಿಣೆಯನ್ನು ಮುಗಿಸಿ ಪ್ರಧಾನ ದ್ವಾರದ ಮುಖಾಂತರ ದ್ವಾರಪಾಲಕರನ್ನು ದಾಟಿ ಒಳಕ್ಕೆ ಪ್ರವೇಶಿಸಿದರೆ ಒಂಬತ್ತು ಅಂಕಣಗಳಾಗಿ ವಿಭಜಿತವಾಗಿರುವ ಮುಖಮಂಟಪ ದಲ್ಲಿರುತ್ತೇವೆ. ಮಧ್ಯೆ ಬ್ರಹ್ಮ ಭಾಗದ ಅಂಕಣವನ್ನು (ನವರಂಗವನ್ನು) ನಾಲ್ಕು ಮೂಲೆಗಳಲ್ಲೂ ಬಹು ಅಲಂಕಾರವನ್ನು ಒಳಗೊಂಡಿರುವ ನಾಲ್ಕು ಸ್ತಂಭಗಳಿಂದ ಅಲಂಕೃತವಾಗಿದೆ. ಅಧಿಷ್ಠಾನದ ಮೇಲ್ತುದಿಯನ್ನು ಪ್ರತಿ ಎನ್ನುತ್ತಾರೆ. ಅದರ ಮೇಲೆ ವೇದಿ ಇರುತ್ತದೆ ಸ್ತಂಭವಿದ್ದರೆ ವೇದಿಯು ಅದರ ಅಡಿಭಾಗವಾಗಿರುತ್ತದೆ. ಈ ಸ್ತಂಭಗಳಲ್ಲಿ ವೇದಿಯನ್ನು ಸಿಂಗಲೀಕಗಳನ್ನು ಪೀಠಗಳಲ್ಲಿ ರೂಪಿಸಿದ್ದಾರೆ. ಅವು ಸ್ತಂಭಕ್ಕೆ ಆಧಾರವಾಗಿರುವಂತೆ ಚಿತ್ರಿತವಾಗಿದೆ. ನಾಲ್ಕು ಮುಖಗಳಿರುವ ಪ್ರತಿ ಸ್ತಂಭದಲ್ಲೂ ಚಿತ್ರ ಖಂಡಗಳನ್ನು ರೂಪಿಸಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮೂರ್ತಿಗಳನ್ನು ರೂಪಿಸಿ ಹದಿನಾರು ಪ್ರತಿಮೆಗಳನ್ನು ಸ್ತಂಭಗಳ ಮೇಲೆಯೇ ರೂಪಿಸಿದ್ದಾರೆ. ಒಂದರಲ್ಲಿ ಶಿವನು ನರಾಜನಾಗಿ ನರ್ತಿಸುತ್ತಿದ್ದಾನೆ. ಪಾರ್ವತಿ ಪೀಠದ ಮೇಲೆ ಕುಳಿತಿದ್ದಾಳೆ. ದ್ವಿಬಾಹು ಮೂರ್ತಿಯಾಗಿ ಬಲಹಸ್ತದಲ್ಲಿ ಕಮಲ ಮತ್ತು ಎಡಹಸ್ತದಲ್ಲಿ ಅಭಯ ಮುದ್ರೆ ಧರಿಸಿದ್ದಾಳೆ. ಚತುರ್ಮುಖ ಬ್ರಹ್ಮನು ತನ್ನ ಎರಡು ಕೈಗಳಿಂದ ತಾಳ ಹಾಕುತ್ತಿದ್ದಾನೆ. ಇನ್ನೊಂದು ಕಡೆ ವಿಷ್ಣುವು ನಿಂತು



ಚಿತ್ರ ೫. ೩೯ : ನಂದೀಶ್ವರ



ಚಿತ್ರ ೫. ೪೦ : ಸರಸ್ವತೀ



ಚಿತ್ರ ೫. ೪೧ : ಮುನೀಶ್ವರ



ಚಿತ್ರ ೫. ೪೨ : ನವರಂಗದ ಭುವನೇಶ್ವರಿಯ ಕೆತ್ತನೆಯ ವಿವರ

ಮೃದಂಗವನ್ನು ನುಡಿಸುತ್ತಿದ್ದಾನೆ. ಉಳಿದೆರಡು ಹಸ್ತಗಳಲ್ಲಿ ಶಂಖ–ಚಕ್ರಗಳನ್ನು ಧರಿಸಿದ್ದಾನೆ. ಇನ್ನೊಂದು ಭಾಗದಲ್ಲಿ ಸರಸ್ವತಿ ವೀಣೆಯನ್ನು ನುಡಿಸುತ್ತಿದ್ದಾಳೆ. ಆಕೆಯ ಉಳಿದ ಎರಡು ಹಸ್ತಗಳಲ್ಲಿ ಅಕ್ಷಮಾಲೆ ಮತ್ತು ಓಲೆಗರಿಯ ಪುಸ್ತಕಗಳಿವೆ. ಸಂಗೀತದಲ್ಲಿ ತಲ್ಲೀನಳಾಗಿರುವ ಭಾವವು ಮುಖದಲ್ಲಿ ಪ್ರಸ್ಫುಟಿತವಾಗಿದೆ. ಸಕಲಾಭರಣ ಧರಿಸಿರುವ ಈ ಮೂರ್ತಿ ಬಹು ಸುಂದರವಾಗಿದೆ. ಇನ್ನೊಂದು ಕಡೆ ನಾರದ ಮಹಾಮುನಿ ತಂಬೂರಿಯನ್ನು ಚಿಟಕೆಯನ್ನು ಹಿಡಿದಿದ್ದಾರೆ. ಶಿಖಾಧಾರಿಯಾದ ಈ ಮುನಿಯ ಶಿಖೆಯನ್ನು ತುಳಸೀಮಣಿಗಳಿಂದ ಬಂಧಿಸಿದ್ದಾರೆ. ಶಿಖೆಯ ಕೂದಲೂ ಸ್ಪಷ್ಟವಾಗಿ ಬಿಡಿಸಿದ್ದಾರೆ. ಇನ್ನೊಂದು ಕಡೆಗೆ ಕುದುರೆಯ


ಮುಖದ ತುಂಬುರರು ಇದ್ದಾರೆ. ಅವರೂ ಚಿಟಿಕೆ ತಂಬೂರಿಯನ್ನು ಹಿಡಿದಿರುತ್ತಾರೆ. ಇನ್ನೊಂದು ಕಡೆ ದೇವೇಂದ್ರನು ಕೊಳಲನ್ನು ನುಡಿಸುತ್ತಿದ್ದಾನೆ. ಮತ್ತೊಂದು ಭಾಗದಲ್ಲಿ ನಂದಿಯು ಮದ್ದಳೆಯನ್ನು ನುಡಿಸುತ್ತಿದ್ದಾನೆ. ಎತ್ತಿನ ಮುಖ. ಅದಕ್ಕೊಪ್ಪುವ ಕಿರೀಟ. ಮಾನವ ಶರೀರ. ಇನ್ನೊಂದು ಭಾಗದಲ್ಲಿ ಪರಮೇಶ್ವರ ಪುತ್ರನಾದ ಗಣಪನೇ ನೃತ್ಯ ಮಾಡುತ್ತಿದ್ದಾನೆ. ಮಗದೊಂದು ಭಾಗದಲ್ಲಿ ಪಾಣಿನಿ ಮಹರ್ಷಿ ಮತ್ತು ಸರ್ಪ ದೇಹಿಯಾದ ಪತಂಜಲ ಮಹರ್ಷಿಗಳು ಕೈಮುಗಿದು ನಿಂತಿದ್ದಾರೆ.

ಈ ರೀತಿಯಾಗಿ ನವರಂಗವು ಶಿವನ ತಾಂಡವಕ್ಕೆ ನೃತ್ಯರಂಗವಾಗಿದೆ. ನಾಲ್ಕು ಸ್ತಂಭಗಳಲ್ಲಿ ಶಿವನ ತಾಂಡವ ನೃತ್ಯಕ್ಕೆ ಪೂರಕವಾಗಿರುವಂತೆ ಹದಿನಾರು ಪ್ರತಿಮೆಗಳನ್ನು ಬಹು ಅರ್ಥವತ್ತಾಗಿ ಮತ್ತು ಆಕರ್ಷಕವಾಗಿ ರೂಪಿಸಿ ನವರಂಗವನ್ನು ಸೌಂದರ್ಯದೊಂದಿಗೆ ಅರ್ಥಗರ್ಭಿತಗೊಳಿಸಿದ್ದಾರೆ. ಸ್ತಂಭದ ಕಂಠದ ಮೇಲೆ ವೀರಕಂಠವನ್ನು ರೂಪಿಸಿದ್ದಾರೆ. ಬೋದಿಗೆಯನ್ನು ಉತ್ತರದಲ್ಲಿಯ ತೊಲೆಗಳನ್ನು ಹೊತ್ತಿರುವ ಗಣಶಿಲ್ಪಗಳನ್ನು ರೂಪಿಸಿದ್ದಾರೆ. ಬೋದಿಗೆ ತೊಲೆಗಳು ಸೇರುವ ಸ್ಥಳಗಳಲ್ಲಿ ಕೈಮುಗಿದು ನಿಂತಿರುವ ಯಕ್ಷರನ್ನು ಪ್ರತ್ಯೇಕವಾಗಿ ಮಾಡಿ ಜೋಡಿಸಿದ್ದಾರೆ.

ಇಲ್ಲಿಯ ನಾಲ್ಕೂ ಸ್ತಂಭಗಳ ಒಂದೇ ತೆರನಾದ ಚಿತ್ರಗೆಲಸ ದಿಂದ ಕೂಡಿದ್ದು ಚಿತ್ತಾಕರ್ಷಕವಾಗಿವೆ.

ಈ ಕಂಬಗಳು ಎತ್ತಿಹಿಡಿದಿರುವ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು (ಇಂದ್ರ–ಅಗ್ನಿ–ಯಮ–ನಿಋತಿ–ವರುಣ–ಕುಬೇರ –ಈಶಾನ) ರೂಪಿತವಾಗಿದ್ದಾರೆ. ಸೂರ್ಯ ಮಧ್ಯಭಾಗದಲ್ಲಿದ್ದು ಪೂರ್ವಕ್ಕೆ ಶುಕ್ರ, ಆಗ್ನೇಯ ದಿಕ್ಕಿಗೆ ಚಂದ್ರ ದಕ್ಷಿಣಕ್ಕೆ ಕುಜ, ನೈರುತ್ಯಕ್ಕೆ ರಾಹು, ಪಶ್ಚಿಮಕ್ಕೆ ಶನಿ, ವಾಯುವ್ಯಕ್ಕೆ ಕೇತು, ಉತ್ತರಕ್ಕೆ ಗುರು, ಈಶಾನ್ಯಕ್ಕೆ ಬುಧ ಇರುವಂತೆ ನವಗ್ರಹಗಳು ಇವು ಚಲಿಸುವ ದ್ವಾದಶ ರಾಶಿಗಳು (ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನಸ್ಸು, ಮಕರ, ಕುಂಭ, ಮೀನ) ಇವನ್ನು ಕಾರ್ಯಸ್ಥಾನ ಗಳಲ್ಲಿರುವಂತೆಯೇ ರೂಪಿಸಿದ್ದಾರೆ. ಈ ಭುವನೇಶ್ವರಿಯ (ಮುಚ್ಚಿಗೆಯ) ಸಮೂಹ ಶಿಲ್ಪವು ಅತ್ಯುತ್ತಮ ಮಾದರಿಯ ಶಿಲ್ಪವಾಗಿದೆ.

ಪ್ರಧಾನ ದ್ವಾರದ ಬಾಗಿಲಿನ ಮುಖಾಂತರ ದೇವಾಲಯವನ್ನು ಪ್ರವೇಶಿಸಿದರೆ ಬಲಪಾರ್ಶ್ವದ ಗೋಡೆಯ ಪ್ರತಿಮಾ ಕೋಷ್ಠದಲ್ಲಿ ಮಹಾವಿಷ್ಣು, ಎಡಪಾರ್ಶ್ವದ ಗೋಡೆಯ ಪ್ರತಿಮಾಕೋಷ್ಠದಲ್ಲಿ ಸೂರ್ಯನಾರಾಯಣ ಪ್ರತಿಮೆಗಳಿವೆ. ಅದೇ ರೀತಿಯಾಗಿ ಉತ್ತರದ ದ್ವಾರದ ಮುಖಾಂತರ ಪ್ರವೇಶಿಸಿದರೆ ಬಲಪಾರ್ಶ್ವದ ಗೋಡೆಯ ಮೇಲೆ ವೀರಭದ್ರಮೂರ್ತಿ



ಚಿತ್ರ ೫. ೪೩ : ನವರಂಗದ ಒಂದು ಸ್ತಂಭದ ಮೇಲ್ಭಾಗದ ಕೆತ್ತನೆಯ ವಿವರ (ಸ್ತಂಭದ ಬೋದಿಗೆಯ ಮೇಲ್ಭಾಗದಲ್ಲಿ ಅಲಂಕಾರ ಶಿಲ್ಪವೊಂದು ಇರುವುದನ್ನು ಗಮನಿಸಿ. ಚಿತ್ರದಲ್ಲಿ ಆ ಮೂರ್ತಿಯ ಪಾದ ಭಾಗ ಮಾತ್ರವೇ ಕಾಣಿಸುತ್ತದೆ.)

ಎಡಪಾರ್ಶ್ವದ ಗೋಡೆಯ ಮೇಲೆ ದಕ್ಷಿಣಾಮೂರ್ತಿಯ ಪ್ರತಿಮೆಗಳಿವೆ. ಹೀಗೆಯೇ ದಕ್ಷಿಣದ ಕಡೆಯ ದ್ವಾರದಿಂದ ಪ್ರವೇಶಿಸಿದರೆ ಬಲಪಾರ್ಶ್ವದ ಗೋಡೆಯ ಮೇಲಿರುವ ಪ್ರತಿಮಾ ಕೋಷ್ಠದಲ್ಲಿ ಸುಬ್ರಮಣ್ಯ ಸ್ವಾಮಿ, ಎಡಪಾರ್ಶ್ವದ ಪ್ರತಿಮಾಕೋಷ್ಠದಲ್ಲಿ ಮಹೇಶ್ವರ ಮೂರ್ತಿಗಳು ಇವೆ.

ಪೂರ್ವಾಭಿಮುಖವಾಗಿರುವ ಗರ್ಭಗುಡಿಯ ಬಾಗಿಲ ಎರಡೂ ಪಾರ್ಶ್ವಗಳಲ್ಲಿ ದ್ವಾರಪಾಲಕ –ರಿದ್ದಾರೆ. ಹಾಗೆಯೇ ಎರಡೂ ಪಾರ್ಶ್ವಗಳಲ್ಲಿ ಪ್ರತಿಮಾಕೋಷ್ಠಗಳೂ ಇವೆ. ಅವುಗಳಲ್ಲಿ ಬಲಪಾರ್ಶ್ವದಲ್ಲಿ ಗಣಪತಿ ಮತ್ತು ಎಡಪಾರ್ಶ್ವದಲ್ಲಿ ಭೈರವ ಸ್ವಾಮಿಗಳಿದ್ದಾರೆ. ಈ ರೀತಿಯಾಗಿ ಈ ಆಲಯದ ಒಳಗಡೆ ಎಂಟು ಮಂದಿ ಪರಿವಾರವಿದೆ. ಹೊರಗೆ ಹತ್ತೊಂಬತ್ತು ಪರಿವಾರವಿದೆ. ಹೊರಗಿರುವುದೆಲ್ಲಾ ಶಿವನ ಲೀಲಾವತಾರಗಳೇ.

ದೇವಾಲಯದ ಭುವನೇಶ್ವರಿಯಲ್ಲಿ ಶಿವನೇ ನಟರಾಜನಾಗಿ ತಾಂಡವವನ್ನು ನಡೆಸುತ್ತಿದ್ದಾನೆ. ಗರ್ಭಗುಡಿಯು ನೇರವಾಗಿ ಲಭಿಸುವುದಿಲ್ಲ. ಈ ದ್ವಾರದಿಂದ



ಚಿತ್ರ ೫. ೪೪ : ದೇವಾಲಯದ ಒಳಗಡೆ ಪ್ರತಿಮಾ ಕೋಷ್ಟಕದಲ್ಲಿರುವ ದಕ್ಷಿಣಾಮೂರ್ತಿ

ಪ್ರವೇಶಿಸಿದರೆ ಶುಕನಾಸಿ ದೊರೆಯುತ್ತವೆ. ಅದನ್ನು ದಾಟಿದರೆ ಗರ್ಭಗುಡಿ.

ಗರ್ಭಗುಡಿಯು ಪೂಜಾಮೂರ್ತಿಯ ಸ್ಥಾನ, ಮಧ್ಯದಲ್ಲಿ ಸುಮಾರು ಮೂರು ಅಡಿ ಎತ್ತರದ ಶಿವಲಿಂಗವು ಪೀಠದೊಂದಿಗೆ ಇದೆ. ಅದರ ಹಿಂದೆಯೇ ಎರಡು ಅಡಿಯ ಎತ್ತರದ ಜಗುಲಿ ಇದ್ದು ಅದರ ಮೇಲೆ ಕಾಮೇಶ್ವರ ಮತ್ತು ಕಾಮೇಶ್ವರೀ ದೇವಿಯವರು ಕುಳಿತಿದ್ದಾರೆ. ಕಾಮೇಶ್ವರ ಎಡಪಾದವನ್ನು ಬಲತೊಡೆಯ ಮೇಲಿರಿಸಿಕೊಂಡು ಬಲತೊಡೆಯನ್ನು ಪೀಠದ ಮೇಲೆ ಮಲಗಿಸಿದ್ದಾನೆ. ದೇವನ ಬಲಕಾಲ ಕೆಳಕ್ಕೆ ಇಳಿಬಿಟ್ಟಿದೆ. ಕಾಮೇಶ್ವರಿ ದೇವಿ ಬಲಗಾಲನ್ನು ಎಡತೊಡೆಯ ಮೇಲಿರಿಸಿಕೊಂಡು ಬಲತೊಡೆಯನ್ನು ಸ್ವಾಮಿಯ ಎಡೆ ತೊಡೆಯ ಮೇಲೆ ಮಲಗಿಸಿದ್ದಾಳೆ. ದೇವಿಯ ಎಡಕಾಲು ಪೀಠದಿಂದ ಕೆಳಕ್ಕೆ ಇಳಿಬಿಟ್ಟಿದೆ. ಹೀಗೆ ಮೊದಲಿಗೆ ಪೀಠದೊಂದಿಗೆ ಇರುವ ಶಿವಲಿಂಗ ಕಾಣಿಸುತ್ತದೆ. ನಂತರ ಕಾಮ – ಕಾಮೇಶ್ವರೀ ಮೂರ್ತಿಯು ಕಾಣಿಸುತ್ತದೆ. ದೇವಿಗೆ ನಾಲ್ಕು ಭುಜಗಳು ಮುಂದಿನ ಹಸ್ತಗಳಲ್ಲಿ ಕಬ್ಬಿನ ಜಲ್ಲೆಯ ಬಿಲ್ಲು ಪುಷ್ಪ ಬಾಣ ಮತ್ತು ಮೇಲಿನ ಹಸ್ತಗಳಲ್ಲಿ ಪಾಶ ಮತ್ತು ಅಂಕುಶಗಳನ್ನು ಧರಿಸಿದ್ದಾಳೆ. ಮೂರ್ತಿಗಳು ಕುಳಿತಿರುವ ಪೀಠಕ್ಕೆ ನಾಲ್ವರು ದೇವತೆಗಳೇ ಆಧಾರವಾಗಿದ್ದಾರೆ.



ಚಿತ್ರ ೫. ೪೫ : ಗರ್ಭಗುಡಿಯಲ್ಲಿರುವ ಕಾಮಕಾಮೇಶ್ವರಿಯ ಪೂಜಾಮೂರ್ತಿ



ಚಿತ್ರ ೫. ೪೬ : ಮಕರ ಜಲನಾಳ



ಚಿತ್ರ ೫. ೪೭ : ನಾಳದ ಬಳಿ ಇರುವ ಚಂಡೇಶ್ವರಾಲಯ



ಚಿತ್ರ ೫. ೪೮ : ಕಾಮಕಾಮೇಶ್ವರಿ ದೇವಸ್ಥಾನದ ವಿಮಾನ ಗೋಪುರ

ಗರ್ಭಗುಡಿಯಿಂದ ಅಭಿಷೇಕ ಮುಂತಾದುವನ್ನು ನಡೆಸಿದಾಗ ನೀರು ಹೊರಕ್ಕೆ ಹೋಗಲು ಅಧಿಷ್ಠಾನ ವರ್ಗದಲ್ಲಿ ಜಲಧಾರೆಯನ್ನು ಕಲ್ಪಿಸುತ್ತಾರೆ. ಇದನ್ನು ನಾಳಾ ಎನ್ನುತ್ತಾರೆ. ಈ ಗರ್ಭಗುಡಿಗೆ ಮಕರ ನಾಳವನ್ನು ರಚಿಸಿದ್ದಾರೆ. ತುಂಬಾ ಸುಂದರವಾಗಿ ರೂಪಿತವಾಗಿದೆ.


ಶಿವಾಲಯಗಳಲ್ಲಿ ಚಂಡೇಶ (ಚಂಡಿಕೇಶ್ವರ)ನಿಗೆ ಮುಖ್ಯ ಸ್ಥಾನವಿರಬೇಕು. ಹಾಗೆಂದು ಮಕರನಾಳದ ಬಳಿಯಲ್ಲಿಯೇ ಒಂದು ಸಣ್ಣ ಆಲಯವನ್ನು ನಿರ್ಮಿಸಿ ಪೂಜೆಗೆ ಅವಕಾಶವನ್ನು ಕಲ್ಪಿಸಿದ್ದಾರೆ. ಈ ಗುಡಿಯು ಚಿಕ್ಕದಾಗಿದ್ದರೂ ತುಂಬಾ ಅಚ್ಚುಕಟ್ಟಾಗಿ ಆಕರ್ಷಕವಾಗಿದೆ.

ಈ ದೇವಾಲಯದ ಗರ್ಭಗುಡಿಯ ಮೇಲೆ ವಿಮಾನವನ್ನೂ ಶಿಲೆಯಲ್ಲಿಯೇ ನಿರ್ಮಿಸಿದ್ದಾರೆ. ಆ ವಿಮಾನದಲ್ಲೂ ಗರ್ಭಗುಡಿಯಲ್ಲಿ ಮೂಡಿರುವ ಭದ್ರಗಳನ್ನೇ ಮುಂದುವರಿಸಿದ್ದಾ. ನಿಜಕ್ಕೂ ವಿಮಾನದ ವಿನ್ಯಾಸವು ಬಹುವಿಶೇಷದ್ದಾಗಿ ಕಾಣಿಸುತ್ತದೆ. ಅಲ್ಲಲ್ಲಿ ಕೆಲವು ಶಿಲ್ಪಗಳೂ ಕಾಣಿಸುತ್ತವೆ. ತುದಿಯಲ್ಲಿ ಕಲಶವಿದೆ. ಚಿತ್ರದಲ್ಲಿ ವಿಮಾನವನ್ನು ನೋಡಬಹುದು. ಪೂರ್ಣವಾಗಿ ಕಾಣಿಸಲು ರಸ್ತೆಯಿಂದಲೇ ನೋಡಬೇಕಾಗಿರುತ್ತದೆ.

ದೇವಾಲಯದ ಮಹಾದ್ವಾರ ಇರುವುದು ರಾಮಾನುಜಾ ರಸ್ತೆಯಲ್ಲಿ. ಎಡಗಡೆಗೆ ಕರಸ್ಥಲ ನಾಗಲಿಂಗಸ್ವಾಮಿಗಳ ಮಠವಿದೆ. ಬಲಗಡೆಗೆ ವಾಸದ ಮನೆಗಳಿವೆ. ಹಿಂಭಾಗದಲ್ಲಿ ಅರ್ಚಕರ ಅಥವಾ ಇತರ ವಾಸದ ಮನೆಗಳಿವೆ. ಇದರಿಂದಾಗಿ ಪ್ರಾಕಾರವೆಂದರೆ ಪೌಳಿ ಗೋಡೆಯೇ. ಮಹಾದ್ವಾರ ಮಾತ್ರ ವ್ಯಸ್ಥಿತವಾಗಿಯೇ ಇದೆ.



ಚಿತ್ರ ೫. ೪೯ : ವಿಮಾನ ಗೋಪುರ



ಚಿತ್ರ ೫. ೫೦ : ವಿಮಾನ ಗೋಪುರದ ಸಹಿತವಾಗಿ ಕಾಮಕಾಮೇಶ್ವರಿ ದೇವಸ್ಥಾನ (ರಸ್ತೆಯಿಂದ)



ಚಿತ್ರ ೫. ೫೧ ಮಹಾಲಕ್ಷ್ಮೀ



ಚಿತ್ರ ೫. ೫೨ ಸರಸ್ವತೀ



ಚಿತ್ರ ೫. ೫೩ ಸಪ್ತರ್ಷಿ

ಮೇಲೆ ದ್ವಾರಗೋಪುರವಿಲ್ಲ. ದೇವಾಲಯದ ಪಾದಭಾಗದ ತುದಿಯಾಗಿ ಪ್ರತಿ ಎಂದು ಸೂಚಿಸುವ ಶಿಲೆಯ ಪಟ್ಟಿಕೆ ಕೆತ್ತನೆಯನ್ನು ಪಡೆದುಕೊಂಡಿದೆ. ಅದರೊಂದಿಗೆ ಪ್ರತಿಮಾ ಕೋಷ್ಠಗಳಿದ್ದು ಅವುಗಳಲ್ಲಿ ಸುಂದರ ಪ್ರತಿಮೆಗಳೂ ಇವೆ–ಬಲಕ್ಕೆ ಮೂರು, ಎಡಕ್ಕೆ ಮೂರು.

ಲಕ್ಷ್ಮೀ ಸರಸ್ವತಿಯರೇ ದ್ವಾರಪಾಲಕರಾಗಿದ್ದಾರೆ. ಚಾಮುಂಡೇಶ್ವರಿ, ದೇವೇಂದ್ರ, ಗಣಪತಿ, ಈಶಾನ, ಸಪ್ತರ್ಷಿ ಇವರುಗಳ ಪ್ರತಿಮೆಗಳೂ ಇವೆ. ಗೋಡೆಯ ತುದಿಯ ಅಲಂಕರಣದ (ಇದನ್ನು ಪ್ರಸ್ತರ ಎಂದು ಕರೆಯುತ್ತಾರೆ) ಮಧ್ಯಭಾಗದಲ್ಲಿ ಕಾಮೇಶ್ವರ – ಕಾಮೇಶ್ವರಿ ದೇವಿಯ ಕಿರು ವಿಗ್ರಹವಿದ್ದು ದೇವಾಲಯದ ಅಧಿಷ್ಠಾತೃ ದೇವಿಯನ್ನು ಮೊದಲಿಗೇ ತೋರಿಸುತ್ತದೆ. ಮಹಾದ್ವಾರದಿಂದಲೇ ಮುಖ ಮಂಟಪವನ್ನು ಹೊತ್ತಿರುವ ಕರಿಶಿಲೆಯ ಅಲಂಕೃತ ನಾಲ್ಕು ಸ್ತಂಭಗಳು ಕಾಣಿಸಿ ಒಳಗಿನ ದೇವಾಲಯ ಸಾಧಾರವು ದೇವಾಲಯ ಗಳಿಗಿಂತಲೂ ಪ್ರತ್ಯೇಕವಾದುದು ಎಂಬುದರ ಸೂಚನೆಯನ್ನು ಕೊಡುತ್ತದೆ.

ಈ ಮೊದಲೇ ಉಲ್ಲೇಖಿಸಿರುವಂತೆ ಈ ದೇವಾಲಯವು ನಿರ್ಮಾಣವಾದದ್ದು ಸಂಧಿಕಾಲದಲ್ಲಿ. ಅರಸೊತ್ತಿಗೆಯ ಸ್ವತಂತ್ರ ಪ್ರಜಾರಾಜ್ಯಕ್ಕೆ ಪರಿವರ್ತಿತವಾಗುತ್ತಿದ್ದಾಗ. ಈ

ದೇವಾಲಯದ ನಿರ್ಮಾಪಕರು ಸ್ವಯಂ ಮಹಾರಾಜರು ಈ ದೇವಾಲಯದ ನಿರ್ಮಾಣದ ಹೊಣೆಹೊತ್ತಿದ್ದವರು ಸಿದ್ದಲಿಂಗಸ್ವಾಮಿಗಳು. ಅರಮನೆಯ ದೇವಾಲಯದ ಬಗ್ಗೆ ನಿರ್ದಿಷ್ಟ ಅಂದಾಜು ಅಂಗೀಕರಿಸಿ ಅದನ್ನು ನಂತರ ಕಡಿಮೆ ಮಾಡಿತ್ತು. ಅದರ ಫಲವಾಗಿ ದೇವಾಲಯದ ಬಹುಪಾಲಿನ ಅಲಂಕಾರವನ್ನು ತಡೆಯಬೇಕಾಯಿತು ಎಂಬ ವಿವರಗಳನ್ನು ಸ್ವಾಮಿಗಳೇ ತಮ್ಮ ಆಪ್ತ ಶಿಷ್ಯರಲ್ಲಿ ಹೇಳಿಕೊಂಡಿದ್ದರು. ಹೀಗಾಗಿ ದೇವಾಲಯಕ್ಕೆ ಮಂಜೂರಾದ ಮೊತ್ತ ಏಳುಲಕ್ಷಗಳು ಮಾತ್ರವೇ. ಅದರಲ್ಲಿ ಕಂದು ಕಗ್ಗಲಿನ ಕೆಲಸಕ್ಕೆ ಭಾರಿಮೊತ್ತ ಹೋಗಿದೆ ಎನ್ನುತ್ತಾರೆ. ಸ್ವಾಮಿಗಳು ಸುಂದರವಾದ ಹೊಯ್ಸಳ ಶೈಲಿಯ ದೇವಾಲಯವನ್ನು ನಿರ್ಮಿಸಬೇಕೆಂಬ ಸಂಕಲ್ಪವನ್ನು ಪೂರೈಸಲೆಂದು ತೀರ್ಮಾನಿಸಿ ದೇವಾಲಯದ ಕೆಲಸವನ್ನು ಪೂರ್ಣಗೊಳಿಸುವ ನಿಶ್ಚಯನ್ನು ಕೈಗೊಂಡಿದ್ದರು. ಸ್ವಾಮಿಗಳ ಯೋಜನೆಯ ಅರ್ಧದಷ್ಟೂ ಈ ದೇವಾಲಯದಲ್ಲಿ ಸಾಧಿತವಾಲ್ಲ ಎಂಬುದು ಅವರ ಶಿಷ್ಯರ ಅಭಿಪ್ರಾಯ ಸ್ವಾಮಿಗಳ ಕಲ್ಪನೆಯ ದೇವಾಲಯವು ಸಾಕ್ಷಾತ್ಕಾರವಾಗಿದ್ದಿದ್ದರೆ ಆಗ ಹೇಗಿರುತ್ತಿತ್ತೆ ಎಂಬುದು ಕಲ್ಪನಾ ರಾಜ್ಯದ ಸಂಗತಿಯಾಗಿದೆ.



ಚಿತ್ರ ೫. ೫೪ : ದೇವೇಂದ್ರ


ದೇವಾಲಯದ ಬಹುಪಾಲಿನ ಕೆಲಸ ಸ್ವಾಮಿಗಳು ಇದ್ದಾಗಲೇ ಮುಗಿದಿದ್ದರೂ ವೃಷಭ ವಾಹನದ ಶಿಲ್ಪವು ಸಿದ್ಧವಾಗಿರಲಿಲ್ಲ. ದೇವಾಲಯದ ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದವರು ಸ್ವಾಮಿಗಳ ಮಕ್ಕಳಾದ ಶ್ರೀ ನಾಗೇಂದ್ರ ಸ್ಥಪತಿಗಳು. ವೃಷಭ ವಾಹನ ಶಿಲ್ಪವನ್ನು ನಿರ್ಮಿಸಿರುವವರು ಅವರೇ.

ಈ ದೇವಾಲಯದ ಶಿಲ್ಪಗಳಿಂದ ಆಕರ್ಷಿತರಾಗಿರುವ ವಿದೇಶೀಯರು ಇಲ್ಲಿಯ ಮೂರ್ತಿಗಳ ಪೂರ್ಣಸೆಟ್‌ಗಳನ್ನು ಜಪಾನ್, ಜರ್ಮನಿ, ಅಮೇರಿಕಾ, ಯೂರೋಪ್‌ನ ಇತರ ಭಾಗಗಳಿಗೆ ಮೈಸೂರಿನ ಇತರ ಶಿಲ್ಪಿಗಳಿಂದಲೇ ತಯಾರಿಸಿ ಕೊಂಡೊಯ್ದಿರುವುದು ಈ ದೇವಳದ ಶಿಲ್ಪಕೌಶಲದ ಸಿರಿಯನ್ನು ಸಾರುತ್ತದೆ.

ಪ್ರಸ್ತುತದಲ್ಲಿ ಮೈಸೂರಿನಲ್ಲಿ ಶಿಲ್ಪಶಾಸ್ತ್ರ ಮತ್ತು ಕಲಾದೃಷ್ಟಿಯಿಂದ ಅದ್ಭುತ ವಾಗಿರುವ ದೇವಾಲಯವು ರೂಪುಗೊಂಡಿರುವುದು ಹೀಗೆ. ಆದರೆ ಇದನ್ನು ಶ್ರೀಸಾಮಾನ್ಯರು ನೋಡಲು ಸಾಧ್ಯವಾಗದಂತೆ ಕಟ್ಟುಪಾಡುಗಳನ್ನು ಪೂಜಾ ಸಮಯಗಳನ್ನು ನಿಗದಿ ಮಾಡಿರುವುದು, ಮೈಸೂರಿಗೆ ಬಂದ ಪ್ರವಾಸಿಗರು ನೋಡಲು ಅವಕಾಶ ಕಲ್ಪಿಸದೆ ಕಟ್ಟಿದ ಶಿಲ್ಪಿಗಳಿಗೂ, ಕಟ್ಟಿಸಿದ ಮಹಾರಾಜರಿಗೂ ದೇವಾಲಯದ ಆಡಳಿತ ವಹಿಸಿ ಕೊಂಡಿರುವವರು ಪುಷ್ಕಳವಾಗಿ ಅನ್ಯಾಯವನ್ನು ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿ ಈ ದೇವಾಲಯವು ಅಜ್ಞಾತವಾಗಿ ಉಳಿದಿದೆ.



ಚಿತ್ರ ೫. ೫೬ : ಸ್ತಂಭದ ಚಿತ್ರ ಖಂಡದಲ್ಲಿರುವ ಚಾಮರಧಾರಿಣಿ



ಚಿತ್ರ ೫. ೫೫ : ಈಶಾನ ಮೂರ್ತಿ

೬

ಸ್ವಾಮಿಗಳ ಇತರ ಶಿಲ್ಪಗಳು

ಸ್ವಾಮಿಗಳು ತಮ್ಮ ಶಿಲ್ಪಸೇವೆಯ ಬಹುಭಾಗವನ್ನು ಅರಮನೆಗೆ ಮೀಸಲಿಟ್ಟಿದ್ದರು ಎಂಬುದು ನಿಜವೇ. ಆದರೆ ಅವರ ಕಲಾಸೇವೆಯನ್ನು ಅರಸಿಕೊಂಡು ಭಾರತದ ಎಲ್ಲಾ ಭಾಗಗಳಿಂದಲೂ ಬರುತ್ತಿದ್ದರು. ಸತ್ಯಸಂಗತಿ ಎಂದರೆ ಅವರ ಶಿಲ್ಪ ಮತ್ತು ಚಿತ್ರ ಕೃತಿಗಳು ಎಲ್ಲೆಲ್ಲಿ ಹಂಚಿಹೋಗಿವೆ ಎಂಬುದನ್ನು ಹೇಳಲು ಯಾವ ಆಧಾರವೂ ಇಂದು ಎಲ್ಲಿಯೂ ಲಭಿಸುವುದಿಲ್ಲ. ಆದ್ದರಿಂದ ಇಂದು ಹೇಳುವ ವಿವರಗಳು ಅವರಿವರ ಹೇಳಿಕೆಗಳಿಂದ ಸಂಗ್ರಹಿಸಿರುವಂತಹವೇ. ಆದ್ದರಿಂದ ಇವ್ಯಾವೂ ಸಮಗ್ರವೂ ಅಲ್ಲ, ಸಂಪೂರ್ಣವೂ ಅಲ್ಲ. ಕುರುಡುಗಣ್ಣಿಗಿಂತಲೂ ಮೆಳ್ಳಗಣ್ಣೇ ವಾಸಿ ಎಂದು ನಂಬಿ ಲಭಿಸಿರುವ ವಿವರಗಳನ್ನು ದಾಖಲಿಸಲಾಗಿದೆ.

ಸ್ವಾಮಿಗಳು ಸಮಗ್ರವಾಗಿ ಪಂಚಶಿಲ್ಪಗಳನ್ನೂ ಮಾಡುತ್ತಿದ್ದವರು. ಆದ್ದರಿಂದ ಅವರ ಕೃತಿಗಳ ವ್ಯಾಪ್ತಿಯನ್ನು ಈಗ ಗುರುತಿಸುವುದೇ ಕಷ್ಟ.



ಚಿತ್ರ ೬.೧ : ಶ್ರೀ ಸಿದ್ಧಲಿಂಗಸ್ವಾಮಿಗಳು

ಕರ್ನಾಟಕದಲ್ಲಿರುವ ವೈದಿಕ ಶೈವದಲ್ಲಿ ಪಂಚಾಚಾರ್ಯ ಪರಂಪರೆಯೊಂದಿದೆ. ಅವರಲ್ಲಿ ರೇಣುಕಾಚಾರ್ಯರು ಪ್ರಸಿದ್ಧರು. ಶಿವಲಿಂಗದಿಂದ ಶಿವನೇ ರೇಣುಕಾಚಾರ್ಯರಾಗಿ ಉದ್ಭವಿಸಿ ಬಂದು ಶೈವಮತವನ್ನು ಸ್ಥಾಪಿಸಿದ ಎಂದು ಅವರು ನಂಬುತ್ತಾರೆ. ಇವರ ವರ್ಣಚಿತ್ರವನ್ನು ಬಾಳೇಹೊನ್ನೂರು ಮಠಕ್ಕೆ ಸಿದ್ಧಲಿಂಗಸ್ವಾಮಿಗಳೇ ರಚಿಸಿಕೊಟ್ಟಿದ್ದಾರೆ. ತರುವಾಯ ಮೂಲ ಪಂಚಪೀಠಗಳು ಎಂದು ಹೇಳುವ ಕಾಶಿ, ಕೇದಾರ, ಉಜ್ಜಯಿನಿ, ಶ್ರೀಶೈಲ ಮತ್ತು ರಂಭಾಪುರಿಗಳಿಗೆ ರೇಣುಕಾಚಾರ್ಯರ ಪೂಜಾಮೂರ್ತಿಗಳನ್ನು ಶಿಲೆಯಲ್ಲಿ ತಯಾರಿಸಿ ಕೊಟ್ಟು ವಿಗ್ರಹ ಪ್ರತಿಷ್ಠಾಪನೆಯನ್ನು ಸ್ವಾಮಿಗಳೇ ನೆರವೇರಿಸಿಕೊಟ್ಟಿದ್ದಾರೆ. ರೇಣುಕಾಚಾರ್ಯರ ಶಿಲ್ಪ ವಿನ್ಯಾಸವನ್ನು ಮೊದಲಿಗೆ ಮಾಡಿಕೊಟ್ಟಿರುವವರೇ ಸ್ವಾಮಿಗಳು. ಇಂದು ಭಾರತದ ಆದ್ಯಂತ ರೇಣುಕಾಚಾರ್ಯರ ವಿಗ್ರಹ, ವರ್ಣಚಿತ್ರ ಅದೇ ರೀತಿಯಾಗಿ ವಿನ್ಯಾಸ ಮಾಡುವುದು ರೂಢಿಗೆ ಬಂದಿದೆ. ಎಂದರೆ ನಾವು ಇಲ್ಲಿ ಗಮನಿಸಬೇಕಾಗಿರುವ ಅಂಶವೆಂದರೆ ಸ್ವಾಮಿಗಳು ರೇಣುಕಾಚಾರ್ಯರಿಗೆ ಕಲ್ಪಿಸಿಕೊಟ್ಟಿರುವ ಪ್ರತಿಮಾ ರೂಪವು ಶೈವ ಶಾಸ್ತ್ರ ಹಾಗೂ ಪ್ರತಿಮಾಶಾಸ್ತ್ರದ ಅನುಸಾರವಾಗಿದೆ. ಇದು ಸ್ವಾಮಿಗಳ ಆಳವಾದ ಪಾಂಡಿತ್ಯ ಮತ್ತು ಪ್ರತಿಮಾ ಕಲ್ಪನೆಯಲ್ಲಿರುವ ಸೂಕ್ಷ್ಮತೆಗೆ ಸಾಕ್ಷಿ. ಶ್ರೀವೈಷ್ಣವರಲ್ಲಿ ನಾಮ ಎಂಬುದು ವಿಷ್ಣುವಿನ ಲಾಂಛನ, ಅವರಲ್ಲಿರುವ ಪಾಂಚರಾತ್ರ ಮತ್ತು ವೈಖಾನಸ ಎಂಬ ಎರಡು ಗುಂಪುಗಳು ಇಂದಿಗೂ ನಾಮದ ವಿನ್ಯಾಸದಲ್ಲಿಯ ಭಿನ್ನತೆಗಳನ್ನು ಕಾಪಾಡಿಕೊಂಡೇ ಬರುತ್ತಿದ್ದಾರೆ. ಆದರೆ ರೇಣುಕಾಚಾರ್ಯರ ಶಿಲ್ಪದ ಬಗ್ಗೆ ಪಂಚಪೀಠಗಳೂ ಸ್ವಾಮಿಗಳು ಕೊಟ್ಟಿರುವ ವಿನ್ಯಾಸವನ್ನು ಅಂಗೀಕರಿಸಿ ಪೂಜಿಸುತ್ತಿವೆ ! ಸ್ವಾಮಿಗಳು ಬರೆದಿರುವ ವರ್ಣಚಿತ್ರದ ಪ್ರತಿಗಳು ಇಂದಿಗೂ ಪ್ರಚಲಿತದಲ್ಲಿಯೇ ಇವೆ. ಈ ರೀತಿ ಸರ್ವರ ಅಂಗೀಕಾರ ಪಡೆಯುವ ವಿನ್ಯಾಸಕ್ಕೆ ಕಾರಣ ಸಂಬಂಧಿಸಿ ಚಿತ್ರ ಮತ್ತು ಶಿಲ್ಪಗಳ ಬಗ್ಗೆ ಸ್ವಾಮಿಗಳ ವಿದ್ವತ್ತು ಮತ್ತು ಸಮಗ್ರವಾದ ಜ್ಞಾನಗಳೇ.



ಚಿತ್ರ ೬. ೨ : ಚೀರಾಲ ದೇವಾಲಯಕ್ಕೆ ಕೊಟ್ಟಿರುವ ಕಾಮಾಕ್ಷಿದೇವಿ (ಮೂಲಮೂರ್ತಿ)

ದಾವಣಗೆರೆಯ ರಾಮಾಲಯಕ್ಕೆ ಒಂದು ಸೆಟ್ (ರಾಮ–ಲಕ್ಷ್ಮಣ – ಸೀತೆ – ಆಂಜನೇಯ) ವಿಗ್ರಹಗಳನ್ನು ಮಾಡಿ ಕೊಟ್ಟಿದ್ದಾರೆ. ಚಿಕ್ಕಮಗಳೂರಿಗೆ ಶಿವ–ಪಾರ್ವತಿ–ವಿನಾಯಕ–ನಂದಿ ಒಂದು ಸೆಟ್ ಮಾಡಿದ್ದಾರೆ. ಹಾಸನ ಜಿಲ್ಲೆಗೆ ದತ್ತಾತ್ರೇಯ ಮೂರ್ತಿಯನ್ನು, ಅರಸೀಕೆರೆಗೆ ಚೆನ್ನಕೇಶವ ಮತ್ತು ಲಕ್ಷ್ಮೀದೇವಿಯ ವಿಗ್ರಹಗಳನ್ನು ಮಾಡಿಕೊಟ್ಟಿದ್ದಾರೆ. ಶಿಕಾರಿಪುರದ ದೇವಾಲಯವೊಂದಕ್ಕೆ ಧ್ವಜಸ್ತಂಭವನ್ನು ಮಾಡಿಕೊಟ್ಟಿದ್ದಾರೆ. ಅದರ ಮೇಲೆ ಗಂಡ ಭೇರುಂಡವನ್ನು ಕೆತ್ತಿದ್ದಾರೆ.


ಗುಂಟೂರು ಜಿಲ್ಲೆಯ ಚೀರಾಲ ಪಟ್ಟಣದ ಪಾಪಾರಾಜುವಾರಿ ತೋಟದಲ್ಲಿ ನಿರ್ಮಾಣವಾಗಿದ್ದ ಕಂಚಿ ಕಾಮಾಕ್ಷಿದೇವಿಯ ಆಲಯಕ್ಕೆ ಕಾಮಾಕ್ಷಿ ದೇವಿಯ ಮೂಲ ಮೂರ್ತಿಯನ್ನು ಪಟ್ನಾಲ ಸನ್ಯಾಸಿ ಲಿಂಗಂ ಅವರ ಕೋರಿಕೆಯ ಪ್ರಕಾರ ಉಚಿತವಾಗಿ ಮಾಡಿಕೊಟ್ಟಿದ್ದಾರೆ. ಅವರು ಆ ವಿಗ್ರಹವನ್ನು ಮೆರವಣಿಗೆಯಲ್ಲಿಯೇ ಆ ಮೈಸೂರಿನಿಂದ ಒಯ್ದುರೆಂಬುದು ಬಹು ಪ್ರಖ್ಯಾತ ವಿಷಯ. ಸ್ವಾಮಿಯವರು ಆ ಸಂದರ್ಭದಲ್ಲಿ ಬಂದಿದ್ದ ಎಲ್ಲಾ ವಿದ್ವಾಂಸರನ್ನೂ ಸನ್ಮಾನಿಸಿ ಕಳುಹಿಸಿಕೊಟ್ಟರಂತೆ. ಇದು ೧೯೪೦ರಲ್ಲಿ ನಡೆದದ್ದು. ಈ ಸಂದರ್ಭದಲ್ಲಿ ದಂತನಾಲ ನಾಗೇಶ್ವರ ಶಾಸ್ತ್ರಿ, ಚಾಮರ್ತಿ ಅಮರೇಶ್ವರ ಶರ್ಮ ಮುಂತಾದ ವಿದ್ವಾಂಸರನ್ನು ಸ್ವಾಮಿಗಳು ಬಹು ಘನವಾಗಿ ಸತ್ಕರಿಸಿದರು ಎಂಬುದನ್ನು ಆಂಧ್ರದ ವಿದ್ವಾಂಸರು ಇಂದೂ ಸ್ಮರಿಸಿಕೊಳ್ಳುತ್ತಾರೆ. ಸ್ವಾಮಿಗಳು ತಮ್ಮನ್ನು ಭೇಟಿಯಾಗಲು ಬಂದ ವಿದ್ವಾಂಸರನ್ನು ಘನವಾಗಿ ಸತ್ಕರಿಸಿ ಕಳುಹಿಸುತ್ತಾರೆಂಬ ವಿಷಯವನ್ನು ಆಂಧ್ರದೇಶದ ವಿದ್ವಾಂಸರು ಹೇಳುತ್ತಾರೆ ಹಾಗೆ ಸನ್ಮಾನವನ್ನು ಪಡೆದುಕೊಂಡವರಲ್ಲಿ ಪೋಕೂರಿ ಕಾಶೀಪತ್ಯಾವಧಾನಿ, ಯಲವರ್ತಿ ಆಂಜನೇಯ ಶಾಸ್ತ್ರಿ,ಅಂಗಲಕುಟಿ ಷಣ್ಮುಖಶಾಸ್ತ್ರಿ, ವಡ್ಡೆಪಾಟಿ ನಿರಂಜನ ಶಾಸ್ತ್ರಿ ಮುಂತಾದ ವಿದ್ವಾಂಸರೂ ಉಂಟು. ಹೀಗೆ ಕರ್ನಾಟಕದಿಂದ ಹೊರಗೆ ಆಂಧ್ರ, ಮಹಾರಾಷ್ಟ್ರ, ಮದರಾಸು ರಾಜ್ಯ, ಕೇರಳ, ಉತ್ತರಭಾರತಕ್ಕೆ ಅನೇಕ ಮೂರ್ತಿಗಳನ್ನು ಮಾಡಿಕೊಟ್ಟಿದ್ದಾರೆ. ಅನೇಕ ಕಡೆ ಸ್ವಾಮಿಗಳೇ ಆ ಪ್ರತಿಮೆಗಳ ಪ್ರತಿಷ್ಠಾಪನೆಯನ್ನೂ ಮಾಡಿದ್ದಾರೆ.

ಮಂಗಳೂರು, ತುಮಕೂರು, ಮೈಸೂರು ಹೀಗೆ ಅನೇಕ ಊರುಗಳಲ್ಲಿ ಕಾಳಿಕಾದೇವಿ ಮತ್ತು ವಿಶ್ವಕರ್ಮ ಮೂರ್ತಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ನವಗ್ರಹ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮೈಸೂರಿನ ಕಾಳಿಕಾದೇವಾಲಯದಲ್ಲಿ ಪ್ರತಿಷ್ಠಿತವಾಗಿರುವ ನವಗ್ರಹಗಳು ಬಹು ವಿಶೇಷವಾಗಿವೆ. ಗ್ರಹದೇವತೆಯು ತನ್ನ ಶಕ್ತಿಯೊಂದಿಗೆ ರಥದಲ್ಲಿ ಮಂಡಿಸಿದೆ. ಇದರೊಂದಿಗೆ ವಾಹನ – ಅದಿದೇವತೆ – ಪ್ರತ್ಯಧಿದೇವತೆ ಮತ್ತು ಧ್ವಜ ಪತಾಕೆಗಳೊಂದಿಗೆ ಅಲಂಕೃತವಾಗಿವೆ. ಪ್ರತಿಮೆಯ ಹಿಂಭಾಗದಲ್ಲಿ ಆ ಗ್ರಹಕ್ಕೆ ಅನ್ವಯವಾಗುವ ಪೂಜಾಯಂತ್ರವನ್ನು ಕೆತ್ತಿದೆ. ಹೀಗೆ ಸಮಗ್ರವಾಗಿರುವ ಗ್ರಹ ಸ್ವರೂಪವು ಇತರ ಭಾಗಗಳಲ್ಲಿ ಲಭಿಸುವುದಿಲ್ಲ. ಈ ರೀತಿಯ ಮೂರ್ತಿಯನ್ನು ಬೀಜಾಕ್ಷರಗಳೊಂದಿಗೆ ಪೂಜಿಸಿದರೆ ಫಲ ಹೆಚ್ಚು ಎಂಬುದು ಶಾಸ್ತ್ರದ ಆಣತಿ.

ಮೈಸೂರಿನಲ್ಲಿ ಇನ್ನೂ ಒಂದು ವಿಶೇಷವಾದ ಮೂರ್ತಿ ಇದೆ. ವಿಶ್ವಕರ್ಮನಿಗೆ ಐದು ಮುಖಗಳು. ಇವನ್ನು ಸಾಲಾಗಿ ಒಂದರ ಪಕ್ಕದಲ್ಲೊಂದನ್ನು ಕೆತ್ತಿ ಸಾಧಾರಣ ದೇಹ – ಎಂದರೆ ಮುಂಭಾಗ ವಕ್ಷ, ಹಿಂಭಾಗ ಬೆನ್ನು ಇರುವಂತೆ – ರೂಪಿಸುವುದೇ ವ್ಯಾಪಕವಾಗಿ ರೂಢಿಯಲ್ಲಿದೆ. ಅದರಲ್ಲೂ ಪ್ರಭಾವಳಿಯನ್ನು ಹಿಂದೆ ಅಳವಡಿಸಿಬಿಟ್ಟರೆ ಮುಗಿಯಿತು – ವಿಗ್ರಹದ ಹಿಂಭಾಗವೆಲ್ಲಾ ಚಪ್ಪಟೆಯಾಗಿ ಬಿಟ್ಟರೆ ಆಯಿತು. ಇಲ್ಲವೆಂದರೆ ವಿಗ್ರಹದ ಬೆನ್ನು ಬಿಡಿಸಬೇಕು. ಅದೇ ಬಹು ದೊಡ್ಡ ಕೆಲಸ ಎಂದು ಹೇಳಿ ವಿಶೇಷ ಸಂಭಾವನೆ ಕೇಳುವ ಶಿಲ್ಪಿಗಳೂ ಉಂಟು. ನಿಜಕ್ಕೂ ವಿಶ್ವಕರ್ಮನ ಮುಖಗಳು ಐದು. ಅವು ಇರಬೇಕಾದ್ದು ಐದು ದಿಕ್ಕುಗಳಿಗೆ – ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಊರ್ಧ್ವ ದಿಕ್ಕುಗಳಿಗೆ. ವೇದಗಳಲ್ಲಿ ಈ ದಿಕ್ಕುಗಳನ್ನೇ ಹೇಳಿರುವುದು. ವಿಶ್ವಕರ್ಮನಿಗೆ ನೇರವಾಗಿ ಒಂದು ಮುಖ ಕಾಣಿಸಿದರೆ (ಪೂರ್ವಕ್ಕಿರುವ ಮುಖ) ಇಕ್ಕೆಲಗಳಲ್ಲೂ ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಗೆ ಇರುವ ಎರಡು ಅರ್ಧ ಮುಖಗಳು ಕಾಣಿಸುತ್ತವೆ. ಹಿಂಭಾಗಕ್ಕೆ ಪಶ್ಚಿಮ ಭಾಗದ ಮುಖ ಇರುತ್ತದೆ. ಮಧ್ಯದಲ್ಲಿ ಐದನೆಯ ಮುಖ ಇರುತ್ತದೆ. ಎಂದರೆ ನಾಲ್ಕು ಮುಖಗಳ ಮೇಲೆ ಐದನೆಯ ಮುಖ ಇರುತ್ತದೆ. ಇದರಿಂದ ಪಶ್ಚಿಮ ಮುಖದತ್ತ ಬೆನ್ನು ಮಾಡಲು ಸಾಧ್ಯವಾಗುವುದಿಲ್ಲ. ಆ ಭಾಗದಲ್ಲೂ ವಕ್ಷವೇ ಇರಬೇಕು ಹಾಗೆ ಮಾಡಲು ಇತರ ಭಾಗಗಳೂ ಹೊಂದಿಕೊಳ್ಳುವಂತೆ ರೂಪಿಸುವುದು ಅನಿವಾರ್ಯವಾಗುತ್ತದೆ.



ಚಿತ್ರ ೬. ೩ : ಪಂಚಮುಖ ವಿಶ್ವಕರ್ಮ (ಪಂಚಶಿಲ್ಪರ್ಷಿಗಳೊಂದಿಗೆ)



ಚಿತ್ರ ೬. ೪ : ಕಾವೇರಿ

ಬಹು ನಾಜೂಕಾಗಿ ಮಾಡಬೇಕಾಗಿರುವ ಕೆಲಸ . ಇದನ್ನು ಸ್ವಾಮಿಗಳೇ ತಯಾರಿಸಿದ್ದಾರೆ. ಬಹು ಅದ್ಭುತವಾಗಿ ಕಾಣಿಸುತ್ತದೆ. ಇದರೊಂದಿಗೆ ಮೂರ್ತಿಗೆ ಹಿಂಭಾಗದಲ್ಲಿ ಸೊಗಸಾದ ಪ್ರಭಾವಳಿಯೂ ಇದೆ. ಆದ್ದರಿಂದ ಪ್ರಭಾವಳಿಯ ಹಿಂಭಾಗದಲ್ಲೂ ಪೂರ್ಣವಾಗಿ ಕೆತ್ತನೆ ಮಾಡಿದ್ದಾರೆ. ಹಿಂದಿನ ಮುಖ-ದೇಹವನ್ನು ಪರಿಪೂರ್ಣವಾಗಿ ಕೆತ್ತಿದ್ದಾರೆ. ಎಂದರೆ ಪ್ರಭಾವಳಿಯ ಮುಂಭಾಗ ಹಿಂಭಾಗದ ಕೆತ್ತನೆಗೆ ಅಡ್ಡಿಯಾಗುತ್ತದೆ. ಅದಕ್ಕಾಗಿ ಹಿಂಭಾಗದ ಕೆತ್ತನೆಗಾಗಿ ವಿಶೇಷವಾದ ಉಳಿಗಳನ್ನು ತಯಾರಿಸಿಕೊಂಡು ಬಳಸಬೇಕಾಗಿರುತ್ತದೆ. ನಿಜಕ್ಕೂ ಈ ವಿಗ್ರಹದ ಕೆತ್ತನೆ ಬಹು ಅಪೂರ್ವವಾದುದೇ ದೇವಾಲಯದಲ್ಲಿ ಈ ಮೂರ್ತಿಯ ಹಿಂಭಾಗವೂ ಕಾಣಿಸುವಂತೆ ಗಾಜನ್ನು ಹಾಕಿರಿಸಿದ್ದಾರೆ.

ಮೈಸೂರಿನಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ವಾಣಿಜ್ಯ ಮಳಿಗೆಗಳೇ ಅಧಿಕವಾಗಿದ್ದು ಕಾಳಿಕಾ ಟೆಂಪಲ್ ಸ್ಟ್ರೀಟ್ ಎಂದು ಹೆಸರಾಗಿರುವ ರಸ್ತೆಯಲ್ಲಿಯೇ ಕಾಳಿಕಾಂಬ ಕಮಠೇಶ್ವರ ದೇವಾಲಯವಿದೆ. ಉಭಯ ಪಾರ್ಶ್ವದ ವಿಶ್ವಕರ್ಮ ಮೂರ್ತಿಯೊಂದಿಗೆ ಪಂಚಶಿಲ್ಪಗಳ ಪ್ರವರ್ತಕರಾದ ಮನು, ಮಯ, ತಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಎಂಬ ಐವರು ಶಿಲ್ಪಬ್ರಹ್ಮರ್ಷಿಗಳ ಪ್ರತ್ಯೇಕ ಮೂರ್ತಿಗಳೂ ಇವೆ. ಇದರೊಂದಿಗೆ ವಿಶಿಷ್ಟವಾದ ನವಗ್ರಹಗಳು. ಇವನ್ನೆಲ್ಲಾ ಈ ಒಂದೇ ದೇವಾಲಯದಲ್ಲಿ ನೋಡಬಹುದು.

ಚಾಮುಂಡೇಶ್ವರಿ ದೇವಿಯ ಶಿಲ್ಪವು ಇದೇ ರೀತಿಯಾಗಿ ಹಿಂದೆ ಮತ್ತು ಮುಂದೆ ಪೂರ್ಣವಾಗಿರುವಂತೆ ಮಾಡಿರುವುದೂ ಉಂಟು. ಒಂದೇ ತಲೆ, ನಾಲ್ಕು ಕೈಗಳು ಇರುವ ಪ್ರತಿಮೆಯು ಯಾವ ಕೋನದಿಂದ ನೋಡಿದರೂ ದೇವಿಯ ನಸು ನಗೆಯ ಮುಖ ಅತ್ಯಾಕರ್ಷಕವಾಗಿ ಕಾಣಿಸುತ್ತದೆ. ಈ ವಿಗ್ರಹವನ್ನು ತುಂಬಾ ಆತುರದಿಂದ ಎರಡೇ ತಿಂಗಳಲ್ಲಿ ಮಾಡಿಕೊಟ್ಟರಂತೆ.

ಕೃಷ್ಣರಾಜ ಸಾಗರದ ಪ್ರವೇಶದಲ್ಲಿಯೇ ಮುಂದಿನ ಹಸ್ತಗಳನ್ನು ಜೋಡಿಸಿ ಹಿಡಿದಿರುವ ಕಲಶದಿಂದ ನೀರನ್ನು ಹರಿಸುತ್ತಿರುವ ಕಾವೇರಿ ಮಾತೆಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಮಿರ್ಜಾ ಇಸ್ಮಾಯಿಲ್ ಅವರು ನಿರ್ಮಾಣ ಮಾಡಿಸಿರುವ ಪ್ರತಿಮೆ. ಇದೇ ರೀತಿಯಾಗಿ ಪಾವಟಿಗೆಗಳ ಮೇಲೆ ನೀರು ಹರಿಯುತ್ತಿರುವ ಹಿನ್ನೆಲೆಯಲ್ಲಿ ರಾಧಾಕೃಷ್ಣರ ಅಮೃತಶಿಲೆಯ ಪ್ರತಿಮೆಯೊಂದಿದೆ. ಅದನ್ನು ಸ್ವಾಮಿಗಳೇ ಮಾಡಿಕೊಟ್ಟಿದ್ದಾರೆ. ಈ ಶಿಲ್ಪದಲ್ಲಿ ಶ್ರೀಕೃಷ್ಣ ಕೊಳಲನ್ನೂದುತ್ತ ಬಲಗಾಲನ್ನು ಸ್ಥಿರವಾಗಿ ನೆಲಕ್ಕೂರಿದ್ದು ಎಡಪಾದದ ಉಂಗುಷ್ಠ ಮಾತ್ರ ನೆಲಕ್ಕೆ ತಾಗಿದಂತಿದೆ. ಸೊಗಸಾದ ಕಚ್ಚೆಯುಡಿಗೆ, ಕೊರಳಿಂದ ಇಳಿಬಿದ್ದ ವೈಜಯಂತಿಮಾಲೆ ಭುಜಗಳ ಮೇಲಿಂದ ತೂಗಿಬಂದಿರುವ ವಸ್ತ್ರವು ಕೆಳಮುಖವಾಗಿದೆ. ಪಕ್ಕದಲ್ಲಿ ನಿಂತ ರಾಧೆಯ ಶಿಲ್ಪವೂ ಸಹ ನೃತ್ಯಭಂಗಿಯಲ್ಲಿ ಮಾಡಿದ್ದು ರಾಧೆಯ ಬಲಗೈ ಕೃಷ್ಣನ ಎಡಭುಜದ ಮೇಲಿದೆ. ರಾಧೆಯ ಎಡಗೈ ಸೊಂಟದ ಮೇಲೆ ಇಟ್ಟುಕೊಂಡಿದ್ದಾಳೆ. ರಾಧೆಯ ಜಡೆ ಎಡವಕ್ಷಸ್ಥಳದ ಪಾರ್ಶ್ವದಿಂದ ಹಾಯ್ದು ಸೊಂಟದಲ್ಲಿನ ಕೈ ಬಳಿಯಲ್ಲಿ ಹಿನ್ನೆಲೆಗೆ ಸರಿದಿದೆ. ಜಡೆ ಹೆಣೆದಾಗ ಕೂದಲಿನ ನುಲಿಯುವಿಕೆ ಸಹಜವಾಗಿ ಬರುವ ಎಲ್ಲಾ ಲಕ್ಷಣಗಳನ್ನು, ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ನಾಜೂಕಾಗಿ ಮಾಡಿದ್ದಾರೆ.



ಚಿತ್ರ ೬. ೫ : ರಾಧಾಕೃಷ್ಣ (ಅಮೃತಶಿಲೆ)

ಶ್ರೀಕೃಷ್ಣನ ಮುಖದಲ್ಲಿ ಕೊಳಲನ್ನೂದುವಾಗ ಇರಬೇಕಾದ ರಾಗ ತಲ್ಲೀನತೆ ಲಕ್ಷಣಗಳನ್ನು ಹಾಗೆಯೇ ರಾಧೆಯು ಆ ಹಾಡಿನ ರಾಗದ ಮಾಧುರ್ಯದಲ್ಲಿ ಮನಸೋತ ಸ್ಥಿತಿಯನ್ನು ಶಿಲ್ಪದಲ್ಲಿ ಬಿಂಬಿಸಿರುವುದು ಕಂಡುಬರುತ್ತದೆ. ಪ್ರಭಾವಳಿ ರಹಿತವಾಗಿ ನಿಂತಿರುವ ಈ ಶಿಲ್ಪ ಎರಡು ಪ್ರತ್ಯೇಕ ವಿಗ್ರಹಗಳಾದರೂ ಅವುಗಳ ದೀರ್ಘಕಾಲದ ಬಾಳಿಕೆಗೆ ಊನವಾಗದಂತಿರಲೂ ಮಂಡಿಯಿಂದ ಪಾದದವರೆಗೆ ಪೀಠಕ್ಕೆ ಸೇರಿದ ಹಾಗೆ ಹಿಂಬದಿ ಕಲ್ಲನ್ನು ಹಾಗೆ ಉಳಿಸಿಕೊಂಡು ಕೆತ್ತನೆ ಮಾಡಿ ಉಳಿದ ಹೊರ ಆವರಣ ದೇಹದ ಆಕಾರಕ್ಕೆ ತಕ್ಕಂತೆ ಬಿಡಿಸಿ ಜುಳು ಜುಳು ನೀರು ಹರಿಯುವ ರಮಣೀಯತೆಯನ್ನು ರಾಧಾಕೃಷ್ಣನ ಹಿಂಬದಿಯಿಂದ ನೋಡಿದಾಗ ಕಾಣುವಂತೆ ಮಾಡಿಕೊಂಡಿರುವುದು ವಿಶೇಷ.

ತಮಿಳನಾಡಿನಿಂದ ಬಂದ ಶ್ರೀವೈಷ್ಣವ ಅಯ್ಯಂಗಾರ್ಯರ ಆಡಳಿತಕ್ಕೆ ಒಳಪಟ್ಟ, ಮೈಸೂರಿನ ಪರಕಾಲ ಸ್ವಾಮಿಗಳ ಮಠ. ಇದಕ್ಕೆ ಅರಮನೆಯ ಗೌರವ ಬಹಳವಾಗಿ ಸಲ್ಲುತ್ತದೆ. ಶ್ರೀ ಕೃಷ್ಣ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರ ಶಿಲಾ ವಿಗ್ರಹವನ್ನು, ಬೆಳ್ಳಿ ಹಯಗ್ರೀವ ಮೂರ್ತಿಯನ್ನು ಮಾಡಿಕೊಟ್ಟಿರುವುದಲ್ಲದೆ ಪ್ರತಿಷ್ಠಾಪನೆ ಸಹ ಮಾಡಿದ್ದಾರೆ. ಇಲ್ಲಿ ಗಮನಿಸಬೇಕಾದ ವಿಶೇಷ ಅಂಶವೆಂದರೆ ದೇವತಾ ಶಿಲ್ಪಗಳನ್ನು ಮಾಡುವುದಕ್ಕೂ ತದ್ರೂಪ ಶಿಲ್ಪ ಮಾಡುವುದಕ್ಕೂ ವ್ಯತ್ಯಾಸವಿದೆ. ತದ್ರೂಪ ಎಂಬ ಪದವೇ ಸ್ಪಷ್ಟತೆ, ನಿಖರತೆ, ಖಚಿತತೆ ಅಥವಾ ಯಥಾವತ್ತತೆ (ರಿಯಾಲಿಟಿ) ಇರುವಂತಹದ್ದು. ಕೊಂಚ ವ್ಯತ್ಯಾಸವಾದರೂ ಆ ಮುಖದಂತೆ ಇಲ್ಲ ಎಂಬ ಉದ್ಗಾರ ನೋಡುಗರಿಂದ ಕೂಡಲೇ ಬರುತ್ತದೆ. ಇಂತಹ ಕ್ಲಿಷ್ಟ ತದ್ರೂಪ ಶಿಲ್ಪಗಳನ್ನು ನಿರಾಯಾಸವಾಗಿ ಮಾಡುವ ಕೌಶಲ ಸ್ವಾಮಿಗಳಲ್ಲಿತ್ತು. ಪರಕಾಲ ಮಠದ ಹಿಂದಿನ ಸ್ವಾಮಿಗಳವರ ತದ್ರೂಪ ಶಿಲ್ಪವನ್ನು ಬಹಳವಾಗಿ ಮೆಚ್ಚಿ ಶಿಲ್ಪಕಲಾವಿಶಾರದ ಎಂಬ ಬಿರುದು ನೀಡಿ ಗೌರವಿಸಿದ್ದಾರೆ. ಮತ್ತೊಂದು ತದ್ರೂಪ ಶಿಲ್ಪ ಬೆಂಗಳೂರು ನಗರದ ವಸಂತಪುರದಲ್ಲಿದ್ದ ಯಾದಾಳಂ ಸುಬ್ಬಯ್ಯಶೆಟ್ಟರ ಶಿಲ್ಪವನ್ನು ಮಾಡಿಕೊಟ್ಟಿದ್ದಾರೆ. ರಾಜ್ಯದ ಹಲವು ವೀರಶೈವ ಮಠಗಳ ಹಿಂದಿನ ಪೀಠಾಧಿಪತಿಗಳ ರೂಪಶಿಲ್ಪವನ್ನೂ ಮಾಡಿಕೊಟ್ಟಿದ್ದಾರೆ.

ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿರುವ ಇವರು ವಿಶೇಷವಾಗಿ ವಿಶ್ವಕರ್ಮರ ಅಗ್ರದೇವತೆಯಾದ ಕಾಳಿಕಾಂಬ ದೇವಾಲಯ ಕಡೆಗೆ ಗಮನ ಹರಿಸಿದಂತಿದೆ. ಅವುಗಳಲ್ಲಿ ಮಂಗಳೂರಿನ ಕಾಳಿಕಾಂಬ ದೇವಾಲಯ, ಹಿಂದೂಪುರದ ವೈಶ್ಯ ಮಂಡಲಿಯ ಆಶ್ರಯದ ಕನ್ಯಕಾಪರಮೇಶ್ವರಿ ದೇವಾಲಯ, ಮಂಗಳಾಪುರದ ದೇವಾಲಯ, ತಮಿಳುನಾಡಿನ ವಾಲಾಜಪೇಟೆಯಲ್ಲಿರುವ ದೇವಾಲಯದ ಜೀರ್ಣೋದ್ಧಾರ ಮುಂತಾದವು ಕೆಲವು ಮಾತ್ರ.



ಚಿತ್ರ ೬. ೬ : ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳು

ಹಿಂದೂಪುರದಲ್ಲಿ ಸ್ವಾಮಿಗಳು ಅಮೃತ ಶಿಲೆಯಿಂದ ಮಾಡಿದ ಕನ್ಯಕಾಪರಮೇಶ್ವರಿ ಮತ್ತು ಶೇಷಶಯನ ವಿಗ್ರಹಗಳನ್ನು ಪ್ರತಿಷ್ಠಾಪಿಸಲು ಅಲ್ಲಿಯ ವೈದಿಕ ಬ್ರಾಹ್ಮಣರು ಒಪ್ಪಲಿಲ್ಲ.

'ಕೆತ್ತನೆ ಮಾಡುವ ಶಿಲ್ಪಿಗೆ ನೇತ್ರೋನ್ಮಿಲನದಂತಹ ಮಂತ್ರೋಕ್ತ ವಿಧಿ ಏನು ಗೊತ್ತು?' ಎಂಬುದು ಅವರ ವಾದವಾಗಿತ್ತು. ಅವರ ಅಜ್ಞಾನವನ್ನು ಶಾಸ್ತ್ರಾಧಾರ ಸಹಿತ ದೂರವಾಡಿ ಸ್ವಾಮೀಜಿಯವರೇ ಆ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು.

ಮೈಸೂರಿನ ಚಾಮುಂಡಿ ಬೆಟ್ಟದ ಮೇಲಿರುವ ಜ್ವಾಲಾಮಾಲಿನಿ ದೇವಾಲಯವಿದ್ದು ಅದು ೧೯೫೧ರಲ್ಲಿ ಶಿಥಿಲವಾಗಿ ವಾಲಿತ್ತು. ವಾಲಿದ ಮೂರ್ತಿಗೆ ಅಲ್ಲಿನ ಅರ್ಚಕರು ಒಂದು ಕತೆ ಕಟ್ಟಿ ಜನರನ್ನು ಭೀತಗೊಳಿಸಲು ಅರ್ಚಕರು ದೇವಿ ಮುನಿಸಿಕೊಂಡಿದ್ದಾಳೆಂದು ಅದಕ್ಕಾಗಿ ವಿಶೇಷೋಪಚಾರ ಪೂಜೆ ಇತ್ಯಾದಿಗಳ ಹೆಸರಿನಲ್ಲಿ ಜನರಿಂದ ಹಣ ಸೆಳೆಯಲು ಅರ್ಚಕರು ಪ್ರಯತ್ನಿಸುತ್ತಿದ್ದರು. ಆ ಭೀತಿ ಹೋಗಲಾಡಿಸಿ ಭೂ ಕುಸಿತದ ಪರಿಣಾಮದಿಂದ ಮೂರ್ತಿ ವಾಲಿದೆಯೆಂದು ತಿಳಿಸಿ ಹೊಸದಾದ ವಿಗ್ರಹ ಮಾಡಿ ಸ್ಥಳವನ್ನು ಶುದ್ಧಿಗೊಳಿಸಿ ತಾವೇ ಹೊಸ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಎಲ್ಲರೂ ಸಂತೋಷಪಟ್ಟರು. ಆದರೆ ಸತ್ಯಾಂಶ ಹೊರಗೆಡಹಿದ ಸ್ವಾಮಿಗಳ ಮೇಲೆ ಅರ್ಚಕ ವೃಂದ ಮತ್ತವರ ಹಿಂಬಾಲಕರು ದ್ವೇಷಿಸುತ್ತಾ ಪ್ರತಿ ಕೆಲಸದಲ್ಲೂ ದೋಷ ತೋರಲು ಯತ್ನಿಸುತ್ತಾ ಬಂದರು.


ಕಲ್ಲಿನ ಮೂರ್ತಿಗೆ ಬೇಡಿಕೆ ಬಂದಂತೆ ಲೋಹದ ಮೂರ್ತಿ ಮಾಡಿಕೊಡಲು ಸಹ ಬೇಡಿಕೆ ಹೆಚ್ಚಾಗಿತ್ತು. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮಠಕ್ಕೆ ಪಂಚಲೋಹದ ಶಾರದೆ, ಚಾಮುಂಡಿಬೆಟ್ಟದ ದೇವಾಲಯಕ್ಕೆ ಮೆರವಣಿಗೆಯ ವಿಗ್ರಹಗಳು, ಹೊರ ರಾಜ್ಯಗಳಾದ ಕಂಚಿಗೆ ಅಮೃತ ಶಿಲೆಯ ಗಾಯತ್ರಿ ವಿಗ್ರಹ, ಆಂಧ್ರದ ಗುಂಟೂರಿಗೆ ಕಾಮಾಕ್ಷಿ ವಿಗ್ರಹ ಮಾಡಿಕೊಟ್ಟಿದ್ದಾರೆ.

ಇದಕ್ಕಿಂತ ಹೆಚ್ಚಿನ ಮಹತ್ತ್ವವುಳ್ಳದ್ದು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ದರ್ಬಾರ್ ಸಂದರ್ಭದಲ್ಲಿ ಕುಳಿತುಕೊಳ್ಳುತ್ತಿದ್ದ ಸಿಂಹಾಸನವನ್ನು ವಿಸ್ತರಿಸಿ ನವೀಕರಿಸಿರುವುದು. ಸಿಂಹಾಸನ ಚಿನ್ನದ್ದು ಎಂಬ ಮಾತು ಜನ ಜನಿತ. ಆದರೆ ಪೂರ್ಣ ಪ್ರಮಾಣದ ಚಿನ್ನದ್ದಲ್ಲ ಇದು. ತಾಮ್ರದ ತಗಡಿಗೆ ಚಿನ್ನದ ಲೇಪನ ಮಾಡಿರುವುದು. ಈ ಲೇಪನದಲ್ಲಿ ಸಹ ಆಕ್ಸಿಡೈಸಿಂಗ್ ಮತ್ತು ಪ್ಲೇಟಿಂಗ್ ಎಂಬ ಎರಡು ಕ್ರಮಗಳಿವೆ. ಎರಡನೆಯದನ್ನು ವರ್ತಿ ಅಂಟಿಸುವ ಕ್ರಮ ಎಂದು ಸಹ ಕರೆಯುವ ಪ್ಲೇಟಿಂಗ್ ಮಾಡುವ ವಿಧಾನವೇ ಶಾಶ್ವತವಾಗಿರುವಂತಹದ್ದು. ಈ ಕ್ರಮದಿಂದ ಮಾಡಿರುವುದು ಎಂದೂ ಮಾಸುವುದಿಲ್ಲ; ಹೊಳಪುಗೆಡವುದಿಲ್ಲವಾದ್ದರಿಂದ ಸಿಂಹಾಸನದ ಬಹುಭಾಗ ಈ ತೆರನಾಗಿ ಮಾಡಲಾಗಿದೆ. ಈ ಪ್ಲೇಟಿಂಗ್ ಪದ್ಧತಿಗೆ ಚಿನ್ನ ಅಧಿಕವಾಗಿ ಬೇಕಾಗುತ್ತದೆ, ಮರದಲ್ಲಿ ಯಾವ ಯಾವ ಆಕರದಲ್ಲಿ ಶಿಲ್ಪವನ್ನು ಮಾಡಿರುತ್ತೇವೆಯೋ ಹಾಗೆಯೇ ರಾಸಾಯನಿಕ ಬಳಸಿ ಚಿನ್ನ ಕರಗಿಸಿ ಹಾಕಿ ಅವಶ್ಯವಿರುವಂತೆ ರೂಪಮಾಡಿಕೊಂಡು ನಂತರ ಕುಸರಿ ಕೆಲಸ ಮಾಡಬೇಕಾಗುವಲ್ಲಿ ಲೋಹಶಿಲ್ಪಿಗೆ ಅಪಾರವಾದ ಅನುಭವ ಶ್ರದ್ಧೆ. ಆಸಕ್ತಿ ಇರಬೇಕು ಎಂಬುದು ಸ್ವಾಮಿಗಳ ಮಾತು.

ಸಿಂಗಣ್ಣಾಚಾರ್ಯರಿಗೆ ನವೀಕರಣದ ಕೆಲಸವನ್ನು ಮಾಡಲು ಕೊಟ್ಟು ಶಾಸ್ತ್ರೋಕ್ತವಾದ, ಸಂದರ್ಭೋಚಿತವಾದ, ಅಗ್ರದೇವತೆ, ಪರಿವಾರದೇವತೆ ಹಾಗೂ ಸೌಂದರ್ಯ ವಿಗ್ರಹ, ಇವುಗಳಿಗೆಲ್ಲಾ ಹೊಂದಿಕೆಯಾಗುವಂತಹ ನಕಾಸೆ ಚಿತ್ರ ಮಾಡಿ ಮಹಾರಾಜರವರಿಗೆ ತೋರಿಸಿ ಸಹಾಯಕ ಸ್ವರ್ಣ ಶಿಲ್ಪಿಗಳನ್ನು ಕರೆಸಿ, ಸಮಾಲೋಚಿಸಿ ಮಾಡಿರುವ ಅಪೂರ್ವ ಕೆಲಸವಿದಾಗಿದೆ. ನೆಲಮಟ್ಟದಿಂದ ಏಳು ಮೆಟ್ಟಿಲುಗಳಿದ್ದು ಸಿಂಹಾಸನಕ್ಕೆ ಹತ್ತಲು ಸುಲಭ ಅವಕಾಶ ಮಾಡಲಾಗಿದೆ. ಈ ಮೆಟ್ಟಿಲುಗಳ ಎತ್ತರದ ಎರಡರಷ್ಟು ಉದ್ದದಲ್ಲಿ ಮೆಟ್ಟಿಲಿನ ಪ್ರಥಮ ಹಂತವಿದೆ. ಪ್ರತಿ ಹಂತ ಮತ್ತು ಹಿಡಿಯ ನಡುವೆ ಒಂದೊಂದು ವಿಗ್ರಹ ಮಾಡಿರುವುದರಿಂದ ಒಟ್ಟು ಹನ್ನೆರಡು ಲೋಹ ಶಿಲ್ಪಗಳು ವಿವಿಧ ಭಂಗಿಗಳಲ್ಲಿ ನಿಂತಂತೆ ಮಾಡಿ ಪಾದದ ಭಾಗ ಹಂತದ ಮೇಲಿದ್ದರೇ, ತಲೆಯು ಅಗ್ರಭಾಗ ಹಿಡಿಗೆ ತಾಗಿದಂತಿದೆ. ಸಿಂಹಾಸನ ಮತ್ತು ಮೆಟ್ಟಿಲುಗಳು ಪ್ರತ್ಯೇಕವಾದವುಗಳಾಗಿದ್ದು ದಸರಾ ಸಂದರ್ಭದಲ್ಲಿ ಜೋಡಿಸಿ ಅಂದಗೊಳಿಸುತ್ತಾರೆ. ಸಿಂಹಾಸನವನ್ನೂ ಕೂಡಾ ಕೆಲವು ಭಾಗಗಳನ್ನು ಬಿಚ್ಚಿ ಜೋಡಿಸಲು ಸಾಧ್ಯವಾಗುವಂತೆ ಮಾಡಿದ್ದಾರೆ. ಸಿಂಹಾಸನದ ಬೆನ್ನಿನ ಭಾಗದಲ್ಲಿ ಛತ್ರಿಯನ್ನು ಜೋಡಿಸಿದ್ದಾರೆ. ಅತ್ಯಂತ ಸುಂದರವಾದ ಕಲಾತ್ಮಕ ನಕಾಸೆಯೊಡನೆ ವಿವಿಧ ಶಕ್ತಿದೇವತೆಗಳ ಉಬ್ಬು ಶಿಲ್ಪಗಳು ಈ ಛತ್ರಿಯಲ್ಲಿ

ಕೆತ್ತಲ್ಪಟ್ಟಿವೆ. ಕುಳಿತುಕೊಳ್ಳುವ ಬೆನ್ನಿನ ಭಾಗದಲ್ಲಿ ಗಂಡಭೇರುಂಡ, ಶಾರ್ದೂಲ, ಅಕ್ಕ ಪಕ್ಕದ ಕಂಬದ ಪಟ್ಟಿಕೆಗಳಲ್ಲಿ ಲಕ್ಷ್ಮೀ, ಸರಸ್ವತಿ, ದೇವಿಯರ ಕೆತ್ತನೆ ಇದೆ. ಛತ್ರಿಯ ದಂಡ ಮತ್ತು ಸಿಂಹಾಸನದ ಬೆನ್ನಿಗೆ ಅಂಟಿಕೊಂಡ ಭಾಗದಲ್ಲಿ ಅಂದರೇ ಸಿಂಹಾಸನದ ಅಗ್ರಭಾಗದಲ್ಲಿ ರಾಜಮನೆತನದ ಅಗ್ರದೇವತೆಯಾದ ಶ್ರೀ ಚಾಮುಂಡೇಶ್ವರಿ ಉಬ್ಬು ಶಿಲ್ಪವಿದೆ. ಸಿಂಹಾಸನದ ಯಾವ ಭಾಗವನ್ನು ನೋಡಿದರೂ ಸುಂದರವಾದ ಉಬ್ಬು ನಕಾಸೆಯ ಶಿಲ್ಪಗಳು ಕಾಣಿಸುತ್ತವೆ. ಸಿಂಹಾಸನದಲ್ಲಿ ಓಡುತ್ತಿರುವ ಕುದುರೆಗಳ ಲೋಹ ಶಿಲ್ಪ ಅಳವಡಿಸಿದ್ದು ಸಿಂಹಾಸನವನ್ನು ಇವು ಹೊತ್ತು ಸಾಗುತ್ತಿವೆಯೇನೊ ಎಂಬಂತೆ ನೊಡುಗನಿಗೆ ಕಾಣುತ್ತದೆ. ಒಟ್ಟಾರೆ ಹೇಳುವುದಾದದರೆ ಸಿಂಹಾಸನದಲ್ಲಿ ಅದೆಷ್ಟು ದೇವತೆಗಳ ಉಬ್ಬು ಶಿಲ್ಪಗಳಿವೆಯೋ ಲೆಕ್ಕಿಸಲು ಸಾಧ್ಯವಾಗುವುದಿಲ್ಲ. ಸಕಲ ದೇವತೆಗಳ ಆಶೀರ್ವಾದ. ಈ ಸಿಂಹಾಸವನ್ನು ಆರೋಹಣ ಮಾಡುವ ಮಹಾರಾಜರಿಗೆ ದೊರಕಲಿ, ಆ ಮೂಲಕ ಸಕಲ ಪ್ರಜೆಗಳಿಗೂ ಸನ್ಮಂಗಳ ಉಂಟಾಗಲೆಂಬ ಮಹದಾಶಯದಿಂದಲೇ ಈ ನಿರ್ಮಾಣವಾಗಿದೆ. ಪ್ರಸ್ತುತ ನವೀಕರಣಗೊಂಡ ಸಿಂಹಾಸನ ಪ್ರಪಂಚದ ಅದ್ಭುತ ಅಮೂಲ್ಯ ವಸ್ತುಗಳಲ್ಲಿ ಒಂದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಜಯಚಾಮರಾಜೇಂದ್ರ ಒಡೆಯರ ಕಾಲದಲ್ಲಾದ ಬಹುತೇಕ ಚಿನ್ನ, ಬೆಳ್ಳಿ ಮತ್ತು ಪಂಚಲೋಹದ ಕೆಲಸಗಳೆಲ್ಲದಕ್ಕೂ ಸಿದ್ಧಲಿಂಗಸ್ವಾಮಿಗಳವರದೇ. ನೀಲಿನಕ್ಷೆ ಸ್ವಾಮಿಗಳ ಸಲಹೆ ಮೇರೆಗೆ ಮಹಾರಾಜರು ಖಾಸಗಿಯಾಗಿ ಪೂಜಿಸಲು ಅವಶ್ಯವೆನಿಸಿದ ಭಾಗವತ ಪುರಾಣದ ಆಧಾರದಿಂದ ಶ್ರೀನಗರವೆಂಬ ಬೆಳ್ಳಿ ಮಂಟಪ ಮತ್ತು ಹದಿನೆಂಟು ಕೈಗಳುಳ್ಳ ಚಿನ್ನದ ನವದುರ್ಗಾದೇವಿಯನ್ನು ಮಾಡಿಸಿರುವುದು ಒಂದು ವಿಶೇಷ ಕೆಲಸವಾಗಿದೆ. ಸುಮಾರು ಏಳು ಅಡಿ ಉದ್ದಗಲದ ಹದಿನಾರು ಅಡಿ ಎತ್ತರದ ಬೆಳ್ಳಿ ಮಂಟಪಕ್ಕೆ ಬಂಗಾರದ ಕಳಸ. ಇದರಲ್ಲಿ ಸುಮಾರು ಒಂದು ಅಡಿ ವ್ಯಾಪ್ತಿಯೊಳಗಿನ ಶಕ್ತಿದೇವತೆಗಳ ಉಬ್ಬು ಶಿಲ್ಪಗಳಿವೆ. ಈ



ಚಿತ್ರ ៥.೭ : ಮೈಸೂರು ರಾಜ್ಯದ ಮಹಾರಾಜರ ಚಿನ್ನದ ಸಿಂಹಾಸನ



ಚಿತ್ರ ೬.೮ : ನವದುರ್ಗಾದೇವಿ (ಮಹಾರಾಜರಿಂದ ನಿತ್ಯಪೂಜೆ ಪಡೆಯುತ್ತಿರುವ ದೇವಿ ಪ್ರತಿಮೆ)

ಉಬ್ಬು ಶಿಲ್ಪಗಳು ಅರಮನೆಯ ದರ್ಬಾರ ಅಂಗಳದಲ್ಲಿ ಪ್ರದರ್ಶಿಸಿರುವ ವರ್ಣಚಿತ್ರ ದೇವತೆಗಳೇ ಆಗಿವೆ. ಈ ನವದುರ್ಗಾದೇವಿ ಸಹ ಸುಮಾರು ಒಂಭೈನೂರು ತೊಲ ತೂಕದಲ್ಲಿಯೆಂದು ಅಲ್ಲಿನ ಹಿರಿಕರ ಅಂಬೋಣ. ನವದುರ್ಗೆಯ ಚಿನ್ನದ ವಿಗ್ರಹದಲ್ಲಿನ ಹದಿನೆಂಟು ಕೈಗಳಲ್ಲೂ ಹದಿನೆಂಟು ಆಯುಧಗಳಿದ್ದು ಪದ್ಮಪೀಠದಲ್ಲಿ ಕುಳಿತಿದ್ದಾಳೆ. ದೇವಿಯ ಹಿಂಭಾಗದಲ್ಲಿನ ಪ್ರಭಾವಳಿಉ ಅಗ್ರಭಾಗದಲ್ಲಿ ಕೀರ್ತಿಮುಖ ದೇವಿಯ ಶಿರಸ್ಸಿನ ಹಿಂದೆ ಜ್ವಾಲೆಯ ಪ್ರಭೆ ಇದ್ದಂತೆಯೂ, ಮುಖದಲ್ಲಿ ಕೊಂಚ ರೌದ್ರತೆ, ಹಣೆಗಣ್ಣು, ನವರತ್ನ ಸಹಿತವಾದ., ಕಿರೀಟದ ಕುಶರಿ ಕೆಲಸದೊಂದಿಗೆ ಸರ್ವಾಭರಣ ಭೂಷಿತೆಯಾಗಿರುವ ವಿಗ್ರಹವಿದಾಗಿದೆ.

ಈ ಶಕ್ತಿದೇವತೆಗಳುಳ್ಳ ಮಂಟಪದಲ್ಲಿ ಸ್ವಾಮಿಗಳು ಅಥವಾ ಇನ್ನಾವುದೇ ಗುರುಗಳು ಕೂರಲಿಕ್ಕೆ ಹಾಗೂ ಮಹಾರಾಜರು ಆಸೀನರಾಗಲಿಕ್ಕೆ ಬೇಕಾದ ಪೀಠ, ಪೂಜಾ ಪರಿಕರಗಳು, ಇವೆಲ್ಲವೂ ಯಾವ ರೀತಿ ಯಾವ ಯಾವ ಲೋಹ (ತಾಮ್ರ, ಬೆಳ್ಳಿ, ಚಿನ್ನ) ಬಳಸಿ ಮಾಡಬೇಕೆಂಬುದರ ನಿರ್ದೇಶನದೊಂದಿಗೆ ರೂಪುಗೊಂಡ ಮಂಟಪ ಇಂದಿಗೂ ಮಹಾರಾಜರ ಕುಟುಂಬದವರ ಖಾಸಗ ಆಸ್ತಿಯಾಗಿದೆ. ನವರಾತ್ರಿಯ ಸಂದರ್ಭದಲ್ಲಿ ವಿಶೇಷವಾಗಿ ಸ್ವಾಮಿಗಳ ಪಾದಪೂಜೆ ನಡೆಸಿ ಈ ಶಕ್ತಿ ದೇವತೆಗೆ ಶ್ರೀ ಸೂಕ್ತವನ್ನು ಪಠಿಸುತ್ತಾ ನವಾವರಣ ಪೂಜೆಯನ್ನು ಮಾಡಿ ವಿಶೇಷವಾಗಿ ತಯಾರಿಸಿದ ನೈವೇದ್ಯವನ್ನು ಮಾಡಿ ಗುರುಹಿರಿಯರಿಗೆ ವಂದಿಸಿ ಭಕ್ಷ್ಯ ಭೋಜ್ಯಗಳನ್ನು ಉಣಬಡಿಸಿ ಸಂತೃಪ್ತಿಗೊಳಿಸುವ ಕ್ರಮವಿತ್ತು. ಬಹುಶಃ ಅದು ಈಗಲೂ ಮುಂದುವರೆದಿರ ಬಹುದು.

ಸ್ವಾಮಿಗಳಿಗಿಂತ ಹತ್ತು ವರ್ಷ ಹಿರಿಯರಾಗಿದ್ದ (ಜನನ ೧೮೭೫) ಸ್ವರ್ಣಶಿಲ್ಪಿ ಎಂದೇ ಬಿರುದಾಂಕಿತಾಗಿದ್ದ ಸಿಂಗಣ್ಣಾಚಾರ್ಯರು ಸ್ವರ್ಣ ಕೆಲಸದಲ್ಲಿ ಸಾಧನೆಗೈದಿದ್ದರೂ ವಿದ್ಯೆಯಲ್ಲಿ ಕೊಂಚ ಹಿಂದೆಯೆ ! ತತ್ಪರಿಣಾಮ ಅರಮನೆಗೆ ಮಾಡಿದ ಚಿನ್ನದ ಅಂಬಾರಿ, ಬೆಳ್ಳಿ ರಥ, ಬೆಳ್ಳಿಯ ಬಾಗಿಲು, ಚಾಮುಂಡಿಬೆಟ್ಟ, ನಂಜನಗೂಡುಗಳಿಗೆ ಮಾಡಿಕೊಟ್ಟ ಅನೇಕ ಬಗೆಯ ಲೋಹ ಕೆಲಸಗಳು, ತ್ರಿನೇಶ್ವರ ದೇವಾಲಯಕ್ಕೆ ಮಾಡಿದ ಕೊಳಗ ಮತ್ತು ಕವಚಗಳು, ಬೆಳ್ಳಿ ಗಾಡಿ, ಬೆಳ್ಳಿ ಕುರ್ಚಿಗಳು, ಒಂದಲ್ಲ ಎರಡಲ್ಲ ಹಲವಾರು ಚಿನ್ನಬೆಳ್ಳಿ ಕೆಲಸಗಳು ಅರಮನೆಯಿಂದಾದ ಸಂದರ್ಭದಲ್ಲೆಲ್ಲಾ ಸ್ವಾಮಿಗಳ ಪಾತ್ರ ಪ್ರಮುಖವಾದದ್ದು. ಸ್ವಾಮಿಗಳ ಮಾರ್ಗದರ್ಶನವನ್ನು ಪಡೆಯದೆ ಸ್ವತಂತ್ರವಾಗಿ ಸಿಂಗಣ್ಣಾಚಾರ್ಯರು ಏನನ್ನೂ ಮಾಡುತ್ತಿರಲಿಲ್ಲ.

ಹಲವಾರು ಕುಶಲಕರ್ಮಿಗಳು ಅರಮನೆಯ ಒಂದು ಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಗೆ ಮಹರಾಜರಿಂದ ನೇಮಕಗೊಂಡವರು ಮಾತ್ರ ಪ್ರವೇಶಿಸಬೇಕೆಂದು ಕಟ್ಟಪ್ಪಣೆ. ಈ ಕುಶಲಕರ್ಮಿಗಳು ಹೋಗುವಾಗ ತಪಾಸಣೆ ಮಾಡಿ ಕಳಿಸುವಿಕೆ (ಕಾರ್ಖಾನೆಯ ರೀತಿ) ಇತ್ಯಾದಿ ನಿಯಮಗಳನ್ನು ಪಾಲಿಸುತ್ತಾ ವರ್ಷಗಟ್ಟಲೇ ಕೆಲಸ ಮಾಡಿದ ಪರಿಣಾಮ ಅತ್ಯಂತ ಬೆಲೆ ಬಾಳುವ ಕುಸರಿ ಕೆಲಸಕ್ಕೆ ಕೊಟ್ಟಷ್ಟು ಪಡೆದುಕೊಂಡು, ಇದು ದೇಶಸೇವೆ, ದೈವ ಸೇವೆ ಎಂಬ ಉದಾರತೆಯಿಂದ ಈ ಶಿಲ್ಪಿಗಳು ಕೆಲಸ ಮಾಡಿದ ಫಲವೇ ಅರಮನೆಯಲ್ಲಿರುವ ಚಿನ್ನಬೆಳ್ಳಿಯ ಅಪೂರ್ವವಾದ ಕಲಾಕೃತಿಗಳು. ಅರಮನೆಯ ಕೆಲಸ ಮುಗಿದ ಮೇಲೆ ಯಾವುದೇ ಅನುಕೂಲತೆ ಇಲ್ಲದೇ ಕೆಲವು ಶಿಲ್ಪಿಗಳು ನಿರಾಶ್ರಿತರಾದದ್ದೂ ಉಂಟು. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿದ್ದವರ ವಿಚಾರವನ್ನು ಸ್ವಾಮಿಗಳು ಮಹಾರಾಜರ ಗಮನಕ್ಕೆ ತಂದು ಅವರಿಗೆ ಸೂಕ್ತ ಪರಿಹಾರ ಕೊಡಿಸಿದ್ದಾರೆ. ಹಾಗೆಯೇ ಇದರ ಫಲವಾಗಿ ಪಟ್ಟಭದ್ರರ ಕೆಂಗಣ್ಣಿಗೆ ಗುರಿಯಾಗಿ ಸವಾಮಿಗಳೇ ಹಲವಾರು ಯಾತನೆಗಳನ್ನೂ ಅನುಭವಿಸಿದ್ದಾರೆ.

ಕರ್ನಾಟಕದ ಶಿಲ್ಪಕ್ಷೇತ್ರದ ಇತಿಹಾಸದಲ್ಲಿ ಸ್ವಾಮಿಗಳು ವಿಸ್ಮರಣೆಗೆ ಗುರಿಯಾಗಿರುವುದಕ್ಕೆ ಈ ಪಟ್ಟಭದ್ರರ ಪಾಲು ಬಹುವಾಗಿಯೇ ಇದೆ.

೨

ಸ್ವಾಮಿಗಳು ಮಾಡಿರುವ ಕೆಲವು ಸ್ಕೆಚ್‌ಗಳು

ಸ್ವಾಮಿಗಳು ಯಾವ ಕೆಲಸವನ್ನು ಮಾಡಬೇಕಾಗಿದ್ದರೂ ಬಹು ಯೋಜಿತವಾಗಿ ಚಿಂತಿಸಿ ಸ್ಕೆಚ್ ಮಾಡಿದ ತರುವಾಯವೇ ಚಿತ್ರ ಅಥವಾ ಶಿಲ್ಪವನ್ನು ಮಾಡಲು ಪ್ರಾರಂಭಿಸುತ್ತಿದ್ದರು. ಅವರಲ್ಲಿ ಚಿತ್ರ ಅಥವಾ ಶಿಲ್ಪವನ್ನು ಮಾಡಿಸಲು ಬರುವವರಿಗೂ ಇದೇ ನಿಯಮ ಅನ್ವಯಿಸುತ್ತಿದ್ದರು. ಅವರು ಕೇಳಿದ ಮೂರ್ತಿಯ ಸ್ಕೆಚ್‌ಮಾಡಿ ತೋರಿಸಿ ಅವರು ಅಂಗೀಕರಿಸಿದ ತರುವಾಯವೇ ಅವರ ಕೆಲಸವನ್ನು ಕೈಗೆತ್ತಿಕೊಳ್ಳುತ್ತಿದ್ದರು. ಸ್ವಾಮಿಗಳು ಡ್ರಾಯಿಂಗ್ ಹಾಳೆಗಳನ್ನು ಸೇರಿಸಿ ಒಂದು ಪ್ರತ್ಯೇಕವಾದ ಸ್ಕೆಚ್‌ಬುಕ್ ಹೊಲೆದಿರಿಸಿ ಕೊಂಡಿರುತ್ತಿದ್ದರು. ಆ ಪುಸ್ತಕಗಳು ಲಭಿಸಿಲ್ಲವಾದರು ಕೆಲವು ಹಾಳೆಗಳು ಲಭಿಸಿರಿವುದನ್ನು ವಾಚಕರ ಮಾಹಿತಿಗಾಗಿ ಇಲ್ಲಿ ದಾಖಲಿಸಿದೆ.

ಸೋಮಾಸ್ಕಂದ ಮೂರ್ತಿ : ಶಿವ, ಪಾರ್ವತಿ ಮತ್ತು ಕುಮಾರ ಸ್ವಾಮಿ ಇರುವ ಮೂರ್ತಿಯ ತಯಾರಿಕೆಗಾಗಿ ಸ್ವಾಮಿಗಳು ಮಾಡಿರುವ ಸ್ಕೆಚ್ ಕೊಟ್ಟಿದೆ. ಹಿಂಬಯಲ್ಲಿ ಹಿಮಗಿರಿ ಇದೆ. ಶಿವನ ವಾಹನವಾದ ವೃಷಭವು ಪೀಠದಲ್ಲಿದೆ. ದೇವಿಯ ಮಡಿಲಲ್ಲಿ ಕುಳಿತಿರುವ ಕುಮಾರಸ್ವಾಮಿ ವೇಲಾಯುಧ ಧಾರಿಯಾಗಿದ್ದಾನೆ. ದೇವಿ ತನ್ನ ಎರಡೂ ಹಸ್ತಗಳಿಂದ ಕುಮಾರನನ್ನು ಹಿಡಿದಿದ್ದಾಳೆ. ಶಿವನ ನಾಲ್ಕು ಕೈಗಳು ಕಾಣಿಸುತ್ತವೆ. ಮುಂದಿನ ಬಲಹಸ್ತದಲ್ಲಿ ಅಭಯ ಮುದ್ರೆ ಇದ್ದು ಎಡಹಸ್ತದಲ್ಲಿ ದೇವಿಯ ಸೊಂಟವನ್ನು ಹಿಡಿದಿದ್ದಾನೆ. ಮೇಲಿನ ಹಸ್ತಗಳಲ್ಲಿ ಅಂಕುಶ ಮತ್ತು ಜಿಂಕೆಗಳಿವೆ. ಇದರಲ್ಲಿ ಈ ಶಿಲ್ಪವನ್ನು ಬಯಸಿರುವವರ ಬಯಕೆಯು ದಾಖಲೆಯೂ ಇದೆ; 'ಕುಮಾರ ನಿಂತಿರುವ ಮಾದ್ರಿ' ಇರಬೇಕು. ಸಾಧಾರಣವಾಗಿ ಇದನ್ನು ಸೋಮಾಸ್ಕಂದ ಮೂರ್ತಿ ಎಂದು ಹೇಳುತ್ತಾರೆ. ಈ ಶಿಲ್ಪ ಯಾರಿಗೆ ಎಂಬುದುದಾಗಲಿ ಈ ಶಿಲ್ಪದ ಮಾಧ್ಯಮದ ವಿವರ, ಎತ್ತರ ಮುಂತಾದ ಮಾಹಿತಿಗಳು ಇಲ್ಲ. ಈ ಬಗ್ಗೆ ಹೇಳಬಲ್ಲವರೂ ಇಲ್ಲ.

ಸೀತಾರಾಮಕಲ್ಯಾಣ : ಮದರಾಸಿನ ಎಂ. ರಾಜಾರಾಂ ನಾಗಪ್ಪ ಅಂಡ್ ಕಂಪನಿಯವರಿಗೆ ಸೀತಾಕಲ್ಯಾಣದ ಎರಡು ಅಡಿ ಅಗಲ ಮತ್ತು ಒಂದೂವರೆ ಅಡಿ ಎತ್ತರದ ಒಂದು ಶಿಲ್ಪವನ್ನು ಮಾಡಲು ಒಂದು ಇಲ್ಲಿ ರೇಖೆಗಳಲ್ಲಿರುವ ನಿಖರತೆ, ಸ್ಕೆಚ್ ಎಂದರೂ ನಿರ್ದಿಷ್ಟವಾದ ರೂಪಲಕ್ಷಣಗಳನ್ನು ಗಮನಿಸಬಹುದು.



ಚಿತ್ರ ೭.೧ : ಸೋಮಸ್ಕಂದ ಮೂರ್ತಿ

ಸ್ಕೆಚ್ ಮಾಡಿ ಕೊಟ್ಟಿದ್ದಾರೆ. ಅದರಲ್ಲಿ ಗಿರಾಕಿಯವರ ಮೊಹರು ಸಹಿ ಮತ್ತು ಅವರ ಪರವಾಗಿ ವ್ಯವಹರಿಸಿರುವ ಎಸ್.ಸುಂದರಂ ಅಯ್ಯರ್ ಅವರ ಅಂಗೀಕರದ ದಾಖಲೆ ಸಹಿಯೊಂದಿಗೆ ಇದೆ. 'ಸೀತೆಯು ಮುಖ ಇನ್ನೂ ಚೆನ್ನಾಗಿರುವಂತೆ ಮಾಡಬೇಕು' ಎಂಬುದು ಅವರ ಟಿಪ್ಪಣಿ.ಉಳಿಕೆ ವಿನ್ಯಾಸವನ್ನು ಒಪ್ಪಿರುವ ಅನುಕ್ತ ಅಂಗೀಕಾರವು ಇದೆ. ಈ ವ್ಯವಹಾರದ ದಿಂನಾಕ ೨೮ ಮೇ ೧೯೬೪, ಈ ಸ್ಕೆಚ್‌ನಲ್ಲಿ ಕೊಟ್ಟಿರುವ ವಿವರಗಳನ್ನು ಗಮನಿಸಿ, ಜನಕ ಮಹಾರಾಜ, ಮಹಾರಾಣಿ ಮತ್ತು ದಶರಥ ಮಹಾರಾಜ ಕೌಸಲ್ಯದೇವಿಯರೊಂದಿಗೆ ವಿಶ್ವಾಮಿತ್ರ ಇವರೊಂದಿಗೆ ಆಯಾ ರಾಜ ಮನೆತನಗಳ ಕುಲಪುರೋಹಿತರಿದ್ದಾರೆ. ಸೀತೆ ಮತ್ತು ರಾಮ ಇಬ್ಬರೂ ವಧು-ವರರಾಗಿ ಸಿಂಗರಿಸಿಕೊಂಡಿದ್ದಾರೆ. ಪಕ್ಕದಲ್ಲಿ ಭಂಗಗೊಂಡಿರುವ ಶಿವಧನಸ್ಸು ನೆಲದ ಮೇಲಿದೆ. ಸೀತಾದೇವಿಯು ಶ್ರೀರಾಮನಿಗೆ ವರಮಾಲೆಯನ್ನು ಹಾಕುತ್ತಿದ್ದಾಳೆ. ಇದನ್ನು ಇಂಕ್‌ನಲ್ಲಿ ಬರೆದಿದ್ದಾರೆ ಸಂಪೂರ್ಣ ರೇಖಾಚಿತ್ರವೆಂದೇ ಅಂಗೀಕೃತವಾಗಲು ಅರ್ಹವಾಗುತ್ತಿತ್ತು. ಈ ಮಾತು ಹೇಳಿರುವ ಕಾರಣ ಸ್ವಾಮಿಗಳು ತೀರಾ ಅರೆ-ಬರೆ ಚಿತ್ರಗಳನ್ನು (ಇವನ್ನೇ ಸಾಧಾರಣವಾಗಿ ಸ್ಕೆಚ್ ಎಂದು ವ್ಯವಹಾರದಲ್ಲಿ ಕರೆಯುತ್ತೇವೆ) ಬರೆಯುತ್ತಿರಲಿಲ್ಲ.

ಈ ಚಿತ್ರ ಯಾವ ಮಾಧ್ಯದಲ್ಲಿ ಸಿದ್ಧಪಡಿಸಿದರು ಎಂಬುದು ಗೊತ್ತಿಲ್ಲ. ಆಕಾರವನ್ನು ಗಮನಿಸಿದರೆ. ಇದು ಬೆಳ್ಳಿಯ ಉಬ್ಬುಕೆತ್ತನೆ ಅಥವಾ ವರ್ಣಚಿತ್ರ ಇರಬಹುದು ಎನಿಸುತ್ತದೆ. ಆದರೆ ಇದನ್ನು ಮರ ಅಥವಾ ಶಿಲೆಯಲ್ಲಿ ಮಾಡಲಾಗುವುದಿಲ್ಲ ಎಂದು ಹೇಳುವಂತೆಯೂ ಇಲ್ಲ. ಸ್ವಾಮಿಗಳು ಈ ರೀತಿಯ ಕುಸುರಿ ಶಿಲ್ಪಿಗಳನ್ನು ಮಾಡಿರುವುದುಂಟು. ಆದರೆ ಈ ಸ್ಕೆಚ್‌ನಲ್ಲಿಯೇ ಸ್ವಾಮಿಗಳ ಅಚ್ಚುಕಟ್ಟುತನವನ್ನು ಸ್ಪಷ್ಟವಾಗಿ ಕಾಣಿಸುತ್ತದೆ.



ಚಿತ್ರ ೭.೨ : ಸೀತಾರಾಮ ಕಲ್ಯಾಣ


ಗಿರಿಜಾ ಕಲ್ಯಾಣ

ಈ ಸ್ಕೆಚ್ ಇಂಕಿನಲ್ಲಿಯೇ ಬರೆದಿದ್ದಾರೆ. ಪರ್ವತರಾಜನು ಮತ್ತು ಆತನ ಮಹಾರಾಣಿ ಇಬ್ಬರು ತಮ್ಮ ಕನ್ಯೆ ಗಿರಿಜೆಯನ್ನು ಶಿವನಿಗೆ ಧಾರೆ ಎರೆದು ಕೊಡುತ್ತಿದ್ದಾರೆ. ಬಲಪಾರ್ಶ್ವದಲ್ಲಿ ವಿಷ್ಣುವು ಎಡ ಪಾರ್ಶ್ವದಲ್ಲಿ ಬ್ರಹ್ಮನು ಇದ್ದಾರೆ. ಸಪ್ತರ್ಷಿಗಳಿದ್ದಾರೆ. ಪರ್ವತಾರಾಜನ ಅರಮನೆಯಲ್ಲಿಯ ಇತರರು ಇದ್ದಾರೆ. ಗಂಧರ್ವರು ಮೇಲಿನ ಹೂ ಮಳೆಸುರಿಸುತ್ತಿದ್ದಾರೆ. ವಿವಾಹ ಮಂಟಪದ ತೋರಣ ಸುಂದರವಾಗಿ ವಿನ್ಯಸಿತವಾಗಿದೆ.

ಈ ಸ್ಕೆಚ್‌ನ ಉದ್ದೇಶ ಗೊತ್ತಾಗುವಂತಿಲ್ಲ. ಆದರೆ ಇಂಕಿನಲ್ಲಿಯೇ ನೆರಳು, ಬೆಳಕು ಸಂಯೋಜನೆ ಮಾಡಿ ಕಲ್ಯಾಣ ಮಂಟಪದ ವಿಸ್ತಾರವನ್ನು ಸೃಷ್ಟಿಸಿದ್ದಾರೆ. ಈ ಹಾಳೆ ಹರಿದು ಶಿಥಿಲವಾಗಿದೆ. ಮೇಲೆ ಕಾಮದಹನ ಮೂರ್ತಿ (೭), ಕಾಲಾರಿ ಮೂರ್ತಿ (೮) ಮತ್ತು ತ್ರಿಪುರಾಂತಕ ಮೂರ್ತಿ(೯)ಗಳ ಕಿರು ರೇಖಾಚಿತ್ರಗಳೂ ಕೂಡ ಇಂಕಿನಲ್ಲಿಯೇ ಬರೆದಿದ್ದಾರೆ. ಇವಕ್ಕೆ ಸಂಖ್ಯೆಗಳು ಸೂಚಿತವಾಗಿರುವುದರಿಂದ ಈ ಮಾಲೆಯಲ್ಲಿ ಇತರ ಲೀಲಾಮೂರ್ತಿಗಳು ಇರಬೇಕೆಂಬ ಅನುಮಾನ ಉಂಟಾಗುತ್ತದೆ. ಆದರೆ ಅವೆಲ್ಲಾ ಶಿಥಿಲವಾಗಿವೆ ಎಂಬ ಅನುಮಾನಕ್ಕೆ ಇಂಬು ಕೊಡುತ್ತದೆ.



ಚಿತ್ರ ೭. ೩ : ಗಿರಿಜಾ ಕಲ್ಯಾಣ




ಚಿತ್ರ ೭.೪ : ಶಿವನ ಲೀಲಾವತಾರಗಳು

ಎಂದರೆ ಗಿರಿಜಾ ಕಲ್ಯಾಣ ಚಿತ್ರವು ದೊಡ್ಡದಾಗಿದ್ದರೂ ಇದರ ಸುತ್ತಲೂ ಶಿವನ ಲೀಲಾಮೂರ್ತಿಗಳ ಚಿತ್ರಣಗಳನ್ನು ಪೋಣಿಸಿದ್ದರು. ಆದ್ದರಿಂದ ಇದು ದೊಡ್ಡ ಚಿತ್ರದ ಒಂದು ಭಾಗ ಎಂಬುದನ್ನು ಖಚಿತವಾಗಿ ಹೇಳ ಬಹುದು. ಗೋಡೆಯ ಮೇಲೆ ವರ್ಣಚಿತ್ರ ಅಥವಾ ಶಿಲ್ಪ ಸಂಯೋಜನೆಯ ದೃಷ್ಟಿಯಿಂದ ಮಾಡಿರುವ ಸ್ಕೆಚ್ ಇರಬಹುದು ಎಂಬುದಾಗಿ ಅಂದಾಜು ಮಾಡಬಹುದು.

ಶಿವನ ಲೀಲಾವತಾರಗಳು

ಇನ್ನೊಂದು ಬಿಡಿಹಾಳೆಯಲ್ಲಿ ಆರು ಲೀಲಾವತಾರಗಳು ಮಾತ್ರ ಕಾಣಿಸುತ್ತವೆ. ಪಕ್ಕದಲ್ಲಿ ಎರಡು ಲೀಲಾವತಾರಗಳು ಕಾಗದ ಹಾಳಾಗಿರುವುದರಿಂದ ಕಾಣಿಸುವುದಿಲ್ಲ. ಇದರಲ್ಲಿ ಏಕಪಾದ ಮೂರ್ತಿ ಇದೆ. ಮೂರ್ತಿಯ ಬಲಪಾರ್ಶ್ವದ ಹೆಗಲಲ್ಲಿ, ವಿಷ್ಣು, ಎಡಪಾರ್ಶ್ವದ ಹೆಗಲಲ್ಲಿ ಬ್ರಹ್ಮ ಇದ್ದಾರೆ. ಪಕ್ಕದಲ್ಲಿ ದಕ್ಷಿಣಾಮೂರ್ತಿ ಇದ್ದು ಸ್ವಾಮಿಯ ಎರಡು ಪಾರ್ಶ್ವಗಳಲ್ಲಿ ಇರುವ ಮುನಿಗಳಲ್ಲಿ ಶುಕಮಹರ್ಷಿಸ್ಪಷ್ಟವಾಗಿ ಕಾಣಿಸುತ್ತಾರೆ. ವಟವೃಕ್ಷದ ಅಡಿಯಲ್ಲಿರುವ ದಕ್ಷಿಣಾಮೂರ್ತಿಯು ಯೋಗಪಟ್ಟದೊಂದಿಗಿದ್ದು ವೀಣಾಧಾರಿಯಾಗಿದ್ದಾನೆ. ಇದರ ಪಕ್ಕದಲ್ಲಿ ಲಿಂಗೋದ್ಭವ ಮೂರ್ತಿಯ ಚಿತ್ರ ಇದೆ. ಇಲ್ಲಿ ಮೂರ್ತಿಯೇ ಲಿಂಗದಿಂದ ಆವಿರ್ಭವಿಸಿದಂತೆ ಇದೆ. ಹಂಸರೂಪಿಯ ಬ್ರಹ್ಮ ಮತ್ತು ವರಾಹ ರೂಪಿಯ ವಿಷ್ಣು ಇಬ್ಬರೂ ಇಕ್ಕೆಲಗಳಲ್ಲಿದ್ದಾರೆ. ಅನಂತವಾಗಿರುವ ಆಕಾಶವೇ ಹಿನ್ನೆಲೆಯಾಗಿದೆ. ಇದರ ಪಕ್ಕದಲ್ಲಿ ಇನ್ನೊಂದು ಚಿತ್ರವಿದೆಯಾದರೂ ಅದನ್ನು ಗುರ್ತಿಸಲು ಸಾಧ್ಯವಾಗುವುದಿಲ್ಲ ಅದರ ಪಕ್ಕದಲ್ಲಿರುವುದು ಚಂಡೇಶಾನುಗ್ರಹ ಮೂರ್ತಿ. ಅದರ ಪಕ್ಕದಲ್ಲಿ ಅರ್ಧನಾರೀಶ್ವರ ಮೂರ್ತಿ ಇದೆ. ನಂತರದ ಮೂರ್ತಿಯನ್ನು ಎರಡೂ ಸ್ಕೆಚ್‌ಗಳು ಒಂದೇ ಚಿತ್ರಕ್ಕೆ ಸೇರಿದ್ದು ಎಂದು ಭಾಸವಾಗುತ್ತದೆ. ಹಾಗೆಯೇ ಪ್ರತಿಯೊಂದು ಲೀಲಾವತಾರದ ಒಂದು ನಕಾಸೆಯು ಇದೆ. ಆದ್ದರಿಂದ ಇದು



ಚಿತ್ರ ೭.೫ : ಶಿವನ ಪಂಚವಿಂಶತಿ (೨೫) ಲೀಲಾ ಮೂರ್ತಿಗಳು. ಪೂರ್ವೋಲ್ಲೇಖಿತ ಎರಡು ಚಿತ್ರಗಳ ಸಂಯೋಜಿತ ರೂಪ (ಕಲ್ಪನೆ). ಒಟ್ಟುಶಿಲ್ಪದ ವಿನ್ಯಾಸ ಇಂತಿದ್ದಿರಬಹುದು (ಕಲ್ಯಾಣ ಸುಂದರ ಮೂರ್ತಿ – ಲೀಲಾಮೂರ್ತಿಗಳಲ್ಲಿ ೨೫)

ವಿಸ್ತೃತವಾದ ಚಿತ್ರವೊಂದರ ಸ್ಕೆಚ್ ಎನಿಸುತ್ತದೆ. ಬಹುಶಃ ಈ ಎರಡು ಭಾಗಗಳು . ಈ ರೀತಿಯಲ್ಲಿ ಆ ವಿಸ್ತೃತ ಸಂಯೋಜನೆಯ ಭಾಗವಾಗಿರಬಹುದು– ಗಿರಿಜಾಕಲ್ಯಾಣವನ್ನು ಕೇಂದ್ರವಾಗಿ ಇರಿಸಿ ಉಳಿದ ಲೀಲಾಮೂರ್ತಿಗಳಲ್ಲಿ ಇಪ್ಪತ್ನಾಲ್ಕನ್ನು ಸುತ್ತಲೂ ವಿನ್ಯಾಸ ಮಾಡಿರಬಹುದು ಎನಿಸುತ್ತದೆ. ಪಂಚವಿಂಶತಿ (೨೫) ಶಿವನ ಲೀಲಾಮೂರ್ತಿಗಳ ಪ್ಯಾನಲ್ ನಿರ್ಮಿಸಲು ಇದು ಸ್ಕೆಚ್ ಆಗಿದ್ದಿರಬಹುದು.

ಈ ಸ್ಕೆಚ್‌ಗಳಲ್ಲಿ ಸ್ವಾಮಿಗಳು ತಮ್ಮ ಕೆಲಸದಲ್ಲಿ ವಹಿಸುತ್ತಿದ್ದ ಶ್ರದ್ಧೆ ಮತ್ತು ಆಸಕ್ತಿ ಸ್ಪಷ್ಟವಾಗಿ ಗ್ರಹಿಕೆಗೆ ಬರುತ್ತದೆ. ಎಂಥಾ ಕೆಲಸವನ್ನೂ ಅವರು ಹಗುರವಾಗಿ ಭಾವಿಸಿದ್ದೇ ಇಲ್ಲ. ತಮ್ಮ ಬದುಕಿನುದ್ದಕ್ಕೂ ತಾವು ಒಪ್ಪಿಕೊಂಡ ಕೆಲಸವನ್ನು ಅತೀವ ಶ್ರದ್ಧೆಯಿಂದ ಮಾಡಿದವರು. ಶಿಲ್ಪ ಅವರ ಪಾಲಿಗೆ ದೇವತಾರಾಧನೆಯ ಒಂದು ಮಾರ್ಗವಾಗಿತ್ತು.

ಸ್ವಾಮಿಗಳ ಏಕಮಾತ್ರಪುತ್ರರಾದ ನಾಗೇಂದ್ರ ಸ್ಥಾಪತಿಗಳು ಇದೇ ರೀತಿಯಾಗಿ ಸ್ಕೆಚ್‌ಬುಕ್ ಇರಿಸಿದ್ದು ಮಾತ್ರವಲ್ಲ ತಾವು ಪೂರೈಸಿದ ಶಿಲ್ಪದ ಛಾಯಾ ಚಿತ್ರವನ್ನು ತೆಗೆದು ಸ್ಕೆಚ್‌ನೊಂದಿಗೆ ಇರಿಸುತ್ತಿದ್ದರು. ಆದರೆ ಅದು ಈಗ ಯಾರಲ್ಲಿದೆ ಎಂಬುದರ ಮಾಹಿತಿ ಇಲ್ಲ.

ವಿದ್ಯಾರ್ಥಿನಿಗೆ ರೇಖಾಚಿತ್ರದ ಪಾಠ

ಈ ಬಗ್ಗೆ ವಿವರಗಳನ್ನು ಹೇಳುವವರು ಇಲ್ಲ. ಸ್ವಾಮಿಗಳಲ್ಲಿ ರೇಖಾಚಿತ್ರ ಮತ್ತು ಶಿಲ್ಪವನ್ನು ಮೈಸೂರಿನ ಸುಭಾಷಿಣಿ ದೇವಿಯರು ಅಭ್ಯಾಸ ಮಾಡಿದರು. ಇವರ ತಾತ ಮತ್ತು ಮುತ್ತಾತಂದಿರು ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಚಾಮರಾಜ ಒಡೆಯರ್ ಅವರ ಕಾಲದಲ್ಲಿ ಅರಮನೆಯಲ್ಲಿ ಮುಜರಾಯಿ–ಭಕ್ಷಿಗಳಾಗಿದ್ದವರು. ತಂದೆ ಜೆ.ವೆಂಕಟಸ್ವಾಮಿ ಚೆಟ್ಟಿಯಾರ್ ಜಪಾನಿನಲ್ಲಿ ಕೈಗಾರಿಕಾ ಉದ್ಯಮದ ಬಗ್ಗೆ ವಿಶೇಷ ವ್ಯಾಸಂಗ ಮಾಡಿದ್ದವರು. ಇವರಿಗೆ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ವಿಶೇಷ ಆಸಕ್ತಿ ಇತ್ತು. ಪ್ರಸ್ತುತ ಮೈಸೂರಿನ ಲ್ಯಾನ್ಸ್ ಡೌನ್ ಬಿಲ್ಡಿಂಗ್ ಇರುವ ಸ್ಥಳದಲ್ಲಿ ಅವರ ಮನೆ ಇತ್ತು. ಕೃಷ್ಣರಾಜ ವೃತ್ತದ ಬಳಿ ಜಗನ್ನಾಥ ಸ್ಟೋರ್ಸ್ ಎಂಬ ಡಿಪಾರ್ಟ್‌ಮೆಂಟ್ ಮಳಿಗೆ ಇದ್ದು ವ್ಯಾಪಾರ ನಡೆಸುತ್ತಿದ್ದರು. ವೆಂಕಟಸ್ವಾಮಿ ಚೆಟ್ಟಿಯವರು ವೈದ್ಯಕೀಯ ವಿದ್ಯಾರ್ಥಿಯಾಗಿ ಕಲ್ಕತ್ತೆಯಲ್ಲಿ ಓದುತ್ತಿದ್ದಾಗ ಈಗ ವರ್ಣಶಿಲ್ಪಿ ಎಂದು ಖ್ಯಾತರಾಗಿರುವ ಕೆ. ವೆಂಕಟಪ್ಪ ಅವರು ರಾಯಲ್ ಸ್ಕೂಲ್ ಆಫ್ ಆರ್ಟ್ಸ್‌ನ ಕಲಾವಿದ್ಯಾರ್ಥಿಯಾಗಿದ್ದರು. ಬಾಲ್ಯದಿಂದಲೂ ಇಬ್ಬರೂ ಆಪ್ತರಾಗಿದ್ದರು. ಇವರ ಸ್ನೇಹ ಇದೇ ರೀತಿಯಾಗಿ ಅವರ ಜೀವನಾಂತ್ಯದವರೆವಿಗೂ ಇತ್ತು. ವೆಂಕಟಪ್ಪನವರು ಅಪರೂಪಕ್ಕೆ ಹೊರಕ್ಕೆ ಬಂದಾಗ ಚೆಟ್ಟಿಯಾರರ ಅಂಗಡಿಯಲ್ಲಿ ಬಂದು ಕೂರುತ್ತಿದ್ದರು. ವೆಂಕಟಪ್ಪನವರು ಮೈಸೂರಿನಲ್ಲಿ ಹಾಗೆ ಬಂದು ಕೂರುತ್ತಿದ್ದ ಅಂಗಡಿ ಇದೊಂದೇ.


ಎಳೆತನದಿಂದ ಚಿತ್ರ–ಶಿಲ್ಪ ಕಲಿಯುವ ಆಸಕ್ತಿ ಇದ್ದ ಸುಭಾಷಿಣಿ ದೇವಿಯವರು ವೆಂಕಟಪ್ಪನವರನ್ನು ಆಶ್ರಯಿಸಿದರೆ ಪಾಠ ಮಾಡಲು ಅವರು ಅಂಗೀಕರಿಸಲಿಲ್ಲ. ವೆಂಕಟಪ್ಪನರಲ್ಲಿ ತಾವೇ ಇನ್ನೂ ವಿದ್ಯಾರ್ಥಿ ಎಂಬ ಭಾವನೆ ಬಹುಬಲವಾಗಿತ್ತು. ಅದ್ದರಿಂದ ಯಾರಿಗೂ ಹೇಳಿಕೊಡುವ ಇಚ್ಛೆ ಅವರಿಗೆ ಇರಲಿಲ್ಲ. ಮಿಗಿಲಾಗಿ ಹೆಂಗಸರಿಂದ ದೂರವಿರಬೇಕೆಂಬುದು ಅವರ ಸಿದ್ಧಾಂತ.ಈ ಎರಡೂ ಕಾರಣಗಳಿಂದ ಸುಭಾಷಿಣಿ ದೇವಿಯವರಿಗೆ ವೆಂಕಟಪ್ಪ ಚಿತ್ರ ಕಲೆಯನ್ನು ಹೇಳಿಕೊಡಲಿಲ್ಲ.

ವೆಂಕಟಸ್ವಾಮಿ ಚೆಟ್ಟಿಯವರು ಮಗಳನ್ನು ಶಾಂತಿನಿಕೇತನಕ್ಕೆ ಕಲಾಭ್ಯಾಸಕ್ಕೆ ಕಳುಹಿಸಲು ಯೋಚಿಸಿ ವೆಂಕಟಪ್ಪನವರು ಸಲಹೆ ಕೇಳಿದರೆ 'ಬಂಗಾಳಿ ಶೈಲಿಯ ಚಿತ್ರಣ ಮತ್ತು ವಾತಾವರಣ ಸರಿಯಲ್ಲ. ಕಳುಹಿಸ ಬೇಡಿ' ಎಂದು ಸಲಹೆ ಹೇಳಿದರು. ಇದರಿಂದ ಸುಭಾಷಿಣಿ ದೇವಿ ನಿರಾಶರಾದರು. ಅದೇ ಸಮಯಕ್ಕೆ ನಾಲ್ವಡಿಕೃಷ್ಣರಾಜ ಒಡೆಯರ್ ಕಾಲವಾಗಿದ್ದು ಜಯಚಾಮರಾಜೇಂದ್ರ ಒಡೆಯರ್ ಅವರ ಆಡಳಿತ ನಡೆಯುತ್ತಿತ್ತು. ವೆಂಕಟಪ್ಪನವರು ಮೈಸೂರು ಬಿಡಲು ಚಿಂತಿಸುತ್ತಿದ್ದು ಕೊನೆಗೂ ಬೆಂಗಳೂರಿಗೆ ಬಂದೇ ಬಿಟ್ಟರು.


೧೯೪೪ ರಲ್ಲಿ ಸುಭಾಷಿಣಿದೇವಿಯು ಚಿತ್ರ–ಶಿಲ್ಪದ ಕಲಿಕೆಗೆ ಸಿದ್ಧಲಿಂಗ ಸ್ವಾಮಿಗಳನ್ನು ಆಶ್ರಯಿಸಿದರು. ಗುರುಪೀಠಸ್ಥರೂ, ಸಂನ್ಯಾಸಿಗಳು ಆಗಿದ್ದ ಸ್ವಾಮಿಯವರು ಸುಭಾಷಿಣಿ ದೇವಿಯವರಿಗೆ ಶಿಲ್ಪದೊಂದಿಗೆ ಚಿತ್ರಲೇಖನವನ್ನು ಕಲಿಸಿದರು. ಗುರುಕುಲದಲ್ಲಿ ಶಿಲ್ಪದ ಕಲಿಕೆ, ಮನೆಯಲ್ಲಿ ರೇಖಾಚಿತ್ರ ಮತ್ತು ವರ್ಣಚಿತ್ರರಚನೆ ಕಲಿಯಲು ಸುಭಾಷಿಣೀದೇವಿಯವರಿಗೆ ಅವಕಾಶ ಮಾಡಿಕೊಟ್ಟರು. ಇದರಿಂದ ಹಗಲಿಲ್ಲ ಶಿಲ್ಪಾಭ್ಯಾಸ, ಸಂಜೆಗಳಲ್ಲಿ ಶಾಸ್ತ್ರಪಾಠ, ಮನೆಯಲ್ಲಿ ಚಿತ್ರ–ವರ್ಣಚಿತ್ರರಚನೆ ಹೀಗೆ ದಿನವೆಲ್ಲಾ ಕಲಾಭ್ಯಾಸದಲ್ಲಿ ಸುಭಾಷಿಣಿದೇವಿಯವರು ತಮ್ಮನ್ನು ತೊಡಗಿಸಿಕೊಂಡರು.

ಈ ಸಂದರ್ಭದಲ್ಲಿ ರೇಖಾಚಿತ್ರರ ರಚನೆಗೆ ಪಾಠಗಳನ್ನು ಬರೆದು ಕೊಡುತ್ತಿದ್ದರು. ತತ್ಸಂಬಧಿಯಾದ ಆರು ಹಾಳೆಗಳು ಲಭಿಸಿವೆ. ಅವುಗಳ ವಿವರ ಇಂತಿದೆ.


ಪಾಠ : ಎರಡು ಈ ಪಾಠದ ಮೂಲ ಹಾಳೆ ಲಭಿಸಿಲ್ಲ . ಬದಲಿಗೆ ಸುಭಾಷಿಣಿ ದೇವಿಯವರು ೮–೦೨–೧೯೪೪ ಅಭ್ಯಾಸಮಾಡಿ ಬರೆದು ಸಲ್ಲಿಸಿರುವ ಹಾಳೆಲಭಿಸಿದೆ. ಸುಮಾರು ೪–೦೨–೧೯೪೪ ರಲ್ಲಿ ಈ ಪಾಠವನ್ನು ಗುರುಗಳು ಕೊಟ್ಟಿರಬಹುದು. ಮೂರು ಹಸ್ತ ಮುದ್ರೆಗಳು ಮತ್ತು ಒಂದು ಕಣ್ಣು ಮಾತ್ರ ಇದರಲ್ಲಿ ಬರೆದಿದ್ದಾರೆ. ಸುಭಾಷಿಣಿದೇವಿ ಯವರು ಇದನ್ನು ಪೆನ್ಸಿಲ್‌ನಲ್ಲಿ ಬರೆದಿದ್ದಾರೆ. ಮುಂದಿನ ಪಾಠ ಇಂಕಿನಲ್ಲಿ ಬರೆದಿರುವುದರಿಂದ



ಚಿತ್ರ ೭. ೬ : ವಿದ್ಯಾರ್ಥಿನಿಯ ಅಭ್ಯಾಸ (ಪಾಠ –೨)



ಚಿತ್ರ ೭. ೭ : ಗುರು ನಿಗದಿ ಪಡಿಸಿರುವ ಪಾಠ (ಪಾಠ–೩)



ಚಿತ್ರ ೭. ೮ : ವಿದ್ಯಾರ್ಥಿನಿಯ ಅಭ್ಯಾಸ



ಚಿತ್ರ ೭.೯ : ಗುರು ನಿಗದಿ ಪಡಿಸಿರುವ ಪಾಠ – ೪



ಚಿತ್ರ ೭.೧೦ : ವಿದ್ಯಾರ್ಥಿ ಪಾಠ – ೧೦

ಸ್ವಾಮಿಗಳು ಪಾಠವನ್ನು ಪೆನ್ಸಿಲ್‌ನಲ್ಲಿ ಬರೆಯಬಹುದು ಎಂದು ತೋರುತ್ತದೆ. ಸಾಧಾರಣವಾಗಿ ಶಾಸ್ತ್ರೀಯ ಶಿಲ್ಪ ಕಲಿಯುವ ವಿದ್ಯಾರ್ಥಿಗಳು ಅಭ್ಯಾಸಮಾಡುವ ಹಸ್ತಮುದ್ರೆಗಳು ಇವು.

ಪಾಠ: ಮೂರು ಇದು ೧೦-೦೨-೧೯೪೪ ರಲ್ಲಿ ಕೊಟ್ಟಿರುವುದನ್ನು ಸುಭಾಷಿಣಿದೇವಿಯವರೇ ದಾಖಲಿಸಿ ಕೊಂಡಿದ್ದಾರೆ. ಚಿತ್ರಗಳು ಇಂಕ್ ನಲ್ಲಿರುವುದು ಗಮನಿಸಿ. ಎರಡು ಹಸ್ತ ಮುದ್ರೆಗಳು, ಒಂದು ಎಲೆ ಮತ್ತು ಮುಖದ ಪಾರ್ಶ್ವ ನೋಟಗಳಿವೆ. ಇದನ್ನು ಅಭ್ಯಾಸಮಾಡಿ ತಾವು ಬರೆದಿರುವ ಚಿತ್ರವನ್ನು ೧೨-೦೨-೧೯೪೪ ರಲ್ಲಿ ಸ್ವಾಮಿಗಳಿಗೆ ತೋರಿಸಿದ್ದಾರೆ ಅದೂ ಕೂಡ ಇಂಕಿನಲ್ಲಿ ಬರೆದಿದ್ದಾರೆ.

ಪಾಠ: ನಾಲ್ಕು ಪಾಠ ಮೂರರ ಡ್ರಾಯಿಂಗ್ ಅಭ್ಯಾಸ ಪೂರೈಸಿ ತೋರಿಸಿದ ಕೂಡಲೇ ಅಭ್ಯಾಸಕ್ಕೆ ಕೊಟ್ಟಿರುವ ಮುಂದಿನ ಪಾಠ ಇದು. ಸುಭಾಷಿಣಿ ದೇವಿಯವರು Lesson 4 set by Guru Deva Dt ೧೨-೦೪-೧೯೪೪ ಎಂದು ಗುರ್ತಿಸಿರುವುದು ಈ ಹಾಳೆಯ ತುದಿ ಭಾಗದಲ್ಲಿದೆ. ಇದರಲ್ಲಿ ಗಿಡ, ಎಲೆ, ಹೂ, ಒಂದು ಹಸ್ತಮುದ್ರೆ, ಮಕರ ಮತ್ತು ಆನೆಯ ತಲೆ ಇಷ್ಟೂ ಇವೆ.

ಪಾಠ: ಎಂಟು Lesson 8 set by Guru Deva Dt ೩-೦೩-೧೯೪೪ ಎಂದಿರುವ ಇದರಲ್ಲಿ ಪಾರ್ಶ್ವನೋಟ ದಲ್ಲಿರುವ ದೇವನ ಚಿತ್ರಣವಿದೆ. ಕರಂಡ ಮಕುಟ ಧಾರಿಯು ಮಕರ ಕುಂಡಲ ಮತ್ತು ಕಂಠಹಾರ ದೊಂದಿಗೆ ಇದ್ದಾನೆ.

ಪಾಠ: ಒಂಬತ್ತು lesson 9 set by Guru Deva ೩-೦೫-೧೯೪೪ ಎಂದಿರುವ ಈ ಪಾಠದಲ್ಲಿ ಸಾಮಾನ್ಯ ಮಹಿಳೆಯೊಬ್ಬಳ ಪಾರ್ಶ್ವಮುಖವಿದೆ. ಇದೂ ಇಂಕಿನಲ್ಲಿ ಬರೆದಿರುವ ಚಿತ್ರ.

ಶಿಷ್ಯರಿಗೆ ಪಾಠ ಹೇಳಲು ಸ್ವಾಮಿಗಳು ಎಷ್ಟು ಆಸಕ್ತಿವಹಿಸುತ್ತಿದ್ದರು ಎಂಬುದನ್ನು ಈ ಚಿತ್ರಗಳು ಸ್ಪಷ್ಟಗೊಳಿಸುತ್ತವೆ. ವ್ಯವಹಾರದ ಸಂದರ್ಭ ಮತ್ತು ಬೋಧನೆ ಎರಡನ್ನೂ ಗಂಭೀರವಾಗಿ ಸ್ವಾಮಿಗಳು ಪರಿಗಣಿಸುತ್ತಿದ್ದರು. ಸ್ಕೆಚ್ ಎಂಬುದು ಬಹು ವೇಗದ ಚಿತ್ರವಾಗಿದ್ದರೂ ಅದೂ ಶುದ್ಧರೀತಿಯಲ್ಲಿಯೇ ಇರುತ್ತಿತ್ತು. ಎಂದರೆ ಸ್ವಾಮಿಗಳ ಪಾಲಿಗೆ ಪ್ರತಿ ವಿಷಯವೂ ಗಂಭೀರವಾಗಿಯೇ ಇತ್ತು. ಅದನ್ನು ಸಮಗ್ರವಾಗಿ ಮತ್ತು ಸಂಪೂರ್ಣವಾಗಿಯೇ



ಚಿತ್ರ ೭.೧೧ : ಗುರು ನಿಗದಿ ಪಡಿಸಿರುವ ಪಾಠ–೯

ಪರಿಗಣಿಸುತ್ತಿದ್ದರು. ನಿಜವಾದ ಅರ್ಥದಲ್ಲಿ ಕಾಯಕವನ್ನೇ ಕೈಲಾಸವೆಂದು ಪರಿಗಣಿಸಿದ್ದರು. ಶಿಲ್ಪವು ಅವರಿಗೆ ದೈವಸಾಕ್ಷಾತ್ಕಾರದ ಮಾರ್ಗವಾಗಿತ್ತು.

ಈ ಕಾರಣದಿಂದಲೇ ಕಾಮಕಾಮೇಶ್ವರಿ ದೇವಾಲಯದ ವೆಚ್ಚವನ್ನು ಅಂಗೀಕರಿಸಿದ ತರುವಾಯವೂ ಅದನ್ನು ಬಹುವಾಗಿ ಕಡಿತಗೊಳಿಸಿದರೂ ತಾವು ಸಲ್ಲಿಸಬೇಕಾಗಿದ ಕೆಲಸವನ್ನು ಸ್ವಲ್ಪವೂ ಕಡಿಮೆಯಾಗದಂತೆ ನೋಡಿಕೊಂಡರು. ಅಷ್ಟು ಮಾತ್ರವೇ ಅಲ್ಲ ನಂತರದಲ್ಲಿ ನಾಗೇಂದ್ರ ಸ್ಥಾಪತಿಗಳಿಗೂ ಇದೇ ಮಾತು ಹೇಳಿ ವೃಷಭ ಮೂರ್ತಿಯ ಗಾತ್ರ ಮತ್ತು ಅಲಂಕಾರದಲ್ಲಿ ಕೊರೆಯಾಗದಂತೆ ಎಚ್ಚರಿಕೆ ನೀಡಿದ್ದರು. ಇದರಿಂದ ತಮಗಾದ ನಷ್ಟ ಅಥವಾ ತೊಂದರೆಯ ವಿವರವನ್ನು ಯಾರಿಗೂ ಸ್ವಾಮಿಗಳು ಹೇಳಿದ್ದಾಗಲಿ, ಈ ಬಗ್ಗೆ ಮಹಾರಾಜರಿಗೆ ಅರಿಕೆ ಮಾಡಿಕೊಂಡಿದ್ದೂ ಇಲ್ಲ. ಸ್ವಾಮಿಗಳು ಕೇಳಿದ್ದರೆ ಮಹಾರಾಜರು ಹೆಚ್ಚಿನ ಮೊತ್ತವನ್ನು ಕೊಡಲು ನಿರಾಕರಿಸುತ್ತಿರಲಿಲ್ಲ.

ಇದೇ ಶ್ರದ್ಧೆಯ ಕಾರಣದಿಂದಲೇ ಕಾಮಕಾಮೇಶ್ವರೀ ದೇವಾಲಯವು ಸ್ವಾಮಿಗಳು ನಿರ್ಮಿಸಿರುವ ಆಚಾರ್ಯ ದೇವಾಲಯವಾಗಿ ಇಂದಿಗೂ ಉಳಿದಿರುವುದು.



೮

ಶಿಲ್ಪ ಗುರುಕುಲದ ಸ್ಥಾಪನೆ

ಸಿದ್ಧಲಿಂಗ ಸ್ವಾಮಿಗಳು ತಮ್ಮ ಕಾರ್ಯಕ್ಷೇತ್ರವನ್ನು ಮೈಸೂರಿಗೆ ಬದಲಿಸಿದಾಗಿನಿಂದಲೂ ಶಿಷ್ಯರನ್ನು ಆಯ್ಕೆ ಮಾಡಿಕೊಂಡು ಅವರಿಗೆ ಸಾಂಪ್ರದಾಯಿಕ ಶಿಲ್ಪವನ್ನು ಶಾಸ್ತ್ರದೊಂದಿಗೆ ಪಾಠಮಾಡುವುದನ್ನೂ ಪ್ರಾರಂಭಿಸಿದ್ದರು. ಕಾಲಾನುಕ್ರಮದಲ್ಲಿ ಶಿಷ್ಯರ ಸಂಖ್ಯೆಯು ಬೆಳೆಯುತ್ತಾ ಸಾಗಿತ್ತು. ಕೆಲಸಗಳ ಒತ್ತಡದಲ್ಲೂ ಪ್ರತಿನಿತ್ಯ ಸಂಜೆಗಳಲ್ಲಿ ಶಾಸ್ತ್ರಪಾಠವನ್ನು ಸ್ವಾಮಿಗಳೇ ನಡೆಸುತ್ತಿದ್ದರು.

ಸ್ವಾಮಿಗಳ ಬಳಿ ಕೆಲಸ ಮಾಡುತ್ತಿದ್ದವರೇ. ಸಾಧಾರಣವಾಗಿ ಶಿಷ್ಯರಾಗಿ ಶಿಲ್ಪವನ್ನು ಕಲಿಯುತ್ತಿದ್ದರು. ಇವರಿಗಾಗಿ ಪ್ರತ್ಯೇಕ ಸ್ಥಳವಿರಲಿಲ್ಲ. ಪಾಠವನ್ನೂ ತಮ್ಮ ಕಾರ್ಯಾಗಾರದ ಒಂದು ಮೂಲೆಯಲ್ಲೇ ನಡೆಸುತ್ತಿದ್ದರು. ಇದು ಸ್ವಾಮಿಗಳಿಗೇ ತೃಪ್ತಿಕರವಾಗಿರಲಿಲ್ಲ. ಪ್ರತ್ಯೇಕವಾದ ಗುರುಕುಲವನ್ನು ಏರ್ಪಡಿಸಿ ಅಲ್ಲಿ ನಿಯಮಬದ್ಧವಾಗಿ ಪಾಠ ಮತ್ತು ಶಿಲ್ಪಾಭ್ಯಾಸ ನಡೆಯುವಂತೆ ಏರ್ಪಡಿಸಬೇಕೆಂಬ ಆಸೆ ಇತ್ತು. ಹಾಗೆ ಮಾಡಲು ಗುರುಕುಲವನ್ನು ಪ್ರತ್ಯೇಕವಾಗಿ ಪ್ರಾರಂಭಿಸ ಬೇಕಾಗಿತ್ತು. ಅದಕ್ಕೆ ಬೇಕಾಗಿದ್ದ ಸವಲತ್ತುಗಳು ತುಂಬಾ. ಇದಕ್ಕೆ ಮಹಾರಾಜರ ನೆರವನ್ನು ಕೋರಬೇಕೆಂದುಕೊಂಡರೂ ಅಂತಹ ಗುರುಕುಲವನ್ನು ಪ್ರಾರಂಭಿಸಿದರೆ ಅದನ್ನು ನಿರ್ವಹಿಸುವ ಸಾಮರ್ಥ್ಯ ತಮಗುಂಟೇ ಎಂಬುದನ್ನು ಹಲವು ಬಾರಿ ಚಿಂತಿಸಿದ್ದರು.



ಚಿತ್ರ ೮.೧ : ಗುರುಕುಲದಲ್ಲಿ ಪಾಠ ಮಾಡುತ್ತಿರುವ ಶ್ರೀ ಸಿದ್ಧಲಿಂಗ ಸ್ವಾಮಿಗಳು

ಈ ಚಿಂತನೆಗೆ ಸಮಾನಾಂತರವಾಗಿ ಶಿಷ್ಯರನ್ನು ಸಿದ್ಧಪಡಿಸುವ ಕೆಲಸವನ್ನು ನಡೆಸುತ್ತಲೇ ಇದ್ದರು. ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಬಡತನದಲ್ಲಿರುವ ಹುಡುಗರನ್ನು ತಾವೇ ಕರೆತಂದು ಅವರಿಗೆ ಊಟ – ವಸತಿಗಳನ್ನು ಕೊಟ್ಟು ಶಾಸ್ತ್ರವನ್ನು, ಶಿಲ್ಪವನ್ನು ಬೋಧಿಸಿ ಶಿಲ್ಪಿಗಳನ್ನಾಗಿ ಸಿದ್ದಪಡಿಸುತ್ತಿದ್ದರು. ಸ್ವಾಮಿಗಳು ತಮ್ಮ ಬದುಕಿನ ಅವಧಿಯಲ್ಲಿ ಸಿದ್ಧ ಮಾಡಿರುವಷ್ಟು ಶಿಷ್ಯರನ್ನು ಸಂಖ್ಯೆ ಮತ್ತು ಗುಣಮಟ್ಟ ಎರಡೂ ದೃಷ್ಟಿಗಳಿಂದಲೂ ಅದರಲ್ಲಿ ಕಾಲುಭಾಗದ ಸಂಖ್ಯೆಯನ್ನು ತಲುಪಿರುವವರು ಇಂದಿನ ಕಾಲಕ್ಕೂ ಯಾರೂಬ್ಬರೂ ಇಲ್ಲ ಎಂಬುದು ಸ್ವಾಮಿಗಳ ಅಧ್ಯಾಪನಾಸಕ್ತಿ ಮತ್ತು ಶಿಷ್ಯರ ಬಗ್ಗೆ ಅವರಿಗೆ ಇದ್ದ ಪ್ರೀತಿಯನ್ನು ತೋರುತ್ತದೆ. ಅವರಲ್ಲಿ ಮುಖ್ಯರೂ ಮತ್ತು ಪ್ರಸಿದ್ದರೂ ಆದ ಕೆಲವರ ಬಗ್ಗೆ ಸಂಕ್ಷೇಪವಾಗಿ ತಿಳಿಯೋಣ. ಇವರಲ್ಲಿ ಬಹುಮಂದಿಯ ಸಾಧನೆಗಳನ್ನು ಪರಿಚಯ ಮಾಡುವ ಪ್ರತ್ಯೇಕ ಹೊತ್ತಿಗೆಗಳು ಪ್ರಕಟವಾಗಿವೆ. ಎಂಬ ವಿಷಯವನ್ನು ಓದುಗರು ಗಮನಿಸಬೇಕು.

ಸ್ವಾಮಿಗಳ ಬಳಿ ಶಿಲ್ಪವನ್ನು ಕಲಿತ ಶಿಷ್ಯರಲ್ಲಿ ಮೊದಲಿಗೆ



ಚಿತ್ರ ೮.೨ : ಅಜ್ಜಹಳ್ಳಿ ನಾಗೇಂದ್ರಾಚಾರ್ಯರು

ಉಲ್ಲೇಖನಾರ್ಹರಾದವರು **ಅಜ್ಜೀಹಳ್ಳಿ ನಾಗೇಂದ್ರಾಚಾರ್ಯರು (೧೮೮೯)**. ಪರಂಪರೆಯಿಂದ ರಥಶಿಲ್ಪಮಾಡುತ್ತಿದ್ದ ಇವರು ಕಾಲಕ್ರಮದಲ್ಲಿ ರಥಶಿಲ್ಪ ಶಾಸ್ತ್ರವನ್ನು ಕಳೆದುಕೊಂಡಿದ್ದು ಕೇವಲ ಪರಂಪರೆಯಿಂದ ಬಂದಿದ್ದ ಕೆಲವು ವಿವರಗಳ ಆಧಾರದಿಂದ ರಥಶಿಲ್ಪವನ್ನು ಮಾಡುವ ಕೆಲಸ ಉಳಿಸಿಕೊಂಡಿದ್ದರು. ರಥಾಲಂಕಾರದಲ್ಲಿ ಮೂರ್ತಿಶಿಲ್ಪವೇ ಪ್ರಧಾನ. ರಥವು ಚಲಿಸುವ ಗರ್ಭಗುಡಿ. ಆದ್ದರಿಂದ ಶಾಸ್ತ್ರದ ವಿವರಗಳು ಅತ್ಯಾವಶ್ಯಕ. ಇವರು ಬಂದು ಸ್ವಾಮಿಗಳಲ್ಲಿ ಕೆಲಸಮಾಡುತ್ತಾ ಶಾಸ್ತ್ರಾಧ್ಯಯನ, ಶಿಲಾ ಶಿಲ್ಪ, ಲೋಹಶಿಲ್ಪ ಮತ್ತು ಕಾಷ್ಠಶಿಲ್ಪಗಳನ್ನು ಕ್ರಮವಾಗಿ ಅಧ್ಯಯನ ಮಾಡಿದರು. ಇದರಿಂದ ತಮ್ಮ ಕಾಲದ ರಾಜ್ಯದ ಪ್ರಖ್ಯಾತ ಶಿಲ್ಪಿಗಳ ಸಾಲಿನಲ್ಲಿ ನಿಂತರು. ಚಾಮುಂಡಿ ಬೆಟ್ಟದಲ್ಲಿಯ ಚಾಮುಂಡೇಶ್ವರಿ ದೇವಾಲಯಕ್ಕೆ ಬೃಹತ್ ರಥವನ್ನು ನಿರ್ಮಿಸಿಕೊಟ್ಟವರು ಇವರೇ. ಸ್ವಾಮಿಗಳಿಂದ ನೇರವಾದ ಶಿಲ್ಪಶಾಸ್ತ್ರಗಳನ್ನು ಪಾಠಮಾಡಿಸಿ ಕೊಂಡು ಅವನ್ನು ತಮ್ಮ ವೃತ್ತಿಯಲ್ಲಿ ಬಳಸಿ ಕೊಳ್ಳುತ್ತಿದ್ದರು. ಚನ್ನಗಿರಿ–ದಾವಣಗೆರೆಯ ಪ್ರದೇಶದಲ್ಲಿ ವಾಸವಾಗಿರುವ ಪಾರಂಪರಿಕ ಶಿಲ್ಪಿಗಳಲ್ಲಿ ಶಾಸ್ತ್ರಜ್ಞಾನವನ್ನು, ಶಿಲ್ಪ ಕೌಶಲವನ್ನು ಬಿತ್ತಿ ಅವರ ವರ್ಧನೆಗೆ ಕಾರಣರಾದವರು ನಾಗೇಂದ್ರಾಚಾರ್ಯರೇ. ಇದೇ ಕಾರಣದಿಂದಲೇ ಈ ಪ್ರದೇಶದ ಶಿಲ್ಪಿಗಳು ನಿರ್ಮಿಸುವ ರಥಗಳಲ್ಲಿ ಶಾಸ್ತ್ರದ ವಿವರಗಳು ಈಗಲೂ ಕಾಣಿಸುವುದು. ತಮ್ಮ ಕಾಲದಲ್ಲಿಯೇ ಪ್ರಖ್ಯಾತ ಶಿಲ್ಪಿಗಳೆಂಬ ಕೀರ್ತಿಗೆ ಭಾಜನರಾಗಿದ್ದವರು.

ಶಿಲ್ಪಿ ಬಿ.ಬಸವಣ್ಣ ಅವರ ಬಗ್ಗೆ ವಿಶೇಷವಾಗಿ ಹೇಳಬೇಕು. ಬಸವಣ್ಣನವರು ಟಿ.ನರಸಿಪುರ ತಾಲ್ಲೂಕಿನ ಸೋಸಲೆ ಹೋಬಳಿ ಮುತ್ತಲವಾಡಿ ಗ್ರಾಮದವರು. ತಂದೆ ಬಸಪ್ಪಾಚಾರ್ಯರು. ಬಸವಣ್ಣನವರು ಹುಟ್ಟಿದು ೧೯೨೧ರಲ್ಲಿ, ಇವರ ತಾತನವರು ಚೌಡಪ್ಪನವರು ಮರಕೆಲಸಮಾಡುತ್ತಿದ್ದರು. ನಂಜನಗೂಡು ತಾಲ್ಲೂಕಿನ ಗುರುಮಲ್ಲೇಶ್ವರರ ಮಠದಲ್ಲಿ ಶಿಲ್ಪಿಸಂಬಂಧಿ ಕೆಲಸಗಳನ್ನು ಮಾಡುತ್ತಿದ್ದರು. ತಮ್ಮ ಮಗ ತಮಗಿಂತಲೂ ಒಳ್ಳೆಯ ಶಿಲ್ಪಿಯಾಗಬೇಕೆಂಬುದು ಬಸಪ್ಪಾಚಾರ್ಯರ ಬಯಕೆ. ಅದಕ್ಕೆಂದು ೧೯೩೦ ರಲ್ಲಿ ಸಿದ್ಧಲಿಂಗ ಸ್ವಾಮಿಗಳನ್ನು ಆಶ್ರಯಿಸಲು ಬಂದರು. ಸ್ವಾಮಿಗಳನ್ನು ಕಾಣುವುದು ಎಂದರೆ ಬಂದವರು ಸ್ವಾಮಿಗಳ ಸೂಕ್ತ ಸಮಯಕ್ಕೆ ಕಾಯುವುದು ಅನಿವಾರ್ಯವಾಗಿತ್ತು. ಎರಡು ದಿನ ಕಾದನಂತರ ಸ್ವಾಮಿಗಳನ್ನು ಕಂಡು ತಮ್ಮ ಆಸೆಯನ್ನು ನಿವೇದಿಸಿಕೊಂಡರು. ತಮ್ಮೊಂದಿಗೆ ಕರೆತಂದಿದ್ದ ಒಂಬತ್ತು ವರ್ಷದ ಬಾಲಕನನ್ನು ಗುರುಕುಲದಲ್ಲಿ ಬಿಟ್ಟು ಹೋದರು.

ಸಾಂಪ್ರದಾಯಕ ಶಿಲ್ಪಗುರುಕುಲಗಳಿದ್ದಂತೆ ಪ್ರಾತಃಕಾಲದಲ್ಲಿ ಸ್ನಾನ–ಸಂಧ್ಯಾವಂದನೆ–ಧ್ಯಾನ–ಪೂಜೆಗಳೊಂದಿಗೆ ಮಂತ್ರಪಾಠ ಕಡ್ಡಾಯವಾಗಿತ್ತು. ಬಸವಣ್ಣನಿಗೆ ಸಾಧಾರಣ ಓದು ಕಲಿಯುವುದರೊಂದಿಗೆ ಗುರುಕುಲದ ಚಟುವಟಿಕೆಯಲ್ಲಿ ಪಾಲು ಗೊಳ್ಳುವುದು ಅನಿವಾರ್ಯ ವಾಯಿತು.

ಬಸವಣ್ಣ ರೇಖಾಚಿತ್ರ, ಶಿಲಾಶಿಲ್ಪ, ಮೇಣಕಟ್ಟಿ ಲೋಹ ಮೂರ್ತಿಗಳನ್ನು ಎರಕ ಮಾಡಿ ತಯಾರಿಸುವುದು. ಇದರೊಂದಿಗೆ ದೇವಾಲಯ ನಿರ್ಮಾಣದ ನಿಯಮಗಳು, ನೀಲಿನಕ್ಷೆ ಸಿದ್ಧಪಡಿಸುವುದು ಎಲ್ಲವನ್ನು ಕ್ರಮಕ್ರಮವಾಗಿ ಕಲಿತರು. ಕಾಮುಕಾಮೇಶ್ವರಿ ದೇವಾಲಯುದ ನಿರ್ಮಾಣಕಾಲದಲ್ಲಿ ಅಲ್ಲಿಯ ಶಿಲ್ಪಗಳನ್ನು ತಯಾರಿಸಿರುವ ಶಿಲ್ಪಿಗಳಲ್ಲಿ ಬಸವಣ್ಣನವರೂ ಒಬ್ಬರು.

ಒಂಬತ್ತು ವರ್ಷದ ಬಾಲಕ ಬಸವಣ್ಣ ಮುವತ್ತು ವರ್ಷದ ತರುಣ ಬಸವಣ್ಣ ನಾಗುವ ವರೆವಿಗೆ ಗುರುಕುಲ ದಲ್ಲಿಯೇ ಶಿಷ್ಯನಾಗಿ ಸ್ವಾಮಿಗಳ ಸೇವಾಸಕ್ತನಾಗಿದ್ದ. ಆಗ್ಗೆ ಸ್ವಾಮಿಗಳೇ ತಮ್ಮ ಶಿಷ್ಯನಿಗೆ ತಿಂಗಳ ಸಂಬಳವನ್ನು ಕೊಡುತ್ತಿದ್ದರು ಎಂದರೆ ಬಸವಣ್ಣನವರ ಕಲಿಕೆಯ ಗುಣಮಟ್ಟನನ್ನು ಯಾರಾದರೂ ಕಲ್ಪಿಸಿಕೊಳುವುದು ಸಾಧ್ಯವಾದೀತು.




ಚಿತ್ರ ೮.೩ : ಶಿಲ್ಪಿ ಬಿ. ಬಸವಣ್ಣ

ತಮ್ಮ ಶಿಲ್ಪಸಾಮರ್ಥ್ಯದ ಬಹುಪಾಲನ್ನು ಸ್ವಾಮಿಗಳಿಂದ ನೇರವಾಗಿ ಕಲಿತವರಲ್ಲಿ ಬಸವಣ್ಣನವರು ಮುಖ್ಯರು. ಶಿಲ್ಪಶಾಸ್ತ್ರ, ಜ್ಯೋತಿಷ್ಯ,ಮಂತ್ರಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಸ್ವಾಮಿಗಳ ಆಶೀರ್ವಾದವನ್ನು ಪಡೆದು ಗಾಯತ್ರೀ ದೇವಾಲಯವನ್ನು ಅರಮನೆಯ ಆವರಣದಲ್ಲಿ ನಿರ್ಮಿಸಿದ್ದು ಬಸವಣ್ಣ ಶಿಲ್ಪಿಯ ಹೆಗ್ಗಳಿಕೆ. ಇದಕ್ಕಾಗಿ ಮಹಾರಾಜರಾದ ಜಯಚಾಮರಾಜ ಒಡೆಯರ್ ಅವರು ಗಾಯತ್ರೀದೇವಾಲಯದ ಪ್ರತಿಷ್ಠಾ ಸಂದರ್ಭದಲ್ಲಿ (೧೯೫೩) ಚಿನ್ನದ ಉಳಿ, ಬೆಳ್ಳಿಯ ಸುತ್ತಿಗೆ, ಕೊರಳಿಗೆ ಬಂಗಾರದ ಸರ ಹಾಕಿ ಐದು ಜೊತೆ ಶಾಲು ಹೊದಿಸಿ ಅತ್ಯುನ್ನತ ಶಿಲ್ಪಿ ಸನ್ಮಾನವನ್ನು ಮಾಡಿದ್ದಾರೆ. ಸಿದ್ಧಲಿಂಗ ಸ್ವಾಮಿಗಳ ತರುವಾಯ ಈ ರೀತಿ ಸನ್ಮಾನವನ್ನು ಪಡೆದುಕೊಂಡ ಎರಡನೆಯ ಶಿಲ್ಪಿ ಬಸವಣ್ಣನವರು. ೧೯೮೩ರಲ್ಲಿ ರಾಷ್ಟ್ರಪತಿ ಜ್ಞಾನಿ ಜೈಲ್‌ಸಿಂಗಅವರಿಂದ ರಾಷ್ಟ್ರಿಯ ಪ್ರಶಸ್ತಿ, ೧೯೮೨, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೮೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಮುಂತಾಗಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಬಸವಣ್ಣನವರು ಗುರುಗಳಸಮಾನ ಪಾಂಡಿತ್ಯ ಪಡೆದಿರಲಿಲ್ಲ. ಶಿಲ್ಪಶಾಸ್ತ್ರ, ಸಾಹಿತ್ಯ, ವಿದ್ಯುತ್ತುಗಳನ್ನು, ವರ್ಣಚಿತ್ರರಚನೆ, ಮಂತ್ರಶಾಸ್ತ್ರದ ಸಿದ್ಧಿಗಳಲ್ಲಿ ಸ್ವಾಮಿಗಳಂತೆ ಸೇವೆಯನ್ನು ಸಲ್ಲಿಸಲಿಲ್ಲ. ಇವರು ಪ್ರತ್ಯೇಕವಾದ ಶಿಷ್ಯರಗುಂಪನ್ನು ಬೆಳಸಲಿಲ್ಲ ಎಂಬುದನ್ನೂ ನಾವು ಗಮನಿಸ ಬಹುದು. ಆದರೂ ಇವರ ಮಕ್ಕಳು, ಮೊಮ್ಮಕಳು ಶಿಲ್ಪವೃತ್ತಿಯನ್ನೇ ಮುಂದುವರಿಸುತ್ತಿದ್ದಾರೆ.

ಸ್ವಾಮಿಗಳ ಪುತ್ರರಾದ ನಾಗಲಿಂಗ ಸ್ಥಪತಿಗಳ ವಿನಾ ಸ್ವಾಮಿಗಳ ಶಿಷ್ಯರಲ್ಲಿ ಬಸವಣ್ಣನವರೇ ಶ್ರೇಷ್ಠಸಾಧಕರಾಗಿ ಕಾಣಿಸುತ್ತಾರೆ.

ಸ್ವಾಮಿಗಳ ಶಿಷ್ಯರಲ್ಲಿ **ನಾಗೇಂದ್ರ ಸ್ಥಾಪತಿಗಳಿಗೆ** (೧೯೧೩) ವಿಶೇಷ ಸ್ಥಾನವು ಸಲ್ಲುತ್ತದೆ. ಸ್ವಾಮಿಗಳಂತೆ ಶಿಲ್ಪಕ್ಷೇತ್ರದ ಎಲ್ಲಾ ಮುಖಗಳಲ್ಲೂ ಪರಿಣಿತಿಯನ್ನು ಸಾಧಿಸಿದ್ದರು. ವರ್ಣಚಿತ್ರ ರಚನೆಯಲ್ಲಿ ಸ್ವಾಮಿಗಳಿಗೆ ಸರಿಸಮನಾಗಿದ್ದರು. ಶಿಲಾ–ಲೋಹ–ಕಾಷ್ಠ ಶಿಲ್ಪಗಳಲ್ಲಿ ತಜ್ಞರು. ಹಾಗೆಯೇ ಶಿಲ್ಪಶಾಸ್ತ್ರವನ್ನೂ ಬಹುವಾಗಿ ರೂಢಿಸಿ ಕೊಂಡಿದ್ದರು. ಸ್ವಾಮಿಗಳ ಜೀವಿತಾವಧಿಯಲ್ಲಿ ಸ್ವಾಮಿಗಳಿಗೆ ನೆರವಾಗಿ ದುಡಿದವರು ನಾಗೇಂದ್ರ ಸ್ಥಾಪತಿಗಳೇ. ಗುರುಪೀಠದ ಹೊಣೆಗಾರಿಕೆ ಮಹಾದೇವ ಸ್ವಾಮಿಗಳಿಗೆ ವಹಿಸಿದ್ದರಿಂದ ಆ ಭಾಗದ ವಿನಾ ಸ್ವಾಮಿಗಳಿಗೆ ಪರಿಪೂರ್ಣವಾಗಿ ನೆರವಾಗಿ ನಿಂತಿದ್ದವರು ನಾಗೇಂದ್ರ ಸ್ಥಾಪತಿಗಳೇ. ಕಾಮಕಾಮೇಶ್ವರಿ ದೇವಾಲಯದ ಹೊಣೆಹೊತ್ತು ಪೂರ್ಣ ಗೊಳಿಸಿದವರು ನಾಗೇಂದ್ರ ಸ್ಥಾಪತಿಗಳೇ. ರಾಜ್ಯಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದರು. ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದ್ದಾರೆ.



ಚಿತ್ರ ೮.೪ : ನಾಗೇಂದ್ರ ಸ್ಥಪತಿ

ಆಗಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಂತಯ್ಯ ಅವರು ವಿಧಾನಸೌಧದ ವಿನ್ಯಾಸವನ್ನು ಕೋರಿದಾಗ ಅದನ್ನು ತಯಾರಿಸಿಕೊಟ್ಟು ವಿಧಾನ ಸೌಧದ ನಿರ್ಮಾಣಕಾದಲ್ಲಿ ಉಸ್ತುವಾರಿ ವಹಿಸಿಕೊಂಡು ನಿರ್ವಹಿಸಿದರು, ವಿಧಾನಸೌಧದ ಸೂರುಗಳ ಮೇಲೆ ಗಾರೆಯಲ್ಲಿ ವಿನ್ಯಾಸಗಳನ್ನು, ಇತರ ಭಾಗಗಳ ಅಲಂಕಾರಗಳನ್ನು ವಿನ್ಯಾಸ ಮಾಡಿಕೊಟ್ಟವರು ನಾಗೇಂದ್ರ ಸ್ಥಾಪತಿಗಳೇ.

ವಿಧಾನಸೌಧವು ಇಂದಿಗೂ ಕರ್ನಾಟಕದಲ್ಲಿ ಆಚಾರ್ಯ ಕಟ್ಟಡವಾಗಿ ಖ್ಯಾತರಾಗಿರುವುದು ಎಲ್ಲರೂ ಬಲ್ಲ ವಿವರ. ಸಿದ್ಧಲಿಂಗಸ್ವಾಮಿಗಳು ಪ್ರಾರಂಭಿಸಿದ ಜಗದ್ಗುರು ಶೈವ ಶಿಲ್ಪ ಬ್ರಹರ್ಷಿ ಗುರುಕುಲಂ ಸರ್ಕಾರದ ನೆರವಿನೊಂದಿಗೆ ನಿರಂತರವಾಗಿ ನಡೆಸಲು ಪ್ರಯತ್ನಿಸಿ ಸೋತವರು ನಾಗೇಂದ್ರ ಸ್ಥಾಪತಿಗಳೇ.


ಹೀಗಾಗಿ ಸ್ವಾಮಿಗಳಿಗೆ ಸರಿಸಾಟಿ ಎನಿಸುವಂತೆ ನಾಗೇಂದ್ರ ಸ್ಥಾಪತಿಗಳು ಕಾಣಿಸಿದರೂ ಅವಕಾಶಗಳಿಂದ ವಂಚಿತರಾಗಿ ಆ ಸ್ಥಾನವನ್ನು ಗಳಿಸದೆ ಹೋದದ್ದು ವಿಷಾದದ ಸಂಗತಿ.

ಸ್ವಾಮಿಗಳ ಅಣ್ಣನವರಾದ **ಅಪ್ಪಾಜೀ ಸ್ವಾಮಿಗಳು** ಬಾಲ್ಯದಿಂದಲೂ ಸ್ವಾಮಿಗಳೊಂದಿಗೆ ಶಿಲ್ಪವನ್ನು ಮಾಡುತ್ತಾ ಬಂದವರು. ಸ್ವಾಮಿಗಳ ವಿದ್ಯುತ್ ಕಾಂತಿಯಲ್ಲಿ ಕಾಣಿಸದೆ ಸ್ವಾಮಿಗಳಲ್ಲಿ ಬೆರೆತು ಹೋದವರು. ಸ್ವಾಮಿಗಳು ತಮ್ಮ ಅಣ್ಣನವರಿಗೆ ಬಹು ಗೌರವವನ್ನು ಕೊಡುತ್ತಿದ್ದರು. ಇವರೂ ಶಿಲ್ಪ ಮತ್ತು ಚಿತ್ರಗಳಲ್ಲಿ ನಿಷ್ಣಾತರಾಗಿದ್ದರು. ನಂಜುಂಡ ಶಿವಯೋಗಿಗಳಿಗೆ ಮೆಚ್ಚುಗೆಯಾಗಿದ್ದವರು. ಇವರ ಎರಡನೆಯ ಪುತ್ರರೇ **ಮಹಾದೇವ ಸ್ವಾಮಿಗಳು** (೧೯೩೧). ಬಾಲ್ಯದಿಂದಲೇ ಇವರು ಗುರುಪೀಠಸ್ಥರಾಗಬೇಕೆಂಬ ಉದ್ದೇಶದಿಂದಲೇ ಇವರ ಅಧ್ಯಯನವನ್ನು ಸಿದ್ಧಲಿಂಗಸ್ವಾಮಿಗಳೇ ವಹಿಸಿಕೊಂಡಿದ್ದರು. ವೇದಪಾಠ, ಅದರೊಂದಿಗೆ ಸಾಂಪ್ರದಾಯಿಕ ಶಿಲ್ಪ ಧರ್ಮಶಾಸ್ತ್ರಗಳ ಅಧ್ಯಯನ. ಶಿವಲೀಲಾವತಾರಗಳ ಮಾಲಿಕಾ ಚಿತ್ರಗಳನ್ನು ರಚಿಸಿದ್ದಾರೆ. ಒಳ್ಳೆಯ ಉಪನ್ಯಾಸಕರಾಗಿದ್ದರು. ಸ್ವಯಂ ಶಿಲ್ಪಿಗಳಾಗಿದ್ದರು, ಗುರುಪೀಠಾಧ್ಯಕ್ಷರಾಗಿದ್ದು ೧೯೫೦ರಲ್ಲಿ. ಸ್ವಾಮಿಗಳೇ ಇವರಿಗೆ ಪಟ್ಟಾಭಿಷೇಕವನ್ನು ನೆರವೇರಿಸಿ ಪೀಠಾಸ್ಥರನ್ನಾಗಿ ಮಾಡಿದರು.ಇವರ ಪುತ್ರರೆಲ್ಲರೂ ಶಿಲ್ಪವನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಸ್ವಾಮಿಗಳ ಶಾಸ್ತ್ರ ಸಂಪತ್ತಿನ ಮತ್ತು ಗುರುಪೀಠದ ಅಧಿಕಾರಿಗಳಾದವರು ಮಹಾದೇವಸ್ವಾಮಿಗಳು.



ಚಿತ್ರ ೮. ೫ : ಮಹಾದೇವಸ್ವಾಮಿಗಳು

ಸಿ. **ಪರಮೇಶ್ವರಾಚಾರ್ಯರ** (೧೯೨೭) ತಾತನವರಾದ ಮಿರ್ಲೆಲಿಂಗಣ್ಣಾಚಾರ್ಯರು ಕಾಷ್ಠಶಿಲ್ಪಿಗಳು. ಇವರ ತಂದೆ ಶಿಲ್ಪವನ್ನು ಬಿಟ್ಟು ಮಾಸ್ತರಿಕೆಮಾಡುತ್ತಿದ್ದರು. ಪರಮೇಶ್ವರಾಚಾರ್ಯರು ಕಾಷ್ಠ ಮತ್ತು ಶಿಲಾಶಿಲ್ಪವನ್ನು ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಕಲಿತು ಹೆಚ್ಚಿನ ಕಲಿಕೆಗೆ ಸಿದ್ಧಲಿಂಗಸ್ವಾಮಿಗಳನ್ನು ಆಶ್ರಯಿಸಿದವರು. ಸ್ವಾಮಿಗಳಲ್ಲಿ ಶಿಲ್ಪಶಾಸ್ತ್ರವನ್ನು ಅಧ್ಯಯನ ಮಾಡಿದ್ದಾರೆ. ಭುವನೇಶ್ವರೀ ದೇವಾಲಯ, ಕಾಮಕಾಮೇಶ್ವರೀ ದೇವಾಲಯಗಳ ನಿರ್ಮಾಣದಲ್ಲಿ ದುಡಿದಿದ್ದಾರೆ. ನಂತರದಲ್ಲಿ ನಾಗೇಂದ್ರ ಸ್ಥಾಪತಿಗಳ ನೇತೃತ್ವದಲ್ಲಿ ವಿಧಾನಸೌಧದ ಅಲಂಕರಣದಲ್ಲಿ ೧೯೫೫ರಲ್ಲಿ ಪರಮೇಶ್ವರಾಚಾರ್ಯರು ಬೆಂಗಳೂರಿಗೆ ಬಂದು ನೆಲೆನಿಂತು ಸೇವೆಸಲ್ಲಿಸಿದ್ದಾರೆ. ತರುವಾಯ ಪ್ರಾದೇಶಿಕ ಕರಕುಶಲ ವಿನ್ಯಾಸಕೇಂದ್ರದಲ್ಲಿ ಮಾಸ್ಟರ್ ಕ್ರಾಫ್ಟ್ಸ್‌ಮನ್ ಆಗಿ ಕೆಲಸ ದೊರೆತಿದ್ದರಿಂದ ಬೆಂಗಳೂರಿನಲ್ಲಿ ನೆಲೆಸಿದರು.



ಚಿತ್ರ ೮. ೬ : ಸಿ. ಪರಮೇಶ್ವರಾಚಾರ್ಯ


೧೯೬೫ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ಡಾ॥ರಾಧಾಕೃಷ್ಣನ್ ಅವರಿಂದ ಪರಮೇಶ್ವರಾಚಾರ್ಯರು ಸ್ವೀಕರಿಸಿದ್ದಾರೆ. ೧೯೬೬ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪ ಅವರು ಕರ್ನಾಟಕ ಕರಕುಲಶ ಅಭಿವೃದ್ಧಿನಿಗಮದ ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೯೦ರ ಗೌರವ ಪ್ರಶಸ್ತಿಯನ್ನು ಕೊಟ್ಟಿದೆ. ೧೯೯೪ರ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಅಂದಿನ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಅವರು ಕೊಟ್ಟಿದ್ದಾರೆ. ೧೯೯೫ರಲ್ಲಿ ಸರ್ಕಾರವು ಜಕ್ಕಣಾಚಾರಿ ಪ್ರಶಸ್ತಿಯನ್ನು ಒಂದು ಲಕ್ಷ ಮೊತ್ತದೊಂದಿಗೆ ಪ್ರಾರಂಭಿಸಿದಾಗ ಮೊದಲ ವರ್ಷವೇ ಈ ಪ್ರಶಸ್ತಿಯ ಗೌರವವನ್ನು ಪಡೆದು ಕೊಂಡವರು ಸಿ. ಪರಮೇಶ್ವರಾಚಾರ್ಯರು. ರಾಷ್ಟ್ರಮಟ್ಟದಲ್ಲಿ ಶಿಲ್ಪಗುರು ಪ್ರಶಸ್ತಿಯನ್ನು ಪಡೆದಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ.

ಮೈಸೂರಿನ ಬಸವಣ್ಣಾಚಾರ್ಯರು, ಸ್ವಾಮಿಗಳಲ್ಲಿ ಶಿಲ್ಪವನ್ನು ಕಲಿಯಲು ಬಂದ ಉತ್ಸಾಹೀ ಬಾಲಕರಲ್ಲಿ ಒಬ್ಬರು, ಬಾಲಕರಾಗಿದ್ದಾಗಲೇ ತೆಳುವಾದ ದುರ್ಬಲ ದೇಹಿಗಳಾಗಿದ್ದುದರಿಂದ ಶಿಲ್ಪಕ್ಕಿಂತಲೂ ವರ್ಣಚಿತ್ರಲೇಖನ ಕಲಿಯಲು ಸ್ವಾಮಿಗಳು ಪ್ರೋತ್ಸಾಹಿಸಿದರು. ಸ್ವಾಮಿಗಳಲ್ಲಿ ರೇಖಾಚಿತ್ರ ವರ್ಣಚಿತ್ರಗಳನ್ನು ಅಭ್ಯಾಸಮಾಡಿದರು. ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ವರ್ಣಚಿತ್ರಕಲೆಯನ್ನು ಅಧ್ಯಯನ ಮಾಡಿ ಕಲಾಶಿಕ್ಷಕರಾದರು. ಈಗ ಇವರು ಮೈಸೂರಿನಲ್ಲಿ ವೈಜಯಂತಿ ಕಲಾ ಶಾಲೆಯನ್ನು ನಡೆಸುತ್ತಿದ್ದಾರೆ. ಇವರ ಕಲಾಸೇವೆಗೆ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.




ಚಿತ್ರ ೮. ೭ : ಕೆ.ಸಿ. ಪುಟ್ಟಣ್ಣಯ್ಯ ಆಚಾರ್ಯರು

ಸ್ವಾಮಿಗಳಲ್ಲಿ ಬಹು ದೀರ್ಘಕಾಲ ಶಿಷ್ಯವೃತ್ತಿಯನ್ನು ಮಾಡುತ್ತಾ ಗುರುಸೇವೆಯನ್ನು ನಿರ್ವಹಿಸಿದವರು **ಕೆ.ಸಿ.ಪುಟ್ಟಣ್ಣಯ್ಯಆಚಾರ್ಯರು**. ಇವರು ಶಿಲಾ ಶಿಲ್ಪವನ್ನು ಮಾಡುತ್ತಿದ್ದರು. ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಮತ್ತು ಜಕ್ಕಣಾಚಾರ್ಯ ಪ್ರಶಸ್ತಿಗಳು ಬಂದಿವೆ.



ಚಿತ್ರ ೮.೮ : ಎಂ.ಆರ್. ಜಿ. ಶಂಕರ್
(ರೇಖಾಚಿತ್ರ ಜಿ. ವೀರೇಂದ್ರ ಶಂಕರ್)



ಚಿತ್ರ ೮.೯ : ಸಿ. ಕುಪ್ಪಾಚಾರ್ಯರು



ಚಿತ್ರ ೮.೧೦ : ಸಿಂಗಣ್ಣಾಚಾರ್ಯರು

ಚಿಕ್ಕಬಳ್ಳಾಪುರದ **ಎಂ.ಆರ್.ಜಿ.ಶಂಕರ್ (೧೯೨೯)** ಅವರು ಸ್ವಾಮಿಗಳಲ್ಲಿ ಸಾಂಪ್ರದಾಯಿಕ ರೇಖಾ ಮತ್ತು ವರ್ಣಚಿತ್ರ ಕಲೆಯನ್ನು ಅಭ್ಯಾಸಮಾಡಿ ವರ್ಣಚಿತ್ರ ಕಲೆಗೆ ಮತ್ತು ತದ್ರೂಪ ವರ್ಣಚಿತ್ರಗಳಿಗೆ ಖ್ಯಾತರಾಗಿದ್ದಾರೆ. ತಾಲಮಾನಚಿತ್ರ ಲೇಖನಕ್ಕೆ ಇವರು ಪ್ರಖ್ಯಾತರು. ಇದೇ ತೆರನಾಗಿ ಚಿತ್ರಕಲೆಯನ್ನು ಅಭ್ಯಾಸ ಮಾಡಿರುವ ಮೈಸೂರಿನ **ಸಿ.ಕುಪ್ಪಾಚಾರ್ಯರು (೧೯೩೩)** ಖ್ಯಾತರು. ಇವರು ಅರ್ಕಿಯಾಲಜಿ ಇಲಾಖೆಯಲ್ಲಿ ಕಲಾವಿದರಾಗಿ ಸೇವೆಸಲ್ಲಿಸಿ ನಿವೃತ್ತರಾದರು. ತಾಲಮಾನ ರೇಖಾಚಿತ್ರಗಳಿಗೆ ಪ್ರಖ್ಯಾತರು.


ಸಿಂಗಣ್ಣಾಚಾರ್ಯರು (೧೮೭೩) ಹುಟ್ಟಿದ್ದು ಮೈಸೂರಿನಲ್ಲಿ, ಅವರ ತಂದೆ ನರಸಿಂಹಾಚಾರ್ಯರು ಮತ್ತು ದೊಡಪ್ಪ ಸಿಂಗಣ್ಣಾಚಾರ್ಯರು ಇಬ್ಬರೂ ಅರಮನೆಯಲ್ಲಿ ಲೋಹಶಿಲ್ಪಿಗಳಾಗಿದ್ದವರು. ತಿರುಪತಿ ವೆಂಕಟರಮಣಸ್ವಾಮಿ ಮೆರವಣಿಗೆಗೆ ಸ್ವರ್ಣ ಛತ್ರಿಯನ್ನು ನರಸಿಂಹಾಚಾರ್ಯರು ಮಾಡಿಕೊಟ್ಟಿದ್ದರು. ಮುಮ್ಮಡಿಕೃಷ್ಣರಾಜರ ಬೆಳ್ಳಿಯ ಪ್ರತಿಮೆಯನ್ನು ಮೈಸೂರು ಅರಮನೆಗೆ ಸಿಂಗಣ್ಣಾಚಾರ್ಯರು ಮಾಡಿಕೊಟ್ಟಿದ್ದರು. ಬಾಲಕ ಸಿಂಗಣ್ಣಾಚಾರ್ಯನಿಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ. ಕೆಲಸದಲ್ಲಿ ಹೆಚ್ಚು ಮುತುವರ್ಜಿ. ತಂದೆಗೆ ಕೆಲಸದಲ್ಲಿ ನೆರವಾಗುವುದು ಎಂದರೆ ಉತ್ಸಾಹ ಹೆಚ್ಚು. ಹತ್ತು ವರ್ಷಕ್ಕೆ ಲೋಹಶಿಲ್ಪವನ್ನು ಪ್ರಾರಂಭಿಸಿದ ಬಾಲಕ ಮತ್ತೆ ಹಿಂತಿರುಗಿ ನೋಡಲಿಲ್ಲ. ಲೋಹದಲ್ಲಿ ಎರಕ ಮತ್ತು ತಗಡಿನಲ್ಲಿ ಕೆತ್ತನೆ ಕೆಲಸ ಎರಡರಲ್ಲೂ ಬಾಲಕ ಬಹುವಾದ ಪರಿಣಿತ ಸಾಧಿಸುವ ಪ್ರಯತ್ನದಲ್ಲಿ ತೊಡಗಿದ. ಇದರಿಂದ ಪಂಚಲೋಹಗಳನ್ನು ದುಡಿಸಿಕೊಳ್ಳುವುದರಲ್ಲಿ ನಿಷ್ಣಾತನಾದ. ಆದರೆ ತಂದೆ–ದೊಡಪ್ಪ ಇಬ್ಬರೂ ಕಾಲವಾದ ತರುವಾಯ ಶಿಲ್ಪದಲ್ಲಿ ಶಾಸ್ತ್ರದ ತಿಳುವಳಿಕೆಗೆ ಇರುವ ಪ್ರಾಧಾನ್ಯತೆ ಸಿಂಗಣ್ಣಾಚಾರ್ಯನಿಗೆ ಅರಿವಿಗೆ ಬಂತು.

ಈ ಕೊರತೆಯನ್ನು ತುಂಬಬಲ್ಲ ಶಕ್ತಿ ಇದ್ದವರಾಗಿ ಬಾಲಕನಿಗೆ ಕಾಣಿಸಿದವರು ಸಿದ್ಧಲಿಂಗಸ್ವಾಮಿಗಳು ಮಾತ್ರವೇ. ನೇರವಾಗಿ ಸ್ವಾಮಿಗಳನ್ನು ದರ್ಶಿಸಿ, ನಮಸ್ಕರಿಸಿ ತಮ್ಮ ಅಶಕ್ತತೆಯನ್ನು ಅರಿಕೆಮಾಡಿಕೊಂಡರು. ಸ್ವಾಮಿಗಳು ಸಿಂಗಣ್ಣಾಚಾರ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅವಕಾಶವಾದಾಗಲೆಲ್ಲಾ ಸೂಕ್ತವಾದ ರೀತಿಯಲ್ಲಿ ಶಾಸ್ತ್ರ ಪಾಠವನ್ನು ಮಾಡುವುದರೊಂದಿಗೆ ಅವರ ಶಿಲ್ಪ ನಿರ್ವಹಣೆಗೂ ಅವಶ್ಯಕ ಶಾಸ್ತ್ರದ ತಿಳಿವನ್ನು ನೀಡುತ್ತಿದ್ದರು. ವಯಸ್ಸಿನಲ್ಲಿ ಸ್ವಾಮಿಗಳಿಗಿಂತಲೂ ಸಿಂಗಣ್ಣಾಚಾರ್ಯರು ಹತ್ತು ವರ್ಷ ಹಿರಿಯರಾಗಿದ್ದರೂ ಶಿಷ್ಯಾರ್ಜನೆಗೆ ಸಿಂಗಣ್ಣಾಚಾರ್ಯರಿಗೆ ವಯಸ್ಸು ಅಡ್ಡಿ ಬರಲಿಲ್ಲ ಎಂಬುದು ಮುಖ್ಯ ಸಂಗತಿ.

ಕಿರೀಟ, ರಾಜದಂಡ, ಆಭರಣಗಳನ್ನು, ಮೇನಾ, ವಾಹನಗಳು, ಪೀಠಗಳು, ತೋರಣ ಮುಂತಾದ ಅಲಂಕರಣಗಳ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಅವಶ್ಯಕಪಾಠಗಳನ್ನು ಸ್ವಾಮಿಗಳು ಮಾಡುತ್ತಿದ್ದರು. ಈ ರೀತಿಯಾಗಿ ಸಿಂಗಣ್ಣಾಚಾರ್ಯರ ಶಿಲ್ಪದಲ್ಲಿ ಜೀವತುಂಬಿದವರು ಸ್ವಾಮಿಗಳು. ಇವರು ಚಾಮುಂಡಿ ಬೆಟ್ಟದ ದೇವಾಲಯಕ್ಕೆ ಬೆಳ್ಳಿಯ ಬಾಗಿಲುವಾಡ, ಗರುಡಗಂಬ, ಬೆಳ್ಳಿಯ ಗೋಪುರ, ಪೂಜಾಮೂರ್ತಿಗಳಿಗೆ ಕವಚ, ಉತ್ಸವಗಳಿಗೆ ವಾಹನಗಳು, ರತ್ನ ಖಚಿತ ಕೀರಿಟ ಇತ್ಯಾದಿಗಳನ್ನು ಮಾಡಿಕೊಟ್ಟಿದ್ದಾರೆ.

ಇವೇ ಅಲ್ಲದೆ ನೇರವಾಗಿ ಸಿದ್ಧಲಿಂಗ ಸ್ವಾಮಿಗಳ ನೇತೃತ್ವದಲ್ಲಿ ನಡೆದಿರುವ ಮಹಾರಾಜರು ಕೂರುವ ಸಿಂಹಾಸನ, ಚಿನ್ನದ ಅಂಬಾರಿ, ಬೆಳ್ಳಿಯರಥ, ನವರತ್ನ ಖಚಿತ ಅತ್ತರು ದಾನಿ ಇತ್ಯಾದಿಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಶಾಸ್ತ್ರೋಕ್ತವಾದ ಪ್ರತಿಮೆಗಳು, ಅವುಗಳಿಗೆ ಬಹುಸೂಕ್ಷ್ಮವಾದ ನಕಾಸೆ ಇತ್ಯಾದಿಗಳು ಇವನ್ನು ಜಗತ್ಪ್ರಸಿದ್ಧ ಶಿಲ್ಪಗಳನ್ನಾಗಿಸಿವೆ. ಇವರಿಂದ ಗುರು–ಶಿಷ್ಯರಿಬ್ಬರೂ ಸರ್ವಮಾನ್ಯರಾದರು. ಇವರು ಯಾವುದೇ ಪ್ರಶಸ್ತಿಗೆ ಭಾಜನರಾಗಲಿಲ್ಲ. ೯೨ರ ವರ್ಷಗಳ ಪರಿಪೂರ್ಣ ಬದುಕಿದ ಸಿಂಗಣ್ಣಾಚಾರ್ಯರು 'ಸ್ವರ್ಣಶಿಲ್ಪಿ'ಗಳೆಂದೇ ಪ್ರಖ್ಯಾತರು. ಇವರ ಏಕೈಕ ಪುತ್ರರೇ ನಂಜುಂಡಸ್ವಾಮಿ ಅವರು. ಇವರು ಎಸ್.ಎನ್.ಸ್ವಾಮಿಗಳೆಂದೇ ಪ್ರಖ್ಯಾತರು. ವರ್ಣಚಿತ್ರಕಲಾವಿದರಾಗಿದ್ದರೂ ಪೆನ್ಸಿಲ್‌ಡ್ರಾಯಿಂಗ್‌ಗೆ ವಿಶ್ವಖ್ಯಾತಿಯನ್ನು ಪಡೆದು ಪದ್ಮಶ್ರೀ ಗೌರವವನ್ನು ಪಡೆದುಕೊಂಡವರು.

ಎನ್.ಪಿ.ಶ್ರೀನಿವಾಸಾಚಾರ್ಯರು (೧೯೧೩) ನಾಗಮಂಗಲದ ಮೂಲದ ಲೋಹಶಿಲ್ಪಿಗಳು. ಇವರ ತಂದೆ ಪುಟ್ಟಾಚಾರ್ ಮತ್ತು ದೊಡಪ್ಪ ವೆಂಕಟಾಚಾರ್ಯರು. ಮೊದಲಿಗೆ ದೊಡ್ಡಪ್ಪನವರ ಬಳಿ ಲೋಹಶಿಲ್ಪವನ್ನು ಅಭ್ಯಾಸ ಮಾಡಿದರು. ನಂತರ ನಾಗಮಂಗಲದ ಯಜಮಾನ್ ಶ್ರೀಕಂಠಾಚಾರ್ಯರಲ್ಲಿ ಶಿಷ್ಯಾರ್ಜನೆಯನ್ನು ಮುಂದುವರಿಸಿದರು.



ಚಿತ್ರ ೮. ೧೧ :
ಎನ್.ಪಿ. ಶ್ರೀನಿವಾಸಾಚಾರ್ಯರು

ಒಮ್ಮೆ ಮೈಸೂರಿಗೆ ಸ್ವಂತ ಕೆಲಸಕ್ಕಾಗಿ ಬಂದವರು ರಾಜಗುರುಗಳಾಗಿದ್ದ ಸಿದ್ಧಲಿಂಗ ಸ್ವಾಮಿಗಳನ್ನು ದರ್ಶಿಸಲುಬಂದು ಅವರ ಆಶೀರ್ವಾದವನ್ನು ಬೇಡಿದರು. ನಿಮ್ಮಲ್ಲಿರುವ ಶಿಲ್ಪ ವೃದ್ಧಿಗೊಳ್ಳ ಬೇಕಾಗಿದ್ದರೆ ಮೈಸೂರಿಗೆ ಬಂದು ಅರಮನೆಯ ಕೆಲಸಗಳನ್ನು ಮಾಡಿ. ನಮ್ಮ ಗುರುಕುಲದಲ್ಲಿ ಪೂರಕವಾದ ಶಿಕ್ಷಣವನ್ನು ನೀಡುತ್ತೇವೆ ಎಂದು ಸ್ವಾಮಿಗಳು ಆಹ್ವಾನಿಸಿದರು.


ಇದನ್ನು ಗುರುವಾಜ್ಞೆ ಎಂಬುದಾಗಿ ಪರಿಗಣಿಸಿ ಮೈಸೂರಿಗೆ ಬಂದು ಸ್ವಾಮಿಗಳ ನಿರ್ದೇಶನದಲ್ಲಿ ಲೋಹಶಿಲ್ಪವನ್ನು ಕೈಗೊಂಡರು, ಮಹಾರಾಜರು ಪೂಜೆ ಮಾಡುವ ಪಂಚಾಯತನ ಮುರ್ತಿಗಳು, ಬೆಳ್ಳಿಚಾಮರ ಧಾರಿಣಿಯರು, ಭರತಪುರದ ಮಹಾರಾಜರಿಗೆ ಅಂಬೆಗಾಲು ಕೃಷ್ಣ ಮುಂತಾದ ಅನೇಕ ಶಿಲ್ಪಗಳನ್ನು ಮಾಡಿದರು.

ಸ್ವಾಮಿಗಳು ಸಮಾಧಿಸ್ಥರಾದ ತರುವಾಯ ಬೆಂಗಳೂರಿಗೆ ಬಂದು ೧೯೫೭ರಲ್ಲಿ ಕರಕುಶಲ ಅಭಿವೃದ್ಧಿ ಮಂಡಲಿಯಲ್ಲಿ ಮಾಸ್ಟರ್‌ಕ್ರಾಫ್ಟ್ಸ್‌ಮನ್ ಆಗಿ ಸೇರಿ ಸೇವೆಸಲ್ಲಿಸಿದರು. ಎರಡು ಲೋಹಗಳಲ್ಲಿ ಅರ್ಧನಾರೀಶ್ವರ ಎರಕದ ಮೂರ್ತಿಯನ್ನು ಮಾಡಿದರು. ಈ ಶಿಲ್ಪಕ್ಕಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದುಕೊಂಡರು. ೧೯೭೨ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಗೌರವ ಪ್ರಶಸ್ತಿಯನ್ನು ಸಮರ್ಪಿಸಿತು.

ಶ್ರೀನಿವಾಸಚಾರ್ಯರು ತಮ್ಮ ಅಂತಿಮ ಕಾಲದವರೆವಿಗೂ ಸ್ವಾಮಿಗಳು ತಮ್ಮ ಉಚ್ಛ್ರಾಯಕ್ಕೆ ಕಾರಣರಾದವರೆಂದು ಕೃತಜ್ಞತೆಯಿಂದ ಸ್ಮರಿಸುತ್ತಿದರು.

ಧಾರವಾಡ ಜಿಲ್ಲೆಯ ಹೊಂಬಳದಲ್ಲಿ ಜನಿಸಿದ **ಶಂಕರಪ್ಪ** (೧೯೦೩) ಶ್ರೀಮಂತ ಮನೆಗೆ ಸೇರಿದವರು. ವ್ಯವಸಾಯವಿದ್ದು ಊರಿನ ದೊಡ್ಡಮನೆ ಎಂಬುದಾಗಿ ಲೆಕ್ಕಕ್ಕೆ ಬಂದಿತ್ತು. ಶಂಕರಪ್ಪನವರು ೧೯೨೭ರಲ್ಲಿ ಶಿಲ್ಪ ಕಲಿಯಲೆಂದೇ ಮೈಸೂರಿಗೆ ಬಂದು ಸಿದ್ಧಲಿಂಗಸ್ವಾಮಿಗಳನ್ನು ಆಶ್ರಯಿಸಿದರು. ಸ್ವಾಮಿಗಳಲ್ಲಿ ಆರು ವರ್ಷಗಳ ಕಾಲ ಶಿಲಾಶಿಲ್ಪವನ್ನು ಅಭ್ಯಾಸಮಾಡಿದರು. ಶಂಕರಪ್ಪನವರು ಸ್ವಾಮಿಗಳ ಮೆಚ್ಚಿನ ಶಿಷ್ಯರಾಗಿದ್ದರು. ಶಂಕರಪ್ಪನವರಿಗೂ ಗುರುಗಳ ಬಗ್ಗೆ ಅಪಾರವಾದ ಗೌರವ ಮತ್ತು ಶ್ರದ್ದೆಗಳಿದ್ದವು. ೧೯೩೩ರಲ್ಲಿ ಹೊಂಬಳಕ್ಕೆ ಹಿಂತಿರುಗಲು ಸ್ವಾಮಿಗಳ ಅಪ್ಪಣೆಯನ್ನು ಅದರೊಂದಿಗೆ ಸ್ವಾಮಿಗಳ ಪಾದುಕೆಗಳನ್ನೂ ಬೇಡಿದರು. ಶಂಕರಪ್ಪನವರು ಆ ಪಾದುಕೆಗಳನ್ನು ತಮ್ಮ ದೇವ ಮಂದಿರದಲ್ಲಿರಿಸಿ ತಮ್ಮ ಜೀವನ ಪರ್ಯಂತ ಪೂಜಿಸುತ್ತಿದ್ದರು.

ಗುರುಗಳ ಆಶೀರ್ವಾದದಿಂದ ೧೯೩೩ರಲ್ಲಿ ಶಂಕರಪ್ಪನವರ ಮದುವೆಯಾಯಿತು. ೧೯೩೫ರಲ್ಲಿ ಹುಟ್ಟಿದ ಗಂಡುಮಗುವಿಗೆ ಗುರುಗಳ ಗುರುವಿನ ಹೆಸರನ್ನೇ ಇರಿಸಿದರು– ನಾಗಲಿಂಗ. ನಂತರದ ಕಾಲದಲ್ಲಿ ನಾಗಲಿಂಗಾಚಾರ್ಯರು ಪ್ರಸಿದ್ಧ ಶಿಲ್ಪಿಗಳಾಗಿ ಪ್ರಖ್ಯಾತರಾದರು. ಶಂಕರಪ್ಪವರು ಅನೇಕ ಶಿಲಾಶಿಲ್ಪಗಳನ್ನು ರೂಪಿಸಿಕೊಟ್ಟಿದ್ದಾರೆ. ಬಾದಾಮಿಯ ಬನಶಂಕರಿ ವಿಗ್ರಹ, ೧೬ ಅಡಿ ಎತ್ತರದ ಮಹಾದ್ವಾರ. ಬೆಟಗೇರಿಯ ವಿಠೋಬ ರುಕುಮಾಯಿ, ಗದುಗಿನ ವೀರನಾರಾಯಣ ದೇವಾಲಯದ ಮಹಾದ್ವಾರ ಹೀಗೆ ಅನೇಕ ಶಿಲ್ಪಗಳನ್ನು ಹೆಸರಿಸಬಹುದು. ಶಂಕರಪ್ಪನವರು ಪ್ರಖ್ಯಾತ ಶಿಲ್ಪಿಗಳಾಗಿದ್ದಾರೆ. ಇವರ ಮಗ ನಾಗಲಿಂಗಾಚಾರ್ಯರು ಕಂಚಿನ ಎರಕದ ಮೂರ್ತಿಗಳನ್ನು ತಯಾರಿಸಿ ಪ್ರಖ್ಯಾತರಾಗಿ ರಾಜ್ಯ ಮತ್ತು ರಾಷ್ಟ್ರದ ಅನೇಕ ಗೌರವಗಳನ್ನು ಪಡೆದು ಕೊಂಡಿದ್ದಾರೆ.



ಚಿತ್ರ ೮.೧೨ :
ಎಸ್. ನರಸಿಂಹಚಾರ್ಯರು

ಎಸ್. ನರಸಿಂಹಚಾರ್ಯರು (೧೯೧೫) ಮೈಸೂರಿನಲ್ಲಿಯೇ ಜನಿಸಿದರು. ತಂದೆ ಸೋಮಾಚಾರ್ಯರು ಚಿನ್ನ-ಬೆಳ್ಳಿ ಕೆಲಸ ಮಾಡುತ್ತಿದ್ದರು. ಬಡತನದಿಂದ ಒಂಬತ್ತು ವರ್ಷದ ಬಾಲಕನನ್ನು ಯಾಲಕ್ಕಪ್ಪಾಚಾರ್ಯರ ಬಳಿ ಕೆಲಸಕ್ಕೆ ಸೇರಿಸಿದರು. ತಿಂಗಳಿಗೆ ರೂ. ೨ ಸಂಬಳ. ಚಾಮರಾಜೇಂದ್ರ ಕಲಾಶಾಲೆಯಲ್ಲಿ ಜವರಾಯಾಚಾರ್ಯರಲ್ಲಿ ಮರಶಿಲ್ಪವನ್ನು ಅಭ್ಯಾಸಮಾಡಿದರು. ಆದರೂ ಶಿಲ್ಪದ ಕಲಿಕೆಯು ಪಕ್ವಗೊಳ್ಳಲಿಲ್ಲ ಎಂಬ ಅತೃಪ್ತಿ. ಸಿದ್ಧಲಿಂಗಸ್ವಾಮಿಗಳನ್ನು ಶಿಲ್ಪದ ಕಲಿಕೆಗೆ ಆಶ್ರಯಿಸಿದರು. ಸ್ವಾಮಿಗಳು ಇವರಿಗೆ ರಾತ್ರಿ ೧೦ ಗಂಟೆಯನಂತರ ಪಾಠ ಮಾಡುತ್ತಿದ್ದರು. ಸ್ವಾಮಿಗಳ ಕೃಪಾದೃಷ್ಟಿಯಿಂದ, ಉದಾರ ಹೃದಯದಿಂದ ಶಾಸ್ತ್ರೀಯ ಶಿಲ್ಪ ಅವರ ಮಡಿಲಿಗೆ ಬಿತ್ತು.

ಎಸ್. ನರಸಿಂಹಾಚಾರ್ಯರು ಮಾಡಿಕೊಟ್ಟಿರುವ ವಿಗ್ರಹಗಳು ವ್ಯಾಪಕವಾಗಿ ರಾಜ್ಯದ ಅನೇಕ ಭಾಗಗಳಲ್ಲಿವೆ. ಮೈಸೂರಿನ ದಸರಾ ವಸ್ತು ಪ್ರದರ್ಶನಗಳಲ್ಲಿ ಅನೇಕ ಬಾರಿ ಮೊದಲ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.




ಚಿತ್ರ ೮.೧೩ : ಗುರುಕುಲದ ವಿಶೇಷಸಮಾರಂಭದಲ್ಲಿ
ಸ್ವಾಮಿಗಳು ಮತ್ತು ಶಿಷ್ಯರು

ನಾ.ಕೃ.ಮೃತ್ಯುಂಜಯ ಆಚಾರ್ಯ ಅವರೂ ನಾಗಮಂಗಲದ ಮೂಲದವರೇ ಮತ್ತು ಯಜಮಾನ್ ಶ್ರೀಕಂಠಾಚಾರ್ಯರ ಬಳಿ ಲೋಹ ಶಿಲ್ಪವನ್ನು ಅಭ್ಯಾಸ ಮಾಡಿದವರೇ. ಮೈಸೂರಿಗೆ ಬಂದ ತರುವಾಯ ಲೋಹಶಿಲ್ಪವನ್ನು ಸಿದ್ಧಲಿಂಗ ಸ್ವಾಮಿಗಳ ಮಾರ್ಗದರ್ಶನದಲ್ಲಿ ಪ್ರಾರಂಭಿಸಿ ನಂತರದಲ್ಲಿ ಸಿಂಗಣ್ಣಾಚಾರ್ಯರಲ್ಲಿ ಶಿಷ್ಯತ್ವವನ್ನು ಮುಂದುವರಿಸಿದವರು. ಇವರು ಲೋಹ ಶಿಲ್ಪದಲ್ಲಿಯ ಸಾಧನೆಗಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರು ವೇದಾಗಮ ಪಂಡಿತರೂ ಆಗಿದ್ದರು. ಆಗಮಕ್ರಿಯೆಗಳಲ್ಲಿ ಖ್ಯಾತರಾಗಿದ್ದವರು.

ಸ್ವಾಮಿಗಳಲ್ಲಿ ತಮ್ಮ ಕೊನೆಗಾಲದ ವರೆವಿಗೂ ಕೆಲಸ ಮಾಡಿದವರು **ವಿಷಕಂಠಾಚಾರ್ ಮತ್ತು ಚನ್ನವೀರಯ್ಯ.** ಇಬ್ಬರದೂ ಅಪೂರ್ವ ಜೋಡಿ. ಪರಸ್ಪರ ಹೊಂದಿಕೊಂಡು ಕೆಲಸವನ್ನು ಯಶಸ್ವಿಯಾಗಿ ಮುಗಿಸುವುದರಲ್ಲಿ ಅತ್ಯಂತ ನಿಪುಣರು. ಸ್ವಯಂ ಮರಕೆತ್ತನೆಗೆಲಸವನ್ನು ಮಾಡುತ್ತಿದದರೂ ಅವಶ್ಯಕ ಎಂದು ಕರೆದಾಗ ತಪ್ಪದೆ ನೆರವಿಗೆ ಬರುತ್ತಿದ್ದ **ಕೃಷ್ಣಾಚಾರ್** ಕೂಡ ಇವರ ಆಪ್ತರಾಗಿರುತ್ತಿದ್ದರು. ಈ ಮೂವ್ವರು ಸೇರಿದರೆ ಎಂತಹ ಕೆಲಸವಾದರೂ ಬೇಗ ಮುಗಿಯುತ್ತಿತು. ಇವರು ನಾಗೇಂದ್ರ ಸ್ಥಪತಿಗಳಿಗೆ ಸಹಾಯಕ ರಾಗಿ ಕೆಲಸ ಮಾಡುತ್ತಿದ್ದರು.

ಬಿಡುವಿನ ದಿನಗಳಲ್ಲಿ ಚಿತ್ರರಚನೆ, ಶಿಲ್ಪ ಮಾಡುವುದನ್ನು ಕಲಿಯಲು ಬಂದವರು ಕೆಲವರಿದ್ದರು. ಇದುವರೆವಿಗೂ ಉಲ್ಲೇಖಿಸಿದ ಶಿಷ್ಯರಂತೆ ಇವರು ಪೂರ್ಣಾವಧಿಯ ಶಿಲ್ಪಿಗಳಾಗಿ ಕೆಲಸಮಾಡದೆ ಬಿಡುವಿನ ವೇಳೆಯಲ್ಲಿ ಚಿತ್ರ-ಶಿಲ್ಪಗಳನ್ನು ಅಭ್ಯಾಸ ಮಾಡುತ್ತಿದ್ದರು. ಅವರಲ್ಲಿ **ಎಲ್.ಎಸ್.ಎನ್.ಆಚಾರ್ಯರು** ಚಿತ್ರಕಲೆಯನ್ನು ಅಭ್ಯಾಸಮಾಡಿದರು. ನಿಸರ್ಗಚಿತ್ರರಚನೆಯಲ್ಲಿ ಹೆಸರುಮಾಡಿದರು. ಕಾಲೇಜು ಓದನ್ನು ಮುಗಿಸಿ ಸರ್ಕಾರದ ಅಧಿಕಾರಿಗಳಾಗಿ ಈಗ ನಿವೃತ್ತರಾಗಿದ್ದಾರೆ.


ನಂಜುಂಡ ಸ್ವಾಮಿ ಎಂಬುವವರು ಸ್ವಾಮಿಗಳಲ್ಲಿ ಶಿಲ್ಪವನ್ನು ಅಭ್ಯಾಸವನ್ನು ಮಾಡಿದರು. ರೈಲ್ವೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ಕೊಂಡರು.



ಚಿತ್ರ ೮.೧೪ : ಸುಭಾಷಿಣಿ ದೇವಿ

ಮೈಸೂರಿನ ಸುಭಾಷಿಣಿ ದೇವಿ ಎಂಬುವರು ಚಿತ್ರಕಲೆಯನ್ನು ಶಿಲ್ಪಕಲೆಯನ್ನು ಸ್ವಾಮಿಗಳ ಬಳಿ ಕಲಿತ ಏಕಮಾತ್ರ ಸ್ತ್ರೀ. ನವದೆಹಲಿಯಲ್ಲಿ ನಡೆದ ಕರಕುಶಲ ಮೇಳದಲ್ಲಿ ಭಾಗವಹಿಸಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರಿಂದ ಪ್ರಶಂಸೆಯನ್ನು ಪಡೆದುಕೊಂಡವರು. ಸುಭಾಷಿಣಿ ದೇವಿಯವರ ತಂದೆಯವರು ವರ್ಣಶಿಲ್ಪಿ ಕೆ. ವೆಂಕಟಪ್ಪನವರ ಆತ್ಮೀಯ ಮಿತ್ರರಾಗಿದ್ದರೂ ವೆಂಕಟಪ್ಪನವರು ಸುಭಾಷಿಣಿ ದೇವಿಯವರಿಗೆ ಚಿತ್ರವನ್ನು ಕಲಿಸಿಕೊಡಲು ನಿರಾಕರಿಸಿದರು. ತರುವಾಯ ಆಕೆಯು ಸ್ವಾಮಿಗಳನ್ನು ಆಶ್ರಯಿಸಿದರು. ಸ್ವಾಮಿಗಳು ಚಿತ್ರರಚನೆ ಮಾತ್ರವಲ್ಲ ಶಿಲ್ಪವನ್ನೂ ಹೇಳಿಕೊಟ್ಟರು. ಹೀಗಾಗಿ ಸುಭಾಷಿಣಿ ದೇವಿಯವರು ಸ್ವಾಮಿಗಳ ಪೋಟೋ ಮನೆಯಲ್ಲಿರಿಸಿಕೊಂಡು ನಿತ್ಯವೂ ಪೂಜೆ ಮಾಡುತ್ತಿದ್ದರು. ತಮ್ಮ ಬಾಳನ್ನು ಸಂಪೂರ್ಣವಾಗಿ ಚಿತ್ರ ಮತ್ತು ಶಿಲ್ಪಿಗಳಿಗಾಗಿಯೇ ಮುಡುಪಿರಿಸಿದರು. ಇವರಿಗೆ ಸ್ವಾಮಿಗಳಲ್ಲಿ ಅಪಾರ ಭಕ್ತಿ ಇತ್ತು. ಚಿತ್ರ-ಶಿಲ್ಪಗಳಲ್ಲಿ ತಮ್ಮ ಸಾಧನೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಪ್ರಸ್ತುತ ಗ್ರಂಥದ ಲೇಖಕರು **(ಎಲ್.ಶಿವಲಿಂಗಪ್ಪ)** ನಾಗೇಂದ್ರ ಸ್ಥಾಪತಿಗಳ ಮಾರ್ಗದರ್ಶನದಲ್ಲಿ ಚಿತ್ರ ಮತ್ತು ಶಿಲ್ಪಗಳನ್ನು ಹತ್ತುವರ್ಷಗಳ ಕಾಲ ಅಭ್ಯಾಸಮಾಡಿರುತ್ತಾರೆ. ಇದರೊಂದಿಗೆ ಕಾಲೇಜು ಶಿಕ್ಷಣವನ್ನು ಪೂರೈಸಿ ಬೆಂಗಳೂರಿನಲ್ಲಿ ಉದ್ಯೋಗವನ್ನು ಗಳಿಸಿದರೂ ಕಲಾಶಾಲೆಯನ್ನು ಪ್ರಾರಂಭಿಸಿ ಪ್ರಧಾನ ಆಚಾರ್ಯರಾಗಿ ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಕಲಿಸುತ್ತಿದ್ದಾರೆ. ಕಲೆ ಮತ್ತು ಶಿಲ್ಪಗಳ ಬಗ್ಗೆ ಅನೇಕ ಲೇಖನಗಳನ್ನು, ಗ್ರಂಥಗಳನ್ನು ರಚಿಸಿ ಪ್ರಕಟಿಸಿರುತ್ತಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಪಡೆದಿರುತ್ತಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿಯು ಸೇವೆಸಲ್ಲಿಸಿರುತ್ತಾರೆ.



ಚಿತ್ರ ೮.೧೫ : ಎಲ್. ಶಿವಲಿಂಗಪ್ಪ

ಶಿಷ್ಯರ ಪ್ರಸ್ತುತ ಪಟ್ಟಿ ಸಮಗ್ರವಲ್ಲ. ಬಿಟ್ಟು ಹೋಗಿರುವವರು ಹೆಚ್ಚಾಗಿಯೇ ಇರಬೇಕು. ಸ್ವಾಮಿಗಳ ಶಿಷ್ಯರಲ್ಲಿ ಪ್ರಖ್ಯಾತರಾಗಿರುವವರನ್ನು ಮಾತ್ರವೇ ಹೇಳಿದೆ. ಆದ್ದರಿಂದ ಸ್ವಾಮಿಗಳ ಬಳಿ ಅಧ್ಯಯನ ಮಾಡಿರುವ ಶಿಷ್ಯರ ಸಂಖ್ಯೆ ಐದುನೂರು – ಆರುನೂರು ಮಂದಿಯಾದರು ಇರಬಹುದು. ಬಹುಪಾಲು ಸ್ವಾಮಿಗಳ ಕಾರ್ಯಾಗಾರದಲ್ಲಿಯೇ ನಾಲ್ಕು ದಶಕಗಳ ಸುದೀರ್ಘಾವಧಿಯಲ್ಲಿ ಸ್ವಾಮಿಗಳ ಬಳಿ ಶಿಷ್ಯಾರ್ಜನೆ ನಡೆಸಿದವರು. ಈ ಕಲಿಕೆಗೆ ಒಂದು ವ್ಯವಸ್ಥೆಯನ್ನು ಕೊಟ್ಟು ಗುರುಕುಲವನ್ನು ಸ್ಥಾಪಿಸಬೇಕೆಂಬ ತುಡಿತ ಸ್ವಾಮಿಗಳಲ್ಲಿ ತೀವ್ರಗೊಂಡಿತು. ಕೊನೆಗೂ ತಮ್ಮ ಕಾರ್ಯಾಗಾರದಲ್ಲಿಯೇ ಶಿಷ್ಯರಿಗೆ ಪಾಠವನ್ನು ಕಲಿಸುತ್ತಿರುವ ಕ್ರಮ ಅಂತ್ಯಗೊಂಡು ಪ್ರತ್ಯೇಕ ಗುರುಕುಲವನ್ನು ಪ್ರಾರಂಭಿಸಬೇಕೆಂಬ ತಮ್ಮ ಬಯಕೆಯನ್ನು ಮಹರಾಜರಿಗೆ ಅರಿಕೆ ಮಾಡಿಕೊಳ್ಳಬೇಕೆಂಬುದಾಗಿ ತೀರ್ಮಾನಿಸಿದರು. ಆ ವೇಳೆಗೆ ಅರಸೊತ್ತಿಗೆಯು ಹೋಗುವ ಕಾಲ ಸಮೀಪಿಸಿತ್ತು. ರಾಜ್ಯ ಸ್ವತಂತ್ರ ಭಾರತದ ಭಾಗವಾಗುವ ಪರ್ವಕಾಲ, ಹೀಗಾಗಿದ್ದರೂ ಮಹಾರಾಜರಿಗೆ ಸಾಂಪ್ರದಾಯಿಕ ಶಿಲ್ಪದ ಗುರುಕುಲ ಸ್ಥಾಪನೆಯು ಬಹು ದೊಡ್ಡದಾದ ಹಾಗೂ ಮುಖ್ಯವಾದ ಕೆಲಸ ಎಂಬುದು ಚೆನ್ನಾಗಿ ಮನವರಿಕೆಯಾಗಿತ್ತು. ದೇಶ ಪ್ರಜಾಪ್ರಭುತ್ವ ಪಡೆದು ತನ್ನ ಕಾಲ ಮೇಲೆ ನಿಂತು ಕೊಳ್ಳುವತ್ತ ಸಾಗಲು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಆಡಳಿತದ ಚುಕ್ಕಾಣಿ ಹಿಡಿದಿದ್ದ ಮೈಸೂರು ಸಂಸ್ಥಾನದ ಮಹಾರಾಜರು ಸಹ ಸುಧಾರಣೆಯ ನಿಟ್ಟಿನಲ್ಲಿ ಗಮನಹರಿಸುತ್ತಾ ಸ್ವಾಮಿಗಳು ಹೇಳಿದ್ದ ಮಾತುಗಳನ್ನು ಮರೆತಿದ್ದರು. ಮತ್ತೊಂದು ಸಂದರ್ಭದಲ್ಲಿ ಮಹಾರಾಜರಿಗೆ ಗುರುಕುಲ ಶಿಕ್ಷಣದ ಮಹತ್ವವನ್ನು ನಿವೇದಿಸಿದಾಗ ತಕ್ಷಣವೇ ತಮ್ಮ ಆಪ್ತ ಕಾರ್ಯದರ್ಶಿಗಳನ್ನು ಕರೆದು ಆನೆ ಕರೋಟಿಯ ದಕ್ಷಿಣಕ್ಕೆ ಇದ್ದ ಸುಮಾರು ಮೂರು ಎಕರೆ ಸ್ಥಳವನ್ನು ದಾನಮಾಡಿ ಗುರುಕುಲ ಕಟ್ಟಲು ಸಹ ನೆರವು ನೀಡಿದರು. ತಕ್ಷಣವೇ ಕಾರ್ಯ ಪ್ರವೃತ್ತರಾದ ಸ್ವಾಮಿಗಳು



ಚಿತ್ರ ೮. ೧೬ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲಂ



ಚಿತ್ರ ೮. ೧೭ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲದ ಲಾಂಛನವಾಗಿರುವ ಶಿಲ್ಪಾದರ್ಶಮೂರ್ತಿ

ಸುತ್ತಲೂ ಜಾಗ ಬಿಟ್ಟು ಮಧ್ಯಲ್ಲಿ ಅಂದಾಜು ಇನ್ನೂರು ಅಡಿ ವಿಸ್ತೀರ್ಣದೊಳಗೆ ನೂರೈವತ್ತು ಅಡಿ ಉದ್ದಗಲದ ಆಯದೊಳಗೆ ಚೌಕಾಕಾರವಾಗಿ ಕಟ್ಟಡ ಮಾಡಿದರು. ಈ ಚೌಕಾಕಾರಕ್ಕೆ ನಾಲ್ಕು ಕಡೆಯಿಂದಲೂ ಪ್ರವೇಶಿಸುವಂತೆ ದ್ವಾರಗಳನ್ನು ಮಾಡಿದ್ದರು. ಉತ್ತರ ದಕ್ಷಿಣವಾಗಿರುವ ಸ್ಥಳದಲ್ಲಿ ವಿಸ್ತಾರವಾದ ಕೊಠಡಿಗಳನ್ನು ಮಾಡಿ ಒಂದು ಭಾಗವನ್ನು ಸ್ವಾಮಿಗಳವರ ಆಪ್ತ ಶಿಷ್ಯರು ಸಂಬಂಧಿಗಳು ಆಗಿದ್ದ ನಾಗಲಿಂಗ ಸ್ವಾಮಿ ಎಂಬುವರಿಗೆ ವಾಸಕ್ಕೆ ಬಿಟ್ಟುಕೊಟ್ಟು ಮತ್ತೊಂದನ್ನು ತಮ್ಮ ಕಲಾರಚನೆಗೆ ಬೇಕಾದ ಸಲಕರಣೆ ಇಟ್ಟುಕೊಳ್ಳಲು ಬಳಸಿಕೊಂಡರು.

ಮಧ್ಯದಲ್ಲಿನ ಚಚ್ಚೌಕದಲ್ಲಿ ಮಳೆ ಬಿಸಿಲು ಗಾಳಿ ಧಾರಾಳವಾಗಿ ಬರುವಂತೆ ಯಾವುದೇ ಮೇಲ್ಛಾವಣಿ ಇಲ್ಲದಿರುವಂತೆಯೂ, ತೊಟ್ಟಿ ಅಂಕಣವನ್ನು ನಿರ್ಮಿಸಿದರು. ಇವೆಲ್ಲದರ ಮಧ್ಯೆ ನೂರಾ ಎಂಟು ಶಿವಲಿಂಗಗನ್ನು ಮಾಡಿ ಸ್ಥಾಪಿಸಿದ್ದಾರೆ. ಈ ಲಿಂಗಗಳಿರುವ ಸ್ಥಳ ಸುಮಾರು ಮೂವತ್ತು ಅಡಿ ವ್ಯಾಸವುಳ್ಳಸದ್ದಾಗಿದ್ದು ನಾಲ್ಕು ಹಂತದ ವೇದಿಕೆ ರಚಿಸಿದ್ದು ಮೂರು ಹಂತದಲ್ಲಿ ವೃತ್ತಾಕಾರವಾಗಿ ನೂರೆಂಟು ಲಿಂಗಗಳನ್ನು ಸ್ಥಾಪಿಸಿ ನಾಲ್ಕು ದಿಕ್ಕಿಗೂ ನಾಲ್ಕು ವೃಷಭ ಮೂರ್ತಿಗಳನ್ನು ಇಟ್ಟಿದ್ದಾರೆ. ಮೇಲಿನ ನಾಲ್ಕನೇ ಹಂತದಲ್ಲಿ ಸದ್ಯೋಜಾತ, ವಾಮದೇವ, ಅಘೋರ ಹಾಗೂ ತತ್ಪುರುಷ ಮೂರ್ತಿಗಳನ್ನು ಸ್ಥಾಪಿಸಿದ್ದಾರೆ. ಇವುಗಳ ಮೇಲೆ ಈಶಾನಾದಿ ಮೂರ್ತಿಗಳಿವೆ.

ಮಹಾರಾಜರು ಉದ್ಘಾಟಿಸುವ ದಿನ ಹತ್ತಿರವಾದಂತೆ ವಿಪರೀತವಾದ ಕಾರ್ಯ ಬಾಹುಳ್ಯದಿಂದ ಪೂರ್ಣವಾಗಲಿಲ್ಲವಾದರೂ ಶ್ರೀಮನ್ ಮಹಾರಾಜರು ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಶಿಲ್ಪ ಗುರುಕುಲದ ಕಟ್ಟಡ ಸಂಪೂರ್ಣ ವೀಕ್ಷಿಸಿ ಉದ್ಘಾಟನೆ ನೆರವೇರಿಸಿದರು. ಅಂದು ಅತ್ಯಂತ ಅಪೂರ್ವ ಯೋಗ. ಮಹಾರಾಜರನ್ನು ಕರಸ್ಥಲ ನಾಗಲಿಂಗಸ್ವಾಮಿ ಮಠದಿಂದ ವೇದ ಘೋಷಗಳ ಮೂಲಕ ಸಕಲ ರಾಜ ಮರ್ಯಾದೆಯೊಡನೆ ಮಹಾರಾಜರನ್ನು ಆಹ್ವಾನಿಸಲಾಯಿತು. ಚಾಮರ,ಛತ್ರಿ, ಓಲಗ, ಋತ್ವಿಜರು, ಚೌರಿ ಬೀಸುವವರು ನೀರು ತುಂಬಿದ ಕುಂಭಗಳನ್ನು ಮತ್ತು ಕಳಸಗಳನ್ನು ಹಿಡಿದು ಬರುವವರು ಸೇರಿದಂತೆ ಸಾವಿರಾರು ಜನರ ಸಮ್ಮುಖದಲ್ಲಿ ಸ್ವಾಮಿಗಳ ನೇತೃತ್ವದಲ್ಲಿ ಮಹಾರಾಜರು ನೂರೆಂಟು ಲಿಂಗಗಳಿಗೆ ಹೂವನ್ನು ಎರಚುವ ಮೂಲಕ ಶಿಲ್ಪಗುರುಕುಲವನ್ನು ಉದ್ಘಾಟಿಸಿದರು. ಪಶ್ಚಿಮ ದಿಕ್ಕಿಗಿರುವ ವೃತ್ತಾಕಾರದ ಲಿಂಗ ಸಮುಚ್ಚಯದ ಕೆಳಭಾಗದಲ್ಲಿ ಶಿಲಾಫಲಕವನ್ನು ಭದ್ರಗೊಳಿಸಿದ್ದರು :

ಗುರುಭ್ಯೋನಮಃ ಶ್ರೀ ಜಗದ್ಗುರು ಶೈವ ಶಿಲ್ಪ ಗುರುಕುಲದ ಪ್ರಾರಂಭೋತ್ಸವವು ಶಾ. ಶಕ ೧೮೭೧ ಶ್ರೀ ಸರ್ವಧಾರಿ ಸಂವತ್ಸರ ಫಾಲ್ಗುಣ ಶುದ್ಧ ೨ ಸೋಮವಾರ ಶ್ರೀಮತ್ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಜಯಚಾಮರಾಜ ಮಹಾಪ್ರಭುವರ್ಯರ ದಿವ್ಯಾಮೃತ ಕರಕಮಲಗಳಿಂದ ನೆರವೇರಿಸಲ್ಪಟ್ಟಿತು. ಎಂಬುದಾಗಿ ಶಿಲಾಫಲಕದಲ್ಲಿ ಕೆತ್ತಲಾಗಿದ್ದು ಅದರ ತೆರೆಯನ್ನು ಮಹಾರಾಜರು ಸರಿಸಿದರು. ಹೀಗೆ ಗುರುಕುಲವು ಪ್ರಾರಂಭವಾದದ್ದು ೧೯೪೯ರಲ್ಲಿ.

ಗುರುಕುಲದ ಮಹಾದ್ವಾರ ಪಶ್ಚಿಮಾಭಿಮುಖವಾಗಿದ್ದು ಕಾಮಕಾಮೇಶ್ವರಿ ಹಾಗೂ ನಾಗಲಿಂಗ ಸ್ವಾಮಿಗಳ ಮಠವೂ ಸನಿಹದಲ್ಲೇ ಇದೆ. ಸ್ವಾಮಿಗಳು ನಿರೀಕ್ಷಿಸಿದ್ದಂತೆ ಸಕಾಲದಲ್ಲಿ ಗುರುಕುಲದ ಉದ್ಘಾಟನೆ ಆಯಿತು. ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾಯಿತು. ನಂತರದಲ್ಲಿ ಗುರುಕುಲ ಶಿಕ್ಷಣ ಆರಂಭವಾದಂತೆ, ಮೈಸೂರು ನಗರದ ಸುತ್ತಮುತ್ತಲಿನ ಕಲೆಯಲ್ಲಿ ಆಸಕ್ತಿಯುಳ್ಳ ಯುವಕರ ದಂಡೇ ಬರಲು ಆರಂಭಿಸಿತು. ಇನ್ನು ಕೆಲವರು ಬೇರೆ ಉದ್ಯೋಗನ್ನರಸಲು ಬಂದವರು ಮೈಸೂರು ನಗರದಲ್ಲಿ ತಾತ್ಕಾಲಿಕ ವಸತಿಗಾಗಿ ಬಂದರು. ಇವರಿಗೆಲ್ಲಾ ಸ್ಥಳ ಒದಗಿಸುವುದು ಕಷ್ಟವಾದುದರಿಂದ ಕೊಂಚ ವಿಸ್ತರಿಸಿ ಕೊಠಡಿಗಳನ್ನು ಮಾಡಿ ಕಲೆಯಲ್ಲಿ ಆಸಕ್ತಿಯುಳ್ಳ ಬಡ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಿದರು.




ಚಿತ್ರ ೮. ೧೮ : ಶಿಲ್ಪ ಗುರುಕುಲದ ಉದ್ಘಾಟನಾ ಸಮಾರಂಭಕ್ಕೆ ಮಹಾರಾಜರನ್ನು ಸ್ವಾಗತಿಸಲು ಸಿದ್ಧರಾಗಿರುವ ಸ್ವಾಮಿಗಳು



ಚಿತ್ರ ೮. ೧೯ : ಮಹಾರಾಜರೊಂದಿಗೆ ಸ್ವಾಮಿಗಳು



ಚಿತ್ರ ೮.೨೦ : ಜಗದ್ಗುರು ಶೈವ ಶಿಲ್ಪ ಬ್ರಹ್ಮರ್ಷಿ ಗುರುಕುಲದಲ್ಲಿರುವ ೧೦೮ ಶಿವಲಿಂಗಗಳು



ಚಿತ್ರ ೮.೨೧ : ಸದ್ಯೋಜಾತಾದಿ ಮೂರ್ತಿಗಳು

ವರ್ಷ ವರ್ಷ ನಡೆಯುತ್ತಿದ್ದ ನಂಜುಂಡ ಶಿವಯೋಗಿಗಳ ಆರಾಧನೆ ಮತ್ತು ಮಠದಲ್ಲಿ ನಡೆಯುತ್ತಿದ್ದ ವಿದ್ವತ್ ಸಭೆಗಳಿಗೆ ಬರುವವರ ಸಂಖ್ಯೆಯು ಬೆಳೆಯ ತೊಡಗಿದುದರಿಂದ ಊಟದ ವ್ಯವಸ್ಥೆಗಾಗಿ ಗುರುಕುಲ ವಿಸ್ತರಣೆ ಮಾಡಿ ಪಾಕಶಾಲೆ ಮಾಡಿದರು ಅದು ಕ್ರಮೇಣ ಛತ್ರದಂತಾಯಿತು. ಹಲವಾರು ಮದುವೆಗಳು ಸಹ ಅಲ್ಲಿ ನೆರವೇರಲು ಅವಕಾಶವಾಯಿತು.

ಕೆತ್ತನೆಗಾಗಿ ತರುವಂತಹ ಕಲ್ಲುಗಳನ್ನು ಇಡಲು ಹಾಗೂ ಯುವ ಶಿಲ್ಪಿಗಳಿಗೆ ತರಬೇತಿ ಕೊಡಲು ಗುರುಕುಲ ದಕ್ಷಿಣಕ್ಕೆ ವಿಶಾಲವಾದ ಸ್ಥಳ ಮಾಡಿ ತಾತ್ಕಾಲಿಕ ನೆಲೆ ಕಲ್ಪಿಸಿದರು. ಉತ್ತರಭಾಗಕ್ಕೆ ವಸಾತಿ ಸೌಕರ್ಯ ಕಲ್ಪಿಸಿ ಆರಾಧನಾ ಸಂದರ್ಭದಲ್ಲಿ ಬರುವ ವಿಶೇಷ ಅತಿಥಿಗಳಿಗೆ ವ್ಯವಸ್ಥೆ ಮಾಡಿದ್ದರು. ಗುರುಕುಲದ ಹಿಂಭಾಗ ಅಂದರೆ ಪೂರ್ವದಲ್ಲಿ ವೀಳ್ಯದೆಲೆ, ತೆಂಗು, ಕಂಗು, ಬಾಳೆ ಬೆಳೆಯುವ ತೋಟ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಖಾಸಗಿ ಸ್ವತ್ತು, ಉತ್ತರಕ್ಕೆ ಆನೆ ಕಟ್ಟುವ ಲಾಯ. ಈ ಚೆಕ್ ಬಂದಿಯಲ್ಲಿದ್ದ ಗುರುಕುಲ ಇಂದು ತನ್ನ ಅಸ್ತಿತ್ವವನ್ನು ಸಾಕಷ್ಟು ಕಳೆದುಕೊಂಡಿದೆ. ಈ ಅಂಕಿ ಅಂಶಗಳೆಲ್ಲವೂ ಗುರುಕುಲದ ಬಾಹ್ಯನೋಟ ದರ್ಶಿಸಲು ಸಹಾಯಕವಾಗುತ್ತದೆ ಎಂದು ಹೇಳಿದೆ.

ನಾಡಿನಾದ್ಯಂತ ಸ್ವಾಮಿಗಳನ್ನು ಭೇಟಿಮಾಡಲು, ಅವರ ಮಾರ್ಗದರ್ಶನ ಪಡೆಯಲು ವಿಗ್ರಹ ಮಾಡಿಸಿಕೊಳ್ಳಲು ರಾಜ್ಯ ಮತ್ತು ರಾಷ್ಟ್ರದ ನಾನಾ ಭಾಗಗಳಾದ ಬರುತ್ತಿದ್ದ ಅಪಾರ ಜನಸಂದಣಿಯ ತೀವ್ರ ಒತ್ತಡದಲ್ಲೂ ಸ್ಥಿತಪ್ರಜ್ಞರಾಗಿರುತ್ತಿದ್ದರು. ಎಲ್ಲವನ್ನು ದೈವೇಚ್ಛೆ ಎಂದು

ಕಷ್ಟಸುಖಗಳನ್ನು ಸಮನಾಗಿ ಸ್ವೀಕರಿಸುತ್ತಿದ್ದರು. ಕರಸ್ಥಲ ನಾಗಲಿಂಗ ಸ್ವಾಮಿಗಳ ಪೀಠಾಧ್ಯಕ್ಷರಾಗಿದ್ದುದರಿಂದ ಪೀಠದ ಶಿಷ್ಯರು ಸದಾ ಬರುತ್ತಲೇ ಇದ್ದರು. ಅವರಿಗೆ ಲೌಕಿಕ ವಿಷಯಗಳೊಂದಿಗೆ ತಾತ್ತ್ವಿಕ ವಿವರಗಳನ್ನು ಬೋಧಿಸುವ ಕಾಯಕವನ್ನು ನಿರ್ವಹಿಸುತ್ತಲೇ ಇದ್ದರು. ತೊಂದರೆಯಲ್ಲಿರುವವರಿಗೆ ನೆರವಾಗುವುದು, ದುಃಖದಲ್ಲಿರುವವರಿಗೆ ಸಾಂತ್ವನ ಹೇಳಿ ಅವರ ಕಣ್ಣೀರನ್ನು ಒರೆಸುವುದು ಅವರ ನಿತ್ಯ ಕಾಯಕದ ಅಂಗವಾಗಿತ್ತು.


ಅನೇಕ ಪುಸ್ತಕಗಳಿಗೆ, ಶಾಸ್ತ್ರಾಧ್ಯಯನಸಕ್ತರಿಗೆ ಸೂಕ್ತ ಮಾರ್ಗದರ್ಶನ ಮಾಡುವುದರ ಜೊತೆಗೆ ಗ್ರಂಥಗಳಿಗೆ ಸಂದರ್ಭೋಚಿತ ಚಿತ್ರಗಳನ್ನು ರಚಿಸಿದ್ದಾರೆ. ಇವರು ನೀಡುತ್ತಿದ ಕಲಾಶಿಕ್ಷಣ ಗುರುಕುಲ ಮಾದರಿಯದು. ವಿದ್ಯಾರ್ಥಿಯಾದವನು ಪ್ರಾತಃಕಾಲದಲ್ಲಿಯೇ ಎದ್ದು ಶುಚಿರ್ಭೂತನಾಗಿ ಅರ್ಹ್ನಿಕಗಳನ್ನು ಮುಗಿಸಿ, ನಂತರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಕಲಾಭ್ಯಾಸ ಮಾಡಬೇಕಿತ್ತು. ಚಿತ್ರ, ಶಿಲ್ಪ ಯಾವುದೇ ಕಲಿಯಲು ಅಧ್ಯಯನ ಅಗತ್ಯ ಎಂಬುದು ಸ್ವಾಮಿಗಳವರು ಶಿಷ್ಯರಿಗೆ ತೋರಿಸಿದ ಮಾರ್ಗ. ಅವರು ಗುರುಕುಲದಲ್ಲಿಯೇ ವಾಸಿಸುತ್ತಿದ್ದರು. ಅಧ್ಯಯನದೊಂದಿಗೆ ಕೆಲಸವನ್ನೂ ಕಲಿಯುತ್ತಿದ್ದರು. ಅದಕ್ಕಾಗಿ **ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಗುರುಕುಲಂ** ಎಂದು ಹೆಸರಿಟ್ಟು ಪ್ರತ್ಯೇಕ ಗುರುಕುಲವನ್ನು ನಿರ್ಮಿಸಿ ಅದು ನಡೆಸಿ ಸಾಂಪ್ರದಾಯಿಕ ಶಿಲ್ಪದ ಕಲಿಕೆಗೆ ಒಂದು ಭದ್ರವಾದ ನೆಲೆಯನ್ನು ಕರ್ನಾಟಕದಲ್ಲಿ ಒದಗಿಸಬೇಕೆಂಬುದು ಸ್ವಾಮಿಗಳ ಆಸೆಯಾಗಿತ್ತು. ಇದಕ್ಕಾಗಿ ವಿಶೇಷ ಚಿತ್ರವೊಂದನ್ನು ರಚಿಸಿಶಿಲ್ಪಾದರ್ಶಮೂರ್ತಿ ಎಂದು ಹೆಸರಿಸಿದ್ದರು.

ಶಿಲ್ಪಾದರ್ಶ ಮೂರ್ತಿ ಎಂದು ಸ್ವಾಮಿಗಳು ಕರೆದಿದ್ದದ್ದು ವಿಶ್ವಕರ್ಮನನ್ನೇ. ಜಗತ್ ಶಿಲ್ಪಿಯಾದ ಆತನೇ ಶಿಲ್ಪಿಗಳಿಗೆ ಆದರ್ಶ ಎಂಬುದು ಶಾಸ್ತ್ರದ ವಾಣಿ. ಆದ್ದರಿಂದಲೇ ಶಿಲ್ಪಿಗಳಿಗೆ ಸೂತ್ರಗಳನ್ನು ಬಾಯಿಪಾಠಮಾಡಲು ನೆರವಾಗುವ ಪುಸ್ತಿಕೆಯನ್ನೂ ಅವರು 'ಶಿಲ್ಪಾದರ್ಶಃ' ಎಂದೇ ಹೆಸರಿಟ್ಟಿದ್ದರು. ಅದರ ಮುಖಚಿತ್ರದ ಮೇಲೂ ಇದೇ ಚಿತ್ರವನ್ನು ಮುದ್ರಿಸಿದ್ದರು.

ಸ್ವಾಮಿಗಳು ಗುರುಕುಲದ ಕಟ್ಟಡದ ನಿರ್ಮಾಣದಲ್ಲಿ ತುಂಬಾ ಶ್ರದ್ಧೆ ವಹಿಸಿದ್ದರು. ಗುರುಕುಲದ ಪ್ರವೇಶ ದ್ವಾರದ ಮೇಲೆ ಶಿಲ್ಪಾದರ್ಶ ಮೂರ್ತಿಯ ಶಿಲ್ಪವನ್ನು ಗಾರೆಯಲ್ಲಿ ಮಾಡಿಸಿದ್ದಾರೆ. ಇಂದೂ ಆ ಮೂರ್ತಿ ಇದೆ. ಗುರುಕುಲದ ಪೌಳಿಯನ್ನು ನೋಡಬೇಕು. ನಿಜಕ್ಕೂ ನೋಡಿದವರು 'ಏನು ವಿಶೇಷ?' ಎಂದು ಪ್ರಶ್ನಿಸಿದರೂ ಆಶ್ಚರ್ಯವೇನೂ ಇಲ್ಲ. ಸಾಧಾರಣ ಪೌಳಿ ಗೋಡೆಯೇ. ಆದರೆ ಅದರಲ್ಲಿ ೧೫–೨೦ ಅಡಿದೂರಕ್ಕೆ ನಾಲ್ಕು ಕಲ್ಲಿನಲ್ಲಿ ಕೆತ್ತನೆ ಮಾಡಿರುವ ಕಂಭಗಳನ್ನು ಅಳವಡಿಸಿದ್ದಾರೆ. ಬರೀ ಇಟ್ಟಿಗೆ ಗೋಡೆ ಮಾತ್ರ ಇರುವುದು ಬೇಡ ಎಂದು. ಬಹುಶಃ ಇದನ್ನೂ ವಿಶೇಷ ಎಂದು ಭಾವಿಸದೆಯೂ ಇರಬಹುದು. ಕಲ್ಲಿನಲ್ಲಿ ಮಾಡಿರುವ ಆ ಕಂಭವನ್ನು ಗಮನಿಸಿ ನೋಡಿದ ಯಾರಾದರೂ ಬೆರಗಾಗುತ್ತಾರೆ. ಸಣ್ಣ ಕಂಭಗಳ ತಳ ಭಾಗದಲ್ಲಿ ಬಹು ಅಂದವಾದ ವಿಶೇಷ ಕೆತ್ತನೆಯನ್ನು ಮಾಡಿದ್ದಾರೆ. ಇದರಲ್ಲಿ ಗಂಡ ಭೇರುಂಡಗಳ, ಗೋಪಾಲಕೃಷ್ಣನ ಮೂರ್ತಿಗಳ ಅಲಂಕಾರ ಶ್ರೇಣಿಯನ್ನು ಬಿಡಿಸಿದ್ದಾರೆ. ಬಹು ರಮ್ಯವಾಗಿರುವ ಈ ಶಿಲ್ಪಗಳ ವಿವರಗಳನ್ನೂ ಚಿತ್ರ ೮.೨೧ ಮತ್ತು ಚಿತ್ರ ೮.೨೨ ರಲ್ಲಿ ಗಮನಿಸಿ.

ಪೌಳಿ ಗೋಡೆಗೆ ಎಷ್ಟೊಂದು ಅಲಂಕೃತ ಕಂಭಗಳು ಬೇಕಾಗಿರಲಿಲ್ಲ. ಸ್ವಾಮಿಗಳು ಗುರುಕುಲವನ್ನು ಬಹು ಪ್ರಧಾನವಾದದು ಎಂದು ಪರಿಗಣಿಸಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಶಿಲ್ಪ ರಚನೆಯಲ್ಲಿ ಸ್ವಾಮಿಗಳು ತೋರುತ್ತಿದ್ದ ಅಚ್ಚುಕಟ್ಟುತನವನ್ನೇ ಗುರುಕುಲದ ನಿರ್ಮಾಣದ ಬಗ್ಗೆಯೂ ಸ್ವಾಮಿಗಳು ತೋರಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಶೈವಾಗಮಗಳು ವಿಶ್ವಕರ್ಮವನ್ನು ಪರಶಿವ, ಪಂಚಬ್ರಹ್ಮ ಸದಾಶಿವ ಎಂಬುದಾಗಿಯೂ ಕರೆಯುತ್ತವೆ. ಆದ್ದರಿಂದ ಸ್ವಾಮಿಗಳು ಶಿಲ್ಪಾದರ್ಶ ಮೂರ್ತಿಯನ್ನು ರೂಪಿಸಿ ಶಿಲ್ಪಿಗಳು ಆರಾಧ್ಯಮೂರ್ತಿಯನ್ನು ರೂಪಿಸಿಕೊಟ್ಟಿದ್ದಾರೆ. ಗುರುಕುಲದಲ್ಲಿ ಪಂಚಬ್ರಹ್ಮ ಸದಾಶಿವಮೂರ್ತಿಯ



ಚಿತ್ರ ೮. ೨೨ : ಪೌಳಿಗೋಡೆಯಲ್ಲಿ ಇರುವ ಶಿಲಾಸ್ತಂಭಗಳು



ಚಿತ್ರ ೮. ೨೩ :
ಪೌಳಿಗೋಡೆಯಲ್ಲಿ
ಇರುವ ಶಿಲಾಸ್ತಂಭಗಳ
ಕೆತ್ತನೆಯ ವಿವರ

ಪಂಚಮುಖಗಳಿಂದ ಆವಿರ್ಭವಿಸಿರುವ ಸದ್ಯೋಜಾತಾದಿ ಮೂರ್ತಿಗಳ ಶಿಲ್ಪಗಳನ್ನೂ ಗುರುಕುಲದಲ್ಲಿ ಪ್ರತಿಷ್ಠಾಪಿಸಿ ಅರ್ಚನೆಗೆ ಅಣಿಗೊಳಿಸಿದ್ದಾರೆ.

ಗುರುಕುಲ ಪ್ರಾರಂಭವಾದದ್ದು ೧೯೪೯ರಲ್ಲಿ. ಆಗ್ಗೇ ಸ್ವತಂತ್ರ ಮೈಸೂರು ರಾಜ್ಯದ ಪ್ರಾರಂಭವಾಗಿತ್ತು. ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿಗಳಾಗಿದ್ದರು. ಸ್ವಾಮಿಗಳು ಕಾಮಕಾಮೇಶ್ವರಿ ದೇವಾಲಯದ ನಿರ್ಮಾಣದಲ್ಲಿ ತೊಡಗಿದ್ದರು. ದೇವಾಲಕ್ಕೆ ನೀಡಿದ್ದ ಅಂದಾಜು ಮೊತ್ತವನ್ನು ಮಹಾರಾಜರು ಅಂಗೀಕರಿಸಿದ್ದರೂ ನಿರ್ಮಾಣವಾಗುತ್ತಿರುವಾಗ ಒಪ್ಪಿದ್ದ ಮೊತ್ತವನ್ನು ಇದ್ದಕ್ಕಿದ್ದಂತೆಯೇ ಕಡಿಮೆಮಾಡಿದರು. ಸ್ವಾಮಿಗಳು ಹೊಯ್ಸಳ ದೇವಾಲಯವನ್ನು ನಿರ್ಮಿಸಬೇಕು ಎಂಬ ಹಠದಿಂದ ತಮ್ಮ ಯೋಜನೆಯನ್ನು ಬದಲಿಸಲಿಲ್ಲ. ದೇವಾಲಯದ ನಿರ್ಮಾಣದ ಕೆಲಸದಲ್ಲಿ ಕೊರತೆಯಾಗದಂತೆ ಎಚ್ಚರವಹಿಸಿದರು. ನಿತ್ಯವೂ ಬೆಳೆಯುತ್ತಿದ್ದ ಖರ್ಚನ್ನು ನಿಯಂತ್ರಿಸಲು ಪ್ರಯತ್ನಿಸಿದರು.

ಸ್ವಾಮಿಗಳ ಬಗ್ಗೆ ಅಸೂಯೆ ಹೊಂದಿದ್ದವರು ಸ್ವಾಮಿಗಳ ಬಳಿ ಕೆಲಸಮಾಡುತ್ತಿದ್ದವರಲ್ಲಿ ಕೆಲವರನ್ನು ಎತ್ತಿಕಟ್ಟಿ ಗಲಾಟೆ ಎಬ್ಬಿಸಿ ಕೆಲಸಗಳು ನಡೆಯಲಾರದಂತೆ ಮಾಡಿದರು, ಕೆಲಸಗಾರರಲ್ಲಿ ಹಲವರು ಕೆಲಸವನ್ನು ಬಿಟ್ಟು ಬೇರೆಕಡೆ ಸೇರಿಕೊಂಡರು. ಬಾಲ್ಯದಿಂದಲೂ ಸ್ವಾಮಿಗಳಬಳಿ ಇದ್ದ ಬಸವಣ್ಣ ಶಿಲ್ಪಿಯೂ ಕೂಡ ೧೯೫೦ರಲ್ಲಿ ಗಾಯತ್ರೀ ದೇವಾಲಯವನ್ನು ತಾವೇ ಸ್ವತಂತ್ರವಾಗಿ ನಿರ್ಮಿಸಲು ಅಪ್ಪಣೆ ಕೊಡಬೇಕೆಂದು ಸ್ವಾಮಿಗಳ ಪಾದಕ್ಕೆರಗಿ ಕೈಮುಗಿದು ಪ್ರಾರ್ಥಿಸಿದರು. ಆಗ್ಗೇ ಟೆಂಡರ್‌ನಲ್ಲಿ ಅವರೇ ಆಯ್ಕೆಯಾಗಿದ್ದರು. ಇದಕ್ಕೆ ಅರಮನೆಯ ಅಧಿಕಾರಿಗಳು ಕೆಲವರು ಸ್ವಾಮಿಗಳ ವಿರೋಧ ಯೋಜಿತವಾಗಿ ಕಾರ್ಯಪ್ರವೃತ್ತರಾಗಿ ಬಸವಣ್ಣನವರನ್ನು ಬೆಂಬಲಿಸಿದ್ದರು.

ಹೀಗೆ ಗುರುಕುಲ ಪ್ರಾರಂಭವಾದಾಗ ಗೊಂದಲ, ತೊಂದರೆಗಳೇ ಅವರಿಸಿದ್ದವು. ಶಿಷ್ಯರಲ್ಲಿ ಗುಂಪುಗಳು ನಾಗೇಂದ್ರ ಸ್ಥಾಪತಿಗಳು ಮತ್ತು ಅಪ್ಪಾಜಿ ಸ್ವಾಮಿಗಳ ಮಕ್ಕಳಮಧ್ಯೆ ವೈಮನಸ್ಸು ಬೆಳೆಯ ತೊಡಗಿತ್ತು. ಆಗ ಗುರುಕುಲವು ನಾಗೇಂದ್ರ ಸ್ಥಾಪತಿಗಳ ಅಧೀನದಲ್ಲಿದುದರಿಂದ ಅಲ್ಲಿಯ ಚಟುವಟಿಕೆಗಳಿಗೆ ಇತರರು ಬರುತ್ತಿರಲಿಲ್ಲ. ಆದರೆ ಸ್ವಾಮಿಗಳಿಗೆ ಮಾತ್ರವೇ ಗುರುಕುಲವು ಸರಸ್ವವಾಗಿತ್ತು. ಸ್ವಾಮಿಗಳಿಗೆ ಕರ್ನಾಟಕದ ಸಾಂಪ್ರದಾಯಿಕ ಶಿಲ್ಪ ಯಾವ ರೀತಿಯಲ್ಲಿ ಕೃಶಿಸಿ ದುರ್ಬಲವಾಗಿದೆ ಎಂಬುದರ ಪ್ರವೇಶ ಪರಿಪೂರ್ಣವಾಗಿತ್ತು. ದೇವಾಲಯ ನಿರ್ಮಾಣದಲ್ಲಿ ಚೋಳ ಶೈಲಿಯು ಹೇಗೆ ವ್ಯಾಪಿಸುತ್ತಿದೆ ಎಂಬುದರ ತಿಳಿವೂ ಅವರಿಗಿತ್ತು. ಆದ್ದರಿಂದ ಗುರುಕುಲವು ದೃಢವಾಗದಿದ್ದರೆ ಕರ್ನಾಟಕದಲ್ಲಿ ಸಾಂಪ್ರದಾಯಿಕ ಶಿಲ್ಪವು ಕಣ್ಮುಚ್ಚುತ್ತದೆ ಎಂಬ ಸ್ಪಷ್ಟ ಕಲ್ಪನೆ ಅವರಿಗಿತ್ತು. ಅದು ಅವರ ಬದುಕಿನ ಗುರಿ ಎನ್ನುವಷ್ಟು ಬಲವಾಗಿ ಬೇರೂರಿತ್ತು. ಸ್ವಾಮಿಗಳ ಗುರುಗಳಿಗೆ ಪಾರಮಾರ್ಥಿಕ ಚಿಂತನೆ ಇದ್ದರೆ ಸ್ವಾಮಿಗಳಿಗೆ ಮನಸ್ಸಲ್ಲೆಲ್ಲಾ ಕರ್ನಾಟಕ ಶೈಲಿಯ ಶಿಲ್ಪ ಮತ್ತು ಶಿಲ್ಪಿಗಳೇ ತುಂಬಿದ್ದರು. ಇದು ಉಚ್ಛ್ರಾಯ ಸ್ಥಿತಿಯನ್ನು ಗಳಿಸಬೇಕೆಂಬುದು ಅವರ ಆಶಯವಾಗಿತ್ತು. ನಿಜಕ್ಕೂ ಸ್ವಾಮಿಗಳು ಏಕಾಂಗಿಯಾಗಿಯೇ ಅದುವರೆವಿಗೂ (ನಾಲ್ಕು ದಶಕಗಳಿಗೂ ಹೆಚ್ಚುಕಾಲ) ಅನೇಕ ಶಿಷ್ಯರನ್ನು ಸಿದ್ದಪಡಿಸಿದ್ದರು. ದೇವಾಲಯ ನಿರ್ಮಾಣ ಮಾಡಬಲ್ಲ ಸಮರ್ಥರನ್ನು ಸಿದ್ಧಗೊಳಿಸಬೇಕೆಂಬ ಬಯಕೆ ಇನ್ನೂ ಪೂರ್ಣಗೊಳ್ಳಬೇಕಾಗಿತ್ತು.

ಬಹುಶಃ ಸ್ವಾಮಿಗಳ ಮನಸ್ಸಿನಲ್ಲಿ ಈ ವಿಷಯ ಬಹು ತೀವ್ರವಾಗಿದ್ದಿರಬೇಕು. ಸ್ವಾಮಿಗಳ ಆರೋಗ್ಯವು ಕ್ಷೀಣಗೊಳ್ಳತೊಡಗಿತ್ತು. ಗುರುಕುಲದಲ್ಲಿಯೇ ತಮ್ಮ ಸಮಾಧಿಯನ್ನು ನಿರ್ಮಿಸಬೇಕೆಂದು ತಮ್ಮ ತೀರ್ಮಾನವನ್ನು ಹೇಳಿದರು.

ತೀರ್ಮಾನದ ಹಿಂದೆ ಸ್ವಾಮಿಗಳ ಆಶಯವು ಸ್ಪಷ್ಟವಾಗಿಯೇ ಇದೆ. ಅವರು ಗುರುಕುಲವೇ ತಮ್ಮ ಬದುಕಿನ ಅಂತಿಮ ಗುರಿ ಎಂಬುದಾಗಿ ತೀರ್ಮಾನಿಸಿ ಅದರ ಉಚ್ಛ್ರಾಯಕ್ಕೆ ಇತರರು ದುಡಿಯಬೇಕೆಂಬುದಾಗಿ ಸೂಚಿಸಿದರು.



ಚಿತ್ರ ೮.೨೪ : ಶಿಲ್ಪ ಗುರುಕುಲದಲ್ಲಿರುವ ಸ್ವಾಮಿಗಳ ಸಮಾಧಿ

ಸಿದ್ಧಲಿಂಗ ಸ್ವಾಮಿಗಳು ತಮ್ಮ ಸಮಾಧಿಯನ್ನು ತಮ್ಮ ಗುರುಗಳ ಬಳಿ ಇರಲಿ ಎಂದು ಬಯಸಿದವರಲ್ಲ, ಶಿಲ್ಪ ಗುರುಕುಲದಲ್ಲಿಯೇ ದಕ್ಷಿಣ ಪಾರ್ಶ್ವದಲ್ಲಿರಲಿ ಎಂದು ಆಶಿಸಿದರು! ಎಂದರೆ ಆ ಆಶಯವನ್ನು ಸ್ಥಪತಿಗಳು ಗ್ರಹಿಸಿದರು ಎನಿಸುತ್ತದೆ. ಸ್ವಾಮಿಗಳ ನಂತರ ಗುರುಕುಲದ ಉಳಿವಿಗಾಗಿ ಬಹುಪ್ರಯತ್ನ ನಡೆಸಿದವರು ನಾಗೇಂದ್ರ ಸ್ಥಾಪತಿಗಳು ಮಾತ್ರವೇ. ಅದು ಏಕಾಂಗಿಯ ಪ್ರಯತ್ನವೇ ಆಯಿತು. ಸಾಂಪ್ರದಾಯಿಕ ಗುರುಕುಲವನ್ನು ನಡೆಸುವುದು ಸುಲಭದ ಕೆಲಸವಲ್ಲ. ಆದರೂ ಸ್ಥಪತಿಗಳೇ ಆ ಹೊಣೆ ಹೊತ್ತಿದ್ದರು.

೧೯೫೭ರಲ್ಲಿ ಸ್ವಾಮಿಗಳು ದೇಹತ್ಯಾಗ ಮಾಡಿದ ಕೂಡಲೇ ಉಂಟಾದ ದೊಡ್ಡಗೊಂದಲವೆಂದರೆ ಸ್ವಾಮಿಗಳು ಗುರುಕುಲದಲ್ಲಿ ಮೊದಲೇ ನಿರ್ಮಿಸಿದ್ದ ಸಮಾಧಿಯಲ್ಲಿ ಸ್ವಾಮಿಗಳ ಸಮಾಧಿ ನಡೆಸಬಾರದು ಎಂದು ಸುತ್ತಮುತ್ತಲಿನ ನಾಗರೀಕರು ಪ್ರಾರಂಭಿಸಿದ ಪ್ರತಿಭಟನೆ. ಆ ಸಂಧರ್ಭದಲ್ಲಿ ಮಹಾರಾಜರು ವಿದೇಶದಲ್ಲಿದ್ದರು. ಮಹಾರಾಜರಿಗೂ– ಸ್ವಾಮಿಗಳಿಗೂ ಮನಸ್ತಾಪ ಉಂಟಾಗಿದೆ. ಆದ್ದರಿಂದ ಮಹಾರಾಜರು ಈ ಸಂಬಂಧದಲ್ಲಿ ಪ್ರವೇಶಿಸುವುದಿಲ್ಲ ಎಂಬುದು ಕೆಲವರ ನಂಬಿಕೆಯಾಗಿತ್ತು. ಇದೇ ವದಂತಿಯು ದಟ್ಟವಾಗಿ ಮೈಸೂರಿನಲ್ಲಿ ಹಬ್ಬಿತ್ತು. ಆದರೆ ಇದು ಕೆಲವೇ ಗಂಟೆಗಳಲ್ಲಿ ಹುಸಿಯಾಯಿತು. ಸ್ವಯಂ ಮಹಾರಾಜರೇ ದೂರವಾಣಿಯಲ್ಲಿ ಸ್ವಾಮಿಗಳು ಯೋಜಿಸಿರುವ ಸ್ಥಳದಲ್ಲಿಯೇ ಅವರ ಸಮಾಧಿ ನಡೆಯಲು ಅವಕಾಶವನ್ನು ಕಲ್ಪಿಸಲು ಪೋಲೀಸ್ ಬಂದೋಬಸ್ತ್ ಮಾಡುವಂತೆ ಅಪ್ಪಣೆ ಮಾಡಿದರು.

ನಾಗಲಿಂಗ ಸ್ಥಾಪತಿಗಳು ಆಗ ವಿಧಾನಸೌಧದ ವಿನ್ಯಾಸದ ಕೆಲಸವನ್ನು ರಾಜ್ಯದ ಆಗಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ಅವರ ಅಪ್ಪಣೆಯ ಮೇರೆಗೆ ವಹಿಸಿಕೊಂಡಿದ್ದರು. ಅದನ್ನು ಮಾಡಿ ಯಶಸ್ವಿಯಾದ ತರುವಾಯ. ಗುರುಕುಲವನ್ನು ಸರ್ಕಾರದ

ಅನುದಾನಕ್ಕೆ ಒಪ್ಪಿಸುವ ಪ್ರಯತ್ನ ಮಾಡಿದರು. ಆದರೆ ಆಗಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಿಂತಲೂ ಶಿಲ್ಪಗುರುಕುಲದ ಕಲಿಕೆಯು ಉನ್ನತ ಮಟ್ಟದ್ದಾಗಿತ್ತು. ಸರ್ಕಾರದ ಯಾವ ಇಲಾಖೆಗೆ ಇದರ ಹೊಣೆಹೊರಲು ಮುಂದಾಗಲಿಲ್ಲ. ಕೈಗಾರಿಕಾ ಇಲಾಖೆಯು ತನ್ನ ಮಿತಿಯನ್ನು ಮೀರಿರುವ ವ್ಯಾಸಂಗ ಇದು ಎಂದಿತು. ಮುಜರಾಯಿ ಇಲಾಖೆ ತನ್ನದಲ್ಲ ಎಂದಿತು. ಪುರಾತತ್ತ್ವ ಇಲಾಖೆಯು ತಮಗೆ ಸೇರಿದ್ದಲ್ಲ ಎಂದಿತು. ಹೀಗೆ ಗುರುಕುಲಕ್ಕೆ ಸರ್ಕಾರದ ನೆರವು ಮೃಗ್ಯವಾಯಿತು. ಮುಖ್ಯಮಂತ್ರಿಗಳೇ ಆಸಕ್ತಿವಹಿಸಿದರು ಇಲಾಖೆಗಳನ್ನು ಹೊಂದಿಸುವುದು ಸಾಧ್ಯವಾಗಲಿಲ್ಲ. ಆದ್ದರಿಂದ ನಾಗೇಂದ್ರ ಸ್ಥಪತಿಗಳು ಗುರುಕುಲವನ್ನು ಮುಂದುವರಿಸಲು ಸಾಧ್ಯವಾಗದೆ ಕೈಬಿಟ್ಟರು.

ಇದಕ್ಕೂ ಸ್ವಲ್ಪ ಮೊದಲು ಮದರಾಸಿನಲ್ಲಿ ವೈದ್ಯನಾಥ ಸ್ಥಪತಿ ಎಂಬ ಶಿಲ್ಪಿಯು ಅಂದಿನ ಮುಖ್ಯಮಂತ್ರಿಯ ಸಹಾಯದಿಂದ ತಾವು ನಡೆಸುತ್ತಿದ್ದ ಗುರುಕುಲವನ್ನು ಶಾಲೆಯಾಗಿ ಪರಿವರ್ತಿಸಿ ಸರ್ಕಾರದ ನೆರವನ್ನು ಪಡೆದು ಕೊಂಡರು. ಮೊದಲಿಗೆ ಸರ್ಟಿಫಿಕೇಟ್ ಕೋರ್ಸ್ ಮೂರುವರ್ಷದ್ದಾಗಿತ್ತು. ನಂತರದಲ್ಲಿ ಏಳುವರ್ಷಗಳ ಅವಧಿಯ ಡಿಪ್ಲಮೋಕೋರ್ಸ್ ಆಯಿತು. ಮುಂದೆ ಅದು ಐದು ವರ್ಷಗಳ ಡಿಗ್ರಿಯಾಯಿತು. ಈಗ ನಾಲ್ಕುವರ್ಷಗಳ ಬಿ.ಟೆಕ್ ಕಾಲೇಜಾಗಿದೆ. ಈ ಕಾಲೇಜಿಗೆ ಅಂತರರಾಷ್ಟ್ರಿಯ ಮನ್ನಣೆ ಇದೆ. ಈ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಈಗ ವಿದೇಶಗಳಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಿದ್ದಾರೆ. ಕನ್ನಡ ನಾಡಿನಲ್ಲಿಯೂ ಅವರೇ ದೇವಾಲಯಗಳನ್ನು ಇತರ ಪಾರಂಪರಿಕ ಕಟ್ಟಡಗಳ ದುರಸ್ಥನ್ನು ಮಾಡುತ್ತಾ ಕೋಟ್ಯಾಧೀಶರಾಗಿದ್ದಾರೆ.

ನಾಗೇಂದ್ರ ಸ್ಥಪತಿಗಳು ಬಹುವಾಗಿ ಪ್ರಯತ್ನಿಸಿ ಸಾಧ್ಯವಾಗದೆ ೧೯೫೪ಕ್ಕೆ ಗುರುಕುಲವನ್ನು ಮುಚ್ಚಿದರು. ಆದರೂ ವಿದ್ಯಾರ್ಥಿಗಳು ಇರಲು ಮಾತ್ರ ಅವಕಾಶ ಕಲ್ಪಿಸಿದ್ದರು. ಅವರೇ ಅಡುಗೆ ಮಾಡಿಕೊಳ್ಳ ಬೇಕಾಗಿತ್ತು. ಆದ್ದರಿಂದ ಇತರ ಓದಿನ ವಿದ್ಯಾರ್ಥಿಗಳಿದ್ದರೇ ಹೊರತು ಶಿಲ್ಪ ಕಲಿಯುವವರು ಯಾರು ಇರಲಿಲ್ಲ. ಕ್ರಮಕ್ರಮವಾಗಿ ಅದೂ ನಿಂತು ಹೋಯಿತು.

ಸ್ವಾಮಿಗಳ ಬಗ್ಗೆ ವಿಶೇಷ ಭಕ್ತಿಯಿಂದ ನಾಗೇಂದ್ರ ಸ್ಥಪತಿಗಳು ಸ್ವಾಮಿಗಳ ಸಮಾಧಿಯನ್ನು ಹೆಚ್ಚು ಅಲಂಕಾರದೊಂದಿಗೆ ಇರುವಂತೆ ವಿನ್ಯಾಸ ಮಾಡಿದರು. ಯೋಜನೆಯ ಸ್ಕೆಚ್ ಇಲ್ಲಿ ಕೊಟ್ಟಿದೆ. ಗುರುಕುಲವನ್ನು ಆಸ್ತಿಯನ್ನಾಗಿ ಪರಿಗಣಿಸಿದ ದಾಯಾದಿಗಳು ಆ ಬಗ್ಗೆ ನ್ಯಾಯಲಯದ ಮೊರೆಹೋದರು. ಈ ಕಾರಣದಿಂದಾಗಿ ಸ್ವಾಮಿಗಳ ಸಮಾಧಿಯ ಅಲಂಕರಣವೂ ಮುಂದುವರೆಯಲು ಸಾಧ್ಯವಾಗಲಿಲ್ಲ. ಗುರುಕುಲದ ಯೋಜನೆಯು ಕನಸಾಗಿದೆ.



ಚಿತ್ರ ೮.೨೫ : ಸ್ವಾಮಿಗಳ ಸಮಾಧಿಯ ಯೋಜಿತ ರೇಖಾಚಿತ್ರ
(ಇದು ಕಾರ್ಯರೂಪಕ್ಕೆ ಬಂದಿಲ್ಲ.)

ತಮ್ಮ ನಿಜ ಬದುಕಿನಲ್ಲಿ ಅನೇಕ ಯಶಸ್ಸುಗಳನ್ನು ಪಡೆದುಕೊಂಡ ಸ್ವಾಮಿಗಳು ತಮ್ಮ ಅಂತಿಮ ಕನಸಿಸಲ್ಲಿ ಸೋತಿರುವುದೇ ಈಗಿನ ಕರ್ನಾಟಕದ ಪಾಲಿಗೆ ಭಯಂಕರವಾದ ಶಾಪವಾಗಿದೆ.

ಸ್ವಾಮಿಗಳು ತಮ್ಮ ಜೀವನಕಾಲದಲ್ಲಿ ಐದುದಶಕಗಳಕಾಲ ಸಿದ್ಧಪಡಿಸಿದ ಶಿಷ್ಯರೇ ಸ್ವಾಮಿಗಳ ನಂತರದ ಆರುದಶಕಗಳ ಕಾಲ ಕರ್ನಾಟಕದಲ್ಲಿ ಸಾಂಪ್ರದಾಯಕ ಶಿಲ್ಪದ ಬೆಳವಣಿಗೆಗೆ ಕಾರಣರಾಗಿದ್ದಾರೆ ಎಂಬ ಒಂದೇ ಅಂಶವೇ ಸ್ವಾಮಿಗಳ ವಿದ್ವತ್ತಿನ ಮತ್ತು ಅಧ್ಯಾಪನದ ಸಾಮರ್ಥ್ಯದ ಸತ್ತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಮದರಾಸಿನ ಸರ್ಕಾರವು ಅಲ್ಲಿಯ ಶಿಲ್ಪಿಗಳಿಗೆ ನೀಡಿದ ನೆರವೇ ಮೈಸೂರು ಸರ್ಕಾರವೂ

ಒದಗಿಸಿದ್ದಿದ್ದರೆ ದೇವಾಲಯ ನಿರ್ಮಾಣದ ಕಲಿಕೆಯಲ್ಲಿ ಇಂದಿನ ತೀವ್ರ ದೌರ್ಭಾಗ್ಯ ಸ್ಥಿತಿ ಕರ್ನಾಟಕದಲ್ಲಿ ಇರುತ್ತಿರಲಿಲ್ಲ ಎಂಬುದು ಸತ್ಯ.

ಸ್ವಾಮಿಗಳ ಮಹತ್ತರ ಕನಸು ಭಗ್ನಗೊಂಡಿತು. ಕರ್ನಾಟಕದ ಸಂಪ್ರದಾಯದ ಕಲಿಕೆಯು ರಾಜ್ಯದಲ್ಲಿ ಹಳಿ ತಪ್ಪಿದ ರೈಲಾಯಿತು. ಅದರ ಫಲವು ಈಗ ಹಳ್ಳಿ–ಪಟ್ಟಣದ ಅಂತರವಿಲ್ಲದೆ ಬಹು ವ್ಯಾಪಕವಾಗಿ ನಿರ್ಮಾಣವಾಗುತ್ತಿರುವ ತಮಿಳುನಾಡಿನ ಚೋಳ ಶೈಲಿಯ ದೇವಾಲಯ ಮತ್ತು ಗೋಪುರಗಳು ಕರ್ನಾಟಕದ ಆದ್ಯಂತವಾಗಿ ಮುಖಕ್ಕೆ ರಾಚುವಂತೆ ಕಾಣಿಸುತ್ತಿವೆ; ನಿರ್ಮಾಣವಾಗುತ್ತಿವೆ.



ಚಿತ್ರ ೮.೨೬ : ಪ್ರೊ. ರುಢಾಲ್ಫ್ ಒಟ್ಟೊ ಅವರಿಗೆ ಸ್ವಾಮಿಗಳು ಮಾಡಿಕೊಟ್ಟಿರುವ ಆಚಾರ್ಯ ಶಂಕರರ ಪ್ರತಿಮೆ

೬

ಸಿದ್ಧಲಿಂಗಸ್ವಾಮಿಗಳ ಸಾಹಿತ್ಯ ಸೇವೆ


ಸಿದ್ಧಲಿಂಗಸ್ವಾಮಿಗಳು ಗುರುಪೀಠಸ್ಥರಾಗಿದ್ದರೂ ಕೇವಲ ಗುರುಗಳಾಗಲಿ, ಕೇವಲ ಶಿಲ್ಪಿಗಳಾಗಲಿ ಮಾತ್ರವೇ ಆಗಿರಲಿಲ್ಲ. ಸ್ವಯಂ ಶಿಲ್ಪಶಾಸ್ತ್ರ ವಿದ್ವಾಂಸರಾಗಿದ್ದರು. ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಅಪಾರವಿದ್ವತ್ತು ಅವರದಾಗಿತ್ತು. ಹಲವಾರು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ; ಪ್ರಕಟಿಸಲು ಮಾರ್ಗದರ್ಶಕರಾಗಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನಾದರೂ ನಾವು ತಿಳಿದುಕೊಳ್ಳಬೇಕು. ಸ್ವಾಮಿಗಳ ಸಾಹಿತ್ಯವನ್ನು ೧) ಶಾಸ್ತ್ರಗ್ರಂಥಗಳು ೨) ಸ್ವರಚಿತ ಗ್ರಂಥಗಳು ೩) ಸಂಪಾದನಾ ಗ್ರಂಥಗಳು ೪) ಪ್ರೇರಕ ಪ್ರಕಟಣೆಗಳು ಎಂದು ನಾಲ್ಕು ಬಗೆಯಾಗಿ ವಿಂಗಡಿಸಬಹುದು.

೧. ಶಾಸ್ತ್ರಗ್ರಂಥಗಳು

ಸ್ವಾಮಿಗಳ ಪ್ರೀತಿಯ ಕ್ಷೇತ್ರ ಸಾಂಪ್ರದಾಯಿಕ ಶಿಲ್ಪ. ಇದನ್ನು ಅಥರ್ವ ವೇದದ ಉಪವೇದವೆಂದು ಪರಿಗಣಿಸಿದ್ದು ಇದಕ್ಕೆ ಅಪಾರವಾದ ಶಾಸ್ತ್ರ ಸಾಹಿತ್ಯ ಸಂಪತ್ತು ಇದೆ. ಇರುವುದೆಲ್ಲಾ ಸಂಸ್ಕೃತದಲ್ಲಿ. ಆದ್ದರಿಂದ ಆಧುನಿಕ ಕಾಲದಲ್ಲಿ ಅದು ಕನ್ನಡ ಶಿಲ್ಪಿಗಳಿಂದ ದೂರ ಉಳಿದಿದೆ. ಶಾಸ್ತ್ರವನ್ನು ನೇರವಾಗಿ ಮೂಲ ಸಂಸ್ಕೃತದಲ್ಲಿಯೇ ಪಾಠಮಾಡುವ ಅಭ್ಯಾಸ ಸ್ವಾಮಿಗಳದು. ಅವರ ಸಂಗ್ರಹದಲ್ಲಿ ಹಸ್ತಪ್ರತಿಗಳಲ್ಲಿದ್ದ ಶಿಲ್ಪಶಾಸ್ತ್ರಗಳೂ ಇದ್ದವು. ಅಂತಹವುಗಳಲ್ಲಿ ಗೋವಿಂದಾನಂದ ವಿರಚಿತ **ಶಿಲ್ಪಾವತಂಸ** ಶಿಲ್ಪಗ್ರಂಥವೂ ಒಂದು .ಅದನ್ನು ತಮ್ಮ ಶಿಷ್ಯರಿಗೆ ಪಾಠಮಾಡುತ್ತಿದ್ದರು.

ಶಿಲ್ಪವಿದ್ಯಾರಹಸ್ಯೋಪನಿಷತ್ : ಸ್ವಾಮಿಗಳು ಪ್ರಕಟಿಸಿರುವ **ಶ್ರೀಮತ್ಕೌಮಾರ ಭಾಷ್ಯೋಪೇತ ಶ್ರೀಮಚ್ಛಿಲ್ಪವಿದ್ಯಾ ರಹಸ್ಯೋಪನಿಷತ್** ಗ್ರಂಥವು ಬಹು ಮುಖ್ಯವಾದದ್ದು. ಇದನ್ನು ಕನ್ನಡಲಿಪಿಯಲ್ಲಿ ಭಾಷ್ಯದೊಂದಿಗೆ ಮುದ್ರಿಸಿ ಕನ್ನಡ ತಾತ್ಪರ್ಯವನ್ನೂ ಸ್ವಾಮಿಗಳು ಬರೆದಿದ್ದಾರೆ. ಸಾಂಪ್ರದಾಯಿಕ ಶಿಲ್ಪವು ಲೌಕಿಕ ಮತ್ತು ಪಾರಮಾರ್ಥಗಳನ್ನೂ ಏಕಕಾಲದಲ್ಲಿ ಸಾಧಿಸಲು ನೆರವಾಗುವಂತಹದ್ದು. ಸ್ವಯಂ ಬ್ರಹ್ಮವಿದ್ಯೆ ಎಂಬುದಾಗಿ ಈ ಉಪನಿಷತ್ತಿನ ಮೂಲಕ ಸಾಧಿಸಿ ತೋರಿದ್ದಾರೆ. ಶಿಲ್ಪದಲ್ಲಿ ಕರ್ಮಜ್ಞಾನಗಳು ಎರಡೂ ಇರುವುದರಿಂದ ಉಪವೇದವಾಗಿದ್ದು ಇದೇ ಮೋಕ್ಷಮಾರ್ಗವನ್ನು ತೋರಬಲ್ಲದು ಎಂಬುದನ್ನು ವಿವರಿಸಿದ್ದಾರೆ. ಶಿಲ್ಪೋಪನಿಷತ್ತಿನ ವಾಕ್ಯಗಳನ್ನು ಕೌಮಾರಭಾಷ್ಯದ ವಿವರಣೆಯಿಂದ ಸ್ವಾಮಿಗಳು ವಿವರಣೆ ನೀಡಿ ವಿಷಯವನ್ನು ಮನದಟ್ಟು ಮಾಡಿಕೊಟ್ಟಿರುವ ಪರಿಯು ಅನನ್ಯವಾದದ್ದು. ಅವರ ವಿದ್ವತ್ತನ್ನು ಈ ಗ್ರಂಥವು ಸ್ಪಷ್ಟವಾಗಿ ತೋರಿಸುತ್ತದೆ.

ಕನ್ನಡ ಗ್ರಂಥದೊಂದಿಗೆ ದೇವನಾಗರಿ ಲಿಪಿಯಲ್ಲಿಯೂ ಉಪನಿಷತ್ತನ್ನು ಭಾಷ್ಯವನ್ನು ಪ್ರತ್ಯೇಕವಾಗಿ ಪ್ರಕಟಿಸಿ (೧೯೪೮) ಅಖಿಲ ಭಾರತಮಟ್ಟದಲ್ಲಿ ಈ ಉಪನಿಷತ್ತಿಗೆ ಸ್ಥಾನವನ್ನು ಗಳಿಸಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ.


॥ श्रीः ॥

श्रीजयचामराजेन्द्र शिल्पकलाग्रन्थमाला

संख्ये—२

श्रीमत्कौमारभाष्योपेता

श्रीमच्छिल्पविद्यारहस्योपनिषत्

श्रीमज्जगद्गुरु [illegible] पीठाधीश्वर

शिल्पसिद्धान्ति शिवयोगि

श्रीसिद्धलिङ्गस्वामिभिः

संगृहिता परिष्कृता च

श्री परिमळ पवर प्रेस्


मैसूरु

१९४८

ಚಿತ್ರ ೬.೧ : ಶಿಲ್ಪವಿದ್ಯಾರಹಸ್ಯೋಪನಿಷತ್ (ಸಂಸ್ಕೃತ)

ಶಿಲ್ಪಾದರ್ಶಃ :

ಶಿಲ್ಪಿಗೆ ಕೆತ್ತನೆಯ ತಂತ್ರ ಎಷ್ಟು ಮುಖ್ಯವೋ ಅದಕ್ಕಿಂತಲೂ ಶಿಲ್ಪದ ಬಗ್ಗೆ ಶಾಸ್ತ್ರೀಯ ತಿಳಿವಳಿಕೆಯನ್ನು ಪಡೆಯುವುದು ಮುಖ್ಯವೆನ್ನುತ್ತಿದ್ದರು ಸ್ವಾಮಿಗಳು. ಶಿಲ್ಪ ವಿಜ್ಞಾನ ಅಥವಾ ಶಾಸ್ತ್ರದ ವಿವರವನ್ನು ತಿಳಿಯದೇ ಮಾಡುವ ಕಲಸದಿಂದ ಮಾಡುವಾತ ಮತ್ತು ಮಾಡಿಸುವಾತ ಉಭಯತ್ರರಿಗೂ ಹಾನಿ ಎಂದು ಶಾಸ್ತ್ರ ವಾಕ್ಯವನ್ನೇ ಉಲ್ಲೇಖಿಸುತ್ತಿದ್ದರು. ಇತರ ಮೂಲಗಳಿಂದ ಸಂಸ್ಕೃತದ ಶೋಕಗಳನ್ನು ಹೇಳಿ ಅದರ ಅರ್ಥ ವಿವರಿಸುತ್ತಿದ್ದರು.



ಚಿತ್ರ ೯.೨ : ಶಿಲ್ಪಾದರ್ಶಃ

ಅದಕ್ಕಾಗಿಯೇ ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಗುರುಕುಲವನ್ನು ಪ್ರಾರಂಭಿಸಿ (೧೯೪೯) ಶಿಲ್ಪಕಲಾ ತರಬೇತಿ ಜೊತೆಗೆ ಶಾಸ್ತ್ರ ಜ್ಞಾನವನ್ನೂ ಬೋಧಿಸುತ್ತಾ ಲಿಖಿತ ಪಠ್ಯಗ್ರಂಥವನ್ನು ಪ್ರಕಟಿಸುವ ಯೋಚನೆಯನ್ನು ಮಾಡಿದರು. ಅದರ ಪ್ರಥಮ ಕುಸುಮವೇ **ಶಿಲ್ಪಾದರ್ಶಃ.**

ವಿದ್ಯಾರ್ಥಿಗಳಿಗೆ ಮತ್ತು ಕಲಾಕಾಂಕ್ಷಿಗಳಿಗೆ ಉಪಯುಕ್ತವಾಗುಂತೆ ಪ್ರಕಟಿಸಿರುವ ಶಿಲ್ಪಾದರ್ಶದಲ್ಲಿ ***'ಶಿಲ್ಪಿಗಳಾಗಬಯಸುವವರು ಗುರುಮುಖದಿಂದ ಶಿಲ್ಪಶಾಸ್ತ್ರೀಯ ಸಂಸ್ಕಾರಗಳನ್ನು ಹೊಂದಿ ಶಿಲ್ಪಕ್ಕೆ ಸಹಕಾರಿಯಾದ ಸಂಸ್ಕೃತ, ಜ್ಯೋತಿಷ್ಯ, ಗಣಿತ, ರಸ, ಭಾವ ಮತ್ತು ಶಾಸ್ತ್ರಗಳ ಪರಿಚಯವನ್ನು ಪಡೆದು ಲೋಕಹಿತ ದೃಷ್ಟಿಯಿಂದ ಶಿಲ್ಪಕರ್ಮವನ್ನು ಮಾಡಿ ಜನತೆಗೆ ಪುರುಷಾರ್ಥ ಸಾಧನೆಗಳನ್ನು ಕಲ್ಪಿಸಿ ಕೃತಾರ್ಥರಾಗಬೇಕೆಂದು ಆಶಿಸುತ್ತೇನೆ'*** ಎಂದು ***ತಮ್ಮ ಪೀಠಿಕೆಯಲ್ಲಿ ಹೇಳಿದ್ದಾರೆ. ಈ ಪುಸ್ತಕ ರಚನೆಗೆ ಮಯವಾಸ್ತು, ಶಿಲ್ಪರತ್ನಂ, ರಾಜವಲ್ಲಭ, ಸನತ್ಕುಮಾರ ವಾಸ್ತು ಮುಂತಾದವುಗಳನ್ನು ಬಳಸಿದ್ದಾರೆ. ಶಿಲ್ಪಾದರ್ಶವು ಪ್ರಥಮ ಭಾಗವಾಗಿದ್ದು ಉಳಿದಂತೆ ಇನ್ನೂ ನಾಲ್ಕು ಭಾಗಗಳು ಉಳಿದಿವೆಯೆಂದು ತಿಳಿಸಿದ್ದಾರೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದ ಮನೋನ್ಮಾನ ಪ್ರಮಾಣ, ಹಸ್ತಮುದ್ರೆ ಮತ್ತು ಆಯುಧ ಲಕ್ಷಣ, ನಗರ ಗ್ರಾಮಗಳ ನಿರ್ಮಾಣ ಕ್ರಮ, ದೇವಾಲಯ, ಆಭೂಷಣ. ಲಕ್ಷಣ, ಚಿತ್ರ ಲಕ್ಷಣ, ದಾರುಬಿಂಬಗಳ ಉತ್ತಮ ದಶತಾಲಾದಿ ಮಾನ ಲಕ್ಷಣ, ಮಧೂಚ್ಛಿಷ್ಟವಿಧಿಯಿಂದ ಲೋಹಬಿಂಬ ನಿರ್ಮಾಣ ವಿಧಿ ಮುಂತಾದವುಗಳನ್ನು ಸಂದರ್ಭಾನುಸಾರ ಸಚಿತ್ರವಾಗಿ ಪ್ರಕಟಿಸಲ್ಪಡುವುದು. ಆಸ್ತಿಕ ಮಹನೀಯರು, ಶಿಲ್ಪ ವಿದ್ಯಾ ಜಿಜ್ಞಾಸುಗಳು ಈ ಗ್ರಂಥದ ಸಹಾಯವನ್ನು ಪಡೆದು ಶಿಲ್ಪಶಾಸ್ತ್ರಕ್ಕೆ ಪ್ರೋತ್ಸಾಹ ನೀಡಬೇಕೆಂದು ಆಶಿಸುತ್ತೇನೆ*** ಎಂದು ಮನವಿ ಮಾಡಿ ಕೊನೆಯಲ್ಲಿ ಶ್ರೀ ಜಗದ್ಗುರು ಶಿಲ್ಪಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿ ಎಂದು ತಮ್ಮ ಹೆಸರನ್ನು ದಾಖಲಿಸಿದ್ದಾರೆ.

ಈ ಪ್ರಬಲ ಇಚ್ಛಾಶಕ್ತಿಯ ಪ್ರಥಮ ಕುಸುಮವಾಗಿ ಹೊರಹೊಮ್ಮಿರುವ ಶಿಲ್ಪಾದರ್ಶದಲ್ಲಿ ಪ್ರಮುಖವಾಗಿ ಯಾವುದೇ ಕೆಲಸ ಆರಂಭಿಸುವ ಮುನ್ನ ತನಗೆ ವಿದ್ಯೆ ಹೇಳಿಕೊಟ್ಟ ಗುರುವನ್ನು ಹೇಗೆ ಸ್ಮರಿಸಬೇಕು? ಆ ಗುರುವಿನ ಲಕ್ಷಣಗಳು ಏನು? ಸ್ಥಪತಿಯ ಲಕ್ಷಣ, ಸೂತ್ರಗ್ರಾಹಿ, ತಕ್ಷಕ, ವರ್ಧಕಿ, ಸ್ಥಾಪಕ, ಮಾನಸಾಧನ, ಭೂಮಿಲಕ್ಷಣ, ವಾಸ್ತುಶೋಧ, ಸೂತ್ರಾಷ್ಟಕ್ಕ ಗ್ರಾಮಾದಿ ಭೇದಾ, ಆಯ, ನವವರ್ಗಗುಣಿತ, ಸ್ಥಾನ ದಿಗ್ಭೇದ, ದೇವಾಲಯ ಸ್ಥಾನ ನಿಯಮ, ದಿಕ್ಪರಿಚ್ಛೇದ ಜ್ಞಾನ, ಚತುರಶ್ರೀಕರಣ, ಗೃಹಾರಂಭ, ಮಾಸ ಫಲಗಳು, ವಾರಫಲ, ಗೃಹಾರಂಭ ವಿಧಿಃ ಇವುಗಳನ್ನು ಕುರಿತ ೯೫ ಶ್ಲೋಕಗಳನ್ನು ಸಂಗ್ರಹಿಸಿದ್ದು ಅವಕ್ಕೆ ಪದಶಃ ಅರ್ಥವನ್ನು ಕನ್ನಡದಲ್ಲಿ ಬರೆದು ಕೊನೆಯಲ್ಲಿ :

ಮಂಗಳಂ ಶಿಲ್ಪ ವಿದ್ಯಾಯೈ ಶಿಲ್ಪ ವಿಜ್ಞಾನ ಶಾಲಿನೇ
ಜಗದ್ಗುರು ಮಹಾಚಾರ್ಯ ನಾಗಲಿಂಗಾಯ ಮಂಗಳಂ ॥

ಶೈವ ಶಿಲ್ಪ ಬ್ರಾಹ್ಮಣೇಭ್ಯಃ ವಿದ್ಯಾರ್ಥಿಭ್ಯಶ್ಚ ಸರ್ವದಾ
ಭಾರತೀಯ ಪ್ರಜಾಭಶ್ಚ ಸರ್ವೇಭ್ಯಶ್ಶುಭ ಮಂಗಳಂ ॥

ಶಿಲ್ಪವಿದ್ಯಾಭಿಮಾನಿದೇವತೆಗೂ, ಶಿಲ್ಪಶಾಸ್ತ್ರ ಪಾರಂಗತನಾದ ಮಹೇಶ್ವರನಿಗೂ, ಜಗದ್ಗುರುವೆನಿಸಿದ ನಾಗಲಿಂಗಸ್ವಾಮಿಗೂ ವಂದಿಸಿ ಶೈವಶಿಲ್ಪಿಗಳೆನಿಸಿ ಬ್ರಹ್ಮಮಾರ್ಗ ಅನುಸರಿಸುವವರಿಗೂ, ಶಿಲ್ಪವಿದ್ಯಾಕಾಂಕ್ಷಿಗಳಿಗೂ, ಭರತಖಂಡದ ಸಮಸ್ತ ಪ್ರಜೆಗಳಿಗೂ, ಸಮಸ್ತ ಲೋಕದ ಮಾನವರಿಗೂ ಶುಭವುಂಟಾಗಲಿ ಎಂದು ಹಾರೈಸಿದ್ದಾರೆ.

ಶ್ರೀಗುರುಗೀತಾ ಮತ್ತು ಶ್ರೀ ಶಿವಗೀತಾ :

ಸ್ವಾಮಿಗಳವರ ಗುರುಗಳಾದ ಶ್ರೀ ನಂಜುಂಡ ಶಿವಯೋಗಿಗಳ ಇಪ್ಪತ್ತೈದನೇ ಆರಾಧನಾ ಮಹೋತ್ಸವ ಸಂದರ್ಭದಲ್ಲಿ 'ಶ್ರೀ ಗುರುಗೀತಾ' ಮತ್ತು ಶ್ರೀ ಶಿವಗೀತಾ' ಎಂಬೆರಡು ಪುಸ್ತಕಗಳನ್ನು ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ ಮೂಲಕ ೧೯೫೦ ರಲ್ಲಿ ಪ್ರಕಟಿಸಿದರು. ಇದರ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 'ಗುರುಗೀತಾ' ಪುಸ್ತಕವು ಸ್ಕಂದ ಪುರಾಣದ ಉಮಾಮಹೇಶ್ವರ ಸಂವಾದದ ಭಾಗವಾಗಿದ್ದು. ಗುರುವಿನ ಅವಶ್ಯಕತೆ ಕುರಿತಂತೆ ದೇಶೀಯ ಭಾಷೆಯಲ್ಲಿ ತಿಳಿಸುವ ಯತ್ನ ಮಾಡಿದ್ದಾರೆ. ಪ್ರತಿ ಎರಡೆರಡು ಶ್ಲೋಕಗಳಿಗೆ ಕನ್ನಡ ಅನುವಾದವನ್ನು ವಿವರವಾಗಿ ನೀಡಿದ್ದಾರೆ. ಗುರುವಿನ ಮಾಹಿತಿಯನ್ನು ಅನೇಕ ಶ್ಲೋಕಗಳಲ್ಲಿ ಹೇಳುತ್ತಲೇ, ಗುರುವಿನ ಗುಣ ಹೇಗಿರಬೇಕೆಂಬುದನ್ನು, ಯಾರನ್ನು ಗುರು ಎನ್ನಬೇಕೆಂತಲೂ ಹೇಳಿದ್ದಾರೆ.

ಜ್ಞಾನಹೀನೋ ಗುರುಸ್ತ್ಯಾಜ್ಯೋ ಮಿಥ್ಯಾವಾದೀ ವಿಡಂಬಕಃ ।
ಸ್ವವಿಶ್ರಾಂತಿಂ ನ ಜಾನಾತಿ ಪರಶಾಂತಿಂ ಕರೋತಿ ಕಿಂ ॥ (ಪದ್ಯ ೧೭೪)

ಶಿಲಾಯಾಃ ಕಿಂ ಪರಂ ಜ್ಞಾನಂ ಶಿಲಾಸಂಘಃ ಪ್ರಕಾರಣೇ ।
ಸ್ವಯಂ ಕರ್ತುಂ ನ ಜಾನಾತಿ ಪರಂ ನಿಸ್ತಾಯೇತ್ಕಥಂ ॥ (ಪದ್ಯ ೧೭೫)

ನಿಜವಾದ ಬ್ರಹ್ಮಜ್ಞಾನಿಯಾಗದೆ, ಸುಳ್ಳು ಹೇಳುತ್ತಾ, ಜನರನ್ನು ಮೋಸಗೊಳಿಸುವ ಆಡಂಬರವುಳ್ಳ ಗುರುವನ್ನು ದೂರ ಮಾಡಬೇಕು. ಅಂತಹವನು ತಾನೇ ಸಚ್ಚಾರಿತ್ರ್ಯದೊಂದಿಗೆ ಜ್ಞಾನಿಯಾಗದೆ ಇರುವಾಗಿ ಮತ್ತೊಬ್ಬರಿಗೆ ಮನಃಶಾಂತಿಯನ್ನು ಕಲ್ಪಿಸುವುದು ಹೇಗೆ? ಕೇವಲ ಶಿಲೆಯಂತೆ ಜ್ಞಾನಹೀನರಾದ ಗುರುಗಳು ಎಷ್ಟು ಜನರಿದ್ದರೂ, ಕಲ್ಲುಗಳ ಸಮೂಹದಂತೆ ಅವರೆಲ್ಲರೂ ವ್ಯರ್ಥರಾದವರು. ಯಾವನು ಮೊದಲು ತನ್ನನ್ನೇ ತಾನು ಉದ್ದಾರ ಮಾಡಿಕೊಳ್ಳಲಾರನೋ, ಅಂತಹವನು ಪರರನ್ನು ಉದ್ಧರಿಸಲು ಹೇಗೆ ಸಾಧ್ಯವಾದೀತು ಎಂದು ಹೇಳಿದ್ದಾರೆ.

ಪುಸ್ತಕವು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಬಹು ಗಂಭೀರವಾದದ್ದು. ಪ್ರಾರಂಭದಲ್ಲಿ ಐದು ಪುಟದ ಪ್ರಸ್ತಾವನೆಯನ್ನು ಸ್ವಾಮಿಗಳು ಬರೆದಿದ್ದಾರೆ. ಇದರಲ್ಲಿ ಅವರೇ ಹೇಳುವಂತೆ ಸಂಸ್ಕೃತ ಭಾಷಾಮಯವಾಗಿದ್ದ ಗುರುಗೀತವನ್ನು ಕನ್ನಡದಲ್ಲಿ ಸ್ವಾಮಿಗಳ ನೇತೃತ್ವದಲ್ಲಿ ಎಚ್. ಗಂಗಾಧರಶಾಸ್ತ್ರಿಯವರಿಂದ ಅನುವಾದ ಮಾಡಿಸಿ, ಶ್ರೀಮನ್ ಮಹಾರಾಜರ ಉದಾರ ಪೋಷಣೆಯಿಂದ ಮುದ್ರಿಸಿ ಉಚಿತವಾಗಿ ಜ್ಞಾನಾಕಾಂಕ್ಷಿಗಳಿಗೆ ಹಂಚುವ ಕೆಲಸವಿದಾಗಿದೆ ಎನ್ನುತ್ತಾರೆ. ಈ ಗುರುಗೀತಾ ಪುಸ್ತಕವು ಸ್ವಾಮಿಗಳ ಗುರುಗಳಾದ ಶ್ರೀ ನಂಜುಂಡ ಶಿವಯೋಗಿಗಳ ಆರಾಧನೆಯ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವುದು ಗ್ರಂಥದ ಮೌಲ್ಯವು ದ್ವಿಗುಣಗೊಳಿಸಿದೆನ್ನುತ್ತಾರೆ. ಶ್ರೀಮನ್ ಮಹಾರಾಜ ಜಯಚಾಮರಾಜ ಒಡೆಯರ್‌ರವರು ಆಶಯ ನುಡಿ ಬರೆದು ಔನ್ನತ್ಯಕ್ಕೇರಿಸಿರುವುದು ಇದರ ವಿಶೇಷ.

ಅಂತೆಯೇ ಶಿವಗೀತೆಯು ಸಹ ೧೬ ಅಧ್ಯಾಯಗಳುಳ್ಳದ್ದಾಗಿದ್ದು ಪದ್ಮ ಪುರಾಣದ ಮೋಕ್ಷಯೋಗವೆಂಬ ವಿಷಯವನ್ನಡಕಗೊಳಿಸಿಗೊಂಡಿದೆ.

ಸಂಸ್ಕೃತದಲ್ಲಿರುವ ಶಾಸ್ತ್ರ ಸಾರವನ್ನೆಲ್ಲಾ ಕನ್ನಡದಲ್ಲಿ ತಿಳಿಸಬೇಕೆಂಬ ಅದಮ್ಯ ಉತ್ಸಾಹ ವಿದ್ದುದರಿಂದಲೇ ಸ್ವಾಮಿಗಳು ಈ ರೀತಿಯ ಕೆಲಸಗಳಿಗೆ ಶ್ರೀಮನ್ ಮಹಾರಾಜರನ್ನು ಹಾಗೂ ಇತರ ದಾನಿಗಳನ್ನು, ಪೋಷಕರನ್ನು ಪ್ರೇರೇಪಿಸುತ್ತಿದುದ್ದರ ಮುಖ್ಯಕಾರಣ. ಸಂಸ್ಕೃತ ಕೆಲವೇ ಜನರ ಸ್ವತ್ತಾಗಬಾರದು. ಸಕಲರ ಸ್ವತ್ತಾಗಬೇಕು. ಸಮಾನತೆ ಬರಬೇಕೆಂಬುದು ಮನದ ಇಂಗಿತವಾಗಿತ್ತು ಅದಕ್ಕಾಗಿ ಶ್ರಮಿಸುತ್ತಿದ್ದರು.


ಆರಾಧನೆಯ ಸಂದರ್ಭದಲ್ಲಿ ಸ್ವಾಮಿಗಳ ಆಶೀರ್ವಚನವನ್ನು ಶಿಷ್ಯರು ಕಿರುಹೊತ್ತಿಗೆ ರೂಪದಲ್ಲಿ ಪ್ರಚುರ ಪಡಿಸಿದ್ದಾರೆ. ಅದರಲ್ಲಿ **ಸದ್ಗುರ್ವಾರಾಧನೆಯ ಮಹಿಮೆ** (೧೯೪೪). **ಸದುಪದೇಶ** (೧೯೪೮), **ಜ್ಞಾನಯೋಗ ರಹಸ್ಯ** (೧೯೪೯) ಮುಖ್ಯವಾಗಿದ್ದು ಸ್ವಾಮಿಗಳವರು ತಮ್ಮ ಅಪಾರ ಅನುಭವದಿಂದ ಆಧ್ಯಾತ್ಮದ ಸಾರವನ್ನು ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತೆ ತಿಳಿಗನ್ನಡದಲ್ಲಿ ತಿಳಿಸಿದ್ದಾರೆ. **ಶಿಲ್ಪ ಸಿದ್ಧಾಂತ ಗ್ರಂಥರತ್ನಮಾಲಾ** ಮೂಲಕ ಇವುಗಳನ್ನು ಪ್ರಕಟಿಸಿದ್ದಾರೆ.

ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಯುವಜನ ಸಂಘವೊಂದನ್ನು ಸ್ಥಾಪಿಸಿ (೦೭-೦೮-೧೯೪೬) ***ಶೈವ ಶಿಲ್ಪಿ ಪ್ರಭ*** ಎಂಬ ಪತ್ರಿಕೆಯನ್ನು ಪ್ರಕಟಿಸಿ ತನ್ಮೂಲಕ ಜಡಗೊಂಡಿರುವವರನ್ನು ಚೇತನಗೊಳಿಸುವುದರ ಜೊತೆಗೆ ಆಗಮೋಕ್ತ ಶಿಲ್ಪ ಕಲಿಕೆಗೆ ಸಕಲ ಪ್ರೋತ್ಸಾಹವನ್ನು ಕಲಿಯಲಿಚ್ಚಿಸುವವರಿಗೆ ನೀಡುತ್ತಿದ್ದರು.

ಸ್ವಾಮಿಗಳವರು ಚಿತ್ರ ಶಿಲ್ಪಾದಿಗಳ ಬೋಧನೆಯ ಕಡೆ ಗಮನ ನೀಡಿದಷ್ಟೇ ಆಧ್ಯಾತ್ಮದ ಕಡೆಗೂ ಗಮನ ನೀಡುತ್ತಿದ್ದರು. ಇದರ ಪರಿಣಾಮ ಜಪ, ತಪ, ವಿಧಿ ವಿಧಾನಗಳು ಜನಸಾಮಾನ್ಯವಾಗಬೇಕೆಂದು 'ಅಜಪ ಗಾಯಿತ್ರಿ ಜಪ ವಿಧಾನಂ' ಎಂಬ ಗ್ರಂಥವನ್ನು ಕನ್ನಡದಲ್ಲೂ ಬರೆದು ಪ್ರಕಟಿಸಿ ಸಾವಿರಾರು ಪ್ರತಿಗಳನ್ನು ಹಂಚಿದ್ದಾರೆ. ಇದರಿಂದ ಮನೆ ಮನೆಯಲ್ಲೂ ಗಾಯತ್ರಿ ಪಠಣಕ್ಕೆ ಪ್ರೇರಣೆ ಕನ್ನಡಿಗರಿಗೆ ಕನ್ನಡ ಲಿಪಿಯಲ್ಲಿ ದೊರೆಯುವಂತಾಯಿತು.

೨. ಸ್ವರಚಿತ ಗ್ರಂಥಗಳು

ಶಿಲ್ಪಸಾರ (ಷಟ್ಪದಿ ಕಾವ್ಯ) : ಶ್ರೀ ಜಯಚಾಮರಾಜೇಂದ್ರ ಶಿಲ್ಪಕಲಾ ಗ್ರಂಥಮಾಲಾದಿಂದ ಶಿಲ್ಪವಿಜ್ಞಾನಕಾಂಕ್ಷಿಗಳ ಪ್ರಯೋಜನಾರ್ಥವಾಗಿ ಕನ್ನಡ ಭಾಷೆಯಲ್ಲಿ ರಚಿಸಿರುವ ಶಿಲ್ಪಸಾರವೆಂಬ ಗ್ರಂಥವನ್ನು ಪ್ರಕಟಿಸಿದ್ದು ಇದು ಅಷ್ಟದಳಾಕಾರದ ಸುಮಾರು ೪೦ ಪುಟಗಳ ಪುಸ್ತಕವಾಗಿದೆ. ಇದರಲ್ಲಿ ಲೇಖಕರ ನುಡಿಯೇ ಎಂಟು ಪುಟಗಳಿವೆ. ಅದರಲ್ಲಿ ಭಾಸಕವಿಯ ಪ್ರತಿಮಾ ನಾಟಕದಲ್ಲಿ ಬರುವ ಪ್ರಮುಖ ದೃಶ್ಯವಾದ ಮಾತಾಪಿತೃಗಳ ಪ್ರತಿಮೆಗಳನ್ನೇ ನೋಡಿಯೇ ಅವನ ಹಿನ್ನೆನಪು ತರುವ ಸಂದರ್ಭ. 'ಮುದ್ರಾಮಂಜುಷ' ದಲ್ಲಿ ಚಾಣಕ್ಯನು ಶಿಲ್ಪವನ್ನಾಶ್ರಯಿಸಿಯೇ ಕಾರ್ಯಸಾಧನೆ ಮಾಡಿದ್ದು, ಧರ್ಮರಾಯನು ರಾಜಸೂಯಯಾಗ ಮಾಡಿದಾಗ ಸಭಾಮಂಟಪ ರಚಿಸಿದ ಮಯನ ವಿಚಾರ ಹೀಗೆ ಹಲವು ಉದಾಹರಣೆ ನೀಡುತ್ತಾ ಶಿಲ್ಪಿ ಮತ್ತು ಶಿಲ್ಪಗಳು ಪುರಾಣಕಾಲದಿಂದ, ಇಲ್ಲಿಯವರೆಗೆ ಸಾಹಿತ್ಯ ದೃಷ್ಟಿಯಿಂದಲೂ ಎಲ್ಲೆಲ್ಲಿ ಉಲ್ಲೇಖಗೊಂಡಿವೆಯೆಂಬುದನ್ನು ವಿವರಿಸುತ್ತಾ, ಈ ಗ್ರಂಥ ಪ್ರಕಟಣೆಗೆ ಬೆನ್ನೆಲುಬಾಗಿ ನಿಂತ ಶ್ರೀಮನ್ ಜಯಚಾಮರಾಜ ಒಡೆಯರ್ ಅವರನ್ನು ಕೃತಜ್ಞತೆಯಿಂದ ನೆನೆದು, ಶಿಲ್ಪ ಎಂದರೆ ಕೇವಲ ದೇವತಾಮೂರ್ತಿಗಳ ನಿರ್ಮಾಣ ಮಾತ್ರ ಎಂದು ತಿಳಿಯುವುದು ತಪ್ಪು, ಶಿಲ್ಪಗಳು ನಿತ್ಯಜೀವನದ ಬಳಕೆಯಲ್ಲಿವೆ. ಶಿಲ್ಪಗಳಿಲ್ಲದೇ ಬದುಕೇ ಇಲ್ಲ ಎಂದು ತಿಳಿಸುವ 'ಶಿಲ್ಪ ಸಾರ'ದ ಆದಿಯಲ್ಲಿ ಮೂಲಪೀಠಾಧ್ಯಕ್ಷರಾದ ಕರಸ್ಥಲ ನಾಗಲಿಂಗದೇವನನ್ನು ಕುರಿತು 'ಯೋಗಶಿಲ್ಪಕಲಾನಿಕೇತನ ಯೋಗಿ ಶ್ರೀ ಗುರು ನಾಗಲಿಂಗನ ಸಲಹು ಮೂಜಗವ' ಮತ್ತು ವರವ ಕರುಣಿಸು ಶ್ರೀ ಜಗದ್ಗುರುವರನೆ ಶಿವಯೋಗೀಂದ್ರ ನಂಜುಂಡೇಶ ವಿಶ್ವೇಶ ತಮಗೆ ಎಂದು ಗುರುಪೀಠವನ್ನು ಕರುಣಿಸಿದ ನಂಜುಂಡ ಶಿವಯೋಗಿಗಳನ್ನು ಹಾಗೂ ವಾಗೀಶ್ವರಿ,


ಶ್ರೀಜಯಚಾಮರಾಜೇಂದ್ರ ಶಿಲ್ಪಕಲಾಗ್ರಂಥಮಾಲಾ

ಸಂಖ್ಯೆ—೧

ಶಿಲ್ಪವಿಜ್ಞಾನಾಕಾಂಕ್ಷಿಗಳ ಪ್ರಯೋಜನಾರ್ಥವಾಗಿ
ಕನ್ನಡಭಾಷೆಯಲ್ಲಿ ರಚಿಸಿರುವ

ಶಿಲ್ಪಸಾರ

ಎಂಬ ಗ್ರಂಥವು
ಮೈಸೂರು ರಾಜಧಾನಿಯಲ್ಲಿರುವ
ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ
ಪೀಠಾಧಿಪತಿಗಳಾದ
ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರಿಂದ
ವಿರಚಿತಮಾದುದು.

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್
ಮೈಸೂರು
1948

ಚಿತ್ರ ೯.೩ : ಶಿಲ್ಪಸಾರ
(ಷಟ್ಪದೀ ಕನ್ನಡ ಖಂಡಕಾವ್ಯ)

ಗಣಪತಿ, ಮನು, ಮಯ, ವಿಶ್ವಕರ್ಮ, ಕಾಶ್ಯಪ, ವೈವಸ್ವತ, ಸುರೇಶ, ಭಾರ್ಗವ, ಗಾರ್ಗೇಯ, ಗೌತಮ ಇಂತಹ ಅನೇಕರನ್ನು ನೆನೆದು ಶೈವಶಿಲ್ಪಿ ಬ್ರಹ್ಮವಂಶೋದ್ಭವರು ವಿಶ್ರುತರು ಎಂದು ಸ್ಮರಣೆಗೈಯುತ್ತಾರೆ. ಕೊನೆಯಲ್ಲಿ ಸ್ವಾಮಿಗಳು ತಮ್ಮ ಹುಟ್ಟಿನ ಬಗ್ಗೆ ತಿಳಿಸಿ ತಾವು ಪರಶಿವನ ಆರಾಧಕರೆಂಬುದನ್ನು ತಿಳಿಸಿದ್ದಾರೆ. *ಪರಮಸಾತ್ವಿಕ ಸಿದ್ಧಲಿಂಗ ಯತೀಂದ್ರನಾದರದಿ, ಬರೆದ ಪರತರ ಶಿಲ್ಪ ಸಾರವನರಿತು ಗಮಕದೊಳೋದಿ ಕೇಳುವ ಹಿರಿಯ ಕಿರಿಯರಿಗೆಲ್ಲಾ ಶಿವತನವಹುದು ಸತ್ಯವಿದು.* ಜೊತೆಗೆ ಇನ್ನೊಂದು ಮಾತನ್ನು ಸೇರಿಸುತ್ತಾರೆ : *ಬರೆದು ಪ್ರತಿಯಂ ಪ್ರಚರಿತಗೊಳಿಸುವ ಸಾಧುಸುಜನರ್ಗೆ ಪರಶಿವನು ಒಲಿಯುತ್ತಾನೆ* ಎನ್ನುತ್ತಾರೆ.

ಸ್ವಾಮಿಗಳು ಕಾವ್ಯರಚನೆಯಲ್ಲಿ ಅಗ್ರಮಾನ್ಯರೆಂಬುದಕ್ಕೆ ಅವರ 'ಶಿಲ್ಪಸಾರ' ನಿದರ್ಶನವಾಗಿದೆ. ನೂರೆಂಟು ಷಟ್ಪದಿ ಪದ್ಯಗಳನ್ನು ಬರೆದಿದ್ದಾರೆ. ಇದನ್ನು ಓದುತ್ತಾ ಹೋದಂತೆ ಶಿಲ್ಪ ಯಾವುದರಲ್ಲಿ ಇಲ್ಲ, ಶಿಲ್ಪವಿಲ್ಲದುದು ಯಾವುದು ಇದೆ? ಲೌಕಿಕದಲ್ಲಾಗಲೀ, ಧಾರ್ಮಿಕ ಆಚರಣೆಗಳಲ್ಲಾಗಲೀ, ದೈನಂದಿನ ಬದುಕಿನ ಜಲಯಾನ, ಆಕಾಶಯಾನ, ಭೂಮಿಯ ಮೇಲೆ ಚಲಿಸುವ ವಾಹನ, ಯುದ್ಧ ಸಲಕರಣೆಗಳು, ರೈತ ಸಲಕರಣೆಗಳು, ಅಡಿಗೆ ಪರಿಕರಗಳು, ಯಜ್ಞಕುಂಡ, ಪೀಠೋಪಕರಣ, ಪಾಠೋಪಕರಣ, ವೈದ್ಯೋಪಕರಣ, ಒಟ್ಟಾರೆ ಹೇಳುವುದಾದರೆ ಸಮಸ್ತವೂ ಶಿಲ್ಪಿಯ ಸೃಷ್ಟಿಯಿಂದಲೇ ಸಾಕಾರವಾಗಿದೆಯೆಂದು ತಮ್ಮ ಷಟ್ಪದಿಗಳಲ್ಲಿ ಹೇಳಿದ್ದಾರೆ.

ಇಲ್ಲಿನ ಷಟ್ಪದಿಗಳಲ್ಲಿ ಕೆಲವು ಆದಿಪ್ರಾಸವನ್ನು ಮತ್ತೆ ಕೆಲವು ಅಂತ್ಯಪ್ರಾಸವನ್ನು ಪಡೆದಿವೆ. ಶಿಲ್ಪದ ವ್ಯಾಪ್ತಿಯನ್ನು ೧೦೮ ಪದ್ಯಗಳಲ್ಲಿ ಹೃದಯಂಗಮವಾಗಿ ವಿವರಿಸಿ ಶಿಲ್ಪವಲ್ಲದುದು, ಶಿಲ್ಪಿಯಿಂದಾಗದುದು ಯಾವುದೆಂದು ಪ್ರಶ್ನಿಸಿ ಇದನ್ನು ತಿಳಿಯಲು ಅರಿವಿನ ಕಣ್ಣು ಅಗತ್ಯ ಎನ್ನುತ್ತಾರೆ.

ಅನುಬಂಧ-೧ರಲ್ಲಿ ಈ ಕೃತಿಯನ್ನು ಪೂರ್ಣವಾಗಿ ಕೊಟ್ಟಿದೆ. ವಿದ್ವಾಂಸ ಶಿಲ್ಪಿಯು ಕಾವ್ಯರಚನೆಯನ್ನೂ ಮಾಡಿದ್ದಾರೆ ಎಂಬುದು ಎಲ್ಲಾ ವಾಚಕರಿಗೂ ಗೊತ್ತಿರಲಿ ಎಂಬುದು ಇದರ ಉದ್ದೇಶ

ಭಾಷಣ ೧ : ಭಾಷಣಗಳು ಸಾಹಿತ್ಯದ ಒಂದು ಭಾಗ. ಶಾಬ್ದಿಕ ಸಂಪತ್ತು ಉತ್ಪತ್ತಿಯ ಸಾಹಿತ್ಯದ ಮೂಲದಿಂದ. ಹಾಗಾಗಿ ಸ್ವಾಮಿಗಳ ಭಾಷಣಗಳು ಕಾರ್ಯಾನುಭವದ ಓದಿನ ಮತ್ತು ಜ್ಞಾನಾನುಭವದ ಹಿನ್ನೆಲೆಯಲ್ಲಿ ಬಿತ್ತರಗೊಂಡಿವೆ. ಅವುಗಳಲ್ಲಿ ಮುದ್ರಿತವಾಗಿರುವವನ್ನು ಇಲ್ಲಿ ಉಲ್ಲೇಖಿಸಿದೆ. ಸಾಮಾನ್ಯವಾಗಿ ಲಲಿತಕಲೆ ಎಂದರೆ ಚಿತ್ರ, ಶಿಲ್ಪ, ಸಂಗೀತ, ನೃತ್ಯ, ಸಾಹಿತ್ಯಗಳನ್ನು ಒಳಗೊಂಡಿರುತ್ತವೆ. ಈ ಲಲಿತಕಲೆಗಳು ಒಂದಕ್ಕೊಂದು ಪೂರಕ; ಪ್ರೇರಕ. ಕಲಾವಿದ ಅಥವಾ ಶಿಲ್ಪಿ ಅನ್ನಿಸಿಕೊಳ್ಳುವಂತಾಗಲು ಬಹುದೊಡ್ಡ ಸಾಧನೆ ಮಾಡಬೇಕು. ಕಲ್ಲು ವಿಗ್ರಹವಾಗಬೇಕಾದರೆ ಸಾಕಷ್ಟು ಸುತ್ತಿಗೆ ಉಳಿ ಏಟು ತಿನ್ನಲೇಬೇಕು. ಈ ರೀತಿ ಸಿದ್ಧವಾದ ವಿಗ್ರಹ ನಿತ್ಯ ಪೂಜೆ ಪಡೆದುಕೊಂಡು ಪ್ರಸಿದ್ಧಿಯಾಗಬೇಕಾದರೂ ಹಲವು ಬಗೆಯ ಸಾಧನೆಗಳು ಅತ್ಯಾವಶ್ಯಕ. ವಿಗ್ರಹ ಮಾಡುವವನು ಪಾಲಿಸಬೇಕಾದ ನಿಯಮಗಳು, ಮಾಡಿದ ನಂತರ ಸೂಕ್ತವಾದ ಸ್ಥಳದಲ್ಲಿ ಸ್ಥಾಪಿಸುವಾಗ ಅನುಸರಿಸಬೇಕಾಗಿರುವ ಮತ್ತು ಆಚರಿಸ ಬೇಕಾಗಿರುವ ಪದ್ಧತಿಗಳು, ಸ್ಥಾಪಿಸಿದುದನ್ನು ವಿವಿಧ ರೀತಿಯ ಅರ್ಚನೆ, ಅಲಂಕರ, ಪ್ರಪತ್ತಿಗಳ ಸಮರ್ಪಣೆ ಕ್ರಮ. ಸತ್ಕರ್ಮ ಸೌಂದರ್ಯಾಭಿರುಚಿ ಯಾರಿಗೆ ಇರುತ್ತದೆಯೋ ಅವರು ಮಾತ್ರ ಕಲೋನ್ನತಿಗೆ ಕಾಣ್ಕೆ ಸಲ್ಲಿಸಬಲ್ಲರು. ಸೌಂದರ್ಯ ಹೊರಮುಖದಲ್ಲಿ ಅಥವಾ ಒಳಮುಖದಲ್ಲಿ ಇರಬಹುದು. ಇಲ್ಲವೇ ಅವನ ಕಲಾಕೃತಿಯಲ್ಲಿರಬಹುದು. ಅದರಿಂದಾಗುವ ಆನಂದ ಮಾತ್ರ ಅನುಭವಸಿದ್ಧವಾದದ್ದು; ಶಬ್ದಗಳಿಗೆ ಅತೀತವಾದದ್ದು. ಆ ಆನಂದ ಸಂಗೀತಾಭಿರುಚಿ, ಸಾಹಿತ್ಯಾಭಿರುಚಿ, ಚಿತ್ರಾಭಿರುಚಿ, ಶಿಲ್ಪಾಭಿರುಚಿ, ನೃತ್ಯಾಭಿರುಚಿ ಇವುಗಳಲ್ಲಿ ಯಾವುದಾದರಲ್ಲೊಂದರಲ್ಲಿರಬಹುದು. ಅದು ಅವರವರ ಮನಃಸ್ಥಿತಿಯನ್ನವಲಂಬಿಸಿರುತ್ತದೆ. ಕಲಾಭಿರುಚಿ ಒಂದಿದ್ದರೇ ಸಾಲದು ಪ್ರೋತ್ಸಾಹ ಕೊಡುವ ಗುಣವು ಇರಬೇಕು. ಹಾಗಿದ್ದಾಗ

ಮಾತ್ರವೇ ಕಲೆ ಬೆಳೆಯುತ್ತದೆ. ಕಲೆಯೊಡನೆ ಕಲಾವಿದನು ಬೆಳೆಯುತ್ತಾನೆ. ಕಲೆ ಬೆಳವಣಿಗೆ ಎಂದರೇ ಕಲಾವಿದನ ಬೆಳವಣಿಗೆ ಎಂದರ್ಥವಾಗುವಂತೆ, ಕಲಾವಿದರ ಬೆಳವಣಿಗೆಯೆಂದರೆ ಕಲೆಯ ಅಭಿವೃದ್ಧಿಯೇ.

ಕಲಾವಿದನಾಗಬಹುದು. ಆದರೆ ಕಲೆಯನ್ನು ಸಿದ್ಧಿಸಿಕೊಳ್ಳುವುದ ಬಲುಕಷ್ಟ. ಕಲಾಸಿದ್ಧಿಯಾಗುವುದಕ್ಕೆ ಅಪಾರವಾದ ಪರಿಶ್ರಮ ಅಗತ್ಯ. ನಲಿವಿಗಿಂತ ನೋವೇ ಅಧಿಕ. 'ಭಕ್ತಿಯೆಂಬುದ ಮಾಡಬಾರದು ಹೋಗುತ್ತ ಕೋಯ್ವುದು ಬರುತ್ತ ಕೊಯ್ವುದು ಗರಗಸದಂತೆ' ಎಂಬ ಬಸವಣ್ಣನವರ ವಚನದಂತೆ ಕಲೆಯನ್ನು ಸಿದ್ಧಿಸಿಕೊಳ್ಳುವಾಗ ಆಗುವ ಮಾನಸಿಕ ಹಾಗೂ ದೈಹಿಕ ಹಿಂಸೆಗಳನ್ನು ಸಹಿಸಬೇಕಾಗುತ್ತದೆ. ಹಾಗೆಯೇ ಸಿದ್ಧಿಸಿಕೊಂಡಾಗ ದೀರ್ಘಕಾಲ ಉಳಿಸಿ ಬೆಳೆಸಿಕೊಳ್ಳಲು ಸನ್ಮಾರ್ಗ, ಸತ್ಕ್ರಿಯಾಚರಣೆ, ಸದ್ಬುದ್ಧಿಗಳು ತೀರಾ ಅವಶ್ಯಕ. ನಮ್ಮ ಪುರಾಣ ಕತೆಗಳಲಿ ರಾವಣ, ಹಿರಣ್ಯಕಶಿಪು, ಭಸ್ಮಾಸುರ ಮುಂತಾದ ಅಸುರರು ಕಠಿಣವಾದ ತಪಸ್ಸಿನಿಂದಲೇ ಸಿದ್ದಿ ಪಡೆದುಕೊಂಡು, ನಂತರ ಆ ವರಕೊಟ್ಟ ದೇವರಿಗೆ, ವಿರೋಧಿಗಳಾಗಿ ನಡೆದುಕೊಂಡದ್ದರಿಂದ ಪರಿಣಾಮ ಅವನತಿಹೊಂದಿದ ವಿಚಾರ ತಿಳಿಯುತ್ತದೆ. ಆದ್ದರಿಂದ ಕಲಾ ಸಿದ್ಧಿಯನ್ನು ಪಡೆಯುವುದರೊಂದಿಗೆ ಸಾರ್ಥಕಗೊಳಿಸಿಕೊಳ್ಳುವ ಬುದ್ಧಿ ಗುಣವನ್ನು ಬೆಳೆಸಿಕೊಳ್ಳಬೇಕು.

ಭಾಷಣ ೨ : ದೇವಾಲಯಗಳಲಿ ನೃತ್ಯ ಶಿಲ್ಪಗಳು ಏಕೆ ಎಂಬ ವಿಷಯದಲ್ಲಿ ಸ್ವಾಮಿಗಳು ತಮ್ಮ ಮಠದಲ್ಲಿ ನಡೆಯುತ್ತಿದ್ದ ವಿಶೇಷ ಸಭೆಗಳಲ್ಲಿ ಹೇಳುತ್ತಿದ್ದುದು ಹೀಗೆ : ನಾವು ಪೂಜಾ ಸಂದರ್ಭದಲ್ಲಿ ಗೀತಂ ಸಮರ್ಪಯಾಮಿ, ವಾದ್ಯಂ ಸಮರ್ಪಯಾಮಿ, ನೃತ್ಯಂ ಸಮರ್ಪಯಾಮಿ ಎಂದು ಸಮರ್ಪಣಾಭಾವವನ್ನು ವ್ಯಕ್ತಪಡಿಸುತ್ತೇವೆ. ಗಂಧ, ಹೂವು, ಅಕ್ಷತೆ, ಧೂಪ, ದೀಪ, ನೈವೇದ್ಯ, ವಸ್ತ್ರ ಇತ್ಯಾದಿಗಳನ್ನು ಸಮರ್ಪಿಸುವಾಗ ಈ ನೃತ್ಯವೇಕೆ ಎಂಬುದು ಸಾಮಾನ್ಯವಾಗಿ ಎಲ್ಲರ ಮನದಲ್ಲಿ ಮೂಡುವ ವಿಚಾರ. ಆದರೆ ನೃತ್ಯವನ್ನು ಐದನೆಯ ವೇದವೆಂದು ನಮ್ಮ ಶಾಸ್ತ್ರಗಳು ಪರಿಗಣಿಸಿವೆ. ಇದಕ್ಕೆ ಪುರಾಣೋಕ್ತವಾದ ಕತೆಯುಂಟು. ಇಂದ್ರಾದಿ ದೇವತೆಗಳು ತಮ್ಮ ಬಿಡುವಿನ ವೇಳೆಯನ್ನು ಕಳೆಯಲು ಒಂದು ಮಾರ್ಗ ತೋರಬೇಕೆಂದು ಬ್ರಹ್ಮನನ್ನು ಕೇಳಿಕೊಂಡರು. ಆಗ ಋಗ್ವೇದದಿಂದ ಶಬ್ದಗಳನ್ನು, ಸಾಮವೇದದಿಂದ ಸಂಗೀತವನ್ನು, ಯಜುರ್ವೇದದಿಂದ ಅಭಿನಯವನ್ನು, ಅಥರ್ವಣವೇದದಿಂದ ರಸವನ್ನು ತೆಗೆದುಕೊಂಡು ಒಗ್ಗೂಡಿಸಿ, ನಾಟ್ಯವೇದ ಸೃಷ್ಟಿಸಿದ. ಇದನ್ನೇ ಬ್ರಹ್ಮ ತನ್ನ ಮಗನಾದ ಭರತನಿಗೆ ಮೊದಲು ಬೋಧಿಸಿದ. ಭರತ ಅದನ್ನು ತನ್ನ ಶಿಷ್ಯರಿಗೆಲ್ಲಾ ಆ ವಿದ್ಯೆ ಕಲಿಸಿದ. ಗಂಧರ್ವರು, ಅಪ್ಸರೆಯರು ಸಹ ಕಲಿತು ಒಮ್ಮೆ ಪರಮೇಶ್ವರನ ಮುಂದೆ ನರ್ತಿಸಿದರು ಅದರಲ್ಲಿದ್ದ ಲೋಪದೋಷಗಳನ್ನು ನಿವಾರಿಸುವ ಸಲುವಾಗಿ ಸಾಕ್ಷಾತ್ ಶಿವನೇ ನಾಟ್ಯವನ್ನು ಮಾಡಿ ತೋರಿಸಿದನಂತೆ. ಭರತ ಮತ್ತಷ್ಟು ಉತ್ತೇಜಿತನಾಗಿ ಅಲ್ಲಿನ ಗಣಗಳಿಗೆ ನೃತ್ಯ ಮಾಡುವುದನ್ನು ಕಲಿಸಿದರೆ ಪಾರ್ವತಿಯು ಬಾಣಾಸುರನ ಮಗಳಾದ ಉಷೆಗೆ ನಾಟ್ಯವನ್ನು ಹೇಳಿಕೊಡುತ್ತಾಳೆ. ಹೀಗೆ ದೇವಲೋಕದಿಂದ ಭೂಮಿಗೆ ಬಂದ ನರ್ತನ ವಿದ್ಯೆ ಜಗತ್‌ವ್ಯಾಪಿಯಾಗಿದೆ. ಈ ಪ್ರಕ್ರಿಯೆಗಳು ಕಾಲಾಂತರದಲ್ಲಿ ಹಲವು ರೂಪದಲ್ಲಿ ಬೆಳೆದು ಶಿವನು ನಟರಾಜ ಅಥವಾ ತಾಂಡವ ರೂಪದಲ್ಲಿ ಖ್ಯಾತನಾಗಿದ್ದಾನೆ. ಇಂತಹ ನಟರಾಜನನ್ನು ಒಲಿಸಿಕೊಳ್ಳಲು ಮಾನವರು ಧೂಪ, ದೀಪ, ಫಲ ಪುಷ್ಪಗಳಿಂದ ಮಾತ್ರವಲ್ಲ ನಾಟ್ಯದಿಂದಲೂ, ಭಕ್ತಿಯ ಗಾಯನದಿಂದಲೂ ಪ್ರಯತ್ನಿಸುವ ಫಲವಾಗಿಯೇ ಎಲ್ಲಾ ದೇವಾಲಯಗಳಲ್ಲಿ ನರ್ತನೆ ಸೇವೆ ಆರಂಭವಾಗಿದ್ದವು. ವಿಶೇಷವಾಗಿ ರಾಜರುಗಳು ತಮ್ಮ ಪಟ್ಟದರಸಿಯರಿಗೆ ನರ್ತನ ಕಲಿಸುತ್ತಿದ್ದುದು ಇದೇ ಕಾರಣಕ್ಕಾಗಿಯೇ, ಒಂದು ವೇಳೆ ರಾಣಿ ಕಲಿಯಲಿಚ್ಛಿಸದಿದ್ದಲ್ಲಿ ಆಸಕ್ತಿಯುಳ್ಳವರಿಗೆ ಪ್ರೋತ್ಸಾಹಿಸಿ ದೇವಾಲಯದಲ್ಲಿ ನರ್ತಿಸುವಂತೆ ಸಕಲ ವ್ಯವಸ್ಥೆ ಮಾಡಿಕೊಡುತ್ತಿದ್ದರು. ಇಂದು ಆ ದೇವಾಲಯ ನೃತ್ಯಗಳು ರಾಜಕೀಯ ಸ್ಥಿತ್ಯಂತರ, ಬದಲಾದ ಸಾಮಾಜಿಕ ಧೋರಣೆಗಳಿಂದಾಗಿ ಸ್ಥಗಿತಗೊಂಡಿದೆ. ನೃತ್ಯ ಸಾರ್ವತ್ರಿಕವಾಗಿ

ವೇದಿಕೆಯನ್ನಾವರಿಸಿದೆ. ದೇವ ಸನ್ನಿಧಿಯ ನೃತ್ಯ ಜನ ಸನ್ನಿಧಿಯಲ್ಲಿ ನಡೆಯುತ್ತಿದೆ. ರಾಜಾಶ್ರಯದಿಂದ ಜನಾಶ್ರಯದತ್ತ ಸಾಗಿದೆ.

ಭಾಷಣ ೩ : ಮತ್ತೊಂದು ಸಭೆಯಲ್ಲಿ ನಟರಾಜನ ರೂಪವನ್ನು ವಿವರಿಸಿದ್ದು ಹೀಗೆ . . . ನಟರಾಜ ಅಥವಾ ಶಿವ ಧರಿಸಿರುವ ಹಾಗೂ ಹಿಡಿದಿರುವ ಒಂದೊಂದು ಆಯುಧಕ್ಕೂ ಹಿನ್ನೆಲೆಯಿದೆ. ಧರಿಸಿದ ಹುಲಿ ಚರ್ಮದ ಹಿಂದಿನ ಕತೆ ಹೇಳುವುದೇನೆಂದರೆ ತಮ್ಮ ತಪಸ್ಸಿನ ಶಕ್ತಿಯಿಂದ ವರಗಳನ್ನು ಪಡೆದುಕೊಂಡಿದ್ದ ಋಷಿಗಳು ಶಿವನನ್ನೇ ನಾಶ ಮಾಡುವ ಸನ್ನಾಹದಲ್ಲಿ ಹುಲಿಯೊಂದನ್ನು ಸೃಷ್ಟಿಸಿಬಿಡುತ್ತಾರೆ. ಶಿವನು ಆ ಹುಲಿಯನ್ನು ನಿಗ್ರಹಿಸಿ ಅದರ ಚರ್ಮವನ್ನೇ ಉಡುಗೆಯಾಗಿ ಮಾಡಿಕೊಳ್ಳುತ್ತಾನೆ. ತಮ್ಮ ಉದ್ದೇಶ ಫಲ ಕೊಡದಿದ್ದನ್ನು ಕಂಡು ಕೋಪೋದ್ರಿಕ್ತರಾದ ಋಷಿಗಳು ಹಾವನ್ನು ಸೃಷ್ಟಿಸಿ ಬಿಡುತ್ತಾರೆ. ಅದನ್ನೇ ಹಾರವನ್ನಾಗಿ ಸ್ವೀಕರಿಸುತ್ತಾನೆ ಶಿವ. ಕಚ್ಚಬೇಕಾದ ಹಾವು ಕೊರಳನ್ನಲಂಕರಿಸುತ್ತದೆ. ಕೊನೆಗೆ ಅಪಸ್ಮಾರ ಎಂಬ ಗಿಡ್ಡನೆಯ ರಾಕ್ಷಸನನ್ನು ಬಿಡುತ್ತಾರೆ. ಕೆಲವೇ ಕ್ಷಣದಲ್ಲಿ ಅವನನ್ನು ನೆಲಕ್ಕೆ ಉರುಳಿಸಿ ಅವನ ಬೆನ್ನಿನ ಮೇಲೆ ಕಾಲಿಟ್ಟು ನರ್ತನಗೈಯುತ್ತಾನೆ ಶಿವ. ಆಗ ಭಯಭಿತರಾದ ಋಷಿಗಳು ಶಿವನಿಗೆ ಶರಣಾಗತರಾಗುತ್ತಾರೆ. ಈ ಕತೆಯಿಂದ ತಿಳಿಯಬೇಕಾದದ್ದು ದುಷ್ಟ ವಿಷಯಗಳು ಅಥವಾ ಶಕ್ತಿಗಳು ಯಾವಾಗಲೂ ನಮ್ಮ ಮೇಲೆ ದಾಳಿಮಾಡುತ್ತಿರುತ್ತವೆ. ಅದನ್ನು ನಿಗ್ರಹಿಸಿ ದೃಢವಾಗಿ ನಿಂತಾಗಲೇ ಯಶಸ್ಸು ಕಾಣಲು ಸಾಧ್ಯ. ಸಾಧಕನಾದವನು ಈ ದಿಸೆಯಲ್ಲಿ ಅಹಮಿಕೆಯನ್ನು ಬಿಟ್ಟು ಅಹಿರ್ನಿಶೆ ದುಡಿಯಬೇಕು. ಸನ್ಮಾರ್ಗದಿಂದ ಗಳಿಸಿ, ಸಾಧ್ಯವಾದಷ್ಟು ಉಳಿಸಿ ಬೆಳೆಸುವ ಗುಣ ರೂಢಿಸಿಕೊಳ್ಳಬೇಕು ಆಗಲೇ ಯಶಸ್ಸು ಕಾಣುವುದು.

ಈ ಸಂದರ್ಭದಲ್ಲಿ ಶಿಲ್ಪಾಭ್ಯಾಸಿಯೋರ್ವನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾಲ್ಕು ಕೈಗಳುಳ್ಳ ನಟರಾಜನನ್ನು ಮಾಡುವಾಗ ಯಾವಾಗಲೂ ಮೇಲಿನ ಬಲಗೈಯಲ್ಲಿ ಹಿಡಿದಿರುವಂತೆ ಡಮರುಗವನ್ನು ಸೃಷ್ಟಿಯ ಸೂಚಕವಾಗಿಯೂ, ಮೇಲಿನ ಎಡಗೈಯಲ್ಲಿ ಅಗ್ನಿಯನ್ನು ಸಂಹಾರ ಸೂಚಕವಾಗಿಯೂ, ಶಿವನ ಮತ್ತೆರಡು ಕೈಗಳು ತಾಂಡವ ನೃತ್ಯದ ಭಂಗಿಯಲ್ಲಿಯೂ, ಬಲಗಾಲು ಅಪಸ್ಮಾರನ ಬೆನ್ನಿನ ಮೇಲೆಯೂ, ಮಡಚಿದ ಎಡಗಾಲು ಅಪಸ್ಮಾರನ ತಲೆಮೇಲೆ ಅಥವಾ ನೃತ್ಯ ಭಂಗಿಯಲ್ಲಿರುವಂತೆ ಮಾಡುವುದು ಅತ್ಯಾವಶ್ಯಕ. ಶಿರದ ಭಾಗದಲ್ಲಿ ಜಟಾಮುಕುಟದ ಮೇಲೆ ಗಂಗೆಯನ್ನು, ಬಲಪಕ್ಕಕ್ಕೆ ಚಂದ್ರನನ್ನು, ಬಲಗಿವಿಯಲ್ಲಿ ಪುರುಷರ ಮಕರ ಕುಂಡಲವನ್ನು, ಎಡಗಿವಿಯಲ್ಲಿ ಸ್ತ್ರೀಯರ ಬೆಂಡೋಲೆಯನ್ನು ಮಾಡುವುದರ ಮೂಲಕ ಸ್ತ್ರೀಪುರುಷರೀರ್ವರ ಏಕತೆಯನ್ನು ಬಿಂಬಿಸಬೇಕು. ವಿಗ್ರಹದ ಸುತ್ತಲೂ ಅಗ್ನಿಯ ನಾಲಗೆಗಳ ಪ್ರಭಾವಳಿ ಅತ್ಯವಶ್ಯಕವಾಗಿರಬೇಕು. ಮೂರ್ತಿಯು ಸದೃಢವಾಗಿ ನಿಲ್ಲಬೇಕಾದರೆ ಆ ಪ್ರಭಾವಳಿಗೆ ಶಿರದ ತುದಿ, ಡಮರುಗದ ಒಂದು ತುದಿ ಹಾಗೆಯೇ ಎಡ ಕೈಯಲ್ಲಿನ ಉರಿಯಗ್ನಿ, ಶಿರಸ್ಸಿನ ಹಿಂಭಾಗದಿಂದ ಹೊರಡಿಸುವ ಜಟೆ, ಹಾಗೂ ನಡುವಿನ ಕಸೆಯ ತುದಿಗಳನ್ನು ಪ್ರಭಾವಳಿಗಂಟುವಂತೆ ಮಾಡುವುದರಿಂದ ನಟರಾಜ ವಿಗ್ರಹ ಸದೃಢ ತಾಳಿಕೆ ಬಾಳಿಕೆ ಬುರತ್ತದೆ. ಎಲ್ಲೆಲ್ಲಿ ಹೇಗೆ ಹೊಂದಿಸಬೇಕೆಂಬ ವಿಚಾರವನ್ನು ಹಿರಿಯ ಶಿಲ್ಪಿಗಳಿಂದ ಕೇಳಿ ತಿಳಿಯಬೇಕು ಇಲ್ಲವೇ ಬೇರೆ ವಿಗ್ರಹದಲ್ಲಿ ಮಾಡಿರುವ ವಿಧಾನವನ್ನು ಹಲವಾರು ಬಾರಿ ವೀಕ್ಷಿಸಿ ಅದರರ್ಥ ತಿಳಿದು ಮಾಡುವುದು ಕ್ಷೇಮವೆಂದರು.

ಸ್ವಾಮಿಗಳು ಸಾರ್ವಜನಿಕ ಸಮಾರಂಭಗಳಿಗೆ ಹೋಗಿ ಅನುಗ್ರಹ ಭಾಷಣಗಳನ್ನು ಮಾಡಿದಾಗಲೂ ಯಾವುದಾದರು ಒಂದು ವಿಷಯವನ್ನು ತಮ್ಮ ಉಪನ್ಯಾಸಕ ಮೂಲಕ ಹೇಳುತ್ತಿದ್ದರು. ಅದನ್ನು ಸಣ್ಣ ಪುಸ್ತಿಕೆಯನ್ನಾಗಿ ಮುದ್ರಿಸಿ ಪ್ರಕಟಿಸಿ ಸಾರ್ವಜನಿಕರಲ್ಲಿ ಹಂಚಿಕೆ ಮಾಡುತ್ತಿದ್ದರು. ಈ ರೀತಿಯಾಗಿ ತಮಗೆ ಲಭಿಸಿದ ಅವಕಾಶವನ್ನು ಸಾರ್ವಜನಿಕರ ತಿಳಿವನ್ನು ಹೆಚ್ಚು ಮಾಡಲು ಬಳಸಿಕೊಳ್ಳುತ್ತಿದ್ದರು. ಮುದ್ರಿತ ಪ್ರತಿಗಳು ವ್ಯಾಪಕವಾಗಿ ಹರಡಿಕೊಂಡಿವೆ. ಇವನ್ನು ಸಂಗ್ರಹಿಸಿ ಕಾಪಾಡುವ ಕೆಲಸವನ್ನು ಯಾರು ಕೈಗೊಂಡಿಲ್ಲ.

೩. ಸಂಪಾದಿತ ಗ್ರಂಥಗಳು

ಕರಸ್ಥಲ ನಾಗಲಿಂಗದೇವ ಚರಿತಂ (೧೯೫೧) : ಈ ಪುಸ್ತಕದಲ್ಲಿ ಶ್ರೀಮನ್ಮಹೀಶೂರ ಕರ್ಣಾಟಕ ಸಾಮ್ರಾಜ್ಯ ದಿವ್ಯರತ್ನ ಸಿಂಹಾಸನಾಧೀಶ್ವರರೂ ರಾಜರ್ಷಿ ಪುಂಗವ ಶ್ರೀ ವಿದ್ಯಾ ಚಿತ್ರಭಾನಂದ ರಾಜಯೋಗೀಂದ್ರವರ್ಯರೂ ಆದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜೆ.ಸಿ.ಬಿ., ಜೆ.ಸಿ.ಎಸ್.ಐ., ಮಹಾಪ್ರಭುವರ್ಯರ ಆಜ್ಞಾನುಸಾರವಾಗಿ ಈ ಗುರುಚರಿತೆಯನ್ನು ಪ್ರಕಾಶಪಡಿಸಲಾಗಿದೆ ಎಂದು ದಾಖಲಿಸಿದ್ದಾರೆ. ಗ್ರಂಥಶೋಧನೆಗೆ ಸಹಕರಿಸಿದ ತಮ್ಮ ಅಣ್ಣನವರಾದ ಶಿಲ್ಪಿ ಅಪ್ಪಾಜಿ ಸ್ವಾಮಿಯವರನ್ನು ಮತ್ತು ಸಂಸ್ಕೃತ ವಿದ್ವಾನ್ ಗಂಗಾಧರ ಶಾಸ್ತ್ರಿಗಳನ್ನು, ಮುದ್ರಣಕ್ಕೆ ಆರ್ಥಿಕ ನೆರವನ್ನು ನೀಡಿದ ಶ್ರೀಮನ್ ಮಹಾರಾಜರಿಗೂ, ಪ್ರಚಾರ ನಿರ್ವಹಣೆಯ ಶ್ರೀ ಕರಸ್ಥಲ ನಾಗಲಿಂಗಸ್ವಾಮಿ ಸೇವಾ ಯುವಕರ ಸಂಘ ಮಂಚಹಳ್ಳಿ ಗುಂಡ್ಲುಪೇಟೆ ತಾಲ್ಲೂಕು ಮತ್ತು ಮುದ್ರಿಸಿದ ಶಾರದಾ ಪ್ರೆಸ್‌ಗೂ ನೆನೆಕೆಯನ್ನು ಸಲ್ಲಿಸಿದ್ದಾರೆ.

ಈ ಪುಸ್ತಕದ ಆದಿಭಾಗದಲ್ಲಿ ಕವಿ ಕಾವ್ಯ ವಿಚಾರ ಪ್ರಸ್ತಾಪಿಸುತ್ತಾ ಈ ಕೃತಿ ರಚಿಸಿದವರು ಶಿವಪುತ್ರ ಸ್ವಾಮಿಗಳೆಂದು ಅವರು 'ಶಿವಾಣುಗ' ಎಂಬ ಕಾವ್ಯನಾಮದಿಂದ ಕರೆದುಕೊಂಡಿದ್ದಾರೆಂದು ಇವರು ನಾಗಲಿಂಗದೇವರ ಪ್ರಶಿಷ್ಯರು ಎಂಬುದಾಗಿಯೂ ತಿಳಿಸಿ 'ಹರಕವಿಗಳಿಗೆಲ್ಲಾ ಮರೆಯದೆ ಶಿರಬಾಗಿ ಬರೆದ ಶಿವಾಣುಗನಿದನು' 'ಶ್ರೀ ಚರಣದ ಕೃಪೆಯೆಮಗಿರಲಿಂತು ಜನ್ಮ ಜನ್ಮದಲಿ' ಎಂದು ಯಾವ ಫಲಾಪೇಕ್ಷೆಯಿಲ್ಲದೆ ರಚಿಸಿದನೆಂದು ಹೇಳುವ ಈ ಗ್ರಂಥದಲ್ಲಿ ಪ್ರಸ್ತಾವನೆಯ ಸುಮಾರು ೩೪ ಪುಟಗಳಿವೆ. ಶ್ರೀ ಜಗದ್ಗುರು



ಚಿತ್ರ ೯.೪ : ಕರಸ್ಥಲ ನಾಗಲಿಂಗದೇವರ ಚರಿತೆ

ಕರಸ್ಥಲ ನಾಗಲಿಂಗದೇವರ ಚರಿತೆಯ ಸಾರವು ಗದ್ಯರೂಪದಲ್ಲಿ ಸುಮಾರು ೬೩ ಪುಟಗಳಷ್ಟಿದೆ. ಉಳಿದಂತೆ ೧೧೧೭ ಸಾಂಗತ್ಯಗಳನ್ನು ಶಿವಾಣುಗ ಎಂಬುವರೇ ಬರೆದಿರುವುದು ಎಂದು ಹೇಳಲಿಕ್ಕೆ ಸಾಕ್ಷಿಭೂತವಾಗಿ ೧೧ನೆಯ ಸಂಧಿಯ ಕೊನೆಯಲ್ಲಿ :

> **ಗುರು ವೀರಣಾಚಾರ್ಯ ಪರಮ ವಿರಕ್ತ ಸ । ದ್ಗುರು ಕರಕಮಲ ಸಂಜಾತ ।**
> **ವರಕವಿತಾಗಮ ಗುರುತರ ಶಿಲ್ಪಜ್ಞ । ನೊರೆದ ಶಿವಾಣುಗನಿದನು.**

ಎಂದು ಕವಿಯೇ ಹೇಳಿಕೊಂಡಿರುವುದನ್ನು ಸಹ ಸ್ವಾಮಿಗಳು ದಾಖಲಿಸಿರುತ್ತಾರೆ.

ಜೊತೆಗೆ ಕ್ಲಿಷ್ಟಪದಗಳ ಅರ್ಥವನ್ನು ಅಕಾರಾದಿಯಾಗಿ ದಾಖಲಿಸಿದ್ದಾರೆ. ಶಾಸ್ತ್ರೀಯ ಪದ್ಧತಿಯಲ್ಲಿ ಕಾವ್ಯವನ್ನು ಸಂಪಾದಿಸಿಕೊಟ್ಟು ಕನ್ನಡದಲ್ಲಿ ತಮ್ಮ ವಿದ್ವತ್ತನ್ನು ಸ್ವಾಮಿಗಳು ಸ್ಪಷ್ಟಗೊಳಿಸಿದ್ದಾರೆ.

ಈ ಪುಸ್ತಕದ ಮತ್ತೊಂದು ವಿಶೇಷವೆಂದರೆ ಕಾವ್ಯಕತೆಗೆ ಸಾಂದರ್ಭಿಕ ಇಪ್ಪತ್ತು ಚಿತ್ರಗಳನ್ನು ಸ್ವಾಮಿಗಳೇ ವರ್ಣದಲ್ಲಿ ರಚಿಸಿ ಅಳವಡಿಸಿರುವುದು. ಕೆಲವನ್ನು ಈ ಮೊದಲೇ ಉಲ್ಲೇಖಿಸಿದೆ (ಪುಟ ೩೭ ರಿಂದ ೪೨, ಚಿತ್ರ ೧. ೨೦ ರಿಂದ ೧.೩೦ರ ತನಕ ನೋಡಿ).

ಕಲಾದೃಷ್ಟಿಯಿಂದ ಒಂದು ಕತೆಗೆ ಅಥವಾ ಸನ್ನಿವೇಶಕ್ಕೆ ದೃಶ್ಯವನ್ನು ರಚಿಸುವುದು ಸುಲಭವಲ್ಲ, ಕಲೆಗಾರನು ಆ ಕತೆಯ ಅಂತಃಸತ್ವದೊಳಕ್ಕೆ ಪ್ರವೇಶಿಸಿ, ಆ ಪಾತ್ರ, ಸನ್ನಿವೇಶ ಮತ್ತು ಪರಿಸರ ಇವುಗಳನ್ನು ಆ ಶಾಬ್ದಿಕ ವಿವರಣೆಗೆ ಹೊಂದಾಣಿಕೆ ಆಗುವಂತೆ, ಒಟ್ಟಾರೆ ಆ ಪಾತ್ರಗಳಿಗೆ ಚ್ಯುತಿ ಆಗದಂತೆ, ಪ್ರಮುಖ ಪಾತ್ರಧಾರಿ ಅಥವಾ ಕಥಾನಾಯಕ, ನಾಯಕಿ ಮತ್ತು ಪೋಷಕ ಪಾತ್ರಗಳ ನಡೆ, ಉಡುಪು, ಶೃಂಗಾರಗಳನ್ನು ಗಮನದಲ್ಲಿಟ್ಟುಕೊಂಡೇ ಚಿತ್ರಿಸಬೇಕಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಒಂದೇ ನಾಯಕ ಅಥವಾ ನಾಯಕಿ ಇಲ್ಲವೇ ಆಗಾಗ್ಗೆ ಬರುವ ಪಾತ್ರಗಳ ಮುಖ ಲಕ್ಷಣವನ್ನು ಪೂರ್ಣ ಕಥಾಭಾಗ ಮುಗಿಯುವವರೆಗೂ ಒಂದೇ ತೆರನಾಗಿರುವಂತೆ ಚಿತ್ರಿಸುವುದು ಹಾಗೂ ಅದರಲ್ಲೂ ಬಾಲ್ಯ, ಯೌವ್ವನ, ವೃದ್ಧಾಪ್ಯಗಳ ಅವಸ್ಥಾಂತರಗಳನ್ನು, ಲಕ್ಷಣಗಳನ್ನು ವಿರೋಧವಾಗದಂತೆ ರೂಪಿಸುವುದು ಅನುಭವಿ ಕಲಾವಿದನಿಗೆ ಮಾತ್ರ ಸಾಧ್ಯ.

ನಿರ್ದಿಷ್ಟ ರೂಪವಿಲ್ಲದ ಪುರಾಣದ ಶಾಬ್ದಿಕ ಅಕ್ಷರಗಳಿಗೆ ರೂಪಕೊಡುವ ಕಲ್ಪನಾ ಚಿತ್ರನ್ನಾಗಲಿ, ಶಿಲ್ಪವನ್ನಾಗಲಿ ಮಾಡಬಹುದು. ಆದರೆ ಒಂದೇ ಪಾತ್ರವನ್ನು ಹಲವು ಕೋನಗಳಿಂದ, ಭಾವಗಳಿಂದ ಮತ್ತು ರೂಪದಿಂದ ಚಿತ್ರಿಸುವುದು ಅತ್ಯಂತ ಕಷ್ಟದ ಕೆಲಸ. ಆದರೂ ಬಹಳ ಲೀಲಾಜಾಲವಾಗಿ ಎಲ್ಲಿಯೂ ಕಥಾಭಾಗಕ್ಕೆ ಚ್ಯುತಿ ಆಗದಂತೆ ಅದರಲ್ಲೂ ಜಲವರ್ಣದಲ್ಲಿ ಚಿತ್ರಿಸಿರುವುದನ್ನು ಸಿದ್ಧಲಿಂಗಸ್ವಾಮಿಗಳ ಸಮಕಾಲೀನ ಕಲಾವಿದರಲ್ಲಿ ಯಾರೂ ಕಾಣಬರುವುದಿಲ್ಲ. ಅಷ್ಟೇಕೆ ರಾಜ ರವಿವರ್ಮನ ಚಿತ್ರಗಳನ್ನು ಎಲ್ಲರೂ ಹೊಗಳುತ್ತಾರೆ. ಆದರೂ ಅವರ ಚಿತ್ರದಲ್ಲಿ ಪದೇ ಪದೇ ಬರುವ ಪಾತ್ರಗಳ ಮುಖಚರ್ಯೆ ಒಂದು ಕಡೆ ಇರುವಂತೆ ಮತ್ತೊಂದು ಇರದೇ ಬದಲಾಗುತ್ತಾ ಹೋಗುತ್ತದೆಂಬುದಕ್ಕೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿರುವ ಪೌರಾಣಿಕ ಕಥಾಪಾತ್ರಗಳೂ ಒಂದರಂತೆ ಮತ್ತೊಂದು ಇಲ್ಲವೆಂಬುದನ್ನು ಗಮನಿಸಿದವರಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಇದೇ ಕಾವ್ಯವನ್ನು ಮೈಸೂರು ವಿಶ್ವವಿದ್ಯಾಲಯದ ಶ್ರೀ ಕೆ. ಆರ್. ಶೇಷಗಿರಿ ಎಂಬುವವರು **ಕರಸ್ಥಲದ ನಾಗೀದೇವನ ಚರಿತ್ರೆ** ಎಂಬುದಾಗಿ ಸಂಪಾದಿಸಿ ಪ್ರಕಟಿಸಿರುವುದು ಮಾತ್ರವಲ್ಲ. ಸ್ವಾಮಿಗಳ ಪ್ರಕಟಣೆಯ ಉಲ್ಲೇಖವನ್ನು ಮಾಡದೆ ಸ್ವಾಮಿಗಳು ಆಧಾರ ಪೂರ್ವಕವಾಗಿ ಹೇಳಿರುವ ವಿವರಗಳನ್ನು ಯಾವ ಆಧಾರಗಳನ್ನೂ ತೋರದೆ ಅದಕ್ಕೆ ವಿರೋಧವಾಗಿ ಬರೆದಿದ್ದಾರೆ. ಇದು ಮೈಸೂರಿನಲ್ಲಿ ಇರುವ ಗುರುಪೀಠದ ಗುರುಸ್ವಾಮಿಗಳ ಚರಿತ್ರೆ ಎಂಬ ವಿವರವನ್ನೂ ಬರೆಯುವ ಸೌಜನ್ಯವನ್ನು ತೋರಿಲ್ಲ. ಆ ಗ್ರಂಥವನ್ನು ನೋಡಿದಾಗ ಹಸ್ತಪ್ರತಿಯೊಂದರ ನೂತನ ಸಂಪಾದನೆ ಎನ್ನುವಂತೆ ಬರೆದಿದ್ದಾರೆ. ಸ್ವಾಮಿಗಳ ಪ್ರಕಟಣೆಯಲ್ಲಿರುವ ಪಾಠಾಂತರಗಳನ್ನು ಎಗ್ಗಿಲ್ಲದೆ ಬಳಸಿಕೊಂಡಿದ್ದಾರೆ. ಮಠದ ಸಂಬಂಧದ ವಿವರಣೆಗಳನ್ನು ಮಾತ್ರ ಕೈಬಿಟ್ಟಿದ್ದಾರೆ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಮೈಸೂರಿನ ಕೆಲವರಿಗೆ ಈ ಗುರುಪೀಠ ಮತ್ತು ಸ್ವಾಮಿಗಳ ಬಗ್ಗೆ ಅಸೂಯೆ ಇತ್ತು. ಅವಕಾಶ ದೊರೆತಾಗ ಅದು ಅಭಿವ್ಯಕ್ತಿ ಕಂಡು ಕೊಳ್ಳುತ್ತಿತ್ತು. ಸ್ವಾಮಿಗಳು ಕನ್ನಡ ಸಾಹಿತ್ಯ ಚೆನ್ನಾಗಿ ಬಲ್ಲವರು ಎಂಬ ಉಲ್ಲೇಖ ಮಾಡುವ ಮನಸ್ಸು ಶ್ರೀ ಕೆ. ಆರ್. ಶೇಷಗಿರಿ ಅವರಲ್ಲಿ ಇರಲಿಲ್ಲ. ಈ ಬಗ್ಗೆ ಆಗಿರುವ ತಪ್ಪನ್ನು ತಿದ್ದುವ ಮನಸ್ಸಿನವರು ಮೈಸೂರು ವಿಶ್ವವಿದ್ಯಾಲಯದಲ್ಲೂ ಇರಲಿಲ್ಲ ಎಂಬ ಅಂಶವು ಸ್ಪಷ್ಟವಾಗುತ್ತದೆ.

೪. ಪ್ರೇರಕ ಪ್ರಕಟಣೆಗಳು : ಋಗ್ವೇದ ಸಂಹಿತೆ (೩೬ ಸಂಪುಟಗಳು)

ವೇದಮಂತ್ರಗಳಿಗೆ ಭಾಷ್ಯವನ್ನು, ವಿವರಣೆಯನ್ನು ಬರೆಯದಿದ್ದರೆ, ಅರ್ಥವಾಗದಿರುವ ಸಂದರ್ಭಗಳೇ ಹೆಚ್ಚು. ಪ್ರತಿ ಪದ ಅರ್ಥ, ಭಾವಾರ್ಥ, ವಿಶೇಷಾರ್ಥ, ವ್ಯಾಕರಣಾರ್ಥ, ಸೂತ್ರಗಳ ವಿಮರ್ಶೆ ಇವೆಲ್ಲವೂ ಸಮಗ್ರ ಋಗ್ವೇದಕ್ಕೆ ಮಾಡುವುದು ಎಷ್ಟು ಕ್ಲಿಷ್ಟವೋ ಹಾಗೆಯೇ ಅವುಗಳ ಮುದ್ರಣ ವೆಚ್ಚವೂ ಅಧಿಕವೇ. ಶ್ರಮಿಸುವ ವಿದ್ವಾಂಸರೂ ಬೇಕಾಗುತ್ತಾರೆ. ಈ ಕೆಲಸ ಪೂರೈಸುವವರಿಗೆ ಎಲ್ಲಾ ನೆರವನ್ನು ನೀಡುವ ಪೋಷಕರು ಅಗತ್ಯವಾಗುತ್ತಾರೆ.


ಸ್ವಾಮಿಗಳವರು ಸದ್ಬೋಧನೆಯನ್ನು ಮಾಡಿ ಪ್ರಚಾರಮಾಡಿದರೆ ಇಡೀ ದೇಶವೇ ಪುನೀತವಾಗುವುದೆಂದು ತಮ್ಮ ಅಂತರಂಗದಲ್ಲಿ ಬಹುಕಾಲದಿಂದಿದ್ದ ಈ ಪವಿತ್ರ ಧ್ಯೇಯವನ್ನು ಮಹಾಪ್ರಭುಗಳಲ್ಲಿ ನಿವೇದಿಸಿ ಕಾರ್ಯರೂಪಕ್ಕೆ ಋಗ್ವೇದ ಸಂಹಿತಾ ಸಂಪುಟಗಳ ಪ್ರಕಟಣೆಗೆ ಕಾರಣರಾಗಿದ್ದಾರೆ ಎಂಬ ವಿಚಾರವನ್ನು ಮೊದಲನೆಯ ಸಂಪುಟದ ಮುನ್ನುಡಿಯಲ್ಲಿ ಹಾಗೂ ೩೦ನೇ ಸಂಪುಟದ ಪೀಠಿಕೆಯ ಕೊನೆಯಲ್ಲಿ ಸ್ವಾಮಿಗಳನ್ನು ಹಾಗೂ ಅಪಾರವಾದ ಹಣವನ್ನು ಖರ್ಚುಮಾಡಿ ಮುದ್ರಣ ಸಾಧ್ಯವಾಗಲು ಸಹಕಾರ ನೀಡಿದ ಮಹಾರಾಜರನ್ನು ಅನುವಾದಕ ಮತ್ತು ಸಂಪಾದಕರಾಗಿದ್ದ ಆಸ್ಥಾನ ವಿದ್ವಾನ್ ಶ್ರೀ ಎಚ್.ವಿ. ವೆಂಕಟರಾವ್ ಅವರು ನೆನೆದಿದ್ದಾರೆ.

ಮೊದಲ ಸಂಪುಟ ೨೪-೧೦-೧೯೪೬ ರಲ್ಲಿ ಪ್ರಕಟವಾದರೆ, ೩೦ನೆಯ ಸಂಪುಟ ೩೦-೦೯-೧೯೫೫ ರಲ್ಲಿ ಆಗಿದೆಯೆಂದು ನೆನಸುತ್ತಾ ಸ್ವಾಮಿಗಳು ತಮ್ಮ ಆಸೆ ನೆರವೇರಿದುದನ್ನು ಕಣ್ತುಂಬಿಸಿಕೊಳ್ಳಲು, ನಮ್ಮೆಲ್ಲರನ್ನು ಹರಸು, ಸ್ವಾಮಿಗಳು ಮೂರು ವರ್ಷದ ಹಿಂದೆಯೇ ಕಾಲವಾದರಲ್ಲ ಎಂಬ ವ್ಯಥೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ವೇದ ವಿದ್ವನ್ಮಂಡಲಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದವರೆಲ್ಲರನ್ನು ಸ್ಮರಿಸುತ್ತಾ ಕೊನೆಯಲ್ಲಿ

ಇತಿ ಶ್ರೀ ಮದ್ರಾಜಾದಿರಾಜಾ ಪರಮೇಶ್ವರ ವೈದಿಕಮಾರ್ಗ ಪ್ರವರ್ತಕ ಶ್ರೀ ವೀರಬುಕ್ಕ ಭೂಪಾಲ ಸಾಮ್ರಾಜ್ಯ ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ, ವೇದಾರ್ಥ ಪ್ರಕಾಶೇ ಋಕ್ಸಂಹಿತಾ ಭಾಷ್ಯೇಽಷ್ಟಮಾಷ್ಟಕೇಽಷ್ಟಮೋಽಧ್ಯಾಯಃ ಸಮಾಪ್ತಃ, ಋಗ್ವೇದ ಸಂಹಿತೆಯು ಸಮಾಪ್ತವು ಎಂದು ಪರಿಸಮಾಪ್ತಿಗೊಳಿಸಿದ್ದಾರೆ.

ಇದರ ತರುವಾಯ ಐತರೇಯ ಬ್ರಾಹ್ಮಣ, ಆರಣ್ಯಕ, ನಿರುಕ್ತಾದಿಗಳು ಸೇರಿ ಒಟ್ಟು ೩೬ ಸಂಪುಟಗಳು ಪ್ರಕಟವಾಗಿವೆ.

ಪುಸ್ತಕದ ಮುಖಪುಟ ಈಗಿನ ಹಾಗೆ ಬಹುವರ್ಣದಿಂದ ಆಗುತ್ತಿರಲಿಲ್ಲ. ಏಕವರ್ಣ ಅಥವಾ ದ್ವಿವರ್ಣವೆಂದರೆ ಅದೇ ವಿಶೇಷ.



ಚಿತ್ರ ೯.೫ : ಋಗ್ವೇದ ಸಂಹಿತೆಯ ಗ್ರಂಥದ ಒಳ ಮುಖಪುಟ

ಕಲಾವಿದ ಕಪ್ಪು ಶಾಯಿಯಲ್ಲಿ (ಇಂಕ್) ರಚಿಸಿದ ಚಿತ್ರವೇ ಅಂದಿನ ಸರ್ವಶ್ರೇಷ್ಠ ಮುಖಪುಟ. ಸ್ವಾಮಿಗಳು ಮುಖಪುಟಕ್ಕೆ ರಚಿಸಿರುವ ಚಿತ್ರವು ಈ ಮಾತಿಗೆ ಹೊರತಲ್ಲ. ಈ ಚಿತ್ರದ ವಿಶೇಷವೆಂದರೆ ಋಗ್ವೇದದಲ್ಲಿ ವಿಶೇಷವಾಗಿ ಪ್ರಸ್ತಾಪಕ್ಕೆ ಬರುವ ದೇವತೆಗಳ ರೇಖಾ ಚಿತ್ರಗಳನ್ನು ಬರೆದು ಅವುಗಳನ್ನು ಒಂದು ತೋರಣದ ಚೌಕಟ್ಟಿನೊಳಗೆ ಅಳವಡಿಸಿರುವುದನ್ನು ಒಳಮುಖ ಪುಟದಲ್ಲಿ ಮುದ್ರಿಸಿದ್ದಾರೆ.

ಈ ಮಂಟಪದ ಪೀಠದ ಮಧ್ಯದಲ್ಲಿ ಭೂಮಾತೆಯ ಚಿತ್ರವನ್ನು ಬರೆದಿದ್ದು ಕಮಲಾಸನೆಯಾಗಿರುವ ದೇವಿಯ ಹಿಂಬದಿಯ ಎಡ ಮತ್ತು ಬಲಗಳಲ್ಲಿ ಆನೆಗಳ ಸಾಲು ಇರುವಂತೆಯೂ, ಪೀಠದ ದ್ವಿಪಾರ್ಶ್ವಗಳಲ್ಲಿರುವ ಹೊಯ್ಸಳ ಶೈಲಿಯ ಕಲ್ಕಂಬಗಳು ಇದರ ಅಧೋಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರವನ್ನು ಹಾಗೂ ಮಂಟಪದ ಶಿರೋಭಾಗದಲ್ಲಿ ಸೋಮ, ರುದ್ರ, ಇಂದ್ರ ಮತ್ತು ಬ್ರಹ್ಮ ಇವರುಗಳು ಕುಳಿತಿರುವಂತೆಯೂ, ಇವರುಗಳ ಮಧ್ಯೆ ಈ ಚಿತ್ರಗಳಿಗಿಂತ ಕೊಂಚ ದೊಡ್ಡದಾದ ರೀತಿಯಲ್ಲಿ ಒಂದು ವೃತ್ತವನ್ನು ರಚಿಸಿ ಅದರೊಳಗೆ ಪಂಚಮುಖ, ದಶಹಸ್ತಗಳು ಮತ್ತು ಯೋಗ ಮುದ್ರೆಯಲ್ಲಿ ಕುಳಿತ ವೇದ ಪುರುಷನನ್ನು ರಚಿಸಿದ್ದಾರೆ. ಈ ವೃತ್ತದ ಎಡಬಲಗಳಲ್ಲಿ ವ್ಯಾಳಿಯನ್ನು ರಚಿಸಿದ್ದು ಅದು ಮಂಟಪದ ಶಿರೋಭಾಗದಲ್ಲಿ ಬರುವ ಎಲ್ಲಾ ದೇವತೆಗಳಿಗೂ ಪೂರಕವಾದ ಬುನಾದಿ ಒದಗಿಸುವಂತಿದೆ. ವ್ಯಾಳಿಯ ಬಾಲದಂತಿರುವುದು ಮಂಟಪದ ಕಂಬ ಮತ್ತು ಮೇಲ್ಭಾಗಗಳಿಗೆ ಕೊಂಡಿಯಾಗಿದೆ. ಈ ಕಂಬಗಳ ಮಧ್ಯೆ ಇರುವ ಖಾಲಿ ಸ್ಥಳಲದಲಿ ಋಗ್ವೇದ ಸಂಹಿತಾ ಎಂಬ ಶೀರ್ಷಿಕೆ ಬರೆದು ಅದರ ಮೇಲೆ ಅಗ್ನಿ ಮತ್ತು ಅಕ್ಕ ಪಕ್ಕಗಳಲ್ಲಿ ಸ್ವಾಹಾ ಮತ್ತು ಸ್ವಧಾ ದೇವತೆಗಳನ್ನು ಚಿತ್ರಿಸಿದ್ದಾರೆ. ಅಗ್ನಿಗೆ ಶರೀರ ಒಂದಾದರೂ ಶಿರಸ್ಸು ಎರಡು. ಶಿರಸ್ಸಿನ ಜಟಾಮುಕುಟದಲ್ಲಿ ಕೊಂಬುಗಳು ನಾಲ್ಕು, ಎರಡು ತಲೆಗಳ ನಡುವೆ ಕಿರೀಟ, ಎಂಟು ಕೈಗಳು, ಟಗರು ವಾಹನ ಇವೆಲ್ಲವನ್ನು ಒಳಗೊಂಡು ಸಲಕ್ಷಣವಾಗಿದೆ. (ಚಿತ್ರ ೭.೫ ನೋಡಿ).



ಚಿತ್ರ ೯.೬ : ಸ್ವಾಮಿಗಳು ವೇದ ವಿದ್ವನ್ಮಂಡಲಿಯ ಅಧ್ಯಕ್ಷರಾಗಿ

ಈ ಮಂಟಪದ ಆಕಾರದಲ್ಲಿ ದೇವತಾ ಚಿತ್ರಗಳನ್ನು ಹೊರತು ಪಡಿಸಿದ ರೂಪವನ್ನೇ ಮುಖಪುಟದ ಚಿತ್ರವಾಗಿ ಸಿದ್ಧಪಡಿಸಿದ್ದಾರೆ. ಅದನ್ನು ರಟ್ಟಿಗೆ ಮೆತ್ತಿರುವ ಬಟ್ಟೆಯ ಮೇಲೆ ಮುದ್ರಿಸಿದ್ದಾರೆ. ಅದರಲ್ಲಿನ ಮೇಲ್ಭಾಗದಲ್ಲಿದ್ದ ನಾಲ್ಕು ದೇವತೆಗಳಿದ್ದ ಸ್ಥಳದಲ್ಲಿ ಸತ್ಯ–ಮೇವೊ–ದ್ವಾರಾ–ಮ್ಯಹಮ್ ಎಂಬುದಾಗಿ ದೇವನಾಗರಿ ಲಿಪಿಯಲ್ಲಿ ಬರೆದಿದ್ದಾರೆ. ಅದರಡಿಯಲ್ಲಿ ಶ್ರೀ ಜಯ ಚಾಮರಾಜೇಂದ್ರ ವೇದರತ್ನ ಮಾಲಾ ಎಂದು ಕನ್ನಡದಲ್ಲಿ ಬರೆದಿದ್ದಾರೆ. ವೇದ ಪುರುಷನ ಚಿತ್ರವಿದ್ದ ವೃತ್ತಾಕಾರದ ಬದಲಿಗೆ ರಾಜಲಾಂಛನವಾದ ಗಂಡಭೇರುಂಡವನ್ನು ಹಾಗೂ ಎರಡು ಕಂಬಗಳ ಮಧ್ಯದ ಸ್ಥಳದಲ್ಲಿ ಪುಸ್ತಕದ ಶಿರೋನಾಮೆಯನ್ನು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ಬರೆದಿದೆ. ಈ ಮಂಟಪದ ಚೌಕಟ್ಟಿನ ಕೆಳಗೆ 'ಚಿತ್ರ ನಿರ್ಮಾಣ ಶೈವಶಿಲ್ಪಿ ಬ್ರಹ್ಮರ್ಷಿ ಗುರುಕುಲಂ' ಎಂದು ದೇವನಾಗರಿ ಲಿಪಿಯಲ್ಲಿ ಬರೆದಿದೆ. ಪುಸ್ತಕದ ಒಳಪುಟಗಳಲ್ಲಿ ಒಂದೆರಡು ಪುಟಮಾತ್ರ ಉತ್ತಮಕಾಗದದ ಮೇಲೆ ಮಹಾರಾಜರ ಚಿತ್ರವನ್ನು ಮುದ್ರಿಸಿ ಅದರಡಿಯಲಿ ಯದುವಂಶ ಪಯಃ ಪಾರಾವಾರ ಸುಧಾಕರರೂ ಸತ್ಸಂಪ್ರದಾಯ ವೈದಿಕ ವಿದ್ಯಾವರ್ಧಕರೂ ಮೈಸೂರು ದೇಶವನ್ನಾಳುವ ಧರ್ಮ ಪ್ರಭುಗಳೂ ಆದ ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಎಂದು ಮತ್ತೊಂದು ವರ್ಣದಲ್ಲಿ ಮುದ್ರಿಸಿದ್ದಾರೆ. ಇನ್ನೊಂದು ಪುಟದಲ್ಲಿ ಸ್ವಾಮಿಗಳು ರಜತ ಪೀಠದಲ್ಲಿ ಕುಳಿತಿರುವ ಚಿತ್ರವನ್ನು ಮುದ್ರಿಸಿದ್ದಾರೆ. ಈ ಪೀಠದ ಪ್ರಭಾವಳಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಮನು, ಮಯ, ತ್ವಷ್ಟ್ವ ರವರ ಉಬ್ಬು ಶಿಲ್ಪದ ಕೆತ್ತನೆ ಇದೆ. ಪೀಠದ ಕೆಳಗಿನ ನೆಲಹಾಸು ಹುಲಿಯ ಮುಖ ಮತ್ತು ಚರ್ಮದಿಂದ ಕೂಡಿದ್ದರೆ, ಕುಳಿತ ಸ್ವಾಮಿಗಳ ಪಕ್ಕದಲ್ಲಿ ಯತಿ ದಂಡವಿದೆ. ಪೀಠದ ಮುಂದೆ ಪಾದುಕೆಗಳಿವೆ.

ಮಹಾರಾಜರ ಮತ್ತು ಸ್ವಾಮಿಗಳ ಎರಡು ಛಾಯಾಚಿತ್ರಗಳು ಕಪ್ಪು ಬಿಳುಪಿನವುಗಳಾಗಿದ್ದು ಕೆಳಗೆ ಶ್ರೀ ಜಗದ್ಗುರು ನಾಗಲಿಂಗ ಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ ಶಿಲ್ಪಿ ಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ದಲಿಂಗ ಸ್ವಾಮಿಗಳವರು ವೇದ ವಿಮರ್ಶನ ವಿದ್ವನ್ಮಂಡಳಿಯ ಅಧ್ಯಕ್ಷರು ಎಂದು ಮುದ್ರಿಸಿದ್ದಾರೆ.

'ಋಗ್ವೇದ ಸಂಹಿತೆ' ಯು ಕನ್ನಡ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿ ಬಹು ದೊಡ್ಡದಾದ ಮತ್ತು ಮೇರುವಾಗಿರುವ ಗ್ರಂಥ. ಈ ಎಲ್ಲಾ ಸಂಪುಟಗಳು ಒಟ್ಟು ೩೦ ಸಾವಿರಕ್ಕೂ ಹೆಚ್ಚು ಪುಟಗಳನ್ನು ಪಡೆದಿವೆ. ಇಂದಿಗೂ ಈ ಪ್ರಕಟಣೆಯ ದಾಖಲೆಯನ್ನು ಮುರಿದಿರುವ ಗ್ರಂಥಕ್ಕೆ ಸಮನಾದ ಇನ್ನೊಂದು ಗ್ರಂಥ ಕನ್ನಡದಲ್ಲಿ ಬೇರೆ ಪ್ರಕಟವಾಗಿಲ್ಲ.

ಈ ಪ್ರಕಟಣೆಯ ಪ್ರಯೋಜನ ಮತ್ತು ಪ್ರಾಮುಖ್ಯತೆಯನ್ನು ಗುರುತಿಸಿರುವ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಎಲ್ಲಾ ೩೬ ಸಂಪುಟಗಳ ಪುನರ್ಮುದ್ರಣವನ್ನು ಕೈಗೆತ್ತಿಕೊಂಡು ನಡೆಸುತ್ತಿರುವುದು ಸ್ವಾಮಿಗಳ ಯೋಜನೆಯ ಮೌಲ್ಯವನ್ನು ಮರುಸ್ಥಾಪಿಸುತ್ತದೆ. ಪೂರ್ಣಗ್ರಂಥದ ಸಿಡಿಕೂಡ ಲಭಿಸುತ್ತದೆ.

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾದಿಂದ ಪ್ರಕಟವಾಗಿರುವ ಇತರ ಪುಸ್ತಕಗಳು –

ಶ್ರೀ ಶಂಕರಾಚಾರ್ಯರ ಸ್ತೋತ್ರ ಗ್ರಂಥಗಳು :

೧ ಮೂಕ ಪಂಚ ಶತೀ : ಭಾಗ – ೧
೨ ಕಾಮಕಲ್ಪ ತರುಸ್ತವ : ಭಾಗ – ೨
೩ ತ್ರಿಪುರ ಸುಂದರೀ ಮಾನಸಿಕ ಪೂಜಾ
೪ ಮಹಾಮನ್ತ್ರ ಪುರಶ್ಚರಣ ವಿಧಿಃ
೫ ಷೋಡಶೀ ಪೂಜಾಕಲ್ಪ
೬ ಭುವನೇಶ್ವರಿ ಪೂಜಾಕಲ್ಪ
೭ ರುದ್ರಮಹಾನ್ಯಾಸ ಪ್ರಯೋಗ
೮ ಸೂಕ್ತಗಳು

ಇವುಗಳಲ್ಲದೆ ಜನಸಾಮಾನ್ಯರ ಓದಿಗಾಗಿ ಒಂದಿಷ್ಟು ಸರಳೀಕರಿಸಿ ಮುದ್ರಿಸಿದ ಶಿವ, ವಿಷ್ಣು, ಬ್ರಹ್ಮ, ಕಾಳಿಕಾ, ವರಾಹ, ಗಣೇಶ ಸ್ತೋತ್ರಗಳೂ, ವಾಮನ, ನಾರದೀಯ, ಬ್ರಹ್ಮಾಂಡ, ದೇವಿ, ಸ್ಕಂದ, ರಾಮ ನರಸಿಂಹ, ಸಾಂಬ, ಸೌರ, ಕಲ್ಕಿ, ಮತ್ಸ್ಯ, ಕೂರ್ಮ, ಪದ್ಮ ಕುರಿತಾದ ಪುರಾಣಗಳು. ಶಿವ ರಹಸ್ಯ, ಕಾಂಚಿಮಹಾತ್ಮೆ, ರಾಮಮಂತ್ರ ಮಹಿಮೆ, ಶಿವತತ್ತ್ವ, ಹಾಲಸ್ಯ ಮಹಾತ್ಮೆ, ಬ್ರಹ್ಮ ವೈವರ್ತ, ಶಂಕರ ಸಂಹಿತೆ ಸೇರಿದಂತೆ ಸುಮಾರು ೩೦ ಪುರಾಣ ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲದೆ ಮಂತ್ರಶಾಸ್ತ್ರ, ಸಹಸ್ರನಾಮ, ಉಪನಿಷತ್‌ಗಳಿಗೆ ಸಂಬಂಧಿಸಿದ ಗ್ರಂಥಗಳು ಇವೆ. ವರಿವಸ್ಯಾ ರಹಸ್ಯ, ತ್ರಿಪುರಾತಾಪಿನ್ಯುಪನಿಷತ್, ಲಲಿತಾತ್ರಿಶತಿ ಭಾಷ್ಯಾ, ತ್ರಿಪುರಾ ರಹಸ್ಯ, ಶ್ರೀ ಖಾಂಡಸಾರಾರ್ಥ ಬೋಧಿನೀ, ಸೂತ ಸಂಹಿತೆ, ವನದುರ್ಗೋಪನಿಷತ್, ಶಾರದಾ ಸಹಸ್ರನಾಮ, ಗಣೇಶ ಸಹಸ್ರನಾಮ, ದಕ್ಷಿಣಾ ಮೂರ್ತಿ ಸಹಸ್ರನಾಮ, ಶಿವಪೂಜಾ ಪದ್ಧತಿ ಮುಂತಾದ ಹನ್ನೊಂದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗ್ರಂಥಮಾಲಾ ಮೂಲಕ ಪ್ರಕಟವಾದವುಗಳಲ್ಲೆಲ್ಲಾ ಸ್ವಾಮಿಗಳ ವಿದ್ವತ್ ಮತ್ತು ಕರ್ನಾಟಕ ಭಾಷೆಯಲ್ಲಿ ಪ್ರಕಟಿಸಿ, ಜನಸಾಮಾನ್ಯರಿಗೂ ಉಪಯುಕ್ತವಾಗಬೇಕೆಂಬ ಹಂಬಲ ಇವುಗಳಿಗೆ ಪೂರಕವಾಗಿ ಶ್ರೀಮನ್ ಮಹಾರಾಜರ ಪೂರ್ಣ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನಾವು ಸ್ಮರಿಸಬೇಕು.

ಇಷ್ಟೊಂದು ವ್ಯಾಪಕವಾದ ಸಾಹಿತ್ಯ ಸೇವೆಯನ್ನು ಸ್ವಾಮಿಗಳು ಮಾಡಿದ್ದರೂ ಇದನ್ನು ಗುರ್ತಿಸಿರುವವರು, ಗಮನಿಸಿರುವರು ಯಾರೂ ಇಲ್ಲ. ಏಕೆಂದರೆ ಯಾವ ಸಂದರ್ಭದಲ್ಲಿಯೂ ಯಾರೂ ಕೂಡ ಈ ವಿವರಗಳನ್ನು ಉಲ್ಲೇಖಿಸಿರುವುದು ಕಂಡುಬರುವುದಿಲ್ಲ. ಒಬ್ಬ ವ್ಯಕ್ತಿ ಇಷ್ಟು ಗ್ರಂಥಗಳನ್ನು ಪ್ರಕಟಿಸಿದ್ದರೆ ಖಂಡಿತವಾಗಿಯೂ ಲೇಖಕನಾಗಿ ಆತನ ಹೆಸರು ದಾಖಲಾಗಿರುತ್ತಿತ್ತು. ಸಾಂಪ್ರದಾಯಿಕ ಶಿಲ್ಪಿಯಾಗಿದ್ದರೂ ಸ್ವಾಮಿಗಳನ್ನು ಲೇಖಕರು ಎಂದು ಗುರ್ತಿಸಿಲ್ಲ ಎಂಬುದು ಬಹು ವಿಚಿತ್ರ ಸಂಗತಿ. ಸ್ವಾಮಿಗಳನ್ನು 'ವರ್ಣಶಿಲ್ಪಿ' ಎಂದೂ ಪರಿಗಣಿತವಾಗಿಲ್ಲ ಎಂಬುದನ್ನೂ ಈ ಸಂದರ್ಭದಲ್ಲಿ ನಾವು ಸ್ಮರಿಸಬಹುದು. ಇದಕ್ಕೂ ಮಿಗಿಲಾಗಿ ಸ್ವಾಮಿಗಳು ದೇವಾಲಯ ಯೋಜಿಸಿ ನಿರ್ಮಿಸಿದ್ದಾರೆ ಎಂಬುದರ ಸ್ಮರಣೆಯೂ ಯಾರಲ್ಲೂ ಇರುವಂತೆ ಇಂದಿಗೂ ತೋರುವುದಿಲ್ಲ.



ಚಿತ್ರ ೯. ೭ : ಕಾಮಕಾಮೇಶ್ವರಿ ದೇವಸ್ಥಾನದ ಗರ್ಭಗುಡಿಯ ಹಿಂಭಾಗದಿಂದ ಮುನ್ನೋಟ

೧೦

ತೌಲನಿಕವಾಗಿ ಸ್ವಾಮಿಗಳು ಮತ್ತು ಸಮಕಾಲೀನ ಪ್ರಖ್ಯಾತರು (ರಾಜಾ ರವಿವರ್ಮ ಮತ್ತು ಕೆ. ವೆಂಕಟಪ್ಪ)

ರಾಜಾರವಿವರ್ಮ ಮತ್ತು ಸಿದ್ದಲಿಂಗಸ್ವಾಮಿಗಳು :

ರಾಜಾರವಿವರ್ಮ ಕೇವಲ ಯಥಾರ್ಥ ವರ್ಣಚಿತ್ರ ಪಟ ರಚನೆಯಲ್ಲಿ ಬಹು ಪ್ರಖ್ಯಾತರಾಗಿದ್ದವರು. ಇವರಿಗೆ ಶಿಲ್ಪ ಮತ್ತು ಇತರ ಪ್ರಕಾರಗಳ ಪರಿಚಯವಿರಲಿಲ್ಲ. ಸಿದ್ದಲಿಂಗಸ್ವಾಮಿಗಳು ಯಥಾರ್ಥ ಮತ್ತು ಸಾಂಪ್ರದಾಯಿಕ ವರ್ಣಚಿತ್ರ ಮತ್ತು ಸಾಂಪ್ರದಾಯಿಕ ಶಿಲ್ಪದ ಇತರ ಪ್ರಕಾರಗಳಲ್ಲಿ ದೇವಾಲಯ ನಿರ್ಮಾಣವೂ ಸೇರಿ ಪ್ರಖ್ಯಾತರು. ಈ ಇಬ್ಬರ ಚಿತ್ರರಚನಾ ಕ್ರಮವನ್ನು ಭಾರತೀಯ ಸಂಸ್ಕೃತಿಯ ಒರೆಗಲ್ಲಿ ಹಚ್ಚಿ, ಆ ಚಿತ್ರಗಳಲ್ಲಿನ ಭಾವಾಭಿವ್ಯಕ್ತಿ, ನಿರೂಪಣಾಕ್ರಮ, ವರ್ಣಸಂಯೋಜನೆ, ಮೇಲಾಗಿ ಕಥಾ ಸನ್ನಿವೇಶಕ್ಕೆ ಅನುಕೂಲವಾದ ಪಾತ್ರಾಪಾತ್ರತೆಯ ಲಕ್ಷಣ ಗಮನಿಸಿದ ತೌಲನಿಕವಾಗಿ ವಿಮರ್ಶಿಸಬೇಕಾಗಿರುತ್ತದೆ. ಈ ರೀತಿಯ ಅಧ್ಯಯನ ಇದುವರೆವಿಗೂ ನಡೆದಿಲ್ಲ ಎಂಬ ಅಂಶವನ್ನು ನೆನಪನಲ್ಲಿರಿಸಿಕೊಂಡು ಈ ತೌಲನಿಕ ಪ್ರಯತ್ನವನ್ನು ಮಾಡಿದೆ.

ಈ ಹಿಂದೆ ರಾಜಾರವಿವರ್ಮರ ಚಿತ್ರಕಲೆಯನ್ನು ಕುರಿತು ಕನ್ನಡದ ಖ್ಯಾತ ಕಾದಂಬರಿಕಾರ, ಕಲಾ ವಿಮರ್ಶಕ ಡಾ॥ ಅ.ನ.ಕೃ. ರವರು 'ಭಾರತೀಯ ಚಿತ್ರಕಲೆಯಲ್ಲಿ ರವಿವರ್ಮನ ಸ್ಥಾನ' ಎಂಬ ವಿಮರ್ಶಾತ್ಮಕ ಪುಸ್ತಕವನ್ನು ೧೯೩೭ರಲ್ಲಿಯೇ ಬರೆದಿರುವರು. ಇದಲ್ಲದೆ ರವಿವರ್ಮರ ಕಲೆಯ ಬಗ್ಗೆ ಕನ್ನಡದಲ್ಲಿ ಅನೇಕ ವಿಮರ್ಶಾಲೇಖನಗಳು ಬಂದಿವೆ. ಇಂಗ್ಲೀಷಿನಲ್ಲೂ ವಿಸ್ತೃತ ಅಧ್ಯಯನಗಳು ಪ್ರಕಟವಾಗಿವೆ. ಆದರೆ ಸ್ವಾಮಿಗಳ ಚಿತ್ರಕಲೆಯ ಬಗ್ಗೆ ಗಂಭೀರ ವಿಮರ್ಶೆ, ತುಲನೆ ಇದುವರೆವಿಗೂ ಕನ್ನಡದಲ್ಲಿಯೇ ಆಗಿಲ್ಲವೆಂದ ಮೇಲೆ ಇಂಗ್ಲೀಷನ್ನು ನೆನೆಸುವುದಾದರೂ ಸಾಧ್ಯವೇ? ರವಿವರ್ಮ (೧೮೪೮–೧೯೦೬) ಮತ್ತು ಸಿದ್ದಲಿಂಗಸ್ವಾಮಿಗಳ (೧೮೮೫–೧೯೩೭) ಕಾಲ ನಾಲ್ಕು ದಶಕಗಳ ಅಂತರದಲ್ಲಿ ಬಹುತೇಕ ಒಂದೇ ಆಗಿದ್ದರೂ ದೇವತಾ ಪಟ ಚಿತ್ರರಚನೆಯಲ್ಲಿ ರವಿವರ್ಮರದೇ ಎಲ್ಲೆಲ್ಲೂ ಪ್ರಕಾಶಮಾನ. ಇಂಗ್ಲೆಂಡನ್ನು ಸ್ವರ್ಗವೆಂದು ಭಾವಿಸಿ ಅಲ್ಲಿಯದೆಲ್ಲವನ್ನೂ ಶ್ರೇಷ್ಠವೆಂಬುದಾಗಿ ಸ್ವೀಕರಿಸುತ್ತಿದ್ದವರೇ ಬಹುವಾಗಿದ್ದುದರಿಂದ ರವಿವರ್ಮರ ಕಲೆಯು ಬಹು ತ್ವರಿತವಾಗಿ ಜನಪ್ರಿಯವಾಯಿತು. ಮೈಸೂರಿನ ಹೊಸ ಅರಮನೆಯ ಅಲಂಕರಣದಲ್ಲಿ ರಾಜಾರವಿವರ್ಮರದೇ ಮೇಲುಗೈ. ಆದ್ದರಿಂದ ಮೈಸೂರಿನ ವರ್ಣಚಿತ್ರಕಾರರೆಲ್ಲಾ ರವಿವರ್ಮರ ಶಿಷ್ಯರಾಗಲು ಆಶಿಸುತ್ತಿದ್ದರು. ಅವರನ್ನೇ ಕಾಪಿ ಮಾಡುತ್ತಿದ್ದರು.

ಈ ಸಂದರ್ಭವನ್ನು ರವಿವರ್ಮ ಚೆನ್ನಾಗಿ ಉಪಯೋಗಿಸಿಕೊಂಡರು. ಪ್ರಖ್ಯಾತಿಗೆ ಬರಲು ಹೆಚ್ಚು ಹೆಚ್ಚು ಅವಕಾಶಗಳನ್ನು ಸೃಷ್ಟಿಸಿಕೊಂಡರು; ಬಳಸಿಕೊಂಡರು.

ರವಿವರ್ಮ ರಾಜವಂಶದಿಂದ ಬಂದ ಶ್ರೀಮಂತರು. ಆದರೆ ಭಾರತೀಯ ಸಂಸ್ಕೃತಿಯ ಬೇರು ಅವರಲ್ಲಿರಲಿಲ್ಲ. ಕಲಿತ ಓದು, ಕಲೆ ಎಲ್ಲವೂ ಪಾಶ್ಚಾತ್ಯ ಪ್ರಭಾವಲಯದ್ದೇ. ಹಾಗಾಗಿ ಅವರ ವರ್ಣಚಿತ್ರಗಳ ಅಂತರಂಗದಲ್ಲಿ ಈ ದೃಷ್ಟಿ, ಈ ಭಾವನೆ ಭದ್ರವಾಗಿದೆ. ಪಾಶ್ಚಾತ್ಯ



ಚಿತ್ರ ೧೦.೧ : ರಾಜಾ ರವಿವರ್ಮ

ಸಂಸ್ಕೃತಿಗೆ ಭಾರತೀಯ ದೇವ ದೇವತೆಗಳು ಹೊರಗಿನವರಾಗಿ ಕಂಡರು. ಪರಿಣಾಮವಾಗಿ ರವಿವರ್ಮನ ದೇವತಾ ಚಿತ್ರಪಟಗಳಾಗಲೀ, ಪೌರಾಣಿಕ ಪ್ರಸಂಗಗಳಾಗಲೀ ಮಾನವೀಯ ನೆಲೆಯಿಂದ ಮೇಲೇರಲೇ ಇಲ್ಲ. ನಿರ್ದಿಷ್ಟವಾದ ರೂಪದರ್ಶಿಯನ್ನಿಟ್ಟುಕೊಂಡು ಆತನಿಗೆ ಅಥವಾ ಆಕೆಗೆ ಬರೆಯಬೇಕೆಂದಿರುವ ಕಲಾವಸ್ತುವಿನ ಸೂಕ್ತವಾದ ಉಡಿಗೆ ತೊಡಿಗೆಗಳನ್ನು ತೊಡಿಸಿ ಚಿತ್ರ ರಚಿಸಿದರುವುದರಿಂದ ಆ ಚಿತ್ರಗಳು ನಾಟಕದ ದೃಶ್ಯಗಳಂತೆ ಕಾಣುತ್ತವೆ. ಇದಕ್ಕೆ ಉದಾಹರಣೆಯಾಗಿ ಇಂದ್ರಜಿತನ ವಿಜಯ (Victory of Indrjeet 1905) ಎಂಬ ಚಿತ್ರದಲ್ಲಿ ಬಲಾತ್ಕಾರವಾಗಿ ಸ್ತ್ರೀಯೊಬ್ಬಳನ್ನು ಎಳೆತರುವಾಗ ಅವಳ ಮುಖಭಾವ, ವನವಾಸದಲ್ಲಿರುವ ಸೀತೆಯ ದೇಹದಾರ್ಢ್ಯತೆ, ಹಂಸದಿಂದೊಡಗೂಡಿದ ದಮಯಂತಿ ಮುಂತಾದ ಚಿತ್ರಗಳಲ್ಲಿನ ಸ್ತ್ರೀ ಮುಖಗಳಲ್ಲಿರುವ ಸಾಮ್ಯತೆ, ಏಕರೂಪತೆ ರವಿವರ್ಮರ ಚಿತ್ರಗಳಲ್ಲಿವೆ. ಇದಕ್ಕೆ ಪ್ರಧಾನ ಕಾರಣ ಈ ಚಿತ್ರಗಳಿಗೆ ರೂಪದರ್ಶಿಯಾಗಿ ಒಬ್ಬಳೇ ಹೆಣ್ಣು ಬಳಕೆಯಾಗಿದ್ದಾಳೆ ಎಂಬುದೇ !

ಹಾಗೆಯೇ ಪಾಶ್ಚಾತ್ಯ ಶೈಲಿಯಲ್ಲಿ ಸ್ತ್ರೀಯನ್ನು ತೋರಿಸುವಾಗ ಸ್ವಲ್ಪ ಅರೆನಗ್ನವಾಗಿ ಅಥವಾ ಸ್ತನದ ಅಗ್ರಭಾಗವನ್ನು ತೋರಿಸಿ ಜನಾಕರ್ಷಿಸುವ ವಿಧಾನದಂತೆ ನಮ್ಮ ಪೌರಾಣಿಕ ಸ್ತ್ರೀಯರನ್ನು ಆ ಮಟ್ಟದಲ್ಲಿಯೇ ಚಿತ್ರಿಸಿದ್ದಾರೆ. ಇದಕ್ಕೆ ಮತ್ತೊಂದು ಉದಾಹರಣೆ ಎಂದರೆ, ಮಗುವಾಗಿರುವ ಬಾಲ ಕೃಷ್ಣನಿಗೆ ತಾಯಿ ದೇವಕಿಯು ತನ್ನ ಮೊಲೆಹಾಲನ್ನು ಕುಡಿಸುತ್ತಿರುವ ದೃಶ್ಯ. ಇದರಲ್ಲಿ ನಿಚ್ಚಳವಾಗಿ ಎರಡು ಸ್ತನಗಳನ್ನು ಬೆತ್ತಲೆಯಾಗಿ ತೋರಿಸಿದ್ದಾರೆ. ಆದರೆ ಭಾರತೀಯ ನಾರಿಯರು ಒಂದರಲ್ಲಿ ಹಾಲು ಕುಡಿಸುವಾಗ ಮತ್ತೊಂದು ಭಾಗವನ್ನು ಮುಚ್ಚುವುದು ಸ್ವಾಭಾವಿಕ. ಅಷ್ಟೇ ಅಲ್ಲ ಸ್ತನಪಾನ ಮಾಡಿಸುವಾಗ ತನ್ನ ಸೀರೆಯ ಸೆರಗಿನಿಂದ ಮಗುವಿನ ತಲೆಯನ್ನು ಸೇರಿಸಿ ಮುಚ್ಚುವ ಯತ್ನ ಮಾಡುತ್ತಾರೆ. ಆ ಸಂದರ್ಭದಲ್ಲಿ ಯಾವ ಭಾರತ ನಾರಿಯು ತನ್ನ ಮೊಲೆಯ ಪ್ರದರ್ಶನವನ್ನು ಸಹಿಸುವುದಿಲ್ಲ. ಆದರೆ ರವಿವರ್ಮರ ಈ ಚಿತ್ರ ಭಾರತೀಯ ನಾರಿಯ ಗುಣ ಲಕ್ಷಣಗಳಿಗೆ ವಿರುದ್ಧವಾದ ಚಿತ್ರಿತವಾಗಿದೆ. ಈ ಚಿತ್ರರಚನೆಗೆ ಪೀಟರ್ ಪಾಲ್ಸ್ ರೂಬೆನ್ಸ್ ಎಂಬ ಕಲಾಕಾರನ 'ತಾಯಿ-ಮಗು' ಎಂಬ ಚಿತ್ರ ಪ್ರೇರಣೆ ಒದಗಿಸಿರಬಹುದು ಎಂಬ ಅನುಮಾನವೂ ನಮಗಿದೆ (ಮೈಸೂರಿನ ಜಗನ್ಮೋಹನ ಚಿತ್ರಶಾಲೆಯಲ್ಲಿ ಇಂತಹ ಚಿತ್ರಗಳನ್ನು ಕಾಣಬಹುದು).

ದ್ರೌಪದಿ ಕೀಚಕ ಪ್ರಸಂಗದಲ್ಲಿ ರಾಣಿಯ ಆಣತಿಯಂತೆ ಕೀಚಕನಿಗೆ ಹಾಲಿನ ಬಟ್ಟಲನ್ನು ಹಿಡಿದು ಅತ್ಯಂತ ಚಿಂತಾಕ್ರಾಂತಳಾಗಿ ಒಲ್ಲದ ಮನಸ್ಸಿನಿಂದ ಹೋಗುತ್ತಿರುವ ಸೈರಂಧ್ರಿಯ ಮುಖಭಾವವು ಹೊಂದಾಣಿಕೆ ಆಗುವುದೇ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ರವಿವರ್ಮರಿಗೆ ಅತ್ಯಂತ ಪ್ರಚಾರವನ್ನು ತಂದುಕೊಟ್ಟ ವರ್ಣಚಿತ್ರಗಳಾದ ಸರಸ್ವತಿ, ಲಕ್ಷ್ಮಿಯನ್ನು, ಸ್ವಾಮಿಗಳು ಬರೆದ ಸರಸ್ವತಿ ಲಕ್ಷ್ಮಿಯರನ್ನು ತೌಲನಿಕವಾಗಿ ವಿಶ್ಲೇಷಿಸುವ ಮೂಲಕ ಈ ಚಿತ್ರಗಳಲ್ಲಿರುವ ಸಾಮ್ಯ-ವೈಷಮ್ಯಗಳನ್ನು ನಾವು ಸ್ಪಷ್ಟವಾಗಿ ಅರಿಯಬಹುದು.

ರವಿವರ್ಮರ ವೀಣಾಪಾಣಿ ಸರಸ್ವತಿಯು ನಾಲ್ಕು ಕೈಗಳನ್ನು ಪಡೆದಿದ್ದು, ಶ್ವೇತ ವಸ್ತ್ರಧಾರಿಣಿಯಾಗಿ ಬಂಡೆಯೊಂದರ ಮೇಲೆ ಕುಳಿತಿದ್ದಾಳೆ. ತಲೆಯ ಮೇಲೆ ಕಿರೀಟ, ನೀಳವಾದ ಮುಖ, ಹಿನ್ನೆಲೆಯಲ್ಲಿ ಹರಡಿರುವ ಕೂದಲು, ಮೇಲಿನ ಎರಡು ಹಸ್ತ ಅಕ್ಷಮಾಲೆ ಮತ್ತು ವಿದ್ಯೆಯ ಸಂಕೇತವಾಗಿರುವ ಓಲೆಗರಿಕಟ್ಟು, ಮುಂದಿನ ಎರಡು ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದಾಳೆ. ಇಲ್ಲಿ ಗಮನಿಸಬೇಕಾದದ್ದು ವೀಣೆಯನ್ನು ನುಡಿಸುವಂತಿದ್ದರೆ ಆ ಎರಡು ಕೈಗಳಲ್ಲಿನ ಬೆರಳುಗಳು ಚಲನಶೀಲವಾಗಿರಬೇಕು. ನುಡಿಸುವವರ ಗಮನವು ನುಡಿಸುವತ್ತ ಹರಿಸಿರಬೇಕು. ಚಿತ್ರದಲ್ಲಿ ಹಾಗಿಲ್ಲ. ಎಡಗೈ ಹಸ್ತ ಮಾತ್ರ ವೀಣೆಯನ್ನು ನುಡಿಸುವ ನೈಜತೆ ತೋರಿದ್ದಾರೆ. ಬಲಗೈ ಹಸ್ತ ತಂತಿಯನ್ನು ಮೀಟದೇ, ಅದರ ಮೇಲೆ ಬೆರಳುಗಳನ್ನು ಇಟ್ಟುಕೊಂಡಿರುವಂತೆ ಕಾಣುತ್ತದೆ. ಹಿನ್ನೆಲೆಯಲ್ಲಿನ ವೃಕ್ಷಗಳ ಸಮೂಹ, ಹರಿಯುವ ನದಿ ಇವೆಲ್ಲವೂ ಸಾಮಾನ್ಯ



ಚಿತ್ರ ೧೦.೨ : ಕರಸ್ಥಲ ನಾಗಲಿಂಗ ಸ್ವಾಮಿಗಳ ಗುರುಪೀಠಾಧ್ಯಕ್ಷರಾದ ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು

ನೆಲೆಯಲ್ಲಿರುವುದನ್ನು ಕಾಣಬಹುದೇ ಹೊರತು ವಿಶೇಷಣಗಳೇನೂ ಇಲ್ಲ. ಈ ಮಾತು ಲಕ್ಷ್ಮಿಯ ಚಿತ್ರಕ್ಕೂ ಅನ್ವಯಿಸುತ್ತದೆ. ಲಕ್ಷ್ಮಿಯ ಚಿತ್ರವಂತೂ ತೀರ ಸರಳೀಕೃತವಾದದ್ದು. ನಿಂತ ನಿಲುವು, ಮುಖ ಲಕ್ಷಣ, ಆಭರಣ, ವಸ್ತ್ರವಿನ್ಯಾಸ ಎಲ್ಲವೂ ಸಾಧಾರಣವಾಗಿವೆ. ಮೂಲ ಕೃತಿಗಳನ್ನು (ರಚನೆ ೧೮೯೬) ಬರೋಡಾದ ಮಹಾರಾಜ ಫತೇಸಿಂಗ ಮ್ಯೂಸಿಯಂನಲ್ಲಿ ಇಂದಿಗೂ ಕಾಣಬಹುದು.

ಸ್ವಾಮಿಗಳು ಕರಸ್ಥಲ ನಾಗಲಿಂಗ ಸ್ವಾಮಿಗಳ ಗುರುಪೀಠಾಧ್ಯಕ್ಷರು. ಸಂನ್ಯಾಸಿಗಳು. ಹೀಗಾಗಿ ಕಿರೀಟಧಾರಿಗಳೂ ಆಗಿದ್ದರು. ರವಿವರ್ಮ ರಾಜವಂಶದವರಾದರೂ ಕಿರೀಟ ಧರಿಸಿದವರಲ್ಲ. ರವಿವರ್ಮ ಶ್ರೀಮಂತರು. ಸ್ವಾಮಿಗಳು ಮಧ್ಯಮವರ್ಗದವರು. ಸ್ವಾಮಿಗಳು ಬರೆದಿರುವ ಲಕ್ಷ್ಮಿ ಸರಸ್ವತಿಗಳೆರಡನ್ನು ಮೈಸೂರು ಅರಮನೆಯ ದರ್ಬಾರ್ ಹಾಲಿನಲ್ಲಿ ಇಂದಿಗೂ ಕಾಣಬಹುದು (ರಚನೆ ೧೯೪೨). ಇದಲ್ಲದೆ ರಾಜರಾಜೇಶ್ವರಿ, ಭುವನೇಶ್ವರಿ, ನವದುರ್ಗಾದೇವಿ, ಗಾಯತ್ರಿ, ಕಾಳಿಕಾದೇವಿ, ಚಾಮುಂಡೇಶ್ವರಿ ಚಿತ್ರಗಳನ್ನು ಸಹ ಕಾಣಬಹುದು. ಸ್ವಾಮಿಗಳು ಬರೆದಿರುವ ಪ್ರತಿಯೊಂದು ಚಿತ್ರದಲ್ಲಿಯೂ ಆಯಾಯ ದೇವತೆಗಳ ಸ್ವರೂಪ, ಲಕ್ಷಣಗಳು, ಧ್ಯಾನ ಶ್ಲೋಕದಲ್ಲಿರುವಂತೆ ನಿರೂಪಿತವಾಗಿವೆ. ಪುರಾಣ ದೇವತೆಗಳ ಚಿತ್ರ ರಚಿಸಲು ಅಥವಾ ಶಿಲ್ಪ ಕೆತ್ತನೆ ಮಾಡಲು ಧ್ಯಾನ ಶ್ಲೋಕಗಳನ್ನು ಅನುಸರಿಸಿ ರೂಪಿಸಬೇಕು. ಶಿಲ್ಪಶಾಸ್ತ್ರದಲ್ಲಿ ದೇವತೆಗಳನ್ನು ತಾಲಮಾನವನ್ನು ಅನುಸರಿಸಿ ರೂಪಿಸಬೇಕು. ಲಕ್ಷ್ಮಿ ಮತ್ತು ಸರಸ್ವತಿಯರನ್ನು ಮಧ್ಯಮ ದಶತಾಲವನ್ನು ಅನುಸರಿಸಿ ಲೇಖಿಸಬೇಕು. ಅವರ ಕೈ ಮತ್ತು ಕುಳಿತಿರುವ ನಿಂತಿರುವ ಭಂಗಿಯು ಪ್ರತಿಮಾಧ್ಯಾನಶ್ಲೋಕದ ಅನುಸಾರವೇ ಇರಬೇಕು. ಹಸ್ತಗಳಲ್ಲಿರಬೇಕಾದ ಆಯುಧಗಳನ್ನು ಶ್ಲೋಕವೇ ಹೇಳಿರುತ್ತದೆ. ಸಾಂಪ್ರದಾಯಿಕ ಪರಂಪರೆಯ ಅನುಸಾರವೇ ಆಭರಣಗಳು, ಕಿರೀಟ, ಕೇಶವಿನ್ಯಾಸ ಇತ್ಯಾದಿಗಳೂ ಇರಬೇಕು. ನಿಜಕ್ಕೂ ಶಾಸ್ತ್ರ ಹೇಳುವುದು ಪ್ರತಿಮೆಯ ಅಳತೆಗಳೇ ಬಹುಮುಖ್ಯ ಪೂಜಾರ್ಹವಾದ ಪ್ರತಿಮೆ (ಚಿತ್ರ)ಯಲ್ಲಿ ಅಳತೆಗಳು ಸರಿಯಾಗಿ ಇಲ್ಲದಿದ್ದರೆ ಅದು ಪೂಜಾರ್ಹವಲ್ಲ. ಅದನ್ನು ಪೂಜೆ ಮಾಡುವುದರಿಂದ ಫಲವೂ ಲಭಿಸುವುದಿಲ್ಲ. ಆದ್ದರಿಂದ ರಾಜಾ ರವಿವರ್ಮ ಅವರ ಚಿತ್ರಗಳು ಮಾನವ ದೇಹಗಳ ಪ್ರತಿಕೃತಿಗಳಾಗಿದ್ದು 'ದೇವ' ಎಂಬುದರ ಸೀಮೆಗೆ ಬರುವ ಚಿತ್ರಗಳೇ ಆಗಿರಲಿಲ್ಲ. ಅದರಲ್ಲಿ ಇತರ ಯಾವುದೇ ಶಾಸ್ತ್ರೀಯ ಅಂಶವೂ ಇರಲಿಲ್ಲ. ಆದ್ದರಿಂದ ಫಲದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿದ್ಧಲಿಂಗ ಸ್ವಾಮಿಗಳ ಪ್ರತಿಮೆಗಳಲ್ಲಿ (ವರ್ಣಚಿತ್ರಗಳಲ್ಲಿ) ಅಶಾಸ್ತ್ರೀಯವಾದ ಯಾವುದೇ ಒಂದು ಅಂಶವು ಇಲ್ಲ. ಅವು ಪರಿಪೂರ್ಣವಾಗಿ ಸಾಂಪ್ರದಾಯಿಕವಾದ ಶಾಸ್ತ್ರೀಯ ಚಿತ್ರಗಳಾಗಿದ್ದು ಶಾಸ್ತ್ರಾನುಸಾರವೇ ಪೂಜಾರ್ಹವಾಗಿವೆ. ಆದ್ದರಿಂದ ಆ ಚಿತ್ರ ಶಿಲ್ಪಗಳನ್ನು ಪೂಜಿಸುವುದರಿಂದ ಶಾಸ್ತ್ರ ನಿಗದಿಗೊಳಿಸಿರುವ ಫಲಗಳನ್ನು ನಿರೀಕ್ಷಿಸಬಹುದು.

ಶ್ವೇತ ಶುಭ್ರ ವಸನ ಧಾರಿಯೂ, ಹಂಸ ವಾಹನೆಯಾಗಿ (ಸರಸ್ವತಿ), ಶ್ರೀಮಂತಿಕೆಯ ಚಿನ್ನ ದುಡಿಗೆಯ ಸಂಕೇತವಾಗಿ ಹಳದಿ (ಲಕ್ಷ್ಮಿ)ಯನ್ನು ವೀರ್ಯದ ಸಂಕೇತವಾಗಿ ಕೆಂಪುವರ್ಣದುಡಿಗೆಯನ್ನು (ಚಾಮುಂಡೇಶ್ವರಿ) ರಚಿಸುವುದು ನಮ್ಮ ಭಾರತೀಯ ಪುರಾಣದ ಪರಿಕಲ್ಪನೆಗೆ ತಕ್ಕುದಾಗಿರುತ್ತದೆ. ಈ ವಿವರಗಳು ಪ್ರತಿಮಾ ಧ್ಯಾನಗಳಲ್ಲೂ ಇವೆ. ಇಂತಹ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅಪ್ಪಟ ಶಿಲ್ಪಶಾಸ್ತ್ರದ ನಿಯಮಗಳ ಅನುಗುಣವಾಗಿ ಬರೆದಿರುವ ಚಿತ್ರಪಟಗಳನ್ನು ಮಾತ್ರವೇ ಸ್ವಾಮಿಗಳು ರಚಿಸಿದ್ದಾರೆ.

ವಿಮರ್ಶಿಸಬಹುದಾದ ಇನ್ನೊಂದು ಚಿತ್ರವೆಂದರೆ ಶಿವನ ಸಂಬಂಧಿಯಾದ 'ಶಿವ ಪಂಚಾಯತನ' ಎಂಬ ಚಿತ್ರಕ್ಕೂ ರವಿವರ್ಮನ ಶಿವಪಾರ್ವತಿ ಚಿತ್ರಕ್ಕೂ ಹೋಲಿಸಿದರೆ ಸಾಕಷ್ಟು ಅಂತರಗಳಿವೆ. ವಿಷಯ ಒಂದೇ ಆದರೂ ನಿರೂಪಣೆಯಲ್ಲಿ ರವಿವರ್ಮರಿಗಿಂತ ಸ್ವಾಮಿಗಳ ಚಿತ್ರ ಮೇಲುಗೈ ಸಾಧಿಸುತ್ತದೆ. ರವಿವರ್ಮನ ಶಿವ ನಾಟಕರಂಗದಲ್ಲಿ ಕಾಣುವ ಭರ್ಜರಿ ಮೀಸೆಯುಳ್ಳ ನಾಯಕ ನಟನಂತೆಯೂ, ಪಾರ್ವತಿಯು ನಟನಿಗೊಪ್ಪುವ

ನಟಿಯಂತೆಯೂ ಚಿತ್ರಿತವಾಗಿದೆ. ಇದೇ ತೆರನಾದ ಆಕೃತಿಯನ್ನು ಗಂಗಾವತರಣ, ತಾಂಡವ ನೃತ್ಯ ಚಿತ್ರಗಳಲ್ಲಿ ಸಹ ರವಿವರ್ಮ ಚಿತ್ರಿಸಿದ್ದಾರೆ.

ಪೌರಾಣಿಕ ದೃಷ್ಟಿಯಿಂದ ಅಥವಾ ತಾತ್ವಿಕ ದೃಷ್ಟಿಯಿಂದ ವಿವೇಚಿಸಿದಾಗ ಶಿವ ಎಂದರೆ ಶಾಂತ, ನಿರಾಕಾರ, ನಿರ್ಭಾವವುಳ್ಳವನು ಎಂಬ ಭಾವನೆ ಮತ್ತು ಸಂಪೂಜ್ಯತೆ ಕಾಣುವಂತಾಗಬೇಕು. ಆದರೆ ರವಿವರ್ಮರ ಚಿತ್ರಗಳಲ್ಲಿ ಆ ಭಾವನೆ ಬರುವುದೇ ಇಲ್ಲ. ಆದರೆ ಸಿದ್ಧಲಿಂಗಸ್ವಾಮಿಗಳು ಶಿವಪಂಚಾಯತನ ಚಿತ್ರದಲ್ಲಿ ಇಡೀ ಶಿವನ ಒಡ್ಡೋಲಗದ ಚಿತ್ರವನ್ನು ಶಿವನ ಸಂಸಾರವನ್ನು ಚಿತ್ರಿಸಿದ್ದಾರೆ. ಪಾರ್ವತಿ ಸಹಿತ ಪರಮೇಶ್ವರ, ಎಡಬಲಗಳಲ್ಲಿ ಮಕ್ಕಳಾದ ಗಣಪ ಮತ್ತು ಷಣ್ಮುಖ, ಸುತ್ತಲೂ ಶಿವನನ್ನಾಶ್ರಯಿಸಿರುವ ಋಷಿಗಳು, ಗಣಗಳು, ಜೊತೆಗೆ ಪಾದದ ಬಳಿ ಕುಳಿತಿರುವ ನಂದಿಯನ್ನು ಕಾಣಬಹುದು. ಇವರ ಇತರ ಪ್ರಸಿದ್ಧವಾದ ಚಿತ್ರಗಳಾದ ಪಂಚವಕ್ತ್ರೇಶ್ವರ, ಭಗೀರಥನ ತಪಸ್ಸು, ಶ್ರೀಮದ್ ರೇಣುಕಾಚಾರ್ಯ ಅವುಗಳ ಭಕ್ತಿಯನ್ನುಕ್ಕಿಸುವ ಪಟಚಿತ್ರಗಳು.

ಯಾವುದು ಕೇವಲ ಸೌಂದರ್ಯ ಪಿಪಾಸೆಯನ್ನು ಹಿಂಗಿಸುವುದೋ ಅದು ಅಧಮ ಕಲೆ. ಯಾವುದು ಜ್ಞಾನ ಪಿಪಾಸೆಯನ್ನು ಹಿಂಗಿಸುವುದೋ ಅದು ಮಧ್ಯಮ ಕಲೆ. ಯಾವುದು ಉದ್ಬೋಧವನ್ನುಂಟುಮಾಡಿ ಮನಸ್ಸನ್ನು ಭಕ್ತಿ ಭಾವದೆಡೆಗೆ ಕೊಂಡೊಯ್ಯುತ್ತದೋ ಅದು ಉತ್ತಮ ಕಲೆಯೆಂದು ಅ.ನ.ಕೃ. ಅವರು ಅಭಿಪ್ರಾಯಪಟ್ಟಿರುವುದರಲ್ಲಿ ಸತ್ಯವಿದೆ. ಆದರೆ ಅವರೇಕೆ ಸಿದ್ಧಲಿಂಗ ಸ್ವಾಮಿಗಳ ಚಿತ್ರಗಳನ್ನು ಗಮನಿಸಲಿಲ್ಲವೋ ಗೊತ್ತಿಲ್ಲ.

ರಾಜಾರವಿವರ್ಮ ಅವರು ಚಿತ್ರ ಪರಂಪರೆಯನ್ನು ಕಾಪಾಡಲು ಪ್ರಯತ್ನಿಸಿದವರಲ್ಲ. ಸಿದ್ದಲಿಂಗಸ್ವಾಮಿಗಳು ಹೊಯ್ಸಳ ಶೈಲಿಯನ್ನು, ಮೈಸೂರಿನ ಪರಂಪರೆಯನ್ನು ಎತ್ತಿ ಹಿಡಿದ ಸಾಂಪ್ರದಾಯಿಕ ವರ್ಣ ಚಿತ್ರಕಾರರು. ಆದ್ದರಿಂದ ರವಿವರ್ಮರ ಚಿತ್ರಗಳ ಮೌಲ್ಯವೇ ಬೇರೆ ಎಂಬುದನ್ನು ನಾವು ಗುರ್ತಿಸುವ ಅವಶ್ಯಕತೆ ಇದೆ. ಆದರೆ ಆ ರೀತಿಯ ಅಂತರವನ್ನು ಗುರ್ತಿಸಬಲ್ಲ ದೃಷ್ಟಿ ಮತ್ತು ತಿಳಿವು ನಮ್ಮ ಕಲಾವಿಮರ್ಶಕರಲ್ಲಿ ಇಂದಿಗೂ ಇಲ್ಲ.

ಅ.ನ.ಕೃ. ಅವರು ರವಿವರ್ಮ ಮತ್ತು ಬಂಗಾಳಿ ಕಲಾವಿದರಾದ ನಂದಾಲಾಲ್ ಬಸು, ದೇವಿಕಪ್ರಸಾದ್ ರಾಯ್ ಚೌದರಿ, ಅಸಿತಕುಮಾರ್ ಹಲ್ದಾರ್, ದ್ವಿಜೇಂದ್ರನಾಥ ಮಜುಂದಾರ್ ರವರ ಕೃತಿಗಳ ಸಾಮ್ಯ ಹೋಲಿಕೆಯನ್ನು ಮಾಡಿ ವಿಶ್ಲೇಷಿಸಿದ್ದಾರೆ. ಈ ಕಲಾವಿದರೊಂದಿಗೆ ಸಿದ್ಧಲಿಂಗಸ್ವಾಮಿಗಳ ಕೃತಿಗಳನ್ನು ಇರಿಸಿ ಹೋಲಿಸಬಹುದಾಗಿತ್ತು. ಆದರೆ ಈ ಕೆಲಸವನ್ನು ಇದುವರೆವಿಗೂ ಯಾವ ಕಲಾವಿಮರ್ಶಕರೂ ಮಾಡಿಲ್ಲ. ಇವುಗಳಲ್ಲಿ ಭಕ್ತಿರಸವೇ ಪ್ರಧಾನವಾಗಿ ಮೈವೆತ್ತಿ ಬಂದಿರುವುದುನ್ನು ಸ್ಪಷ್ಟವಾಗಿ ಯಾರಾದರೂ ಇಂದೂ ಗುರುತಿಸಬಹುದು.

ರಾಜಾ ರವಿವರ್ಮರ ವರ್ಣಚಿತ್ರಗಳು. ಇಂಗ್ಲೆಂಡಿನ ವ್ಯಾಮೋಹದ ಭ್ರಾಂತಿ ಕರ್ನಾಟಕ ಜನರನ್ನು ಆಕರ್ಷಿಸಿ ಹಿಡಿದಾಗ ಅವರನ್ನು ಈ ಭ್ರಾಂತಿಯಿಂದ ದೂರಮಾಡಿ ಭಾರತೀಯ ವರ್ಣಚಿತ್ರಗಳ ಸತ್ತ್ವವನ್ನು ತೋರಿ ಅವರನ್ನು ಹಿಡಿದು ನಿಲ್ಲಿಸಿದ್ದು ಸಿದ್ಧಲಿಂಗ ಸ್ವಾಮಿಗಳ ಶಾಸ್ತ್ರೀಯ ವರ್ಣಚಿತ್ರಗಳೇ. ರವಿವರ್ಮರ ವರ್ಣ ವಿನ್ಯಾಸಕ್ಕೆ ಸಮರ್ಥ ಉತ್ತರವೋ ಎಂಬಂತೆ ಜನಪ್ರಿಯತೆಯನ್ನು ಗಳಿಸಿದವರು ಸಿದ್ಧಲಿಂಗ ಸ್ವಾಮಿಗಳೇ. ಸ್ವಾಮಿಗಳ ನಂತರ ಅದೇ ಸ್ಥರದಲ್ಲಿ ಕ್ಯಾಲೆಂಡರ್ ಚಿತ್ರಗಳ ಜನಪ್ರಿಯತೆಯು ಶಿವಕಾಶಿ ಮತ್ತು ಮುಂಬೈ ಕಲಾವಿದರ ಪಾಲಾಗಿರುವುದನ್ನು ಕನ್ನಡದ ಕಲಾವಿಮರ್ಶಕರು ಇಂದಿಗೂ ಹೇಳಿಯೇ ಇಲ್ಲ. ಈ ಬಗ್ಗೆ ಅವರು ಸಂಪೂರ್ಣವಾಗಿ ಮೌನ ವಹಿಸಿದ್ದಾರೆ!

ಕೆ. ವೆಂಕಟಪ್ಪ ಮತ್ತು ಸಿದ್ಧಲಿಂಗಸ್ವಾಮಿಗಳು

ರಾಜಾರವಿವರ್ಮ ಸ್ವಾಮಿಗಳ ಹಿರಿಯ ಸಮಕಾಲೀನರಾಗಿದ್ದು, ಇವರೀರ್ವರ ಕಲಾಸಾಧನೆಯ ಸಮೀಕ್ಷೆಯನ್ನು ವಿಶ್ಲೇಷಿಸಿದಂತೆ, ಸ್ವಾಮಿಗಳ ಸಮಕಾಲೀನರೇ ಆದ ಕೆ. ವೆಂಕಟಪ್ಪ ಅವರ ಸಾಧನೆಯನ್ನು ತೌಲನಿಕ ಅಧ್ಯಯನಕ್ಕೆ ವಿಶೇಷವಾದ ಗ್ರಾಸವನ್ನು ಒದಗಿಸುತ್ತದೆ.



ಚಿತ್ರ ೧೦. ೩ : ವರ್ಣಶಿಲ್ಪಿ ಕೆ. ವೆಂಕಟಪ್ಪ

ಕರ್ನಾಟಕದ ಮಟ್ಟಿಗೆ ಕಲಾವಿದರ ಮತ್ತು ಕಲಾ ವಿಮರ್ಶಕರ ದೃಷ್ಟಿ ಕಣ್‌ಪಟ್ಟಿ ಹಾಕಿದ ಕುದುರೆಯ ರೀತಿ ಇದೆ. ಒಂದೇ ಕಾಲದಲ್ಲಿ, ಒಂದೇ ಊರಿನಲ್ಲಿ, ಒಬ್ಬರ ಆಶ್ರಯದಲ್ಲೇ ಬೆಳೆದವರೀರ್ವರಲ್ಲಿ ಒಬ್ಬರ ಬಗ್ಗೆ ಬರೆದು, ಹೊಗಳಿ, ಆಕಾಶಕ್ಕೇರಿಸುವುದು, ಮತ್ತೊಬ್ಬರ ಬಗ್ಗೆ ಒಂದು ವಾಕ್ಯವೂ ಬರೆಯದೆ ಸಂಪೂರ್ಣವಾಗಿ ವಿಸ್ಮರಿಸುವುದು ಈ ವಿಮರ್ಶಕರಲ್ಲಿ ಕಾಣಿಸುವ ವಿಸ್ಮಯಕಾರಿ ಗುಣ.

ವರ್ಣಶಿಲ್ಪಿ ವೆಂಕಟಪ್ಪನವರು ಮತ್ತು ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು ಇಬ್ಬರೂ ಮೈಸೂರಿನಲ್ಲಿ ಅರಮನೆಯ ಕೆಲಸಗಳನ್ನು ಮಾಡುತ್ತಿದ್ದವರೇ. ವೆಂಕಟಪ್ಪನವರ ಹಿಂದಿನವರು ಚಿತ್ರದುರ್ಗದ ಚಿತ್ರಗಾರರ ಮನೆತನದವರು. ಚಿತ್ರ ರಚಿಸಿಕೊಡುವುದು ಅವರ ಕುಲಕಸಬು. ಸೋಮವಂಶ ಆರ್ಯ ಕ್ಷತ್ರಿಯ ಜನಾಂಗದವರು. ಮನೆ ಮಾತು ತೆಲುಗು. ಗಂಡಸರ ಹೆಸರಿನ ಮುಂದೆ ರಾಜು ಎಂಬ ಪದ ಸೇರಿಸಿಕೊಳ್ಳುವ ವಾಡಿಕೆ. ಅವರ ಸಂಬಂಧಿಕರೇ ಆದ ವೈ. ನಾಗರಾಜು, ವೈ. ಸುಬ್ರಮಣ್ಯರಾಜು, ಶಂಕರರಾಜು ಇತ್ಯಾದಿ ವರ್ಣಚಿತ್ರಕಾರರು ಮೈಸೂರಿನಲ್ಲಿದ್ದರು. ಆದರೆ ವೆಂಕಟಪ್ಪನವರ ತಂದೆ ಕೃಷ್ಣಪ್ಪನವರ ಹೆಸರಿನ ಜೊತೆಗೆ ರಾಜು ಎಂಬ ಪದ ಸೇರ್ಪಡೆಯಾಗಿರಲಿಲ್ಲ. ಹೈದರಾಲಿ ಚಿತ್ರದುರ್ಗವನ್ನಾಕ್ರಮಿಸಿದಾಗ ಈ ಚಿತ್ರಗಾರರು ಮೈಸೂರಿಗೆ ವಲಸೆ ಬಂದು ಶ್ರೀರಂಗಪಟ್ಟಣದ ನಿಮಿಷಾಂಬಾ ದೇವಾಲಯದ ಸುತ್ತಮುತ್ತಲೂ ನೆಲೆನಿಂತು, ಟಿಪ್ಪು ಮರಣಾನಂತರ ಮೈಸೂರು ಅರಸರ ಆಳ್ವಿಕೆ ಆರಂಭವಾದಾಗ ಮೈಸೂರಿನತ್ತ ತಿರುಗಿ ಮಹಾರಾಜರ ಆಶ್ರಯವನ್ನು ಪಡೆದರು.

ಸಿದ್ಧಲಿಂಗಸ್ವಾಮಿಗಳ ಮೂಲದವರು ವಿಜಯನಗರದ ಕಡೆಯವರು. ವಿಶ್ವಕರ್ಮ ಬ್ರಾಹ್ಮಣರು. ಸ್ಮಾರ್ತಾಚಾರದವರು. ಶಿವಾರಾಧಕರು, ಮನೆ ಮಾತು ಕನ್ನಡ. ಕೃಷ್ಣದೇವರಾಯರ ಆಳ್ವಿಕೆ ಅಂತ್ಯಗೊಂಡ ತರುವಾಯ ಮೈಸೂರು ಕಡೆಗೆ ಪ್ರಯಾಣ. ಜನಸಾಮಾನ್ಯರಿಗೆ ಬೇಕಾದ ಚಿನ್ನ, ಬೆಳ್ಳಿ ಆಭರಣ ತಯಾರಿಕೆ, ದೇವತಾವಿಗ್ರಹ ಮಾಡುವುದು ಇವರ ಮನೆತನದ ಕೆಲಸ. ಮೈಸೂರಿನ ಸುತ್ತಮುತ್ತಲಿನ ಚಾಮರಾಜನಗರ, ಕೊಳ್ಳೇಗಾಲ, ಮಂಡ್ಯ ಮತ್ತಿತರೆಡೆಗಳಲ್ಲಿ ವಾಸ. ಇವರು ಕರಸ್ಥಲದ ನಾಗಲಿಂಗಸ್ವಾಮಿಗಳ ಪೀಠದ ಶಿಷ್ಯಪರಂಪರೆಯವರು. ಸ್ವಾಮಿಗಳು ಕೊಳ್ಳೇಗಾಲ ತಮ್ಮ ಊರೆಂಬುದಾಗಿ ಗುರ್ತಿಸಿಕೊಂಡಿದ್ದರು. ಕೊಳ್ಳೇಗಾಲದಲ್ಲಿ ಸ್ವಾಮಿಗಳು ಜನಿಸಿದ್ದು ೧೮೮೫ರಲ್ಲಿ.

ವೆಂಕಟಪ್ಪನವರು ಜನಿಸಿದ್ದು ಮೈಸೂರಿನಲ್ಲಿ (೧೮೮೬) . ಬಹುತೇಕ ಮರದಿಂದಲೇ ಮಾಡಿದ್ದ ಅರಮನೆಯ ಕಟ್ಟಡವು ಅಗ್ನಿಗೆ ಆಹುತಿ ಆದಕಾರಣ ಹೊಸ ಅರಮನೆ ನಿರ್ಮಾಣ. ಅದರ ಶೃಂಗಾರದ ಸಲುವಾಗಿ ವೆಂಕಟಪ್ಪನವರ ತಂದೆ ಕೃಷ್ಣಪ್ಪನವರೂ ಸೇರಿದಂತೆ ಹಲವು ಕಲಾವಿದರು, ಶಿಲ್ಪಿಗಳು ಕೆಲಸ ಮಾಡುತ್ತಿದ್ದರು. ಆ ನಿತ್ಯದ ನೋಟ, ಬಾಲಕ ವೆಂಕಟಪ್ಪನ ಮೇಲೆ ಪ್ರಭಾವ ಬೀರಿತು. ಕಲಿಯುವ ಉತ್ಕಟ ಇಚ್ಛೆ ಅಂಕುರಿಸಿತು. ಅಂದಿನ ಕೈಗಾರಿಕಾ ತರಬೇತಿ ಕೇಂದ್ರ ಮೈಸೂರಿನ ನಜರಬಾದ್‌ನಲ್ಲಿ ಅರಮನೆಯ ಆಡಳಿತದಿಂದ ಆರಂಭವಾಗಿತ್ತು. ಮರಗೆಲಸ, ಕಲ್ಗೆಲಸ, ಲೋಹಗಳ ಕೆಲಸ ಕಲಿಯುವ ಶಿಕ್ಷಣವಿದ್ದರೂ, ಸರ್ಕಾರಿ ಪರೀಕ್ಷೆಗೆ ಕೂರಬೇಕಾದರೆ ಮದ್ರಾಸಿಗೇ ಹೋಗಬೇಕಾಗಿತ್ತು. ವೆಂಕಟಪ್ಪನವರು ಅಲ್ಲಿ ಕಲಿತು, ಮದ್ರಾಸಲ್ಲಿ ಪರೀಕ್ಷೆಯನ್ನು ಪೂರೈಸಿಕೊಂಡರು. ಉನ್ನತ ಚಿತ್ರಕಲಾ ಪರೀಕ್ಷೆಗೆ ಕೂರಲು ಆ ಕಾಲದಲ್ಲಿ ಪ್ರಮುಖವಾದ ಎರಡು ಸ್ಥಳಗಳೆಂದರೆ ಮುಂಬೈನ ಜೆ.ಜೆ. ಕಲಾಶಾಲೆ ಮತ್ತು ಕಲ್ಕತ್ತದ ಸರ್ಕಾರಿ ಕಲಾಶಾಲೆ (ಶಾಂತಿನಿಕೇತನ). ಇವುಗಳಿಗೆ ಹೋಗಬೇಕಾದರೆ ಮೈಸೂರು ಸರ್ಕಾರದ ವಿದ್ಯಾರ್ಥಿವೇತನದ ಅಗತ್ಯವಿತ್ತು. ವೆಂಕಟಪ್ಪನವರ ತಂದೆ ಅರಮನೆ ಕಲಾವಿದರಾದುದರಿಂದ ಶಿಫಾರಸ್ಸು, ವಿದ್ಯಾರ್ಥಿವೇತನ ಪಡೆಯಲು ಸಹಕಾರಿಯಾಯಿತು. ಮೇಲಾಗಿ ಅಂದಿನ

ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಹುಟ್ಟಿದ್ದು ಸಹ ೧೮೮೪ರಲ್ಲಿಯೇ. ಎರಡು ವರ್ಷ ಕಿರಿಯನಾದ ವೆಂಕಟಪ್ಪನವರಲ್ಲಿ ಬಾಲ್ಯದ ಸಲಿಗೆ, ಸ್ನೇಹವು ಇತ್ತು. ಆದಕಾರಣ, ಸಹಜವಾಗಿ ಎರಡು ವರ್ಷದ ಶಿಕ್ಷಣವಾದರೂ ಏಳೂವರೆ ವರ್ಷ (೧೯೦೯-೧೯೧೬) ಅಭ್ಯಸಿಸಲು ವಿದ್ಯಾರ್ಥಿವೇತನ ಸಹ ದೊರಕಿತು. ಅವನೀಂದ್ರನಾಥ ಠಾಗೂರ್‌ರಂತಹ ಗುರುಗಳು ದೊರಕಿದರು. ನಂದಲಾಲ್ ಬಸು (ಕಲ್ಕತ್ತಾ), ಅಶಿತಕುಮಾರ್ ಹಲ್ದಾರ್ (ಲಕ್ನೊ), ಶೈಲೇಂದ್ರನಾಥ ದೇ (ಜಯಪುರ), ಪ್ರಮೋದಕುಮಾರ ಚಟ್ಟೋಪಾಧ್ಯಾಯ (ಆಂಧ್ರ) ಇವರೆಲ್ಲರೂ ವೆಂಕಟಪ್ಪನವರ ಹಿರಿಯ-ಕಿರಿಯ ಸಮಕಾಲೀನರಾಗಿ ಗುರು ಅವನೀಂದ್ರರ ಮತ್ತು ಕಲಿತ ಶಾಲೆಯ ಹೆಸರನ್ನು ಪಸರಿಸಿದವರಲ್ಲಿ ಮುಖ್ಯರಾದವರು.



ಚಿತ್ರ ೧೦. ೪ : ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು ಮಹಿಷಮರ್ದಿನಿ ಶಿಲ್ಪದೊಂದಿಗೆ

ಸಿದ್ಧಲಿಂಗಸ್ವಾಮಿಗಳ ಜನನ (೧೮೮೫) ಕೊಳ್ಳೇಗಾಲದಲ್ಲಿ. ವಿದ್ಯಾಕಲಿಕೆಗೆ ಯಾವ ರಾಜರ ಆಶ್ರಯವೂ ಇಲ್ಲ. ಕುಲಕಸುಬು ಶಿಲ್ಪ. ವಿಗ್ರಹಗಳ ಕೆತ್ತನೆ ಇವುಗಳನ್ನೇ ನಿತ್ಯ ಮಾಡುವುದನ್ನೇ ನೋಡಿ ತಂದೆ ಮತ್ತು ಗುರುಗಳ ಪದತಲದಲ್ಲಿ ಕಲಿತದ್ದು. ಜೊತೆಗೆ ಸಂಸ್ಕೃತಾಭ್ಯಾಸ, ಸ್ವಂತ ಪರಿಶ್ರಮ. ಆಗಮಶಾಸ್ತ್ರ ವಿಶಾರದ ಪರೀಕ್ಷೆಗಳಲ್ಲಿ ಉತ್ತೀರ್ಣ. ಮಂತ್ರ-ತಂತ್ರ-ರಸವಿದ್ಯೆಗಳು ಕರತಲಾಮಲಕ. ತಮ್ಮ ಹದಿನೆಂಟನೇ ವಯಸ್ಸಿಗೆ ತಾವು ವಾಸಿಸುತ್ತಿದ್ದ ಸ್ಥಳಕ್ಕೆ ಹತ್ತಿರವಾದ ಬೆಟ್ಟದ ಗುಹೆಯೊಳಗೆ ಹೋಗಿ ಧ್ಯಾನಸಕ್ತರಾಗುತ್ತಿದ್ದರು. ಅದರ ನೆನಪಿಗಾಗಿ ದಕ್ಷಿಣಾಮೂರ್ತಿಯ ಶಿಲ್ಪ ಮತ್ತು ನಂದೀಶ್ವರ ಶಿಲ್ಪವನ್ನು ಮಾಡಿ ಪ್ರತೀಷ್ಠಿಸಿದ್ದಾರೆ. ಈಗಲೂ ಕೃತಕ ಬೆಳಕನ್ನು ಒಡ್ಡುವ ಮೂಲಕ (ಹಣತೆ, ಮೇಣದ ಬತ್ತಿ) ಈ ಶಿಲ್ಪಗಳನ್ನು ನೋಡಬಹುದಾಗಿದೆ. ವಯಸ್ಸಿನ ಪ್ರಬುದ್ಧತೆ ಹದಿನೆಂಟು ವರ್ಷ ಅನ್ನುವುದಕ್ಕಿಂತ ಮಿಗಿಲಾಗಿ ಕಲಾ ಪ್ರಬುದ್ಧತೆ ಆ ಶಿಲ್ಪಗಳಲ್ಲಿ ಅಡಗಿದೆ. ಚಿತ್ರ, ಶಿಲ್ಪ, ಶಾಸ್ತ್ರ ಪಾಂಡಿತ್ಯ ಮೂರು ಮುಪ್ಪುರಿಗೊಂಡು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂಬ ಅಭಿಪ್ರಾಯ ಹೊಂದಿದ್ದರು. ನಂಜುಂಡ ಶಿವಯೋಗಿಗಳು ಎಂಬ ಮಹಾ ತಪಸ್ವಿಗಳು ಇವರ ಗುರುಗಳು. ಅವರ ಮಾರ್ಗದರ್ಶನದಿಂದ ಮೈಸೂರಿಗೆ ಬಂದು ನೆಲಸಿ, ಚಿತ್ರ ಬರೆದುಕೊಡುವ, ದೇವಾಲಯಗಳಿಗೆ ಶಿಲ್ಪಗಳನ್ನು ಮಾಡಿಕೊಡುವ ಕಾಯಕ ಮಾಡುತ್ತಿದ್ದರು. ಅರಮನೆಯ ನಾಟಕ ಗೃಹಕ್ಕೆ ಪರದೆಯನ್ನು ಬರೆಯಬೇಕಾಗಿದ್ದು ಅರಮನೆ ಅಧಿಕಾರಿಗಳು ಸ್ವಾಮಿಗಳನ್ನು ಸಂಪರ್ಕಿಸಿದರು. ಅಧಿಕಾರಿಗಳು ನಿರೀಕ್ಷಿಸಿದಕ್ಕಿಂತಲೂ ಉತ್ತಮ ಕಲಾರಚನೆ ಮಾಡಿಕೊಟ್ಟುದರ ಫಲವಾಗಿ, ಮಹಾರಾಜರ ಕೃಪೆಗೆ ಪಾತ್ರರಾಗಿ ಅರಮನೆ ಕಲಾವಿದರಾಗುವ ಸುಯೋಗ ಒದಗಿತು. ಆ ವೇಳೆಗಾಗಲೇ ಸ್ವಾಮಿಗಳು ಬರೆದ ಕೆಲವು ಚಿತ್ರಗಳು ಕ್ಯಾಲೆಂಡರ್‌ಗಳಾಗಿ ಜನಪ್ರಿಯತೆಗಳಿಸಿದ್ದವು. ರಾಜ ರವಿವರ್ಮನ ಕ್ಯಾಲೆಂಡರ್ ಚಿತ್ರಗಳಿಗಿಂತ ಉತ್ತಮವೆಂದು, ಶಾಸ್ತ್ರೀಯ ರೀತಿಯಲ್ಲಿ ಬರೆದುದೆಂಬುದನ್ನು ಜನರ ಮನಸೂರೆಗೊಂಡು ಲಕ್ಷಾಂತರ ಜನರ ಮನೆಗಳಲ್ಲಿ ರಾರಾಜಿಸುವಂತಾಗಿದ್ದವು.

ವೆಂಕಟಪ್ಪನವರು ಕಲ್ಕತ್ತಾ ಸರ್ಕಾರಿ ಕಲಾಶಾಲೆಗೆ ಸೇರಿದ (೧೯೦೯) ನಂತರ ಸಾಧನೆ ಅನ್ನುವುದಕ್ಕಿಂತ ಕಲಾ ಕಲಿಕೆಯಲ್ಲಿ ಪ್ರಮುಖವಾದದ್ದು ಅಜಂತಾ, ಎಲ್ಲೋರಗಳಲ್ಲಿನ ಚಿತ್ರಗಳನ್ನು ಪ್ರತಿಕೃತಿ ಮಾಡುವುದು. ನಂತರ ಇವರ ಗುರು ಅವನೀಂದ್ರನಾಥ ಠಾಗೂರರವರ ಅಣ್ಣ ಗಗನೇಂದ್ರನಾಥ ಠಾಗೂರ್ ಅವರೊಡನೆ ಡಾರ್ಜಲಿಂಗ್‌ಗೆ ಪಯಣಿಸಿ ಕಲಾರಚನೆ ಮಾಡುತ್ತಲೇ ಹಿಮಾಲಯ ಯಾತ್ರೆ ಪೂರೈಸಿ ಜ್ಞಾನಾಭಿವೃದ್ಧಿ ಮಾಡಿಕೊಂಡು ಕಲ್ಕತ್ತಾಗೆ ವಾಪಸ್ಸು. ಆಗ ಅನಿರೀಕ್ಷಿತವಾಗಿ ವೀಣೆ ಕಲಿಯುವ ಅವಕಾಶ (೧೯೧೩). ಹೇಳಿಕೊಡುತ್ತಿದ್ದ ಗುರು ರಾಮಸ್ವಾಮಿ ಅಯ್ಯಂಗಾರ್ ಕೇವಲ ೩ ತಿಂಗಳಲ್ಲಿಯೇ ಮರಳಿ ಮದ್ರಾಸಿಗೆ ಹೋದುದರಿಂದ ಸಂಗೀತ ಕಲಿಕೆ ಸ್ಥಗಿತ. ಸ್ವಂತ ಪರಿಶ್ರಮದಿಂದ 'ಶ್ರುತಿ ವೀಣೆ' ಮಾಡಿದರು. ನಂತರ ವೆಂಕಟಪ್ಪ

ಮೈಸೂರಿಗೆ ವಾಪಸ್ಸು (೧೯೧೬). ಮೈಸೂರಿನ ಎಲ್ಲಾ ಖ್ಯಾತ ಸಂಗೀತ ತಜ್ಞರ ಮೆಚ್ಚುಗೆ ನುಡಿ ಶೃತಿ ವೀಣೆಯನ್ನು ಕುರಿತಾಗಿ ಬಂತು. ಮಹಾರಾಜರ ಕೃಪೆಯಿಂದಾಗಿ ವೀಣೆ ಶೇಷಣ್ಣನವರ ಬಳಿಯಲ್ಲಿಯೇ (೧೯೧೮) ಅಭ್ಯಾಸ ಆರಂಭ, ಅದರಲ್ಲೇ ತಲ್ಲೀನ, ಕಲಾಗುರು ಅವನೀಂದ್ರನಾಥರು ಕಲೆಯನ್ನು ಬಿಡಬೇಡ ಎಂಬ ಹಿತನುಡಿ, ಅದಕ್ಕೆ ಮಾರುತ್ತರವಾಗಿ 'ವೀಣಾಹುಚ್ಚು' ಎಂಬ ಚಿತ್ರ ಬರೆದು ಕಳಿಸಿದರು. ವೆಂಕಟಪ್ಪನವರ ಭಾವಾಭಿವ್ಯಕ್ತಿಯ ಉತ್ತಮ ಚಿತ್ರವೆಂದು ಎಲ್ಲೆಡೆ ಪ್ರಸಿದ್ಧಿ. ಇದಲ್ಲದೇ ಮೈಸೂರಿಗೆ ಬಂದ ನಂತರ ದಂತ ಫಲಕದ ಮೇಲೆ ನಾಲ್ವಡಿ ಕೃಷ್ಣರಾಜ ಒಡೆಯರ ಚಿತ್ರರಚನೆ, ಸಂಗೀತದ ಗುರು ವೀಣೆ ಶೇಷಣ್ಣನವರ ಎದೆಮಟ್ಟದ ಶಿಲ್ಪ ಮತ್ತು ಇವರ ಊಟ ಉಪಚಾರಗಳಿಗೆ ಅತಿಯಾದ ಮಹತ್ವ ನೀಡುತ್ತಿದ್ದ ಹೋಟೆಲಿನ ಮಾಣಿಯ ರೂಪಚಿತ್ರ ಮುಖ್ಯವಾದ ಶಿಲ್ಪಗಳಾದುವು.

ವೆಂಕಟಪ್ಪನವರು ಅರಮನೆ ಸಹಕಾರದಿಂದಲೇ ಕಲಿತವರಾದ್ದರಿಂದ, ಅವರಿಗೆ ಅರಮನೆಗೆ ಸಂಬಂಧಿಸಿದವರ ಚಿತ್ರರಚನೆ ಮುಖ್ಯವಾಗಿತ್ತು. ಚಾಮುಂಡಿ ಬೆಟ್ಟದ ಭೂದೃಶ್ಯವೆರೆಡು (೧೯೧೯), ಅಂಗಸಾಧನೆಯ ಚಿತ್ರ, ಜೇಮ್ಸ್ ಕಸನ್ಸಿರವರಿಗಾಗಿ, ಚಾಂದ್ ಬೇಬಿ ಎಂಬ ಕಿರು ಜಲವರ್ಣ ಚಿತ್ರ, ಮಾಯಾಮೃಗವಾಗಿ ಸೀತೆಯನ್ನು ಕಾಡಿಸಿದ ಕತೆಯ ವರ್ಣಚಿತ್ರ. ರವೀಂದ್ರನಾಥ ಠಾಗೋರರ ಎದೆಮಟ್ಟದ ಶಿಲ್ಪ ಇವೆಲ್ಲವೂ ೧೯೨೩ರಲ್ಲಿ ರಚಿಸಿದವುಗಳಾದರೆ, ಭೂದೃಶ್ಯಗಳಲ್ಲಿ ಮುಖ್ಯವಾದವು ಊಟಿನಲ್ಲಿ (೧೯೨೬–೨೮) ಮಾಡಿದ ಚಿತ್ರಗಳು ನಾಲ್ಕೈದು ವರ್ಷಗಳ ನಂತರ (೧೯೩೪) ನಂದಿಬೆಟ್ಟ ಮತ್ತು ಕೊಡೈಕೆನಾಲ್ ದೃಶ್ಯಗಳನ್ನು ಚಿತ್ರಿಸಿದರು.

ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಫಲಕಗಳಲ್ಲಿ ಸಿದ್ಧಾರ್ಥನ ರಾಜ್ಯ ಪರಿತ್ಯಾಗ (೧೯೨೪) ದ್ರೋಣಾಚಾರ್ಯರ ಶಿಕ್ಷಣ (೧೯೨೫), ಏಕಲವ್ಯನ ಅಭ್ಯಾಸ, ಶಕುಂತಲೆ ನಿರ್ಗಮನ, ರಾಮನಿಂದ ಹನುಮಂತನಿಗೆ ಅಂಗುಲಿ ಪ್ರದಾನ (೧೯೩೨), ಬುದ್ಧ ಪರಿವ್ರಾಜಕ (೧೯೩೪), ಶಿವತಾಂಡವ (೧೯೩೫) ಇವೆಲ್ಲವೂ ವರ್ಣರಹಿತವಾದ ಉದ್ದಗಲ ದಪ್ಪಗಳನ್ನು ಗುರುತಿಸಬಹುದಾದ ಸುಮಾರು ನಾಲ್ಕೈದು ಅಡಿ ಎತ್ತರವಿರುವ ಉಬ್ಬು ಶಿಲ್ಪಗಳು.

ವಿಶೇಷವಾದ ಮಸೂರ (Lens)ದಿಂದಲೇ ನೋಡಬೇಕಾಗುವಂತೆ ಮಾಡುವ ನವಿರಾದ ಚಿತ್ರಗಳಿಗೆ ವೆಂಕಟಪ್ಪನವರು ಪ್ರಸಿದ್ಧಿಯಾಗಿದ್ದಾರೆ. ಅವುಗಳಲ್ಲಿ ದಂತ ಫಲಕದ ಮೇಲೆ ಮಾಡಿರುವ ಚಿತ್ರಗಳಾದ ಕೃಷ್ಣರಾಜ ಒಡೆಯರ್ (೧೯೧೮–೩೫), ಕುಚ್ ಬಿಹಾರದ ಅರಸರು (೧೯೨೪–೨೬) ಇವು ಮುಖ್ಯವಾದ ಅತ್ಯಂತ ಕಿರಿದಾದ ಚಿತ್ರಗಳು, ಅರಮನೆಯ ಅಂಬಾ ವಿಲಾಸದ ತೊಟ್ಟಿಯ ಅಲಂಕರಣದ ಜವಾಬ್ದಾರಿಯನ್ನು ಸಹ ಇವರಿಗೆ ವಹಿಸಲಾಗಿತ್ತು.

ಸ್ವಾಮಿಗಳವರಿಗೆ ಅರಮನೆ ಸಂಪರ್ಕಹೊಂದಿದ ನಂತರವೂ, ಆಳರಸರ ಮತ್ತವರ ಕುಟುಂಬದವರ ಚಿತ್ರಗಳನ್ನು ಬರೆಯುವುದು ಮುಖ್ಯವಾಗಲಿಲ್ಲ. ರಾಜರುಗಳು ಪೂಜಿಸಬಹುದಾದ, ಕುಟುಂಬಕ್ಕೆ ಯಶಸ್ಸು ತರುವ, ಕೀರ್ತಿ ಕಾಮನೆಗೆ ಅವಕಾಶವಾಗುವ, ಸರ್ವಕಾಲಕ್ಕೆ ಸರ್ವರಿಗೂ ಬೇಕಾಗುವ ಚಿತ್ರರಚಿಸುವುದು ಮುಖ್ಯವಾಗಿತ್ತು. ಹಾಗಾಗಿ ಇಂದು ದರ್ಬಾರ್ ಹಾಲಿನಲ್ಲಿ ಕಾಣುವ ಆಳೆತ್ತರದ ಚಿತ್ರಗಳಾದ ಸರಸ್ವತಿ, ಲಕ್ಷ್ಮಿ, ಗಾಯತ್ರಿ (೧೯೪೨), ಮಹಿಷಮರ್ಧಿನಿ (೧೯೪೩), ಭುವನೇಶ್ವರಿ (೧೯೪೫), ಕಾಳಿಕಾದೇವಿ, ನವದುರ್ಗಾದೇವಿ, ರಾಜರಾಜೇಶ್ವರಿ (೧೯೪೬) ರಚಿಸಿ ಎಲ್ಲಾ ಕಾಲಕ್ಕೂ ಯೋಗ್ಯವಾದ ವರ್ಣಚಿತ್ರಗಳನ್ನು ರಚಿಸಿದ್ದಾರೆ.

ರಾಜ್ಯ, ರಾಜ, ಪ್ರಜೆ ಇವರೆಲ್ಲರ ಹಿತಕಾಪಾಡುವ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಕರ್ತರಾದ ಬ್ರಹ್ಮ ವಿಷ್ಣು ಮಹೇಶ್ವರರು ಮತ್ತವರ ಪರಿವಾರದೇವತೆಗಳ ಚಿತ್ರಗಳು ಅರಮನೆಗೆ ಅತ್ಯವಶ್ಯಕವೆಂದು ದರ್ಬಾರ್ ಹಾಲ್ ಮುಂಭಾಗದಲ್ಲಿರುವ ಅರೆ ವೃತ್ತಾಕಾರವಾಗಿರುವ ಮೇಲ್ಮಾಡಿನಲ್ಲಿ ಚಿತ್ರಗಳನ್ನು ತಮ್ಮ ಶಿಷ್ಯರ ಕಡೆಯಿಂದ ಮಾಡಿಸಿದ್ದಾರೆ. ರಚನಾ ವಿಧಾನ, ಮಾರ್ಗದರ್ಶನ ಎಲ್ಲವೂ ಸ್ವಾಮಿಗಳದೇ.

ಶಿಲ್ಪಗಳ ದೃಷ್ಟಿಯಿಂದ ಪ್ರಮುಖವಾದವು ಕೋಟೆಯೊಳಗಿನ ಭುವನೇಶ್ವರಿ ದೇವಾಲಯದ ನಿರ್ಮಾಣ. ಮೂಲ ಮೂರ್ತಿಗಳಲ್ಲದೇ ಮತ್ತಿತರ ಪರಿವಾರ ದೇವತೆಗಳನ್ನು ಮಾಡಿ ಪ್ರತಿಷ್ಠಾಪಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸ್ವಾಮಿಗಳ ಶಿಲ್ಪ ಸಾಧನೆಗೆ ಹಿಡಿದ ಕನ್ನಡಿಯಂತೆ, ಮೈಸೂರಿನಲ್ಲಿ ನಿರ್ಮಿಸಿರುವ ಕಾಮಕಾಮೇಶ್ವರಿ ದೇವಾಲಯ. ಹೊಯ್ಸಳ ಶೈಲಿಯ ಕೆತ್ತನೆ. ಶಿವನ ಪಂಚವಿಶಂತಿ ಲೀಲೆಗಳು, ಈ ಆಲಯವು ಇಂದಿಗೂ ಅತ್ಯಾಕರ್ಷಕವಾದುದೇ.

ನಂತರ ಅಂದಿನ ಆಡಳಿತಕ್ಕೆ ಒಳಪಟ್ಟ ಕನ್ನಂಬಾಡಿ ಕಟ್ಟೆ (ಕೆ.ಆರ್.ಎಸ್.)ಯಲ್ಲಿರುವ ಕಪ್ಪುಶಿಲೆಯ ಕಾವೇರಿ ಮಾತೆ, ನೀರು ಸೋಪಾನದ ಮೇಲೆ ಹರಿಯುವ ಕಡೆ ಇರುವ ಅಮೃತ ಶಿಲೆಯ ರಾಧಾಕೃಷ್ಣ, ಮಹಾರಾಜರ ಖಾಸಗಿಗಾಗಿ ಪೂಜೆ ಮಾಡಲು ಅನುವಾಗುವಂತಹ ಹದಿನೆಂಟು ಕೈಗಳುಳ್ಳ ನವದುರ್ಗಾದೇವಿ. ಚಿನ್ನ ಮತ್ತು ರತ್ನಗಳನ್ನೇ ಹೆಚ್ಚಾಗಿ ಬಳಸಿರುವ ಬೆಲೆ ಕಟ್ಟಲಾಗದ ಅಪೂರ್ವ ವಿಗ್ರಹವಿದು. ಇದು ಪುರಾಣಗಳಲ್ಲಿನ ದೇವತೆಗಳ ಇಂದ್ರನಾದ ದೇವೇಂದ್ರನು *ಶ್ರೀನಗರ*ವೆಂಬ ಮಂಟಪದಲ್ಲಿ ಕುಳಿತು ಪೂಜಿಸುತ್ತಿದ್ದನೆಂಬ ವಿಚಾರ ಬರುತ್ತದೆ. ಹಾಗೆಯೇ ಪ್ರಜಾಪರಿಪಾಲಕರಾದ ಮಹಾರಾಜರು ಸಹ ಶ್ರೀನಗರವೆಂಬ ಮಂಟಪದಲ್ಲಿ ಕುಳಿತು ಪೂಜಿಸುವುದು ಸೂಕ್ತವೆಂದು ಭಾವಿಸಿದ ಕಾರಣ ಬೆಳ್ಳಿ ಮತ್ತು ಚಿನ್ನದ ರೇಕುಗಳನ್ನು ಅತ್ಯಧಿಕವಾಗಿ ಬಳಸಿರುವ ಮತ್ತು ಸಾವಿರಾರು ದೇವತಾಮೂರ್ತಿಗಳನ್ನೊಳಗೊಂಡ ಉಬ್ಬುಗೆತ್ತನೆಯ ನಕಾಶೆ ಕೆಲಸವುಳ್ಳ ಏಳು ಅಡಿಗಿಂತಲೂ ಎತ್ತರವಿರುವ ಮಂಟಪವನ್ನು ಮಾಡಿಕೊಟ್ಟಿದ್ದಾರೆ.

ಇದಲ್ಲದೇ ಮಹಾರಾಜರ ಗಾತ್ರಕ್ಕೆ ತಕ್ಕಂತೆ ಸಿಂಹಾಸನವನ್ನು ನವೀಕರಿಸುವ ಸಲುವಾಗಿ ಸಿಂಹಾಸನವನ್ನೇರುವ ಆರು ಮೆಟ್ಟಲುಗಳು, ಹಿಂಬದಿಯ ಪ್ರಭಾವಳಿ ಮತ್ತು ಛತ್ರಿ ಇವುಗಳಿಗೆಲ್ಲಾ ನೂರಾರು ಚಿತ್ರಗಳ ರಚನೆ, ಶಿಷ್ಯರಿಗೆ ಮಾರ್ಗದರ್ಶನ ಇವೆಲ್ಲವೂ ಅರಮನೆಯ ಸಂಪರ್ಕದ ನಂತರ ಮಾಡಿಕೊಟ್ಟವು. ಇವೆಲ್ಲಾ ಎಲ್ಲರೂ ಪೂಜ್ಯಭಾವದಿಂದ ನೋಡುವ ಶಿಲ್ಪಗಳೇ ಎಂಬುದನ್ನು ನಾವು ಅರಿಯಬೇಕು. ವೆಂಕಟಪ್ಪನವರ ಕಲೆಯು ಮೆಚ್ಚುಗೆಯನ್ನು ಗಳಿಸುವಂತಹುದು ಮಾತ್ರವೇ. ಪೂಜಾರ್ಹತೆ ಆ ಕೃತಿಗಳಿಗೆ ಇಲ್ಲ.

ವೆಂಕಟಪ್ಪನವರು ಅರಮನೆಗೆ ಹೋಗಬೇಕಾದರೆ ಇತರರಂತೆ ಅರಮನೆ ಸಾಂಪ್ರದಾಯಿಕ ಉಡುಪನ್ನು (uniform) ಧರಿಸುತ್ತಿರಲಿಲ್ಲ. ತಮ್ಮ ಸಹಜ ಉಡುಗೆಯಾದ ಬಿಳಿಕಚ್ಚೆ ಪಂಚೆ, ಕ್ಲೋಸ್ ಕಾಲರ್ ಕೋಟು, ಮೈಸೂರು ಪೇಟ ಧರಿಸಿಯೇ ಹೋಗುತ್ತಿದ್ದರು.

ಸ್ವಾಮಿಗಳೂ ಸಂನ್ಯಾಸಿಯ ಉಡುಪಿನಲ್ಲಿ ಕಮಂಡಲು ಸಹಿತವಾಗಿಯೇ ಅರಮನೆಯ ಕಾರಿನಲ್ಲಿಯೇ ಹೋಗಿ ಬರುತ್ತಿದ್ದರು. ಉಳಿದಂತೆ ಬೇರಾರಿಗೂ ಈ ರೀತಿ ತಮ್ಮ ಉಡುಗೆಯಲ್ಲಿ ಅರಮನೆಗೆ ಹೋಗಲು ಅವಕಾಶವಿರಲಿಲ್ಲ.

ವೆಂಕಟಪ್ಪನವರಿಗೆ ನಾಲ್ವಡಿ ಕೃಷ್ಣರಾಜ ಒಡಯರ್‌ರವರ ಅಭಯ ಹಸ್ತವೇ ವರದಾನ. ಇತರ ಅಧಿಕಾರಿಗಳ ಒಡನಾಟವಾಗಲೀ, ಸಂದರ್ಭಾನುಸಾರ ಹೊಂದಿಕೊಳ್ಳುವ ಗುಣವಾಗಲಿ, ಇಲ್ಲದ ಕಾರಣ ಬಹುತೇಕ ಅಧಿಕಾರಿಗಳು ಇವರನ್ನು ಸಹಿಸುತ್ತಿರಲಿಲ್ಲ. ಇವರ ಕಟ್ಟುನಿಟ್ಟಿನ ನುಡಿ, ಮುಂಗೋಪ, ಜನರೊಡನೆ ಬೆರೆಯದ ಮನಸ್ಸು, ತನ್ನಿಚ್ಛೆಯಂತೆಯೇ ಆಗಬೇಕೆಂಬ ಹಠ, ತಾನಿನ್ನು ವಿದ್ಯಾರ್ಥಿ ಎಂಬ ಕಲ್ಪನೆ, ಹೆಂಗಸರಿಗೆ ಮತ್ತು ಮದುವೆ ಆದವರಿಗೆ ಶಿಲ್ಪವನ್ನು ಕಲಿಸಬಾರದೆಂಬ ನಿರ್ಧಾರ, ಕಲಿಯಲು ಬರುವವರು ಸ್ವಲ್ಪ ತಡವಾಗಿ ಬಂದರೆ, ಚಿತ್ರನೋಡಲು ಬಯಸಿ ಬರುವವರು ಅವಸರವಾಗಿ ನೋಡಿ ಹೊರಟರೆ, ಬಂದವರು ಅನಗತ್ಯವಾಗಿ ಹೊಗಳಿದರೆ, ಯಾವುದನ್ನೂ ಸಹಿಸದೆ ಮತ್ತೊಮ್ಮೆ ಅವರು ಸ್ಟುಡಿಯೋ ಒಳಗೆ ಬರಲು ಪ್ರವೇಶ ನೀಡುತ್ತಿರಲಿಲ್ಲ. ಈ ರೀತಿಯ ಪ್ರತಿಕ್ರಿಯೆಯು ಜನಸಾಮಾನ್ಯನಿಂದ ಹಿಡಿದು ರಾಜರವರೆಗೂ ಅನ್ವಯವಾಗುತ್ತಿತ್ತು. ಹೀಗಾಗಿ ಮೈಸೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕಾಲವಾದ ನಂತರ (೧೯೪೦) ಬೆಂಗಳೂರಿಗೆ ಬಂದು ತಾವೇ ಕಟ್ಟಿಕೊಂಡ ಕುಟೀರದಲ್ಲಿದ್ದರು. ಈ ಮೇಲೆ ತಿಳಿಸಿದ

ದಿಗ್ಬಂಧನಗಳಿಂದ ಯಾರೂ ಇವರ ಬಳಿ ಕಲಿಯಲಿಚ್ಛಿಸುತ್ತಿರಲಿಲ್ಲ. ವೆಂಕಟಪ್ಪನವರ ಶಿಷ್ಯರೆಂದು ಹೇಳಿಕೊಳ್ಳುವ ಭಾಗ್ಯ ಯಾರಿಗೂ ಲಭಿಸಲಿಲ್ಲ. ಅವರು ಕೃತಿಗಳನ್ನು ನೋಡಿ ಸಂತೋಷಿಸುವ, ಮತ್ತು ಎಂದಾದರೂ ನಗುಮುಖದಿಂದ ಮಾತನಾಡಿದರೆ ಆನಂದಪಡುವ ಭಾಗ್ಯ ಮಾತ್ರ ರಸಿಕ ಜನರಿಗೆ ಲಭ್ಯವಾಗುತ್ತಿತ್ತು.

ವೆಂಕಟಪ್ಪನವರ ಈ ಎಲ್ಲಾ ಗುಣಗಳಿಗೆ ವಿರುದ್ಧವಾದುದು ಸ್ವಾಮಿಗಳ ಗುಣ. ಶಿಷ್ಯರಲ್ಲಿ ಶ್ರೀಸಾಮಾನ್ಯರಲ್ಲಿ ಬೆರೆಯುತ್ತಿದ್ದರು. ತಪ್ಪು ಮಾಡಿದವರನ್ನು ಕ್ಷಮಿಸುವ ಗುಣ, ಗುರುಕುಲವನ್ನು ಸ್ಥಾಪಿಸಿ ಮಂತ್ರ, ಶಿಲ್ಪಶಾಸ್ತ್ರ, ಚಿತ್ರ, ಶಿಲ್ಪ ಕಲೆಗಳನ್ನು ಹೇಳಿಕೊಡುವಿಕೆ. ಸ್ವತಃ ತಾವೇ ವಿದ್ಯಾರ್ಥಿಗಳೊಡನೆ ಕುಳಿತು ಕೆಲಸ ಮಾಡುತ್ತಾ ಕೆಲಸದ ವಿಧಾನ ತಿಳಿಸುವಿಕೆ, ಧಾರ್ಮಿಕವಾಗಿ ನಿತ್ಯ ತ್ರಿಕಾಲ ಪೂಜೆ, ಮಹಾರಾಜರಿಗೆ ತಮ್ಮ ಶ್ರೀಮಠದಿಂದ ಪ್ರಸಾದ ಕಳಿಸುವಿಕೆ, ಬೇಡಿ ಬಂದವರಿಗೆ ಇಲ್ಲವೆನ್ನದಂತೆ ತಮ್ಮಿಂದಾಗಲೀ, ಅರಮನೆಯಿಂದಾಗಲೀ ಸಹಾಯ ಮಾಡುವ, ಮಾಡಿಸುವ ಗುಣಗಳಿಗೆ ಖ್ಯಾತರಾಗಿದ್ದರು, ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ರಾಜಗುರುವಾಗಿ ಅವರ ಭಕ್ತಿಯನ್ನು ಪಡೆದುಕೊಂಡಿದ್ದರು. ಅವರ ಶ್ರೇಯೋಭಿವೃದ್ಧಿಗಾಗಿ ಮಾರ್ಗಗಳನ್ನು ತೋರುತ್ತಿದ್ದರು. ರಾಜಗುರು ಎಂಬುದು ಗುರು ಪೀಠ ಪ್ರಾರಂಭಿಸಿದ ಕರಸ್ಥಲ ನಾಗಲಿಂಗ ಸ್ವಾಮಿಗಳಿಂದಲೇ ಪ್ರಾರಂಭವಾಗಿತ್ತು. ಅದರೊಂದಿಗೆ ಶಿಲ್ಪವೂ ಸೇರಿಕೊಂಡಿತ್ತು. ಪಾರಂಪರಿಕವಾಗಿ ಗುರುಪೀಠದೊಂದಿಗೆ ಹೊಂದಿಕೊಂಡೇ ಈ ಪಟ್ಟವು ಬಂದಿತ್ತು. ಸಿದ್ಧಲಿಂಗಸ್ವಾಮಿಗಳ ಗುರುಗಳಾದ ನಂಜುಂಡ ಶಿವಯೋಗಿಗಳು ರಾಜಮಾತೆಯವರ ಗುರುಗಳಾಗಿದ್ದರು. ನಂತರದಲ್ಲಿ ಸಿದ್ಧಲಿಂಗ ಸ್ವಾಮಿಗಳಿಗೆ ಜಯಚಾಮರಾಜೇಂದ್ರ ಒಡೆಯರು ಶಿಷ್ಯರಾಗಿದ್ದರು.


ಆದರೆ ಸ್ವಾಮಿಗಳು ತಮ್ಮ ವೃತ್ತಿಜೀವನದ ಪ್ರಾರಂಭ ಕಾಲದಿಂದಲೂ ಶಿಷ್ಯರನ್ನು ಬೆಳೆಸುತ್ತಲೇ ಬಂದವರು., ಕಾಮಕಾಮೇಶ್ವರಿ ದೇವಾಲಯದ ನಿರ್ಮಾಣದಲ್ಲಿ ಸ್ವಾಮಿಗಳಲ್ಲಿ ಶಿಷ್ಯರಾಗಿದ್ದ ಮೂವತ್ತಕ್ಕೂ ಹೆಚ್ಚು ಮಂದಿ ಕೆಲಸ ಮಾಡಿದ್ದಾರೆ. ಅಷ್ಟು ಮಾತ್ರವಲ್ಲ ಸ್ವಾಮಿಗಳ ನಿಧನದ ನಂತರದ ಐದಾರು ದಶಕಗಳ ಕಾಲ ಸ್ವಾಮಿಗಳ ಶಿಷ್ಯರೇ ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಜಗತ್ತನ್ನು ಎತ್ತಿ ಹಿಡಿದಿದ್ದಾರೆ. ಸರ್ಕಾರದ ಎಲ್ಲಾ ಪ್ರಶಸ್ತಿಗಳನ್ನು ಅವರೇ ಪಡೆದುಕೊಂಡು ಗೌರವಿಸಲ್ಪಟ್ಟಿದ್ದಾರೆ. ಕರ್ನಾಟಕದ ಶಿಲ್ಪ ಶೈಲಿಯನ್ನು ಸ್ಥಿರಗೊಳಿಸುವ ಪ್ರಯತ್ನವನ್ನು ಸ್ವಾಮಿಗಳು ಮಾಡಿದ್ದಾರೆ. ಇಂದು ಹೊಯ್ಸಳ ಶಿಲ್ಪ ರೂಢಿಯಲ್ಲಿ ಉಳಿದಿದೆ ಎಂದರೆ ಅದಕ್ಕೆ ಕಾರಣರಾಗಿರುವವರು ಸ್ವಾಮಿಗಳು ಮತ್ತು ಅವರ ಶಿಷ್ಯ ಪರಂಪರೆಯವರು ಮಾತ್ರವೇ.

ಆದರೆ ಸ್ವಾಮಿಗಳ ಶಿಷ್ಯರಲ್ಲಿ ಯಾರೂ ಸ್ವಾಮಿಗಳಂತೆ ಪೂರ್ಣಸ್ಥಪತಿಗಳಾಗಲಿಲ್ಲ. ಕನಿಷ್ಠ ಶಿಲ್ಪಶಾಸ್ತ್ರವನ್ನು ಸಮಗ್ರವಾಗಿ ಅಧ್ಯಯನ ಮಾಡಿದವರಾಗಿರಲಿಲ್ಲ. ಯಾವ ದೃಷ್ಟಿಯಿಂದಲೂ ಸ್ವಾಮಿಗಳು ಬಿಟ್ಟುಹೋದ 'ಶೂನ್ಯ'ವನ್ನು ಅವರ ಶಿಷ್ಯರು ತುಂಬುವ ಸಾಮರ್ಥ್ಯವನ್ನು ಪಡೆದವರಾಗಿರಲಿಲ್ಲ. ನಾಗೇಂದ್ರ ಸ್ಥಪತಿ, ಬಿ.ಬಸವಣ್ಣ ಶಿಲ್ಪಿಗಳ ವಿನಾ ಇತರ್ಯಾರಿಗೂ ದೇವಾಲಯ ನಿರ್ಮಾಣದ ವಿವರ ತಿಳಿದಿರಲಿಲ್ಲ. ಸ್ವಾಮಿಗಳಂತೆ ಶಾಸ್ತ್ರಜ್ಞರೂ, ಸಾಹಿತ್ಯಪ್ರಿಯರೂ ಆಗಿರಲಿಲ್ಲ. ಆದರೂ ಇವರು ಕರ್ನಾಟಕದ ಶಿಲ್ಪಶೈಲಿಯನ್ನು ಉಳಿಸುವ ಕೆಲಸವನ್ನು ತಮ್ಮ ಇತಿ–ಮಿತಿಗಳಲ್ಲಿ ನಡೆಸಿದ್ದಾರೆ.

ವೆಂಕಟಪ್ಪನವರು ಅರಮನೆಯನ್ನು ಹೊರತುಪಡಿಸಿ ಇತರ ಸಾರ್ವಜನಿಕರಿಗೆ ಚಿತ್ರವನ್ನಾಗಲಿ, ಶಿಲ್ಪವನ್ನಾಗಲಿ ಮಾಡಿಕೊಟ್ಟಿಲ್ಲ. ಹನ್ನೆರಡು ವರ್ಷಕ್ಕೂ ಮೇಲ್ಪಟ್ಟು ವೀಣಾಭ್ಯಾಸ, ಜೊತೆಗೆ ಸಂಗೀತ ಕಲಿಕೆ, ಸ್ವತಃ ವೀಣೆ ತಯಾರಿಕೆ, ಇದು ಅವರ ಸಾಧನೆಯ ಮೈಲಿಗಲ್ಲುಗಳು. ಆದರೆ ಇವರ ಸಂಗೀತ ಸುನಾದ ಕೇಳಿದವರಾರು? ಕಛೇರಿ ನಡೆಸಿರುವುದು ಎಲ್ಲೂ ದಾಖಲಾಗಿಲ್ಲ. ಈ ಬಗ್ಗೆ ಸಂಗೀತ ಇತಿಹಾಸಕಾರರು ಏನು ಹೇಳಿದ್ದಾರೆ ಎಂಬುದು ಗೊತ್ತಿಲ್ಲ.

ವೆಂಕಟಪ್ಪನವರು ರೂಪಶಿಲ್ಪಗಳ ರಚನೆಯಲ್ಲಿ ಪ್ರಖ್ಯಾತರು. ಅದರಲ್ಲೂ ಸೂಕ್ಷ್ಮ ಕೆಲಸ ಮಾಡಿದ್ದಾರೆ.

ಸ್ವಾಮಿಗಳು ಸಾಂಪ್ರದಾಯಿಕ ಶಿಲ್ಪಿಗಳಾಗಿದ್ದರೂ ರೂಪಚಿತ್ರಗಳನ್ನು ರಚಿಸಿದ್ದಾರೆ. ಮಹಾರಾಜ ಜಯಚಾಮರಾಜೇಂದ್ರ ಒಡೆಯರ ರೂಪ ಚಿತ್ರ ಮತ್ತು ತಮ್ಮ ಗುರುಗಳಾದ ನಂಜುಂಡ ಶಿವಯೋಗಿಗಳ ವರ್ಣ ಮತ್ತು ಅಮೃತಶಿಲೆಯ ಶಿಲ್ಪಗಳನ್ನು ಗಮನಿಸಿದರೆ ಸಾಕು. ಆದರೆ ವೆಂಕಟಪ್ಪನವರಿಗೆ ಸಾಂಪ್ರದಾಯಿಕ ಚಿತ್ರ ರಚನೆ ಮತ್ತು ತಾಲಮಾನಗಳ ಅನ್ವಯ ಚಿತ್ರ ರಚನೆ ಬರುತ್ತಿರಲಿಲ್ಲ. ಆದರೂ 'ನಟರಾಜ' ಶಿವನನ್ನು ಮೊಹರಂ ಕುಣಿತದ ಶೈಲಿಯಲ್ಲಿಯೇ ಪ್ಲಾಸ್ಟರನಲ್ಲಿ ಉಬ್ಬುಕೆತ್ತನೆಯಾಗಿ ಕಡೆದಿದ್ದಾರೆ.


ಚಿತ್ರ ೧೦. ೫ : ವೆಂಕಟಪ್ಪನವರ 'ನಟರಾಜ'

ವೆಂಕಟಪ್ಪನವರ ಪೆನ್ಸಿಲ್ ಸ್ಕೆಚ್‌ಗಳು ಕೆಲವನ್ನು ಗ್ಯಾಲರಿಯ ಪ್ರದರ್ಶನದಲ್ಲಿರಿಸಿ ಆ ಬಗ್ಗೆ ಹೊಗಳಿಕೆಯ ಮಾತುಗಳನ್ನು ಹೇಳುವುದುಂಟು. ಈ ಗ್ರಂಥದಲ್ಲಿ ಸ್ವಾಮಿಗಳ ಪೆನ್ಸಿಲ್ ಮತ್ತು ಇಂಕ್ ಸ್ಕೆಚ್‌ಗಳಲ್ಲಿ ಕೆಲವನ್ನು ಕೊಟ್ಟಿದೆ. ಅವನ್ನು ಕಲಾಭ್ಯಾಸಿಗಳು ವಿಮರ್ಶಕರು ಗಮನಿಸಿ ಯಾರ ಸ್ಕೆಚ್‌ಗಳು ಶ್ರೇಷ್ಠವಾಗಿವೆ, ಪೂರ್ಣವಾಗಿವೆ ಎಂಬುದನ್ನು ಗಮನಿಸಲಿ.

ಚಿತ್ರರಚನಾ ಶೈಲಿಯಂತೂ ವಂಗದೇಶದ (ಬಂಗಾಲ) ಕಲಾರಚನೆಯಂತೆ ಮಟ್ಟಸವಾದ ವರ್ಣ, ತಿಳಿಗೊಳದ ಮೇಲೆ ಹಾಯುವ ದುಂಬಿಯನ್ನು ನೋಡಿದಾಗ ಕಾಣುವ ನೋಟದಂತೆ, ವರ್ಣಗಳ ಪ್ರಖರತೆ ಇಲ್ಲ, ಪಾರದರ್ಶಕತೆ, ನಿಖರವಾಗಿ ಗುರ್ತಿಸಲಾಗದ ವರ್ಣಗಳ ಮಿಶ್ರತೆ, ತೀವ್ರತೆಯಿಲ್ಲದ ಬೆಳಕು, ಇವರ ಹಲವು ಚಿತ್ರಗಳಲ್ಲಿ ಕಂಡುಬರುತ್ತದೆ. ಈ ಚಿತ್ರ ಸರಣಿಯನ್ನು ನೋಡಿ ಮೈಸೂರಿನ ಅವರ ಸಮಕಾಲೀನ ಕಲಾವಿದರು ಕ್ಷಯರೋಗದವರಂತೆ ಈ ಚಿತ್ರದಲ್ಲಿನ ಪಾತ್ರಗಳಿವೆ ಎಂದು ನಗೆಯಾಡುತ್ತಿದ್ದರು.

ಸ್ವಾಮಿಗಳು ವರ್ಣಚಿತ್ರರಚನೆಯೊಂದಿಗೆ ಕೃಷ್ಣ ಶಿಲೆ, ಅಮೃತಶಿಲೆ, ಚಿನ್ನ, ಬೆಳ್ಳಿ ಮತ್ತಿತರ ಲೋಹ. ಮರ ಯಾವುದೇ ಮಾಧ್ಯಮದಲ್ಲಾದರೂ ಕೆಲಸಮಾಡುತ್ತಿದ್ದರು. ಇವರ ಚಿತ್ರ ಮತ್ತು ಶಿಲ್ಪಗಳು ಅರಮನೆಯನ್ನು ಹೊರತುಪಡಿಸಿ ರಾಜ್ಯದ ಇತರ ಭಾಗಗಳಲ್ಲಿ ಮತ್ತು ಹೊರಗೂ ಸಾಕಷ್ಟಿವೆ. ಮುಖ್ಯವಾಗಿ ಕಾಳಿಕಾಂಬ ಕಮಟೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟ ವಿಶ್ವಕರ್ಮ ಮೂರ್ತಿಯ ಶಿಲ್ಪ ಐದು ತಲೆ ಮತ್ತು ಹತ್ತು ಕೈಗಳುಳ್ಳ ಎರಡು ಕಡೆ (ಹಿಂದೆ, ಮುಂದೆ) ಪೂರ್ಣವಾಗಿ ಕಾಣುವ ಈ ತೆರನಾದ ಶಿಲ್ಪ ರಾಷ್ಟ್ರದಲ್ಲಿಯೇ ಮೊದಲು. ಇದೇ ದೇವಾಲಯಕ್ಕೆ ಪತ್ನಿ ಸಹಿತವಾದ ರಥಾರೂಢರಾದ ನವಗ್ರಹ ಶಿಲ್ಪ, ಮೈಸೂರಿನ ಪರಕಾಲ ಮಠಕ್ಕೆ ಶ್ರೀಕೃಷ್ಣ ಬ್ರಹ್ಮ ತಂತ್ರ ಪರಕಾಲ ಸ್ವಾಮಿಗಳ ರೂಪಶಿಲ್ಪ, ಮತ್ತು ಶಕ್ತಿ ಸಹಿತವಾದ ಬೆಳ್ಳಿಯ ಹಯಗ್ರೀವ. ಜೋಗ ಜಲಪಾತ ಪ್ರದೇಶಕ್ಕೆ ಎರಡು ಕಡೆಗಳಿಂದಲೂ ನೋಡಬಹುದಾದ ಚಾಮುಂಡೇಶ್ವರಿ ಇಂತಹ ನೂರಾರು ದೇವತ ವಿಗ್ರಹಗಳು ತಮಿಳುನಾಡು, ಆಂಧ್ರ, ಕಂಚಿ, ಕಾಳಹಸ್ತಿ, ಮುಂಬೈಗಳಿಗೆ, ಅಲ್ಲದೇ ಇವರು ಮಾಡಿದ ರೇಣುಕಾಚಾರ್ಯರೆಂದು ಪ್ರಚಾರದಲ್ಲಿರುವ ಮೂರ್ತಿಗಳನ್ನು ಕಾಶಿ, ಕೇದಾರ, ಶ್ರೀಶೈಲ, ರಂಭಾಪುರಿ, ಉಜ್ಜಯಿನಿಗಳಿಗೆ ಮಾಡಿಕೊಟ್ಟಿರುವುದಲ್ಲದೇ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇದಲ್ಲದೇ ಜರ್ಮನಿಗೆ ಶಂಕರಾಚಾರ್ಯ, ಗಣಪತಿಗಳನ್ನು ಮಾಡಿಕೊಟ್ಟಿದ್ದಾರೆ.

ವೆಂಕಟಪ್ಪನವರಿಗೆ ಕಲ್ಕತ್ತಾ ಶಿಕ್ಷಣದ ನಂತರ ಇಂಗ್ಲೆಂಡಿಗೆ ಹೋಗಿ ಕಲಿಯಬೇಕೆಂಬಾಸೆ ಇತ್ತು. ಅದಕ್ಕಾಗಿ ಅರಮನೆಯ ಅನುಗ್ರಹಕ್ಕಾಗಿ ಬಲವಾಗಿ ಪ್ರಯತ್ನಿಸಿದ್ದರು.

ಸ್ವಾಮಿಗಳಿಗೆ ಅಂದಿನ ಖ್ಯಾತ ಉದ್ಯಮಿ ಬಿರ್ಲಾರವರೇ ಹುಡುಕಿಕೊಂಡು ಬಂದು, ಇಂಗ್ಲೆಂಡಿನಲ್ಲಿ ಶಿವದೇವಾಲಯ ಮಾಡುವ ಇಚ್ಛೆ ಇದೆ. ನಿಮ್ಮ ಮಾರ್ಗದರ್ಶನ ಬೇಕು, ವಾಸ್ತು ಕಟ್ಟಡವನ್ನು ಕಲ್ಕತ್ತಾದ ಶ್ರೀಷ ಚಂದ್ರ ಚಟರ್ಜಿಯವರು ಮಾಡುತ್ತಾರೆ. ಶಿಲಾವಿಗ್ರಹ ಮತ್ತು ಅಲಂಕಾರವ ನಿರ್ಮಾಣದ ಕೆಲಸವು ನಿಮ್ಮಿಂದ ಆಗಬೇಕೆಂದು ಹೇಳಿ ಒಪ್ಪಿಸಿದ್ದರು.


ವೆಂಕಟಪ್ಪನವರು, ಕಲಿಕೆಗಾಗಿ, ಇಂಗ್ಲೆಂಡಿಗೆ ಹೋಗಬೇಕೆಂಬ ಬಯಕೆ. ಸ್ವಾಮಿಗಳದ್ದು ಕಲಿತಿರುವುದನ್ನು ಪ್ರದರ್ಶಿಸಿ ವಿದೇಶದಲ್ಲಿ ಭಾರತದ ಸಂಸ್ಕೃತಿಯನ್ನು ಬಿಂಬಿಸುವ ಕೆಲಸ. ಈ ಎರಡು ಪ್ರಯತ್ನಗಳು ಎರಡನೆಯ ಪ್ರಪಂಚ ಯುದ್ಧ ಭೀತಿಯಿಂದ ನಿಲುಗಡೆಯಾದವು.

ವೆಂಕಟಪ್ಪನವರನ್ನು ವರ್ಣಚಿತ್ರ, ಶಿಲ್ಪ, ಸಂಗೀತ ಎಂದು ಕೇವಲ ಮೂರು ಕ್ಷೇತ್ರಗಳಲ್ಲಿ ಗುರ್ತಿಸುತ್ತಾರೆ. ಇಲ್ಲಿ ಶಿಲ್ಪ ಎಂದರೆ ಪ್ರತಿಮಾಶಿಲ್ಪ ಮಾತ್ರವೇ ಎಂಬುದನ್ನು ನಾವು ಗ್ರಹಿಸಬೇಕು. ಸ್ವಾಮಿಗಳನ್ನು ವರ್ಣಚಿತ್ರ, ಶಿಲ್ಪ, ಸಾಹಿತ್ಯದಲ್ಲಿ ಗುರ್ತಿಸಬಹುದು. ಇಲ್ಲಿ ಶಿಲ್ಪ ಎಂಬುದಕ್ಕೆ ಶಾಸ್ತ್ರೀಯ ಅರ್ಥ ಸಂಪೂರ್ಣವಾಗಿ ಅನ್ವಯವಾಗುತ್ತದೆ. ಶಿಲೆ, ಲೋಹ, ತಗಡುಗಳಲ್ಲಿ ಮೂರ್ತಿ ಶಿಲ್ಪ. ಅದರೊಂದಿಗೆ ದೇವಾಲಯ ನಿರ್ಮಾಣ ಶಿಲ್ಪ. ಸಾಂಪ್ರದಾಯಿಕ ಶಿಲ್ಪಶಾಸ್ತ್ರದ ವಿದ್ವತ್ತು. ಈ ಕ್ಷೇತ್ರಗಳು ವೆಂಕಟಪ್ಪನವರಿಂದ ತುಂಬಾ ದೂರ ಉಳಿದಿದ್ದವು. ಕರ್ನಾಟಕ ಸಾಂಪ್ರದಾಯಿಕ ಶಿಲ್ಪ ಅವರಿಗೆ ತಿಳಿದೇ ಇರಲಿಲ್ಲ. ಶಿಲ್ಪಶಾಸ್ತ್ರದ ದೃಷ್ಟಿಯಿಂದ ಸ್ವಾಮಿಗಳು ಪರಿಪೂರ್ಣ ಸ್ಥಪತಿಗಳು, ಮಂತ್ರಸಿದ್ಧರು, ಪ್ರತಿಮಾ ಸ್ಥಾಪಕರು, ಆಚಾರ್ಯ ಪುರುಷರು. ವೆಂಕಟಪ್ಪನವರಲ್ಲಿ ಇವ್ಯಾವ ವಿದ್ಯೆಗಳೂ ಇರಲಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ಸ್ವಾಮಿಗಳ ಸಾಧನೆ ಶಿಲ್ಪವಿದ್ಯಾರಹಸ್ಯೋಪನಿಷತ್ ಎಂಬ ಶಾಸ್ತ್ರಗ್ರಂಥ, ಕರಸ್ಥಲ ನಾಗಲಿಂಗದೇವ ಚರಿತಂ ಸಾಂಗತ್ಯ ಕಾವ್ಯದ ಸಂಪಾದನೆ, ಸ್ವರಚನೆ 'ಶಿಲ್ಪಸಾರ' ಷಟ್ಪದಿಯಲ್ಲಿರುವ ೧೦೮ ಪದ್ಯಗಳ ಮಾಲಿಕೆ, ಅರಮನೆಯಿಂದ ಪ್ರಕಟವಾಗಿರುವ ಗುರುಗೀತ, (೧೯೪೮), ಶಿವಗೀತ (೧೯೫೦), ಸದ್ಗುರು ಆರಾಧನ ಮಹಿಮೆ (೧೯೪೪), ಸದ್ಗುರು ಉಪದೇಶ (೧೯೪೮), ಜ್ಞಾನಯೋಗ ರಹಸ್ಯ (೧೯೪೯), ಶೈವಶಿಲ್ಪ ಪ್ರಭಾ (೧೯೪೬), ಅಜಪ ಗಾಯತ್ರಿ ಜಪವಿಧಾನಂ ಕನ್ನಡ ಅವತರಣಿಕೆ, ಶಿಲ್ಪಾದರ್ಶಃ ಎಂಬ ಪಠ್ಯಗ್ರಂಥ ಮತ್ತಿತರ ಹಲವಾರು ಪ್ರಕಟಿತ ಕೃತಿಗಳು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಸಂಸ್ಕೃತದಲ್ಲಿರುವ ವೇದಗಳನ್ನು ಕನ್ನಡ ನುಡಿಯಲ್ಲಿ ಪ್ರಕಟಿಸಿ ವೇದವು ಜನ ಸಾಮಾನ್ಯನಿಗೂ ನಿಲುಕಬೇಕೆಂಬ ಅಚಲ ನಿಲುವು, ಪ್ರಥಮವಾಗಿ ಋಗ್ವೇದ ಸಂಹಿತ ಎಂಬ ಒಂದೊಂದು ಸಾವಿರ ಪುಟವಿರುವ ಮುವ್ವತ್ತಾರು ಸಂಪುಟಗಳ ಪ್ರಕಟಣೆಗೆ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆ ಒಪ್ಪಿಗೆ ನೀಡುವಂತೆ ಮಾಡಿದ್ದು ಸ್ವಾಮಿಗಳ ಸಾಹಸ. ಪ್ರಕಟಣಾ ಸಮಿತಿ ಅಧ್ಯಕ್ಷರಾಗಿ ಪ್ರಪ್ರಥಮವಾಗಿ ದೇಶೀಯ ಭಾಷೆ (ಕನ್ನಡ) ಮೂಲಕ ವೇದಗಳ ಪ್ರಕಟಿಸಿದ ಕೀರ್ತಿ ಸ್ವಾಮಿಗಳಿಗೇ ಸಲ್ಲಬೇಕು. ಈ ರೀತಿಯಾಗಿ ಸ್ವಾಮಿಗಳು ಸಂಪೂರ್ಣವಾಗಿ ವಿದ್ವಾಂಸ ಸ್ಥಪತಿಗಳಾಗಿದ್ದರು.

ಸ್ವಾಮಿಗಳಿಗಿಂತ (ಜನನ ೧೮೮೫) ಒಂದು ವರ್ಷ ಚಿಕ್ಕವರು ವೆಂಕಟಪ್ಪನವರು (ಜನನ ೧೮೮೬). ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ (ಜನನ ೧೮೮೪) ಇವರಿಬ್ಬರಿಗಿಂತ ಒಂದೆರಡು ವರ್ಷ ಮಾತ್ರ ದೊಡ್ಡವರು.

ವೆಂಕಟಪ್ಪನವರು ಬ್ರಹ್ಮಚಾರಿ. ಸ್ವಾಮಿಗಳು ಗುರು ಪೀಠಸ್ಥರಾದ ಸನ್ಯಾಸಿಗಳು. ವೆಂಕಟಪ್ಪನವರಿಗೆ ಕರ್ನಾಟಕಕ್ಕೆ ಕಲಾಪರಂಪರೆ ಇದೆ. ಅದರ ರಕ್ಷಣೆ ಆಗಬೇಕು ಎಂಬ ಕಲ್ಪನೆಯೇ ಇರಲಿಲ್ಲ. ಅವರ ದೃಷ್ಟಿಯಲ್ಲಿ ಇಂಗ್ಲೆಂಡು, ಬಂಗಾಳ, ಕನ್ನಡ ಎಂಬ ಅಂತರಗಳಿರದೆ ಎಲ್ಲಾ ಒಂದೇ ಆಗಿತ್ತು. ಪಾರಂಪರಿಕ ಕಲೆಯು ಉಳಿಯಬೇಕು ಎಂಬ ಅಂಶವೇ ಅವರ ಕಲ್ಪನೆಯಲ್ಲಿರಲಿಲ್ಲ. ಸ್ವಾಮಿಗಳಿಗೆ ಪಾರಂಪರಿಕ ಕಲೆ – ಸಂಸ್ಕೃತಿಗಳ ಉಳಿವೇ ಜೀವವಾಗಿತ್ತು. ಪ್ರತಿ ಶಿಲ್ಪದಲ್ಲೂ, ಚಿತ್ರದಲ್ಲೂ, ನಡೆಯಲ್ಲೂ, ನುಡಿಯಲ್ಲೂ ಅದೇ ಅವರ ತಪಸ್ಸಾಗಿತ್ತು. ಸ್ವಾಮಿಗಳಿಗೆ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರು ಸ್ವಾಮಿಗಳಿಗೆ ಚಿನ್ನದ ಉಳಿ–ಸುತ್ತಿಗೆ, ಬಂಗಾರದ ಹಾರ, ಐದು ಜೊತೆ ಶಾಲು ಹೊದಿಸಿ ಅತ್ಯುನ್ನತ ಸನ್ಮಾನ ಮಾಡಿದ್ದರು. ಆ ರೀತಿಯ ಸನ್ಮಾನ ವೆಂಕಟಪ್ಪನವರು ಪಡೆಯಲಿಲ್ಲ. ಶ್ರೀ ಪರಕಾಲ ಮಠದಿಂದ ಸ್ವಾಮಿಗಳಿಗೆ 'ಶಿಲ್ಪಕಲಾ ವಿಶಾರದ' ಎಂಬ ಬಿರುದು, ಅರಮನೆಯಿಂದ 'ರಾಜಗುರು'ಗಳಾಗಿ ಉನ್ನತ ಗೌರವ, ಮಂಗಳೂರು, ತಮಿಳುನಾಡುಗಳಲ್ಲಿ ಕಿರೀಟ, ಕಂಠಾಭರಣ, ರತ್ನ ಖಚಿತ ಬಾಹುಬಂಧ ಇತ್ಯಾದಿ ರಾಜೋಪೇತ ಒಡವೆಗಳನ್ನು ವಸ್ತ್ರಾದಿಗಳನ್ನು ನೀಡಿ ಪಲ್ಲಕ್ಕಿಗಳಲ್ಲಿ ಸಾರ್ವಜನಿಕ ಮೆರವಣಿಗೆ, ಗೌರವ. ಇದನ್ನು ಸ್ವಾಮಿಗಳು ಹೆಚ್ಚು ಎಂದು ಭಾವಿಸಿರಲಿಲ್ಲ. ಸರ್ಕಾರಿ ಮನ್ನಣೆಗಳ ಬಗ್ಗೆ ಅವರಿಗೇನೂ ಗೊತ್ತೇ ಇರಲಿಲ್ಲ. ಅವುಗಳ ಬಗ್ಗೆ ಅವರಿಗೆ ಯಾವ ಆಸಕ್ತಿಯೂ ಇರಲಿಲ್ಲ.



ಚಿತ್ರ ೧೦. ೬ : ಸಿದ್ಧಲಿಂಗಸ್ವಾಮಿಗಳು

ಈ ಈರ್ವರು ಕಲಾವಿದರು ಒಂದೇ ಸಮಯದಲ್ಲಿ ಒಂದೇ ರಾಜರ ಕಡೆ ಇದ್ದವರಾಗಿದ್ದು ವೆಂಕಟಪ್ಪನವರಿಗಿಂತ ಒಂದು ಕೈ ಮಿಗಿಲೆಂಬಂತೆ ಚಿತ್ರ, ಶಿಲ್ಪ, ಸಾಹಿತ್ಯಗಳಲ್ಲಿ ದಾಖಲಿಸುವಂತಹ ಕೆಲಸ ಮಾಡಿದ್ದರೂ ಕನ್ನಡಿಗರು, ಕನ್ನಡ ವಿದ್ವಾಂಸರು, ಕನ್ನಡ ನಾಡಿನ ಕಲಾ ವಿಮರ್ಶಕರು ಕನ್ನಡ ಸರ್ಕಾರಗಳು ಇವನ್ನು ಗಮನಿಸಿಲ್ಲ. ಸ್ವಾಮಿಗಳು ಎಲ್ಲರ ಉಪೇಕ್ಷೆಗೆ ಪಾತ್ರಾಗಿದ್ದಾರೆ ಎಂಬುದು ಸತ್ಯವಾಕ್ಯವೇ ಆಗಿದೆ. ವೆಂಕಟಪ್ಪನವರ ಬಗ್ಗೆ ಮಾತ್ರ ಲಲಿತಕಲಾ ಅಕಾಡೆಮಿ (೧೯೮೭), ಕೇಂದ್ರ ಲಲಿತ ಕಲಾ ಅಕಾಡೆಮಿ (೧೯೬೮) ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (೧೯೮೮) ಮತ್ತಿತರ ಖಾಸಗಿ ಪ್ರಕಾಶಕರು ಪುಸ್ತಕ ಪ್ರಕಟಿಸಿದ್ದಾರೆ, ಪತ್ರಿಕಾ ಮಾಧ್ಯಮಗಳು ನೂರಾರು ವೈವಿಧ್ಯಮಯವಾದ ಲೇಖನಗಳನ್ನು ಪ್ರಕಟಿಸಿವೆ. ವೆಂಕಟಪ್ಪನವರ ಬಗ್ಗೆ ವಿಚಾರ ಸಂಕಿರಣಗಳು ನಡೆದಿವೆ. ಅವರ ಜನ್ಮ ಶತಾಬ್ಧಿಯನ್ನು ಸಂಸ್ಕೃತಿ ಇಲಾಖೆ ಮತ್ತು ಲಲಿತ ಕಲಾ ಅಕಾಡೆಮಿಗಳು ವಿಶೇಷವಾಗಿ ಆಚರಿಸಿ ನೆನಪಿನ ಸಂಚಿಕೆ ತಂದಿವೆ. [ಕೆ. ವೆಂಕಟಪ್ಪ ಸವಿನೆನಪು – ಕನ್ನಡ ಲಲಿತ ಕಲಾ ಅಕಾಡೆಮಿ ೧೯೮೭, 'ಕಲಾತಪಸ್ವಿ ವೆಂಕಟಪ್ಪ' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ (೧೯೮೮)]

ವೆಂಕಟಪ್ಪನವರ ನಂತರ ಅವರ ಶಿಷ್ಯರೆಂದು ಅವರ ಪರಂಪರೆಯ ಚಿತ್ರ ಶಿಲ್ಪ ಎಂಬುದನ್ನು ಹೇಳಿಕೊಂಡವರು ಒಬ್ಬರೂ ಇಲ್ಲ. ಆದರೆ ಸ್ವಾಮಿಗಳ ತರುವಾಯ ಐದಾರು ದಶಕಗಳಾದರೂ ಅವರ ಶಿಷ್ಯರೆಂದು ಹೆಮ್ಮೆಯಿಂದ ಹೇಳಿಕೊಂಡು ಸರ್ಕಾರದ ಎಲ್ಲಾ ಪ್ರಶಸ್ತಿಗಳನ್ನು, ಗೌರವಗಳನ್ನು ಪಡೆದು ಕೊಂಡಿರುವ ಹತ್ತಾರು ಶಿಷ್ಯರು ಅವರ ಪರಂಪರೆಯ ಶಿಲ್ಪವನ್ನು ಮುಂದುವರಿಸಿದ್ದಾರೆ. ಆದರೆ ಇವರ್ಯಾರೂ ಸ್ವಾಮಿಗಳ ವಿದ್ವತ್ತು, ಸಾಧನೆಯ ಸಮಗ್ರತೆಯನ್ನು ಗಳಿಸಿ ಉಳಿಸಿ ಬೆಳೆಸಿದವರಾಗಲಿಲ್ಲ.

ವೆಂಕಟಪ್ಪನವರ ಹೆಸರಿನಲ್ಲಿಯೇ ಒಂದು ಸುಂದರವಾದ ಕಲಾಗ್ಯಾಲರಿಯನ್ನು ಸರ್ಕಾರವು ಬೆಂಗಳೂರಿನ ಕಬ್ಬನ್ ವನದಲ್ಲಿ ಮಾಡಿದೆ. ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯದ ವ್ಯಾಪ್ತಿಯಲ್ಲಿ ಬರುವ ಈ ಗ್ಯಾಲರಿಯಲ್ಲಿ ಊಟಿ, ಮತ್ತಿತರ ಕಡೆಗಳಲ್ಲಿ ಬರೆದ ಭೂ ದೃಶ್ಯಗಳು, ವೆಂಕಟಪ್ಪನವರು ಸ್ವತಃ ಮಾಡಿದ ಮತ್ತು ಉಪಯೋಗಿಸುತ್ತಿದ್ದ ವೀಣೆಗಳು, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ ಉಬ್ಬುಗೆತ್ತನೆಯ ಶಿಲ್ಪಗಳು ಅಲ್ಲಿನ ಪ್ರಮುಖ ಪ್ರದರ್ಶಕ ವಸ್ತುಗಳಾಗಿವೆ. ಎಲ್ಲಕ್ಕಿಂತ ಮಿಗಿಲಾಗಿ ಚಿತ್ರಕಲಾ ವಲಯದಲ್ಲಿ ಅವರ ಹೆಸರು ಶಾಶ್ವತವಾಗಿರುವಂತೆ, 'ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ' ಎಂಬ ಶಿರೋನಾಮೆಯಲ್ಲಿ ಪ್ರತಿ ವರ್ಷ ಕಲಾವಿದರೊಬ್ಬರನ್ನು ಗುರ್ತಿಸಿ ರಾಜ್ಯ ಸರ್ಕಾರ ಮೂರು ಲಕ್ಷ ರೂಪಾಯಿಗಳ ನಗದು, ಪ್ರಶಸ್ತಿ ಫಲಕ ನೀಡಿ ಗೌರವಿಸುತ್ತಿದೆ. ರಾಜ್ಯದ ಕಲಾವಿದರಿಗೆ ಈ ಪ್ರಶಸ್ತಿ ಪಡೆಯುವುದು ಒಂದು ಪ್ರತಿಷ್ಠೆಯ ಸಂಕೇತವಾಗಿದೆ. ಇವೆಲ್ಲವೂ ಕಲಾವಿದರಾದವರು ಸ್ವಾಗತಿಸುವ, ಸಂಭ್ರಮಿಸುವ ವಿಚಾರವಾಗಿದೆ.

ಆದರೆ ಅದೇ ಸಂದರ್ಭದಲ್ಲಿ ಅವರಿಗಿಂತ ಹೆಚ್ಚಿನ ಪ್ರಮಾಣದ ಚಿತ್ರ, ಶಿಲ್ಪ, ಸಾಹಿತ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಕಲಾವಿದರಾಗಿದ್ದ ಸ್ವಾಮಿಗಳ ಬಗ್ಗೆ ತಿಳಿಯುವ ಪ್ರಯತ್ನವನ್ನು ಇದುವರೆವಿಗೂ ಯಾರು ಮಾಡಿಲ್ಲ. ಕನ್ನಡದ ಸಾಂಪ್ರದಾಯಿಕ ಶಿಲ್ಪ, ಕನ್ನಡದ ಶೈಲಿ ಉಳಿಸಲು ಬೆಳೆಸಲು ತಮ್ಮ ಬದುಕನ್ನೇ ಸವೆಸಿ ಅದರ ಬೆಳವಣಿಗೆಗೆ ಗುರುಕುಲವನ್ನು ಕಟ್ಟಲು ಬಯಸಿದ ಕಲಾ ತಪಸ್ವಿಯ ಕನಸನ್ನು ಅರಿಯುವ ಮನಸ್ಸೆ ಇಲ್ಲದವರಂತೆ ಕನ್ನಡಿಗರಿರುವುದನ್ನು ಕಂಡಾಗ ಕನ್ನಡಿಗರ ದೃಷ್ಟಿ ಕಣ್ಕಟ್ಟಿ ಕಟ್ಟಿದ ಕುದುರೆಯ ನೋಟದಂತೆ ಆಗಿದೆ ಎನಿಸುತ್ತದೆ. ವೆಂಕಟಪ್ಪನವರು ಬದುಕಿದ್ದಾಗ ಏಕಮುಖಿ ಯಾದರೂ ಅವರ ನಂತರ ಅವರ ಸಂಬಂಧಿಕರಾದ ರಾಮರಾಜುರವರು ಅವರ ಕಲಾಕೃತಿಗಳನ್ನು ಸರ್ಕಾರಕ್ಕ ಕೊಡುವ ಮೂಲಕ ಕಲಾಕೃತಿಗಳು ಸಮಾಜಮುಖಿಯಾದವು. ಆದರೆ ಸ್ವಾಮಿಗಳು ಬದುಕಿದ್ದಾಗ ಸಮಾಜಮುಖಿಯಾಗಿದ್ದರು. ಅವರ ನಂತರ ಅವರ ಸಂಬಂಧಿಗಳು ಮತ್ತು ಶಿಷ್ಯರು ಸ್ವಾರ್ಥಿಗಳಾದರು. ಸ್ವಾಮಿಗಳ ಕೃತಿಗಳು ಅವರ ವಶವಾಗಿ ಕತ್ತಲು ಸೇರಿತು. ಅವರ ಶಿಷ್ಯರಾಗಲಿ, ಇತರ ಕಲಾಸಕ್ತರಾಗಲಿ, ಸ್ವಾಮಿಗಳನ್ನು ಯಾವ ಸಂದರ್ಭದಲ್ಲೂ ನೆನಪಿಸಿಕೊಳ್ಳಲಿಲ್ಲ. ಅವರ ನೆನಪನ್ನು ಸ್ಥಿರಗೊಳಿಸುವ ಸ್ಮಾರಕಕ್ಕೆ ಯಾರನ್ನು ಪ್ರೇರೇಪಿಸಲಿಲ್ಲ. ತಾವೂ ಆ ಕೆಲಸಕ್ಕೆ ನಿಲ್ಲಲಿಲ್ಲ.

ವೆಂಕಟಪ್ಪನವರು ಅರಮನೆಯಲ್ಲಿ ಸಾಮಾನ್ಯ ಕಲಾವಿದರ ಮಧ್ಯೆ ಅಸಾಮಾನ್ಯರು ಆಗಿದ್ದರೂ ಅವರಿಗೆ ಅರಮನೆಯ ವ್ಯವಹಾರದಲ್ಲಿ ಪ್ರವೇಶವಿರಲಿಲ್ಲ. ಕೊನೆಯ ತನಕ ವೆಂಕಟಪ್ಪನವರು ಹೊರಗಿನವರಾಗಿಯೇ ಉಳಿದಿದ್ದರು.

ಸ್ವಾಮಿಗಳು ಶಿಲ್ಪವಿದ್ಯೆಯಲ್ಲಿ ಪರಿಣಿತರಾಗಿದ್ದಂತೆ ಅವರಿಗೆ ಗುರುಸ್ಥಾನವೂ ಇತ್ತು. ಇಂತಾಗಿ ಅರಮನೆಯ ಪೂರ್ಣ ಪರಿಚಯ ಅವರಿಗಿತ್ತು. ಮಹಾರಾಜರ ಗುರುಗಳು ಮಾತ್ರವಲ್ಲದೆ, ಅಂತರಂಗಿಕರಾಗಿದ್ದರು. ಇವರ ಗುರುಗಳಾಗಿದ್ದ ನಂಜುಂಡ ಶಿವಯೋಗಿಗಳು ವಾಣಿವಿಲಾಸ ಸನ್ನಿಧಾನ ಎಂದು ಖ್ಯಾತರಾಗಿದ್ದ ರಾಜಮಾತೆಯವರ ಗುರುಗಳಾಗಿದ್ದರು. ಅದೇ ರೀತಿಯಾಗಿ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಸ್ವಾಮಿಗಳು ಗುರುಗಳಾಗಿದ್ದರು. ಇದರಿಂದಾಗಿ ಅರಮನೆಯ ಜತೆ ವ್ಯವಹಾರವನ್ನೂ ಇರಿಸಿಕೊಂಡಿದ್ದರು. ಈ ಕಾರಣದಿಂದ ಅನೇಕರಿಗೆ ಸ್ವಾಮಿಗಳ ಜೀವಿತಾವಧಿಯಲ್ಲಿ ಏನೂ ಮಾಡಲಾರದವರು ಬಗ್ಗೆ ಅಸೂಯೆ ಮತ್ತು ದ್ವೇಷವಿತ್ತು. ಆದರೆ ಅದನ್ನು ಅವರು ವ್ಯಕ್ತಗೊಳಿಸುತ್ತಿರಲಿಲ್ಲ. ಸ್ವಾಮಿಗಳ ನಂತರದಲ್ಲಿ ಈ ಜನರು ಸ್ವಾಮಿಗಳನ್ನು ಮೂಲೆಗುಂಪು ಮಾಡುವುದಕ್ಕೆ ಬಹು ಸಮರ್ಥವಾಗಿ ಪ್ರಭಾವ ಬೀರಿದರು.

ಅರಮನೆಯ ಗಾಜಿನ ಮಾಡನ್ನು ಅಲಂಕರಿಸುವ ಸಂದರ್ಭದಲ್ಲಿ ಕೆಲಸಗಾರರಿಗೆ ಕೊಡಬೇಕಾದ ಹಣವನ್ನು ಕಡಿಮೆ ಮಾಡಿಕೊಟ್ಟು ಅವರನ್ನು ಕೆರಳಿಸಿ ಗಲಾಟೆ ಎಬ್ಬಿಸಿದ ಪ್ರಸಂಗವೂ ಉಂಟು. ಅದೇ ರೀತಿಯಾಗಿ ದಸರಾ ಪ್ರದರ್ಶನದ ಚಿತ್ರಗಳನ್ನು ಬರೆಯುತ್ತಿದ್ದವರನ್ನು ಸ್ವಾಮಿಗಳ ವಿರೋಧವಾಗಿ ಎತ್ತಿ ಕಟ್ಟಿದ್ದೂ ಉಂಟು. ಕೊನೆಗೆ ಸ್ವಾಮಿಗಳ ಶಿಷ್ಯರಲ್ಲಿಯೇ ಭಿನ್ನತೆಯನ್ನು ಬಿತ್ತಿದರು. ಬಸವಣ್ಣ ಶಿಲ್ಪಿಗಳು ಬಾಲ್ಯದಿಂದಲೂ ಸ್ವಾಮಿಗಳ ಪೋಷಣೆಯಲ್ಲಿ ಬೆಳೆದಿದ್ದವರು. ಸ್ವಾಮಿಗಳ ಶಿಷ್ಯರಲ್ಲಿ ಅತ್ಯಂತ ಶ್ರೇಷ್ಠರೆಂಬುದಾಗಿ ಪರಿಗಣಿತರಾಗಿದ್ದವರು. ಅವರನ್ನು ಇನ್ನು ಕೆಲವರನ್ನು ಗುಂಪು ಮಾಡಿ ಸ್ವಾಮಿಗಳ ವಿರೋಧ ನಿಲ್ಲಿಸಿ ಗಾಯತ್ರಿದೇವಾಲಯದ ನಿರ್ಮಾಣವನ್ನು ಬಸವಣ್ಣನವರಿಗೆ ಬರುವಂತೆ ನೆರವಾದರು. 'ಮಂತ್ರಾಗಾರ ಸಿದ್ಧಲಿಂಗಪ್ಪ ಮಹಾರಾಜರಿಗೆ ಮಂಕುಬೂದಿ ಎರಚಿ ಅರಮನೆ ದೋಚುತ್ತಿದ್ದಾನೆ' ಎಂಬುದಾಗಿ ನಿರಂತರ ಅಪಪ್ರಚಾರ ಮಾಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲೂ ಬಸವಣ್ಣನವರನ್ನು ತಮ್ಮ ಶಿಷ್ಯನೆಂದು ಆಶೀರ್ವದಿಸಿ, ದೇವಾಲಯ ನಿರ್ಮಾಣದಲ್ಲಿ ಯಶಸ್ವಿಯಾಗು ಎಂದು ಹರಿಸಿದ ವಿಶಾಲ ಮನಸ್ಸು ಸ್ವಾಮಿಗಳದು.

ವೆಂಕಟಪ್ಪನವರು ಅರಮನೆಯಲ್ಲಿದ್ದಷ್ಟು ಕಾಲ ಅವರೊಂದಿಗೆ ವ್ಯವಹರಿಸಿದವರೆಲ್ಲರೂ ವೆಂಕಟಪ್ಪನವರಿಗೆ ಸಾಧಾರಣ ರೀತಿಯಲ್ಲಿ ಗೌರವ ಸಲ್ಲಿಸುತ್ತಿದ್ದರು, ಮಾತನಾಡುತ್ತಿದ್ದರು. ಈ ರೀತಿಯ ಮಂದಿಯ ಸಂಖ್ಯೆ ಸದಾ ಕಡಿಮೆಯಾಗಿಯೇ ಇರುತ್ತಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರಾಗಲಿ, ಜಯಚಾಮರಾಜೇಂದ್ರ ಒಡೆಯರಾಗಲಿ, ಅರಸು ಮನೆತನದ ಇತರರಾಗಲಿ ವೆಂಕಟಪ್ಪನವರನ್ನು ಗೌರವದಿಂದ ಮಾತನಾಡಿಸುತ್ತಿದ್ದರೇ ಹೊರತು ಅವರ ಪಾದಕ್ಕೆ ನಮಸ್ಕರಿಸಿದವರಲ್ಲ. ಅವರ ಆಶೀರ್ವಾದವನ್ನು ಬೇಡಿದವರಲ್ಲ. ವೆಂಕಟಪ್ಪನವರನ್ನು ಮೆಚ್ಚಿದ್ದವರ ಸಂಖ್ಯೆ, ಅವರೊಂದಿಗೆ ವ್ಯವಹಾರ ಇರಿಸಿಕೊಂಡಿದ್ದವರ ಸಂಖ್ಯೆ ಎರಡೂ ತೀರಾ ಸೀಮಿತವಾಗಿಯೇ ಇತ್ತು.

ಸಿದ್ಧಲಿಂಗ ಸ್ವಾಮಿಗಳ ಬಳಿಗೆ ಬರುತ್ತಿದ್ದವರೆಲ್ಲರು ಅವರನ್ನು ಕರಸ್ಥಲನಾಗಲಿಂಗ ಸ್ವಾಮಿಗಳ ಪೀಠಾಧ್ಯಕ್ಷರು ಎಂದು ಗೌರವಿಸಿ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದವನ್ನು ಬೇಡುತ್ತಿದ್ದರು. ವೆಂಕಟಪ್ಪನವರಿಗಿಂತಲೂ ಅತ್ಯಂತ ಹೆಚ್ಚಿನ ಗೌರವ ಮರ್ಯಾದೆಗೆ ಸ್ವಾಮಿಗಳು ಭಾಜನರಾಗಿದ್ದರು. ಮಹಾರಾಜರು, ರಾಣಿ ವಾಸದವರೂ ಸೇರಿ ಸ್ವಾಮಿಗಳ ಆಶೀರ್ವಾದವನ್ನು ಬೇಡುತ್ತಿದ್ದರು. ಸ್ವಾಮಿಗಳು ಅಂತ್ಯಕಾಲದ ತನಕ ಬಹುವಾದ ಭಕ್ತಿ ಗೌರವಗಳನ್ನು ಎಲ್ಲರಿಂದಲೂ ಪಡೆದುಕೊಂಡರು. ಸ್ವಾಮಿಗಳನ್ನು ಮೆಚ್ಚಿಕೊಂಡವರು, ಅವರನ್ನು ಆಶ್ರಯಿಸಿದವರು, ಅವರ ನೆರವನ್ನು ಕೋರಿದವರು ಬಹುಳ ಸಂಖ್ಯೆಯಲ್ಲಿಯೇ ಇದ್ದರು.

ಕಾಮಕಾಮೇಶ್ವರಿ ದೇವಾಲಯದ ನಿರ್ಮಾಣಕ್ಕೆ ಮೊದಲು ಒಪ್ಪಿದ್ದ ಅಂದಾಜನ್ನು ಕಡಿಮೆ ಮಾಡಿಸಿ ಆ ಹಣವೂ ಬಾರದಂತೆ ನೋಡಿಕೊಂಡ ಪ್ರಭಾವಿ ಶತ್ರುಗಳ ಮಧ್ಯೆ ಸ್ವಾಮಿಗಳು ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಈ ವಿರೋಧವನ್ನು ಅವರೆಲ್ಲೂ, ಯಾರಿಗೂ ಹೇಳಿದ್ದಾಗಲಿ ಅವರ ವಿರುದ್ಧ ಕ್ರಮಕ್ಕೆ ಸ್ವಾಮಿಗಳು ಪ್ರಯತ್ನಿಸಿದವರಲ್ಲ. ಮಹಾರಾಜರ ಕಿವಿಗೆ ಈ ಯಾವ ವ್ಯವಹಾರವೂ ಹೋಗಲಿಲ್ಲ ಎಂಬುದು ಸ್ವಾಮಿಗಳ ಸಜ್ಜನಿಕೆ ಮತ್ತು ಬದುಕಿನಲ್ಲಿ ಅವರಿಗಿದ್ದ ವಿಶ್ವಾಸವನ್ನು ತೋರುತ್ತವೆ. ಸ್ವಾಮಿಗಳು ವೆಂಕಟಪ್ಪನವರನ್ನು ಬಹು ಆದರ ವಿಶ್ವಾಸಗಳಿಂದ ಕಾಣುತ್ತಿದ್ದರು. ಒಮ್ಮೆಯೂ ಅವರ ವ್ಯಕ್ತಿತ್ವದ ಬಗ್ಗೆ ಕೆಟ್ಟದ್ದಾಗಿ ಮಾತನಾಡಿದವರಲ್ಲ.

ಕೆ. ವೆಂಕಟಪ್ಪ ಮತ್ತು ರಾಜಾ ರವಿವರ್ಮ ಇವರಿಬ್ಬರ ನಿರಂತರ ಸ್ಫೂರ್ತಿಯಿಂದ ಕರ್ನಾಟಕಕ್ಕೆ, ಕನ್ನಡ ನಾಡಿನ ವರ್ಣಶಿಲ್ಪ ಪರಂಪರೆಗೆ ಉಂಟಾಗಿರುವ ಲಾಭವನ್ನು, ಪ್ರಗತಿಯನ್ನು ಕಲಾ ವಿಮರ್ಶಕರೇ ವಿಶ್ಲೇಷಿಸಿ ನಮಗೆ ವಿವರಿಸಬೇಕಾಗಿದೆ. ಬಹುಶಃ ಇಂತಹವರ ಸಂಬಂಧದಲ್ಲಿಯೇ ಇರಬೇಕು ಈ ಶ್ಲೋಕವನ್ನು ಬಹು ಪ್ರಸಿದ್ಧವಾಗಿ ಹೇಳುತ್ತಿರುತ್ತಾರೆ.

ಜಯಂತಿತೇ ಸುಕೃತಿನೋ ರಸಸಿದ್ಧಾ ಕವೀಶ್ವರಾಃ ।
ನಾಸ್ತಿ ತೇಷಾಂ ಯಶಃ ಕಾಯೇ ಜರಾಮರಣಜಂ ಭಯಂ ॥

[ಸತ್‌ಕೃತಿಗಳನ್ನು ರಚಿಸಿ ರಸಸಿದ್ಧರಾಗಿರುವ ಕವೀಶ್ವರಿಗೆ ಯಾವ ಕಾಲಕ್ಕೂ ಮರಣದ ಭಯ ಕಾಡದು. ಅವರ ಯಶೋಕಾಯವನ್ನು ಕಾಲನು ಯಾವ ರೀತಿಯೂ ಹಾನಿಮಾಡುವುದು ಅಸಾಧ್ಯ].

– ಎಂಬುದು ಇವರಿಗೆ ಅನ್ವಯವಾಗುತ್ತದೆ. ಆದರೆ 'ಸುಕೃತಿ' ಎಂಬುದನ್ನು ಮಾತ್ರ ಸದವಕಾಶ ಎಂಬುದಾಗಿ ಬದಲಿಸಬೇಕಾಗಿರುತ್ತದೆ. ಎಲ್ಲಾ ಸಂದರ್ಭಗಳಲ್ಲೂ 'ಸತ್‌ಕೃತಿ'ಗಳು ತಾವಾಗಿಯೇ ಗುರ್ತಿಸಲ್ಪಡುವುದು ಸುಲಭವಲ್ಲ. ಇದು ಸಿದ್ಧಲಿಂಗಸ್ವಾಮಿಗಳ ವಿಷಯದಲ್ಲಂತೂ ಸಂಪೂರ್ಣವಾಗಿ ಸತ್ಯವಾಗಿದ್ದು ಅವರ ಸಂಪೂರ್ಣ ಸೇವೆಯು ವಿಸ್ಮೃತವಾಗಿದೆ.

ವೆಂಕಟಪ್ಪನವರಿಗೆ ಅವರ ಬದುಕಿನಾದ್ಯಂತ ಇಂತಹ ವಿರೋಧ ಎಂದೂ ಇರಲಿಲ್ಲ.

ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಮದರಾಸಿನ ಗೌರ್‍ನರ್ ಆಗಿದ್ದಾಗ ಮದರಾಸು ವಿಶ್ವವಿದ್ಯಾಲಯದಲ್ಲಿ ತಮ್ಮ ಗುರುಗಳಾಗಿದ್ದ ಶ್ರೀ ಸ್ವಾಮಿಗಳ ಬಗ್ಗೆ ಒಂದು ಲಕ್ಷ ರೂ ಮೊತ್ತದ ದತ್ತಿಯೊಂದನ್ನು ಸ್ಥಾಪಿಸಿ ತಮ್ಮ ಗುರುಭಕ್ತಿಯನ್ನು ವ್ಯಕ್ತಪಡಿಸಿದರು. ಆದರೆ ಅದೇನು ಕಾರಣವೋ ಆ ದತ್ತಿನಿಧಿಯಿಂದ ಮದರಾಸು ವಿಶ್ವವಿದ್ಯಾಲಯವು ಇದುವರೆವಿಗೂ ಒಂದು ಕಾರ್ಯಕ್ರಮವನ್ನೂ ಯೋಜಿಸಿ ನಡೆಸಿದ್ದಿಲ್ಲ, ಈ ರೀತಿ ಅರಮನೆಯವರು ಕೆ. ವೆಂಕಟಪ್ಪನವರ ಬಗ್ಗೆ ಗೌರವವನ್ನು ತೋರಿಸಿದ್ದು ನಮಗೆ ಗೊತ್ತಿಲ್ಲ.



ಚಿತ್ರ : ೧೦.೭ ಹಂಸ

ಸ್ವಾಮಿಗಳು ಗುರುಗಳಾಗಿದ್ದು ಮಹಾರಾಜರಿಗೆ ಪ್ರಿಯ ರಾಗಿದ್ದುದರಿಂದ ಈ ಬೆಲೆಯನ್ನು ಅವರು ತೆರಬೇಕಾಯಿತು ಎನಿಸುತ್ತದೆ. ಈ ಅಸೂಯಾಪರರೇ 'ಸಿದ್ಧಲಿಂಗಪ್ಪ ಎನು ಮಹಾ...' ಎಂಬ ಪ್ರಚಾರದ ಮುಂಚೂಣಿಯಲ್ಲಿದ್ದು ತಮ್ಮ ಪ್ರಭಾವವನ್ನು, ಅಧಿಕಾರಗಳನ್ನು ಬಳಸಿ ಸ್ವಾಮಿಗಳ ನೈಜ ಸಾಧನೆಯ ವಿಸ್ಮರಣೆಗೆ ಪ್ರಧಾನ ಕಾರಣರಾಗಿದ್ದಾರೆ. ಸ್ವಾಮಿಗಳ ಶಿಷ್ಯರ ಸ್ವಾರ್ಥ ಮನಸ್ಸು ಮತ್ತು ದಾಯಾದಿಗಳ ಮತ್ತು ಬಂಧುಗಳ ಒಳ ಜಗಳಗಳೊಂದಿಗೆ ಕನ್ನಡಿಗರ ನಿರ್ಲಿಪ್ತತೆಯೂ ಸೇರಿ ಸ್ವಾಮಿಗಳನ್ನು, ಅವರ ಕಲಾಸೇವೆಯನ್ನು ವಿಸ್ಮರಿಸುವಂತಹ ಮೇರು ಪ್ರಮಾದ ಕರ್ನಾಟಕದಲ್ಲಿ ಘಟಿಸಲು ಸಾಧ್ಯವಾಯಿತು.

ಆದರೆ **ಇದರ ಫಲ** ಮಾತ್ರ ಕರ್ನಾಟಕದ ದೇವಾಲಯದ ಶಿಲ್ಪ ಸಂಸ್ಕೃತಿಯ ಮೇಲೆ ಬಹು ತೀವ್ರತಮವಾಗಿ ಉಂಟಾಗಿದೆ. **ಸ್ವಾಮಿಗಳ ತರುವಾಯ ದೇವಾಲಯ ನಿರ್ಮಾಣ ಮಾಡುವ ಯೋಗ್ಯತೆ, ಸಾಮರ್ಥ್ಯ ಇರುವವರೇ ಇಂದಿಗೂ ಕರ್ನಾಟಕದಲ್ಲಿ** ಇಲ್ಲ. ಕರ್ನಾಟಕವನ್ನು ತಮಿಳುನಾಡಿನ ಚೋಳ ಶೈಲಿಯ ದೇವಾಲಯ ನಿರ್ಮಾಣಕ್ಕೆ ಮುಕ್ತವಾಗಿ ತೆರೆದು ಬಿಟ್ಟದೆ. ***ಸ್ವಾಮಿಗಳ ನಾಮಸ್ಮರಣ ಮಾತ್ರದಿಂದಲೇ ಮತ್ತೆ ಕರ್ನಾಟಕ ಶಿಲ್ಪಶೈಲಿಯು ಉಸಿರಾಡಬೇಕಾಗಿದೆ.***

೧೧

ಸ್ಮರಣೆಯೊಂದೇ ಕೈಹಿಡಿದು ಮುನ್ನಡೆಸುವ ಶಕ್ತಿ

ಶಿಲ್ಪಕಲೆಗೆ ಸಂಬಂಧಿಸಿರುವಂತೆ ಶಿಲ್ಪಸಿದ್ಧಾಂತಿ, ಶಿವಯೋಗಿ ಸಿದ್ಧಲಿಂಗಸ್ವಾಮಿಯವರ ಪರಿಚಯವನ್ನು ಸಾಧ್ಯವಿರುವಷ್ಟು ಸಮಗ್ರವಾಗಿ ಮಾಡಿಕೊಡುವ ಪ್ರಯತ್ನವನ್ನು ಮಾಡಿದ್ದೇನೆ. ಗುರುಪೀಠಾಧ್ಯಕ್ಷರಾಗಿ ಮತ್ತು ಮಂತ್ರ ಸಿದ್ಧರಾಗಿ ಅವರು ಮಾಡಿರುವ ಜನೋಪಕಾರಿ ಸೇವೆಗಳ ಬಗ್ಗೆ ಮಾಹಿತಿ ಸೇರ್ಪಡೆ ಮಾಡಿಲ್ಲ. ಸಮಾಜಸೇವಾ ದೀಕ್ಷೆಯನ್ನು ವಹಿಸಿಕೊಂಡು ಜೀವನವನ್ನು ಸವೆಸಿದವರ ಸೇವೆಗಳನ್ನು ಪಟ್ಟಿಮಾಡುವುದು ಸುಲಭದ ಕೆಲಸವಲ್ಲ. ಆದರೆ ಶಿಲ್ಪಕಲಾ ಕ್ಷೇತ್ರದಲ್ಲಿ ಸ್ವಾಮಿಗಳು ಸಲ್ಲಿಸಿರುವ ಸೇವೆಯೊಂದೇ ಅವರನ್ನು ಶಕಪುರುಷರನ್ನಾಗಿ ನಿಲ್ಲಿಸಲು ಸಾಕು.



ಚಿತ್ರ ೧೧.೧ : ಶ್ರೀ ಸ್ವಾಮಿಗಳ ರೇಖಾಚಿತ್ರ
(ರೇಖಾಚಿತ್ರ: ಜಿ.ವೀರೇಂದ್ರ ಶಂಕರ್)

ಶಿಲ್ಪಶಾಸ್ತ್ರಗಳಲ್ಲಿ ಸ್ಥಪತಿ ಲಕ್ಷಣ ಎಂಬುದರ ವಿವರಣೆ ಕಿರಿದಾಗಿಯೋ, ವಿವರವಾಗಿಯೋ, ಲಭಿಸುತ್ತದೆ. ಅವುಗಳಲ್ಲಿ ಸ್ಥಪತಿಯನ್ನು ಹಿರಿಯನನ್ನಾಗಿ ವರ್ಣಿಸಿ ಆತನನ್ನು ಪ್ರಧಾನ ನಿಯಂತಾರನೆಂದು ನಿಶ್ಚಿತಗೊಳಿಸಿರುತ್ತಾರೆ. ಈತನ ಸಹಾಯಕರು ಅಳತೆಗಳಲ್ಲಿ ಸಕಲವೂ ಬಲ್ಲವ ಸೂತ್ರಗ್ರಾಹಿ. ತಕ್ಷಕನು ವೃತ್ತಿಯಲ್ಲಿ ನಿಪುಣನು. ವರ್ಧಕಿಯು ಶಾಸ್ತ್ರಾಧ್ಯಯನವನ್ನು ಮಾಡಿ ಶಿಲ್ಪ ನಿರ್ಮಾಣದಲ್ಲಿ ಬರಬಹುದಾದ ಸಮಸ್ಯೆಗಳನ್ನು ಬಗೆಹರಿಸಬಲ್ಲವನು. ಸ್ಥಪತಿಯು ಈ ಮುವ್ವರ ಗುರುವು. ಇಷ್ಟುಮಾತ್ರವೇ ಅಲ್ಲ ಆತನಲ್ಲಿ ನಾಲ್ಕು ಪ್ರಧಾನ ಅಂಶಗಳು ಇರಬೇಕು. ಅವು – (೧) ಶಾಸ್ತ್ರಜ್ಞಾನ ಮತ್ತು ಪ್ರಯೋಗ ತಂತ್ರ (೨) ಕನಸನ್ನು ನನಸಾಗಿ ನಿರ್ಮಿಸುವ ಅಂತಃ ಪ್ರಜ್ಞೆ (೩) ವೈಯ್ಯಕ್ತಿಕ ಶೀಲ. ಸತ್ಯ–ಧರ್ಮಗಳಲ್ಲಿ ನಿಷ್ಠೆ. ಇವು ಇರುವವನೇ **ಪರಿಪೂರ್ಣ ಸ್ಥಪತಿ** ಎಂಬುದು ಶಾಸ್ತ್ರದ ಅಭಿಮತ.

ಈ ಸಂಬಂಧದಲ್ಲಿ ಪೂರ್ಣ ವಿವರಣೆಯನ್ನು ಈ ಗ್ರಂಥದ ಅನುಬಂಧ –೨ ರಲ್ಲಿ (ಪುಟ ೨೦೮ ರಿಂದ ೨೧೩) ಸಮರಾಂಗಣ ಸೂತ್ರಧಾರ ಶಿಲ್ಪಶಾಸ್ತ್ರದಲ್ಲಿ ಕೊಟ್ಟಿದೆ. ಆ ವಿವರಗಳ ಪ್ರಕಾರವೇ ಸಿದ್ಧಲಿಂಗಸ್ವಾಮಿಗಳ ಸಾಧನೆ–ವ್ಯಕ್ತಿತ್ವಗಳನ್ನು ತೂಗಿ ನೋಡುವುದರಿಂದ ಅವರ ಬದುಕಿನ ಸಾಧನೆಯ ಮಹತ್ತ್ವವನ್ನು ಸ್ವಲ್ಪಮಟ್ಟಿಗಾದರೂ ನಾವು ತಿಳಿಯವುದು ಸಾಧ್ಯವಾಗುತ್ತದೆ. ಪೂರ್ವೋಕ್ತ ಅಂಶಗಳ ದೃಷ್ಟಿಯಿಂದ ಸ್ವಾಮಿಗಳನ್ನು ತೂಗಿ ನೋಡೋಣ.

೧. ಶಿಲ್ಪಶಾಸ್ತ್ರ–ಪ್ರಯೋಗತಂತ್ರ ಜ್ಞಾನ

ಸ್ಥಪತಿಯ ಲಕ್ಷಣವನ್ನು ವಿವರಿಸುತ್ತಾ ಸಮರಾಂಗಣ ಸೂತ್ರಧಾರನು ಹೇಳಿರುವುದು ಶಿಲ್ಪಶಾಸ್ತ್ರದ ಪರಿಪೂರ್ಣ ಜ್ಞಾನ – ದುರ್ಗನಿರ್ಮಾಣ, ನಗರ ಯೋಜನೆ, ಅರಮನೆ, ಗೃಹ ನಿರ್ಮಾಣ, ಪ್ರಾಸಾದ ನಿರ್ಮಾಣ, ಯಜ್ಞವೇದಿ ಆಯುಧ ನಿರ್ಮಾಣ. ಸ್ವಾಮಿಗಳಿಗೆ ಈ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸಮಾಡುವ ಅವಕಾಶ ಕಲ್ಪಿತವಾಗಲಿಲ್ಲ. ಆದರೆ ಪ್ರಾಸಾದ (ದೇವ ಮತ್ತು ಮಾನುಷ) ಮತ್ತು ಯಜ್ಞಾಂಗ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಈ ವಿಭಾಗವೇ ಅತ್ಯಂತ ವಿಶಾಲವಾದದ್ದು. ಶಿಲ್ಪಶಾಸ್ತ್ರದ ವ್ಯಾಪ್ತಿ ಇದಕ್ಕಿಂತಲೂ ಹೆಚ್ಚಾಗಿಯೇ ಇದೆ. ನಿಜಕ್ಕೂ ಸಮಗ್ರ ಶಿಲ್ಪಶಾಸ್ತ್ರವನ್ನು ಕರತಲಾಮಲಕವನ್ನಾಗಿ ಮಾಡಿಕೊಳ್ಳುವುದು ಸುಲಭದ ಕೆಲಸವೇನಲ್ಲ! ಇಲ್ಲಿ ಶಾಸ್ತ್ರ ಮತ್ತು ಪ್ರಯೋಗ ಜ್ಞಾನಕ್ಕೆ ಸಮಾನವಾದ ಒತ್ತು ಕೊಟ್ಟಿದೆ.

ಸ್ವಾಮಿಗಳು ರೇಖಾಚಿತ್ರದಲ್ಲಿ ನಿಷ್ಣಾತರು ಎಂಬುದನ್ನು ಅವರ ಸ್ಕೆಚ್‌ಗಳು ಮತ್ತು ಮಾನಸಾರ ಶಿಲ್ಪಶಾಸ್ತ್ರಕ್ಕೆ ಬರೆದಿರುವ ರೇಖಾಚಿತ್ರಗಳೇ ಹೇಳುತ್ತವೆ. ಇಂದಿನ ಬಹುಪಾಲು ಸಾಂಪ್ರದಾಯಿಕ ಶಿಲ್ಪಿಗಳಿಗೆ ರೇಖಾಚಿತ್ರ ಬರೆಯಲು ಬರುವುದೇ ಇಲ್ಲ. ರೆಫ್ ಸ್ಕೆಚ್ ಮಾತ್ರವೇ ಮಾಡಬಲ್ಲರು. ಆದರೆ ಅವು ಸ್ವಾಮಿಗಳ ಸ್ಕೆಚ್‌ಗಳ ಕಾಲು ಭಾಗದ ಹಂತವನ್ನೂ ತಲುಪಲಾರವು.

ವರ್ಣಚಿತ್ರ ರಚಿಸಬಲ್ಲವರು ಶಿಲ್ಪವನ್ನು ಮಾಡಲಾರರು. ಶಿಲ್ಪವನ್ನು ಮಾಡಬಲ್ಲವರು ವರ್ಣಚಿತ್ರ ರಚನೆ ಮಾಡಲಾರರು. ಶಾಸ್ತ್ರೀಯ ಲಕ್ಷಣಗಳನ್ನು ಪೂರ್ಣವಾಗಿ ಅರಿತು ಅನುಸರಿಸಿ ತಾಲಮಾನದ ಅಳತೆಗಳನ್ನು ಪಾಲಿಸುತ್ತಾ ಶಾಸ್ತ್ರೀಯ ಕ್ರಮದಲ್ಲಿ ಪ್ರತಿಮಾ ನಿರ್ಮಾಣವನ್ನು ಮಾಡಬಲ್ಲ ಪಾರಂಪರಿಕ ಶಿಲ್ಪಿ ಸಮಗ್ರ ಭಾರತದಲ್ಲಿಯೇ ಇಂದೂ ಕೂಡ ಯಾರೂ ಇಲ್ಲ ಎನ್ನುವುದು ಪರಮ ಸತ್ಯ ಸಂಗತಿ. ಸ್ವಾಮಿಗಳ ಕಾಲದಲ್ಲೂ ಈ ವಾಕ್ಯ ಸತ್ಯವಾಗಿತ್ತು ಎಂಬುದು ಪ್ರೊ॥ ಪ್ರಸನ್ನಕುಮಾರ ಆಚಾರ್ಯ ಅವರ ಅನುಭವೇ ಖಚಿತ ಪಡಿಸುತ್ತದೆ.

ಶಿಲ್ಪಶಾಸ್ತ್ರದ ಅಧ್ಯಯನ ಒಂದು ಭಾಗವಾದರೆ, ಅದರ ಪ್ರಯೋಗದಿಗ್ದರ್ಶನ ಇನ್ನೊಂದು ಭಾಗ. ಶಿಲ್ಪಿಯಾದವನು ಎರಡೂ ಭಾಗಗಳಲ್ಲಿ ನಿಷ್ಣಾತನಾಗಿರಬೇಕು. ಇಂತಹವರು ಈಗಲೂ ದುರ್ಲಭವೇ. ಸ್ವಾಮಿಗಳಲ್ಲಿ ಶಿಷ್ಯಾರ್ಜನೆ ಮಾಡಿದವರಲ್ಲಿ ಇಬ್ಬರು ಮುವ್ವರನ್ನು ಬಿಟ್ಟರೆ ಉಳಿದವರೆಲ್ಲಾ ಶಾಸ್ತ್ರಭಾಗವನ್ನು ರೂಢಿಗೆ, ವ್ಯವಹಾರಕ್ಕೆ ಬೇಕಾಗುವಷ್ಟು ಭಾಗವನ್ನು ಮಾತ್ರವೇ ಕಲಿತವರು. ವರ್ಣಚಿತ್ರ ರಚನೆ ಮಾತ್ರವೇ ಅಥವಾ ಶಿಲಾ ಶಿಲ್ಪ ಅಥವಾ ಕಾಷ್ಠಶಿಲ್ಪಮಾತ್ರವೇ ಕಲಿತವರು. ಎರಕದ ಕೆಲಸ, ತಗಡಿನ ನಕಾಸೆ ಕೆಲಸವನ್ನೂ ಸ್ವಾಮಿಗಳು ಶಿಷ್ಯರಿಗೆ ಕಲಿಸಿದ್ದಾರೆ ಎಂದರೆ ಸ್ವಾಮಿಗಳು ಪಂಚ ಶಿಲ್ಪ ಪ್ರವೀಣರು.

ಅಜ್ಜಿಹಳ್ಳಿ ನಾಗೇಂದ್ರಾಚಾರ್ಯರು ವಯಸ್ಸಿನಲ್ಲಿ ಸ್ವಾಮಿಗಳಿಗಿಂತಲೂ ನಾಲ್ಕು ವರ್ಷ ಮಾತ್ರವೇ ಚಿಕ್ಕವರು. ಆಗ್ಗೇ ರಥ ಶಿಲ್ಪದಲ್ಲಿ ಪ್ರವೀಣರೆಂದು ಹೆಸರಾಗಿದ್ದವರು. ಅಂತಹವರೇ ಪ್ರತಿಮಾಶಿಲ್ಪಶಾಸ್ತ್ರ ಮತ್ತು ರಥ ನಿರ್ಮಾಣ ಶಿಲ್ಪಶಾಸ್ತ್ರವನ್ನು ಸ್ವಾಮಿಗಳಲ್ಲಿ ಅಧ್ಯಯನ ಮಾಡಿದರು. ಸ್ವರ್ಣಶಿಲ್ಪಿ ಸಿಂಗಣ್ಣಾಚಾರ್ಯರು ಸ್ವಾಮಿಗಳಿಗಿಂತಲೂ ಹತ್ತು ವರ್ಷ ಹಿರಿಯರು. ಆಗ್ಗೇ ಖ್ಯಾತ ನಾಮರಾಗಿದ್ದವರು. ಅಂತಹವರೂ ಶಾಸ್ತ್ರದ ವಿವರಗಳನ್ನು ಸ್ವಾಮಿಗಳಿಂದಲೇ ಕಲಿತರು ಇದರಿಂದ ಸ್ವಾಮಿಗಳ ವಿದ್ವತ್ತನ್ನು, ತಮ್ಮ ಕಾಲದ ಶಿಲ್ಪಿಗಳ ಮೇಲೆ ಅವರು ಬೀರಿದ ಪ್ರಭಾವವನ್ನು, ವಾಚಕರು ಕಲ್ಪಿಸಿಕೊಳ್ಳಲು ಸಾಧ್ಯವಾದೀತು.

ಇದರೊಂದಿಗೆ ಪ್ರಾಸಾದ ನಿರ್ಮಾಣ ಎಂದರೆ ದೇವಾಲಯ ನಿರ್ಮಾಣದ ತಿಳಿವು. ಪ್ರಾಂತೀಯ ಬೇಧವನ್ನು ಅನುಸರಿಸಿ ಆ ಶೈಲಿಯನ್ನು ಕಾಪಾಡುವುದು ಸಾಧಾರಣವಾದುದಲ್ಲ. ಸ್ವಾಮಿಗಳು ಸ್ವಯಂ ದೇವಾಲಯದ ಜೀರ್ಣೋದ್ಧಾರ ಮಾಡಿದ್ದಾರೆ. ಹೊಸದಾದ ಭುವನೇಶ್ವರಿ ದೇವಾಲಯವನ್ನು ನಿರ್ಮಿಸಿದ್ದಾರೆ. ತಾವು ಬಹುವಾಗಿ ಮೆಚ್ಚಿ ಕನ್ನಡನಾಡಿನ ಶೈಲಿಯಾದ ಹೊಯ್ಸಳ ದೇವಾಲಯವನ್ನು ನಿರ್ಮಿಸಿದ್ದಾರೆ. ಇಂದು ನೋಡಿದವರೂ ಅಲ್ಲಿಯ ಶಿಲ್ಪದ

ಕುಸುರಿ ಕೆಲಸವನ್ನು ಮೆಚ್ಚದೆ ಇರುವುದು ಸಾಧ್ಯವೇ ಇಲ್ಲ. ಈ ತೆರನಾದ ದೇವಾಲಯ ನಿರ್ಮಾಣ ಮಾಡುವ ಸಾಮರ್ಥ್ಯ ಇರುವ ಶಿಲ್ಪಿ ಕನ್ನಡನಾಡಿನಲ್ಲಿ ಇಂದು ಒಬ್ಬರೂ ಇಲ್ಲ ಎಂಬುದು ಸ್ವಾಮಿಗಳ ತರುವಾಯ ಶಿಲ್ಪಕ್ಷೇತ್ರದಲ್ಲಿ ಉಂಟಾಗಿರುವ ಪ್ರಖರವಾದ ನಿರ್ವಾತವನ್ನು ಸೂಚಿಸುತ್ತದೆ.

ಈ ರೀತಿಯಾಗಿ ಸಮಗ್ರ ಶಾಸ್ತ್ರಜ್ಞಾನವನ್ನು, ಪ್ರಯೋಗ ತಂತ್ರವನ್ನು ರೂಢಿಸಿಕೊಂಡು ಶಿಲ್ಪದ ಎಲ್ಲಾ ಕ್ಷೇತ್ರಗಳಲ್ಲೂ ಶಿಷ್ಯರನ್ನು ತಯಾರಿಸಿರುವ ಸ್ಥಪತಿ ಕರ್ನಾಟಕದಲ್ಲಿ ಮಾತ್ರವಲ್ಲ ಅಖಿಲ ಭಾರತ ಮಟ್ಟದಲ್ಲೂ ವಿರಳವೇ. ನಿಜಕ್ಕೂ ಸ್ವಾಮಿಗಳು ಪರಿಣಿತರಾಗಿದ್ದ ಕ್ಷೇತ್ರದ ಒಂದೊಂದೇ ವಿಭಾಗದಲ್ಲಿ ಪರಿಣಿತರಾದ ಶಿಷ್ಯರು ರಾಜ್ಯದಲ್ಲಿ ಹಲವು ಮನ್ನಣೆ – ಗೌರವ– ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ ಎಂಬುದನ್ನು ನಾವು ಮುಖ್ಯವಾಗಿ ಗಮನಿಸಬೇಕು.

೨. ವಿದ್ವಾಂಸ ಸ್ಥಪತಿ – ಪಂಡಿತ, ಕವಿ, ಸಾಹಿತಿ

ಸ್ವಾಮಿಗಳು **ಶಿಲ್ಪ ವಿದ್ಯಾರಹಸ್ಯೋಪನಿಷತ್** ಕೌಮಾರಭಾಷ್ಯದೊಂದಿಗೆ ಸಂಪಾದಿಸಿ ಪ್ರಕಟಿಸಿರುವ ಗ್ರಂಥವು ಶಿಲ್ಪಶಾಸ್ತ್ರಕ್ಕೆ ಅವರು ನೀಡಿರುವ ಅಮೂಲ್ಯ ಕೊಡುಗೆ. ಇದರೊಂದಿಗೆ ಋಗ್ವೇದ ಸಂಹಿತೆಯ ಪ್ರಕಟಣೆಗೆ ಪ್ರೇರಕರಾಗಿರುವುದು ಸಾಧಾರಣ ಸಂಗತಿಯಲ್ಲ. ಕನ್ನಡದಲ್ಲಿ ಕೇವಲ ಪಂಡಿತರಾದವರು ಮಾತ್ರವೇ ಹಸ್ತಪ್ರತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಸ್ವಾಮಿಗಳು **ಶ್ರೀ ಕರಸ್ಥಲ ನಾಗಲಿಂಗ ದೇವ ಚರಿತಂ** ಕನ್ನಡದ ಸಾಂಗತ್ಯ ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿರುವುದು ಸಾಧಾರಣ ಶಿಲ್ಪಿಗಳಿಂದ ಅಸಾಧ್ಯವಾದುದು. ಸ್ವಯಂ ಸಂಸ್ಕೃತ, ಶಿಲ್ಪಶಾಸ್ತ್ರ, ವೇದ, ಆಗಮ ಮತ್ತು ಶ್ರೌತಕರ್ಮದಲ್ಲಿ ವಿದ್ವಾಂಸರಾಗಿದ್ದು ಶಿಲ್ಪಿಗಳಾಗಿರುವ ಸಿದ್ಧಲಿಂಗ ಸ್ವಾಮಿಗಳು ಶಾಸ್ತ್ರದ ಆಶಯದ ಪ್ರಕಾರವೇ ಸ್ಥಪತಿಯ ಎಲ್ಲಾ ಗುಣಗಳನ್ನು ಪಡೆದಿದ್ದಾರೆ. ಸ್ವಾಮಿಗಳಲ್ಲಿ ಶಿಷ್ಯಾರ್ಜನೆ ನಡೆಸಿದವರು ಶಿಲ್ಪದ ಒಂದೇ ವಿಭಾಗದಲ್ಲಿ ಕಲಿತು ಅಧ್ಯಯನದಲ್ಲಿ ಹಿಂದುಳಿದು ಕೇವಲ ಅವಶ್ಯಕ ಶಾಸ್ತ್ರದ ಭಾಗಗಳ ಪಾಠಗಳನ್ನು ಮಾತ್ರವೇ ಕಲಿತು ಶಿಲ್ಪಿಗಳಾಗಿರುವಂತೆ ಕಾಣುತ್ತದೆ.

ಶಿಲ್ಪ ಸಾರ ಎಂಬ ಖಂಡಕಾವ್ಯವನ್ನು ಷಟ್ಪದಿಯಲ್ಲಿ ರಚಿಸಿ, ಕನ್ನಡದಲ್ಲಿ ಶಿಲ್ಪದ ಹಿರಿಮೆ ಸಾರಿದ್ದಾರೆ. ಆದ್ದರಿಂದ ಸ್ವಾಮಿಗಳು ಶಿಲ್ಪಶಾಸ್ತ್ರದೊಂದಿಗೆ, ಕನ್ನಡ, ಸಂಸ್ಕೃತಗಳಲ್ಲೂ ಅದ್ವಿತೀಯ ಪಂಡಿತರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

೩. ಅಂತಃ ಪ್ರಜ್ಞೆ

ಕನಸನ್ನು ಕಾಣುವ, ಕಂಡ ಕನಸನ್ನು ನನಸು ಮಾಡುವ ಸಾಮರ್ಥ್ಯವು ಸ್ಥಪತಿಯಲ್ಲಿ ಅನಿವಾರ್ಯವಾಗಿ ಇರಬೇಕಾಗಿರುವ ಗುಣ ಎಂಬುದು ಶಾಸ್ತ್ರದ ನಿರ್ಣಯ. ಈ ಕನಸು ಶಾಸ್ತ್ರದ ಪರಿಧಿಯಲ್ಲಿದ್ದು ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಗಳಿಂದಲೂ ಪ್ರಯೋಜಕ ಎಂಬುದಾಗಿ ನಿರ್ಣಯವಾಗಬೇಕು. ಶಿಲ್ಪಕಾರ್ಯಗಳಾದಾಗ ಶಾಸ್ತ್ರ ಅಂಗೀಕರಿಸುವ ನಿರ್ಮಾಣಗಳನ್ನು ಮಾಡಬೇಕು. ಇದಕ್ಕಾಗಿ ಧಾರ್ಮಿಕ ಪ್ರಜ್ಞೆ, ಶಾಸ್ತ್ರದ ಜ್ಞಾನ, ಸಾಮಾಜಿಕ ಪರಿಜ್ಞಾನಗಳು ಇದ್ದು ನಿರ್ವಹಿಸುವ ಸಾಮರ್ಥ್ಯ ಸ್ಥಪತಿಗೆ ಇರಬೇಕು. ಈ ಅಂತಃ ಪ್ರಜ್ಞೆಯನ್ನು ಸ್ವಾಮಿಗಳು ತಮ್ಮ ಎಳೆಯ ಪ್ರಾಯದಿಂದಲೂ ಕಾಪಾಡಿಕೊಂಡೇ ಬಂದಿದ್ದಾರೆ. ತಮ್ಮ ಎಲ್ಲಾ ಪ್ರಯತ್ನಗಳಲ್ಲೂ ಅವರು ಜಯಶಾಲಿಗಳಾಗಿರುವುದರ ಕಾರಣವು ಇದೇ ಅಂತಃಪ್ರಜ್ಞೆಯೇ.

ಅವರು **ಜಗದ್ಗುರು ಶೈವಶಿಲ್ಪ ಬ್ರಹ್ಮರ್ಷಿ ಗುರುಕುಲಂ** ಸ್ಥಾಪಿಸುವ ವೇಳೆಗೆ ಅವರಲ್ಲಿ ಶಿಲ್ಪವನ್ನು ಕಲಿತವರು ನೂರಾರು ಮಂದಿ ಇದ್ದರೂ, ಈ ಸಂಖ್ಯೆ ಇನ್ನೂ ಬೆಳೆಯಬೇಕೆಂಬುದು ಸ್ವಾಮಿಗಳ ಆಶಯವಾಗಿತ್ತು. ಸುಮಾರು ೪೩ ವರ್ಷಗಳಷ್ಟು ದೀರ್ಘ ಅವಧಿಯಲ್ಲಿ ನೂರಾರುಮಂದಿ ಶಿಷ್ಯರನ್ನು ಸಿದ್ಧಪಡಿಸಿದ್ದರೂ, ತಮ್ಮ ಶಿಷ್ಯರಲ್ಲಿದ್ದ ಕೊರತೆಗಳನ್ನು ಸ್ವಾಮಿಗಳು ಸ್ಪಷ್ಟವಾಗಿ ಅರಿತಿದ್ದರು. ಅದಕ್ಕಾಗಿಯೇ ಪ್ರತ್ಯೇಕವಾದ ಗುರುಕುಲವನ್ನು ಸ್ಥಾಪಿಸಬೇಕೆಂದು

ಆಶಿಸಿ, ತಮ್ಮ ೬೪ನೆಯ ವಯಸ್ಸಿನಲ್ಲಿ ಅದಕ್ಕಾಗಿಯೇ ಪ್ರತ್ಯೇಕವಾದ ವ್ಯವಸ್ಥೆಯನ್ನು ಬಹು ಉತ್ಸಾಹದಿಂದ ಏರ್ಪಡಿಸಿದರು.

ಮಧುವನದಲ್ಲಿ ತಮ್ಮ ಗುರುಗಳ ಸಮಾಧಿಯನ್ನು ತಾವೇ ಪ್ರತ್ಯೇಕವಾಗಿ ನಿರ್ಮಿಸಿದ್ದರೂ, ತಮ್ಮ ಸಮಾಧಿಗೆ ಮಾತ್ರ ಸ್ಥಳವನ್ನು ಗುರುಕುಲದಲ್ಲಿಯೇ ಆಯ್ಕೆಮಾಡಿಕೊಂಡರು. ಗುರುಕುಲದಲ್ಲಿ ಸ್ವಾಮಿಗಳ ಸಮಾಧಿ ನಿರ್ಮಿಸಲು ಸಾರ್ವಜನಿಕ ವಿರೋಧ ಆಗ ಬಂದಿದ್ದುದನ್ನು ಇಲ್ಲಿ ಸ್ಮರಿಸಬಹುದು. ಈ ರೀತಿಯ ವಿರೋಧದ ಕಲ್ಪನೆ ಸ್ವಾಮಿಗಳಿಗೆ ಇರಲಿಲ್ಲ ಎಂದು ಹೇಳಲು ಸಾಧ್ಯವಿರಲಿಲ್ಲ. ಆದರೂ ಅವರಿಗೆ ಗುರುಕುಲವೇ ಅತ್ಯಂತ ಪ್ರಿಯವಾಗಿತ್ತು.

ಸ್ವಾಮಿಗಳಿಗೆ ಗುರುಕುಲವು ವಿಕಸಿಸಿ ಅಭಿವೃದ್ಧಿಯ ಹಾದಿಯಲ್ಲಿ ಸಾಗಿದರೆ ಮಾತ್ರವೇ ಕರ್ನಾಟಕದ ಶಿಲ್ಪಕ್ಷೇತ್ರ ವಿಕಸಿಸುತ್ತದೆ ಎಂಬುದು ಖಚಿತವಾಗಿ ಮನವರಿಕೆಯಾಗಿತ್ತು. ಅದೇ ತಮ್ಮ ಭವಿಷ್ಯ ಕ್ಷೇತ್ರ ಎಂದು ತಮ್ಮ ಸಮಾಧಿಯ ನಿರ್ಮಾಣಕ್ಕೆ ಗುರುಕುಲವನ್ನು ಆರಿಸಿಕೊಂಡಿದ್ದರು ಎನಿಸುತ್ತದೆ.

ಸ್ವಾಮಿಗಳ ಶಿಷ್ಯರು ಸ್ವಾಮಿಗಳ ನಂತರದ ಆರು ದಶಕಗಳ ಕಾಲ ಕರ್ನಾಟಕದ ಶಿಲ್ಪಕ್ಷೇತ್ರದ ಸೇವೆ ಮಾಡಿ ಸರ್ಕಾರದ ಮತ್ತು ಇತರ ಸಾರ್ವಜನಿಕ ಗೌರವ–ಮನ್ನಣೆ–ಪ್ರಶಸ್ತಿಗಳನ್ನು ಪಡೆದು ಕೊಂಡರು. ಆದರೆ ಇವರಲ್ಲೊಬ್ಬರೂ ಕೂಡ ಸ್ವಾಮಿಗಳಂತೆ ಶಿಲ್ಪಕ್ಷೇತ್ರದ ಬೆಳವಣಿಗೆಯ ಬಗ್ಗೆ ಚಿಂತಿಸಲಿಲ್ಲ. ಶಿಲ್ಪಕ್ಷೇತ್ರದ ಪ್ರಗತಿಗಾಗಿ ಸ್ವಾಮಿಗಳು ತಮ್ಮನ್ನು ಬೆಳೆಸಿದಂತೆ ತಾವೂ ಒಂದು ಶಿಷ್ಯ ಪರಂಪರೆಯನ್ನು ಬೆಳೆಸಬೇಕಾಗಿದೆ ಎಂಬುದನ್ನು ಅರಿತವರಲ್ಲ. ಕೊನೆಗೆ ಸ್ವಾಮಿಗಳನ್ನು ಸ್ಮರಿಸುವ ಕೆಲಸವನ್ನೂ ಮಾಡಿದವರಲ್ಲ.

ಸ್ವಾಮಿಗಳ ಶಿಷ್ಯರ ಬಗ್ಗೆ ನಮ್ಮ ಅಭಿಪ್ರಾಯವು ಈ ರೀತಿಯಾಗಿ ರೂಪಿತವಾಗುವಂತೆ ಅವರು ನೇರವಾಗಿಯೇ ವರ್ತಿಸಿದ್ದಾರೆ. ಹೀಗೆ ಅವರು ತಮ್ಮ ಹೊಣೆಗಾರಿಕೆಯನ್ನು ಮರೆತು ಬೆಳೆದಿದ್ದಾರೆ.

ಶಿಷ್ಯ ವತ್ಸಲರಾದ ಸ್ವಾಮಿಗಳು

ಸ್ವಾಮಿಗಳಿಗೆ ತಮ್ಮ ಶಿಷ್ಯರ ಬಗ್ಗೆ ವಿಶೇಷವಾದ ಪ್ರೀತಿ ಇತ್ತು. ಶಿಷ್ಯರು ಇದ್ದ ಊರಿಗೆ ಸ್ವಾಮಿಗಳು ಬರುವ ಅವಕಾಶ ಉಂಟಾದರೆ ಮೊದಲೇ ತಮ್ಮ ಶಿಷ್ಯನಿಗೆ ತಾವು ಬರುವ ದಿನ ಮತ್ತು ಸಮಯಗಳನ್ನು ತಿಳಿಸಿ, ಆತನನ್ನು ಭೇಟಿಯಾಗಿ ಕ್ಷೇಮ ವಿಚಾರಿಸಿ, ಆಶೀರ್ವದಿಸಿ ಹೋಗುತ್ತಿದ್ದರು. ಅವರೆಷ್ಟೇ ಆತುರದಲ್ಲಿದ್ದರೂ ಶಿಷ್ಯರನ್ನು ಭೇಟಿಯಾಗುವ ಕಾರ್ಯಕ್ರಮವನ್ನು ತಪ್ಪಿಸುತ್ತಿರಲಿಲ್ಲ. ಕೊನೆಗೆ ತಾವು ಭೇಟಿಯಾಗುತ್ತಿದ್ದ ಊರಿಗೆ ಸಮೀಪದಲ್ಲಿರುವ ಶಿಷ್ಯರಿಗೂ ತಮ್ಮ ಭೇಟಿಯ ಸ್ಥಳ ಕಾಲಗಳನ್ನು ಮೊದಲೇ ತಿಳಿಸುತ್ತಿದ್ದರು. ಸ್ವಾಮಿಗಳು ತಮ್ಮ ಸಂಚಾರದ ಕಾರ್ಯಕ್ರಮಗಳನ್ನು ಕೈಬಿಡುವ ತನಕ ನಿರಂತರವಾಗಿ ಈ ಕೆಲಸ ನಡೆಯುತ್ತಿತ್ತು.

ಸ್ವಾಮಿಗಳು ತಮ್ಮಲ್ಲಿ ಶಿಕ್ಷಾರ್ಜನೆಗೆ ನಿಂತರವರಿಗೆಲ್ಲಾ ವಸತಿ, ಊಟಗಳನ್ನು ಒದಗಿಸಿ ಪಾಠವನ್ನು ಮಾಡುತ್ತಿದ್ದರು. ಇದರೊಂದಿಗೆ ಅವರ ಕೆಲಸಕ್ಕೆ ಪ್ರತಿಫಲವಾಗಿ ನಿಗದಿತ ಸಂಭಾವನೆಯನ್ನು ಸಲ್ಲಿಸುತ್ತಿದ್ದರು. ಶಿಷ್ಯರಿಂದ ಸ್ವಾಮಿಗಳು ಗುರುದಕ್ಷಿಣೆ ಸ್ವೀಕರಿಸಿದ್ದೇ ಇಲ್ಲ. ಶಿಷ್ಯರಿಗೆ ಅವರ ತೊಂದರೆಗಳಿಗೆ ತಮ್ಮಿಂದ ಸಾಧ್ಯವಾಗುವ ನೆರವು ಸ್ವಾಮಿಗಳೇ ನೀಡುತ್ತಿದ್ದರು. ಗುರುಕುಲವನ್ನು ತಮ್ಮ ವೃತ್ತಿಯೊಂದಿಗೇ ಪ್ರಾರಂಭಿಸಿ ನಡೆಸಿದವರು ಸ್ವಾಮಿಗಳು. ೧೯೪೯ರಲ್ಲಿ ಅದಕ್ಕೆ ಸ್ಥಿರರೂಪವನ್ನು ಒದಗಿಸಲು ಪ್ರಯತ್ನಿಸಿದರು. ಆದರೆ ಆ ಗುರುಕುಲವನ್ನು ವ್ಯವಸ್ಥಿತವಾಗಿ ನಡೆಸುವ ಸಾಮರ್ಥ್ಯವು ನಂತರದವರಲ್ಲಿ ಇರಲಿಲ್ಲ.

ಸ್ವಾಮಿಗಳ ಶಿಷ್ಯ ಪ್ರೀತಿಯು ಶಿಷ್ಯರಿಂದ ಅಪಚಾರ ನಡೆದಾಗಲೂ ಸ್ವಾಮಿಗಳಲ್ಲಿರುತ್ತಿತ್ತು ಎಂಬುದು ನಾವು ವಿಶೇಷವಾಗಿ ಗುರುತಿಸಬೇಕಾಗಿರುವ ಅಂಶ.

ಸ್ವಾಮಿಗಳು ಕೇವಲ ಸ್ಥಪತಿಗಳಾಗಿರಲಿಲ್ಲ ಗುರುಪೀಠಾಧ್ಯಕ್ಷರಾಗಿದ್ದವರು. ಇವರಿಗೆ ಮಹಾರಾಜರೇ ಶಿಷ್ಯರಾಗಿದ್ದರು. ನಿಜಕ್ಕೂ ಇದರಲ್ಲಿ ವಿಶೇಷವಾದುದೇನೂ ಇರಲಿಲ್ಲ. ಸ್ವಾಮಿಗಳ ಗುರುಗಳಾಗಿದ್ದ ನಂಜುಂಡ ಶಿವಯೋಗಿಗಳು ರಾಜಮಾತೆಯವರ ಗುರುಗಳಾಗಿದ್ದವರು. ಮೂಲ ಗುರುಗಳಾಗಿದ್ದ ಕರಸ್ಥಲ ನಾಗಲಿಂಗ ಸ್ವಾಮಿಗಳು ಪ್ರೌಢದೇವರಾಯನ ಗುರುಗಳಾಗಿದ್ದವರು. ಆದರೆ ಅರಮನೆಯಲ್ಲಿ ಪ್ರಮುಖರಾಗಿದ್ದ ಕೆಲವರು ಸಿದ್ಧಲಿಂಗಸ್ವಾಮಿಗಳು ಗುರುಗಳಾದ ತರುವಾಯ ಮೂಲೆಗುಂಪಾದರು. ಮಹಾರಾಜರು ಸ್ವಾಮಿಗಳಲ್ಲಿ ಅಪಾರ ಭಕ್ತಿಯನ್ನಿಟ್ಟಿದ್ದರು. ಇದರ ಫಲ ಸ್ವಾಮಿಗಳನ್ನು ಅಂತರಂಗಿಕವಾಗಿ ದ್ವೇಷಿಸುವವರು ಹೆಚ್ಚಾಗಿದ್ದರು. ವ್ಯವಹಾರದಲ್ಲಿ ಸ್ವಾಮಿಗಳೆಂದರೆ ಗೌರವವನ್ನು ನಟಿಸುತ್ತಿದ್ದರು. ಇವರು ಅವಕಾಶ ದೊರೆತಾಗಲೆಲ್ಲಾ ಸ್ವಾಮಿಗಳಿಗೆ ತೊಂದರೆ ಕೊಡಲು ಪ್ರಯತ್ನಿಸುತ್ತಲೇ ಇದ್ದರು.

ದರ್ಬಾರ್ ಹಾಲಿನ ಮಾಡಿನ ಮೇಲೆ ವರ್ಣಚಿತ್ರಗಳನ್ನು ರಚಿಸುತ್ತಿದ್ದವರ ಸಂಭಾವನೆಯನ್ನು ಇದ್ದಕ್ಕಿದ್ದಂತೆಯೇ ಕಡಿಮೆ ಮಾಡಿ ಇದಕ್ಕೆ ಸ್ವಾಮಿಗಳೇ ಕಾರಣ ಎಂದು ವದಂತಿ ಹಬ್ಬಿಸಿ ಆ ಕೆಲಸಗಾರರು ಸ್ವಾಮಿಗಳ ವಿರುದ್ಧ ಪ್ರತಿಭಟಿಸಿ ಗಲಾಟೆ ಮಾಡುವ ಪರಿಸ್ಥಿತಿಯನ್ನು ಸೃಷ್ಟಿಸಿದ್ದರು. ಇದರೊಂದಿಗೆ ಸ್ವಾಮಿಗಳ ಬಳಿಯೇ ಕೆಲಸ ಮಾಡುತ್ತಿದ್ದವರನ್ನೂ ಸ್ವಾಮಿಗಳ ವಿರುದ್ಧ ನಿಲ್ಲುವಂತೆ ಪ್ರೇರಿಸಿದ್ದೂ ಉಂಟು. ಇದರ ಫಲವಾಗಿ ಬಸವಣ್ಣನವರು ಸ್ವಾಮಿಗಳಿಂದ ಪ್ರತ್ಯೇಕವಾದರು. ಬಸವಣ್ಣನವರೊಂದಿಗೇ ಸ್ವಾಮಿಗಳಲ್ಲಿ ಕೆಲಸಮಾಡುತ್ತಿದ್ದ ಹಲವರು ಪ್ರತ್ಯೇಕವಾದರು. ಆಗ ಅರಮನೆಯ ಕೋಟೆಯಲ್ಲಿ ಗಾಯತ್ರೀ ದೇವಾಲಯವನ್ನು ನಿರ್ಮಿಸಲು ಟೆಂಡರ್ ಕರೆದಿದ್ದರು. ಬಸವಣ್ಣನವರು ಟೆಂಡರ್ ಹಾಕಿದರು. ನಿಜಕ್ಕೂ ಸ್ವಾಮಿಗಳ ವಿರುದ್ಧವಾಗಿ ಹಾಕಿದ್ದ ಟೆಂಡರ್ರೇ! ಬಸವಣ್ಣನವರನ್ನು ಪ್ರೋತ್ಸಾಹಿಸಿ ಸ್ವಾಮಿಗಳನ್ನು ವಿರೋಧಿಸಿ ನಿಲ್ಲುವಂತೆ ಬೆಂಬಲಿಸಿದವರು ಅರಮನೆಯಲ್ಲಿ ಸ್ವಾಮಿಗಳ ಬಗ್ಗೆ ಅಸೂಯಾಗ್ರಸ್ತರಾಗಿದ್ದವರೇ. ಈ ವಿರೋಧದ ಸುಳಿವೇ ಇಲ್ಲದ ಸ್ವಾಮಿಗಳು ಗಾಯತ್ರೀ ದೇವಸ್ಥಾನದ ನಿರ್ಮಾಣಕ್ಕೆ ಟೆಂಡರ್ ಸಲ್ಲಿಸಿದರು. ಟೆಂಡರ್ ಪ್ರಕಾರ ಬಸವಣ್ಣನವರಿಗೇ ಗಾಯತ್ರೀ ದೇವಸ್ಥಾನದ ನಿರ್ಮಾಣದ ಕೆಲಸದೊರೆಯಿತು. ಇದರಿಂದ ಬಸವಣ್ಣ ಮತ್ತು ಸ್ವಾಮಿಗಳ ಮಧ್ಯೆ ವೈಮನಸ್ಯ ಹಿರಿಯ ಸಮಸ್ಯೆಯಾಗಿ ಸ್ವಾಮಿಗಳಿಗೆ ಅಪಮಾನವಾಗುತ್ತದೆ. ಸ್ವಾಮಿಗಳ ಬಳಿ ಇದ್ದವರಲ್ಲಿ ಬಹುಮಂದಿ ಕೆಲಸ ಬಿಡುತ್ತಾರೆ ಎಂಬುದು ವಿರೋಧಿಗಳ ನಿರೀಕ್ಷೆಯಾಗಿತ್ತು.

ಬಸವಣ್ಣನವರು ಸ್ವಾಮಿಗಳ ಆಶ್ರಯ ಬಿಡುವುದನ್ನು ಮನಸಾ ಬಯಸಿದವರಲ್ಲ. ಸ್ವಾಮಿಗಳು ತಮ್ಮ ಬಗ್ಗೆಇರಿಸಿದ್ದ ಅಭಿಮಾನ ಪ್ರೀತಿಗಳು ಅವರಿಗೆ ಚನ್ನಾಗಿ ಗೊತ್ತಿತ್ತು. ಆದರೆ ಸ್ವಾಮಿಗಳ ಮಕ್ಕಳು, ಅಪ್ಪಾಜಿಸ್ವಾಮಿಗಳ ಮಕ್ಕಳು ಹಾಗೂ ಅವರ ಮನೆಯವರು ವರ್ತಿಸುತ್ತಿದ್ದ ರೀತಿ, ಕೊಡುತ್ತಿದ್ದ ಕಿರುಕುಳ ಅವರ ಸಹನೆಯನ್ನು ಪರೀಕ್ಷಿಸುತ್ತಿತ್ತು. ಬಸವಣ್ಣನವರ ಕುಟುಂಬವೂ ವೃದ್ಧಿಯಲ್ಲಿತ್ತು. ಈ ಬೇಸರದಲ್ಲಿ ಟೆಂಡರ್ ಡ್ಯಾಕುಮೆಂಟ್ ಸಲ್ಲಿಸಿದ್ದರು. ಆದರೆ ಸ್ವಾಮಿಗಳ ವಿರುದ್ಧವೇ ನಿಲ್ಲುವುದು ಅವರ ಉದ್ದೇಶವಾಗಿರಲಿಲ್ಲ. ತಮ್ಮ ವರ್ತನೆಯ ಫಲವನ್ನು ಕೇಳಿದಾಗ ಬಸವಣ್ಣನವರ ಮನಸ್ಸು ವಿಕಲಗೊಂಡಿತು. ಸ್ವಾಮಿಗಳನ್ನು ಕಂಡು ತಮ್ಮ ಸಂಕಟವನ್ನು ತೋಡಿಕೊಂಡು ಪರಿಸ್ಥಿತಿಯನ್ನು ವಿವರಿಸಿ ಅವರ ಪಾದದ ಮೇಲೆ ಬಿದ್ದು ಕ್ಷಮೆ ಕೇಳಿದರು. ಸ್ವಾಮಿಗಳ ಅರೆಕ್ಷಣ ಯೋಚಿಸಿದರು. ಇದು ಸಹಜವಾದ ಬೆಳವಣಿಗೆ ಕುಟುಂಬ ವೃದ್ಧಿಯಾದಂತೆಲ್ಲಾ ಈ ರೀತಿಯ ಸಮಸ್ಯೆಗಳು ತೀರಾ ಸಾಮಾನ್ಯ. ಇವನ್ನು ತಡೆಯುವ ಮಾರ್ಗ ಎಂದರೆ ಪ್ರತ್ಯೇಕತೆಯನ್ನು ಪ್ರೋತ್ಸಾಹಿಸುವುದು. ದೇವಾಲಯ ನಿರ್ಮಾಣ ಮಾಡುವ ಶಕ್ತಿ ಇದ್ದವರೇ ಇಲ್ಲದಾಗ ತಾವೇ ಅದನ್ನು ಶಿಷ್ಯರಿಗೆ ಬೋಧಿಸಿದ್ದು. ದೇವಾಲಯ ನಿರ್ಮಾಣವನ್ನು ಕಲಿಸಿಕೊಟ್ಟಿದ್ದು. ಈಗ ಶಿಷ್ಯ ತಾನೇ ಸ್ವತಂತ್ರವಾಗಿ ದೇವಾಲಯ ನಿರ್ಮಿಸುವಷ್ಟು ಶಕ್ತನಾಗಿದ್ದಾನೆ ಎಂಬುದು ಗುರುವಾದವನು ಹೆಮ್ಮೆಪಡಬೇಕಾದ ವಿಷಯ. ಆದ್ದರಿಂದ ಬಸವಣ್ಣನನ್ನು ಆಶೀರ್ವದಿಸಿ 'ಗಾಯತ್ರೀ ದೇವಾಲಯದ ನಿರ್ಮಾಣದಿಂದ ನಿನಗೆ ಶುಭವಾಗಲಿ. ಯಶಸ್ವಿಯಾಗು. ನಿನಗೆ ಕಾರ್ಯಸಿದ್ಧಿಯಾಗಲಿ' ಎಂದು ಹರಿಸಿದರು.

ಇಷ್ಟು ಮಾತ್ರವೇ ಅಲ್ಲ ಮಹಾರಾಜರಿಗೆ ತಾವೇ 'ಗಾಯತ್ರೀ ದೇವಾಲಯದ ನಿರ್ಮಾಣವನ್ನು ಬಸವಣ್ಣ ಶಿಲ್ಪಿಗೆ ವಹಿಸಬಹುದು' ಎಂದು ಶಿಫಾರಸ್ಸನ್ನು ಮಾಡಿದರು. ದೇವಾಲಯದ ನಿರ್ಮಾಣವನ್ನು ಪೂರ್ಣಗೊಳಿಸಿದ ತರುವಾಯ ಮಹಾರಾಜರಿಂದ ಶಿಲ್ಪಿ ಸನ್ಮಾನವು ಬಸವಣ್ಣನವರಿಗೆ ನಡೆಯುವಂತೆ ಪ್ರೇರೇಪಿಸಿದವರೂ ಸ್ವಾಮಿಗಳೇ.

ಬಸವಣ್ಣನವರು ನಂತರದ ಕಾಲದಲ್ಲಿ ಸ್ವಾಮಿಗಳ ಬಗ್ಗೆ ಅತ್ಯಂತ ಗೌರವದಿಂದಲೇ ನಡೆದುಕೊಳ್ಳುತ್ತಿದ್ದರು. ಸ್ವಾಮಿಗಳೂ ಅಷ್ಟೇ ಬಸವಣ್ಣನವರ ಬಗ್ಗೆ ಯಾವ ಸಂದರ್ಭದಲ್ಲೂ ಉಪೇಕ್ಷೆಯ ಮಾತನ್ನು ಆಡಿದವರಲ್ಲ.

ನಿಜಕ್ಕೂ ಸಿದ್ಧಲಿಂಗಸ್ವಾಮಿಗಳಲ್ಲಿದ್ದ ನಿರ್ಮತ್ಸರ ಗುಣ, ಶಿಷ್ಯರ ಬಗ್ಗೆ ಇದ್ದ ಅಪಾರ ಪ್ರೀತಿಯನ್ನು ಈ ಘಟನೆಯು ಸ್ಪಷ್ಟವಾಗಿ ತೋರಿಸುತ್ತದೆ. ಶಿಷ್ಯನ ತಪ್ಪನ್ನು ಮನ್ನಿಸಿ ಶಿಷ್ಯನ ಸಾಮರ್ಥ್ಯವನ್ನು ಮೆಚ್ಚಿ ಗೌರವಿಸುವುದು 'ದೇವ' ಗುರುವಿನಿಂದ ಮಾತ್ರವೇ ಸಾಧ್ಯವಿರುವ ವರ್ತನೆ.

ಗುರು ಪೀಠಸ್ಥರಾಗಿದ್ದ ಸ್ವಾಮಿಗಳಲ್ಲಿ ಧಾರ್ಮಿಕ ಗುಣ, ಶೀಲಗಳನ್ನು ವಿಪುಲವಾಗಿ ಕಾಣುವ ಅವಕಾಶಗಳಿವೆ. ಅದನ್ನು ಅನೇಕ ವಿವರಗಳನ್ನು ನೀಡಿ ಉಲ್ಲೇಖಿಸುವುದು ಸಾಧ್ಯವಿದೆ. ಹೀಗೆ ಸಿದ್ಧಲಿಂಗ ಸ್ವಾಮಿಗಳು ಯಾವ ದೃಷ್ಟಿಯಿಂದ ನೋಡಿದರೂ ಪರಿಪೂರ್ಣ ಸ್ಥಪತಿಗಳೇ. ತಮ್ಮ ಗುರುಗಳಾದ ನಂಜುಂಡ ಶಿವಯೋಗಿಗಳಿಗೆ, ಮೂಲಗುರುಗಳಾದ ಕರಸ್ಥಲ ನಾಗಲಿಂಗ ಸ್ವಾಮಿಗಳಿಗೆ ನಿಷ್ಠರೇ. ಸದಾ ಸಮಾಜದ ಉಚ್ಛ್ರಾಯವನ್ನು ಚಿಂತಿಸುತ್ತಿದ್ದವರೇ. ಅವರು ಸ್ವಾರ್ಥಕ್ಕೆ ಏನೊಂದನ್ನೂ ಬಯಸಿದವರಲ್ಲ. ತಮ್ಮ ಸುಖ ಖ್ಯಾತಿಗಳನ್ನು ಆಶಿಸಿದವರಲ್ಲ . ಅಂತ್ಯಕಾಲದಲ್ಲೂ ನಾಡಿಗೆ ಗುರುಕುಲ ಬೇಕು. ಅದು ಸಮರ್ಥವಾದ ಶಿಲ್ಪಿಗಳನ್ನು ನಿರ್ಮಿಸುವ ಶಕ್ತಿಯನ್ನು ಪಡೆದಿರಬೇಕೆಂದು ಆಶಿಸಿದವರು. ಅದಕ್ಕಾಗಿ ಕಾರ್ಯೋನ್ಮುಖರಾದವರು.

ಸಿದ್ಧಲಿಂಗ ಸ್ವಾಮಿಗಳು ಶಕ ನಿರ್ಮಾತೃಗಳು ಎಂಬುದು ಅತ್ಯುಕ್ತಿಯಲ್ಲ. ಅವರು ಶಿಲ್ಪಿಗಳ ಬಹುದೊಡ್ಡ ಪೀಳಿಗೆಯನ್ನು ನಿರ್ಮಿಸಿದವರು. ಬಹುಶಃ ಅವರ ಶಿಷ್ಯರೇ ಇಲ್ಲದಿದ್ದರೆ ಸಾಂಪ್ರದಾಯಿಕ ಪ್ರತಿಮಾ ಶಿಲ್ಪವು ಈಗ ಕರ್ನಾಟಕದಲ್ಲಿರುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ – ಅದೂ ಸ್ವಾಮಿಗಳು ಸಮಾಧಿಸ್ಥರಾದ ಆರುದಶಕಗಳ ನಂತರ! ಒಂದೇ ದೌರ್ಭಾಗ್ಯದ ವಿಷಯವೆಂದರೆ ಅವರ ಶಿಷ್ಯರ್ಯಾರೂ ಸ್ವಾಮಿಗಳಂತೆ ತಮ್ಮ ಶಿಷ್ಯಸಂತತಿಯನ್ನು ಬೆಳೆಸಲಿಲ್ಲ ಎಂಬುದೇ. ಸ್ವಾಮಿಗಳ ಶಿಷ್ಯರು ಇನ್ನೂ ಎರಡು ಹೆಜ್ಜೆ ಮುಂದಿರಿಸಿ ತಮ್ಮ ಶಿಷ್ಯರ ಗುಂಪನ್ನು ಕಟ್ಟಿದ್ದಿದ್ದರೆ, ಕರ್ನಾಟಕ ಸಾಂಪ್ರದಾಯಕ ಶಿಲ್ಪದಲ್ಲಿ ಇಂದಿನ ಕೊರತೆ ಇರುತ್ತಿರಲಿಲ್ಲ. ಆದರೆ ಶಿಲ್ಪಶಾಸ್ತ್ರದ ಪರಿಪೂರ್ಣ ತಿಳಿವು ಗಳಿಸಬಲ್ಲ ಸಮರ್ಥರಾದ ಶಿಷ್ಯರು ಸ್ವಾಮಿಗಳಿಗೆ ಲಭಿಸಲಿಲ್ಲ. ಶಿಷ್ಯರೆಲ್ಲರೂ ಸ್ವಾರ್ಥಿಗಳಾಗಿಯೇ ಚಿಂತಿಸಿದ್ದಾರೆ; ವರ್ತಿಸಿದ್ದಾರೆ; ಬೆಳೆದಿದ್ದಾರೆ.

ಯಾವುದೇ ವ್ಯಕ್ತಿಯು ಸಮಾಜದಿಂದ ಪಡೆದುಕೊಂಡಿದ್ದೇನು? ಸಮಾಜಕ್ಕೆ ಕೊಟ್ಟಿರುವುದೇನು? ಎಂಬುದರ ತುಲನೆಯಿಂದ ಆತನ ಜೀವನದ ಸಾರ್ಥಕತೆಯು ಗೊತ್ತಾಗುತ್ತದೆ. ***ಸ್ವಾಮಿಗಳು ಸಮಾಜದಿಂದ ಪಡೆದುಕೊಂಡಿದ್ದನ್ನು ಭೂದೇವಿಯಂತೆ ಸಾವಿರ ಪಟ್ಟಾಗಿ ವೃದ್ಧಿಸಿ ಸಮಾಜದ ಮಡಲಿಗೇ ಹಾಕಿದ್ದಾರೆ*** ಎಂಬುದನ್ನು ಇದುವರೆವಿಗಿನ ವಿವರಣೆಯು ಸ್ಪಷ್ಟಗೊಳಿಸಿದೆ.

ಸಿದ್ಧಲಿಂಗ ಸ್ವಾಮಿಗಳು ತಮ್ಮ ಸಮಕಾಲೀನರಿಗಿಂತಲೂ ಹೆಚ್ಚು ಮನ್ನಣೆಗೆ ಅರ್ಹರಾಗಿದ್ದರೂ ಆ ಮನ್ನಣೆ ಸ್ವಾಮಿಗಳಿಗೆ ಲಭಿಸಲಿಲ್ಲ ಎಂಬುದನ್ನು ಸಮಾಜ ತನ್ನ ತಪ್ಪು ಹೆಜ್ಜೆಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಮಾತ್ರವೇ ಚಿಂತಿಸಬೇಕಾಗಿರುತ್ತದೆ. ಈ ತಪ್ಪು ಹೆಜ್ಜೆ ಸಾಮಾಜಿಕವಾಗಿ ಉಂಟಾಗಿರುವ ನಷ್ಟದ ಅಂಶವನ್ನು ನಮ್ಮ ಪ್ರಗತಿಯ ದೃಷ್ಟಿಯಿಂದ ಅನಿವಾರ್ಯವಾಗಿ ನಾವು ಗುರ್ತಿಸಬೇಕಾಗಿರುತ್ತದೆ.

ಸ್ವಾಮಿಗಳು ಸಂನ್ಯಾಸಿಗಳು. ಅವರಿಗೆ ಗೌರವ – ಅಭಿಮಾನ – ಸನ್ಮಾನಗಳು ದೊರೆಯಲಿಲ್ಲ ಎಂಬುದು ಅವರ ಬದುಕಿನಲ್ಲಿ ಎಂದೂ ದುಃಖಕ್ಕೆ ಕಾರಣವಾಗಿರಲಿಲ್ಲ. ಅಂತಹವನ್ನು ಅವರು ಬಯಸಿ ಅರಸಿಕೊಂಡು ಹೋದವರೂ ಅಲ್ಲ! ಸ್ವಾಮಿಗಳು ತಮ್ಮ ಅಂತಿಮ ಕಾಲದವರೆವಿಗೂ ತಮ್ಮ ಶಿಷ್ಯರ, ಸಾರ್ವಜನಿಕರ ಮನ್ನಣೆ ಗೌರವಗಳನ್ನು ಸಂಪೂರ್ಣವಾಗಿ ಪಡೆದುಕೊಂಡವರು. ಸಾಮಾಜಿಕ ಗೌರವಕ್ಕೆ ಸ್ವಾಮಿಗಳಿಗೆ ಎಂದೂ ಕೊರತೆಯಾದದ್ದೇ ಇಲ್ಲ.

ಸಿದ್ಧಲಿಂಗ ಸ್ವಾಮಿಗಳು, ನಿರ್ಮಿಸಿದ ಕಾಮಕಾಮೇಶ್ವರೀ ದೇವಾಲಯ, ಸ್ವಾಮಿಗಳ ಶಿಲ್ಪ–ಚಿತ್ರ ನಿರ್ಮಾಣ ಸಾಮರ್ಥ್ಯ, ಗುರುಕುಲವನ್ನು ಸ್ಥಾಪಿಸಿದ ಅವರ ಆಶಯ, ಕನ್ನಡಿಗರು ನೆನಪಿನಲ್ಲಿರಿಸಿ ಕೊಂಡಿದ್ದಿದ್ದರೆ, ಇದು ಸ್ವಾಮಿಗಳ ಅದ್ಭುತ ಸಾಧನೆ ಎಂಬುದರ ಸ್ಮರಣೆ ಉಳಿದಿದ್ದರೆ, ಸ್ವಾಮಿಗಳ ನಂತರ ಕಾಲದಲ್ಲಿ ಈ ರೀತಿಯ ಕೆಲಸಗಳಿಗೆ ಪ್ರೋತ್ಸಾಹ ಲಭಿಸುತ್ತಿತ್ತು. ಆ ಕಲೆಗಳಿಗೆ ಬೆಳೆಯುವ ಅವಕಾಶ ಲಭಿಸುತ್ತಿತ್ತು. ಅವರನ್ನು ಮರೆತಿದ್ದರಿಂದ ಅವರ ಸಾಧನೆಯು ಮರೆವಿಗೆ ಸೇರಿತು. ಆದ್ದರಿಂದ ಕನ್ನಡ ಶಿಲ್ಪಿಗಳಲ್ಲಿದ್ದ ದೇವಾಲಯ ನಿರ್ಮಾಣ ಸಾಮರ್ಥ್ಯವು ಕಳೆಯಿತು.


ಅಪೂಜ್ಯಾ ಯತ್ರ ಪೂಜ್ಯಂತೇ ಪೂಜ್ಯಾಶ್ಚೈವಾವಮಾನಿತಾಃ ।
ಅಯಶೋ ಮಹದಾಪ್ನೋತಿ ಧನಾದ್ಧರ್ಮಾಚ್ಚ ಹೀಯತೇ ॥

(ಎಲ್ಲಿ ಅಪೂಜ್ಯರಿಗೆ ಪೂಜ್ಯತೆಯು ಲಭಿಸುತ್ತದೆಯೋ, ಪೂಜ್ಯರಾದವರು ವಿಸ್ಮರಣೆಗೆ ತುತ್ತಾಗಿ ಅವಮಾನಿಸಲ್ಪಡುತ್ತಾರೆಯೋ, ಆಗ ಆ ದೇಶವನ್ನು ಅಪಯಶಸ್ಸು ಆವರಿಸಿ ಧರ್ಮ ಮತ್ತು ಸಂಪತ್ತುಗಳು ಕ್ಷೀಣಿಸುತ್ತವೆ)

–ಎಂಬುದು ಧರ್ಮಶಾಸನ. ಪ್ರಧಾನವಾಗಿ ನೆನಪಿಸಿಕೊಳ್ಳಬೇಕಾದವರನ್ನು ಮರೆಯುವುದೇ ಅವರಿಗೆ ಉಂಟುಮಾಡುವ ಅಪಮಾನ. ಅದೇ ನಾಡಿಗೆ ನಷ್ಟ ಉಂಟಾಗಲು ಮುಖ್ಯಕಾರಣ ಎಂಬುದನ್ನು ನಾವು ಈ ಶಾಸನದಿಂದ ಗ್ರಹಿಸಬೇಕಾಗಿರುವ ತಿಳಿವು.

ಆದ್ದರಿಂದಲೇ ನಮ್ಮ ಪ್ರಾಚೀನರು ನಾಡಿಗೆ ಒಳಿತನ್ನು ತಂದುಕೊಡುವವರನ್ನು ತ್ರಿಕಾಲಗಳಲ್ಲೂ ಸ್ಮರಣಾರ್ಹ ಮಹಾಪುರುಷರು ಎಂದು ಕೃತಜ್ಞತೆಯನ್ನು ಸಲ್ಲಿಸುವುದು. ಈ ರೀತಿಯ ಸ್ಮರಣೆಯಿಂದಲೇ ನಮಗೇ ಒಳಿತಾಗುತ್ತದೆ ಎಂಬುದು ಖಚಿತವಾದ ವಿವರ.

ಕನ್ನಡ ನಾಡಿನ ಪ್ರಾತಃ ಸ್ಮರಣೀಯ ಮಹಾಪುರುಷರಲ್ಲಿ ಒಬ್ಬರಾಗಿರುವ ಶಕಪುರುಷ, ಪರಿಪೂರ್ಣ ಸ್ಥಪತಿ, ಶಿವಯೋಗಿ, ಸಿದ್ಧಲಿಂಗಸ್ವಾಮಿಗಳ ಸ್ಮರಣೆಯಿಂದ ಮಾತ್ರವೇ ಸಾಂಪ್ರದಾಯಕ ದೇವಾಲಯವನ್ನು ನಿರ್ಮಿಸಬಲ್ಲ ಶಿಲ್ಪ ವೈಭವವು ಮತ್ತೆ ನಮ್ಮಲ್ಲಿ ಆವಿರ್ಭವಿಸಬಲ್ಲದು. ಹಾಗಾಗಲಿ ಎಂದು ಮನಸಾ, ವಾಚಾ, ವಪುಷಾ ಎಲ್ಲ ಕನ್ನಡಿಗರೊಂದು ಗೂಡಿ ಒಂದಾಗಿ ಸ್ಮರಿಸೋಣ. ಸ್ವಾಮಿಗಳ ಚೈತನ್ಯವೇ ಕ್ರತುಶಕ್ತಿಯಾಗಿ ಕರ್ನಾಟಕದ ಸಾಂಪ್ರದಾಯಿಕ ದೇವಾಲಯ ನಿರ್ಮಾಣ ಸಾಮರ್ಥ್ಯವನ್ನು ಕನ್ನಡದ ಶಿಲ್ಪಿಗಳಲ್ಲಿ ಪುನಃ ಪ್ರತಿಷ್ಠಾಪಿಸಲಿ ಎಂದು ಪ್ರಾರ್ಥಿಸೋಣ.



ಚಿತ್ರ ೧೧.೨ : ಚೌಕಗೊಂಡ ಪದ್ಮಗಳ ವಿನ್ಯಾಸ

ಅನುಬಂಧಗಳು

ಅನುಬಂಧ–೧

ಶಿಲ್ಪಸಾರ (ಷಟ್ಪದಿ ಖಂಡ ಕಾವ್ಯ)

ಮೊದಲ ಮುದ್ರಣಕ್ಕೆ (೧೯೪೮) ಕವಿಗಳಾದ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು ಬರೆದಿರುವ ಪ್ರಸ್ತಾವನೆ

ಶ್ರೀ ಗುರುಭ್ಯೋ ನಮಃ

ಓಂ ನಮೋ ವಿಶ್ವಶಿಲ್ಪಿನೇ ಸ ಉ ಪಾತ್ವಸ್ಮಾನ್

ಬೃಹದ್ರೂಪವಾಗಿರುವ ಈ ವಿಶ್ವನಿರ್ಮಾಣಕ್ಕೆ ಮೂಲಕಾರಣವಾದ ಶಿಲ್ಪವು ಸಮಸ್ತಕಲೆಗಳಿಗೂ ಮಾತೃಸ್ಥಾನವಾಗಿ ರೂಪಾತ್ಮಕ ಪ್ರಪಂಚವನ್ನು ಪೋಷಿಸುತ್ತ ತ್ರಿಗುಣಾತ್ಮಕರಾದ ಬ್ರಹ್ಮ ವಿಷ್ಣು ರುದ್ರರಿಂದ ಕ್ರಮವಾಗಿ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡಿಸುತ್ತ, ಸರ್ವ ವ್ಯಾಪಿಯಾಗಿ ಸರ್ವೋತ್ಕೃಷ್ಟ ವಾಗಿರುತ್ತದೆ. ಆದುದರಿಂದಲೇ ತೈತ್ತಿರೀಯಬ್ರಾಹ್ಮಣಶ್ರುತಿಯು **"ಯೇಭಿಃ ಶಿಲ್ಪೈಃ..."** ಎಂದು ಮುಂತಾದ ವಾಕ್ಯಗಳಲ್ಲಿ ಪ್ರಜಾಪತಿಯಾದ ಪ್ರಥಮ ಶಿಲ್ಪಿಯು ಯಾವ ಶಿಲ್ಪಕೌಶಲ್ಯದಿಂದ ವಿಸ್ತಾರವಾದ ಈ ಭೂಮಂಡಲವನ್ನು ಬಲವುಳ್ಳದ್ದನ್ನಾಗಿ ಮಾಡಿದನೋ, ಆಕಾಶವನ್ನು ಚಂದ್ರತಾರೆಗಳಿಂದ ಸೌಂದರ್ಯಗೊಳಿಸಿದನೋ, ಸಮಸ್ತವಸ್ತುಗಳನ್ನು ನಿರ್ಮಾಣಮಾಡುವಂತಹ ವಾಕ್ಕುಗಳನ್ನು ಸಂಪಾದಿಸಿದನೋ ಅಂತಹ ಶಿಲ್ಪಕಲಾಕೌಶಲಬಲದಿಂದಲೇ ಈ ರಾಜನನ್ನು ಸಮೃದ್ಧವಂತನನ್ನಾಗಿ ಮಾಡು ಎಂದು ರಾಜನಿಗೆ ರಾಜ್ಯಾಭಿಷೇಕಮಾಡುವ ಕಾಲದಲ್ಲಿ ಆಶೀರ್ವಾದ ಮಾಡುವ ವೇದ ಮಂತ್ರಗಳಲ್ಲಿ ವರ್ಣನೆ ಮಾಡಿರುವುದರಿಂದ ಶಿಲ್ಪವು ಜಗದ್ರಕ್ಷಣೆಯಲ್ಲಿ ಎಷ್ಟು ಸಮರ್ಥವಾದು ದೆಂಬುದು ಸ್ಪಷ್ಟವಾಗುತ್ತದೆ.

ಶಿಲ್ಪವಿಲ್ಲದೆ, ಗೃಹಸ್ಥಾದಿ ಆಶ್ರಮ ಧರ್ಮಗಳಾಗಲಿ, ರಾಜಧರ್ಮ ರಾಜ್ಯ ರಕ್ಷಣೆಗಳಾಗಲಿ, ಮತಧರ್ಮಗಳಾಗಲಿ, ಐಹಿಕ ಆಮುಷ್ಮಿಕ ಸುಖಗಳಾಗಲಿ ದೊರೆಯಲಾರವು. ಶಿಲ್ಪಪುಷ್ಟಿಯಿಲ್ಲದೇ ಇರುವ ಜೀವಿತವು ಯಾವ ನಾಗರಿಕಸೌಂದರ್ಯವೂ ಇಲ್ಲದೆ ಮೃತಪ್ರಾಯವಾಗುವುದು. ಈ ಪ್ರಕಾರವಿರುವ ಶಿಲ್ಪದ ಮಹತ್ತ್ವವನ್ನು ತಿಳಿದ ಇಂದ್ರಾದಿ ದೇವತೆಗಳೂ ಸಾನಗ ಸನಾತನಾದಿ ವೇದರ್ಷಿಗಳೂ ಶಿಲ್ಪವನ್ನು ಶಿರಸಾಧರಿಸಿ ಶಿಲ್ಪದಿಂದಲೇ ಉಜ್ಜೀವಿತರಾಗಿ ಇಹಪರ ಸೌಖ್ಯಸಾಧನೆಗಳನ್ನು ಅನಾಯಾಸವಾಗಿ ಪಡೆದಿರುತ್ತಾರೆ.

ಇತ್ತೀಚಿನ ಅಶೋಕ, ವಿಷ್ಣುವರ್ಧನ, ಪಾಂಡ್ಯ ಮೊದಲಾದ ಚಕ್ರವರ್ತಿಗಳೂ, ಚೋಳರು ಮುಂತಾದ ಮಹಾರಾಜರುಗಳೂ, ಬುದ್ಧ ಮೊದಲಾದ ಮಹಾಪುರುಷರೂ ತಮ್ಮ ರಾಜ್ಯ ದೇಶ ಕೋಶಗಳನ್ನು ಶಿಲ್ಪಕಲಾಕೌಶಲದಿಂದಲೇ ವೃದ್ಧಿಗೊಳಿಸಿ ಸರ್ವತೋಮುಖವಾದ ಸುಖಸಂಪತ್ತುಗಳನ್ನು ಅನುಭವಿಸಿದರು. ಈಗಲೂ ಸಕಲ ದೇಶಸಂಪತ್ತುಗಳು ಬೆಳೆಯಬೇಕಾದರೆ ಶಿಲ್ಪಕಲೆಯಿಂದಲ್ಲದೆ ಮತ್ತಾವ ಕಲೆಗಳಿಂದಲೂ ಸಾಧ್ಯವಿಲ್ಲ. ವಿಶ್ವದಲ್ಲಿ ದೃಷ್ಟಫಲಗಳನ್ನು ನಿರ್ಧರಿಸಲು ಆಯುರ್ವೇದ, ದಂಡನೀತಿ, ಶಿಲ್ಪ ಇವುಗಳು ಲೌಕಿಕಶಾಸ್ತ್ರಗಳೆಂದು

ನಿರ್ಣಯವಾಗಿದ್ದರೂ ಮಾನವನ ಸಮಸ್ತ ಭೋಗಸಾಧನೆಗಳಿಗೂ, ಆತ್ಮಸಿದ್ಧಿಜ್ಞಾನಾರ್ಜನೆಗಳಿಗೂ ಶಿಲ್ಪವೇ ಮೂಲವಾಗಿರುತ್ತದೆ. ಲೌಕಿಕ ಪ್ರಯೋಜನಗಳಲ್ಲಿ ಶಿಲ್ಪದ ಮಹಿಮೆಯನ್ನು ವಿಚಾರಮಾಡಿದರೆ ಧರ್ಮಪ್ರಜಾಸಂಪತ್ಯರ್ಥವಾಗಿಯೂ, ಪಿತೃ ಋಣ ವಿಮೋಚನಾರ್ಥ ವಾಗಿಯೂ, ಗೃಹಸ್ಥನಾಗಬೇಕೆಂಬ ವೇದಾನುಶಾಸನದಂತೆ ಬ್ರಹ್ಮ ಕಶ್ಯಪ ಮನು ಗೌತಮಾದಿ ಮಹರ್ಷಿಗಳ ಮತದಂತೆ ಗಾರ್ಹಸ್ಥ್ಯವು ವಿಧಿಸಲ್ಪಟ್ಟಿರುವುದರಿಂದ ಶಾಸ್ತ್ರೋಕ್ತವಾಗಿ ಕನ್ಯೆಯನ್ನು ಯಥಾವಿಧಿ ಪರಿಗ್ರಹಿಸಿ ನಿತ್ಯಾಗ್ನಿ ಹೋತ್ರ, ಯಜ್ಞ, ದಾನ, ತಪಃಸ್ವಾಧ್ಯಾಯಗಳನ್ನು ಆಚರಿಸುತ್ತ ಜನ್ಮಸಾಫಲ್ಯವನ್ನು ಮಾಡಿಕೊಳ್ಳಬೇಕಾದರೆ ಗೃಹವು ಅತ್ಯಾವಶ್ಯಕವಾಗಿರುತ್ತದೆ. ಗೃಹವಿಲ್ಲದ ಮನುಷ್ಯನು ಗೃಹಸ್ಥಧರ್ಮಗಳನ್ನಾಚರಿಸಲು ಸಾಧ್ಯವೇ ಇಲ್ಲ. ಲೌಕಿಕಧರ್ಮವಾದ ಪತ್ನೀಪುತ್ರಾದಿ ಭೋಗ ಭಾಗ್ಯಗಳನ್ನೂ, ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಗಳನ್ನೂ ಪಡೆಯಲೂ, ಗೃಹವೂ ಗೃಹೋಪಕರಣಗಳೂ ಆಧಾರವಾಗಿರುತ್ತವೆ. ಇವೆಲ್ಲವೂ ಶಿಲ್ಪವಾಗಿರುವುದರಿಂದ ಶಿಲ್ಪವಸ್ತುಗಳಿಲ್ಲದೆ ಇಹಲೋಕ ವ್ಯಾಪಾರವೇ ನಡೆಯಲಾರದು. ಮೇಲಾಗಿ ಕೃಷಿಕರ್ಮದಿಂದ ಅನ್ನವನ್ನು ಪಡೆದುಕೊಂಡು ಅನ್ನದಿಂದ ಮನುಷ್ಯನು ಜೀವಿಸಬೇಕಾಗಿದೆ.

ಇದೇ ಪ್ರಕಾರ ಪುತ್ರಕಾಮ ಸ್ವರ್ಗಕಾಮ ಜ್ಯೋತಿಷ್ಟೋಮಾದಿಗಳಿಗೆ ಉಪಯುಕ್ತವಾಗಿರುವ ಯಾಗಶಾಲಾ, ಯಾಗೋಪಕರಣ, ಹೋಮಕುಂಡ ಮುಂತಾದುವೆಲ್ಲದರ ನಿರ್ಮಾಣವು ವೈದಿಕಶಿಲ್ಪವಾಗಿರುತ್ತದೆ. ನಗರ ನಿರ್ಮಾಣ, ರಾಜಧಾನಿ, ರಾಜಗೃಹ, ರಾಜ್ಯಾಂಗದ ಯಾನ ರಥ ಶಸ್ತ್ರಾದಿಬಲಗಳು, ಯುದ್ಧೋಪಕರಣಗಳು, ಗಜಾಶ್ವವೃಷಭಗೋಪರೀಕ್ಷಾದಿಗಳು, ಸಕಲಾಭರಣಾಲಂಕಾರಗಳು, ಸ್ವರ್ಣ ರತ್ನಪರೀಕ್ಷಾದಿಗಳು, ಜಲ ಯಾನಾದಿಗಳು, ಲಿಪಿ ಚಿತ್ರ ಲೇಖಾದಿಗಳೆಲ್ಲವೂ ಲೌಕಿಕಶಿಲ್ಪಗಳಾಗಿ ಪ್ರಪಂಚಪ್ರಗತಿಯ ಚೇತನವಾಗಿರುತ್ತವೆ.

ಲೌಕಿಕಸುಖಮಯ ಜೀವನದಲ್ಲಿ ಮತ್ತೊಂದು ವಿಶೇಷವೆಂದರೆ ನವರಸಾನುಭವವು ಮಾನವನ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡುತ್ತವೆ. ನವರಸಾನುಭವವು ಬ್ರಹ್ಮಾನಂದಕ್ಕೆ ಸಮಾನವೆಂದು ಮುಮ್ಮಟರೇ ಮೊದಲಾದ ಅಲಂಕಾರಶಾಸ್ತ್ರಕೋವಿದರು ರಸಲಕ್ಷಣದಲ್ಲಿ ನಿರೂಪಣಮಾಡಿರುತ್ತಾರೆ. ರಸಜ್ಞರಾದ ಕವಿಗಳು ಕಾವ್ಯಗಳಲ್ಲಿ ಎಷ್ಟು ವರ್ಣಿಸಿದ್ದರೂ ಅವೆಲ್ಲವೂ ಕಾವ್ಯಾಲಂಕಾರಗಳನ್ನು ಓದಿ ಅರ್ಥಮಾಡಿ ಕೊಳ್ಳುವ ಪಂಡಿತರಿಗೆ ಮಾತ್ರ ಆ ರಸಾನುಭವವಾಗುವುದಲ್ಲದೆ ಇತರರಿಗೆ ಏನೂ ಪ್ರಯೋಜನವಾಗಲಾರವು. ಅದೇ ರಸಭಾವಗಳನ್ನು ಶಿಲ್ಪಕಲಾಪ್ರವೀಣನಾದ ಶಿಲ್ಪಿಯು ಒಂದು ಬಿಂಬದಲ್ಲಿ ನಿರ್ಮಿಸಿ ಜನತೆಯ ಮುಂದಿಟ್ಟು ಪಂಡಿತಪಾಮರರಾದಿಯಾಗಿ ಸಮಸ್ತರನ್ನೂ ಆ ಸುಖಾನುಭವದಲ್ಲಿ ಮುಳುಗಿಸ ಬಲ್ಲನು.

ಭಾಸಕವಿಯ ಪ್ರತಿಮಾ ನಾಟಕದಲ್ಲಿ ಏನೂ ಅರಿಯದ ಭರತನು ಪ್ರತಿಮಾಗೃಹದಲ್ಲಿ ತನ್ನ ಪೂಜ್ಯ ಪಿತೃಪಿತಾಮಹಾದಿಗಳ ಪ್ರತಿಮೆಗಳನ್ನು ನೋಡಿದೊಡನೆಯೇ ಅವರ ಗುಣಗಣವನ್ನು ಸ್ಮರಿಸಿಕೊಳ್ಳಲು ಆ ಮೂರ್ತಿಸ್ವರೂಪವು ಕೊನೆಯವರೆಗೂ ಅವನ ಹೃದಯವನ್ನು ಬಿಡಲೇ ಇಲ್ಲ. ಹೀಗಿರುವ ಶಿಲ್ಪದ ಮಹಾ ಮಹಿಮೆಯ ನಿಜವನ್ನರಿತ ಭಾಸಕವಿಯು ತಾನು ರಚಿಸಿದ ನಾಟಕಕ್ಕೆ ಪ್ರತಿಮಾ ನಾಟಕವೆಂದು ನಾಮಕರಣಮಾಡಿರುತ್ತಾನೆ.

ಶ್ರೀಕೃಷ್ಣನು ಅರ್ಜುನನಿಗೆ ತೋರಿದ ವಿಶ್ವರೂಪವನ್ನು ವ್ಯಾಸಮಹರ್ಷಿಯು ಎಷ್ಟು ವರ್ಣಿಸಿದರೂ ಅದು ಯಾರಿಗೂ ಪ್ರತ್ಯಕ್ಷವಾಗುವುದಿಲ್ಲ. ಆ ವಿಶ್ವರೂಪವನ್ನು ನಿಪುಣನಾದ ಶಿಲ್ಪಿಯು ವ್ಯಾಸೋಕ್ತವಾದ ಚಿತ್ರವನ್ನು ರೂಪಾಂತರಗೊಳಿಸಿ ಪ್ರತ್ಯಕ್ಷ ವಿಶ್ವರೂಪವನ್ನು ಸರ್ವರಿಗೂ ದರ್ಶನಮಾಡಿಸಬಲ್ಲನು. ಆರ್ಯ ಚಾಣಿಕ್ಯನು ಶಿಲ್ಪವನ್ನಾಶ್ರಯಿಸಿ ತನ್ನ ಕಾರ್ಯಸಾಧನೆ ಮಾಡಿಕೊಂಡ ವಿಚಾರವು ಮುದ್ರಾಮಂಜೂಷ ನಾಟಕವನ್ನು ಓದಿದವರಿಗೆ ತಿಳಿಯದೆ ಇರದು. ಶಾಸ್ತ್ರಪ್ರಪಂಚದಲ್ಲಿ ಎಷ್ಟು ಮೇಧಾವಿಗಳಾದರೂ ಅವರ ವಾಗಾಡಂಬರವನ್ನು ಕಾರ್ಯರೂಪಕ್ಕೆ

ತರಬೇಕಾದರೆ ಶಿಲ್ಪಿಯಿಂದಲ್ಲದೆ ಮತ್ತಾರಿಂದಲೂ ಸಾಧ್ಯವಾಗಲಾರದು. ಆದರೆ ಶಿಲ್ಪಿಯು ಸುಸಂಸ್ಕೃತನಾಗಿ ಸಕಲಶಾಸ್ತ್ರಸಂಪತ್ತುಗಳಿಂದಲೂ ಶಮದಮಾದಿಷಡ್ಗುಣೈಶ್ವರ್ಯಗಳಿಂದಲೂ ಕೂಡಿರಬೇಕು. ಧರ್ಮರಾಯನ ರಾಜಸೂಯಯಾಗದಲ್ಲಿ ದುಷ್ಟನಿಗ್ರಹವಾದುದು ಧರ್ಮರಾಯ ನಿಂದಲೂ ಶ್ರೀಕೃಷ್ಣನಿಂದಲೂ ಅಲ್ಲ. ದುಷ್ಟನಿಗ್ರಹಶಿಷ್ಟಪರಿಪಾಲನವೆಂಬ ರಾಜನ ಕರ್ತವ್ಯವನ್ನ ನುಸರಿಸಿ ಸಭಾಮಂಡಪವನ್ನು ನಿರ್ಮಿಸಿದ ಮಯಶಿಲ್ಪಿಯಿಂದ. ಇಂತಹ ರಾಜತಂತ್ರಗಳನ್ನೂ ಅರ್ಥಶಾಸ್ತ್ರ, ನೀತಿಶಾಸ್ತ್ರ, ಧರ್ಮಶಾಸ್ತ್ರಗಳನ್ನೂ ಪ್ರಾಚೀನ ಶಿಲ್ಪಿಗಳು ತಿಳಿದಿದ್ದರು.

ಈ ಪ್ರಕಾರ ಪೂರ್ವಯುಗದಲ್ಲಿ ಸಕಲವೈಭವಗಳಿಂದ ಮೆರೆಯುತ್ತ ಪ್ರಫುಲ್ಲವದನಳಾಗಿ ನಗುತ್ತಿದ್ದ ಶಿಲ್ಪಕಲಾದೇವಿಯು ಮ್ಲೇಂಛರ ಮತ್ತು ವಿದೇಶೀಯರ ಕಾಲದಲ್ಲಿ ಕಂಬನಿಯನ್ನು ಸುರಿಸುತ್ತ ದುಃಖಿತಳಾದಳು. ಶಿಲ್ಪವಿದ್ಯಾಮಾತೆಯನ್ನು ಸಂರಕ್ಷಿಸಿ ಆನಂದ ಗೊಳಿಸುವುದಕ್ಕೆ ಯಾರಿಂದಲೂ ಸಾಧ್ಯವಾಗದೆ ಇದ್ದರೂ ಸತ್ಸಂಕಲ್ಪರೂ, ವಿಜ್ಞಾನಿಗಳೂ, ಜಿತೇಂದ್ರಿಯರೂ ಆದ ಶಿಲ್ಪಿವರ್ಯರು ಯಾವ ಧ್ಯೇಯದಿಂದ ಶಿಲ್ಪಧ್ವಜವನ್ನು ಸ್ಥಾಪಿಸಿದರೋ ಆ ತತ್ತ್ವವನ್ನು ಬೋಧಿಸಲು ಇಂದಿಗೂ ತನ್ನ ಸೌಂದರ್ಯದ ಬೆಳಕನ್ನು ಮಂದಪ್ರಜ್ಞರ ಮೇಲೂ ಬೀರುತ್ತ ಭಾರತದ ನಾಗರಿಕ ಸಾಂಸ್ಕೃತಿಕ ಜೀವನದ ಕರುಹಿನ ರೂಪವನ್ನು ತೋರಿಸಿ ಎಲ್ಲೆಡೆಯಲ್ಲೂ ತನ್ನ ಪ್ರತಿಭೆಯನ್ನು ಪ್ರಕಾಶಗೊಳಿಸಿರುತ್ತಾಳೆ. ದಯಾಳುಗಳಾದ ಶಿಲ್ಪಿಗಳು ತಮ್ಮ ಅಂತರಂಗದಲ್ಲಿ ಗೋಪ್ಯವಾಗಿದ್ದ ಆತ್ಮತೇಜಸ್ಸನ್ನು ಹೊರಗೆ ತೆಗೆದು ರೂಪಗೊಳಿಸಿ ಅಧ್ಯಾತ್ಮಮಾರ್ಗವನ್ನು ತೋರಿಸಿ ಓಜಸ್ವಿಗಳಾಗಿರುತ್ತಾರೆ. ಅವರು ಪ್ರಥಮತಃ ತಮ್ಮ ಸ್ವಾಂತದಲ್ಲಿ ಸಾಕ್ಷಾತ್ಕಾರ ಮಾಡಿಕೊಂಡು ತಮ್ಮ ಕಣ್ಣಿಗೆ ಕಾಣುವ ದಿವ್ಯ ತೇಜಸ್ಸನ್ನು ಪ್ರಜ್ವಲಗೊಳಿಸಿ ಸರ್ವರೂ ಆ ಸುಖವನ್ನು ಅನುಭವಿಸುವಂತೆ ಅನುಗ್ರಹಮಾಡಿರುವುದೇ ಇಂದು ಎಲ್ಲರೂ ಆರಾಧಿಸುತ್ತಿರುವ ಸಗುಣಾರಾಧನೆಯು.

ಈ ಸಗುಣಾರಾಧನೆಯಿಂದ ನಿರ್ಗುಣತತ್ತ್ವವನ್ನು ನಿರಾಯಾಸವಾಗಿ ಸಾಧಿಸಬಹುದೆಂದು ತಮ್ಮ ಆತ್ಮಶಕ್ತಿಯನ್ನು ರೂಪಗೊಳಿಸಿರುವುದೇ ಆರ್ಯಶಿಲ್ಪಿಗಳ ಜೀವನದ ಜೀವಾಳ. ವೈದಿಕಕರ್ಮನಿಷ್ಠಾಗರಿಷ್ಠರಾದ ಆ ಶಿಲ್ಪಿಗಳಿಂದ ವೈದಿಕತತ್ತ್ವದ ಅಸ್ತಿತ್ವವು ಈಗಲೂ ಅಮರವಾಗಿ ಮೂಲೆಮೂಲೆಗಳಲ್ಲೂ ವೈದಿಕತಾಂತ್ರಿಕವಿಧಿಗಳಿಂದ ದಿವ್ಯಾರಾಧನೆಯನ್ನು ಕೈಗೊಳ್ಳುತ್ತಿರುವುದನ್ನು ಸರ್ವರೂ ಈಕ್ಷಿಸುತ್ತಿರುವರು. ಶಿಲ್ಪಾಧಿಷ್ಠಾನದಿಂದ ಕಟ್ಟಲ್ಪಟ್ಟಿರುವ ಈ ತತ್ತ್ವಕ್ಕೆ ನಾಸ್ತಿಕರಿಂದ ಎಷ್ಟು ಅಪಘಾತಗಳುಂಟಾದರೂ ಅದು ನಾಶವನ್ನೈದದೆ ಮೂಲಸ್ತಂಭದಂತೆ ಸ್ಥಿರವಾಗಿರುತ್ತದೆ.

ಹೀಗೆ ಶಿಲ್ಪವು ಕಲ್ಪವೃಕ್ಷದಂತೆ ಬೇಡಿದಿಷ್ಟಾರ್ಥಗಳನ್ನು ವಿಶ್ವಜನತೆಗೆ ನೀಡುತ್ತ ಆರ್ಥಿಕ ನೈತಿಕ ನಾಗರಿಕ ತಾತ್ತ್ವಿಕ ಸಂಪತ್ತನ್ನು ವೃದ್ಧಿಗೊಳಿಸಿ ವಿರಾಡ್ರೂಪವನ್ನು ತಾಳಿರುತ್ತದೆ. ಇಂತಹ ಅದ್ವಿತೀಯ ಶಿಲ್ಪದ ಮಹಿಮೆಯನ್ನು ವರ್ಣಿಸಲು ಸಹಸ್ರ ಜಿಹ್ವೆಯುಳ್ಳ ಆದಿಶೇಷನಿಂದಲೂ ಅಸಾಧ್ಯವಾಗಿರುವಾಗ ಅಸ್ಮದಾದಿಗಳಿಂದ ವರ್ಣಿಸಲು ಹೇಗೆ ಸಾಧ್ಯವು? ಆದಕಾರಣ ನಮ್ಮ ಅನುಭವಕ್ಕೆ ಗೋಚರವಾದ ಶಿಲ್ಪಶಾಸ್ತ್ರದ ಸಾರವನ್ನು ಸಂಗ್ರಹಿಸಿ **'ಶಿಲ್ಪಸಾರ'**ವೆಂಬ ಗ್ರಂಥವನ್ನು ರಚಿಸಿರುತ್ತೇವೆ. ವಾಚಕರಿಗೆ ಶಿಲ್ಪದ ಸರ್ವವ್ಯಾಪಕತ್ವವು ಅನುಭವಕ್ಕೆ ಬರುವುದಾದರೆ ನಮ್ಮ ಶ್ರಮವೂ ಸಾರ್ಥಕವಾಗುವುದು. ಶಿಲ್ಪವು ದೇಶದ ಉನ್ನತಿಗೆ ಬಹುಮುಖ್ಯವಾದುದೆಂದು ಶಿಲ್ಪರಹಸ್ಯವನ್ನರಿತ ಶ್ರೀಮನ್ಮಹಾರಾಜ ಶ್ರೀ ವಿದ್ಯಾಚಿತ್ರಭಾನಂದ ರಾಜಯೋಗೀಂದ್ರ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್** ಜೆ.ಸಿ.ಬಿ., ಜಿ.ಸಿ.ಎಸ್.ಐ., ಮಹಾಪ್ರಭುಗಳವರು ಲೋಕೋಪಕಾರಾರ್ಥ ವಾಗಿ ಈ ಶಿಲ್ಪಸಾರವೆಂಬ ಗ್ರಂಥವನ್ನು ತಮ್ಮ ಗ್ರಂಥಮಾಲೆಯಲ್ಲಿ ಮುದ್ರಣಮಾಡಿಸಿರುತ್ತಾರೆ. ಈ ಕಾವ್ಯದ ಪರಿಶೋಧನೆಗಾಗಿ ಕಾವ್ಯತೀರ್ಥ ವೇ॥ ಪಂಡಿತ ಕಾಶೀನಾಥ ಶಾಸ್ತ್ರಿಗಳವರು ಅತ್ಯಂತ ಶ್ರಮವಹಿಸಿ ಸಹಾಯಮಾಡಿದುದು ಚಿರಸ್ಮರಣೀಯವಾಗಿದೆ.

ಈ ಗ್ರಂಥಕ್ಕೆ ಪ್ರೋತ್ಸಾಹಮಾಡಿ ಪ್ರಕಾಶಗೊಳಿಸಿದ ಕರ್ಣಾಟಕ ದಿವ್ಯರತ್ನಸಿಂಹಾಸನಧೀಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರವರಿಗೂ ಅವರ ಪತ್ನೀಪುತ್ರಿಯರಿಗೂ ಜಗಜ್ಜಿಲ್ಪಿಯಾದ ಪರಶಿವನು ದೀರ್ಘಾಯುರಾರೋಗ್ಯ ಸತ್ಸಂತಾನ ದಿವ್ಯಜ್ಞಾನಗಳನ್ನು ಅನುಗ್ರಹಿಸಲಿ ಎಂದು ಪರಶಿವನ ಸನ್ನಿಧಿಯಲ್ಲಿ ಸರ್ವದಾ ಪ್ರಾರ್ಥನೆ ಮಾಡುತ್ತೇವೆ.

ಗ್ರಂಥಕರ್ತರು

ಮೈಸೂರು
ಸರ್ವಧಾರಿ ಸಂ॥ ಆಶ್ವಯುಜ. ಶು. ದಶಮೀ
ಮಂಗಳವಾರ, ತಾ॥ ೧೨.೧೦.೧೯೪೮



ಚಿತ್ರ : ಅನುಬಂಧ–೧.೧ : ಪಾರ್ವತೀ ದೇವಿ

ಶಿಲ್ಪಸಾರ

ಶ್ರೀಗಿರೀಶ ಮಹೇಶ ಪಶುಪತಿ । ನಾಗಭೂಷಣ ನಿಖಿಲನಿರ್ಜರ– ।
ಪೂಗ ಪುರುಹೂತಾದಿಸಂಸ್ತುತ ನಿಗಮವಿಖ್ಯಾತ ।
ಭೋಗಮೋಕ್ಷಜ್ಞಾನದಾಯಕ । ಯೋಗಶಿಲ್ಪಕಲಾನಿಕೇತನ
ಯೋಗಿ ಶ್ರೀಗುರುನಾಗಲಿಂಗನೆ ಸಲಹು ಮೂಜಗವ ॥ ೧ ॥

ಸರ್ವಜಗದುದಯಾದಿಸೂತ್ರವ । ನಿರ್ವಹಿಸಿ ವಿಶ್ವವನು ರೂಪಿಸಿ ।
ಶರ್ವನರ್ಧಶರೀರದೊಳು ತೋರುತ್ತಲನುದಿನದಿ ।
ಸರ್ವಜೀವರ ಮಾತೆಯಾಗಿಹ । ಸರ್ವಕಲೆಗಳ ಮೂಲವಾಗಿಹ ।
ಸರ್ವಮಂಗಳ ಶಿಲ್ಪಮಹಿಮೆಯ ಕೃತಿಗೆ ದಯೆದೋರೌ ॥ ೨ ॥

ಕರದಿ ಪುಸ್ತಕ ಲೇಖನೀಯಾ । ಧರಿಸಿ ಜಪಮಾಲೆಯೊಳು ಜಪಿಸು ।
ತ್ತಿರುವ ಭರ್ಗೋದೇವ ಪರಶಿವ. ಪ್ರಣವ ಮಂತ್ರವನು ।
ಭರದಿ ವೀಣೆಯ ನಾದಗೈಯುತ । ಲಿರುವ ವಾಗೀಶ್ವರಿಯೆ ಮುದದಿಂ
ವರವನೀವುದು ಶಿಲ್ಪ ಹಿಮೆಯ ಕೃತಿಗೆ ಸಂತತವು ॥ ೩ ॥

ಪರಮಶಿವಯೋಗೀಶ್ವರರು ನಿತ್ಯದೊ । ಳರಿತು ಮೂಲಾಧಾರಚಕ್ರದಿ
ಮೆರೆವ ಕುಂಡಲಿಯೂರ್ಧ್ವಮುಖಮಂ ಮಾಡಿ ನಿಶ್ಚಲದಿ ।
ನಿರತಿಯಿಂದಲಿ ಜಾನಿಸುತಲಿಹ । ವರಮಹಾಗಣಪತಿಯೆ ಶಿಲ್ಪದ
ಪಿರಿಮೆಯಹ ಸತ್ಕೃತಿಗೆ ಸಿದ್ಧಿಯನಿತ್ತು ಸಲಹುವುದು ॥ ೪ ॥

ಗುರುವೆ ನಿತ್ಯಾನಂದಚಿನ್ಮಯ । ದಿರವೆ ಶಿಲ್ಪಜ್ಞಾನದಾಯಕ
ಮರವೆಸಂಶಯಗಳನು ತೊಲಗಿಸುವಮಲಚಿಜ್ಜೋತಿ ।
ಸಿರಿಯ ಶಿಲ್ಪದ ಮಹಿಮೆ ಪೇಳಲು । ವರವ ಕರುಣಿಸು ಶ್ರೀಜಗದ್ಗುರು
ವರನೆ ಶಿವಯೋಗೀಂದ್ರ ನಂಜುಂಡೇಶ ವಿಶ್ವೇಶ ॥ ೫ ॥

ಆದಿಯಲಿ ಶಂಕರನು ಮಾಧವ । ನಾದರದಿ ಚತುರಾನನಂ ಮಿಗೆ
ವೇದಮುನಿಗಳು ಸಾನಗಾದಿಬ್ರಹ್ಮವಾದಿಗಳು ।
ಮೋದದಿಂದಲಿ ಕಪಿಲ ನಾರದರಾದ । ಯಾಮಯಮುನಿಪರಾಶರ
ರಾದಿಶಿಲ್ಪವ ಬೋಧಿಸಿಹರೀ ಗುರುಕುಲೋತ್ತಮರು ॥ ೬ ॥

ದೇವಮನು ಮಯ ವಿಶ್ವಕರ್ಮರು । ಜೀವಸೃಷ್ಟಿಯ ಶಿಲ್ಪಿ ಕಾಶ್ಯಪ
ಜೀವ ವೈವಸ್ವತ ಸುರೇಶರು ಭಾರ್ಗವಾಂಗಿರರು ।
ಪಾವನರು ಗಾರ್ಗೇಯ ಗೌತಮ । ಕೋವಿದರು ಸಲೆ ಸೂತ್ರಕಾರರು
ಶೈವಶಿಲ್ಪಿಬ್ರಹ್ಮವಂಶೋದ್ಭವರು ವಿಶ್ರುತರು ॥ ೭ ॥

ದೇವದೇಶಿಕರಾಗಿ ಶಿಲ್ಪದ । ಭಾವಸೂತ್ರವ ಬೋಧೆಗೈಯುತ
ಜೀವಭಾವವನಳಿಸಿ ಮಾನವಕೋಟಿ ಹೃದಯದಲಿ ।
ದೇವಭಾವದ ಚಿತ್ರಬೆಳಗಿಹ । ಶೈವಶಿಲ್ಪಿ ಬ್ರಹ್ಮರ್ಷಿಗಳ
ನಾವಗಂ ಮನದಲ್ಲಿ ಸ್ಮರಣೆಯಗೈದು ನಮಿಸುವೆನು ॥ ೮ ॥

ಘನದಿ **ಯತ್ತೇಶಿಲ್ಪ**ಮೆನ್ನುತೆ । ಅನಿಶಮಾಶ್ರುತಿ ಘೋಷಿಸಿರ್ಪುದು
ಮುನಿಯು ಕಾಶ್ಯಪ ಶಿಲ್ಪಿವೈಭವಕುಶಲದಿಂ ತಾನು ।
ಮನದಿ ಪ್ರಜೆಗಳ ಸೃಷ್ಟಿಗೈಯ್ಯುತೆ । ಜನಕನಾದನು ಜಗಕೆ ದಿನಮಣಿ
ಜನಕನಭಿಧಾನದಿ ಪ್ರಜಾಪತಿಯಾದನಿಂತೆಂದು ॥ ೯ ॥

ಸಕಲವಿದ್ಯಾಮೂಲವಾಗಿಹ । ನಿಖಿಲವೇದದಿ ಘೋಷಿಸಿಹ ಚೋ –
ದಕನು ನಾಭಾನೇದಿಷ್ಠ ಗುರು ಕಲಾಮಹಿಮ ।
ಪ್ರಕಟಿಸಿದನವ ದೇವಶಿಲ್ಪವ ಸುಕರಕೌಶಲ ವಾಸ್ತುಕರ್ಮ –
ಪ್ರಕರದೊಳಗಂಗಿರಮಹರ್ಷಿಯ ಸತ್ರಯಾಗದಲೀ ॥ ೧೦ ॥

ಶ್ರುತಿಯು **ತಸ್ಯತ್ವಷ್ಟಾವಿಧ** । ದ ದತಿಶಯದ ಚಿದ್ರೂಪಮೇತೆಂ
ದತಿಶಯದಿ ಶಿಲ್ಪಾಖ್ಯಸೃಷ್ಟಿಯ ಘೋಷಣೆಯಗೈದು ।
ಅತುಳಬೃಹದಾಕಾರವಾಗಿಹ ಕ್ಷಿತಿಯ ಪೂರ್ಣವಿರಾಟ್ಸ್ವರೂಪದ
ಪ್ರತಿಮೆಯಾಗಿಹುದೆಂದು ತೋರ್ಪುದು ಶಿಲ್ಪಸೃಷ್ಟಿಯನು ॥ ೧೧ ॥

ರೂಪವೆಲ್ಲವು ತ್ವಷ್ಟೃಶಿಲ್ಪಿಯ । ರೂಪವಾಗಿಹುದೆಂದು ಪೇಳುವು
ದಾಪವಿತ್ರಶ್ರುತಿಯು **ತ್ವಷ್ಟಾರೂಪಾಣಾ**ಮೆನುತ ।
ಈಪರಿಯೊಳಿಹ ವೇದವಾಕ್ಯಗ । ಳಾ ಪರಾತ್ಪರಶಿಲ್ಪಸೃಷ್ಟಿಯ
ರೂಪವಂ ಪಾಡುತ್ತ ಧನ್ಯಗಳಾದವೈ ಜಗದಿ ॥ ೧೨ ॥

ವೇದಗಳು ಶಿಲ್ಪವನು ಬೋಧಿಪು । ವಾದರದಿ ಸೂತ್ರಾರ್ಥರೂಪದಿ
ವೇದಶಿಲ್ಪವು ಶಿಲ್ಪವೇದವಿದೆಂದು ನಿರ್ಣಯಿಸಿ ।
ಭೇದವಿಲ್ಲವು ವೇದಶಿಲ್ಪಕೆ । ವಾದವೇನಿಲ್ಲೊಂದೆ ನಿಜವಿದು
ಆದಿಶಿಲ್ಪವೆ ಯಾಗಮಂಗಳರೂಪ ತಾಳಿಹುದು ॥ ೧೩ ॥

ಶಿಲ್ಪವಿಲ್ಲದೊಡಾಗಮಂಗಳ । ಕಲ್ಪನೆಯು ತಾನಿಲ್ಲವದರಿಂ
ಶಿಲ್ಪವೇ ತಂತ್ರಾಗಮಂಗಳ ಮಾತೃವಾಗಿಹುದು ।
ಶಿಲ್ಪವದು ಸರ್ವತ್ರ ಶಾಸ್ತ್ರದ । ಕಲ್ಪವೃಕ್ಷವಿದೆಂದು ಸಾರಿಹ
ಶಿಲ್ಪಸೂತ್ರವೆ ಸಾಕ್ಷಿಯಾಗಿರುತಿಹುದು ವಿಶ್ವದಲಿ ॥ ೧೪ ॥

ಸಕಲ ಶಾಸ್ತ್ರಗಳೆಲ್ಲ ಶಿಲ್ಪದ । ಸಕಳನಿಷ್ಕಳಭಾವದಿಂದಲಿ
ನಿಕಟಸಂಬಂಧದೊಳಗನ್ಯೋನ್ಯತೆಯ ತಾವ್ಗಳಿಸಿ ।
ಪ್ರಕಟವಾದವು ಶುಲ್ಬಸೂತ್ರದ । ಮಕುಟವಾಗಮತಂತ್ರದಲಿ ಸಾ
ಧಕರಿಗಿದು ಸುಜ್ಞಾನಮೋಕ್ಷಗಳಿತ್ತು ರಕ್ಷಿಪುದು ॥ ೧೫ ॥

ಮೆರೆಯುತಿಹ ವೇದಗಳು ನಾಲ್ಕರೊ । ಳರುವ ಗ್ರಂಥಗಳೊಂದುಲಕ್ಷವಿ
ದರುಣಜ್ಯೌತಿಷವೆರಡು ಲಕ್ಷಗ್ರಂಥವಾಗಿಹವು ।
ಅರಿಯಲಾಯುರ್ವೇದ ಸುಶ್ರುತ । ಚರಕಸಂಹಿತೆ ಮೂರು ಲಕ್ಷವು
ಹಿರಿಯ ಶಿಲ್ಪವು ವೇದನಾಲ್ಕಕೆ ನಾಲ್ಕು ಲಕ್ಷವದು ॥ ೧೬ ॥

ಇಂತು ಶಿಲ್ಪಗ್ರಂಥರಾಜಗ । ಳಂತರಂಗದ ಫಲವನೋಳ್ಪರು
ಚಿಂತಿಸುವರಾರಿಲ್ಲ ಶಿಲ್ಪಗ್ರಂಥಗಳಿಗಾಗಿ
ಕಂತುಹರ ಕಾಪಾಡಬೇಕಿವ । ನೆಂತು ಶಿಲ್ಪೋದ್ಧಾರಗೈವನ
ದೆಂತು ಬೆಳಕಿಗೆ ಬಂದು ಜನಕುಪಕಾರ ನೀಡುವವೋ ॥ ೧೭ ॥

ಶಿಲ್ಪವೇ ಸತ್ಕರ್ಮಯೋಗವು ಶಿಲ್ಪಕೃತಿ ಸುಜ್ಞಾನಸಾಧನ
ಶಿಲ್ಪವೇ ಗುರುತರದ ಮಾರ್ಗವು ಮುಕ್ತಿಸಾಧನೆಗೆ ।
ಶಿಲ್ಪವೇ ಗುರುದೈವ ವಿಶ್ವಕೆ । ಶಿಲ್ಪವೇ ಜೀವನವು ಜನತೆಗೆ
ಶಿಲ್ಪ ಸರ್ವವ್ಯಾಪಿಯದರಿಂ ಶಿಲ್ಪಕಾಮ ನಮಿಪೆಂ ॥ ೧೮ ॥

ಶಿಲ್ಪಿಯೇ ಲೋಕೇಶ್ವರಂ ಮಿಗೆ । ಶಿಲ್ಪಿಯೇ ಜಗದಂತರಾತ್ಮನು
ಶಿಲ್ಪಿಯೇ ಮಾಧವನು ದಿವಿಜರಿಗೊಡೆಯನಿವನ್ಯೆಸೆ ।
ಶಿಲ್ಪಿಯೇ ಸುರನರಸುಪೂಜ್ಯನು । ಶಿಲ್ಪಿಯೇ ವಿಜ್ಞಾನಬೋಧಕ
ಶಿಲ್ಪಿಗಿಂ ಪರದೈವ ಬೇರಿಲ್ಲೆನುತ ನಮಿಸುವೆನು ॥ ೧೯ ॥

ಜೀವಪರಮರ ಭೇದವೆಂಬುದು । ಭಾವದೊಳಗುದ್ಭವಿಸೆ ಜನಕೆ ಸ್ವ –
ಭಾವವಾಗಿಹ ವಸ್ತುಜ್ಞಾನವು ದೊರೆಯದೆಂದೆನುತಂ ।
ದೇವಶಿಲ್ಪಿಯ ಸ್ವೇಚ್ಛೆಯಿಂದಲಿ । ಪಾವನತ್ವ ಬಿಂಬಗೊಳಿಸುತ
ದೇವನೋರ್ವನೆ ನಿಜವಿಂದೆಬುದೆ ವಿಷಯ ಶಿಲ್ಪಕ್ಕೆ ॥ ೨೦ ॥

ಬ್ರಹ್ಮಶಾಸ್ತ್ರಂಗಳಿಗೆ ವಿವರಣೆ । ನಿರ್ಮಲಪ್ರತಿಪಾದ್ಯವಿದಕೆ ಸು –
ಕರ್ಮಪ್ರತಿಪಾದಕವಿದೆಂಬುದು ವೇದಸಿದ್ಧವದು ।
ಬ್ರಹ್ಮವಿದು ಪ್ರತಿಪಾದ್ಯಶಿಲ್ಪವು । ಧರ್ಮಪ್ರತಿಪಾದಕವು ಬಿಂಬವು
ಮರ್ಮವಿದು ಸಂಬಂಧ ಬಿಂಬಕ ಶಾಸ್ತ್ರದೈಕ್ಯವದು ॥ ೨೧ ॥

ಸಕಲದುಃಖನಿವೃತ್ತಿಗೋಸುಗ । ಸುಕರಕರ್ಮವಿಧಾನದಿಂದಲಿ
ಸಕಲಮೂರ್ತಿಯ ಸೃಷ್ಟಿಗೆಯ್ಯುತ ಸಂತತಂ ಬಿಡದೆ ।
ನಿಖಿಲವಿಶ್ವಕಭಿನ್ನವಾಗಿಹ । ಸಕಳನಿಷ್ಕಳರೂಪ ಧರಿಸಿರು –
ವಕಲತತ್ತ್ವಜ್ಞಾನಪ್ರಾಪ್ತಿಯದೇ ಪ್ರಯೋಜನವು ॥ ೨೨ ॥

ಸತ್ಯಧರ್ಮಾಚಾರನಿರತಂ ನಿತ್ಯಕರ್ಮದೆ ತನ್ನ ಕಾಯಿಕ
ವೃತ್ತಿಯಿಂ ವರಶೈವದೀಕ್ಷಾಪರನು ತಾನಾಗಿ ।
ಮೃತ್ಯುವನು ಜಯಿಸಿದವನನಿಶಂ । ಭೃತ್ಯನಾಗುತ ಮನದಿ ಪೂಜಿಸು –
ವತ್ಯಧಿಕ ಶಿಲ್ಪಾಚಾರ್ಯ ವಂಶಜನಿದರೊಳಧಿಕಾರಿ ॥ ೨೩ ॥

ಸತ್ಯಶಿಲ್ಪದ ಮಹಿಮೆ ಪೇಳಿಹೆ । ಮಿಥ್ಯೆಯಿದರೊಳಗಿನಿತುಮಿಲ್ಲವು
ಸ್ತುತ್ಯವಹುದುತ್ಪ್ರೇಕ್ಷೆಗೈದಿಹ ಕವಿತೆ ತಾನಲ್ಲ ।
ನಿತ್ಯಕರ್ಮಕೆ ಮೂಲವಾಗಿರು । ವತ್ಯಧಿಕವಸ್ತುಗಳ ಜಾತವ
ನೆತ್ತಿ ಪೇಳಿಹೆ ಸರ್ವಸಮ್ಮತಶಾಸ್ತ್ರಸಾರವನು ॥ ೨೪ ॥

ಸಿದ್ಧವಾಗಿಹ ವಾಸ್ತುಶಾಸ್ತ್ರಸ । ಮೃದ್ಧಕಾವ್ಯದ ಮಹಿಮೆಯನು ನಾ
ನುದ್ಧರಿಸಿ ಪೇಳಿಹೆ ಶಿಲ್ಪಶಾಸ್ತ್ರದ ಸಾರಸಂಗ್ರಹಮಂ ।
ಬದ್ಧದೋಷಗಳಿದ್ದರಿದರೊಳು । ಶುದ್ಧಿವಿಷಯಕೆ ಮನವನಿರಿಸುತ
ತಿದ್ದಿ ಪೇಳ್ವುದು ಜ್ಞಾನವೃದ್ಧರು ಸತ್ಯಶೋಧನೆಯಿಂ ॥ ೨೫ ॥

ಶ್ರೀಪರಾತ್ಪರ ನಿತ್ಯ ನಿಜನಿ । ರ್ಲೇಪ ವಿಶ್ವವ್ಯಾಪಿ ನಿರ್ಮಲ –
ನಾ ಪರಂಜ್ಯೋತಿಃಪ್ರಕಾಶನೆ ಸ್ವೇಚ್ಛೆಯಿಂ ತಾನು ।
ರೂಪನಾಮಾದಿಗಳ ಧರಿಸುತ । ಲಾಪಿನಾಕಿಯೆ ಟಂಕಹಸ್ತದಿ
ರೂಪುಗೊಂಡನು ಶಿಲ್ಪಿನಾಮವನಾಂತು ವಿಶ್ವದಲಿ ॥ ೨೬ ॥

ಟಂಕವದು ಪಾಷಾಣಭೇದಿ ಶಿ । ವಂಕರಂ ವರಶಿಲ್ಪಸೃಷ್ಟಿ ನಿ –
ರಂಕುಶದ ಶಿಲ್ಪಾಯುಧವು ತಾನಾಗಿ ರಂಜಿಸುತ ।
ಶಂಕರನ ಕರಕಮಲದೊಳಗಾ । ತಂಕವಿಲ್ಲದೆ ಸೃಷ್ಟಿಗೈಯುತ
ಶಂಕಿಸದೆ ಶಿವಪಂಚವಿಂಶತಿ ಲೀಲೆಯೊಳಗಿಹುದು ॥ ೨೭ ॥

ಆದಿಶಕ್ತಿಯೆ ಪ್ರಣವಮಂತ್ರದ ನಾದವಾಗುತ ಮೂರು ವರ್ಣದಿ
ವೇದಮಾತೆಯ ರೂಪ ಧರಿಸುತ ವಿಶ್ವವೆಲ್ಲವನು ।
ಮೋದದಿಂ ಚಿತ್ರಿಸುತ ಶಿಲ್ಪವಿ । ನೋದವಿದ್ಯಾದಿಗಳ ತನ್ಮಯ
ವಾದಳೈ ಚಿಚ್ಛಕ್ತಿ ಶಿವಶಿಲ್ಪಿಯನು ತಾ ಬೆರೆದು ॥ ೨೮ ॥

ಶಿವನು ತನ್ನೊಡಲನ್ನು ಮುದದಿಂ । ಶಿವೆಗೆ ನೀಡುತಲರ್ಧನಾರಿಯ
ಪ್ರವಿಮಲಾಕೃತಿಯಾಂತು ಶಿಲ್ಪದ ಕಲೆಯ ವಿಸ್ತರಿಸಿ ।
ಭುವನದೊಳಗೀ ನಾರೀಪುರುಷರ । ನಿವಹವೆಲ್ಲವು ಶಿಲ್ಪಕಲೆ ವೈ –
ಭವವಿದೆನುತಲಿ ಶಿಲ್ಪಸೃಷ್ಟಿಯ ಕ್ರಮವ ತೋರಿದನು ॥ ೨೯ ॥

ಶಿಲ್ಪಿಯೇ ಶಿವಶಕ್ತಿರೂಪದಿ । ಕಲ್ಪಿಸಿದ ಜಗವೆಂಬ ಚಿತ್ರವು
ಶಿಲ್ಪ ತಾನೀ ವಿಶ್ವರೂಪ ಚರಾಚರವದೈಸೆ ।
ಶಿಲ್ಪಕರ್ಮವೆ ಬ್ರಹ್ಮಕರ್ಮವು । ಕಲ್ಪತರುವದು ಶಿಲ್ಪವದು ಕೇ –
ಳಲ್ಪಮತಿಗಳದೇನ ಬಲ್ಲರು ಶಿಲ್ಪಮಹಿಮೆಯನು ॥ ೩೦ ॥

ಮೂರು ಪಾದಸರೋಜಗಳು ತಾ । ನಾರು ಕುಕ್ಷಿಗಳೈದು ಶಿರಗಳು
ಮೂರು ಲೋಚನ ದಶಭುಜಂಗಳ ತಾಳಿ ಶೋಭಿಸುತ ।
ಸಾರುತಿಹ ಗಾಯತ್ರಿದೇವಿಯು । ತಾರಕಾದಿಪ್ರಣವರೂಪವ
ತೋರುತಿಹಳಾ ವೇದಮಾತೆಯು ಶಿಲ್ಪರಚನೆಯಲಿ ॥ ೩೧ ॥

ಎರಡು ಮುಖಗಳು ನಾಲ್ಕು ಶೃಂಗಗ । ಳಿರುವ ಶಿರದಿ ಜಟಾಸಮೂಹವು
ಕರಗಳೇಳು ತ್ರಿಪಾದ ಶಶಿಕಲೆ ಸಪ್ತಜಿಹ್ವೆಗಳು ।
ಮೆರೆವ ಸ್ವಾಹಾಸ್ವಧೆಯರೀರ್ವರ । ವರಿಸಿ ದಕ್ಷಿಣವಾಮಪಾರ್ಶ್ವದೊ
ಳಿರುವ ಮೇಷಾರೂಢ ವೈಶ್ವಾನರನ ರೂಪವು ಶಿಲ್ಪಚಿತ್ರವದು ॥ ೩೨ ॥

ಲಿಪಿಯ ಮೂಲವು ಪ್ರಣವವದು ತಾ । ನಪರ ಪರವಿಂತೆಂದು ಭಾಗಿಸು
ತಪರಿಮಿತ ರೂಪಂಗಳಿಂ ಬಹುವರ್ಣವಾಗುತಲಿ ।
ಸುಪಥವೇದಾಗಮಪುರಾಣವು । ವಿಪುಲಮಂತ್ರಾರ್ಥಂಗಳಾಗಿಹ
ಲಿಪಿಯ ರೇಖಾಕೃತಿಗಳೆಲ್ಲವು ಶಿಲ್ಪ ಚಿಹ್ನೆಗಳು ॥ ೩೩ ॥

ಮಂತ್ರಸಾಧನ ವರ್ಣ ದೇವತೆ । ಯಂತ್ರಗಳ ವಿನ್ಯಾಸ ಭೂಪುರ
ತಂತ್ರಗಳ ಕೀಲಿಸುವ ಗೊಂಬೆಗಳಂಗವದು ನೋಡೆ ।
ಯಂತ್ರಿಸುವ ರೇಖಾದಿಮಂಡಲ । ತಂತ್ರಕೋಣವು ಬಿಂದು ವೃತ್ತ ನಿ–
ಯಂತ್ರ ಸರ್ವಸ್ವತಂತ್ರಗಳು ತಾವ್ ಶಿಲ್ಪತಂತ್ರಗಳು ॥ ೩೪ ॥

ಧರೆಯ ಮೂಲಾಧಾರ ಕೂರ್ಮದ । ಚರಣಪೀಠವದಷ್ಟದಿಗ್ಗಜ –
ಶಿರದಿ ಪೊತ್ತಿರುವಾದಿಶೇಷ ಸಹಸ್ರನಾಗಗಳು
ಮೆರೆವ ಪಾತಾಳಾದಿ ಲೋಕಗ । ಳರಿಯೆ ಭೂರ್ಭುವರಾದಿಯಾಗಿಹ
ನೆರೆ ಚತುರ್ದಶಲೋಕಗಳು ತಾವ್ ಶಿಲ್ಪಭುವನಗಳು ॥ ೩೫ ॥

ಶೈವ ವೈಷ್ಣವ ಭೂಮಿಗಳು ಮಿಗೆ । ದೈವ ಭೌತಿಕ ಬ್ರಹ್ಮಭೂಮಿಯು
ಜೀವ ವಾರುಣ ವೈಂದ್ರವಾಸುರ ಧರಣಿಲಕ್ಷಣವು ।
ಭೂವಲಯವೌಕ್ಷವದು ರಾಕ್ಷಸ । ರಾವರಣ ಪೈಶಾಚವಾಯುವು
ಕೇವಲವಿದಾಗ್ನೇಯಲಕ್ಷಣವಾಸ್ತುಗಳು ಶಿಲ್ಪಂ ॥ ೩೬ ॥

ಭೂಪರೀಕ್ಷಾವಿಧಿಗಳಿಂದಲಿ । ಭೂಪರಿಗ್ರಹಗೈಯ್ಯುತದರೊಳ್
ಭೂಪದವ ಚಿತ್ರಿಸುವ ಶಂಕುಸ್ಥಾಪನಾದಿಗಳು ।
ರೂಪುಗೊಳಿಸುವ ಮಾನಸಾಧನೆ ಯೂಪ ವಾಜನ ಸಂಧಿ ಬಂಧನ –
ವಾಪರಿಷ್ಕೃತಭಿತ್ತಿ ಪ್ರಾಚೀಸಾಧನವು ಶಿಲ್ಪಂ ॥ ೩೭ ॥

ವಾಟಗಳು ಪಾಂಚಾಲ ಮಾಗಧ । ವಾಟಗಳು ಗಾಂಧಾರ ಕೌರವ
ವಾಟಗಳು ಜಯ ಶೂರಸೇನಪ್ರಭೃತಿ ನಾಮಗಳಿಂ ।
ವಾಟವದು ವೈದೇಹಿಕವು ವರ । ವಾಟವಾವಂತಿಕವದಾಲಯ
ವಾಟವೆಂಟನೆ ರಾಜಕನ್ಯಕ ಶಿಲ್ಪಸೂತ್ರಗಳು ॥ ೩೮ ॥

ಗ್ರಾಮ ನಂದ್ಯಾವರ್ತ ಸ್ವಸ್ತಿಕ । ಗ್ರಾಮ ಕುಟಿಕ ಗ್ರಾಮ ನಗರ
ಗ್ರಾಮ ಪತ್ತನ ಪುರವು ಜನಪದವೆಂಬ ಪೆಸರಾಂತು ।
ಗ್ರಾಮ ನಿಷ್ಠಾಗೋಷ್ಠಿ ಮಂಗಲ । ಗ್ರಾಮ ಬ್ರಹ್ಮಗ್ರಾಮ ವಿಸ್ತರ
ಗ್ರಾಮ ನಿವಹದ ರಾಜಧಾನಿಗಳೆಲ್ಲ ಶಿಲ್ಪವಿದು ॥ ೩೯ ॥

ಮೆರೆವ ಸುಂದರ ವೀಧಿಗಳು ಬಂ । ಧುರದ ರಥವೀದಿಗಳು ಮತ್ತಂ
ಕಿರಿಯ ವೀಧಿಯ ಬಳಿಯ ವಿಸ್ತೃತ ರಾಜವೀಧಿಗಳು ।
ಅರಸರಂದಣವೇರಿ ಚರಿಸುವ । ಪುರಮಹಾವೀದಿಗಳು ದೀರ್ಘದೊ –
ಳಿರುವ ನಾರಾಚಾದಿವೀಧಿಗಳೆಲ್ಲ ಶಿಲ್ಪಮಯಂ ॥ ೪೦ ॥

ಪೂರ್ವಪಶ್ಚಿಮ ದೀರ್ಘವಾಗಿಹ ಸೂರ್ಯವೀಧಿಯು ದಕ್ಷಿಣೋತ್ತರ
ಸಾರ್ವನಿರ್ಮಲಚಂದ್ರವೀಧಿಯು ಗುಪ್ತವೀಧಿಗಳು ।
ಶೌರ್ಯತುರಗ ಪದಾತಿ ಗಜಗಳು । ಧೈರ್ಯದಿಂ ಸಂಚರಿಪ ವೀಧಿಗ –
ಳಾರ್ಯರಂತರ ವೀಧಿಗಳು ತಾಂ ಶಿಲ್ಪವಿನ್ಯಾಸಂ ॥ ೪೦ ॥

ದ್ವಾರ ಷೋಡಶಭಾಗ ಲಕ್ಷಣ । ದ್ವಾರಬಂಧ ಕವಾಟ ನಗರ –
ದ್ವಾರ ಜನಪದ ದುರ್ಗ ವೀದ್ವಾರಗಳ ಸಂಚಯವು ।
ದ್ವಾರವಂತರ ಶಾಲೆ ಬೋದಿಗೆ । ತೋರಣದ ಮೇಲ್ಕಟ್ಟು ಲೋವೆಗ
ಳಾರಕೂಟದ ಪಟ್ಟಿಕೆಗಳಿವು ಶಿಲ್ಪಕರ್ಮಗಳು ॥ ೪೨ ॥

ತೋರಣಂಗಳು ಮಂಗಲಂಗಳು । ವೀರಜಾಲಕ ಮಕರತೋರಣ
ತೋರುಪೆಂಜರ ಕೂಟಕೋಷ್ಠಗಳುತ್ತರಾಣಿಗಳು ।
ಚಾರುತರ ಶಿಖರಗಳು ಪ್ರಸ್ತರ । ಸೇರುವಿಕೆಯಾ ಮುಷ್ಟಿಬಂಧನ
ಮೇರು ಗೋಳ ಸ್ತೂಪಿಕಾದಿಗಳೆಲ್ಲ ಶಿಲ್ಪಮಯಂ ॥ ೪೩ ॥

ಭವನಗಳು ಪ್ರಾಸಾದ ಮಂದಿರ । ಶಿವಕರ ಶ್ರೀನಗರ ಮಂದಿರ
ಗವಿ ಗವಾಕ್ಷ ಕುಟೀರ ಮಠಗಳು ಬಸದಿ ಸತ್ರಗಳು ।
ಅವನಿಯಂತರ ಸದನರಂಗಗ ಳವಳಿಮಾಳಿಗೆ ಕುಟಿಯು ತೃಣಗಳ
ವಿವಿಧ ಕಾಷ್ಠದಿ ರಚಿತಮಾಗಿಹುದೆಲ್ಲ ಶಿಲ್ಪಮಯಂ ॥ ೪೪ ॥

ಸ್ನಾನದಾಲಯ ಪಾಕದಾಲಯ । ಪಾನದಾಲಯ ಭೋಜನಾಲಯ
ಧ್ಯಾನಪೂಜಾಲಯವು ಶುಭಕರ ನಿಯಮದಾಲಯವು ।
ಗಾನಶಯನಾಲಯವು ಘನವಿ ಜ್ಞಾನದಾಲಯ ಶಸ್ತ್ರದಾಲಯ
ಧಾನ್ಯದಾಲಯ ದ್ರವ್ಯ ದಾಲಯವೆಲ್ಲ ಶಿಲ್ಪಮಯಂ ॥ ೪೫ ॥

ಸೂತಿಕಾಲಯವಮಲನವ ನವ । ನೀತವಿಳಿಸುವ ಮಂಥನಾಲಯ
ಸಾತಿಶಯ ರತಿಸುಖದ ಸುಂದರ ಬಂಧುರಾಲಯವು ।
ಖ್ಯಾತವಾತಾಯನ ಕವಾಟ ದ್ಯೂತಕ್ರೀಡಾ ಗರಡಿಸಾಧನ
ಕೌತುಕಾಲಯ ಶೌಚದಾಲಯ ಶಿಲ್ಪನಿರ್ಮಿತವು ॥ ೪೬ ॥

ಅರುಣಶಾಲೆಯು ಚಿತ್ರಶಾಲೆಯು । ಸುರಭಿಶಾಲೆಯು ಚಂದ್ರಶಾಲೆಯು
ಪರಿಮಳದ್ರವ್ಯಗಳ ಶಾಲೆಯು ಶಿಶಿರಶಾಲೆಯು ।
ಮೆರೆವ ನರ್ತನಶಾಲೆ ಗಾನದ । ಪರಿಕರಂಗಳ ಶಾಲೆ ವಾದ್ಯದ
ಪರಮಸುಂದರಶಾಲೆ ಶಿಲ್ಪದ ವಿಮಲರಚನೆಯದು ॥ ೪೭ ॥

ವಿವಿಧವಸ್ತುಗಳಿಡುವ ಶಾಲೆಯು । ಭುವನಮೋಹಕ ಶಿಲ್ಪಶಾಲೆಯು
ರವಿಯಕಾಂತಸ್ಫಾಟಿಕಾಸನ ಹಂಸತೂಲಿಕೆಯು ॥
ಸವಿಯನೀರಿನ ತಿಳಿಗೊಳಂಗಳು । ಕವಲುಮರದುಯ್ಯಾಲೆ ಸುಂದರ
ನವಸರೋಜಸಮೂಹಚಿತ್ರಿತ ವೇದಿಯು ಶಿಲ್ಪಂ ॥ ೪೮ ॥

ಕದನ ಕಂಚುಕ ಖೇಟಕಂಗಳು । ವಿದಿತವಿಕ್ರಮರಾಷ್ಟ್ರಗಳು ತಾ –
ನಿದರ ಬಳಿ ಖರ್ವಟವು ಗಿರಿವನದುರ್ಗಸಂಚಯವು ।
ಚದುರಬಲಗಳ ಶಿಬಿರಗಳು ಮೇ । ಣ್ಣದನ ಸೇನೆಯ ಸ್ಕಂಧವಾರವು
ಸದಯ ರಾಜರ ಬಲಗಳಿಹ ಸ್ಥಾನೀಯಗಳು ಶಿಲ್ಪಂ ॥ ೪೯ ॥

ನದಿಯ ಸೋಪಾನಗಳು ಪುಷ್ಕರ । ವದನ ಮಂಟಪ ವರಸರೋವರ
ಗದುಗೆ ಮೇಲಾಲಯವು ಸುತ್ತಾಲಯವು ಪ್ರಾಕಾರಂ ।
ಮದಕರಿಯ ಸಾಲ್ ಚಿತ್ರಮಂಟಪ ಮದನಕದನದ ನಿಲಯ ಬಹುವಿಧ
ಸುದತಿಯರ ಕ್ರೀಡವಿಹಾರದ ಭವನಗಳು ಶಿಲ್ಪಂ ॥ ೫೦ ॥

ಮೂಲದೇವರು ಗರ್ಭಗೇಹ ಕ । ಪೋಲವರ ಶುಕನಾಸಿ ಬಳಿಕ ವಿ–
ಶಾಲವಹ ನವರಂ ಚಿತ್ರದ ಕೂಟಕೋಷ್ಠಗಳು ।
ಸಾಲುಕಂಭಗಳರ್ಧಮಂಟಪ । ಮೇಲುಕಟ್ಟಿನ ಸ್ವಸ್ತಿಕಂಗಳು
ನಾಲಗಲವಿನ್ಯಾಸ ಶಿಲ್ಪದ ರಚನೆಯಾಗಿಹವು ॥ ೫೧ ॥

ಯಾಗಶಾಲಾದಿಗಳ ಮಂಟಪ । ಯೋಗ ಪೂಜಾದಿಗಳ ಮಂಟಪ
ನಾಗರಾದಿ ಜಯಂತ ಮಂಗಲ ಶಿಖರ ಭೇದಗಳು ।
ಭಾಗಭದ್ರಾದಿಗಳು ನಾಡಿಗ । ಳಾಗಲವು ಮೂರ್ಧ್ನೇಷ್ಟಕಾಘನ –
ವಾಗಿ ಕೀಲಿಪ ವಾಜನಂಗಳು ಶಿಲ್ಪವಿನ್ಯಾಸಂ ॥ ೫೨ ॥

ಭದ್ರಕೂಟ ಸುವೃತ್ತಕುಮುದವು । ಕ್ಷುದ್ರನಾಸೀ ಕುಂಭಲತೆ ಕಮ –
ಲಾದ್ರಿವೇದಿಲುಪಾತಲಂಗಳು ದೀರ್ಘಪಾದಗಳು ।
ರುದ್ರಕಾಂತಸಮಾಂಗಭದ್ರಕ । ವಿದ್ರುಮಸ್ತಂಭಗಳು ಜಾಲಕ
ಮುದ್ರೆಕೋಲು ಸಮುದ್ರಮಥನದ ಮಂತು ಶಿಲ್ಪಮಯ ॥ ೫೩ ॥

ಸೀಮನಿರ್ಮಾಣವದು ಶಿಲ್ಪವು । ನೇಮನಿಷ್ಠೆಯ ನಿಲಯ ಶಿಲ್ಪಾ
ಗಮೋದಿತ ಕರ್ಷಣ ಪ್ರತಿಷ್ಠಾದಿಗಳು ಶಿಲ್ಪಂ ।
ಕಾಮಿತಾರ್ಥಗಳೀವ ದೇವರ । ಧಾಮ ನಿಗಮಸ್ತೋಮವೆಲ್ಲವು
ಪ್ರೇಮದಿಂ ಪೊಗಳಿರುವುದೆಲ್ಲವು ಶಿಲ್ಪಸಾಹಿತ್ಯಂ ॥ ೫೪ ॥

ಸ್ನಾನಮಂಟಪ ದಾನಮಂಟಪ ಮೌನದಿಂ ಜಪಗೈವ ಮಂಟಪ –
ಜ್ಞಾನಮಂಟಪ ನಿತ್ಯಪಾರಾಯಣದ ಮಂಟಪವು ।
ಧ್ಯಾನಮಂಟಪ ಭಜನಮಂಟಪ । ಗಾನಮಂಟಪ ವಾದ್ಯಮಂಟಪ
ದಾನಮಂಟಪ ನೃತ್ಯಮಂಟಪವೆಲ್ಲ ಶಿಲ್ಪಮಯಂ ॥ ೫೫ ॥

ಲತೆಯ ಮಂಟಪ ದರ್ಪಣಂಗಳ । ವಿತತಮಂಟಪ ಚಿತ್ರಮಂಟಪ–
ವತಿಮನೋಹರ ಪತ್ರಪುಷ್ಪವಟಾದಿ ಮಂಟಪಗಳ್ ।
ವಿತರಣದ ಸಂಕೇತಮಂಟಪ । ವತಿಶಯದ ನವರತ್ನ ಮಂಟಪ
ವತುಳ ಸೌಜನ್ಯಾದಿ ಮಂಟಪವೆಲ್ಲ ಶಿಲ್ಪಮಯಂ ॥ ೫೬ ॥

ಹರನ ಕೈಲಾಸಾದ್ರಿ ಕಾಶಿಯು । ಪರಳಿ ಶ್ರೀಕೇದಾರ ತಾರಕ
ವರತ್ರಿ ಕೂಟವು ವಿಂಧ್ಯವಾಸವು ಗಯೆಯು ಶ್ರೀಶೈಲಂ ।
ಗರಳಪುರಿ ಗೋಕರ್ಣ ತ್ರ್ಯಂಬಕ । ಪರಮಗೋಪ್ಯಚಿದಂಬರಂ ಶಿವ
ಚರಣ ಕಾಂಚೀಕ್ಷೇತ್ರ ಶಿಲ್ಪದ ಪುಣ್ಯಭೂಮಿಗಳು ॥ ೫೭ ॥

ಸೇತುಬಂಧ ಕುಮಾರಸಂಗಮ । ಶ್ವೇತಗಿರಿ ಮಹಿಷಾರಿ ನಂದಿ ವಿ –
ಧಾತೃ ಹರಿಹರ ಸಿದ್ಧ ವೇದಾರಣ್ಯ ಸೌರಾಷ್ಟ್ರ ।
ಖ್ಯಾತಭದ್ರಾಚಲವು ಮಧುರೆ ಪ್ರ । ಭಾತ ಮಧ್ಯಾರ್ಜುನವವಂತಿಕೆ
ಪೂತಶೇಷಾಚಲವು ಶಿಲ್ಪದ ಪುಣ್ಯಭೂಗಳು ॥ ೫೮ ॥

ಶಂಕುನಿರ್ಮಾಣವದು ಗರ್ತವ । ದಂಕುರಾರ್ಪಣ ಪಂಚಪಾಲಿಕೆ –
ಯಂಕುಶಾದಿದಶಾಯುಧಂಗಳು ಸರ್ವತೋಭದ್ರಂ ।
ಟಂಕಕುಲವಧಿವಾಸ ಕೂಪದ । ಸಂಕಲನ ದಿವ್ಯಾಷ್ಟಬಂಧನ
ವಂಕ ಪ್ರಾಣನ್ಯಾಸ ನಯನೋನ್ಮೀಲನವು ಶಿಲ್ಪ ॥ ೫೯ ॥

ಸರಸಮಾದಭಿಷೇಕಕುಂಭವು । ಹರನ ದಿವ್ಯ ರಥೋತ್ಸವಂಗಳು
ಕರಿ ತುರಗ ವೃಷಭೇಶ ಗರುಡ ಪ್ರಭೃತಿಯಾನಗಳು ।
ಮೆರೆವ ಛತ್ರವು ಚಾಮರಂಗಳು । ಕರದಿ ಪಿಡಿಯುವ ದೀವಟಿಗೆ ಭೂ –
ಸುರರು ಪಠಿಸುವ ಪುಸ್ತಕವು ತಾ ಶಿಲ್ಪಲಾವಣ್ಯಂ ॥ ೬೦ ॥

ಶ್ರೌತವಿಧಿಯಿಂ ಹೋಮಗೈಯ್ಯುವ । ಧೌತಚತುರಶ್ರಾರ್ಧ ಚಂದ್ರಾ–
ಕೃತಿಯ ವರ್ತುಲಕೋಣ ಷಟ್ಕ ತ್ರಿಕೋಣ ಕುಂಡಗಳು ।
ಖ್ಯಾತ ಧನುರಾಕಾರ ಪದ್ಮವಿ । ಧಾತೃ ಗರುಡಾಕಾರವಷ್ಟಕ –
ಲಾತಿಶಯ ಮೇಖಲೆಯ ಕುಂಡಗಳೆಲ್ಲ ಶಿಲ್ಪಮಯಂ ॥ ೬೧ ॥

ಚಮಸ ದರ್ವಿ ಪೂರ್ಣಪಾತ್ರೆಯು । ವಿಮಲ ಪ್ರೋಕ್ಷಣಪಾತ್ರೆ ವಲ್ಕಲ
ಸಮುಚಿತಾಜ್ಯಸ್ಥಾಲಿ ಮುಸಲ ವುಲೂಖಲಾದಿಗಳು ।
ಸಮಯ ಶಸ್ತ್ರ ಚಷಾಲ ಶೃಂಗವು । ಪ್ರಮುಖಪಾತ್ರ ವಿಶೇಷಲಾವಿನಿ
ಕ್ರಮುಕ ಯೂಪಸ್ತಂಭವೆಲ್ಲವು ಯಜ್ಞಶಿಲ್ಪಗಳು ॥ ೬೨ ॥

ಭೂಸುರಾದಿಸಮಸ್ತರೆಲ್ಲರು । ದಾಸರಾಗಿ ನಮೋನುವಾಕದಿ
ತೋಷದಿಂ ಶಿವಪೂಜೆಗೈಯ್ಯುವ ಪರಿಕರಂ ಶಿಲ್ಪಂ ।
ವಾಸುದೇವನ ಮೂಲಮೂರ್ತಿಯು । ಭಾಸುರಾಂಗದಿ ಮೆರೆಯುತಿಹ ಕೈ
ಲಾಸಪತಿ ಮೊದಲಾದ ದೇವರು ಶಿಲ್ಪನಿರ್ಮಾಣಂ ॥ ೬೩ ॥

ಶಿಲ್ಪಿಮುಖದಿಂ ದೇವಧಾಮವ । ಕಲ್ಪಿಸುತ ಮೇಲಾಗಿ ಜನತೆಗೆ
ಕಲ್ಪಸುಖಜೀವನವನರ್ಚಕರಿಂಗೆ ನೆಲ್ಮೆಯೊಳು ।
ಕಲ್ಪವಲ್ಲರಿಯಂದದಿಂ ಸಂ । ಕಲ್ಪಗೈದಿಷ್ಟಾರ್ಥವೆಲ್ಲವ
ಶಿಲ್ಪವದು ತಾನಿತ್ತು ರಕ್ಷಿಸುತಿಹುದು ಲೋಕವನು ॥ ೬೪ ॥

ಲಿಂಗ ಕಾಲಾಮುಖರು ಪೂಜಿಪ । ಲಿಂಗ ಶೈವರ ಪಾಶುಪತಮತ
ಲಿಂಗ ಶಾಕ್ತ ಸ್ಮಾರ್ತ ಭೈರವಲಿಂಗದಾಕೃತಿಯು ।
ಜಂಗಮರು ಧರಿಸಿರ್ಪ ಲಿಂಗವು । ಸಂಗಮದಿ ಕಂಗೊಳಿಪ ಸ್ಥಾವರ
ಲಿಂಗವೆಲ್ಲವು ಶಿಲ್ಪಗಳ ಕೈವಾಡವಾಗಿಹವು ॥ ೬೫ ॥

ಎಲ್ಲ ದೇವರ ಪೂಜೆ ಶಿಲ್ಪವಿ । ದೆಲ್ಲರೂ ಧ್ಯಾನಿಪುದು ಶಿಲ್ಪವು
ಕಲ್ಲು ಮರ ಮಣ್ ವಿಗ್ರಹಂಗಳು ಶಿಲ್ಪವಾಗಿಹವು ।
ಬಿಲ್ಲು ಬಾಣಗಳೆಲ್ಲ ಶಿಲ್ಪವು । ಹುಲ್ಲಿನಾ ಬಣವೆಗಳು ಶಿಲ್ಪವು
ಭಲ್ಲೆಗಳ್ ಭರ್ಜಿಗಳು ಬಂಡಿಗಳೆಲ್ಲ ಶಿಲ್ಪಮಯ ॥ ೬೬ ॥

ಧ್ಯಾನದೊಳು ಕಲ್ಪಿಸುವ ದೇವರ । ಭಾನುತೇಜಃಕಾಯವದು ಕಮ –
ಲಾನನವು ಬಾಹುಗಳು ಕರದೊಳಗಿರುವ ಚಿಹ್ನೆಗಳು ।
ಜಾನು ಕಟಿ ಪಾದಾಬ್ಜವೆಂಬಭಿ । ಧಾನ ವಿಶ್ರುತ ಭೂಷಣದ ಸಂ
ಧಾನದಿಂ ಜಾನಿಪುದದೆಲ್ಲವು ಶಿಲ್ಪದಾಕೃತಿಯು ॥ ೬೭ ॥

ಜ್ಞಾನಸಾಧನವೆಲ್ಲ ಶಿಲ್ಪವು । ಧ್ಯಾನಸಾಧನವೆಲ್ಲ ಶಿಲ್ಪವು
ದಾನಸಾಧನವೆಲ್ಲ ಶಿಲ್ಪವು ಸ್ವರ್ಗಸಾಧನವು ।
ಗಾನಸಾಧನ ಯಾನಸಾಧನ । ಮಾನಸಾಧನ ಪಾನಸಾಧನ
ಸ್ನಾನಸಾಧನ ಸವನಸಾಧನವೆಲ್ಲ ಶಿಲ್ಪಮಯಂ ॥ ೬೮ ॥

ಆಸನವು ಸಿಂಹಾಸನವು ಭ । ದ್ರಾಸನವು ವೀರಾಸನವು ವಿಮ –
ಲಾಸನವು ವಿಜಯಾಸನವಿವೆಲ್ಲವು ಶಿಲ್ಪನಿರ್ಮಿತವು ।
ವಾಸವನ ಘನತರ ವಜ್ರಮಯ । ದಾಸನವು ಯೋಗಾಸನ ಭ್ರಮ
ರಾಸನವು ಹಂಸಾಸನಂಗಳು ಶಿಲ್ಪ ಚಾತುರ್ಯಂ ॥ ೬೯ ॥

ಆಸನವು ನಿತ್ಯೋತ್ಸವಾದಿಗ । ಳಾಸನವು ಸಾಮಾನ್ಯನಾಮಗ
ಳಾಸನವು ನೈಮಿತ್ತಿಕೋತ್ಸವದಾಸನಾದಿಗಳು ।
ಭಾವಿಸುವ ನವರತ್ನಮಯ ಕನ । ಕಾಸನವು ಚಿತ್ರಾಸನವು ಜಪ
ದಸನವು ವೇತ್ರಾಸನ ಕುಶಾಸನವೆಲ್ಲ ಶಿಲ್ಪಮಯಂ ॥ ೭೦ ॥

ಪಾತ್ರೆ ಪಾದ್ಯದ ಪಾತ್ರೆ ಮಜ್ಜನ । ಪಾತ್ರೆಯರ್ಘ್ಯದ ಪಾತ್ರೆ ಸವನದ
ಪಾತ್ರೆ ಯಾಚಮನೀಯ ಪಾತ್ರೆಯು ಪಂಚಪಾತ್ರೆಯದು ।
ಪಾತ್ರೆ ಧೂಪದ ಪಾತ್ರೆ ದೀಪದ ಪಾತ್ರೆ ನೈವೇದ್ಯವನುಗೈಯ್ಯುವ
ಪಾತ್ರೆ ಷೋಡಶಪೂಜೆಗೈವಿವು ಶಿಲ್ಪನಿರ್ಮಿತವು ॥ ೭೧ ॥

ಆರತಿಯ ಪ್ರಜ್ವಲಿಪ ಮೌಕ್ತಿಕ । ದಾರತಿಯ ಸುರುಚಿರ ರತ್ನಮಯ
ದಾರತಿಯ ಚಿತ್ರಗಳ ಸೊಬಗಿನ ಚಿನ್ನದಾರತಿಯ ।
ಮೇರು ಚಕ್ರದ ರೂಪದಾರತಿ । ಸಾರಘೃತಶತವರ್ತಿ ಶತಮುಖ
ದಾರತಿಯ ರೂಪದಿ ಭುವನದೊಳು ಕಂಗೊಳಿಸಿತಾ ಶಿಲ್ಪಂ ॥ ೭೨ ॥

ವ್ಯಜನ ದರ್ಪಣ ವರಕಮಂಡಲು । ವಿಜಯಘಂಟೆಯು ವೀರಘಂಟೆಯು
ಧ್ವಜವು ವರಪರ್ಯಂಕ ಫೇರಣಿ ಪಂಚವಾಹನವು ।
ರಜತಮಯ ತರ್ಜನಿ ಕರಂಡವು । ಯಜನಪೀಠವು ಕರದ ವೇತ್ರವು
ಭುಜಗವಲಯ ಪವಿತ್ರಮುದ್ರಿಕೆ ಶಿಲ್ಪನಿರ್ಮಾಣಂ ॥ ೭೩ ॥

ಶಿರದ ಶೋಭಿಪ ಪಾರ್ಶ್ವಪೂರಿತ । ವರಜಟಾಮಕುಟವು ಶಿರಸ್ತ್ರಕ
ತರಣಿ ಶಶಿಯುತ ರತ್ನಪೂರಿತ ವೇದಪೂರಿತವು ।
ಹರಿ ಮಕರ ವರಕೀತಿಮುಖಮಯ । ಮರಕತದ ಶೀರ್ಷಕ ಕರಂಡವು
ಅರಿಯೆ ಮಕುಟವಿದೆಲ್ಲ ಶಿಲ್ಪದ ಪರಮ ಸಂಪದವು ॥ ೭೪ ॥

ಮಿರುಪ ರತ್ನ ಸಮಗ್ರಪಟ್ಟವು । ಕರದ ಕಂಕಣ ಮುದ್ರಿಕೆ
ಮೆರೆವ ಚೂಡಕವಲಕ ಕುಂತಲವಳಿಕಮಂಡನವು ।
ಉರದ ಸೂತ್ರವು ಚನ್ನವೀರವು । ಪರಮ ಗ್ರೈವೇಯಕವು ತರಲವು
ಚರಣಜಾಲಕಭೂಷಣಂಗಳು ಶಿಲ್ಪಸೌಂದರ್ಯಂ ॥ ೭೫ ॥

ಕುಂಡಲಂಗಳು ಮಕರ ಮತ್ಸ್ಯದ । ಕುಂಡಲಂ ನವರತ್ನರಂಜಿತ
ಕುಂಡಲಂ ರುದ್ರಾಕ್ಷಮಣಿಗಳ ಪತ್ರಪುಷ್ಪಗಳ ।
ಕುಂಡಲಂ ಭುಜಗೇಂದ್ರಹರಿಮುಖ । ಕುಂಡಲಂಗಳು ಸ್ವರ್ಣವರ್ಣದ
ಕುಂಡಲಂ ರವಿಚಂದ್ರಕಾಂತದ ಶಿಲ್ಪನಿರ್ಮಾಣಂ ॥ ೭೬ ॥

ಹಾರ ಮುಕ್ತಾಹಾರ ಮಣಿಮಯ । ಹಾರ ಮಕರದ ಕಂಠಿ ಹೀರಕ –
ಹಾರ ಹಂಸ ಮಯೂರ ಪದ್ಮಾಕೃತಿಯ ಹಾರಗಳು ।
ವೀರ ವಿಕರಮ ವಿಜಯ ವರ್ಧಕ । ಹಾರ ದೇವಚ್ಛಂದ ಲಂಬಿತ
ಹಾರ ವಿದ್ರುಮಹಾರ ಶಿಲ್ಪದ ಕಲೆಯ ಹಾರಗಳು

ಹಿರಿಯ ಹೃನ್ಮಾಲೆಯದು ಕೊರಳಿನ । ಕಿರಿಯ ಕಿಂಕಿಣಿಮಾಲಿಕೆಯು ವರ
ಕರದಿ ಶೋಭಿಸುವಕ್ಷಮಾಲೆಯು ಸ್ಕಂಧಮಾಲೆಗಳು ।
ಹರಿವದನಸಂಕಲಿತನಾನಾ – । ಪರಿಯ ಮಣಿಮಯ ಮಾಲೆಗಳು ಘನ
ತರದ ರುದ್ರಾಕ್ಷಾದಿ ಮಾಲೆಗಳೆಲ್ಲ ಶಿಲ್ಪಮಯಂ ॥ ೭೮ ॥

ಕನಕಮಯ ಯಜ್ಞೋಪವೀತವು । ಮಿನುಗುತಿಹ ಕಟಿರತ್ನದಾಮಗ
ಳನಘ ಮುಕ್ತಮಾಲೆ ಘಂಟಾ ಚಿತ್ರಮಾಲೆಗಳು ।
ವನಜಮಣಿಮಾಲೆಗಳು ನೂಪುರ । ವನಿತೆಯರ ಕಂಚುಕವು ಹಂಸಕ –
ವಿನಿತು ಭೂಷಣಭೇದವೆಲ್ಲವು ಶಿಲ್ಪದಾ ಸೊಬಗು ॥ ೭೯ ॥

ಮಾನವಾಲಂಕಾರ ಶಿಲ್ಪವು । ದಾನವಾಲಂಕಾರ ಶಿಲ್ಪವು
ದಾನವಾರಿಗಳನುಪಮಾಲಂಕಾರವದು ಶಿಲ್ಪಂ ।
ಮೀನಕೇತನ ರತಿಯಲಂಕೃತಿ । ಭಾನುಶಶಿಗಳಲಂಕೃತಿಯು ಬಳಿ
ಕೇನ ಪೇಳ್ವುದು ಸರ್ವರಲಂಕಾರಗಳು ಶಿಲ್ಪಂ ॥ ೮೦ ॥

ಭರತಶಾಸ್ತ್ರದೊಳಿರುವ ನಾಟ್ಯದ । ಕರದ ವಿನ್ಯಾಸಗಳು ನಟಿಯರ
ಸರಸನರ್ತನ ಬಾಹುನೇತ್ರಸ್ಪಂದನಾದಿಗಳು ।
ತರುಣಿಯರ ಸಿಂಗಾರ ಸೊಬಗಿನ । ಕಿರುನಗೆಯ ಸೌಂದರ್ಯಸಾರವು
ಸುರಿವ ಕರುಣಾರಸದ ಭಾವಗಳೆಲ್ಲ ಶಿಲ್ಪರಸಂ ॥ ೮೧ ॥

ಹಸ್ತವಾದಿಯ ಜಯಪತಾಕಾ । ಹಸ್ತ ವರ್ಧಪತಾಕೆ ಮತ್ತಂ
ಹಸ್ತ ವರತ್ರಿಪತಾಕೆ ಶಿಖರವು ಕರ್ತರೀಮುಖವು ।
ಹಸ್ತ ಕಟಕಾಮುಖಮಯೂರವು । ಹಸ್ತ ಹಂಸ ಕಪಿತ್ಥವಾಜ್ಞಾ
ಹಸ್ತ ಶಂಖವರಾಲಶುಕತುಂಡಾದಿಗಳು ಶಿಲ್ಪಂ ॥ ೮೨ ॥

ಮದನಹಸ್ತವು ಭ್ರಮರಹಸ್ತವು । ಪದ್ಮಹಸ್ತವು ಮುಷ್ಟಿಹಸ್ತವು
ಸದಯ ಸೂಚೀಮುಖದ ಕೇಸರಿಮುಖದಹಸ್ತಗಳು ।
ಮುದಿತ ಹಂಸಾಮುಖಾಖ್ಯಹಸ್ತವು ವಿದಿತ ಸಂದಂಶಾಖ್ಯಹಸ್ತವು
ಹೃದಯ ಮೃಗಶೀರ್ಷಕವಿವೆಲ್ಲವು ಶಿಲ್ಪಹಸ್ತಗಳು ॥ ೮೩ ॥

ನಲಿನಮುಖಿ ಶೃಂಗಾರರಸ ಕಡು । ಗಲಿಯ ಸೆಣಸಿನ ವೀರರಸ ಶಮ
ಕಲಿತ ಕರುಣಾರಸವದದ್ಭುತರಸವು ಮಾಧುರ್ಯಂ ।
ಲಲಿತ ಹಾಸ್ಯದ ರಸವು ತಾಮಸ । ಮಿಲಿತವಾದ ಭಯಾನಕಂ ಮಿಗೆ
ಮಲಿನಮಯಭೀಭತ್ಸ ರೌದ್ರವಿದೆಲ್ಲ ಶಿಲ್ಪರಸಂ ॥ ೮೪ ॥

ಕವಿಯು ಬಣ್ಣಿಪ ದೇಶಕೋಶದ । ವಿವರಗಳು ಸೌಂದರ್ಯ ಸಿಂಗರ
ಸವಿಯು ರಸಭಾವಂಗಳೆಲ್ಲವು ಶಿಲ್ಪದೃಶ್ಯವದು ।
ಭುವನಮೋಹಿನಿ ಚಂದ್ರಮುಖಿಯರ । ಕುವಲಯೋಪಮದಿವ್ಯಮುಖಗಳು
ದಿವಿಜಪತಿಯರಮನೆಯು ಶಿಲ್ಪವದಲ್ಲದಿನ್ನೇನು ? ॥ ೮೫ ॥

ನಾಟಕದ ರಂಗಗಳು ನಟಿಸುವ । ನಾಟ್ಯಕಾರರ ತೊಡವು ಚಿತ್ರದ
ಕೂಟಗಳು ಪಟಗಳೊಳು ರಂಜಿಪ ವನವಿಹಾರಗಳು ।
ನೋಟಕತಿರಮಣೀಯ ದೀಪಗ । ಳಾಟಕರ ವಿನ್ಯಾಸವಭಿನಯ
ಕೂಟಗಳು ಸರ್ವಾಂಗಸುಂದರ ಶಿಲ್ಪವಾಗಿಹವು ॥ ೮೬ ॥

ಮುರಜೆ ವೇಣು ವಿಪಂಜಿ ಮರ್ದಳ । ಸರಳ ವೀಣಾತುಂಬುರಂಗಳು
ಸರಸ ನಾದದ ಕಿನ್ನರಿಗಳಾ ಕ್ಷುದ್ರವೀಣೆಗಳು ।
ವಿರಳ ತಂತ್ರೀವಾದ್ಯಗಳು ಬಂ । ಧುರಶ್ರುತಿ ಸಾರಂಗಿ ಡಿಂಡಿಮ
ತರಣಿಶಶಿವಾದ್ಯಗಳು ಮಂಗಲಶಿಲ್ಪವಾದ್ಯಗಳು ॥ ೮೭ ॥

ಕರಡಿಕಂಸಾಳೆಗಳು ರೌಡೆಯು । ಹರೆಯು ಜಾಗಟೆ ಕಹಳೆ ಶೃಂಗವು
ಮೆರೆವ ನಾಗಸ್ವರವು ದುಂದುಭಿ ಡೋಲು ನಿಸ್ಸಾಳಂ ।
ಭರದಿ ನುಡಿವ ನಗಾರಿ ಭೇರಿಯು । ಪರಮವೀರಣ ಝುರ್ಝುರಿಕವೀ
ಪರಿಯ ನಾನಾವಾದ್ಯವಿಭವದಿ ಮೆರೆವುದಾಶಿಲ್ಪಂ ॥ ೮೮ ॥

ಮಾನಗಳು ಪರಮಾಣು ರೇಣುವು । ಮಾನಗಳು ವಾಲಾಗ್ರ ಲವಗಳು
ಮಾನ ಲೀಕ್ಷಾ ಯೂಕ ಯವವಂಗುಲವು ಮಾನಗಳು ।
ಮಾನಗಳು ಧನು ದಂಡ ಕ್ರೋಶವು । ಮಾನಗಳು ಗವ್ಯೂಹ ಯೋಜನ
ಮಾನದಿಂದೀ ಲೋಕವೆಲ್ಲವು ಶಿಲ್ಪ ಪರಿಮಾಣಂ ॥ ೮೯ ॥

ವರಧನುರ್ಗ್ರಹ ದ್ವಿಜರ ಮಾನವು । ನರಪಮಾನವು ಧನುರ್ಮುಷ್ಟಿಯು
ಪರಮವೈಶ್ಯರ ಮಾನ ಪ್ರಾಜಾತ್ಯವದು ಮತ್ತಂ ।
ಚರಣಜಾತರ ಮಾನ ಕಿಷ್ಕುವು । ಪರಿಪರಿಯ ಮಾನದಲಿ ಬೆಳಗುವ
ವರಿಯೆ ಮಾನವ ದೇವಮಾನಗಳೆಂದು ಶಿಲ್ಪದಲಿ ॥ ೯೦ ॥

ಆಯುವರ್ಗಂಗಳು ಧ್ವಜಾಭಿಧ । ಪಾಯವದು ಧೂಮಾಯ ಜಯಸಿಂ –
ಹಾಯ ನೆರೆ ಶ್ವಾನಾಯವೆಂಬುವ ನೇಮವನುಸರಿಸಿ ।
ಆಯ ವೃಷಭಾಯವದು ಖರವೆಂ । ಬಾಯ ಬಳಿಕ ಗಜಾಯವಂತ್ಯದ
ವಾಯಸಾಯವಿದಾಯದಷ್ಟಕ ವಾಸ್ತುಶಿಲ್ಪವದು ॥ ೯೧ ॥

ಮತ್ತಮಾ ತೂಕದೊಳಗಡ್ಡವು । ಪತ್ತು ಪಣ ಗದ್ಯಾಣ ಕರ್ಷಗ
ಳುತ್ತಮದ ಹಲ ಬೆಸಿಗೆ ತೊಲೆ ಭಾರಂಗಳ ಚಿತವದು ।
ಮುತ್ತಿಗಂಚೌ ಕಣಜಪವಳಕೆ । ಮತ್ತೆ ವಜ್ರಕೆ ಮಂಜಾಡಿ ಘನ
ವೆತ್ತ ಪಚ್ಚೆಗೆ ರತಿಯು ರತ್ನದ ತೂಕವದು ಶಿಲ್ಪಂ ॥ ೯೨ ॥

ಅಳೆವ ಸೊಲಿಗೆ ನಿಕುಂಜವದು ಮಾ । ರಳೆವ ಕುಡುಬ ಪ್ರಸ್ಥವೆರಡರ
ತಳಿಕೆ ವಾಹಗಳೆಂಬ ಪೆಸರಿನ ಮಾನಗಳು ಮತ್ತಂ ।
ಇಳೆಯೊಳಾಢಕವಾಗುತದರಿಂ । ಬಳಿಯ ದ್ರೋಣವು ವಿವಿಧ ಧಾನ್ಯವ
ನಳವಡಿಸುತಿಹ ಖಾರೀಪವೆಲ್ಲವು ಶಿಲ್ಪದಳತೆಗಳು ॥ ೯೩ ॥

ಶಿವನ ಪಾಶುಪತಾಸ್ತ್ರವದು ಕೇ । ಶವನ ಘನ ನಾರಾಯಣಾಸ್ತ್ರವು
ಕುವಲಯದೊಳುದ್ಭವನ ವರಬ್ರಹ್ಮಾಸ್ತ್ರವದು ಬಳಿಕ ।
ದಿವಿಜವರನಿಂದ್ರಾಸ್ತ್ರ ಮತ್ತಂ । ಪವನಮಿತ್ರನ ವಹ್ನಿಯಸ್ತ್ರವು
ಜವನ ನಿರ್ಋತಿ ವಾಯು ಕುಬೇರರಸ್ತ್ರಗಳು ಶಿಲ್ಪಂ ॥ ೯೪ ॥

ಮುಸಲ ಮುದ್ಗರ ಭಿಂಡಿವಾಲವು । ಮಸೆದ ಖಡ್ಗವು ಖೇಟ ತೋಮರ
ವಸಮ ಪರಿಘ ಪ್ರಾಸ ಪರಶುವು ಶೂಲ ಬಾಣಗಳು ।
ಮಿಸುಪ ಚಕ್ರ ಶತಘ್ನಿ ಪಾಶಗ । ಳೆಸೆವ ಚಂದ್ರಾಯುಧ ಗದಾಂಕುಶ
ವಿಸರ ಖಟ್ವಾಂಗವು ಪಿನಾಕವು ಶಿಲ್ಪದಸ್ತ್ರಗಳು ॥ ೯೫ ॥

ಉಳುವ ನೇಗಿಲು ನೊಗವು ಮೇಳೆಯು । ಬಳಿಕ ಹಲುಬೆಯು ಕುಂಟೆ ಕೂರಿಗೆ
ಕಳೆಯ ಕೀಳುವ ಕೊಟ್ಟು ಗುಜ್ಜಾರಿಗಳು ಕುಡುಗೋಲು ।
ತಳಿಕೆ ಹಾಕುವ ಮೇಟಿಕಂಭವು ಗುಳಿಯ ತೋಡುವ ಗುದ್ದಲಿಗಳಾ
ಗುಳವು ಬೇಸಾಯಗಳ ಮುಟ್ಟುಗಳೆಲ್ಲ ಶೀಲ್ಪಕೃತಂ ॥ ೯೬ ॥

ತಂತುವಾಯನ ಮಗ್ಗ ತಾನಗ । ಳಂತರದೊಳಾಡುವ ಲಳಿಗೆಗಳು
ಸಂತತವು ನೂಲುತಿಹ ರಾಟೆಯು ಮರದ ಚಕ್ರಗಳು ।
ಅಂತರಾಳದ ನೇಯ್ಗೆ ಕದರಿನ । ತಂತುವಿನ್ಯಾಸಗಳು ಚಿತ್ರಗ
ಳಾಂತ ವಸ್ತ್ರಾದಿಗಳ ರಚನೆಯು ಶಿಲ್ಪಕಲೆಯಹುದು ॥ ೯೭ ॥

ಪಾವನಾಯುರ್ವೇದವೌಷಧ ಭಾವನಾಸಾಧನವು ಶಿಲ್ಪವು
ಸಂವಿಪೇಷಣ ಭರಣ ಸಾಧನ ತುಲನಸಾದನವು ।
ಪಾವಕದಿ ಸಂಸ್ಕರಿಪ ಸಾಧನ ನೋವನೀಗುವ ಯಂತ್ರಸಾಧನ
ಕಾವಿನಿಂ ಗುಣಮಾಳ್ಪ ವಿದ್ಯುದ್ಯಂತ್ರಗಳು ಶಿಲ್ಪಂ ॥ ೯೮ ॥

ಆ ಕುಲಾಲನ ಚಕ್ರದಂಡಗ । ಳಾ ಕಪಾಲವು ಕರಣಿಘಟಗಳು
ಪಾಕಗೈಯ್ಯುವ ವಿವಿಧ ಮೃಣ್ಮಯ ಪಾತ್ರಸಂಕುಲವು ।
ಶಾಕಮಾಕ್ಷಿಕಲೇಹ್ಯ ಚೋಹ್ಯಾ । ನೇಕ ವಸ್ತುಗಳಿಡುವ ಬಹುವಿಧ
ಲೋಕವಿಶ್ರುತ ಪಾತ್ರವೃಂದವು ಶಿಲ್ಪನಿರ್ಮಿತವು ॥ ೯೯ ॥

ಜಲವನೆತ್ತುವ ಯಂತ್ರ ಶಿಲ್ಪವು । ಜಲವನೊತ್ತುವ ಯಂತ್ರ ಶಿಲ್ಪವು
ಜಲವ ಪುಟಿಸುವ ತರತರದ ಕಾರಂಜಿಗಳು ಶಿಲ್ಪಂ ।
ಜಲವ ಕಾಸುವ ಯಂತ್ರ ಶಿಲ್ಪವು । ಜಲವ ಸೋಸುವ ಯಂತ್ರ ಶಿಲ್ಪವು
ಜಲವ ಶಿಲೆಯನು ಮಾಳ್ಪ ವಿದ್ಯುದ್ಯಂತ್ರವದು ಶಿಲ್ಪಂ ॥ ೧೦೦ ॥

ಸರ್ವಶ್ರುತಿಗಳ ಸಾರವಿದು ಮೇಣ್ । ಸರ್ವಶಿಲ್ಪಾಗಮರಹಸ್ಯವು
ಸರ್ವವಿಶ್ವಖ್ಯಾತವಸ್ತುಗಳಂತರಂಗವಿದು ।
ಸರ್ವವಿದ್ಯಾಮೂಲಕಾರಣ । ಸರ್ವಶಿಲ್ಪಕಲಾನಿಕೇತನ
ಸರ್ವಮಾನವ ದೇವಶಿಲ್ಪದ ದಿವ್ಯಸಾರವಿದು ॥ ೧೦೧ ॥

ಜೀವನುನ್ನತಿಗಾಗಿ ನಿರ್ಮಲ । ಭಾವದಿಂ ಕೃತಿಗೈವ ಶಿಲ್ಪಿಗ
ಳಾವಮತಜಾತಿಗಳ ಬಗೆಯದೆ ಮೈತ್ರಿಯಲಿ ನಿಂದು ।
ಭಾವಪೂರ್ಣತೆಯಿಂದ ಬೆಳಗುವ । ದೇವಮೂರ್ತಿಗಳನ್ನು ರಚಿಸುತ
ದೇವರಂದದಿ ಭುವನಜನತೆಯ ತೃಷೆಯ ನೀಗುತಿಹರ್ ॥ ೧೦೨ ॥

ವೇದತತಿನುತ ವಿಶ್ವವಿದಿತಾ । ನಾದಿ ಪ್ರತ್ನಸಗೋತ್ರಜನು ಗುರು
ವಾದ ಕಾತ್ಯಾಯನರ ಸೂತ್ರಾನ್ವಿತನು ವಿಶ್ರುತನು ।
ಶ್ರೀದತತ್ಪುರುಷಪ್ರವರಘನ । ವಾದಥರ್ವಣ ಶಾಖೆಯನು ತಾ
ನೋದುತಿರ್ದ ವಿರಕ್ತನಾಮಕ ಶೈವಶಿಲ್ಪಿವರಂ ॥ ೧೦೩ ॥

ಈತ ಶಿಲ್ಪವಿಶಾರದಂ ಬುಧ । ನಾಥ ನಿಗಮಾಗಮಮತಜ್ಞಂ
ಪೂತಮಂತ್ರರಹಸ್ಯಮೂರ್ತಿ ವಿವೇಕಸಚ್ಚರಿತಂ ।
ಖ್ಯಾತ ಸಪ್ತರಥ ಪ್ರತಿಷ್ಠೆಯ । ನೋತುಗೈದವನೀತನನ್ವಯ
ಜಾತ ಶಿವಪದಪದ್ಮಭೃಂಗಂ ಸಿದ್ಧಪಾದಾಖ್ಯಂ ॥ ೧೦೪ ॥

ಈ ಮಹಿಮನರ್ಧಾಂಗಿ ಸಾತ್ವಿಕೆ । ನೇಮದಿಂ ಸಂತತವು ಶ್ರೀಗುರು
ನಾಮವಂ ಪಠಿಸುತ್ತ ಸೇವೆಯೊಳಿರ್ದ ಸಾಧಕಳು ।
ಧೀಮತಿ ಶ್ರೀಮಲ್ಲಮಾಂಬೆಯ ಪ್ರೇಮಗರ್ಭದೊಳುದಿಸಿ ಶಿಲ್ಪಿಯ
ನಾಮವಾಂತಿಹ ಸಿದ್ಧಲಿಂಗಸ್ವಾಮಿ ಶಿವಯೋಗಿ ॥ ೧೦೫ ॥

ಪರಶಿವಾರಾಧಕನು ನಿತ್ಯದಿ । ಗುರುಚರಣಪಂಕೇಜ ಭೃಂಗನು
ಪರಮಸಾತ್ವಿಕ ಸಿದ್ಧಲಿಂಗಯತೀಂದ್ರನಾದರದಿ ।
ಒರೆದ ಪರತರ ಶಿಲ್ಪಸಾರವ । ನರಿತು ಗಮಕದೊಳೋದಿ ಕೇಳುವ
ಹಿರಿಯಕಿರಿಯರಿಗೆಲ್ಲ ಶಿವತನವಹುದು ಸತ್ಯವಿದು ॥ ೧೦೬ ॥

ಸರಸಮಾದೀ ಶಿಲ್ಪಸಾರವ । ಸ್ಮರಿಸಿ ಮನದೊಳು ಮನನಗೈಯ್ಯುವ
ಬರೆದು ಪ್ರತಿಯಂ ಪ್ರಚುರಗೊಳಿಸುವ ಸಾಧುಸುಜನರ್ಗೆ ।
ಪರಶಿವನು ತಾನೊಲಿದು ವಿಶ್ವದೊ । ಳಿರುವ ಸ್ಥಿರಚರ ರೂಪವಸ್ತುಗ
ಳರಿವ ದಿವ್ಯ ಜ್ಞಾನ ಮುಕುತಿಯನೀವನಿದು ಸತ್ಯಂ ॥ ೧೦೭ ॥

ಪರಮಪಾವನ ಶಾಲಿವಾಹನ । ವರಶಕದ ಶಶಿಶೈಲವಸುಶಶಿ –
ಪರಿಮಿತಿಯ ಶ್ರೀಸರ್ವಧಾರಿಯ ಚೈತ್ರಶುಕ್ಲದೊಳು ।
ಪರಶಿವನ ತಿಥಿ ಶುಭಸೌಮ್ಯವಾ । ಸರದಿನದಿ ಪರಿಪೂರ್ಣಮಾದುದು
ಗುರುಚರಣಕೃಪೆಯಿಂದ ವಿಶ್ವದಿ ಬೆಳಗಲೀ ಕೃತಿಯು ॥ ೧೦೮ ॥

॥ ಶ್ರೀ ಶಿಲ್ಪಸಾರವು ಸಮಾಪ್ತಮಾದುದು ॥ ಶ್ರೀ ಗುರು ಚರಣಾರ್ಪಣಮಸ್ತು ॥



ಚಿತ್ರ : ಅನುಬಂಧ–೧.೨ : ಸ್ವಾಮಿಗಳು ಚಿತ್ರಿಸಿರುವ ಶಿಲ್ಪಾದರ್ಶ ಮೂರ್ತಿ

ಶಿಲ್ಪಶಾಸ್ತ್ರಗಳಲ್ಲಿ ಹೇಳಿರುವ ಸ್ಥಪತಿ ಲಕ್ಷಣ

ಯಾವುದೇ ವಾಸ್ತು ನಿರ್ಮಾಣದ ಸಂದರ್ಭದಲ್ಲಿ ಶಾಸ್ತ್ರೀಯ ಕ್ರಮವುಂಟು. ಮೊದಲಿಗೆ ಯಜಮಾನನಿಂದ ಸ್ಥಪತಿ ವರಣವು ನಡೆಯುತ್ತದೆ. ನಂತರದಲ್ಲಿ ಸ್ಥಪತಿಯ ನಿರ್ದೇಶನದಲ್ಲಿ ಯಜಮಾನನಿಂದ ಸಂಕಲ್ಪ ಮಾಡಿಸಿ ಫಲಸಿದ್ಧಿಯಾಗುವಂತೆ ವಾಸ್ತುನಿರ್ಮಾಣದ ಯಶಸ್ಸಿಗೆ ಕಾರಣನಾಗುವವನು ಸ್ಥಪತಿ. ಈ ರೀತಿಯ ಸ್ಥಪತಿಯ ಗುಣಧರ್ಮಗಳನ್ನು ಎಲ್ಲಾ ಶಿಲ್ಪಶಾಸ್ತ್ರಗಳು, ಆಗಮಶಾಸ್ತ್ರಗಳು ವಿವರವಾಗಿಯೋ ಸಂಕ್ಷೇಪವಾಗಿಯೋ ಹೇಳಿವೆ. ಮಾನಸಾರ (೨:೧–೨೦)ದಲ್ಲಿ ಈ ವಿಷಯವನ್ನು ವಿವರಿಸಲಾಗಿದೆ.[೧] ಅದರ ತಾತ್ಪರ್ಯವು ಇಂತಿದೆ :

ಶಿಲ್ಪಿಯ ಲಕ್ಷಣವನ್ನು ವಿವರಿಸಲಾಗುತ್ತದೆ. ಪರಶಿವನಿಂದ ಬ್ರಹ್ಮನು ಮತ್ತು ಇಂದ್ರ ಆವಿರ್ಭವಿಸಿದರು. ಪರಶಿವನು ತಾನೇ ಸೃಷ್ಟಿಕರ್ತನೆಂದು, ಸರ್ವ ಲೋಕಗಳ ಒಡೆಯನೆಂದು ಹೇಳಿದ. ಆತನೇ ವಿಶ್ವವನ್ನು ಸೃಷ್ಟಿ ಮಾಡಿದ. ಆದ್ದರಿಂದ ಆತನು ವಿಶ್ವಕರ್ಮನೆಂದು ಕರೆಯಲ್ಪಟ್ಟ. ವಿಶ್ವಕರ್ಮನಿಗೆ ನಾಲ್ಕು ಮುಖಗಳು. ನಾಲ್ಕೂ ಮುಖಗಳಿಗೂ ಬೇರೆ ಬೇರೆಯ ಹೆಸರುಗಳುಂಟು. ಪೂರ್ವದಿಕ್ಕಿಗೆ ಎದುರಾಗಿರುವ ಮುಖದ ಹೆಸರು **ವಿಶ್ವಭೂಃ** (ವಿಶ್ವವನ್ನು ಅನುಭವಿಸುವವನು) ದಕ್ಷಿಣಾಭಿಮುಖವಾಗಿರುವ ಮುಖದ ಹೆಸರು **ವಿಶ್ವವಿತ್** (ವಿಶ್ವವನ್ನು ಬಲ್ಲವನು). ಪಶ್ಚಿಮಾಭಿ ಮುಖವಾಗಿರುವ ಮುಖದ ಹೆಸರು **ವಿಶ್ವಸ್ರಷ್ಟಾ** (ವಿಶ್ವದ ಸೃಷ್ಟಿಕರ್ತನು). ಉತ್ತಾರಾಭಿ

---

೧. ಶಿಲ್ಪಿನಾಂ ಲಕ್ಷಣಂ ವಕ್ಷೇ ಮಾನೋಪಕಣಂ ಕ್ರಮಾತ್।
ಪರಃ ಶಿವಸಕಾಶಾದ್ಧಿ ಬ್ರಹ್ಮ ಇಂದ್ರೋಽಪಿ ಲೋಕಕೃತ್॥
ಸ ಮಹಾ ವಿಶ್ವಕರ್ಮೇತಿ ಈಶ್ವರೇಣೈವ ಕೀರ್ತಿತಃ।
ಸ ಏವಾಯಂ ವಿಶ್ವಕರ್ಮಾ ಬ್ರಹ್ಮಾಡಂ ಸೃಜತೇ ಮುಹುಃ॥
ವಿಶ್ವಕರ್ಮಾ ಚತುರ್ವಕ್ತ್ರಾ ಬ್ರಹ್ಮಾದಿ ವಕ್ತ್ರವತ್।
ಪೂರ್ವವಕ್ತ್ರಾದೀನಿ ಚತ್ವಾರಿ ನಾಮಾನಿ ವಕ್ಷ್ಯೇ ಪೃಥಕ್॥
ವಿಶ್ವಭೂರಿತಿ ನಾಮ್ನೈತತ್ಪೂರ್ವ ವಕ್ತ್ರಂ ಪ್ರಕೀರ್ತಿತಮ್।
ದಕ್ಷಿಣೇ ವಿಶ್ವವಿದ್ವಕ್ತ್ರಂ ವಿಶ್ವಸ್ಥಶ್ಚ ತಥೋತ್ತರೇ॥
ಪಶ್ಚಿಮೇ ವಿಶ್ವಸ್ರಷ್ಟಾಖ್ಯಂ ವಕ್ತ್ರಮೇವಂ ಚತುಷ್ಟಯಃ।
ಏತೇಭ್ಯಃ ಪ್ರಥಮೋ ಜಾತೋ ವಿಶ್ವಕರ್ಮಾ ಚತುಷ್ಟಯಃ॥
ಪೂರ್ವಾನನೇ ವಿಶ್ವಕರ್ಮಾ ಜಾಯತೇ ದಕ್ಷಿಣೇ ಮಯಃ।
ಉತ್ತರಸ್ಯ ಮುಖೇ ತ್ವಷ್ಟಾ ಪಶ್ಚಿಮೇ ಮನುಃ ಸ್ಮೃತಃ॥
ಉಪಯೇಮೇ ವಿಶ್ವಕರ್ಮಾ ಇಂದ್ರಸ್ಯ ತನಯಾಂ ತದಾ।
ಮಯಃ ಸುರೇಂದ್ರ ತನಯಾಮುಪಯೇಮೇ ಕ್ರಮಾತ್ತತಃ॥

ತ್ವಷ್ಟಾ ವೈಶ್ರವಣಸುತಾಮುಪಯೇಮೇ ತ್ವನಂತರಮ್।
ಮನುರ್ನಲಸ್ಯ ತನಯಾಮುಪಯೇಮೇ ತು ತುರ್ಯಕಮ್॥
ವಿಶ್ವಕರ್ಮಾಖ್ಯಾನಾಮ್ನೋಽಸ್ಯ ಪುತ್ರಃ ಸ್ಥಪತಿರುಚ್ಯತೇ।
ಮಯಸ್ಯ ತನಯಃ ಸೂತ್ರಗ್ರಾಹೀತಿ ಪರಿಕೀರ್ತಿತಃ॥
ತ್ವಷ್ಟಾರ್ದೇವ ಋಷೇಃ ಪುತ್ರೋ ವರ್ಧಕೀತಿ ಪ್ರಕಥ್ಯತೇ।
ಮನೋಃ ಪುತ್ರಸ್ತಕ್ಷಕಃ ಸ್ಯಾತ್ ಸ್ಥಾಪತ್ಯಾದಿ ಚತುಷ್ಟಯೇ॥
ಸ್ಥಪತಿಸ್ತು ಸ್ವತುರ್ಯೇಭ್ಯಸ್ತ್ರಿಭ್ಯೋ ಗುರುರಿತಿ ಸ್ಮೃತಃ।
ಸೂತ್ರಗ್ರಾಹೀ ಗುರುರ್ದ್ವಾಭ್ಯಾಂ ತುರ್ಯೋಭ್ಯೋಽಟದ್ಯ ಇತಿ ಸ್ಮೃತಃ॥
ತಕ್ಷಕಸ್ಯ ಗುರುರ್ದ್ವಾಭ್ಯಾಂ ವರ್ಧಕಿರಿತಿ ಪ್ರಕೀರ್ತಿತಃ।
ಸ್ಥಪತಿಃ ಸರ್ವಶಾಸ್ತ್ರಜ್ಞಃ ತಕ್ಷಣಾತ್ ತಕ್ಷಕಃ ಸ್ಮೃತಃ।
ಸ್ಥಪತಿಃ ಸ್ಥಾಪನಾಯಾರ್ಹಃ ವೇದವಿಚ್ಛಾಸ್ತ್ರಪಾರಗಃ॥
ಸ್ಥಾಪನಾಧಿಪತಿರ್ಯಸ್ಮಾತ್ತಸ್ಮಸ್ಥಪತಿರುಚ್ಯತೇ ।
ಸ್ಥಾಪತೇಶ್ಚಾಜ್ಞಯಾ ಸರ್ವೇ ಸೂತ್ರಗ್ರಾಹ್ಯಾದಯಃ ಸದಾ।
ಕುರ್ವಂತಿ ಶಾಸ್ತ್ರಾದಿಶೇನ ವಾಸ್ತುವಸ್ತು ಪ್ರಯತ್ನತಃ।
ಸ್ಥಪತ್ಯಾದಿ ಚತುರ್ವರ್ಗಃ ಶಿಲ್ಪಭೀ ಪರಿಕೀರ್ತಿತಃ॥
ಆಚಾರ್ಯಲಕ್ಷಣೈರ್ಯುಕ್ತಃ ಸ್ಥಪತಿರ್ನಾಮ ಧೀಯತೇ।
ಶ್ರುತಜ್ಞಃ ಸೂತ್ರಗ್ರಾಹೀ ಚ ರೇಖಾಜ್ಞಃ ಶಾಸ್ತ್ರವಿತ್ತಮಃ॥
ವಿಚಾರಜ್ಞಃ ಶ್ರುಜ್ಞಶ್ಚ ಚಿತ್ರಕರ್ಮಜ್ಞೋ ವರ್ಧಕಿಃ॥
ತಕ್ಷಕಃ ಕರ್ಮವಿತ್ಸಭ್ಯೀ ಬಲಬಂಧುದಯಾಪರಃ॥
ಶ್ರುತಿಶಾಸ್ತ್ರಂ ಪ್ರಕರ್ತವ್ಯಂ ಸರ್ವ ಲಕ್ಷಣ ಮುಚ್ಯತೇ।
ಇಹೈವ ಲೋಕಸ್ಯ ಕೃತಂ ಶಿಲ್ಪನಾ ವಿನಾ ಗುರುಮ್॥
ನ ಲಭ್ಯತೇ ತು ಯತ್ತಸ್ಮಾದೇಭ್ಯಃ ಸಹೈವ ಕಾರಯೇತ್।
ವಿನಾ ಕೃತೇ ತು ಸಫಲಂ ಭಕ್ತಿಂ ಮುಕ್ತಿಂ ನ ವಿಂದತಿ॥
ಶಿಲ್ಪಿನಾಂ ಲಕ್ಷಣಂ ಪ್ರೋಕ್ತಂ.....।

– ಮಾನಸಾರಂ,ಅ೨:೧–೨೦

ಇಲ್ಲಿ ಹೇಳಿರುವಂತೆ ಶಿವನೇ ವಿಶ್ವಕರ್ಮ ರೂಪವನ್ನು ಪಡೆದ; ಆತನಿಗೆ ನಾಲ್ಕು ಮುಖಗಳು ಎಂಬುದನ್ನು ವಿಶ್ವಕರ್ಮ ಶಾಸ್ತ್ರಗಳು ಹೇಳಿಲ್ಲ. ವಿಶ್ವಕರ್ಮನಿಗೆ ಐದು ಮುಖಗಳೆಂಬುದೇ ಹೆಚ್ಚು ಪ್ರಚಲಿತ. ಶೈವಾಗಮಗಳಲ್ಲೂ ಇದೇ ರೂಪವನ್ನೇ ವಿವರಿಸಿದೆ. ಈ ಬಗ್ಗೆಯ ಹೆಚ್ಚಿನ ವಿವರಣೆಗಳಿಗೆ ಇದೇ ಲೇಖಕನ ಶಿಲ್ಪಾದರ್ಶ (ಸಂಪುಟ–೧) ಪುಟ ೧೬ ರಿಂದ ೩೬ (ಪ್ರಕಟಣೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ) ಮತ್ತು ರೂಪಲಕ್ಷಣ ಸಂಗ್ರಹ (ಸಂಪುಟ–೧) ಪುಟ ೧೯೮ ರಿಂದ ೨೭೨ (ಪ್ರಕಟಣೆ: ಕರ್ನಾಟಕ ಶಿಲ್ಪ ಅಕಾಡೆಮಿ, ಬೆಂಗಳೂರು) ಗ್ರಂಥಗಳನ್ನು ಅವಲೋಕಿಸಬಹುದು.

ಮುಖವಾಗಿರುವ ಮುಖದ ಹೆಸರು **ವಿಶ್ವಸ್ಥ** (ವಿಶ್ವದಲ್ಲಿ ವಾಸವಾಗಿರುವವನು). ಹೀಗೆ ನಾಲ್ಕು ವಿಧಗಳ ಶಿಲ್ಪ ಪ್ರವರ್ತಕರಾದ ಶಿಲ್ಪಬ್ರಹ್ಮರು ಪ್ರಥಮವಾಗಿ ಆವಿರ್ಭವಿಸಿದರು. ಪೂರ್ವದಿಕ್ಕಿನ ಮುಖದಿಂದ ವಿಶ್ವಕರ್ಮನು (ಈತನು ಸೃಷ್ಟಿಕರ್ತನಾದ ವಿಶ್ವಕರ್ಮನಿಂದ ಆವಿರ್ಭವಿಸಿದ ಪ್ರತ್ಯೇಕವಾದ ಶಿಲ್ಪಬ್ರಹ್ಮನಾದ ವಿಶ್ವಕರ್ಮ ಎಂಬುದನ್ನು ಗಮನಿಸಬೇಕು), ದಕ್ಷಿಣ ದಿಕ್ಕಿನ ಮುಖದಿಂದ ಮಯನು, ಪಶ್ಚಿಮ ಮುಖದಿಂದ ಮನು ಮತ್ತು ಉತ್ತರ ದಿಕ್ಕಿನಿಂದ ತ್ವಷ್ಟೃವು ಉದ್ಭವಿಸಿದರು. ವಿಶ್ವಕರ್ಮನು ಇಂದ್ರನ ಮಗಳನ್ನು, ಮಯನು ಸುರೇಂದ್ರನ ಮಗಳನ್ನು, ಮನುವು ನಳನ ಮಗಳನ್ನು, ತ್ವಷ್ಟೃವು ವೈಶ್ರಾವಣನ ಮಗಳನ್ನು ಮದುವೆಯಾದರು.

ವಿಶ್ವಕರ್ಮನ ಮತ್ತು ಇಂದ್ರನ ಮಗಳ ಮಗನನ್ನು ವಿಶ್ವಕರ್ಮ (ಈತನು ಮೂರನೆ ವಿಶ್ವಕರ್ಮ ಎಂಬುದನ್ನು ಗಮನಿಸಿ) ಎಂದು ಕರೆದರು. ಈತನೇ **ಸ್ಥಪತಿ** ಎಂದು ಪ್ರಖ್ಯಾತನಾದನು.

ಮಯ ಮತ್ತು ಸುರೇಂದ್ರನ ಮಗಳ ಮಗನ್ನು **ಸೂತ್ರಗ್ರಾಹಿ** ಎಂದು ಕರೆದರು.

ಮನು ಮತ್ತು ನಳನ ಮಗಳ ಮಗನನ್ನು **ತಕ್ಷಕ**ನೆಂದು ಕರೆದರು. ಈತನು ಮರಗೆಲಸದ ಪ್ರವರ್ತಕ.

ತ್ವಷ್ಟೃ ಮತ್ತು ವೈಶ್ರವಣನ ಮಗಳ ಮಗನ್ನು **ವರ್ಧಕಿ** ಎಂದು ಕರೆದರು. ಅಳತೆಗಳ ರಹಸ್ಯವನ್ನು ಬಲ್ಲವನು. ಈತನು ವಿನ್ಯಾಸಕಾರ.

ಈ ನಾಲ್ವರೂ ಸ್ಥಪತಿ ಚತುಷ್ಟಯ, ಶಿಲ್ಪಿಗಳು ಎಂದೂ ಕೂಡ ಪ್ರಖ್ಯಾತರು. ಆದರೆ ಸ್ಥಪತಿಯು ಉಳಿದ ಮುವ್ವರ ಗುರು. ಸೂತ್ರಗ್ರಾಹಿಯು ಗುರುವಿನ ನಂತರದವನು; ಗುರುವಿನಷ್ಟೇ ತಿಳಿವುಳ್ಳವನು. ಆದ್ದರಿಂದ ಉಳಿದ ಇಬ್ಬರಿಗೆ ಈತನು ಗುರುವು. ತಕ್ಷಕನ ಗುರುವಾಗಿರುವವನನ್ನು ವರ್ಧಕಿ ಎಂದು ಕರೆಯುತ್ತಾರೆ.

ಸ್ಥಪತಿಯಾಗಿರುವವನು ಸಕಲ ಶಾಸ್ತ್ರ ಪಾರಂಗತ. ಸೂತ್ರಗ್ರಾಹಿಯು ಅಳಿತ ಮಾಡುವ ಸೂತ್ರವನ್ನು ಹಿಡಿಯುವವ. ಅಳತೆಗಳಲ್ಲಿ ನಿಷ್ಣಾತನಾಗಿರುವವನು. ಅಳತೆಗಳನ್ನು ಸಿದ್ಧಿಸಿಕೊಂಡಾಗ ಈತನನ್ನು ಸ್ಥಾಪಕ ಎಂದೂ ಕರೆಯುತ್ತಾರೆ. ವರ್ಧಕಿ ಮತ್ತು ತಕ್ಷಕನು ಮರಗೆಲಸ ಹಾಗೂ ಇತರ ದೇವಾಲಯ ಶಿಲ್ಪಗಳನ್ನು ಮಾಡುವವರು.

ಸ್ತಪತಿಯೇ ಪ್ರಧಾನ ನಿಯಂತಾರ. ಈತನ ಆದೇಶದ ಅನುಸಾರವಾಗಿ ಉಳಿದ ಮುವ್ವರೂ ತಮ್ಮ ಶಿಲ್ಪವನ್ನು ಶಾಸ್ತ್ರ ಸಮ್ಮತವಾಗಿರುವಂತೆ ನಿರ್ವಹಿಸುತ್ತಾರೆ.

ಸ್ಥಪತಿಯಾದವನು ವೇದಾಗಮಾದಿ ಶಾಸ್ತ್ರಗಳಲ್ಲಿ ಪಾರಂಗತನಾಗಿರುತ್ತಾನೆ. ಶಿಲ್ಪಶಾಸ್ತ್ರದಲ್ಲಿ ಅಪಾರವಾದ ತಿಳಿವನ್ನು ಪಡೆದಿದ್ದು, ದೇವಾಲಯ ನಿರ್ಮಾಣಲ್ಲಿ ಭೂಪರೀಕ್ಷೆಯಿಂದ ಪ್ರಾರಂಭಿಸಿ ಮೂರ್ತಿಪ್ರತಿಷ್ಠೆಯ ತನಕ ಎಲ್ಲಾ ಸಂಗತಿಗಳನ್ನು ಅನುಭವ ಪೂರ್ವಕವಾಗಿ ತಿಳಿದಿರುತ್ತಾನೆ, ಸ್ಥಪತಿ ಎಂಬ ಪದದ ಅರ್ಥವೇ ಆತನು ವೇದ ಮತ್ತು ಶಿಲ್ಪವಿದ್ಯಾ ಶ್ರೇಷ್ಠನೆಂಬುದನ್ನು ವಿವರಿಸುತ್ತದೆ.

ಶಿಲ್ಪಿಯಾಗಿರುವವನು ಸ್ಥಪತಿಯಾಗಲು ಬೃಹಸ್ಪತಿ ಯಜ್ಞವನ್ನು (ಗೀಷ್ಪತೀಷ್ಟಿ) ಮಾಡಿ ಅರ್ಹತೆಗಳಿಸಿಕೊಳ್ಳಬೇಕೆಂಬುದು ಶಾಸ್ತ್ರದ ಅನುಶಾಸನ. ಆತನು ಆಚಾರ್ಯನ (ಗುರುವಿನ) ಎಲ್ಲಾ ಲಕ್ಷಣಗಳನ್ನು ಪಡೆದಿರುತ್ತಾನೆ. ಆತನ ಆಜ್ಞೆಯ ಪ್ರಕಾರವೇ ಉಳಿದ ಮುವ್ವರೂ ಕೆಲಸ ಮಾಡುತ್ತಾರೆ.

ಸೂತ್ರಗ್ರಾಹಿಯು ವೇದಶಾಸ್ತ್ರಗಳನ್ನು ಬಲ್ಲವನು. ಶಿಲ್ಪವಿದ್ಯೆಯಲ್ಲಿ ನಿಪುಣನು. ರೇಖೆಗಳ ಮರ್ಮವನ್ನು ಅರಿತವನು. ಚಿತ್ರಕಲೆಯಲ್ಲಿ ನಿಪುಣನು.

ತಕ್ಷಕನು ತನ್ನ ವೃತಿಯಲ್ಲಿ ನಿಪುಣನು. ತನ್ನ ಸ್ನೇಹಿತರಿಗೆ ಉಪಕಾರವನ್ನು ಮಾಡುವವನು. ದಯಾ ಗುಣದವನು. ಜನರಲ್ಲಿ ಸುಲಭವಾಗಿ ಬೆರೆಯುವವನು. ವೇದ ಶಾಸ್ತ್ರಾಧ್ಯಾಯಿ.

---

೨. ಸ್ಥಪತಿಃ ಸ್ಥಾಪನಾರ್ಹಃ ಸ್ಯಾತ್ ಸರ್ವಶಾಸ್ತ್ರವಿಶಾರದಃ ।
ನ ಹೀನಾಂಗೋಽತಿರಿಕ್ತಾಂಗೊ ಧಾರ್ಮಿಕಸ್ತು ದಯಾಪರಃ ॥
ಅಮಾತ್ಸರ್ಯೋಽನುಸೂಯಶ್ಚ ತಾಂತ್ರಿಕಃ ಸ್ವಭಿಜಾತವಾನ್ ।
ಗಣಿತಜ್ಞಃ ಪುರಾಣಜ್ಞಃ ಆನಂದ ಶ್ಚಾಪ್ಯಲುಬ್ಧಿಕಃ ॥
ಚಿತ್ರಜ್ಞಃ ಸರ್ವದೇಶಜ್ಞಃ ಸತ್ಯವಾದೀ ಜಿತೇಂದ್ರಿಯಃ ।
ಅರೋಗೀ ಚಾಪ್ರಮಾದೀ ಚ ಸಪ್ತವ್ಯಸನ ವರ್ಜಿತಃ ॥
ಸುನಾಮಾ ದೃಢಬಂಧುಶ್ಚ ವಾಸ್ತುವಿದ್ಯಾಬ್ಧಿಪಾರಗಃ ॥
ಸ್ಥಪತೇಸ್ತಸ್ಯ ಶಿಷ್ಯೋ ವಾ ಸೂತ್ರಗ್ರಾಹಿ ಸುತೇಽಥವಾ ॥
ಸ್ಥಪತ್ಯಾಜ್ಞಾನುಸಾರೀ ಚ ಸರ್ವಕರ್ಮ ವಿಶಾರದಃ ।
ಸೂತ್ರದಂಡ ಪ್ರಮಾಣಜ್ಞೋಮಾನೋನ್ಮಾನ ಪ್ರಮಾಣವಿತ್ ॥
ತಕ್ಷಣಾತ್ ಸ್ಥೂಲ ಸೂಕ್ಷ್ಮಾಣಾಂ ತಕ್ಷಕಃ ಸ ತು ಕೀರ್ತಿತಃ ।
ಮೃತ್ಕರ್ಮಜ್ಞೋ ಗುಣೀ ಶಕ್ತಃ ಸರ್ವಕರ್ಮಸ್ವತಂತ್ರಕಃ ॥
ಗುರುಭಕ್ತಃ ಸದಾ ಹೃಷ್ಟಃ ಸ್ಥಪತ್ಯಾದ್ಯನುಗಃ ಸದಾ ।
ತಕ್ಷಿತಾನಾಂ ತಕ್ಷಕೇಣಾಪ್ಯುಪರ್ಯುಪರಿಯುಕ್ತಃ ॥
ವೃದ್ಧಿಕೃದ್ ವರ್ಧಕಿಃ ಪ್ರೋಕ್ತಃ ಸೂತ್ರಗ್ರಾಹ್ಯನುಗಃ ಸದಾ ॥
ಏಭಿರ್ವಿನಾಪಿ ಸರ್ವೇಷಾಂ ಕರ್ಮ ಕರ್ತುಂ ನ ಶಕ್ಯತೇ ॥
ತಸ್ಮದೇಷು ಸದಾ ಪೂಜ್ಯಃ ಸ್ಥಪತ್ಯಾದಿ ಚತುಷ್ಟಯ ।

– ಶಿಲ್ಪರತ್ನಂ, ೧ : ೩೪-೪೨ ಮತ್ತು ಮಯಮತಂ, ೫:೧೩-೨೫

ವರ್ಧಕೀಯು ವೈದಿಕ ಸಾಹಿತ್ಯವನ್ನು ಅಧ್ಯಯನ ಮಾಡಿದವನಾಗಿರಬೇಕು. ಶಿಲ್ಪಶಾಸ್ತ್ರದ ವಿಷಯಗಳಲ್ಲಿ ಸ್ವತಂತ್ರವಾಗಿ ವಿಷಯವನ್ನು ವಿಶ್ಲೇಷಿಸಿ ಸಮಸ್ಯೆಗಳನ್ನು ಪರಿಹರಿಸುವಂತಹ ಸಮರ್ಥನಾಗಿರಬೇಕು. ಈತನು ಬಣ್ಣದ ಕೆಲಸದಲ್ಲಿ ಅದ್ವಿತೀಯ ತಿಳಿವು ಉಳ್ಳವನು. ಇವು ಪೂರ್ವೋಕ್ತ ನಾಲ್ವರ ಸಾಮಾನ್ಯ ಲಕ್ಷಣಗಳು. ಇದನ್ನೇ ಶಿಲ್ಪಶಾಸ್ತ್ರವು ಹೀಗೆ ವಿವರಿಸುತ್ತದೆ.[೨]

ಸ್ಥಪತಿಯಾದವನು ರಥ, ದೇವಾಲಯ, ದೇವಮೂರ್ತಿ ಮತ್ತು ಎಲ್ಲಾ ವಾಸ್ತು ನಿರ್ಮಾಣಗಳನ್ನು ಸ್ವಯಂ ನಿರ್ಮಿಸಿ ಅವನ್ನು ಪ್ರತಿಷ್ಠಿಸಬಲ್ಲವನಾಗಿದ್ದು ಎಲ್ಲಾ ಶಾಸ್ತ್ರಗಳನ್ನು ತಿಳಿದ ವಿದ್ವಾಂಸನಾಗಿರಬೇಕು. ಅವನ ದೇಹದಲ್ಲಿ ಯಾವುದೇ ಊನವಾಗಲಿ, ಅತಿರಿಕ್ತವಾಗಿರುವ ಅಂಗವಾಗಲಿ ಇರಕೂಡದು. ಧಾರ್ಮಿಕ ಬುದ್ಧಿಯುಳ್ಳವನೂ, ದಯಾಳುವು, ದ್ವೇಷಾಸೂಯೆಗಳಿಂದ ದೂರನೂ, ಆಗಮ-ಸಂಹಿತೆ-ತಂತ್ರಗಳ ರಹಸ್ಯಗಳನ್ನು ಸಿದ್ಧಿಸಿಕೊಂಡಿರುವವನು, ಸ್ಫುರದ್ರೂಪಿಯೂ, ಗಣಿತ ಶಾಸ್ತ್ರ ಪ್ರವೀಣನೂ, ಪುರಾಣಗಳನ್ನು ಬಲ್ಲವನೂ, ಸಂತೋಷ ಮತ್ತು ಸಂತೃಪ್ತಿಗಳನ್ನು ಹೊಂದಿರುವವನು, ಚಿತ್ರ ಕಲೆಯನ್ನು ಬಲ್ಲವನು, ದೇಶದೇಶಾಂತರಗಳ ಅನುಭವವನ್ನು ಗಳಿಸಿಕೊಂಡಿರುವವನು, ಸತ್ಯವಾದಿಯಾಗಿ ಸತ್ಯನಿಷ್ಠನಾಗಿರುವವನು, ಇಂದ್ರಿಯ ನಿಗ್ರಹವುಳ್ಳವನು, ಆರೋಗ್ಯವಂತನೂ, ತಪ್ಪುಗಳನ್ನು ಮಾಡದೆ ಸದಾ ನೀತಿ ಮಾರ್ಗವನ್ನು ಅನುಸರಿಸುವವನು, ಅರಿಷಡ್ವರ್ಗಗಳೆಂದು ಹೆಸರಾಗಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಫಲವಾಗಿ ಮೂಡುವ ಮನೋವಿಕಾರಗಳಿಗೆ ತುತ್ತಾಗಿ ಮನುಷ್ಯನಲ್ಲಿ ಮೊಳೆತು ಚಟವಾಗಿ ಬಲವಾಗಿ ನಿಲ್ಲುವಂತಹ ಪರಸ್ತ್ರೀ ವ್ಯಾಮೋಹ, ಜೂಜು, ಬೇಟೆ, ಅಹಂಕಾರದ ಮಾತುಗಳು (ಪರನಿಂದನೆ), ವ್ಯರ್ಥ ಪೌರುಷ, ಅರ್ಥದೂಷಣ (ವ್ಯರ್ಥವೂ ನಿಷ್ಪ್ರಯೋಜಕವೂ ಆದ ವೆಚ್ಚ ಮಾಡುವಿಕೆ) ಗಳಿಗೆ ದಾಸನಾಗದವನು, ಬಂಧುಗಳಲ್ಲಿ ಅಕ್ಕರೆ ವಿಶ್ವಾಸಗಳನ್ನು ಇರಿಸಿಕೊಂಡು ಶಿಲ್ಪ ಮತ್ತು ಆಗಮಶಾಸ್ತ್ರಗಳಲ್ಲಿ ಪಾರಂಗತನಾಗಿರುವವನು ಮಾತ್ರವೇ ಸ್ಥಪತಿಯಾಗಲು ಅರ್ಹನು.

ಸೂತ್ರಗ್ರಾಹೀ, ತಕ್ಷಕ,ವರ್ಧಕೀ ಎಂಬ ಶಿಷ್ಯರು ಈತನ ನಿರ್ದೇಶನದಲ್ಲಿ ಕೆಲಸ ಮಾಡುತ್ತಾರೆ. ಇವರನ್ನು *ಸ್ಥಪತ್ಯಾದಿ ಚತುಷ್ಟಯ, ಶಿಲ್ಪಿಗಳು* ಎಂದು ಕರೆಯುತ್ತಾರೆ.

ಈ ನಾಲ್ವರ ಸಹಕಾರವಿಲ್ಲದೆ ಪ್ರಪಂಚದಲ್ಲಿ ಶಿಲ್ಪದ ಸಿದ್ಧಿಯನ್ನು ಪಡೆಯುವುದು ಸಾಧ್ಯವಾಗುವುದಿಲ್ಲ. ಈ ಶಿಲ್ಪಿ ಚತುಷ್ಟಯದ ನೆರವು ಹೊಂದದೆ ಫಲ ದೊರೆಯುವುದಿಲ್ಲ. ಇವರ ಮಾರ್ಗದರ್ಶನವಿಲ್ಲದೆಯೇ ಶಿಲ್ಪ ರಚನೆ, ಕಟ್ಟಡ, ದೇವಾಲಯ ನಿರ್ಮಾಣದಲ್ಲಿ ಸಫಲತೆ ದೊರೆಯುವುದಿಲ್ಲ. ಹಾಗೆ ಸಫಲವಾಗದೆ ಮುಮುಕ್ಷುಗಳಿಗೆ ಭಕ್ತಿ-ಮುಕ್ತಿಗಳು ಲಭಿಸುವುದಿಲ್ಲ.

ಈ ಬಗ್ಗೆ ಸಮರಾಂಗಣ ಸೂತ್ರಧಾರದಲ್ಲಿ[೩] ದೊರೆಯುವ ವಿವರಣೆಯು ಬಹು ಅಪೂರ್ವವಾದುದು. ಇದರಲ್ಲಿ ಹೆಚ್ಚು ವಿವರಗಳಿವೆ ಎಂಬುದು ಮಾತ್ರವೇ ಅಲ್ಲ, ವೈಜ್ಞಾನಿಕ ದೃಷ್ಟಿಯಿಂದಲೂ ಆ ವಿವರಣೆಗಳನ್ನು ಕ್ರಮವನ್ನು ಅನುಸರಿಸಿ ಹೇಳಿದೆ. ಹತ್ತನೆಯ ಶತಮಾನದ ವೇಳೆಗೆ ಭಾರತದಲ್ಲಿ ಹಲವು ಬೃಹತ್ ದೇವಾಲಯ ಮತ್ತು ಇತರ ರಚನೆಗಳ ನಿರ್ಮಾಣವಾಗಿದ್ದು ಶಿಲ್ಪಶಾಸ್ತ್ರವು ಬಹು ವ್ಯಾಪಕವಾಗಿ ಮತ್ತು ಪ್ರಬಲವಾಗಿ ವರ್ಧಿಸಿತ್ತು. ಅದ್ಭುತವಾದ ಬೃಹತ್ ರಚನೆಯ ನಿರ್ಮಾಣದಲ್ಲಿ ಬಹುಶೃತನಾದ ದಕ್ಷನಾದ ಸ್ಥಪತಿಯ ನೇತೃತ್ವದಲ್ಲಿ ದೇವಾಲಯ, ಕೋಟೆ, ಅರಮನೆಗಳ ನಿರ್ಮಾಣವು ಸಾಗುತ್ತಿತ್ತು. ಶಿಲ್ಪ ಶಾಸ್ತ್ರಗಳಲ್ಲಿ ಬಹು ಸಾಧಾರಣವಾಗಿ ಹೇಳಿರುವ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಮತ್ತು ತಕ್ಷಕ ಎಂಬ ವಿಭಾಗಗಳು ಬಹುವಾಗಿ ಪ್ರತ್ಯೇಕ ಎನಿಸುವಂತೆ ಇರಲಿಲ್ಲ. ಆ ಕಾಲಕ್ಕೆ ಕೇವಲ ಎರಡೇ ಭಾಗಗಳು ಇದ್ದವು- ಸ್ಥಪತಿ ಮತ್ತು ಸ್ಥಾಪಕ. ಸ್ಥಪತಿಯಾದವನೇ ಸ್ಥಾಪಕನಾಗಿದ್ದರೂ ನಿರ್ಮಾಣದ ಹಂತಗಳ, ಶಾಸ್ತ್ರದ ವಿವಾದ ವಿವರಣೆಗಳ ಗೊಂದಲದಲ್ಲಿ ಆಗಮದ ವಿವರಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಶಿಲ್ಪಶಾಸ್ತ್ರದ ವಿವರಗಳಲ್ಲೂ ಪರಿಣಿತರಾಗಿದ್ದ ಶಿಲ್ಪಾಚಾರ್ಯರು ಪ್ರತ್ಯೇಕವಾದ ಅಸ್ತಿತ್ವವನ್ನು ಸ್ಥಪತಿಯ ನೇತೃತ್ವದಲ್ಲಿ ಗಳಿಸಿಕೊಂಡಿದ್ದರು. ಸ್ಥಪತಿ ಮತ್ತು ಸ್ಥಾಪಕ ಇಬ್ಬರೂ ಆಚಾರ್ಯರು (ಗುರುಗಳು) ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಆದರೆ ದೇವಾಲಯ ಶಿಲ್ಪದಲ್ಲಿ ಸ್ಥಾಪಕನ ಪಾತ್ರವು ತೀರಾ ಕಿರಿಯದು. ಶಿಲ್ಪದೊಂದಿಗೇ ಮೂರ್ತಿ, ದೇವಾಲಯ ಹಾಗೂ ಇತರ ಧಾರ್ಮಿಕ ನಿರ್ಮಾಣಗಳಾದ ರಥ ಮುಂತಾದುವುಗಳ ಪ್ರತಿಷ್ಠಾಪನೆಗೆ ಮಾತ್ರವೇ ಸೀಮಿತವಾಗಿರುತ್ತಿತ್ತು. ಈ ಸಂಬಂಧದ ಶಿಲ್ಪ ಮತ್ತು ಯಜ್ಞಾದಿಗಳನ್ನು ಆತನೇ ಸ್ಥಪತಿಯ ನೇತೃತ್ವದಲ್ಲಿ ನಿರ್ವಹಿಸುತ್ತಿದ್ದ. ಸ್ಥಪತಿಯಾದವನನ್ನು ಧಾರ್ಮಿಕ ಕಟ್ಟಡಗಳಲ್ಲಾಗಲಿ, ನಗರ, ಕೋಟೆ, ಅರಮನೆ ಮತ್ತು ಗೃಹಾದಿಗಳಲ್ಲಾಗಲಿ ಅವುಗಳ ಪೂರ್ಣ ಯೋಜನೆ, ನಿರ್ಮಾಣಗಳಿಗೆ ಹೊಣೆಗಾರನಾಗಿದ್ದ. ಆದ್ದರಿಂದ ಸ್ಥಪತಿಯ ಕೆಲಸವೇ ಸ್ಥಾಪತ್ಯ ಎಂಬುದಾಗಿ ಹೆಸರಾಗಿತ್ತು **(ಸ್ಥಪತೇಃ ಕರ್ಮ ಸ್ಥಾಪತ್ಯಂ)**

ಶಾಸ್ತ್ರಗಳ ಎಲ್ಲಾ ನಿಯಮಗಳನ್ನು, ಬಹು ಅಮೂಲ್ಯವಾದ ಎಲ್ಲಾ ವಸ್ತುಗಳನ್ನು, ನೈಸರ್ಗಿಕವಾಗಿ ಬಹುವಾಗಿ ಉಪಯೋಗಿ ವಸ್ತುಗಳನ್ನು ಕೂಡ ಸ್ಥಪತಿಯಾದವನು ಬಳಸಿಕೊಂಡು ಸುಂದರವಾಗಿರುವ ಶಾಸ್ತ್ರೀಯ ಸೃಷ್ಟಿಯೊಂದನ್ನು ಮಾಡುವ ತನಕ ಲಭಿಸುವ ಆ ವಸ್ತು

---

೩. ಸಂ : ಪ್ರೊ॥ ವಿ. ಎಸ್. ಅಗ್ರವಾಲ : ಸಮರಾಂಗಣ ಸೂತ್ರಧಾರ, ಸ್ಥಪತಿ ಲಕ್ಷಣ (ಅಧ್ಯಾಯ ೪೪) ಮತ್ತು ಅಷ್ಟಾಂಗ ಲಕ್ಷಣ (ಅಧ್ಯಾಯ ೪೫), ಪುಟ ೨೪೬-೨೫೨

ಸಂಕುಲವೆಲ್ಲಾ ಅಪ್ರಯೋಜಕವೇ. ಪ್ರತಿಭಾ ಶಾಲಿಯಾದ ಕನಸುಗಾರ ಕವಿಯಂತೆ ಸ್ಥಪತಿಯು ತನ್ನ ಕನಸಿನ ಗೋಪುರಗಳನ್ನು ನಿಜ ಜೀವನದಲ್ಲಿ ನಿರ್ಮಿಸಿ ಸಾಕಾರ ರೂಪದಲ್ಲಿ ಜನರ ಮುಂದೆ ಅದನ್ನು ಇರಿಸಿ ಅವರನ್ನು ಚಕಿತರನ್ನಾಗಿಸಿ, ಆ ಸೃಷ್ಟಿಯನ್ನು ನೋಡುತ್ತಾ ಸಂತೋಷದಿಂದ ಮೈಮರೆಯುವಂತೆ ಮಾಡುತ್ತಾನೆ. ಸಂಗೀತ ವಿದ್ವಾಂಸನಂತೆ ಕಟ್ಟಡನಿರ್ಮಾಣದಲ್ಲಿ ಲಯವನ್ನು, ಸೃಷ್ಟಿಕರ್ತನಂತೆ ದೇವಾಲಯದಲ್ಲಿ, ಗೃಹಗಳಲ್ಲಿ ಚೈತನ್ಯವನ್ನು ಸ್ಥಪತಿಯಾದವನು ಮೂಡಿಸುತ್ತಾನೆ. ಸ್ಥಪತಿಯಾದವನ ಪ್ರತಿಭೆ ಮತ್ತು ಕಲಾ ಸೃಷ್ಟಿಯ ಸಾಮರ್ಥ್ಯ, ಸೌಂದರ್ಯ, ಸೃಷ್ಟಿಯ ತಂತ್ರಜ್ಞಾನಗಳ ಫಲವಾಗಿಯೇ ಭಾರತಲ್ಲಿ ಎಲ್ಲೋರದ ಕೈಲಾಸ ದೇವಾಲಯ ಮತ್ತು ಅಂತಹ ನೂರಾರು ಶಿಲ್ಪಗಳು ಅರಳಿ ನಿಂತಿವೆ.

ಕಲಾ ದೃಷ್ಟಿಯಿಂದ ಸ್ಥಾಪತ್ಯ ಮತ್ತು ಸ್ಥಪತಿ ಎರಡೂ ಪ್ರತ್ಯೇಕವಾಗಿ ನಿಲ್ಲದೇ ಒಂದೇ ಆಗಿ ಬೆರೆತುಕೊಂಡು ನಮ್ಮ ಮುಂದೆ ನಿಲ್ಲುತ್ತಾರೆ.

ಸಮರಾಂಗಣ ಸೂತ್ರಧಾರನು ಸ್ಥಪತಿ ಲಕ್ಷಣವನ್ನು ಹೇಳಲು ಪ್ರಾರಂಭಿಸುತ್ತಾ 'ನಮಗೆ ಪರಂಪರೆಯಿಂದ ಹರಿದು ಬಂದಿರುವ ಸ್ಥಾಪತ್ಯವೇದವನ್ನು ವರ್ಣಿಸುತ್ತೇನೆ. ಇದನ್ನು ಚೆನ್ನಾಗಿ ತಿಳಿಯುವುದರಿಂದ ಸ್ಥಪತಿಯ ಗುಣ-ದೋಷಗಳನ್ನು ಸುಲಭವಾಗಿ ಕಾಣಲು, ಗುರ್ತಿಸಲು ಸಾಧ್ಯವಾಗುತ್ತದೆ' ಎಂದು ಹೇಳುತ್ತಾನೆ.[೪]

ಸ್ಥಾಪತ್ಯವೇದಕ್ಕೆ ನಾಲ್ಕು ಅಂಗಗಳು-(೧) ಪಾರಂಪರಿಕ ಶಾಸ್ತ್ರ ಜ್ಞಾನ, (೨)ನೇರವಾದ ಗುರುವಿನಿಂದ ಪಡೆದುಕೊಂಡಿರುವ ಶಿಲ್ಪಕರ್ಮಾನುಭವ, (೩) ಕನಸನ್ನು ಕಲ್ಪಿಸಿಕೊಂಡು ಕಾಣುವಂತಹ ಅಂತಃ ಪ್ರಜ್ಞೆ(ಪ್ರಜ್ಞೆ), (೪)ವ್ಯಕ್ತಿಗತವಾದ ಸತ್ಯ ಧರ್ಮ ನ್ಯಾಯಗಳಿಗೆ ಬದ್ಧವಾದ ಜೀವನಕ್ರಮ (ಶೀಲ)ವನ್ನು ಅನುಸರಿಸುತ್ತಿರುವ ಜೀವನ. ಸ್ಥಾಪತ್ಯವೇದದ ಅಂಗಗಳಾಗಿರುವ ಈ ನಾಲ್ಕು ಅಂಶಗಳನ್ನು ಶಿಲ್ಪಿಯು ಪೂರ್ಣ ದೃಷ್ಟಿಯಿಂದ ಸ್ವೀಕರಿಸಿ ಅನ್ವಯಗೊಳಿಸಿದಾಗ ಮಾತ್ರವೇ ಸ್ಥಪತಿಯಾಗಿ ರೂಪುಗೊಳ್ಳುತ್ತಾನೆ.[೫] ಈ ಅಂಶಗಳೇ ಸ್ಥಪತಿಯಾಗಲು ಆ ವ್ಯಕ್ತಿಯ ಅರ್ಹತೆಯನ್ನು, ಸಾಮರ್ಥ್ಯವನ್ನು, ಗುಣವನ್ನು ಒದಗಿಸುವ ಮೂಲ ದ್ರವ್ಯಗಳು.

ಶಿಲ್ಪ ಶಾಸ್ತ್ರಪ್ರವರ್ತಕರಾಗಿರುವ ವಿಶ್ವಕರ್ಮ, ಮಯ, ಗರ್ಗ, ಅಗಸ್ತ್ಯ, ಕಶ್ಯಪ, ಮಾನಸಾರ, ಸಮರಾಂಗಣ, ಸೂತ್ರಧಾರ ಭಾರದ್ವಾಜ ಮುಂತಾದ ಪ್ರಾಚೀನ ಶಿಲ್ಪರ್ಷಿಗಳು ಉಪದೇಶಿಸಿರುವ ಶಿಲ್ಪಶಾಸ್ತ್ರಗಳನ್ನು ಚೆನ್ನಾಗಿ ಬಲ್ಲವನು, ಆ ಶಾಸ್ತ್ರಗಳಲ್ಲಿ ವಿದ್ವಾಂಸನು ಆಗಿರುವುದು ಮಾತ್ರವೇ ಸಾಲದು, ಪರಂಪರೆಯಿಂದ ಆತನು ಶಿಲ್ಪವನ್ನು ಅಭ್ಯಾಸಿಸಿದ್ದು, ಗುರುಮುಖೇನ ಶಿಲ್ಪ ಕರ್ಮವನ್ನು ನೆರವೇರಿಸಿ ಕರ್ಮಾಂಗದಲ್ಲಿಯೂ ಬಹು ಅನುಭವಜ್ಞನಾಗಿರಬೇಕು; ಪರಿಣಿತ ಶಿಲ್ಪಿಯಾಗಿರಬೇಕು. ಇವೆರಡರಿಂದ ಮಾತ್ರವೇ ಸ್ಥಪತಿಯಾಗಲು ಸಾಧ್ಯವಿಲ್ಲ. ಅವನಲ್ಲಿ ಕನಸುಕಾಣುವ ಮತ್ತು ಸೌಂದರ್ಯವನ್ನು ನಿರ್ಮಿಸುವ ಪ್ರತಿಭೆಯ ಚಿಲುಮೆಯು ಪುಟಿಯುತ್ತಿರಬೇಕು. ಈ ರೀತಿಯ ಪ್ರತಿಭೆಯು ಇಲ್ಲದಾಗ ಶಾಸ್ತ್ರದ ಪಾರಂಗತತ್ವ ಮತ್ತು ಪರಂಪರೆಯಿಂದ ಬಂದ ಶಿಲ್ಪಾನುಭವ ಎರಡೂ ನಿಷ್ಪ್ರಯೋಜಕ. ಈ ಮೂರನ್ನೂ ಮೀರಿ ಶಿಲ್ಪಿಯಾದವನು ವೈಯಕ್ತಿಕ ಶೀಲ, ಸಚ್ಚಾರಿತ್ಯ, ಸತ್ಯ-ಧರ್ಮ ನಿಷ್ಠೆಗಳೊಂದಿಗೆ ಋಜು ಜೀವನ ಮಾರ್ಗವನ್ನು ಅನುಸರಿಸುತ್ತಿರುವ ಆದರ್ಶ ವ್ಯಕ್ತಿಯಾಗಿರಬೇಕು. ಇಂತಹ ವ್ಯಕ್ತಿಮಾತ್ರವೇ ನಿಜವಾದ ಸ್ಥಪತಿಯಾಗಿ ಶೋಭಿಸಬಲ್ಲ. ಈ ಅಂಶಗಳನ್ನು ಒಂದೊಂದಾಗಿ ಸಮರಾಂಗಣ ಸೂತ್ರಧಾರ ಶಿಲ್ಪಶಾಸ್ತ್ರದ ಬೆಳಕಿನಲ್ಲಿ ನೋಡೋಣ.

೧. ಪಾರಂಪರಿಕ ಶಿಲ್ಪ ಮತ್ತು ಇತರ ಶಾಸ್ತ್ರಗಳ ಜ್ಞಾನ:[೬] ಸ್ಥಪತಿಯಾದವನಿಗೆ ಇರಬೇಕಾಗಿರುವ ಪ್ರಥಮ ಅರ್ಹತೆ ಎಂದರೆ ಶಿಲ್ಪಶಾಸ್ತ್ರಗಳ ತಿಳಿವು. ಶಿಲ್ಪ ಶಾಸ್ತ್ರಗಳ ವ್ಯಾಪ್ತಿಯು ಬಹು ವ್ಯಾಪಕವಾದುದು. ಭೂಪರೀಕ್ಷೆಯಿಂದ ಪ್ರಾರಂಭವಾಗಿ, ದಿಕ್‌ನಿರ್ಣಯ, ವಾಸ್ತುಪದ ವಿನ್ಯಾಸ, ನಗರ-ದೇವಾಲಯ-ಗೃಹಾದಿಗಳ ಯೋಜನೆ, ಮರ,ಕಲ್ಲು ಮತ್ತು ಇತರ ಕಟ್ಟಡ ನಿರ್ಮಾಣದ ವಸ್ತುಗಳ ಆಯ್ಕೆ, ಪರೀಕ್ಷೆ, ಅವುಗಳ ಗುಣ-ಧರ್ಮಗಳ ನಿರ್ಣಯ, ಮರ, ಲೋಹ ಮುಂತಾದ ಶಿಲ್ಪಗಳ ಪಾಂಡಿತ್ಯ, ಯಂತ್ರ ನಿರ್ಮಾಣ ರಹಸ್ಯಜ್ಞಾನ, ಪ್ರತಿಮಾಲಕ್ಷಣ, ತಾಲ-ಮಾನದ ಪಾಂಡಿತ್ಯ. ಖಗೋಳ, ಸಾಮುದ್ರಿಕೆ ಮತ್ತು ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಪ್ರಾವೀಣ್ಯತೆ.

---

೪. ಸ್ಥಾಪತ್ಯಮುಚ್ಚ್ಯತೇಽಸ್ಮಾ ಭಿರಿದಾನೀ ಪ್ರಕ್ರಮಾಗತಮ್।
ಜ್ಞಾತ್ತೇನ ಏನ ಜ್ಞಾಯಂತೇ ಸ್ಥಪತೀನಾಂ ಗುಣಾಗುಣಾಃ॥
– ಸಮರಾಂಗಣ ಸೂತ್ರಧಾರ,೪೪:೧

೫. ಶಾಸ್ತ್ರಂ ಕರ್ಮ ತಥಾ ಪ್ರಜ್ಞಾ ಶೀಲಂ ಚ ಕ್ರಿಯಯಾನ್ವಿತಮ್।
ಲಕ್ಷ್ಯಲಕ್ಷಣ ಯುಕ್ತಾರ್ಥ ಶಾಸ್ತ್ರ ನಿಷ್ಠೋ ನರೋ ಭವೇತ್ ॥
–ಅದೇ, ೪೪:೨

೬. ಸಾಮುದ್ರಂ ಗಣಿತಂ ಚೈವ ಜ್ಯೋತಿಷಂ ಛಂದ ಏವ ಚ।
ಸಿರಾಜ್ಞಾನಂ ತಥಾ ಶಿಲ್ಪಂ ಯಂತ್ರಕರ್ಮವಿಧಿಸ್ತಥಾ॥
ಏತಾನ್ಯಂಗಾನಿ ಜಾನಿಯಾದ್ ವಾಸ್ತುಶಾಸ್ತ್ರಸ್ಯ ಬುದ್ಧಿಮಾನ್
ಶಾಸ್ತ್ರಾನುಸಾರೇಣಾಭ್ಯುಧ್ಯ ಲಕ್ಷಣಾನಿ ಚ ಲಕ್ಷಯೇತ್॥
ಪ್ರಸಿದ್ಧ ಶಾಸ್ತ್ರ ದೃಷ್ಟಾಂತೈರ್ವಾಸ್ತು ಜ್ಞಾನಂ ಪ್ರಸಾಧಯೇತ್।
ವಾಸ್ತುನಃ ಸಸಿರಾ ವಂಶೈರ್ಮರ್ಮ ವೇಧ್ಯೈಃ ಸುನಿಶ್ಚಿತೈಃ ॥
ವಾಸ್ತು ದ್ವಾರಕ್ಷಣಾನ್ ಭೂಯಃ ಸರ್ವಾನ್ ಜಾನಾತಿ ಶಾಸ್ತ್ರತಃ।
ಯಸ್ತು ಶಾಸ್ತ್ರಮವಿಜ್ಞಾಯ ಪ್ರಯೋಕ್ತಾ ಸ್ಥಪತಿ ರ್ಭವೇತ್॥
ಹಂತವ್ಯಃ ಸ ಸ್ವಯಂ ರಾಜ್ಞಾ ಮೃತ್ಯುವದ್ ರಾಜಹಿಂಸಕಃ।
ಮಿಥ್ಯಾಜ್ಞಾನಾದಹಂಕಾರೀ ಶಾಸ್ತ್ರೇ ಚೈವಾಕೃತಿ ಶ್ರಮಃ॥
ಅಕಾಲಮೃತ್ಯುಲೋಕಸ್ಯ ವಿಚರೇತ್ ವಸುಧಾ ತಲೇ।
– ಅದೇ ೪೪ : ೩-೮

ಕಲ್ಪಸೂತ್ರಾದಿಗಳ ತಿಳಿವು. ವಾಸ್ತುಕರ್ಮಾಂಗವಾಗಿ ನಡೆಸಲಾಗುವ ಎಲ್ಲಾ ಪೂಜೆ, ಹೋಮಗಳನ್ನು, ಪ್ರತಿಷ್ಠಾದಿಗಳನ್ನು ನೆರವೇರಿಸಬಲ್ಲ ಸಾಮರ್ಥ್ಯ, ಛಂದಸ್ಸಿನ ಅನುಸಾರ ಕಟ್ಟಡ ವಿನ್ಯಾಸ ಮಾಡುವ ತಿಳಿವು ಅವಶ್ಯಕವಾಗಿ ಇರಬೇಕು. ಪದ್ಯ ರಚನೆಗಳಿಗೆ ಛಂದಸ್ಸು ಇರುವಂತೆಯೇ ಕಟ್ಟಡ ನಿರ್ಮಾಣಗಳನ್ನು ಛಂದಸ್ಸಿನಿಂದ ಗುರ್ತಿಸಲು ಸಾಧ್ಯವಿದೆ. ಛಂದಸ್ಸು ಕಟ್ಟಡ ವಿನ್ಯಾಸವನ್ನು ತಿಳಿಸುತ್ತದೆ.[೭] ಈ ತಿಳಿವು ಸ್ಥಪತಿಯಾದವನಿಗೆ ಇರಬೇಕು.

ಶಾಸ್ತ್ರಜ್ಞಾನದ ಬಗ್ಗೆ ಅತ್ಯಂತ ವಿವರವಾಗಿ ಹೇಳಿದೆ – ಸ್ಥಪತಿಯಾದವನು ಶಾಸ್ತ್ರದ ಅಧ್ಯಯನವನ್ನು ನಡೆಸದೆ, ಆ ವಿವರಗಳನ್ನು ತನ್ನವನ್ನಾಗಿ ಮಾಡಿಕೊಳ್ಳದೆ ಶಿಲ್ಪಕಾರ್ಯವನ್ನು ನೆರವೇರಿಸಲು ತೊಡಗಿದಾಗ, ಭ್ರಮೆ ಮತ್ತು ಅಜ್ಞಾನದಿಂದ ಅಥವಾ ಕೇವಲ *ತೋರಿಕೆಗಾಗಿ ತಿಳಿವನ್ನು ನಟಿಸುವ ಸ್ಥಪತಿಯನ್ನು ರಾಜನೇ ಮರಣದಂಡನೆಯನ್ನು ವಿಧಿಸಿಕೊಲ್ಲಬೇಕು.* ಇಂತಹ ಮೋಸಗಾರನಾದ ಅಯೋಗ್ಯನನ್ನು ***ರಾಜಹಿಂಸಕ*** ಎಂದು ಶಾಸ್ತ್ರವೇ ಹೇಳುತ್ತದೆ, ಅವನು ಸ್ಥಪತಿಯಾಗಿ ಕೆಲಸವನ್ನು ನಿರ್ವಹಿಸಿದರೆ ಪ್ರಪಂಚದ ಪಾಲಿಗೇ ಮೃತ್ಯುಸ್ವರೂಪನಾಗುತ್ತಾನೆ.

೨. ಶಿಲ್ಪಕರ್ಮಾನುಭವ[೮] : ಪಾರಂಪರಿಕ ಶಾಸ್ತ್ರಾನುಭವವು ಎಷ್ಟೇ ಇದ್ದರೂ, ಶಿಲ್ಪ ಕರ್ಮ ನಿರ್ವಹಣೆಯ ಅನುಭವವನ್ನು ಪಾರಂಪರಿಕವಾಗಿ ಗುರುವಿನ ಬಳಿ ಅಭ್ಯಾಸದ ಮೂಲಕ ಸಂಗ್ರಹಿಸದೆ ಇರುವವನು ಸ್ಥಪತಿಯಾಗಲು ಸಾಧ್ಯವಿಲ್ಲ. ರಣರಂಗದಲ್ಲಿ ಶತ್ರುವಿನ ಶಸ್ತ್ರಾಸ್ತ್ರಗಳ ಧಾಳಿಯನ್ನು ಎದುರಿಸಲಾಗದೆ ಓಡುವ ಹೇಡಿಯಂತೆ ಕರ್ಮರಂಗದಿಂದ ಇವನು ಪಲಾಯನ ಸೂತ್ರವನ್ನು ಪಠಿಸುತ್ತಾನೆ. ಇದಕ್ಕೆ ವಿರುದ್ಧವಾಗಿ ಕರ್ಮರಂಗದಲ್ಲಿ ಪರಿಣಿತಿಯನ್ನು ಪಡೆದಿರುವವನೂ ಕೂಡ ಶಿಲ್ಪ ಶಾಸ್ತ್ರ ಪಾಂಡಿತ್ಯವನ್ನು ಪಡೆಯದೆ ಇದ್ದರೆ ಅವನೂ ಕೂಡ ಶಿಲ್ಪ ಕರ್ಮವನ್ನು ನಡೆಸಲು ಸೂಕ್ತನಾಗುವುದಿಲ್ಲ. ಇಂತಹವನು ಪ್ರತಿ ಅಂಶಕ್ಕೂ ಇನ್ನೊಬ್ಬರ ಮೇಲೆ ಅವಲಂಬಿಸಿರುವ ಕುರುಡನಂತಿರುತ್ತಾನೆ. ಇಂತಹವನು ಇನ್ನೊಬ್ಬ ಬಳಿ ಕೆಲಸಗಾರನಾಗಿ ಇರಬೇಕೇ ಹೊರತು ತಾನೇ ಸ್ಥಪತಿಯಾಗಲು ಅನರ್ಹನಾದವನು. ಇತರರ ನೆರವನ್ನು, ಮಾರ್ಗದರ್ಶನವನ್ನು ಪಡೆಯುವಂತಹವನಿಗೆ ಸ್ವಯಂ ತಿಳಿವಿನ ಕಣ್ಣಾಗಲಿ, ಕಲ್ಪನೆಯನ್ನು ಸಾಕಾರವಾಗಿ ನಿರ್ಮಿಸಲು ಅತ್ಯಂತ ಮುಖ್ಯವಾಗಿ ಬೇಕಾಗಿರುವ ಕೌಶಲವಾಗಲಿ ಇರುವುದಿಲ್ಲ. ಶಿಲ್ಪಕರ್ಮವು ಷಣ್ ಮಾನಗಳನ್ನು ಹೊಂದಿರುವಂತಹುದು. ಮಾನ (ಉದ್ದ ಅಥವಾ ಎತ್ತರ), ಪ್ರಮಾಣ (ಅಗಲ), ಉನ್ಮಾನ(ದಪ್ಪ), ಪರಿಮಾಣ (ಸುತ್ತಳತೆ), ಉಪಮಾನ (ಅಂಗ ಮತ್ತು ಉಪಾಂಗಗಳ ಮಧ್ಯೆ ಇರುವ ಅಂತರ), ಲಂಬಮಾನ (ಉದ್ದದಲ್ಲಿ ತೂಗಿ ಬಿಟ್ಟಿರುವ ಸೂತ್ರಗಳಿಂದ ಅಂಗಾಗಗಳ ದೂರದ ಅಳತೆ). ಹೀಗೆ ಸ್ಥಪತಿಯಾದವನು ಲೆಕ್ಕಗಳಲ್ಲಿ, ಅಳತೆಗಳಲ್ಲಿ ನಿಷ್ಣಾತನಾಗಿದ್ದು ***ಶಿಲ್ಪವಿತ್*** ಆಗಿರಬೇಕು. ಕಟ್ಟಡ ನಿರ್ಮಾಣದ ಅಧಃ ಛಂಧ (ತಳವಿನ್ಯಾಸ), ಉರ್ಧ್ವ ಛಂದ (ಊರ್ಧ್ವ ವಿನ್ಯಾಸ), ಕಾಷ್ಠ, ಲೋಹ ಶಿಲ್ಪಗಳು ಇವೆಲ್ಲವನ್ನೂ ಚೆನ್ನಾಗಿ ತಿಳಿದಿರಬೇಕು; ಅವುಗಳಲ್ಲೂ ಅನುಭವಜ್ಞನಾಗಿರಬೇಕು. ವಾಸ್ತುವಿನ ಹದಿನಾಲ್ಕು ಲೂಮಾಲೇಖಗಳು, ನಾಲ್ಕು ಗಂಡಿಕಾ ಛೇದಗಳು, ಏಳು ವೃತ್ತ ಛೇದಗಳು, ಮರದ ತೊಲೆಗಳ ಸಂಧಿಕರ್ಮ, ಮರ, ಕಲ್ಲು ಮುಂತಾದವುಗಳ ಲಕ್ಷಣಗಳು ನೇರವಾಗಿ ಸ್ವತಃ ಅನುಭವದಿಂದ ತಿಳಿದವನಾಗಿರಬೇಕು. ಇವೇ ಅಲ್ಲದೆ ಆಲೇಖ್ಯ(ವರ್ಣಲೇಪನ)ದಿಂದ ಲೇಪ್ಯಜಾತ(ಮಣ್ಣಿನಲ್ಲಿ ರೂಪನಿರ್ಮಾಣ), ದಾರುಕರ್ಮ (ಮರದ ಕೆಲಸ), ಶಿಲಾ ಶಿಲ್ಪ, ಸ್ವರ್ಣ ಶಿಲ್ಪ, ಮುಂತಾದ ಸಕಲ ಶಿಲ್ಪಗಳನ್ನೂ ರೂಢಿಸಿಕೊಂಡಿರುವವನು ಮಾತ್ರವೇ ಸ್ಥಪತಿಯಾಗಬಲ್ಲ[೯].

೩. ಪ್ರಜ್ಞಾ[೧೦]: ಶಾಸ್ತ್ರಾಧ್ಯಾಯ ಮತ್ತು ಶಿಲ್ಪಕರ್ಮಗಳಲ್ಲಿ ಎಂತಹ ಪರಿಣಿತಿಯನ್ನು ಪಡೆದಿದ್ದರೂ ಪ್ರಜ್ಞಾವಂತನಾಗದೆ ಇದ್ದರೆ ಆತನು ಪೂರ್ಣ ಸ್ಥಪತಿಯಾಗಲು ಅನರ್ಹನಾಗಿರುತ್ತಾನೆ. ತನ್ನ ಶಿಲ್ಪಕರ್ಮದಲ್ಲಿ ಒಳನೋಟದಿಂದ ಮುಂದಿನ ರೂಪವನ್ನು, ತನ್ನ

---

೭ ವಿವರಗಳಿಗೆ ನೋಡಿ– ಡಾ॥ ಜಿ. ಜ್ಞಾನಾನಂದ: ಶಿಲ್ಪಾದರ್ಶ (ಸಂಪುಟ ೨), ಪು. ೨೬–೩೪೯, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೮ ಯಸ್ತು ಕೇವಲ ಶಾಸ್ತ್ರಜ್ಞಃ ಕರ್ಮಸ್ವಪರಿನಿಷ್ಠಿತಃ॥
ಸ ಮುಹ್ಯತಿ ಕ್ರಿಯಾಕಾಲೇ ದೃಷ್ಟ್ವಾ ಬೀರುರಿವಾಹವಮ್।
ಕೇವಲಂ ಕರ್ಮಯೋವೇತ್ತಿ ಶಾಸ್ತ್ರಾರ್ಥಂ ನಾಧಿಗಚ್ಛತಿ॥
ಸೋಽಚಕ್ಷುರಿವ ನೀಯೇತ ವಿವಶೋನ್ಯೇನ ವರ್ತ್ಮಸು।
ಕರ್ಮ ವಾಸ್ತುವಿಧೇಃ ಸ್ಥಾನಂ ಮಾನಮುನ್ಮಾನ ಮೇವ ಚ॥
ಕ್ಷೇತ್ರಜಾನಿ ಚ ಕರ್ಮಾಣಿ ಲುಮಾಲೇಖಾಶ್ಚತುರ್ದಶ।
ಚತ್ವಾರೋ ಗಂಡಿಕಾಚ್ಛೆದಾನ್ ವೃತ್ತಚ್ಛೇ ದೇಷು ಸಪ್ತಸು॥
ಸುಶ್ಲಿಷ್ಟಂ ಸಂಧಿ ಸಂಧ್ಯಾನ್ಯೈರಧರೋತ್ತರ ಸಂಯುತಮ್।
ಬಾಹ್ಯರೇಖಾನ್ವಿತಂ ಶುದ್ಧಂ ಯೋಜಾನಾತಿ ಸ ಕರ್ಮವಿತ್॥
– ಸಮರಾಂಗಣ ಸೂತ್ರಧಾರ, ೪೪:೮–೧೨

೯. ಶೀಲಾಧಾನೇ ಪರಂ ಯತ್ನಮಾಧಿ ತಿಷ್ಠೇತ್ ಸ್ಥಪತಿಃ ಸದಾ।
ತತಃ ಕರ್ಮಾಣಿ ಸಿಧ್ಯಂತಿ ಜನಯಂತಿ ಶುಭಾನಿ ಚ॥
ತಥಾಚಾಷ್ಟವಿಧಂ ಕರ್ಮ ಜ್ಞೇಯಂ ಸ್ಥಪತಿನಾ ಸದಾ।
ಆಲೇಖ್ಯಂ ಲೇಖ್ಯಜಾತಂ ಚ ದಾರುಕರ್ಮ ಚಯಸ್ತಥಾ॥
ಪಾಷಾಣಸಿದ್ಧ ಹೇಮ್ನಾಂ ಚ ಶಿಲ್ಪಂ ಕರ್ಮ ತಥೈವ ಚ।
ಏಭಿರ್ಗುಣೈಃ ಸಮಾಯುಕ್ತಃ ಸ್ಥಪತಿರ್ಯಾತಿ ಪೂಜ್ಯತಾಮ್॥
– ಅದೇ, ೪೪ : ೧೯–೨೧

೧೦. ಶಾಸ್ತ್ರಕರ್ಮ ಸಮರ್ಥೋಽಪಿ ಸ್ಥಪತಿಃ ಪ್ರಜ್ಞಯಾ ವಿನಾ।
ಫಲೇಯುಃ ಕರ್ಮಭಿರನ್ಯಾಭಿಃ ಸ್ಯಾನ್ನಿರ್ಮದ ಇವ ದ್ವಿಪಃ॥
ಪ್ರತ್ಯುತ್ಪನ್ನ ಮತಿರ್ಯಃ ಸ್ಯಾದ್ ವಾಹತಃ ಸ್ಥಪತಿ ಸ್ತಥಾ।
ಕರ್ಮಕಾಲೇ ನ ಮುಹ್ಯೇತ್ ಸ ಪ್ರಜ್ಞಾನೇನೋಪಬೃಂಹಿತಃ॥
ಅಪ್ರಜ್ಞೇಯಂ ದುರಾಲೋಕಂ ಗೂಢಾರ್ಥಂ ಬಹುವಿಸ್ತರಮ್।
ಪ್ರಜ್ಞಾಪೋತಂ ಸಮಾರುಹ್ಯ ಪ್ರಾಜ್ಞೋ ವಾಸ್ತು ನಿರಂತರೇತ್॥
– ಅದೇ, ೪೪ : ೧೩–೧೫

ಅನುಭವ ಜನ್ಯ ಜ್ಞಾನದಿಂದ ಮುಂದಿನ ತೊಂದರೆಗಳನ್ನು, ಅಡ್ಡಿ-ಆತಂಕಗಳನ್ನು ಕಲ್ಪಿಸಿಕೊಂಡು ಅವನ್ನು ಪರಿಹರಿಸುವ ಸಾಮರ್ಥ್ಯವನ್ನು ಪಡೆದಿರಬೇಕು. ತನ್ನ ಸಾಮರ್ಥ್ಯವನ್ನು ಗಳಿಸಿರಬೇಕು. ಅನಿರೀಕ್ಷಿತವಾಗಿ ಉದ್ಭವವಾಗುವ ಸಮಸ್ಯೆಗಳನ್ನು, ಅಡಚಣೆಗಳನ್ನು, ತೊಂದರೆಗಳನ್ನು ಎದುರಿಸಿ ಗೆಲ್ಲುವ ಬುದ್ಧಿ, ಜಾಣ್ಮೆ, ಸಾಮರ್ಥ್ಯ, ತಿಳಿವಳಿಕೆಗಳು ಇರಬೇಕು. ಈ ರೀತಿಯ ಸ್ಥಪತಿಯು ಕಾಡಿನಲ್ಲಿರುವ ಮದವಿಲ್ಲದ ಶಾಂತ ಆನೆಯಂತೆ, ಪ್ರಜ್ಞಾವಂತನಾದ ಶಿಲ್ಪಿಗೆ ಎಂತಹ ಸಂದರ್ಭದಲ್ಲಾದರೂ ಸರಿಯೇ ಬಹು ಗಹನವೂ, ಗಂಭೀರವೂ, ವಿಶಾಲವೂ ಆಗಿರುವ ಶಿಲ್ಪಶಾಸ್ತ್ರದ ವಿಸ್ತಾರದಲ್ಲಿ ತೇಲುತ್ತಿರುವ ನೌಕೆಗೆ ಬೀಳ್ಗುಂಡಿನ (Anchor)ರಕ್ಷಣೆಯನ್ನು ಅವನ ಪ್ರಜ್ಞೆಯು ಒದಗಿಸುತ್ತದೆ.

ಶಿಲ್ಪಶಾಸ್ತ್ರದಂತಹ ಬಹು ವಿಶಾಲವೂ, ಬಹು ಗಹನವೂ ಆಗಿರುವ ಸಾಗರದಲ್ಲಿ ಅದರ ಆಳವನ್ನು, ವಿಸ್ತಾರವನ್ನು ಅರಿಯುವುದು ಸಾಧ್ಯವಿಲ್ಲ. ಅಲ್ಲಿ ಬೆಳಕಿರುವುದಿಲ್ಲ. ಸುತ್ತಲೂ ಕತ್ತಲೆಯು ದಟ್ಟವಾಗಿ ಆವರಿಸಿಕೊಂಡಿರುತ್ತದೆ. ತಿಳಿಯ ಬೇಕಾಗಿರುವ, ಕಂಡುಕೊಳ್ಳಬೇಕಾಗಿರುವ ಭಾಗಗಳು ಬಹುವಾಗಿ ನೌಕೆಯನ್ನು ತೀರಕ್ಕೆ ಕೊಂಡೊಯ್ಯಬಲ್ಲ ಸಾಮರ್ಥ್ಯವು ನೌಕೆಯ ಶಕ್ತಿ, ತನ್ನ ಸಾಮರ್ಥ್ಯಗಳೊಂದಿಗೆ ಪ್ರಜ್ಞೆಯಿಂದ ಆ ಸಂಧರ್ಭದಲ್ಲಿ ಎದುರಿಸುತ್ತಿರುವ ಕುತ್ತನ್ನು ಪರಿಹರಿಸುವ ಜಾಣತನ ಕೇವಲ ನೌಕೆಯ ಕ್ಯಾಪ್ಟನ್‌ಗೆ ಮಾತ್ರವೇ ಇರುತ್ತದೆ. ಅದೇ ರೀತಿಯಾಗಿ ಸ್ಥಪತಿಯಾದವನಿಗೂ ಅಂತಹುದೇ ಸಾಮರ್ಥ್ಯವಿರಲು ಪ್ರಜ್ಞೆಯು ಅತ್ಯಂತ ಅವಶ್ಯಕ. ಪ್ರತಿಭಾ ತೈಲದಲ್ಲಿ ತೊಯ್ದು ಪ್ರಜ್ಞೆಯೇ ಸ್ಥಪತಿಯ ನಿಜವಾದ ಅದ್ವಿತೀಯವಾದ ಸಂಪತ್ತು.

೫. ಶೀಲ[೧೧]: ಇದುವರೆವಿಗೂ ವಿವರಿಸಿರುವ ನಾಲ್ಕು ಗುಣಗಳಿಗಿಂತಲೂ ಬಹು ಹೆಚ್ಚಿನ ರೀತಿಯಲ್ಲಿ ಇರಬೇಕಾದುದು ಶೀಲ. ಪೂರ್ಣವಾಗಿ ಧಾರ್ಮಿಕ ಮತ್ತು ದೇವತಾ ವಿಧಿ ಆಚಾರಗಳಿಗೆ ಸೇರಿರುವ ಈ ಕೆಲಸದಲ್ಲಿ ಸ್ಥಪತಿಯಾದವನು ತನ್ನ ತಪಸ್ಸನ್ನು ಧಾರೆ ಎರೆದು ಜನರ ಹಿತವನ್ನು ಕೋರಬೇಕಾದುದರಿಂದ ಆತನು ತಪಸ್ವಿಯಂತೆ ಪರಿಶುದ್ಧನಾಗಿರಬೇಕು. ಶೀಲ ಚ್ಯುತನಾದ ಸ್ಥಪತಿಯಲ್ಲಿ ಕೋಪ, ದ್ವೇಷ, ಅಸೂಯೆ, ಆಸೆ, ಮಮತೆ, ಗೊಂದಲ ಮುಂತಾದವು ಇರುತ್ತದೆ. ಇವೆಲ್ಲಾ ಸ್ಥಪತಿಯ ತಪಸ್ಸಿದ್ಧಿಗೆ ತಡೆಗಳೇ. ಆದ್ದರಿಂದಲೇ ಶೀಲವಂತನನ್ನು ಲೋಕ ಪೂಜಿಸುತ್ತದೆ. ಶೀಲವಂತನು ಸತ್ಪುರುಷರಿಗೂ ಸ್ವೀಕಾರಾರ್ಹನು. ಶೀಲವಂತನನ್ನು ಎಲ್ಲಾ ಕರ್ಮಗಳನ್ನು ಮಾಡಲು ಅರ್ಹನು. ಶೀಲವಂತನಾದವನನ್ನು ಎಲ್ಲರೂ ನೋಡಲು ಬಯಸುತ್ತಾರೆ; ಗೌರವಿಸುತ್ತಾರೆ. ಇಂತಹ ವ್ಯಕ್ತಿಯು ಕರ್ಮ ನಿಷ್ಠನಾಗಿರುತ್ತಾನೆ.

ಸ್ಥಪತಿಯ ಬಗ್ಗೆ ಸಮರಾಂಗಣ ಸೂತ್ರಧಾರನು ಇಲ್ಲಿ ಹೇಳಿರುವ ವಿವರಗಳು ಇವು. ಆದರೆ ಇದನ್ನು ಇಲ್ಲಿಗೇ ನಿಲ್ಲಿಸದೆ ಮುಂದಿನ ಅಧ್ಯಾಯದಲ್ಲಿ(ಅಧ್ಯಾಯ ೪೫) ***ಅಷ್ಟಾಂಗ ಲಕ್ಷಣ***ದಲ್ಲೂ ಮುಂದುವರಿಸಿದ್ದಾನೆ. ಈ ರೀತಿಯ ವಿವರಣೆಯನ್ನು ಇತರ ಶಿಲ್ಪಶಾಸ್ತ್ರಗಳಲ್ಲಿ ಹೇಳಿಲ್ಲ. ಈ ಅಷ್ಟಾಂಗ ಲಕ್ಷಣವನ್ನು ಸ್ಥಾಪತ್ಯ ವೇದದ ದೃಷ್ಟಿಯಿಂದ ಹೇಳಿದೆ. 'ಈ ಚತುರ್ವಿಧ ಅಂಶಗಳನ್ನು' (ಶಾಸ್ತ್ರ, ಕರ್ಮ ಪ್ರಜ್ಞಾ ಮತ್ತು ಶೀಲಗಳನ್ನು) ಅವುಗಳ ಅಷ್ಟಾಂಗಗಳೊಂದಿಗೆ ಈಗ ವಿವರಿಸುತ್ತೇನೆ.[೧೨] ಎಂದು ಪ್ರಾರಂಭವಾಗುವ ೪೫ನೆಯ ಅಧ್ಯಾಯವು ಸ್ಥಪತಿಯ ಕರ್ಮಕ್ಷೇತ್ರದ ವ್ಯಾಪ್ತಿಯನ್ನು, ಅವುಗಳಲ್ಲಿ ಅವನು ಗಮನಿಸ ಬೇಕಾಗಿರುವ ಮುಖ್ಯಾಂಶಗಳನ್ನು ವಿವರವಾಗಿ ತಿಳಿ ಹೇಳುತ್ತದೆ.[೧೩]

೧. ವಾಸ್ತುಪುರುಷ ವಿಕಲ್ಪನಾ : ಮೊದಲನೆಯ ಕೆಲಸವು ವಾಸ್ತುಪುರುಷನನ್ನು ರೂಪಿಸುವುದು. ಭಾರತೀಯ ವಾಸ್ತು ಶಾಸ್ತ್ರವು ಪ್ರಾರಂಭವಾಗುವುದು ಇಲ್ಲಿಂದಲೇ. ಇಲ್ಲಿಯವರೆವಿಗಿನ ಕ್ರಿಯೆಯನ್ನು ಪ್ರಥಮ ಘಟ್ಟವೆಂದೇ ಪರಿಣಿಸುತ್ತದೆ. ಯಾವುದೇ ನಿರ್ಮಾಣದ ವಾಸ್ತು ವಿನ್ಯಾಸವು ಪ್ರಾರಂಭವಾಗುವುದು ಈ ಹಂತದಲ್ಲಿಯೇ. ಯಾವುದೇ ವಿನ್ಯಾಸದ ತಳ ವಿನ್ಯಾಸವು ರೂಪಿತವಾಗುವುದು ಇದರ ಆಧಾರದಿಂದಲೇ. ಇದರ ತರುವಾಯವೇ ಬುನಾದಿಯ ಕೆಲಸ ಪ್ರಾರಂಭವಾಗುತ್ತದೆ.

---

೧೧ ಜ್ಞಾನವಾಂಶ್ಚ ತಥಾ ವಾಗ್ಮೀ ಕರ್ಮಸ್ವಪಿ ಚ ನಿಷ್ಠಿತಃ ।
ಏವಂ ಯುಕ್ತೋಽಪಿ ನ ಶ್ರೇಯಾನ್ ಯದಿ ಶೀಲ ವಿವರ್ಜಿತಃ ॥
ರೋಷಾದ್ ದ್ವೇಷಾತ್ ತಥಾ ಲೋಭಾನ್ಮೋಹಾದ್ ರಾಗಾತ್ ತಥೈವ ಚ ।
ಅನ್ಯಚಿಂತ್ಯತ್ವಮಾಯಾತಿ ದುಃಶೀಲಾ ನಾಮ ವಿಕ್ಷಯಾತ್ ॥
ಶೀಲವಾನ್ ಪೂಜಿತೋ ಲೋಕೇ ಶೀಲವಾನ್ ಸಾಧು ಸಮ್ಮತಃ ।
ಶೀಲವಾನ್ ಸರ್ವಕರ್ಮಾರ್ಹಃ ಶೀಲವಾನ್ ಪ್ರಿಯದರ್ಶನಃ ॥
– ಅದೇ ೪೪ : ೧೬-೧೯

೧೨. ಪ್ರೋಕ್ತಂ ಚತುರ್ಧಾ ಸ್ಥಾಪತ್ಯಂ ವಾಸ್ತು ತತ್ತ್ವಸ್ಯ ಸಿದ್ಧಯೇ ।
ಬ್ರೂಮಸ್ತದೇವ ಚೇದಾನೀಮಂಗೈಃ ಸಂಯುಕ್ತಮಷ್ಟಭಿಃ ॥
– ಅದೇ ೪೫ : ೧

೧೩. ತೇಷ್ವಂಗಂ ಪ್ರಥಮಂ ಪ್ರೋಕ್ತಂ ವಾಸ್ತುಪುಂಸೋ ವಿಕಲ್ಪನಾ ।
ಪುರಸ್ಯ ವಿನಿವೇಶಸ್ತು ದ್ವಿತೀಯಂ ದ್ವಾರಕರ್ಮ ಚ ॥
ರಥ್ಯಾವಿಭಾಗಃ ಪ್ರಾಕಾರ ನಿವೇಶೋಽಟ್ಟಾಲಕಸ್ಯ ಚ ।
ವಿನಿವೇಶಃ ಪ್ರತೋಲಿನಾಂ ವಿಭಾಗಸ್ಥಾನಕಾನಿ ಚ ॥
ಪ್ರಾಸಾದಶ್ಚ ತೃತೀಯಂ ಸ್ಯಾಚ್ಚತುರ್ಥಂ ತು ಧ್ವಜೋಚ್ಛ್ರಿತಿಃ ।
ಪಂಚಮಂ ನೃಪತೇರ್ವೇಶ್ಮ ಸ್ಥಾನಾಂತರ ವಿಭಕ್ತಿ ಚ ॥
ಚಾತುರ್ವರ್ಣ್ಯ ವಿಭಾಗಶ್ಚ ಗೃಹಭಾಗಶ್ಚ ಷಷ್ಟಕಮ್ ।
ಸಪ್ತಮಂ ಯಜಮಾನಸ್ಯ ಶಾಲಾಯಾಂ ಮಾನಮೀರಿತಮ್ ॥
ಯಜ್ಞವೇದೀ ಪ್ರಮಾಣಂ ಚ ಕೋಟಿ ಹೋಮ ವಿಧಿಸ್ತಥಾ ।
ಅಷ್ಟಮಂ ರಾಜಶಿಬಿರ ನಿವೇಶೋ ದುರ್ಗಕರ್ಮ ಚ ॥
ಯೋವೇತ್ತ್ಯಾಂಗಾನ್ಯಮೂನ್ಯಷ್ಟೌ ಸೋಽತ್ರ ಸ್ಥಪತಿ ಸತ್ತಮಃ ।
ಯಶೋ ಮಾನಂ ಸ ಲಭತೇ ಪೂಜ್ಯತೇ ಚ ನರಾಧಿಪೈಃ ॥
ಅಶಾಸ್ತ್ರಮಕರ್ಮಜ್ಞಂ ಸ್ಥಪತಿಂ ಯಃ ಪ್ರಯೋಜಯೇತ್ ।
ನ ತಸ್ಯೈ ವಾಸ್ತು ಸಿಧ್ಯೇತ ಸಿದ್ಧಮಪ್ಯಸುಖಾವಹಮ್ ॥
ತಸ್ಮಾತ್ ಕರ್ಮ ಚ ಶಾಸ್ತ್ರಂ ಚ ಯೋ ವೇತ್ತಿ ದ್ವಿತಯಂ ನರಃ ।
ಅಷ್ಟಾಂಗಮಪಿ ಯೋ ವೇತ್ತಿ ಸ ರಾಜ್ಞಃ ಸ್ಥಪತಿ ರ್ಭವೇತ್ ॥
– ಅದೇ ೪೫ : ೨-೯

೨. ನಗರ ಯೋಜನೆ : ಇದರ ತರುವಾಯದ ಹಂತವೇ ಯೋಜನೆ ಮತ್ತು ವಾಸ್ತು ವಿನ್ಯಾಸ. ಎಲ್ಲಾ ವಿನ್ಯಾಸಗಳು ನಗರದ ಭಾಗವಾಗಿಯೇ ರೂಪಿತವಾಗುತ್ತವೆ. ದೇವಾಲಯ, ಗೃಹ, ಅರಮನೆ, ಕೆರೆ–ಬಾವಿ ಇತ್ಯಾದಿಗಳನ್ನು ಸ್ಥಪತಿಯಾದವನು ರೂಪಿಸುವ ತಿಳಿವನ್ನು ಪಡೆದಿರಬೇಕು. ಆದ್ದರಿಂದ ಈ ವಿಷಯದಲ್ಲಿ ಸ್ಥಪತಿಯಾದವನು ಪಾರಂಗತನಾಗಿರಬೇಕು. ದ್ವಾರಬಂಧ, ಪ್ರಾಕಾರ ನಿರ್ಮಾಣ, ರಸ್ತೆಗಳ ಯೋಜನೆ ಮತ್ತು ನಿರ್ಮಾಣ, ಕೋಟೆಗಳ ಯೋಜನೆ, ಅಟ್ಟಾಲಿಕೆಗಳ ನಿರ್ಮಾಣ ಮುಂತಾದವುಗಳ ನಿರ್ಮಾಣದಲ್ಲಿ ಪರಿಣಿತಿಯನ್ನು ಸಾಧಿಸಿರಬೇಕು.

೩. ಪ್ರಾಸಾದ : ಇದರ ಯೋಜನೆ ಮತ್ತು ನಿರ್ಮಾಣ. ಸಾಧಾರಣವಾಗಿ ಪ್ರಾಸಾದ ಎಂದರೆ ದೇವಪ್ರಾಸಾದ ಎಂದೇ ಅರ್ಥ. ಅದ್ದರಿಂದ ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳೂ ಈ ಅಂಗದಲ್ಲಿ ಸೇರಿರುತ್ತವೆ.

೪. ಇಂದ್ರ ಧ್ವಜ : ಇದರ ನಿರ್ಮಾಣ ಮತ್ತು ಸ್ಥಾಪನೆ. ಈ ಬಗ್ಗೆ ಸಮರಾಂಗಣ ಸೂತ್ರಧಾರದಲ್ಲಿ ೧೭ನೇ ಅಧ್ಯಾಯದಲ್ಲಿ ಇದರ ವಿವರಗಳನ್ನು ಹೇಳಿದೆ. ಈಗ ಇದರ ನಿರ್ಮಾಣವನ್ನು ಮಾಡುತ್ತಿಲ್ಲ.

೫. ಅರಮನೆಯ ನಿರ್ಮಾಣ : ನಗರ ಮತ್ತು ಕೋಟೆಗಳ ಭಾಗವಾಗಿ ಅರಮನೆಯ ಯೋಜನೆ ಮತ್ತು ನಿರ್ಮಾಣವು ಬಹು ಮುಖ್ಯವಾದುದು. ಅರಮನೆಯಲ್ಲಿ ಅರಸನೊಂದಿಗೆ ಇರಬೇಕಾದ ಮಂತ್ರಿಗಳ, ಸೇನಾಧಿಕಾರಿಗಳ ಮನೆಗಳು ಮತ್ತು ರಥ,ಆನೆ, ಕುದುರೆ ಮುಂತಾದವುಗಳ ಶಾಲೆಗಳು,ಆಯುಧ ನಿರ್ಮಾಣಗಾರಗಳು, ದೇವಾಲಯ, ಸರೋವರ ಹೀಗೆ ಅನೇಕ ಅಂಶಗಳನ್ನು ಗಮನಿಸಿ ಯೋಜಿಸಿ ನಿರ್ಮಿಸಬೇಕು. ಇದೊಂದು ಬಹು ವಿಸ್ತಾರವಾದ ವಿವರಗಳನ್ನು ಹೊಂದಿರುವ ಅಂಶ.

೬. ಗೃಹ ನಿರ್ಮಾಣ : ನಗರ ಯೋಜನೆಯ ಭಾಗವಾಗಿ ನಾಗರೀಕರ ಗೃಹ ನಿರ್ಮಾಣ. ಅವರವರ ಅವಶ್ಯಕತೆಗೆ ತಕ್ಕಂತೆ, ಅರ್ಹತೆಗೆ ಸೂಕ್ತವಾದ ನಿವಾಸ ಗೃಹಗಳನ್ನು ರೂಪಿಸಿ ನಿರ್ಮಿಸಿಕೊಡುವುದು.

೭. ಯಜ್ಞಶಾಲೆ ಮತ್ತು ಯಜ್ಞಕುಂಡ ನಿರ್ಮಾಣ : ಯಜಮಾನನು ಯಜ್ಞವನ್ನು ಆಚರಿಸಲು ಅವಶ್ಯವಾದ ಯಜ್ಞಶಾಲೆ ಮತ್ತು ನಿರ್ಮಾಣ. ಆದರೊಂದಿಗೆ ಯಜ್ಞವೇದಿ ಮತ್ತು ಯಜ್ಞಕುಂಡವನ್ನು ರಚಿಸುವುದು, ಈ ಸಂಬಂಧದಲ್ಲಿ ಸ್ಥಪತಿಯಾದವನಿಗೆ ಯಜ್ಞಗಳ ಬಗ್ಗೆ ತಿಳಿವು, ಕುಂಡ ರಚನೆಯ ವೈಶಿಷ್ಟ್ಯ ಮುಂತಾದ ಎಲ್ಲಾ ವಿವರಗಳೂ ತಿಳಿದಿರಬೇಕು. ಯಜ್ಞಶಾಲೆಯ ಮಾನ, ಕುಂಡದ ಪ್ರಮಾಣ ಮತ್ತು ಆಕಾರಗಳು ಯಾವ ಯಾವ ಯಜ್ಞಗಳಿಗೆ ಯಾವ ರೀತಿಯ ಕುಂಡಗಳು ಬೇಕಾಗಿವೆ ಎಂಬುದರ ತಿಳಿವು ಅವನಲ್ಲಿರಬೇಕು. ಎಲ್ಲಾ ಯಜ್ಞಗಳ ಬಗೆಗಳು,ಅಂತರಗಳು, ಅವುಗಳನ್ನು ನಡೆಸುವ ಕ್ರಮ ಮುಂತಾದ ಎಲ್ಲಾ ವಿವರಗಳು ಸ್ಥಪತಿಯಾದವನಿಗೆ ಚೆನ್ನಾಗಿ ಗೊತ್ತಿರಬೇಕು.

೮. ದುರ್ಗ ನಿರ್ಮಾಣ : ಕೋಟೆಗಳ ಯೋಜನೆ ನಿರ್ಮಾಣದೊಂದಿಗೆ ರಾಜರ ಮತ್ತು ಸೇನಾಶಿಬಿರಗಳು, ಶಸ್ತ್ರ ಮತ್ತು ಅಸ್ತ್ರಗಳ ನಿರ್ಮಾಣ ತಂತ್ರ, ಯುದ್ಧಗಳಲ್ಲಿ ವ್ಯೂಹಗಳ ರಚನೆ ಇತ್ಯಾದಿಗಳಲ್ಲಿ ಪರಿಣಿತಿ ಇರಬೇಕು. ಕೌಟಿಲ್ಯನು ತನ್ನ ಅರ್ಥ ಶಾಸ್ತ್ರದಲ್ಲಿ ದುರ್ಗಾಧ್ಯಕ್ಷನು ಆಯುಧ ಶಿಲ್ಪಿಯಾಗಿರಬೇಕೆಂದು ನಿರ್ದೇಶಿಸುತ್ತಾನೆ. ಇದರೊಂದಿಗೆ ಸ್ವತಂತ್ರವಾಗಿ ಸ್ಥಳೀಯ ಉತ್ಪನ್ನಗಳನ್ನು ಬಳಸಿಕೊಂಡು ಆಯುಧ ನಿರ್ಮಾಣ ನಡೆಸುವ ಸಾಮರ್ಥ್ಯವು ದುರ್ಗಾಧ್ಯಕ್ಷನಿಗೆ ಇರಬೇಕು. ಆದ್ದರಿಂದ ಶಿಲ್ಪಿಯೇ ದುರ್ಗದ ಆಡಳಿತ ಮತ್ತು ರಕ್ಷಣೆಯನ್ನು ಹೊರುವಂತಹ ಅರ್ಹತೆಯನ್ನು ಪಡೆದಿರುತ್ತಾನೆ ಎಂಬುದನ್ನು ಸ್ಪಷ್ಟವಾಗಿ ಕೌಟಿಲ್ಯನು ಹೇಳಿದ್ದಾನೆ.

ಸ್ಥಪತಿ ಮತ್ತು ಸ್ಥಾಪತ್ಯ ಮತ್ತು ಸ್ಥಾಪತ್ಯದ ಕಲ್ಪನೆ ಮತ್ತು ವಿಸ್ತಾರ ಇದು. ಸ್ಥಪತಿ ಶಬ್ದದ ಮಹತ್ತು ಮತ್ತು ವ್ಯಾಪ್ತಿಯನ್ನು ಈ ವಿವರಣೆಯು ಸಮಗ್ರವಾಗಿ ತಿಳಿಸಿತ್ತದೆ. ಶಿಲ್ಪಿಗೆ ಶಿಲ್ಪಶಾಸ್ತ್ರದ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಇದು ಸ್ಪಷ್ಟವಾಗಿ ತೋರುತ್ತದೆ.

ಶಿಲ್ಪ ಶಾಸ್ತ್ರವು ಸಾಧಾರಣವಾದ ವಿದ್ಯೆ ಎಂದು ಪ್ರಾಚೀನರೂ ಕೂಡ ಪರಿಗಣಿಸಿಲ್ಲ. ಇದನ್ನು ವೇದಾಂಗ ಎಂದು ಗೌರವಿಸಿದ್ದಾರೆ. ಎಲ್ಲಾ ವೇದಗಳಿಗೂ ಉಪವೇದಗಳಿವೆ. ***ಋಗ್ವೇದಕ್ಕೆ ಚಿಕಿತ್ಸಾ ಶಾಸ್ತ್ರವಾದ ಆಯುರ್ವೇದ, ಯಜುರ್ವೇದಕ್ಕೆ ಯುದ್ಧಶಾಸ್ತ್ರವಾದ ಧನುರ್ವೇದ, ಸಾಮವೇದಕ್ಕೆ ಸಂಗೀತ ಶಾಸ್ತ್ರವಾದ ಗಾಂಧರ್ವವೇದ, ಅಥರ್ವ ವೇದಕ್ಕೆ ವಿಶ್ವಕರ್ಮಾದಿ ಶಿಲ್ಪರ್ಷಿಗಳಿಂದ ಪ್ರವರ್ತನಗೊಂಡಿರುವ ಸ್ಥಾಪತ್ಯವೇದ ಇವೇ ಉಪದವೇದಗಳು***[೧೪].

---

೧೪. ಆಯುರ್ವೇದಚಿಕಿತ್ಸಾ ಶಾಸ್ತ್ರಂ ಋಗ್ವೇದ ಸ್ಯೋಪವೇದಃ ।
ಧನುರ್ವೇದೋ ಯುದ್ಧ ಶಾಸ್ತ್ರಂ ಯಜುರ್ವೇದ ಸ್ಯೋಪವೇದಃ ।
ಗಾಂಧರ್ವವೇದ ಸ್ಸಂಗೀತ ಶಾಸ್ತ್ರಂ ಸಾಮವೇದ ಸ್ಯೋಪವೇದಃ ।
ಸ್ಥಾಪತ್ಯವೇದೋ ವಿಶ್ವಕರ್ಮಾದಿ ಶಿಲ್ಪಶಾಸ್ತ್ರಂ ಅಥರ್ವವೇದ ಸ್ಯೋಪವೇದಃ ॥
– ಚರಣ ವ್ಯೂಹ, ೪ ಖಂಡ ೨–೪

ಈ ಸಂಬಂಧದಲ್ಲಿ. ಪ್ರೊ॥ ಸ್ಟೆಲ್ಲಾ ಕ್ರಮ್ರಿಷ್[೧೫] ಅವರು ಹೀಗೆ ಹೇಳಿದ್ದಾರೆ: 'ಸ್ಥಾಪತ್ಯವೇದವು ಅಥರ್ವವೇದವನ್ನು ಜನರಿಗೆ ರೂಢಿಸಿ ಕೊಟ್ಟಿರುವಂತಹ ವಿಜ್ಞಾನ. ಆಚಾರದ ಅಂಗವಾಗಿ ಈ ಉಪವೇದವು ವೇದಗಳ ಮೂಲ ಜ್ಞಾನದೊಂದಿಗೆ ತನ್ನ ತಿಳಿವನ್ನು ಭದ್ರಗೊಳಿಸಿಕೊಂಡಿದೆ. ವೇದಗಳಿಗೆ ಆರು ವೇದಾಂಗಗಳಿವೆ. ಅವುಗಳಲ್ಲಿ ಐದನೆಯದಾದ ಜ್ಯೋತಿಷ ಮತ್ತು ಆರನೆಯದಾದ ಕಲ್ಪವು ಸ್ಥಾಪತ್ಯದೊಂದಿಗೆ ಬೆಸಿಗೆ ಹಾಕಿಕೊಂಡಿರುವ ವೇದಾಂಗಗಳು. ಕಲ್ಪದಲ್ಲಿ ಯಜ್ಞಕ್ಕೆ ಸಂಬಂಧಿಸಿದ ಅನೇಕ ನಿಯಮಗಳು, ಯಜ್ಞಮಂಟಪ, ಯಜ್ಞವೇದಿ, ಯಜ್ಞ ಕುಂಡ ರಚನೆ ಇತ್ಯಾದಿಗಳ ವಿವರಗಳು ಇವೆ. ಇವೆರಡೂ ವೇದಾಂಗಗಳು ಸ್ಥಾಪತ್ಯ ವೇದದ ಅವಿಭಾಜ್ಯ ಅಂಗಗಳು. ಕಲ್ಪಸೂತ್ರಗಳಲ್ಲಿರುವ ಶುಲ್ಬಸೂತ್ರಗಳು, ಯಜ್ಞವೇದಿಗಳನ್ನು ರಚಿಸಲು ಅನುಸರಿಸಬೇಕಾಗಿರುವ ನಿಯಮವನ್ನು ವಿವರಿಸುತ್ತವೆ. ಈ ಯಜ್ಞವೇದಿಗಳಿಂದಲೇ ಹೈಂದವ ದೇವಾಲಯಗಳ ನಿರ್ಮಾಣವು ವಿಕಸಿಸಿದೆ.

ಇದರಿಂದ ಯಜ್ಞಮಂಟಪ, ಯಜ್ಞವೇದಿ ಮತ್ತು ಯಜ್ಞಕುಂಡಗಳ ರಚನೆಯು ಶಿಲ್ಪಶಾಸ್ತ್ರದ ಒಂದು ಅವಿಭಾಜ್ಯ ಅಂಗ. ಸಮರಾಂಗಣ ಸೂತ್ರಧಾರನು ೪೫ನೇ ಅಧ್ಯಾಯನದಲ್ಲಿ ಯಜ್ಞಮಂಟಪ, ಯಜ್ಞವೇದಿ ರಚನೆಯನ್ನು ವಿವರಿಸುತ್ತಾ ಕೋಟಿಹೋಮವನ್ನೂ ವಿವರಿಸಿದ್ದಾನೆ.

[ಈ ಭಾಗವನ್ನು **ಡಾ॥ ಜಿ. ಜ್ಞಾನಾನಂದ** ಅವರ **ಸಂಸ್ಕೃತಾನುಕರಣ ಮತ್ತು ವಿಶ್ವಬ್ರಾಹ್ಮಣರು** ಗ್ರಂಥದಿಂದ (ಪುಟ ೧೪೪-೧೫೬) ಉದ್ಧರಿಸಿದೆ. ಪ್ರಕಾಶಕರು ಸಂಕೃತಿ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು - ೫೬೦ ೦೯೮ ಲೇಖಕರು ಮತ್ತು ಪ್ರಕಾಶಕರಿಗೆ ಕೃತಜ್ಞತೆಗಳು]

---

೧೫. Vastu sastra is its fullest exposition belongs to Tantra which is the applied knowledge of the Atharvaveda. As a ritual, architecture is noreare doubly linked with the primordial knowledge ie., the Veda and is included in two of tha six Vedangas. These are appendices which are auxiliary to Veda. The fifth Vedanga-Jyotisa (astronomy-astrology) and the sixth Vedanga, Kalpa , in which are laid down the rules of the sacrificial acts, the ritual, are both in parts, essential constituents of the science of Indian architecture. The sulba-sutras contained in the Kalpasutras, represent the rules and give proportionate measurements for laying out and piling up the vedic altars, on them basically rests the building of the Hindu Temple.

- Prof. Stella Kramrisch: Hindu Temple, Vol 1 P11

ಅನುಬಂಧ-೩

ಕನ್ನಡದಲ್ಲಿ ಸ್ವಾಮಿಗಳು ಮತ್ತು ಅವರ ಶಿಷ್ಯರ ಬಗ್ಗೆ ಪ್ರಕಟವಾಗಿರುವ ಪುಸ್ತಕಗಳು

ಕನ್ನಡದಲ್ಲಿ ಪ್ರತಿವರ್ಷವೂ ಸಾವಿರಾರು ಪುಸ್ತಕಗಳು ಪ್ರಕಟವಾಗುತ್ತಿದ್ದು ಅವುಗಳಲ್ಲಿ ಅಪರೂಪಕ್ಕೆ ಆಗೊಂದು ಈಗೊಂದು ಸಾಂಪ್ರದಾಯಿಕ ಶಿಲ್ಪಿಗಳ ಬಗ್ಗೆಯೂ ಪುಸ್ತಕಗಳು ಪ್ರಕಟವಾಗುತ್ತಾ ಇರುತ್ತವೆ. ಆದರೆ ಇವು ಎಲ್ಲರ ಗಮನಕ್ಕೆ ಬರುವುದಿಲ್ಲ. ಆದ್ದರಿಂದ ಸ್ವಾಮಿಗಳ ಶಿಷ್ಯರ ಬಗ್ಗೆ ಮತ್ತು ಸ್ವಾಮಿಗಳ ಬಗ್ಗೆ ಇದುವರೆವಿಗೂ ಕನ್ನಡದಲ್ಲಿ ಪ್ರಕಟವಾಗಿರುವ ಗ್ರಂಥಗಳ ಪಟ್ಟಿಯನ್ನು ವಾಚಕರ ಮಾಹಿತಿಗಾಗಿ ಇಲ್ಲಿ ಸಂಗ್ರಹಿಸಿದೆ.









೧. **ಶಿಲ್ಪಬ್ರಹ್ಮ ಸಿ. ಪರಮೇಶ್ವರಾಚಾರ್ಯ** – ಡಾ॥ ಅ. ಲ. ನರಸಿಂಹನ್, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೧೯೯೮) ಕ್ರೌನ್ ೧/೮ xii + ೬೬, ರೂ. ೧೫/-


೨. **ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ** – ಎಲ್. ಶಿವಲಿಂಗಪ್ಪ, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೧೯೯೯) ಕ್ರೌನ್ ೧/೮ viii+೫೮, ರೂ.೧೫/-


೩. **ಶಿಲಾ ಶಿಲ್ಪಿ ಬಿ. ಬಸವಣ್ಣ** – ಎಲ್. ಶಿವಲಿಂಗಪ್ಪ, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೨೦೦೮) ಕ್ರೌನ್ ೧/೪ vi + ೫೮, ರೂ.೨೦/-

೪. **ಲೋಹಶಿಲ್ಪಿ ಎನ್. ಪಿ. ಶ್ರೀನಿವಾಸಾಚಾರ್ಯ**–ಸಂ : ಎನ್. ಮರಿಶಾಮಾಚಾರ್, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೨೦೦೩) ಕ್ರೌನ್ ೧/೮ vi + ೫೨, ರೂ. ೧೫/-

೫. **ರೇಖಾಚಿತ್ರ ಪ್ರವೀಣ ಸಿ.ಕುಪ್ಪಾಚಾರ್ಯ** – ಎಲ್. ಶಿವಲಿಂಗಪ್ಪ ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೨೦೧೨) ಡೆಮ್ಮೈ ೧/೮, viii + ೭೨ ರೂ. ೫೦/-

೬. **ಸುಭಾಷಿಣಿದೇವಿ** – ಎಲ್. ಶಿವಲಿಂಗಪ್ಪ, ಪ್ರ : ಕರ್ನಾಟಕ ಲಲಿತಕಲಾ ಅಕಾಡೆಮಿ (೨೦೦೭) ಕ್ರೌನ್ ೧/೮ viii + ೪೦+೨೦,ರೂ. ೫೦/-










೭. **ಶಿಲ್ಪ ಸಂಕುಲ**(ಲೇಖನ ಸಂಗ್ರಹ)–ಲೇ. ಪಿ.ಆರ್. ತಿಪ್ಪೇಸ್ವಾಮಿ, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೧೯೯೬) ಡೆಮ್ಮೈ ೧/೮, xii+೧೫೨, ರೂ.೨೫/-

ಈ ಸಂಗ್ರಹದಲ್ಲಿ ೨೮ ಶಿಲ್ಪಿಗಳ ಪರಿಚಯ ಲೇಖನಗಳಿವೆ. ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ನಾಲ್ಕು ಪುಟಗಳ ಲೇಖನ ಮೊದಲಿನದಾಗಿದೆ. ಸ್ವಾಮಿಗಳ ಐದು ಮಂದಿ ಶಿಷ್ಯರ ಬಗ್ಗೆ ಪರಿಚಯ ಲೇಖನಗಳಿವೆ. ಸ್ವಾಮಿಗಳ ಬಗ್ಗೆ ಪ್ರಕಟವಾಗಿರುವ ಮೊದಲ ಲೇಖನ ಇದೇ! ಎಂದರೆ ಸ್ವಾಮಿಗಳು ಇಹ ವ್ಯಾಪಾರ ತ್ಯಜಿಸಿದ ೪೪ ವರ್ಷಗಳ ತರುವಾಯ ೪ ಪುಟಗಳ ಲೇಖನ ಮೊದಲಿಗೆ ಪ್ರಕಟವಾಗಿದೆ !

೮. **ಶಿಲ್ಪಕಲಾ ಆರಾಧಕರು** (ಲೇಖನ ಸಂಗ್ರಹ) ಸಂ : ಎನ್. ಮರಿಶಾಮಾಚಾರ್, ಪ್ರ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ (೨೦೦೦) ಡೆಮ್ಮೈ ೧/೮ viii + ೬೦, ರೂ. ೨೦/-

ಈ ಸಂಗ್ರಹದಲ್ಲಿ ೧೩ ಮಂದಿ ಶಿಲ್ಪಿಗಳ ಬಗ್ಗೆ ಪರಿಚಯ ಲೇಖನಗಳಿದ್ದು. ಅವುಗಳಲ್ಲಿ ಸ್ವಾಮಿಗಳ ಪ್ರಥಮ ಶಿಷ್ಯರಾದ ಶ್ರೀ ಅಜ್ಜಿಹಳ್ಳಿ ನಾಗೇಂದ್ರಾಚಾರ್ಯ ಮತ್ತು ಅವರ ಶಿಷ್ಯ ಶ್ರೀ ಈಶ್ವರಾಚಾರ್ಯರ ಬಗ್ಗೆ ಪರಿಚಯ ಲೇಖನಗಳಿವೆ.



೯. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ೧೯೯೯ರಲ್ಲಿ **ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು** ಪುಸ್ತಕವನ್ನು ಪ್ರಕಟಿಸಿದೆ. ಸಂಪಾದಕರು : ಎನ್. ಮರಿಶಾಮಾಚಾರ್, ಕ್ರೌನ್ ೧/೮ vi + ೪೨+೨೦ ರೂ. ೫೦/- ಇದೇ ಮೊದಲ ಪುಸ್ತಕ. ಇದರಲ್ಲಿ ಶಿಲ್ಪಿ ಸಿ. ಪರಮೇಶ್ವರಾಚಾರ್. ಕೆ. ಸಿ. ಪುಟ್ಟಣ್ಣಾಚಾರ್, ಎಲ್. ಶಿವಲಿಂಗಪ್ಪ ಮತ್ತು ಎನ್. ಮರಿಶಾಮಾಚಾರ್ ಅವರ ಲೇಖನಗಳು ಸಂಗ್ರಹಿತವಾಗಿವೆ. ಇದರೊಂದಿಗೆ ಒಂದು ಮುಖ್ಯ ಸೂಚನೆಯೂ ಇದೆ. ***ಈ ಪುಸ್ತಕದಲ್ಲಿರುವ ಲೇಖನಗಳ ಅಭಿಪ್ರಾಯಗಳು ಆಯಾ ಲೇಖಕರದೇ ಹೊರತು ಅಕಾಡೆಮಿಯ ಅಭಿಪ್ರಾಯಗಳಲ್ಲ.*** ಈ ಸೂಚನೆ ಇನ್ನಾವ ಪುಸ್ತಕದಲ್ಲೂ ಮುದ್ರಿತವಾಗಿಲ್ಲ.


ಈ ಲೇಖನಗಳಲ್ಲಿ ಅಂದಿನ ಅಧ್ಯಕ್ಷರು, ಅಂದಿನ ರಿಜಿಸ್ಟ್ರಾರ್‌ರವರ ಲೇಖನಗಳು ಸೇರಿವೆ. ಆದ್ದರಿಂದ ಈ ಸೂಚನೆಯ ಉದ್ದೇಶವೇನೆಂಬುದು ಸಮಸ್ಯಾತ್ಮಕವಾಗಿ ಉಳಿಯುತ್ತದೆ.



೧೦. **ಶಿಲ್ಪಿ ಸಿದ್ಧಲಿಂಗ ಸ್ವಾಮಿಗಳು ರಚಿಸಿದ ಮಾನಸಾರ ಶಿಲ್ಪ ಪುಸ್ತಕದ ಚಿತ್ರಗಳು** ಪ್ರ : ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ (೨೦೦೪) ಕ್ರೌನ್ ೧/೪, ೨೮, ರೂ. ೫೦/-


ಮಾನಸಾರದ ಚಿತ್ರ ಸಂಪುಟದಲ್ಲಿರುವ ೨೧ ಚಿತ್ರಗಳನ್ನು ಮಾತ್ರ ಈ ಪುಸ್ತಕದಲ್ಲಿ ಮರುಮುದ್ರಣ ಮಾಡಿದ್ದಾರೆ. ಯಾವ ಚಿತ್ರಕ್ಕೂ ವಿವರಣೆ ಕೊಟ್ಟಿಲ್ಲ. ಶೀರ್ಷಿಕೆಗಳೂ ತಪ್ಪು ತಪ್ಪಾಗಿವೆ. ಪುಸ್ತಕದ ಉದ್ದೇಶವೇ ಅರ್ಥವಾಗುವುದಿಲ್ಲ.

ಮೊದಲ ಆರು ಪುಸ್ತಕಗಳೂ ಸ್ವಾಮಿಗಳ ಶಿಷ್ಯರ ಶಿಲ್ಪಸಾಧನೆಯನ್ನು ಪರಿಚಯ ಮಾಡಿಸುವ ಗ್ರಂಥಗಳು. ಶ್ರೀ ಸಿದ್ಧಲಿಂಗಸ್ವಾಮಿಗಳ ಪರಿಚಯ ಮಾಡುವ ಲೇಖನಗಳು ಪ್ರಕಟವಾಗಲು ಪ್ರಾರಂಭವಾಗಿರುವುದೇ ಅವರು ಗತಿಸಿದ ನಾಲ್ಕು ದಶಕಗಳ ತರುವಾಯ ಎಂಬುದನ್ನು ವಾಚಕರು ಗ್ರಹಿಸಬೇಕಾಗಿ ವಿನಂತಿ. ಕರ್ನಾಟಕದಲ್ಲಿ ಸ್ವಾಮಿಗಳಿಂತಲೂ ಅವರ ಶಿಷ್ಯರೇ ಹೆಚ್ಚು ಪ್ರಚಲಿತರಾಗಿದ್ದಾರೆ ಎನ್ನುವುದನ್ನು ಪುಸ್ತಕಗಳು ಹೇಳುತ್ತವೆ.



ಶಕಪುರುಷ ಸಿದ್ಧಲಿಂಗ ಸ್ವಾಮಿಗಳು

ಎಲ್. ಶಿವಲಿಂಗಪ್ಪ







ಶಿಲ್ಪ ಸಿದ್ಧಾಂತಿ, ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳು (1885–1952) ಕಳೆದ ಶತಮಾನದಲ್ಲಿ ಸಾಂಪ್ರದಾಯಿಕ ಶಿಲ್ಪಕ್ಷೇತ್ರದಲ್ಲಿ ಮೈಸೂರಿನಲ್ಲಿದ್ದ ಬಹು ಅಪರೂಪದ ಪ್ರತಿಭೆ. ಶಾಸ್ತ್ರದ ಮಾನದಂಡದ ಅನ್ವಯವೇ ಪರಿಪೂರ್ಣ ಸ್ಥಪತಿಯಾಗಿದ್ದವರು. ವರ್ಣಚಿತ್ರ, ಲೋಹದ ಎರಕ ಶಿಲ್ಪ, ತಗಡಿನಲ್ಲಿ ಉಬ್ಬುಶಿಲ್ಪ, ಮರದ ಶಿಲ್ಪ, ಶಿಲಾ ಶಿಲ್ಪ, ಸಾಂಪ್ರಾದಾಯಿಕ ದೇವಾಲಯ ನಿರ್ಮಾಣ, ಪ್ರತಿಷ್ಠಾತಂತ್ರ, ಸ್ವರ್ಣಶಿಲ್ಪ, ರತ್ನಪರೀಕ್ಷಣ ಹೀಗೆ ಶಿಲ್ಪಶಾಸ್ತ್ರದ ಸಕಲಭಾಗಗಳನ್ನೂ ಸಂಪೂರ್ಣವಾಗಿ ಬಲ್ಲ ವಿದ್ವಾಂಸರು, ಶಾಸ್ತ್ರ ಮತ್ತು ಪ್ರಯೋಗ ಎರಡೂ ಕ್ಷೇತ್ರಗಳಲ್ಲಿ ಸಮಗ್ರತೆಯನ್ನು ಸಾಧಿಸಿದ ಶಿಲ್ಪ ಸಿದ್ಧಾಂತಿ. ತಮ್ಮಲ್ಲಿದ್ದ ಶಿಲ್ಪದ ತಂತ್ರವನ್ನು, ಶಾಸ್ತ್ರದ ಜ್ಞಾನವನ್ನು ಸಮರ್ಥವಾಗಿ ಬೋಧಿಸಿ ಯಶಸ್ವೀ ಶಿಷ್ಯರನ್ನು ಸಿದ್ಧ ಮಾಡಬಲ್ಲ ಅಧ್ಯಾಪನಾ ಸಾಮರ್ಥ್ಯ ಇದ್ದವರು. ಹಾಗೆಯೇ ಶಿಷ್ಯರನ್ನು ಸಿದ್ಧಪಡಿಸಿದ್ದಾರೆ ಕೂಡ. ಇದರೊಂದಿಗೆ ಗುರುಪೀಠಾಧ್ಯಕ್ಷರು ಶಿವಯೋಗಿಗಳಾಗಿದ್ದರು. ಇವರು ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡಯರಿಗೆ ಗುರುಗಳಾಗಿದ್ದರು.

ಪ್ರಸ್ತುತ ಗ್ರಂಥ ಮೈಸೂರಿನ ಸಾಂಪ್ರದಾಯಿಕ ಶಿಲ್ಪಲೋಕದಲ್ಲಿ ಇಪ್ಪತ್ತನೆಯ ಶತಮಾನದ ಮೊದಲ ಆರುದಶಕಗಳ ಕಾಲ ಶ್ರೀ ಸಿದ್ಧಲಿಂಗಸ್ವಾಮಿಗಳು ಸಲ್ಲಿಸಿರುವ ಕಲಾಸೇವೆಯ ಕಿರುಪರಿಚಯವನ್ನು ಮಾತ್ರವೇ ಮಾಡಿ ಕೊಡುತ್ತದೆ. ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀ ಎಲ್. ಶಿವಲಿಂಗಪ್ಪ ಅವರಿಗೆ ಅಭಿನಂದನೆಗಳು.

– ಡಾ॥ ಜಿ. ಜ್ಞಾನಾನಂದ
ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಬೆಂಗಳೂರು





ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು-002